ಮೇಲುಕೋಟೆ ದೇವಾಲಯಗಳು - ಚಾರಿತ್ರಿಕ ಮತ್ತು ಸಾಂಸ್ಕೃತಿಕ ನೆಲೆಗಳು

(ಇತಿಹಾಸ ಪಿಎಚ್.ಡಿ.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ (ಹಂಪಿ) ಸಾದರ ಪಡಿಸುವ ಸಂಶೋಧನಾ ಮಹಾಪ್ರಬಂಧ)

ಸಂಶೋಧಕರು

ಬಿ.ಎಸ್.ಸುನಿಲ್ ಕುಮಾರ್

ಮಾರ್ಗದರ್ಶಕರು

ಡಾ.ಎನ್.ಸಾವಿತ್ರಿ, ಎಂ.ಎ., ಪಿಎಚ್.ಡಿ.,
ಅಸೋಸಿಯೇಟ್ ಪ್ರೊಫೆಸರ್
ಇತಿಹಾಸ ವಿಭಾಗ
ಮಲ್ಲಮ್ಮ ಮರಿಮಲ್ಲಪ್ಪ ಮಹಿಳಾ ಕಲಾ
ಮತ್ತು ವಾಣಿಜ್ಯ ಕಾಲೇಜು, ಮೈಸೂರು.

ಕರ್ನಾಟಕ ಸಂಘ (ರಿ.), ಮಂಡ್ಯ

ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)

2015

ಮೇಲುಕೋಟೆ ದೇವಾಲಯಗಳು - ಚಾರಿತ್ರಿಕ ಮತ್ತು ಸಾಂಸ್ಕೃತಿಕ ನೆಲೆಗಳು

(ಇತಿಹಾಸ ಪಿಎಚ್.ಡಿ.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ (ಹಂಪಿ) ಸಾದರ ಪಡಿಸುವ ಸಂಶೋಧನಾ ಮಹಾಪ್ರಬಂಧ)

ಸಂಶೋಧಕ

ಬಿ.ಎಸ್.ಸುನಿಲ್ ಕುಮಾರ್

ಮಾರ್ಗದರ್ಶಕರು

ಡಾ.ಎನ್.ಸಾವಿತ್ರಿ, ಎಂ.ಎ., ಪಿಎಚ್.ಡಿ.,
ಅಸೋಸಿಯೇಟ್ ಪ್ರೊಫೆಸರ್
ಇತಿಹಾಸ ವಿಭಾಗ
ಮಲ್ಲಮ್ಮ ಮರಿಮಲ್ಲಪ್ಪ ಮಹಿಳಾ ಕಲಾ
ಮತ್ತು ವಾಣಿಜ್ಯ ಕಾಲೇಜು, ಮೈಸೂರು.

ಕರ್ನಾಟಕ ಸಂಘ (ರಿ,), ಮಂಡ್ಯ.

ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಕನ್ನಡ ವಿ.ವಿ. ಹಂಪಿ ಮಾನ್ಯತೆ ಪಡೆದಿದೆ)

2015

ಸಂಶೋಧಕರ ಪ್ರಮಾಣ ಪತ್ರ

ಕನ್ನಡ ವಿಶ್ವವಿದ್ಯಾಲಯದ (ಹಂಪಿ) ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿರುವ **"ಮೇಲುಕೋಟೆ ದೇವಾಲಯಗಳು–ಚಾರಿತ್ರಿಕ ಮತ್ತು ಸಾಂಸ್ಕೃತಿಕ ನೆಲೆಗಳು"** ಎಂಬ ಸಂಶೋಧನಾ ಮಹಾಪ್ರಬಂಧವನ್ನು ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾಕೇಂದ್ರ, ಕರ್ನಾಟಕ ಸಂಘ (ರಿ), ಮಂಡ್ಯ (ಕನ್ನಡ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆದಿದೆ) ಈ ಸಂಸ್ಥೆಯ ಮೂಲಕ ಮಲ್ಲಮ್ಮ ಮರಿಮಲ್ಲಪ್ಪ ಮಹಿಳಾ ಕಲಾ ಮತ್ತು ವಾಣಿಜ್ಯ ಕಾಲೇಜು, ಮೈಸೂರು ಇಲ್ಲಿ ಅಸೋಸಿಯೇಟ್ ಪ್ರೊಫೆಸರ್ ಹಾಗೂ ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿರುವ **ಡಾ. ಎನ್.ಸಾವಿತ್ರಿ** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ. ಈ ಮಹಾಪ್ರಬಂಧವು ನನ್ನ ಸ್ವಂತ ಸಂಶೋಧನೆಯಾಗಿದೆ. ಇದನ್ನು ಸಂಪೂರ್ಣವಾಗಿ ಆಗಲಿ ಅಥವಾ ಭಾಗಶಃ ಆಗಲಿ ಯಾವುದೇ ವಿಶ್ವವಿದ್ಯಾಲಯದ ಪದವಿ ಅಥವಾ ಡಿಪ್ಲೊಮಾಗೆ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ಮಂಡ್ಯ
ದಿನಾಂಕ :

B. S. Sunil Kumar

(ಬಿ.ಎಸ್.ಸುನಿಲ್ ಕುಮಾರ್)
ಸಂಶೋಧಕ

ಮಾರ್ಗದರ್ಶಕರ ಪ್ರಮಾಣ ಪತ್ರ

ಬಿ.ಎಸ್.ಸುನಿಲ್‌ಕುಮಾರ್ ಇವರು ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾಕೇಂದ್ರ, ಕರ್ನಾಟಕ ಸಂಘ (ರಿ), ಮಂಡ್ಯ. (ಕನ್ನಡ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ) ಈ ಸಂಸ್ಥೆಯ ಮೂಲಕ "ಮೇಲುಕೋಟೆ ದೇವಾಲಯಗಳು-ಚಾರಿತ್ರಿಕ ಮತ್ತು ಸಾಂಸ್ಕೃತಿಕ ನೆಲೆಗಳು" ಎಂಬ ವಿಷಯವನ್ನು ಕುರಿತು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಂಶೋಧಕರಾಗಿ ಸಂಶೋಧನೆ ನಡೆಸಿ, ಈ ಮಹಾಪ್ರಬಂಧವನ್ನು ಸಿದ್ಧಪಡಿಸಿದ್ದಾರೆ.

ಈ ಮಹಾಪ್ರಬಂಧವನ್ನು ಇಡಿಯಾಗಿ ಅಥವಾ ಬಿಡಿಯಾಗಿ ಈ ಮೊದಲು ಇವರು ಯಾವುದೇ ಪದವಿ ಅಥವಾ ಡಿಪ್ಲೊಮಾ ಪದವಿಗಾಗಿ ಬಳಸಿಕೊಂಡಿಲ್ಲ. ಈ ಅಭ್ಯರ್ಥಿ ನನ್ನೊಂದಿಗೆ ನಾಲ್ಕು ವರ್ಷಗಳು ಸಂಶೋಧನೆಯ ಕೆಲಸ ಮಾಡಿದ್ದಾರೆಂದು ಈ ಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ (ಹಂಪಿ) ಸಾದರಪಡಿಸಲು ನಾನು ಸಮ್ಮತಿಸುತ್ತೇನೆಂದು ಈ ಮೂಲಕ ದೃಢೀಕರಿಸುತ್ತೇನೆ.

ಸ್ಥಳ : ಮಂಡ್ಯ
ದಿನಾಂಕ :

N. Savithri

(ಡಾ. ಎನ್.ಸಾವಿತ್ರಿ, ಎಂ.ಎ., ಪಿಎಚ್.ಡಿ.,)
ಅಸೋಸಿಯೇಟ್ ಪ್ರೊಫೆಸರ್
ಇತಿಹಾಸ ವಿಭಾಗ
ಮಲ್ಲಮ್ಮ ಮರಿಮಲ್ಲಪ್ಪ ಮಹಿಳಾ ಕಲಾ
ಮತ್ತು ವಾಣಿಜ್ಯ ಕಾಲೇಜು,
ಮೈಸೂರು.

Dr. N. SAVITHRI M.A., Ph.D.,
Associate Professor,
Department of History,
Mallamma Marimallappa Women's
Arts and Commerce College, Mysore

ಮೇಲುಕೋಟೆ ದೇವಾಲಯಗಳು – ಚಾರಿತ್ರಿಕ ಮತ್ತು ಸಾಂಸ್ಕೃತಿಕ ನೆಲೆಗಳು

ವಿಷಯಾನುಕ್ರಮಣಿಕೆ

ಅಧ್ಯಾಯ – 1
ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ದೇವಾಲಯ : ಪರಿಚಯ

ದೇವಾಲಯಗಳು ಮಾನವನ ಬದುಕಿನಲ್ಲಿ ಮಹತ್ವದ ಪಾತ್ರ ವಹಿಸಿದೆ. ಮೂಲತಃ ದೇವಾಲಯ ಎಂಬುದು ಒಂದು ಕಟ್ಟಡ, ಸಾಮೂಹಿಕ ಪೂಜೆ, ಪ್ರಾರ್ಥನೆಯನ್ನು ಸಲ್ಲಿಸಲು ಅನುಕೂಲವಿರುವ ಒಂದು ತಾಣ. ಯಾವ ಮತಧರ್ಮದಲ್ಲಾದರೂ ದೇವಾಲಯಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಮೂರ್ತಿ ಪೂಜೆಯು ಇರಲಿ ಇಲ್ಲದಿರಲಿ ಇದೊಂದು ಸಾರ್ವಜನಿಕ ಸ್ಥಳ. ಇಪ್ಪತ್ತನೇ ಶತಮಾನದಲ್ಲಿ ನಾವು ದೇವಾಲಯಗಳನ್ನು ಕಲ್ಪಿಸಿಕೊಂಡಾಗ ಇಂದಿನ ಚಿತ್ರಕ್ಕಿಂತ ಬಹು ಭಿನ್ನವಾದ ಚಿತ್ರವೊಂದು ಮೂಡುತ್ತದೆ. ಇಂದು ದೇವಾಲಯಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವ ಕಡಿಮೆಯಾಗಿದೆ. ದೇವಾಲಯಗಳು ಜೀವಂತ ಕೇಂದ್ರಗಳು ಮಾತ್ರವಾಗಿರದೆ, ಇಡೀ ನಾಡಿನ ನಾಡಿಯನ್ನು ಹಿಡಿದು ನಡೆಸುತ್ತಿದ್ದ ಸಾಂಸ್ಕೃತಿಕ ಕೇಂದ್ರಗಳೂ ಆಗಿದ್ದವು. ದೇವಾಲಯಗಳು ಜನರ ಧಾರ್ಮಿಕ ಜೀವನದ ಸಂಕೇತಗಳಾಗಿದ್ದವು. ಆದರೆ ಅವು ಕೇವಲ ಒಂದು ಪೂಜಾಸ್ಥಾನವಾಗಲಿ, ಧಾರ್ಮಿಕ ಸಂಸ್ಥೆಯಾಗಲಿ ಆಗಿರದೆ, ಸಂಕೀರ್ಣವಾದ ಸಾಮಾಜಿಕ, ಆರ್ಥಿಕ ಸಂಸ್ಥೆಯಾಗಿತ್ತು.[1] ಜನಜೀವನದಲ್ಲಿ ಮಹತ್ತರವಾದ ಪಾತ್ರವನ್ನು ನಿರ್ವಹಿಸುತ್ತಿತ್ತು. ದೈನಿಕ, ಸಾಪ್ತಾಹಿಕ, ಮಾಸಿಕ, ವಾರ್ಷಿಕ ಹಾಗೂ ವಿಶೇಷ ಸಮಾರಂಭಗಳನ್ನು ಅಲ್ಲಿ ನಡೆಸಲಾಗುತ್ತಿತ್ತು. ಸಾಮೂಹಿಕ ಉತ್ಸವಗಳನ್ನು ಏರ್ಪಡಿಸಲಾಗುತ್ತಿತ್ತು. ಜನರು ಒಂದೆಡೆ ಸೇರಲು ಅವಕಾಶವಾಗುತ್ತಿತ್ತು. ವಾಸ್ತುಶಿಲ್ಪ, ಮೂರ್ತಿಶಿಲ್ಪದ ಬೆಳವಣಿಗೆಗೆ ಮಾತ್ರವೇ ಅಲ್ಲದೆ ವಿದ್ಯಾಭ್ಯಾಸ, ಧರ್ಮ, ಸಂಗೀತ, ನೃತ್ಯ, ಚಿತ್ರಕಲೆ, ಅನ್ನಸತ್ರ ವ್ಯವಸ್ಥೆಗಳ ಮೂಲಕ ಜನಸಮುದಾಯಕ್ಕೆ ದೇವಾಲಯಗಳು ಸಹಾಯಕವಾಗಿದ್ದವು. ಹೀಗೆ ದೇವಾಲಯಗಳು ಸುವ್ಯವಸ್ಥಿತವಾದ ಧಾರ್ಮಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಸೌಂದರ್ಯಾತ್ಮಕ ಸಂಸ್ಥೆಯಾಗಿದ್ದವು.

ಹಾಗೆಯೇ ದೇವಾಲಯಗಳು ಸಾಮಾಜಿಕವಾಗಿ ಉಂಟು ಮಾಡಿದ ಪ್ರಭಾವದಿಂದ ಕೆಲವೊಂದು ಕುತೂಹಲಕಾರಿಯಾದ ಸಂಗತಿಗಳು ಗೋಚರಿಸುತ್ತವೆ. ದೇವಾಲಯಗಳು ಕೇವಲ ಪೂಜಾಸ್ಥಾನಗಳು ಮಾತ್ರವಲ್ಲ ಎನ್ನುವುದು ಆಗ ಮಾತ್ರ ಸ್ಪಷ್ಟವಾಗಲು ಸಾಧ್ಯ. ರಾಜಪ್ರಭುತ್ವ ಮತ್ತು ಧಾರ್ಮಿಕ ಪ್ರಭುತ್ವವನ್ನು ಬಲಪಡಿಸುವ ಕೆಲಸವನ್ನು ದೇವಾಲಯಗಳು ವ್ಯವಸ್ಥಿತವಾಗಿ ಮಾಡಿದವು. ವೈದಿಕ ಗ್ರಂಥಗಳಲ್ಲಿ ಉಲ್ಲೇಖಿತವಾದ ವೈದಿಕ ಆದರ್ಶಗಳನ್ನು ಪ್ರತಿನಿಧಿಸುವ ನೀತಿ ಸಂಹಿತೆಯನ್ನು ರೂಪಿಸುವ ಜವಾಬ್ದಾರಿಯನ್ನು ದೇವಾಲಯಗಳು

ಹೊತ್ತವು.[2] ಮಧ್ಯಕಾಲೀನ ರಾಜ್ಯ ವ್ಯವಸ್ಥೆಯಲ್ಲಿ ರಾಜಪ್ರಭುತ್ವದಷ್ಟೇ ಪ್ರಮುಖ ಸ್ಥಾನವನ್ನು ದೇವಾಲಯಗಳು ಪಡೆದುಕೊಂಡಿದ್ದವು. ದೇವಾಲಯಗಳು ಸ್ಥಳದ ಆಡಳಿತ ಮತ್ತು ಜಾತಿ ಕಟ್ಟಳೆಯ ಉನ್ನತ ನ್ಯಾಯಾಲಯಗಳಾಗಿದ್ದವು. ಧಾರ್ಮಿಕಾಚರಣೆಗಳ ಮೂಲಕ ಸಮುದಾಯದ ಸಾಮಾಜಿಕ–ಧಾರ್ಮಿಕ ಪರಂಪರೆಯನ್ನು ಪುನಶ್ಚೇತನಗೊಳಿಸುವ ಜೊತೆಗೆ ದೇವಾಲಯಗಳು ರಾಜತ್ವವನ್ನು, ಪುರೋಹಿತಶಾಹಿಯನ್ನು ಬಲಪಡಿಸುತ್ತಿದ್ದವು. ಸಮಾಜದ ಊಳಿಗಮಾನ್ಯ ವ್ಯವಸ್ಥೆಯ ರಚನೆಗೆ ಕಾರಣವಾದವು. ಧಾರ್ಮಿಕ ಪ್ರಭುತ್ವದ ಪ್ರತಿನಿಧಿಗಳಾಗುವ ಜೊತೆಗೆ ಶ್ರೇಣೀಕೃತ ಸಮಾಜ ವ್ಯವಸ್ಥೆಯ ಜೀವಂತಿಕೆಗೆ ಕಾರಣವಾದವು. ದೇವಾಲಯಗಳು ಮತ–ಧರ್ಮಗಳ ಪ್ರಭುತ್ವದ ಮೂಲಕ ಅಸಮಾನತೆಯ ಹಾಗೂ ದೇವದಾಸಿ ಪದ್ಧತಿಯಂಥ ಅನಿಷ್ಟ ಪದ್ಧತಿಗಳ ಕೇಂದ್ರವಾಗಿದ್ದವು.[3]

ಸಾಮಾಜಿಕ ಮತ್ತು ತಾತ್ವಿಕವಾಗಿ ದೇವಾಲಯಗಳು ಸಾಂಪ್ರದಾಯಿಕತೆ ಮತ್ತು ಮಡಿವಂತಿಕೆಗಳ ಕೇಂದ್ರಗಳಾದವು. ಜನರಲ್ಲಿ ಭಯ–ಭಕ್ತಿ ಮೂಡುವಂತೆ ಮಾಡಿ ಅಸಮಾನತೆಯನ್ನು ಜೀವಂತವಾಗಿರಿಸಿದ್ದವು. ಈ ಕಾರಣದಿಂದಾಗಿ ದೇವಾಲಯಗಳು ಶಪಿಸುವ ಕೇಂದ್ರಗಳಾದವು. ಅನೇಕ ಮೂಲಗಳಿಂದ ಸಂಪತ್ತನ್ನು ಸಂಗ್ರಹಿಸಿ ಸಂಪತ್ತಿನ ಕೇಂದ್ರಗಳಾದವು. ಆಯಾ ಸ್ಥಳದಲ್ಲಿ ದೇವಾಲಯವು ಆರ್ಥಿಕ ಆಧಾರವಾಗಿ ಪರಿಣಮಿಸಿತ್ತು. ಜೊತೆಗೆ ದೇವಾಲಯಗಳು ದಾನಗಳ ನೆರವಿನಿಂದ ಸಾಮಾಜಿಕ–ಆರ್ಥಿಕ ಪರಿವರ್ತನೆಯನ್ನು ಉಂಟುಮಾಡಿದವು.

ಹೀಗೆ ದೇವಾಲಯಗಳು ಧಾರ್ಮಿಕ ಕೇಂದ್ರಗಳಾಗುವುದರ ಜೊತೆಗೆ ಚಾರಿತ್ರಿಕ ನೆಲೆಗಳಲ್ಲಿ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿಯೂ ಅಂದಂದಿನ ಸಮಕಾಲೀನ ಕಾಲಗಳಲ್ಲಿ ತನ್ನ ಪ್ರಭಾವವನ್ನು ವಿಸ್ತರಿಸಿತು. ಹಲವು ಚಾರಿತ್ರಿಕ ನೆಲೆಗಳಲ್ಲಿ ದೇವಾಲಯಗಳ ಅಧ್ಯಯನವು ದೇವಾಲಯಗಳ ನಿಜ ಸ್ವರೂಪವನ್ನು ಅರಿಯಲು ಸಹಾಯಕವಾಗಿದೆ.

ಸಂಸ್ಕೃತಿ

ಕಿಟ್ಟೆಲ್ ಅವರ ಕನ್ನಡ–ಇಂಗ್ಲಿಷ್ ಅರ್ಥಕೋಶದ ಪ್ರಕಾರ ಸಂಸ್ಕೃತಿಯ ಅರ್ಥವು ಸಂಸ್ಕಾರ–Culture. ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಸಂಕ್ಷಿಪ್ತ ಕನ್ನಡ ನಿಘಂಟುವಿನಿಂದ ತಿಳಿದು ಬರುವಂತೆ ಸಂಸ್ಕೃತಿಯ ಅರ್ಥವು ಬುದ್ಧಿವಿಕಾಸ, ಒಂದು ದೇಶದ ಮಾನಸಿಕವಾದ ಸಾಧನೆ, ನಾಗರೀಕತೆಯ ಬೌದ್ಧಿಕ ಸಾಧನೆಯಾಗಿದೆ. ಕಿಟ್ಟೆಲ್ ಅವರು 'ಸಂಸ್ಕೃತಿ'ಗೆ ನೀಡಿರುವ ಸಮಾನಾರ್ಥಕ ಇಂಗ್ಲಿಷ್ ಪದ 'Culture'. ಮೊದಲಿಗೆ 'ಸಂಸ್ಕೃತಿ'ಗೆ ಸಮಾನಾರ್ಥಕವಾದ Culture ಶಬ್ದ ಬಳಕೆ ಇರಲಿಲ್ಲವೆಂದು ಕನ್ನಡದ ಹಿರಿಯ ವಿದ್ವಾಂಸರ

ಅಭಿಪ್ರಾಯಗಳಿಂದ ತಿಳಿದು ಬರುತ್ತದೆ. ಈ ವಿಷಯದಲ್ಲಿ ಡಿ.ವಿ.ಜಿ, ಮಾಸ್ತಿ, ಅನಕೃ, ಮತ್ತಿತರರು ಬಹಳ ವಿವರವಾಗಿ ವಿವೇಚಿಸಿದ್ದಾರೆ. ಅವರುಗಳು ತಿಳಿಸಿರುವಂತೆ Culture ಶಬ್ದವು ಸುಮಾರು 200 ವರ್ಷಗಳಿಂದೀಚೆಗೆ ಹೆಚ್ಚು ಬಳಕೆಯಲ್ಲಿದೆ. ಲ್ಯಾಟಿನ್ ಭಾಷೆಯ 'Cult' ಅಥವಾ 'Cultur' ಶಬ್ದ ಮೂಲದಿಂದ ಹುಟ್ಟಿಬಂದ Culture ನ ಮೂಲಾರ್ಥವು ಗೌರವಿಸು, ಸೇವಿಸು, ನಿಷ್ಠೆಮಾಡು, ಲಕ್ಷ್ಯದಲ್ಲಿರಿಸಿಕೋ ಎಂಬ ರೀತಿಯದಾಗಿತ್ತು.

ನಾಗರೀಕತೆಯು ನಿಂತನೀರಲ್ಲ ಅದು ಬೋರ್ಗರೆದು ಹರಿಯುವ ಪ್ರವಾಹ. ಅದರಲ್ಲಿ ಏನೆಲ್ಲ ತೇಲಿ ಬರಬಹುದು ಕೊಚ್ಚಿಹೋಗಬಹುದು. ಅದು ಉಪಕಾರಿಯಂತೆಯೇ ಅಪಾಯಕಾರಿಯೂ ಹೌದು. ಮ್ಯಾಥ್ಯೂ ಅರ್ನಾಲ್ಡರ ಪ್ರಕಾರ 'ನಾವು ಎಷ್ಟೋ ಸಾರಿ ಯಾಂತ್ರಿಕವಾಗಿ ಕೆಲವು ಭಾವನೆಗಳನ್ನೂ ಪದ್ಧತಿಗಳನ್ನೂ ಅನುಸರಿಸುತ್ತೇವೆ. ನಾವು ಅರಿತ ಆಲೋಚನೆಗಳು, ಉಕ್ತಿಗಳು ನಮ್ಮ ಭಾವನೆ ಮತ್ತು ಪದ್ಧತಿಗಳ ಮೇಲೆ ಬೆಳಕು ಬೀರಬೇಕು. ನಮ್ಮನ್ನು ನಾವು ತಿದ್ದಿಕೊಳ್ಳಲು ಸಹಾಯ ಮಾಡಬೇಕು. ಹೀಗೆ ನಮ್ಮನ್ನು ನಾವು ತಿದ್ದಿಕೊಳ್ಳಲು ಮಾಡುವ ಪ್ರಯತ್ನವೇ 'ಸಂಸ್ಕೃತಿ'.[4]

ಬಿ.ಎ. ಸಾಲತೊರೆಯವರು ಸಂಸ್ಕೃತಿಯ ಕುರಿತು ಮೆಕೈವರ್‌ನ ಮಾತುಗಳನ್ನು ಉಲ್ಲೇಖಿಸುತ್ತಾರೆ. "Culture connotes as professor R.M. Melver rightly affirms, the innumerable and indiscernible activities. Thoughts, feelings and impulses of our daily life".[5] ಅನೇಕ ವಿದ್ವಾಂಸರ ಅಭಿಪ್ರಾಯಗಳನ್ನು ಕ್ರೂಢೀಕರಿಸಿ ಡಾ.ಎಂ. ಚಿದಾನಂದ ಮೂರ್ತಿಯವರು ತಿಳಿಸುವಂತೆ ಸಂಸ್ಕೃತಿ ಎಂದರೆ ಒಂದು ಸಮಾಜದ ಜೀವನ ವಿಧಾನ, ಅದರ ಆಚಾರ ವ್ಯವಹಾರಗಳು, ಅದರ ಸಂಸ್ಥೆಗಳು, ಆಲೋಚನಾ ವಿಧಾನಗಳು.[6]

ಸಂಸ್ಕೃತಿ ಪದ ಬಳಕೆಯನ್ನು ಕುರಿತಂತೆ ಡಾ. ಬಾ.ರಾ.ಗೋಪಾಲ್ ಅವರ ಅಭಿಪ್ರಾಯ ಹೀಗಿದೆ 'ಇತಿಹಾಸದಲ್ಲಿ ಈ ಪದ ಕೇವಲ ಭೌತವಸ್ತು ಸೂಚಕವಾಗಿರದೆ ಆಧ್ಯಾತ್ಮಿಕ ಸೂಚಕವೂ ಆಗಿದೆ. ಆದ ಕಾರಣ ಇತಿಹಾಸದಲ್ಲಿ 'ಸಂಸ್ಕೃತಿ'ಗೂ 'ನಾಗರೀಕತೆ'ಗೂ ವ್ಯತ್ಯಾಸವಿದೆ.[7]

ಡಿ.ವಿ.ಜಿ. ಅವರ ಅಭಿಪ್ರಾಯವನ್ನು ಕ್ರೂಢೀಕರಿಸಿ ಹೇಳುವುದಾದರೆ ಸಂಸ್ಕೃತಿ ಎಂದರೆ ಮನುಷ್ಯನ ಬುದ್ಧಿಯ ವ್ಯವಸಾಯ, ಮನಸ್ಸಿನ ಮೇಲ್ಮೈ ಅಂತರಂಗ ಸಂಸ್ಕಾರ ಎಂಬ ಅರ್ಥವು ನಂತರ ಪ್ರಚಾರಕ್ಕೆ ಬಂದಿತು. ಹೀಗೆ ಸಾಹಿತ್ಯ, ಸಂಗೀತ, ಚಿತ್ರ, ಶಿಲ್ಪ ಮೊದಲಾದವುಗಳ ಮೂಲಕ ಉಂಟಾಗತಕ್ಕ ಮನೋಭಾವ ಸಂಸ್ಕೃತಿ ಎಂಬ ರೂಢಿಗೆ ಬಂದಿದೆ.[8] ಸಂಸ್ಕೃತಿ ಎಂಬುದು ಬರಿಯ ವಿದ್ಯೆಯಲ್ಲ, ಅದು ವಿದ್ಯಾಕುಸುಮಾದ ಪರಾಗ.[9]

ಸಂಸ್ಕೃತಿ ಎಂಬುವುದು ವಿದ್ಯೆಯಿಂದ ಲಭ್ಯವಾದ ಮನೋಭಾವ ಎಂದು ಭಾವಿಸುವುದಾದರೆ, ಕಲೆಗಳ ಮೂಲಕ ಉಂಟಾಗತಕ್ಕ ಮನೋಭಾವ ಎಂದು ತಿಳಿಯುವುದಾದರೆ ಕಲೆಗಳ ಪರಿಚಯವಿಲ್ಲದ ಅವಿದ್ಯಾವಂತರನ್ನು ಅಸಂಸ್ಕೃತರು ಎನ್ನಬೇಕೆ? ಇಲ್ಲ, ಅಕ್ಷರ ಜ್ಞಾನದಿಂದ ಮಾತ್ರ ಲಭಿಸುವ ವಿದ್ಯೆಯಿಂದಲೇ ಸಂಸ್ಕೃತಿ ಎನ್ನುವಂತಿಲ್ಲ. ಒಳಿತಾದ ಬದುಕಿನ ರೀತಿಯೇ ಸಂಸ್ಕೃತಿ, ಕ.ಸಾ.ಪ.ನ. ಕನ್ನಡ ನಿಘಂಟುವಿನಲ್ಲಿ ಹೇಳಿರುವಂತೆ, ನಾಗರೀಕತೆಯ ಬೌದ್ಧಿಕ ಸಾಧನೆಯೇ 'ಸಂಸ್ಕೃತಿ' ಎನ್ನುವ ಮಾತು ಅರ್ಥಪೂರ್ಣವಾಗಿದೆ.

'ಒಟ್ಟಾರೆ ಮನುಷ್ಯ ಸ್ವಭಾವಕ್ಕೆ ಸೌಂದರ್ಯವನ್ನೂ ಬೆಲೆಯನ್ನೂ ಕೂಡುವ ಎಲ್ಲ ಶಕ್ತಿಗಳ ಸುಸಂಗತ ವಿಕಾಸವೇ ಸಂಸ್ಕೃತಿ[10] ಎಂಬ ಡಿ.ವಿ.ಜಿ. ಅವರ ಅಭಿಪ್ರಾಯವನ್ನು ಸಮರ್ಥಿಸಬಹುದು.

ಅನೇಕ ವಿದ್ವಾಂಸರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಬದುಕಿನಲ್ಲಿ ಉಳಿದುಬರುವ ಉತ್ತಮವಾದ ನಡವಳಿಕೆಗಳನ್ನು ಸಂಸ್ಕೃತಿ ಎನ್ನಬಹುದು. ಅಂದಂದಿನ ಜೀವನ ವಿಧಾನವನ್ನು ರೂಪಿಸುವ, ಬಾಹ್ಯ ಬದುಕಿಗೆ ಸೊಬಗು ನೀಡುವ ನಾಗರೀಕತೆಯ ಎಷ್ಟೋ ಅಂಶಗಳಲ್ಲಿ 'ಸಂಸ್ಕೃತಿ' ಎಂಬ ಪದವು ಒಂದು ಸೀಮಿತ ಉದ್ದೇಶಕ್ಕಾಗಿ ಬಳಕೆಯಾಗಿದ್ದು, ಈ ಪದವು ಶ್ರೇಣೀಕೃತ ಮೇಲ್‌ಸ್ತರದಲ್ಲಿರುವವರಿಗಷ್ಟೇ ಸಂಬಂಧಪಟ್ಟಂತವು ಎನ್ನುವ ನಂಬಿಕೆ ಇದೆ.[11] 'ಸಂಸ್ಕೃತಿ' ಪದವನ್ನು ಚರಿತ್ರೆಯ ವೈಭವೀಕರಣಕ್ಕೆ ಉಪಯೋಗಿಸದೆ, ಸಂಸ್ಕೃತಿಯ ಸರಳೀಕೃತ ವ್ಯಾಖ್ಯಾನಗಳಿಗೆ ಸೀಮಿತಗೊಳಿಸದೆ ಚರ್ಚೆಗೆ ಒಳಪಟ್ಟಾಗ ಮಾತ್ರ ಸಂಸ್ಕೃತಿ ಚರಿತ್ರೆಯ ವ್ಯಾಖ್ಯಾನ ಸಾಧ್ಯ.

ಕೆಲವು ಸಾರ್ವತ್ರಿಕವಾಗಿ ಉಳಿದು ಅಂತರಂಗದ ಬದುಕಿಗೆ ಶೋಭೆ ನೀಡುತ್ತವೆ. ಒಂದು ಕಾಲದ ತಾತ್ಕಾಲಿಕವಾದ ಮೌಲ್ಯಗಳಲ್ಲಿ ಕೆಲವು ಎಲ್ಲಾ ಕಾಲದ ಶಾಶ್ವತ ಮೌಲ್ಯಗಳಾಗಿ ಉಳಿದು ಬದುಕಿಗೆ ಹಿರಿಮೆ ತರುತ್ತವೆ. ಅಂತಹ ಶಾಶ್ವತ ಮೌಲ್ಯಗಳು ಮಾನವನ ಅಂತರಂಗದ ಕೈಗನ್ನಡಿಗಳಾಗುತ್ತವೆ.

ಸಂಸ್ಕೃತಿಯನ್ನು ರೂಪಿಸುವ ಶಾಶ್ವತ ಮೌಲ್ಯಗಳ ಮೇಲೆ ಭೌಗೋಳಿಕ, ಧಾರ್ಮಿಕ ಮತ್ತು ಆರ್ಥಿಕ ಪರಿಸರಗಳ ಪ್ರಭಾವವು ಬಹಳ ಮುಖ್ಯವಾದುದು. ಸಮುದ್ರದ ತೀರಪ್ರದೇಶಗಳಲ್ಲಿ ವಾಸಿಸುವ ಜನರಿಗೂ, ಸಮುದ್ರವನ್ನೇ ಕಂಡರಿಯದ ಜನರಿಗೂ ಜೀವನವು ವಿಧಿ-ವಿಧಾನಗಳಲ್ಲಿ ವ್ಯತ್ಯಾಸಗಳಿರುತ್ತವೆ. ಇಂತಹಾ ಕಾರಣಗಳಿಂದಾಗಿಯೇ ಸಂಸ್ಕೃತಿಯೂ ವಿಶೇಷತೆ ಕಾಣುತ್ತದೆ. ಆ ವಿಶೇಷತೆಯನ್ನು ಸಮುದಾಯದ ಬದುಕಿನಲ್ಲಿ

ಕಾಣಬಹುದು. ವ್ಯಕ್ತಿ ಮತ್ತು ಸಮುದಾಯವನ್ನು ಬೆಳೆಸುವ ಮತ್ತು ನಿಯಂತ್ರಿಸುವ ಸಾಹಸದ ಕಾರ್ಯವನ್ನು ಮಾಡುವುದರಿಂದಲೇ ಬದುಕಿನಲ್ಲಿ ಸಂಸ್ಕೃತಿಯ ಸ್ಥಾನವು ಗಣನೀಯವಾದುದು.

ಸಮಾಜಕ್ಕೆ ಶೋಭೆ ನೀಡುವ ಸಂಸ್ಕೃತಿಯು ತಾನು ಉಳಿಯಲು ಮತ್ತು ಬೆಳೆಯಲು ಸಮಾಜವನ್ನೇ ಆಶ್ರಯಿಸುತ್ತದೆ. ಸಮಾಜದ ಭಿನ್ನ-ಭಿನ್ನ ಅಂಗಗಳಿಂದ ಪಡೆದ ಉತ್ತಮ ಕೊಡುಗೆಗಳಿಂದಾಗಿ ಸಂಸ್ಕೃತಿ ಮೈದುಂಬಿಕೊಳ್ಳುತ್ತದೆ. ಹಾಗೆಯೇ ಸಮಾಜವನ್ನು ಶ್ರೀಮಂತಗೊಳಿಸುತ್ತದೆ. ಬದುಕಿನ ಅರ್ಥವಂತಿಕೆಗೆ ಪೂರಕವಾದ ಸಂಸ್ಕೃತಿ ಮತ್ತು ಸಮಾಜಗಳ ಪರಸ್ಪರ ಕೊಡುಕೊಳ್ಳುವಿಕೆಯು ಅತ್ಯಂತ ಮಹತ್ವವಾದುದು.

ಸಮಾಜದ ಒಂದು ಅಂಗವಾದ ದೇವಾಲಯಗಳು ಮತ್ತು ಸಂಸ್ಕೃತಿ ಪರಸ್ಪರ ಕೊಟ್ಟು ಪಡೆದ ಕಾಣಿಕೆ-ಧೇಣಿಗೆಗಳನ್ನು ಕುರಿತು ತಿಳಿಯುವುದೇ ನಮ್ಮ ಈ ಅಧ್ಯಯನದ ಉದ್ದೇಶವಾಗಿದೆ.

ಅಧ್ಯಯನದ ಉದ್ದೇಶ

ಚಾರಿತ್ರಿಕ ಮತ್ತು ಸಾಂಸ್ಕೃತಿಕ ಮಹತ್ವ ಪಡೆದ ದೇವಾಲಯಗಳಲ್ಲಿ ಮೇಲುಕೋಟೆ ದೇವಾಲಯಗಳನ್ನೂ ಗುರುತಿಸಬಹುದು. ಮೇಲುಕೋಟೆ ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನಲ್ಲಿದೆ. ದಖನ್ ಪ್ರಸ್ಥಭೂಮಿಯ ದಕ್ಷಿಣದಂಚಿನ್ನಲಿರುವ ಮೇಲುಕೋಟೆ ಕಾವೇರಿ ನದಿಗೆ ಉತ್ತರದಲ್ಲಿ ಗಿರಿಶ್ರೇಣಿಗೆ ಹೊಂದಿಕೊಂಡಂತಿದೆ. ಸಮುದ್ರ ಮಟ್ಟದಿಂದ 3589 ಅಡಿ ಎತ್ತರವಾಗಿದ್ದು 'ಯದುಗಿರಿ' ಎಂದು ಕರೆಯಲ್ಪಡುತ್ತದೆ. ಈ ಪ್ರದೇಶದ ಚಾರಿತ್ರಿಕ ಹಿನ್ನೆಲೆಯನ್ನು ನೋಡಿದಾಗ ಪ್ರಾಗೈತಿಹಾಸಿಕ ಕಾಲದಿಂದ ಹಿಡಿದು ಇತ್ತೀಚಿನವರೆಗೂ ತನ್ನದೇ ಆದಂತಹ ವಿಶಿಷ್ಟವಾದ ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿದೆ. ಐತಿಹಾಸಿಕ ಅಧ್ಯಯನಕ್ಕೆ ದೊರಕುವ ಮಹತ್ವದ ಸಾಮಗ್ರಿಗಳೆಂದರೆ ದೇವಾಲಯಗಳು, ಆದುದರಿಂದ ದೇವಾಲಯಗಳ ಚರಿತ್ರೆಯೆಂದರೆ ಒಂದು ಜನಾಂಗದ ಅಭಿರುಚಿಯ ಚರಿತ್ರೆ, ಮೇಲುಕೋಟೆ ವಿಪುಲವೂ, ವೈವಿಧ್ಯಮಯವೂ ಆದ ದೇವಾಲಯಗಳ ಚರಿತ್ರೆಯನ್ನು ಹೊಂದಿದೆ. ಮೇಲುಕೋಟೆಯು ಶಾಸನಗಳು, ದೇವಾಲಯಗಳು, ಧರ್ಮ, ಸಾಹಿತ್ಯ, ಜಾನಪದ ಹೀಗೆ ಅಧ್ಯಯನಕ್ಕೆ ಪೂರಕವಾಗಿರುವ ವಿಭಿನ್ನ ವಿಷಯಗಳನ್ನು ಹೊಂದಿದ್ದು ಸಂಶೋಧನೆಗೆ ವಿಪುಲವಾದ ಅವಕಾಶವಿದೆ. ಧಾರ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ನೆಲೆಗಳಲ್ಲಿ ಸ್ಥಳದ ಭೌಗೋಳಿಕ ವ್ಯಾಪ್ತಿಗೆ ಸೇರಿದಂತೆ ಸಮಗ್ರ ಅಧ್ಯಯನ ಆಗಬೇಕಾಗಿದೆ.

ಸಮಾಜದ ಒಂದು ಅವಿಭಾಜ್ಯ ಅಂಗ ದೇವಾಲಯ. ಇಂದಿಗಿಂತ ಹೆಚ್ಚಾಗಿ ಹಿಂದೆ ದೇವಾಲಯಗಳು ವಿವಿಧ ಕಾರಣಗಳಿಂದ ಆಕರ್ಷಿಸಿದ್ದವು. ಇಲ್ಲದಿದ್ದರೆ ಇಂದು ಊರಿಗೆ ಒಂದಾದರೂ ದೇವಾಲಯ ಇರುತ್ತಿರಲಿಲ್ಲ. ಗಣಪತಿಯ ದೇವಾಲಯದಿಂದ ಗ್ರಾಮದೇವತೆಯ ದೇವಾಲಯದವರೆಗೆ ಕೆಲವು ಹಳ್ಳಿಗಳಲ್ಲಿ ಹತ್ತು ಹದಿನೈದು ದೇವಾಲಯಗಳನ್ನು ಕಾಣಬಹುದು. ದೇವಾಲಯಗಳಿಂದಲೇ ಕೆಲವು ಸ್ಥಳಗಳು ಪ್ರಸಿದ್ಧವಾಗಿವೆ. ಭಾರತದ ಜನತೆಯಲ್ಲಿ ವಿಹಾರಾರ್ಥ ಪ್ರವಾಸಿಗಳಿಗಿಂತಲೂ ತೀರ್ಥಯಾತ್ರಾ ಪ್ರವಾಸಿಗಳ ಸಂಖ್ಯೆಯೇ ಅಧಿಕ ಎನ್ನುವುದು ಉತ್ಪ್ರೇಕ್ಷೆ ಮಾತಾಗುವುದಿಲ್ಲ.

ನಮ್ಮ ಬದುಕಿನಲ್ಲಿ ಪ್ರಮುಖ ಪಾತ್ರ ವಹಿಸಿರುವ ದೇವಾಲಯಗಳ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳನ್ನು ಕುರಿತ ಅಧ್ಯಯನಗಳು ನಡೆದಿವೆಯಾದರೂ ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಕುರಿತ ಅಧ್ಯಯನ ಆಗಿಲ್ಲವೆಂಬುದು ಹಲವು ವಿದ್ವಾಂಸರ ಅಭಿಪ್ರಾಯವಾಗಿದೆ. ದೇವಾಲಯಗಳು ಜನತೆಯ ಮೇಲೆ ಬೀರಿದ ಪ್ರಭಾವ, ಜನತೆ ದೇವಸ್ಥಾನವನ್ನು ಕಂಡ ರೀತಿ, ಸ್ತ್ರೀಯರು ಮತ್ತು ಸಾಮಾನ್ಯ ವರ್ಗದವರ ದೇವಾಲಯದೊಂದಿಗಿನ ಸಂವೇದನೆಗಳನ್ನು ಕುರಿತು ಸಾಕಷ್ಟು ಅಧ್ಯಯನ ನಡೆದಿಲ್ಲವೆಂದೇ ಹೇಳಬೇಕಾಗಿದೆ. ದೇವಾಲಯಗಳು ಬದುಕಿನ ಹತ್ತು ಹಲವು ಮುಖಗಳನ್ನು ಸಾಮುದಾಯಿಕವಾಗಿ ನಿಯಂತ್ರಿಸುತ್ತಿದ್ದುದನ್ನು ನೋಡಬಹುದು. ಒಂದು ದೇಶದ ನಿಜವಾದ ಚರಿತ್ರೆಯೆಂದರೆ ಅದು ಜನರ ಚರಿತ್ರೆ, ಆ ಚರಿತ್ರೆಯಲ್ಲಿ ಜನತೆ ಬದುಕಿದ ರೀತಿ, ಅನುಸರಿಸಿದ ಧರ್ಮ, ಕಟ್ಟಿದ ಕಲೆ, ಜೀವನ ಸಮಸ್ಯೆಗಳು, ಜೀವನದ ಮೌಲ್ಯಗಳು ಮುಂತಾದ ವಿವರಣೆಗಳಿರುತ್ತವೆ. ಸಮಾಜದ ಕೆಳವರ್ಗದ ಬಹುಸಂಖ್ಯಾತ ಜನರ ಚರಿತ್ರೆಯು ನಿಜವಾದ ಚರಿತ್ರೆಯಾಗಿದ್ದು, ಅದು ಶೋಷಣೆಗೊಳಗಾಗಿದೆ ಎನ್ನುವುದು ವಿದ್ವಾಂಸರ ಅಭಿಪ್ರಾಯ. ಕೆಳಸ್ತರದ ಜನರ ಚರಿತ್ರೆ ನಿರ್ಲಕ್ಷಕ್ಕೆ ಒಳಗಾಗಲು ಮೇಲ್ವರ್ಗವು ಸ್ಥಾಪಿಸಿದ ಯಜಮಾನಿಕೆ ಮೂಲಕಾರಣ ಎನ್ನುವುದು ಗ್ರಾಮ್‌ಶಿ ಅವರ ಮಾತು. ಚರಿತ್ರೆ ಅಧ್ಯಯನವು ಜನಕೇಂದ್ರಿತವಾಗಲು ಇದರ ಅಧ್ಯಯನ ಅಗತ್ಯವಾಗಿದೆ. ಚರಿತ್ರೆಯನ್ನು ಸಾಮಾಜಿಕ ಮತ್ತು ಆರ್ಥಿಕ ನೆಲೆಗಟ್ಟಿನಿಂದ ನಿರ್ಮಿಸುವ ಪ್ರಯತ್ನವು ಅಲಕ್ಷಿತ ವರ್ಗದ ಜನರಿಗೆ ನ್ಯಾಯ ಒದಗಿಸುತ್ತದೆ. ರಾಜಪ್ರಭುತ್ವ ಮತ್ತು ಧಾರ್ಮಿಕ ಪ್ರಭುತ್ವದ ಬಿಗಿಹಿಡಿತದಲ್ಲಿ ಸಿಕ್ಕಿದ್ದ ಕೆಳವರ್ಗದ ಜನರು ದೇವಾಲಯದೊಂದಿಗೆ ಹೊಂದಿದ್ದ ಸಂಬಂಧವನ್ನು ವ್ಯಕ್ತಪಡಿಸುವ ಉದ್ದೇಶವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ.

ಸಾಮುದಾಯಿಕ ಬದುಕಿನಲ್ಲಿ ದೇವಾಲಯಗಳ ಅವಶ್ಯಕತೆ, ಸಮುದಾಯ ಮತ್ತು ದೇವಾಲಯಗಳ ಪರಸ್ಪರ ಕೊಳು-ಕೊಡೆಗಳು, ದೇವಾಲಯಗಳು ಸಮುದಾಯವನ್ನು

ನಿಯಂತ್ರಿಸಿದ ಪರಿ, ದೇವಾಲಯಗಳ ಮೇಲೆ ಧರ್ಮದ ಪ್ರಭಾವ, ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಬದುಕಿನಲ್ಲಿ ದೇವಾಲಯಗಳು ನಿರ್ವಹಿಸಿದ ಪಾತ್ರ ಇತ್ಯಾದಿ ವಿಷಯಗಳನ್ನು ಕುರಿತ ಆಲೋಚನೆಗಳು ಅವಶ್ಯಕವಾಗಿವೆ. ಚಾರಿತ್ರಿಕ ಮತ್ತು ಸಾಂಸ್ಕೃತಿಕ ವಿಶ್ಲೇಷಣೆಯನ್ನು ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆಯಿಂದ ನೋಡಬೇಕಿದೆ.

ಮೇಲೆ ಗಮನಿಸಿದ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಪ್ರಸ್ತುತ "ಮೇಲುಕೋಟೆ ದೇವಾಲಯಗಳು-ಚಾರಿತ್ರಿಕ ಮತ್ತು ಸಾಂಸ್ಕೃತಿಕ ನೆಲೆಗಳು" ಎಂಬ ಶೀರ್ಷಿಕೆಯಡಿಯಲ್ಲಿ ಅಧ್ಯಯನ ಆರಂಭವಾಗಿದೆ. ಇದುವರೆಗೆ ವಿಶೇಷವಾಗಿ ಕೇಂದ್ರೀಕರಿಸಿ ನಡೆಯದಿರುವ ಇಲ್ಲಿನ ದೇವಾಯಗಳ ಸಾಂಸ್ಕೃತಿಕ ಮಹತ್ವವನ್ನು ಕುರಿತ ಅಧ್ಯಯನವು ಅವಶ್ಯಕವೆಂದು ತಿಳಿಯಲಾಗಿದೆ.

ಒಂದು ನಿರ್ದಿಷ್ಟ ಸಮಸ್ಯೆಯನ್ನು ಅವಲೋಕಿಸಿದಾಗ ಅದು ವಯಕ್ತಿಕವಾಗಿ, ಸಾರ್ವಜನಿಕವಾಗಿ ಹಾಗೂ ಸಮಾಜಮುಖಿ ಸಫಲತೆಯನ್ನು ಹೊಂದಿರಬೇಕು. ಅಂತಹಾ ಸಂದರ್ಭದಲ್ಲಿ ಸಂಶೋಧಕನ ಪರಿಶ್ರಮ ಸಫಲತೆಯನ್ನು ಹೊಂದಲು ಸಾಧ್ಯ. ಆದ್ದರಿಂದ ದೇವಾಲಯಗಳ ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ನೆಲೆಗಳಲ್ಲಿ, ಉಂಟಾದ ವೈಚಾರಿಕ ಹಾಗೂ ಕ್ರಿಯಾತ್ಮಕ ಪರಂಪರೆಯಿಂದ ಎಷ್ಟರ ಮಟ್ಟಿಗೆ ಮಾರ್ಗದರ್ಶನವನ್ನು ಪಡೆಯಬಹುದೆಂಬುದನ್ನು ಕಂಡು ಹಿಡಿಯಲು ಯತ್ನಿಸಬೇಕಾಗಿದೆ. ಲಭ್ಯವಿರುವ ಆಧಾರಗಳಿಂದ ಇನ್ನೂ ಹೆಚ್ಚಿನ ಹೊಸ-ಹೊಸ ನೆಲೆಗಳನ್ನು ಹುಡುಕುವ ಪ್ರಯತ್ನವನ್ನು ಮಾಡಲಾಗಿದೆ. ಪ್ರಸ್ತುತ ಅಧ್ಯಯನವು ಈ ಹಿನ್ನೆಲೆಯಲ್ಲಿ ಹಲವು ಉದ್ದೇಶಗಳನ್ನು ಹೊಂದಿದ್ದು ಪ್ರಸ್ತಾಪಿಸಲು ನಿರ್ಣಯಿಸಿರುವ ಉದ್ದೇಶಗಳು ಮುಂದಿನಂತಿವೆ.

12ನೇ ಶತಮಾನದಲ್ಲಿ ರಾಮಾನುಜರ ಶ್ರೀ ವೈಷ್ಣವ ಧರ್ಮವು ಮಾಡಿದ ಪ್ರಭಾವ ಹಾಗೂ ಆ ಧರ್ಮವು ದೇವಾಲಯ ಪೂಜೆ ಮತ್ತು ವಿವಿಧ ದೇವಾಲಯ ಆಚರಣೆಗಳಿಗೆ ಕೊಟ್ಟ ಮಹತ್ವದಿಂದಾಗಿ ಈ ನಾಡಿನಲ್ಲಿ ಗಣನೀಯ ಸಂಖ್ಯೆಯಲ್ಲಿ ದೇವಾಲಯಗಳು ಸ್ಥಾಪನೆಯಾದವು. ಅದರಲ್ಲಿ ಮೇಲುಕೋಟೆಯಲ್ಲಿ ಸ್ಥಾಪನೆಯಾದ 'ನಾರಾಯಣಸ್ವಾಮಿ ದೇವಾಲಯ ಸಂಕೀರ್ಣವು' ಮುಖ್ಯ ಸ್ಥಾನ ಪಡೆದಿದೆ. ಆಲಯಾಶ್ರಿತ ಗ್ರಾಮವಾದ ಮೇಲುಕೋಟೆ ಹೊಯ್ಸಳರ ಕಾಲದಲ್ಲಿ ಸ್ಥಾಪನೆಯಾಗಿ ವಿಜಯನಗರದ ಅರಸರು ಮತ್ತು ಮೈಸೂರು ಒಡೆಯರ ಆಶ್ರಯದಲ್ಲಿ ಒಂದು ಮಹತ್ವದ ಧಾರ್ಮಿಕ ಕೇಂದ್ರವಾಗಿ ಹೆಸರು ಪಡೆಯಿತು. ಚಾರಿತ್ರಿಕ ಮತ್ತು ಸಾಂಸ್ಕೃತಿಕ ಕೇಂದ್ರವಾಗಿ ಮಹತ್ವ ಪಡೆದ ಇಲ್ಲಿನ

ದೇವಾಲಯಗಳ ಕುರಿತ ಪ್ರಸ್ತುತ ಅಧ್ಯಯನವು ಕೆಲವು ಮಹತ್ವದ ಅಂಶಗಳನ್ನು ಹೊರತರುವ ಉದ್ದೇಶಗಳ್ನು ಹೊಂದಿದೆ.

ಮೊದಲಿಗೆ ಮೇಲುಕೋಟೆ ದೇವಾಲಯ ಸಂಕೀರ್ಣದ ಉಗಮ, ಪ್ರಾಚೀನತೆ ಹಾಗೂ ನಂತರದ ಕಾಲದಲ್ಲಿ ಅದು ಪಡೆದ ಪ್ರಾಮುಖ್ಯತೆಯನ್ನು ಗುರುತಿಸುವ ಆರಂಭಿಕ ಉದ್ದೇಶವಿದೆ. ಕಾಡಾಗಿದ್ದ ಮೇಲುಕೋಟೆಯು ದೇವಾಲಯ ಸಂಕೀರ್ಣದ ಸ್ಥಾಪನೆಯೊಂದಿಗೆ ಉದಾರ ರಾಜಾಶ್ರಯ ಪಡೆದು ಒಂದು ಸಾಂಸ್ಕೃತಿಕ ಕೇಂದ್ರವಾಗಿ ಹೊಂದಿದ ಬೆಳವಣಿಗೆಯ ಹಂತಗಳನ್ನು ಇದು ಒಳಗೊಂಡಿದೆ.

ಮಾನವ ವಿಕಾಸದ ಇತಿಹಾಸದೊಂದಿಗೆ ತಳುಕು ಹಾಕಿಕೊಂಡು ಬಂದಿರುವ ಪ್ರಧಾನ ಅಂಶವೆಂದರೆ ಧರ್ಮ. ದೇವಾಲಯಗಳ ನಿರ್ಮಾಣದ ಹಿನ್ನೆಲೆಯಲ್ಲಿ ಧರ್ಮವು ಇರುವುದು ಸ್ವಾಭಾವಿಕ, ಧಾರ್ಮಿಕ ಕೇಂದ್ರವಾಗಿ ಮೇಲುಕೋಟೆ ದೇವಾಲಯ ಸಂಕೀರ್ಣದ ಪಾತ್ರ ಮಹತ್ವದ್ದು. ಧರ್ಮ ಸಂಸ್ಕೃತಿಗಳ ಅಧ್ಯಯನವೆಂದರೆ ಅದು ಒಂದರ್ಥದಲ್ಲಿ ಆದರ್ಶ–ವಾಸ್ತವಗಳ ನಡುವಿನ ಸಂಘರ್ಷವೇ ಆಗಿದೆ. ಆದ್ದರಿಂದ ಧರ್ಮ ಮತ್ತು ಸಂಸ್ಕೃತಿಗಳ ಸಂಬಂಧ ಸಮನ್ವಯಕ್ಕೆ ಕಾರಣವಾಗಿರುವಂತೆ ಸಂಘರ್ಷವನ್ನೂ ಒಳಗೊಂಡಿದೆ. ಆ ಕಾರಣಕ್ಕಾಗಿ ಧರ್ಮ ಮತ್ತು ಸಂಸ್ಕೃತಿಗಳ ಅಧ್ಯಯನವೆಂದರೆ ಸೂಕ್ಷ್ಮವಾಗಿ ಗಮನಿಸಿದಾಗ ಸಮನ್ವಯ–ಸಂಘರ್ಷಗಳ ಮುಖಾಮುಖಿಯಾಗಿ ಕಾಣುತ್ತದೆ. ಮೇಲುಕೋಟೆಗೆ ಸಂಬಂಧಿಸಿದಂತೆ ಶೈವರು ಮತ್ತು ವೈಷ್ಣವರ ಹಾಗೂ ಜೈನ ಮತ್ತು ವೈಷ್ಣವರ ಮತೀಯ ವಿರಸಗಳು ಮತ್ತು ವೈಷ್ಣವರ ಆಂತರಿಕ ವಿರಸಗಳು ಎದ್ದು ಕಾಣುತ್ತವೆ. ಇಲ್ಲಿ ಮೇಲ್ನೋಟಕ್ಕೆ ಕಾಣುವ ಧಾರ್ಮಿಕ ಸಾಮರಸ್ಯ ಎನ್ನುವ ಪ್ರಭುತ್ವದ ಹಿನ್ನೆಲೆಯ ವ್ಯಾಖ್ಯಾನಗಳಿಂದ ಧರ್ಮವನ್ನು ಅರ್ಥೈಸಿಕೊಳ್ಳಲು ಸಾಧ್ಯವಿಲ್ಲ. ಪ್ರಭುತ್ವದ ಅಗತ್ಯಗಳನ್ನು ಪೂರೈಸಲು, ಪ್ರಜೆಗಳನ್ನು ಅಧೀನದಲ್ಲಿಡಲು, ರಾಜನಿಗೆ ಧಾರ್ಮಿಕ ಸಾಮರಸ್ಯ ಅಗತ್ಯವಾದುದು. ಧರ್ಮವನ್ನು ಮತ್ತಷ್ಟು ಬಲಗೊಳಿಸಿ ಜನರ ಬದುಕಿನಲ್ಲಿ ಕೇಂದ್ರ ಸ್ಥಾನವನ್ನು ಪಡೆಯುವಂತೆ ಮಾಡಿತು ಹಾಗೂ ದೇವಾಲಯಗಳು ಇದಕ್ಕೆ ಪೂರಕವಾದುವು. ಧರ್ಮ ವ್ಯಕ್ತಿತ್ವದ ಬೆಳವಣಿಗೆಗೆ ಹಾಗೂ ಕ್ರೀಯಾಶೀಲತೆಗೆ ಪೂರಕವಾಗಿದೆ ಎನ್ನುವುದು ಎಷ್ಟು ಸತ್ಯವೋ ಅವನ ಸಾಮರ್ಥ್ಯದ ಅವಗಣನೆಗೂ ಕಾರಣವಾಗಿದೆ ಎನ್ನುವುದು ಅಷ್ಟೇ ಸತ್ಯ. ಪುರೋಹಿತಶಾಹಿ ಪ್ರವೇಶದಿಂದ ಸಮಾಜದ ಅಸಮಾನತೆ ಮತ್ತು ಶೋಷಣೆಗೆ ಕಾರಣವಾಯಿತು. ಜನಸಮುದಾಯದ ಧಾರ್ಮಿಕ ನಂಬಿಕೆ ಕೆಲವು ಅನಿಷ್ಟ ಆಚರಣೆಗಳಿಗೂ ಕಾರಣವಾಯಿತು. ಧಾರ್ಮಿಕ ನಂಬಿಕೆಯನ್ನು ಬಲವಂತದಿಂದ ಆಚರಿಸುವುದರಿಂದ ಮುಕ್ತವಾದ ಜನರಿಂದ ರೂಪುಗೊಂಡ ಆಸ್ತಿಕವಾದ ಮತ್ತು ವಿವೇಕ ಮಿಶ್ರಿತ ಮುಕ್ತ ಸಮಾಜದ ಅಗತ್ಯತೆಯನ್ನು ಅರಿಯುವುದಾಗಿದೆ.

ದೇವಾಲಯಗಳು ಕೇವಲ ಪೂಜಾಸ್ಥಾನವಾಗಲಿ, ಧಾರ್ಮಿಕ ಸಂಸ್ಥೆಯಾಗಲಿ ಆಗಿರದೆ, ಸಂಕೀರ್ಣವಾದ ಸಾಮಾಜಿಕ-ಆರ್ಥಿಕ ಸಂಸ್ಥೆಯಾಗಿತ್ತು. ಜನ ಜೀವನದಲ್ಲಿ ಮಹತ್ತರವಾದ ಪಾತ್ರವನ್ನು ನಿರ್ವಹಿಸುತ್ತಿತ್ತು. ಧಾರ್ಮಿಕಾಚರಣೆಗಳ ಮೂಲಕ ಸಮುದಾಯದ ಸಾಮಾಜಿಕ-ಧಾರ್ಮಿಕ ಪರಂಪರೆಯನ್ನು ಪುನಶ್ಚೇತಗೊಳಿಸುವ ಜೊತೆಗೆ ದೇವಾಲಯಗಳು ರಾಜತ್ವವನ್ನೂ ಪುರೋಹಿತಶಾಹಿಯನ್ನೂ ಬಲಪಡಿಸುತ್ತಿತ್ತು. ಸಮಾಜದ ಊಳಿಗಮಾನ್ಯ ಅಂಶಗಳ ಆಧಾರ ಸ್ತಂಭಗಳಾಗಿ ಅವು ಬಲಗೊಳ್ಳುತ್ತಿದ್ದವು.

ದೇವಾಲಯಗಳು ಗ್ರಾಮಗಳ ಆಡಳಿತ ಮತ್ತು ಜಾತಿಕಟ್ಟಲೆಯ ಉನ್ನತ ನ್ಯಾಯಾಲಯಗಳಂತೆ ವರ್ತಿಸುತ್ತಿದ್ದವು. ಸಮುದಾಯ ಕೇಂದ್ರಗಳಾಗಿ ಗುರುತಿಸಲ್ಪಟ್ಟ ಇಲ್ಲಿನ ದೇವಾಲಯಗಳು ಶ್ರೇಣೀಕೃತ ಸಮಾಜವನ್ನು ಪೋಷಿಸುತ್ತಿದ್ದವು. ಸಾಂಪ್ರದಾಯಿಕತೆ ಮತ್ತು ಮಡಿವಂತಿಕೆಗಳ ಕೇಂದ್ರಗಳಾದವು. ದೇವಾಲಯವನ್ನು ಹಲವು ಜಾತಿಯ ಜನರು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಅವಲಂಬಿಸಿದ್ದರೂ ಸಮಾನತೆ ಸೃಷ್ಟಿಯಾಗಲಿಲ್ಲ. ಜಾತಿ ವ್ಯವಸ್ಥೆಯನ್ನು ಧಾರ್ಮಿಕ ಚೌಕಟ್ಟಿನಿಂದ ವ್ಯಾಖ್ಯಾನಿಸುವ ಮೂಲಕ ಸಾಮಾನ್ಯರನ್ನು ಅಧೀನರನ್ನಾಗಿಸುವಲ್ಲಿ ದೇವಾಲಯಗಳು ಕೆಲಸ ಮಾಡಿದವು. ಜಾತಿ ವ್ಯವಸ್ಥೆಯ ಸಂಕೀರ್ಣತೆಯನ್ನು ಸರಳಗೊಳಿಸುವಲ್ಲಿ ಹಾಗೂ ಜಾತಿ ವ್ಯವಸ್ಥೆಯನ್ನು ಮೀರಿ ನಿಲ್ಲುವಲ್ಲಿ ದೇವಾಲಯಗಳು ವಿಫಲವಾದ ಅಂಶಗಳನ್ನು ಸಾಮಾಜಿಕ ನೆಲೆಯಲ್ಲಿ ಹುಡುಕುವುದಾಗಿದೆ.

ಒಪ್ಪಿತವಾಗಿರುವ ಚರಿತ್ರೆಯಲ್ಲಿ ನಿರ್ಲಕ್ಷಕ್ಕೊಳಗಾದ ಕೆಳವರ್ಗಗಳ ಪಾತ್ರ, ಸ್ತ್ರೀಯರು ಮತ್ತು ದೇವಾಲಯಗಳ ಸಂಬಂಧಗಳು, ಅವರ ಸಂವೇದನೆಗಳನ್ನು ಅರಿಯುವ ಅಗತ್ಯವಿದೆ. ದಲಿತರು ದೇವಾಲಯದೊಂದಿಗೆ ಹೊಂದಿದ್ದ ಸಂಬಂಧಗಳು, ಇತಿಮಿತಿಗಳನ್ನು ಗುರುತಿಸುವ ಉದ್ದೇಶವಿದೆ. ಸಂಗೀತ ಮತ್ತು ನರ್ತನದ ಹೆಸರಿನಲ್ಲಿ ಸ್ತ್ರೀಯರ ಶೋಷಣೆಗೂ ಕಾರಣವಾದ ದೇವಾಲಯಗಳು, ಗ್ರಾಮಗಳನ್ನು ಪ್ರತಿನಿಧಿಸುವ ಗ್ರಾಮದೇವತೆಗಳನ್ನು ವೈದಿಕ ದೇವತಾಲೋಕದೊಳಗೆ ಸೇರಿಸಿಕೊಳ್ಳುವ ಪ್ರಕ್ರಿಯೆಗಳು ನಿರಂತರವಾಗಿ ನಡೆಯಲು ಕಾರಣವಾದವು.

ದೇವಾಲಯ ಆರಾಧನೆಯನ್ನು ಕೇಂದ್ರವಾಗುಳ್ಳ ಆಚರಣೆಗಳು ಪ್ರಾಮುಖ್ಯತೆ ಗಳಿಸಿದ ನಂತರ, ಧಾರ್ಮಿಕ ನೆಲೆಯಲ್ಲಿ ಕಂಡ ಈ ದಾಸ್ಯ ಮನೋಧರ್ಮವು ಲೌಕಿಕ ಜಗತ್ತಿನ ಊಳಿಗಮಾನ್ಯ ಮೌಲ್ಯಗಳನ್ನು ಪ್ರತಿಬಿಂಬಿಸಿತ್ತು ಎಂದು ಇತಿಹಾಸಕಾರರು ತೋರಿಸಿದ್ದಾರೆ. ಕರ್ನಾಟಕದ ಮೇಲೆ ಅಪಾರವಾಗಿ ಪ್ರಭಾವ ಬೀರಿದ ಮೂರು ಆಚಾರ್ಯರ ಪೈಕಿ, ರಾಮಾನುಜಾಚಾರ್ಯರು ಒಬ್ಬರು. ಸಾಂಪ್ರದಾಯಿಕ ಆಚರಣೆಗಳ ಪುನರ್ ವ್ಯಾಖ್ಯಾನ

ರೂಪದಲ್ಲಿ ಹಾಗೂ ಸಾಂಪ್ರಾದಾಯಿಕ ಚೌಕಟ್ಟಿನಲ್ಲೇ ಉಧಿಸಿದ ರಾಮಾನುಜರ ದಾರ್ಶನಿಕ ಮತ್ತು ಧಾರ್ಮಿಕ ಆಂದೋಲನವು ದೇವಾಲಯಗಳ ಮೂಲಕ ಉಂಟು ಮಾಡಿದ ಸಾಮಾಜಿಕ ಪರಿಣಾಮವನ್ನು ವಿಮರ್ಶಿಸುವ ಉದ್ದೇಶವಿದೆ.

ಇಲ್ಲಿನ ದೇವಾಲಯಗಳು ಸ್ಥಳದ ಜನರಿಗೆ ಕೆಲಸ ಒದಗಿಸುವ ಮಾಲೀಕರಂತಾದವು. ರಾಜರು ಕೊಟ್ಟದಾನ ಮತ್ತು ಇತರರ ದಾನಗಳಿಂದ ದೇವಾಲಯಗಳು ಆರ್ಥಿಕ ಪರಿವರ್ತನೆಯನ್ನು ಉಂಟುಮಾಡಿದವು. ಇವು ಖಾಸಗಿ ಭೂಮಾಲೀಕರಾಗಿ, ವ್ಯಾಪಾರ ಕೇಂದ್ರಗಳಾಗಿ, ಸಂಪತ್ತಿನ ಕೇಂದ್ರಗಳಾಗಿ ಉಂಟು ಮಾಡಿದ ಪ್ರಭಾವವನ್ನು ಆರ್ಥಿಕ ನೆಲೆಯಲ್ಲಿ ಗುರುತಿಸುವ ಉದ್ದೇಶವಿದೆ. ಮೇಲುಕೋಟೆಯ ಶಾಸನಗಳು ಈ ಕುರಿತು ಮಹತ್ವದ ಮಾಹಿತಿಗಳನ್ನು ಹೊಂದಿದ್ದು, ಅವನ್ನು ಅವಲೋಕಿಸುವ ಉದ್ದೇಶವಿದೆ.

ಜಾನಪದವು ಒಂದು ಅಂತರಶಿಸ್ತೀಯ ಅಧ್ಯಯನವಾಗಿದೆ. ಜಾನಪದ ಕ್ಷೇತ್ರದ ಇತ್ತೀಚಿನ ಅಧ್ಯಯನಗಳು 'ಜಾನಪದದ' ಬಗೆಗಿನ ವ್ಯಾಪ್ತಿಯನ್ನು ಇನ್ನೂ ಹಿಗ್ಗಿಸಿವೆ. ಜಾನಪದ ಬಹುಮಟ್ಟಿಗೆ ಮೌಖಿಕವಾದರೂ ಕೆಲವು ಸಲ ಬರವಣಿಗೆಯ ರೂಪದಲ್ಲಿಯೂ ಪ್ರಕಟವಾಗುತ್ತವೆ ಎಂಬ ಹೊಸ ವಿಚಾರಗಳು ಇಂದು ಚಾಲ್ತಿಗೆ ಬಂದಿವೆ. ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಮೇಲುಕೋಟೆಯ ದೇವಾಲಯದೊಂದಿಗೆ ಜಾನಪದೀಯ ವಿಚಾರಗಳನ್ನು ಅಧ್ಯಯನ ಮಾಡುವ ಉದ್ದೇಶವಿದೆ.

ಅಧ್ಯಯನದ ವ್ಯಾಪ್ತಿ

ಈ ಅಧ್ಯಯನಕ್ಕೆ ನಾವು ಹಮ್ಮಿಕೊಂಡಿರುವ ಕಾಲವು ಹೊಯ್ಸಳರ ಆಳ್ವಿಕೆಯಿಂದ ಆರಂಭವಾಗಿ, ವಿಜಯನಗರದ ಕಾಲ ಮತ್ತು ಮೈಸೂರು ಒಡೆಯರ ಕಾಲದವರೆಗೆ ವಿಸ್ತರಿಸಿದೆ. ಹೊಯ್ಸಳರ ಕಾಲದಲ್ಲಿ ರಾಮಾನುಜರ ನೇತೃತ್ವದಲ್ಲಿ ನಿರ್ಮಾಣವಾದ ನಾರಾಯಣಸ್ವಾಮಿ ದೇವಾಲಯ ಸಂಕೀರ್ಣವು ಸ್ಥಳದ ಆರಂಭಿಕ ದೇವಾಲಯವೆನಿಸಿದೆ. ರಾಮಾನುಜರು ದಕ್ಷಿಣಭಾರತದಲ್ಲಿ ಬಲಗೊಳಿಸಿದ ದೇವಾಲಯ ಆಧಾರಿತ ಭಕ್ತಿ ಆಂದೋಲನಕ್ಕೆ ಒಂದು ಮುಖ್ಯ ಕಾರಣವನ್ನು ಈ ಅರ್ಚಾವತಾರ ಕಲ್ಪನೆಯು ಒದಗಿಸಿತ್ತು. ವಿಷ್ಣುವರ್ಧನನು ನೀಡಿದ ರಾಜಾಶ್ರಯದಿಂದ 12ನೇ ಶತಮಾನದಲ್ಲಿ ರಾಮಾನುಜರು ಶ್ರೀವೈಷ್ಣವ ಧರ್ಮವನ್ನು ದೇವಾಲಯಗಳ ಸ್ಥಾಪನೆಯೊಂದಿಗೆ ಹರಡಿದರು. ಧಾರ್ಮಿಕವಾಗಿ ಹೊಯ್ಸಳರ ಕಾಲವು ಸ್ಥಿತ್ಯಂತರದ ಕಾಲ. ರಾಮಾನುಜರ ಪ್ರಭಾವದಿಂದ ಶ್ರೀವೈಷ್ಣವ ಧರ್ಮವು ಪ್ರಬಲವಾಗುತ್ತಿತ್ತು. ಅತ್ಯಲ್ಪ ಕಾಲದಲ್ಲಿ ಜನರ ವಿಶ್ವಾಸಗಳಿಸಿತು. ಜೈನ, ಶೈವ, ಶ್ರೀವೈಷ್ಣವ ಧರ್ಮಗಳ ಸಂಘರ್ಷದ ಸ್ಥಿತಿಯು ಜನತೆಯ ಬದುಕಿನಲ್ಲಿ ವಿಶೇಷ

ಪರಿಣಾಮವನ್ನು ಬೀರಿದವು. ಈ ಬೆಳವಣಿಗೆಗಳು ಸಾಮಾಜಿಕ ಸ್ಥಿರತೆಗೂ ಇನ್ನೊಂದು ಕಡೆ ಸಮಾಜಿಕ ಒತ್ತಡಕ್ಕೂ ಇಂಬುಗೊಡುತ್ತಿದ್ದವು. ಈ ಅಂಶವು ದೇವಾಲಯಗಳ ಮೂಲಕ ವ್ಯಕ್ತವಾದವು. ಈ ಸಾಲಿನಲ್ಲಿ ಮೇಲುಕೋಟೆ ದೇವಾಲಯ ಸಂಕೀರ್ಣವು ಪ್ರಮುಖವಾದುದು. ಇವರ ಕಾಲದ ಲಭ್ಯವಿರುವ ಶಾಸನಾಧಾರಗಳು ಹೊಯ್ಸಳರ ಪ್ರಭಾವವನ್ನು ನಿರೂಪಿಸುತ್ತವೆ. ಹೊಯ್ಸಳರ ದಕ್ಷಿಣ ರಾಜಧಾನಿಯಾಗಿದ್ದ ತೊಂಡನೂರು ಮೇಲುಕೋಟೆಗೆ ಸಮೀಪದಲ್ಲಿದೆ. ಇಲ್ಲಿಂದಲೇ ಮೇಲುಕೋಟೆಯು ನಿಯಂತ್ರಿತವಾಗುತ್ತಿತ್ತು.

14ನೇ ಶತಮಾನದ ಮಧ್ಯಂತರದಿಂದ ವಿಜಯನಗರದ ಅರಸರ ಕಾಲದಲ್ಲಿ ಮೇಲುಕೋಟೆಯು ಮುಖ್ಯ ಧಾರ್ಮಿಕ ಕೇಂದ್ರವಾಯಿತು. ಆ ಕಾಲದ ಅರಸರು ವಿಷ್ಣುಭಕ್ತರಾಗಿದ್ದುದು ಇದಕ್ಕೆ ಪೂರಕವಾಯಿತು. ಅವರ ಕಾಲದಲ್ಲಿ ಮೇಲುಕೋಟೆಯು ದಾನ-ದತ್ತಿಗಳಿಂದ ಸಂತೃಪ್ತವಾಯಿತು. ವೈಷ್ಣವ ಧರ್ಮ ಮತ್ತಷ್ಟು ಪ್ರಭಾವಿ ಧರ್ಮವಾಯಿತು. ಅವರ ಕಾಲದ 30 ಶಾಸನಗಳು ಇಲ್ಲಿ ಲಭ್ಯವಿದ್ದು ಹೆಚ್ಚಿನವು ದಾನಶಾಸನಗಳಾಗಿವೆ. ದೇವಾಲಯಗಳು ಜೀರ್ಣೋದ್ಧಾರಗೊಂಡವು. ಸಾಮಾಜಿಕವಾಗಿ ಗುರುತರವಾದ ಬದಲಾವಣೆಗಳಾದವು. ತಿಮ್ಮಣ್ಣದಣ್ಣಾಯಕ ಎಂಬ ಪ್ರಾಂತ್ಯಾಧಿಕಾರಿಯು ಮೇಲುಕೋಟೆ ದೇವಸ್ಥಾನಗಳನ್ನು ಜೀರ್ಣೋದ್ದಾರ ಮಾಡಿದನು. ವಿತ್ತೀಯ ಸೌಕರ್ಯಗಳು ವಿಪುಲವಾಗಿ ಈ ಕ್ಷೇತ್ರಕ್ಕೆ ದೊರಕಿದವು. ಧಾರ್ಮಿಕ ವಿಧಾನಗಳಿಂದ ವಿಪುಲವಾಗಿ ಈ ಕ್ಷೇತ್ರಕ್ಕೆ ದೊರಕಿದವು. ಧಾರ್ಮಿಕ ವಿಧಾನಗಳಿಂದ ಧನವನ್ನು ಸಂಪಾದಿಸುವುದು, ದೇವಾಲಯ ನಿರ್ಮಾಣಕ್ಕಾಗಿ ಅದನ್ನು ಬಳಸುವುದು, ದೇವರಿಗೆ ಬ್ರಾಹ್ಮಣರಿಗೆ ಬೇರೆ-ಬೇರೆ ರೂಪಗಳಲ್ಲಿ ಅದನ್ನು ವಿತರಿಸುವುದು. ಭಗವಂತನ ಹೆಸರಿನಲ್ಲಿ ಸಾರ್ವಜನಿಕ ಕಲ್ಯಾಣಕಾರ್ಯಗಳಿಗೆ ವಿನಿಯೋಗಿಸುವುದು, ಇವು ಪ್ರಸ್ತುತ ಕಾಲಾವಧಿಯಲ್ಲಿ ಎತ್ತಿ ಹಿಡಿದ ಸಾಮಾಜಿಕ-ಧಾರ್ಮಿಕ ಆದರ್ಶಗಳಾಗಿದ್ದವು.

ವಿಜಯನಗರ ಸಾಮ್ರಾಜ್ಯದ ಅವನತಿಯ ತರುವಾಯ ತಲೆ ಎತ್ತಿದ ಮೈಸೂರು ಒಡೆಯರ ವಂಶವು ಸುಮಾರು ಐದು ಶತಮಾನಗಳಷ್ಟು ದೀರ್ಘಕಾಲ ಆಳಿತು. ಮೂಲತಃ ನಾರಾಯಣನ ಭಕ್ತರಾದ ಒಡೆಯರು ಮೇಲುಕೋಟೆ ದೇವಾಲಯಗಳಿಗೆ ಉದಾರವಾದ ಪ್ರೋತ್ಸಾಹ ನೀಡಿದರು. ಸ್ಥಳದ ಸಾಂಸ್ಕೃತಿಕ ಬೆಳವಣಿಗೆಯು ಒಡೆಯರ ರಾಜಾಶ್ರಯದಿಂದ ಇಮ್ಮಡಿಯಾಯಿತು. ಇಲ್ಲಿ ಲಭ್ಯವಾಗಿರುವ ಇವರ ಕಾಲದ ಶಾಸನಗಳು ಮೇಲಿನ ಅಂಶವನ್ನು ನಿರೂಪಿಸುತ್ತವೆ.

ಪ್ರಸ್ತುತ 'ಮೇಲುಕೋಟೆ ದೇವಾಲಯಗಳು-ಚಾರಿತ್ರಿಕ ಮತ್ತು ಸಾಂಸ್ಕೃತಿಕ ನೆಲೆಗಳು' ಶೀರ್ಷಿಕೆಯಡಿಯಲ್ಲಿ ದೇವಾಲಯಗಳನ್ನು ಒಂದು ಸಾಮಾಜಿಕ-ಸಾಂಸ್ಕೃತಿಕ ಕೇಂದ್ರವಾಗಿ ಭಾವಿಸಿ, ಕೆಲವು ವಿರೋಧಾಭಾಸದ ಅಂಶಗಳನ್ನು ಸಂಶೋಧಿಸಿ ವಿಮರ್ಶಾತ್ಮಕವಾಗಿ ಪರಿಶೀಲಿಸುವ ಪ್ರಯತ್ನವನ್ನು ಮಾಡಲಾಗಿದೆ.

ಕಾಲಘಟ್ಟಗಳಲ್ಲಿ ದೇವಾಲಯಗಳು ಪಡೆದ ಪ್ರಮುಖ್ಯತೆಯಿಂದ ಆದ ಸಾಮಾಜಿಕ ಬದಲಾವಣೆಗಳು ಹಾಗೂ ಜನರ ಸಂವೇದನೆಗಳು, ದೇವಾಲಯಗಳು ಮತ್ತು ಜನರ ಕೊಳು-ಕೊಡೆ ಸಂಬಂಧಗಳನ್ನು ಅವಲೋಕಿಸುವ ಅಂಶಗಳನ್ನು ಅಧ್ಯಯನದ ವ್ಯಾಪ್ತಿಗೆ ಸೇರಿಸಲಾಗಿದೆ. ಮೇಲುಕೋಟೆ ಚಾರಿತ್ರಿಕ ಹಿನ್ನೆಲೆ ದೇವಾಲಯಗಳ ಉಗಮ, ವಿಕಾಸದ ಹಂತಗಳು, ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ನೆಲೆಗಳಲ್ಲಿ ಸಮಗ್ರ ಅಧ್ಯಯನದ ವ್ಯಾಪ್ತಿ ಸಂಶೋಧನೆಯಲ್ಲಿದೆ.

ಮೇಲುಕೋಟೆ ದೇವಾಲಯಗಳ ಕುರಿತ ಈವರೆಗಿನ ಅಧ್ಯಯನಗಳ ಸಮೀಕ್ಷೆ

ಮೇಲುಕೋಟೆ ದೇವಾಲಯಗಳನ್ನು ಕುರಿತ ಅಧ್ಯಯನಗಳು ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ನಡೆದಿರುತ್ತವೆ. ಆರ್.ವಸಂತ ಎಂಬುವರು ಮೇಲುಕೋಟೆ ನಾರಾಯಣಸ್ವಾಮಿ ದೇವಾಲಯವನ್ನು ಕುರಿತು "The Narayana swami temple at Melkote" ಎಂಬ ಶೀರ್ಷಿಕೆಯಡಿಯಲ್ಲಿ ದೇವಾಲಯದ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳ ಸೂಕ್ಷ್ಮ ಅಧ್ಯಯನ ನಡೆಸಿದ್ದಾರೆ. ಈ ಕೃತಿಯನ್ನು 1990ರಲ್ಲಿ ಪ್ರಾಚ್ಯವಸ್ತು ಇಲಾಖೆ ಮೈಸೂರು ಪ್ರಕಟಿಸಿದೆ. ಮೇಲುಕೋಟೆ ದೇವಾಲಯಗಳ ವಾಸ್ತು ಮತ್ತು ಮೂರ್ತಿಶಿಲ್ಪಗಳ ಸೂಕ್ಷ್ಮ ಅಧ್ಯಯನದಿಂದ ವಿವಿಧ ಕಾಲಘಟ್ಟಗಳಲ್ಲಿ ಆದ ಬದಲಾವಣೆಗಳು ಹಾಗೂ ಪ್ರಭಾವಗಳನ್ನು ವಿವರಿಸಿದ್ದಾರೆ. ಶಾಸನಾಧಾರಗಳ ಹಿನ್ನೆಲೆಯಲ್ಲಿ ದೇವಾಲಯಗಳು ಪಡೆದ ರಾಜಾಶ್ರಯದಿಂದ ಉಂಟಾದ ಆರ್ಥಿಕ ಪ್ರಗತಿ ಹಾಗೂ ಸಾಮಾಜಿಕ ಅಂಶಗಳನ್ನು ಪರಿಚಯಸಿದ್ದಾರೆ. ಮೇಲುಕೋಟೆಯ ಸಂಸ್ಕೃತ ಸಂಶೋಧನಾ ಸಂಸ್ಥೆಯ ಮೇಲುಕೋಟೆಯನ್ನು ಕುರಿತು "Melkote Through the Ages" ಕೃತಿಯಲ್ಲಿ ದೇವಾಲಯಗಳ ಕುರಿತು ಆಯ್ದ ಪರಿಚಯಾತ್ಮಕ ವಿಷಯಗಳನ್ನು ಅಧ್ಯಯನ ನಡೆಸಿದೆ. ಆದರೆ ಇದರಲ್ಲಿ ಸಾಂಪ್ರದಾಯಿಕ ಆಧಾರಗಳೇ ಬಹುಪಾಲು ಆಕ್ರಮಿಸಿದೆ.

ಡಾ.ಸಿ.ಮಹದೇವು ಅವರು ತಮ್ಮ ಸಂಪಾದಕತ್ವದಲ್ಲಿ, ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಪ್ರಕಟಿಸಿರುವ 'ತೊಣ್ಣೂರು' ಕೃತಿಯಲ್ಲಿ ಮೇಲುಕೋಟೆ ದೇವಾಲಯಗಳ ಕುರಿತು ಮಹತ್ವದ ಅಂಶಗಳನ್ನು ಚರ್ಚಿಸಿದ್ದಾರೆ. ಧಾರ್ಮಿಕ ಇತಿಹಾಸದಲ್ಲಿ

ಮೇಲುಕೋಟೆಯು ಕಂಡ ಕೆಲವು ಮಹತ್ವದ ಘಟ್ಟಗಳನ್ನು ಶಾಸನಾಧಾರಗಳ ಮೂಲಕ ಚರ್ಚಿಸಿದ್ದಾರೆ. ಡಾ.ನಾಗರಾಜು ಅವರು ಬರೆದಿರುವ 'ಯದುಗಿರಿಯ ನಾಡು' ಕೃತಿಯಲ್ಲಿ ಮೇಲುಕೋಟೆ ದೇವಾಲಯಗಳ ಧಾರ್ಮಿಕ ಇತಿಹಾಸ ಹಾಗೂ ವಾಸ್ತುಶಿಲ್ಪಗಳ ಕುರಿತ ಮಾಹಿತಿಗಳನ್ನು ಸಂಗ್ರಹಿಸಿ ದಾಖಲಿಸಿದ್ದಾರೆ. ಸ್ಥಾನಿಕಂ ನಾಗರಾಜಯ್ಯಂಗಾರ್ ಎಂಬುವರು 'ಮೇಲುಕೋಟೆ ಪರಿಚಯ' ಎಂಬ ಶೀರ್ಷಿಕೆಯಡಿಯಲ್ಲಿ ಜನಸಾಮಾನ್ಯರಿಗೆ ಉಪಯುಕ್ತವಾಗಬಲ್ಲ ಸರಳ ಕೃತಿಯೊಂದನ್ನು 1975ರಲ್ಲಿ ಪ್ರಕಟಿಸಿದ್ದು, ಇದು ಕೇವಲ ಸ್ಥಳದ ಪರಿಚಯ ಮಾಹಿತಿಯನ್ನು ಮಾತ್ರ ನೀಡುತ್ತದೆ. ಕೆ.ಅನಂತರಾಮುರವರು 'ಸಕ್ಕರೆ ಸೀಮೆ' ಎಂಬ ಮಂಡ್ಯ ಜಿಲ್ಲೆಯ ಪ್ರವಾಸ ಕಥನದಲ್ಲಿ ಮೇಲುಕೋಟೆಯ ಬಗೆಗೆ ಸಾಕಷ್ಟು ವಿವರಗಳನ್ನು ನೀಡಿದ್ದಾರೆ. ತೈಲೂರು ವೆಂಕಟಕೃಷ್ಣ ಅವರು 'ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ' ಕೃತಿಯಲ್ಲಿ ಮೇಲುಕೋಟೆ ದೇವಾಲಯಗಳ ಕುರಿತು ಮಹತ್ವದ ಮಾಹಿತಿಗಳನ್ನು ನೀಡಿದ್ದಾರೆ. ಇವರೇ ಪ್ರಕಟಿಸಿರುವ 'ಮಂಡ್ಯ ಜಿಲ್ಲೆಯ ದೇವಾಲಯಗಳು' ಕೃತಿಯಲ್ಲಿ ದೇವಾಲಯಗಳ ಕುರಿತು ಶಾಸನಾಧಾರಗಳಿಂದ ಕೆಲವು ಹೊಸ–ಹೊಸ ಮಾಹಿತಿಗಳನ್ನು ಕಲೆಹಾಕಿದ್ದಾರೆ.

ಅಸೂರಿ ಸಂಪತ್ಕುಮಾರಾಚಾರ್ಯರು ಹಾಗೂ ಅಸೂರಿ ಶ್ರೀನಿವಾಸಯ್ಯಂಗಾರ್ಯರು 1956ರಲ್ಲಿ ಪ್ರಕಟಿಸಿರುವ 'ಶ್ರೀ ಯಾದವಗಿರಿ ಜೀರ್ಣೋದ್ಧಾರ'ದಲ್ಲಿ ಇಲ್ಲಿ ನಾರಾಯಣಸ್ವಾಮಿ ದೇವಾಲಯ ಮತ್ತು ಯತಿರಾಜ ಮಠದ ಕುರಿತು ವಿವರವಾದ ಮಾಹಿತಿಯನ್ನೇ ಕೊಟ್ಟಿದ್ದಾರೆ. ಮೇಲುಕೋಟೆ ದೇವಾಲಯಗಳಿಗೆ ಸಂಬಂಧಿಸಿದಂತೆ ಪೌರಾಣಿಕ ವಿವರಣೆಯ ಜೊತೆಗೆ ವಿವಿಧ ರಾಜವಂಶಗಳ ಕಾಲದಲ್ಲಿ ದೇವಾಲಯಗಳು ಕಂಡ ಬೆಳವಣಿಗೆಗಳ ಜೊತೆಗೆ ಶಾಸನಾಧಾರಗಳನ್ನು ಪೂರಕವಾಗಿ ಬಳಸಿಕೊಂಡಿದ್ದಾರೆ. ದೇವಾಲಯಗಳ ಆಡಳಿತ ಮತ್ತು ಮಠಗಳಿಗಿರುವ ಸಂಬಂಧವನ್ನು ವಿವರಿಸಿದ್ದಾರೆ. ರಾಮಾನುಜಯ್ಯಂಗಾರ್ಯರು 1934ರಲ್ಲಿ ಪ್ರಕಟಿಸಿರುವ 'ಶ್ರೀ ಯಾದವಗಿರಿ ತಿರುನಾರಾಯಣ ಪುರದ ಯಾತ್ರೆಯು' ಎಂಬ ಕೃತಿಯಲ್ಲಿ ರಾಮಾನುಜರು ಹಾಗೂ ವೇದಾಂತದೇಶಿಕರಿಗೆ ಸಂಬಂಧಿಸಿದಂತೆ ಮಾಹಿತಿ ನೀಡಿದ್ದಾರೆ. ಪ್ರಮುಖ ದೇವಾಲಯಗಳ ಮಾಹಿತಿಯ ಜೊತೆಗೆ ಹಲವು ಉತ್ಸವಾದಿಗಳ ಮಾಹಿತಿಯನ್ನು ನೀಡಿದ್ದಾರೆ. ದೇವಾಲಯಗಳ ಆಡಳಿತ, ವರಮಾನ, ಖರ್ಚು, ಹಾಗೂ ಯತಿರಾಜ ಮಠದ ಕುರಿತು ವಿವರವಾದ ಮಾಹಿತಿ ನೀಡಿದ್ದಾರೆ.

ಬಾ.ರಾ.ಗೋಪಾಲ್‌ರವರು ರಚಿಸಿರುವ 'ಕರ್ನಾಟಕದಲ್ಲಿ ರಾಮಾನುಜಾಚಾರ್ಯರು' ಕೃತಿಯಲ್ಲಿ ಶಾಸನಾಧಾರಗಳಿಂದ ಮೇಲುಕೋಟೆ ದೇವಾಲಯಗಳಿಗೆ ಸಂಬಂಧಿಸಿದಂತೆ ವಿಮರ್ಶಾತ್ಮಕವಾದ ಅಧ್ಯಯನ ಮಾಡಿದ್ದಾರೆ. ರಾಮಾನುಜರು ಮತ್ತು ಮೇಲುಕೋಟೆಗೆ ಸಂಬಂಧಿಸಿದಂತೆ ಈ ಕೃತಿಯು ಚಾರಿತ್ರಿಕವಾಗಿ ಮಹತ್ವದ ಅಧ್ಯಯನವಾಗಿದೆ.

ತಿಮ್ಮಕವಿ ರಚಿಸಿದ 'ಯಾದವಗಿರಿ ಮಹಾತ್ಮ್ಯೆ' ಕೃತಿಯನ್ನು ಎಂ.ಪಿ.ಮಂಜಪ್ಪಶೆಟ್ಟಿಯವರು ಸಂಪಾದಿಸಿ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯ ಮುಖಾಂತರ 1978ರಲ್ಲಿ ಪ್ರಕಟಿಸಿದ್ದಾರೆ. ಇದು ಚಂಪೂ ಶೈಲಿಯಲ್ಲಿದೆ. ಹೀಗೆ ಮೇಲುಕೋಟೆಯ ಬಗೆಗೆ ಸಾಕಷ್ಟು ಕೃತಿಗಳು ಪ್ರಕಟವಾಗಿವೆ. ಕೆಲವು ಹಳಗನ್ನಡ ಮತ್ತು ನಡುಗನ್ನಡದಲ್ಲಿದ್ದರೆ ಮತ್ತೆ ಕೆಲವು ಹೊಸಗನ್ನಡದಲ್ಲಿ ರಚನೆಯಾಗಿವೆ. ಕೆಲವು ಕ್ಲಿಷ್ಟ ರಚನೆಗಳಾಗಿದ್ದರೆ, ಮತ್ತೆ ಕೆಲವು ಸರಳ ಶೈಲಿಯ ಸುಲಭವಾಗಿ ಅರ್ಥವಾಗುವ ರಚನೆಯಾಗಿವೆ. ಕೆಲವು ಘಟನೆ ಕತೆಗಳು ಸೃಜನಶೀಲ ಸಾಹಿತ್ಯ ಕೃತಿಗಳ ನಿರ್ಮಾಣಕ್ಕೆ ಕಾರಣವಾಗಿಯೂ ಇವೆ. ಚಿಕ್ಕುಪಾಧ್ಯಾಯರು ರಚಿಸಿರುವ 'ಯಾದವಗಿರಿ ಮಹಾತ್ಮ್ಯೆ' ಗದ್ಯ ಮತ್ತು ಸಾಂಗತ್ಯ ರೂಪದಲ್ಲಿದೆ.

ಐ.ಬಿ.ಹೆಚ್. ಪ್ರಕಾಶನ-ಬೆಂಗಳೂರು ಇವರು ಪು.ತಿ.ನ.ರವರಿಂದ 'ಮೇಲುಕೋಟೆ' ಎಂಬ ಪಕ್ಷಿ ನೋಟದ ಪರಿಚಯ ಕೃತಿಯನ್ನು ಬರೆಯಿಸಿ, 1971ರಲ್ಲಿ ಪ್ರಕಟಿಸಿದ್ದಾರೆ. ಇನ್ನು ಸೃಜನಶೀಲ ಕೃತಿಗಳಲ್ಲಿ ಮೇಲುಕೋಟೆಗೆ ಸಂಬಂಧಿಸಿದಂತೆ, ಪು.ತಿ.ನ. ರವರ 'ಹಣತೆ' ಕವನಸಂಕಲನದಲ್ಲಿ-ಯದುಗಿರಿ, ಯದುಗಿರಿಯ ಮೌನವಿಕಾಸ, ರಂಗವಲ್ಲಿ ಮತ್ತು ಮಲೆದೇಗುಲ ಎಂಬ ನಾಲ್ಕು ಕವನಗಳು ಮೇಲುಕೋಟೆಗೆ ಸಂಬಂಧಿಸಿದುವಾಗಿವೆ.

ಕ.ರಾ.ಕೃಷ್ಣಸ್ವಾಮಿ ಸಂಪಾದಿಸಿರುವ 'ಚೆನ್ನಿಗ ಚೆಲುವಯ್ಯ' ಎಂಬ ಕೃತಿ ಮೇಲುಕೋಟೆಯ ಚೆಲುವನಾರಾಯಣ ಮತ್ತು ವರನಂದಿಯವರ ಬಗೆಗಿನ ಜನಪದ ಗೀತೆಗಳನ್ನು ಒಳಗೊಂಡ ಕೃತಿಯಾಗಿದೆ. ಶ್ರೀ ಸ್ವಾಮಿ ಎಂಬುವರು 'ಬೀಬಿ ನಾಚ್ಚಿಯಾರ್' ಎಂಬ ಶೀರ್ಷಿಕೆಯಡಿಯಲ್ಲಿ ಸಣ್ಣ ಕಥೆಯೊಂದನ್ನು ಬರೆದಿದ್ದಾರೆ. ಡಾ.ಎಂ.ಕೆ. ಸುಂದರಂ ಅವರು ಬರೆದ 'ಮುಸಲ್ಮಾನ್ ಮೀರಾ' ಎಂಬ ಲೇಖನವನ್ನು, ಡಾ.ಜೀಂ.ಸಂ.ಪ. ಸರಳಾನುವಾದ ಮಾಡಿದ್ದಾರೆ. ಇವೆರಡು ಕಥೆಗಳು ಕ.ರಾ.ಕೃ.ರವರ 'ಚೆನ್ನಿಗ ಚೆಲುವಯ್ಯ' ಕೃತಿಯಲ್ಲಿ ಸೇರಿವೆ. ಈ ಕೃತಿ ಜಾನಪದ ಅಕಾಡೆಮಿ-ಬೆಂಗಳೂರು, ಇವರಿಂದ 1974ರಲ್ಲಿ ಮೂರನೆಯ ಮುದ್ರಣಗೊಂಡಿದೆ.

ಕ್ರಿ.ಶ. 1800ರಲ್ಲಿ ಫ್ರಾನ್ಸಿಸ್ ಬುಕನನ್ ಎಂಬ ಪ್ರವಾಸಿಗನು ತನ್ನ ಕೃತಿಯಾದ "A Journey from Madras through the countries of Mysore, Canara and Malbar" ರಲ್ಲಿ ಮೇಲುಕೋಟೆಯ ಬಗೆಗೆ ಕೆಲವು ವಿಚಾರಗಳನ್ನು ವ್ಯಕ್ತಪಡಿಸಿದ್ದಾನೆ. ಟಿಪ್ಪುವಿನ ಅವಸಾನದ ನಂತರ ಈತ ಮದ್ರಾಸಿನಿಂದ ಹೊರಟು ಕನ್ನಡನಾಡಿಗೆ ಬಂದು ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ, ಮಂಡ್ಯ, ನಾಗಮಂಗಲ, ಚೀಣ್ಯ, ಬೆಳ್ಳೂರು, ಮೇಲುಕೋಟೆ ಮುಂತಾದ

ಅನೇಕ ಸ್ಥಳಗಳನ್ನು ಸಂದರ್ಶಿಸಿ, ನೂರಾರು ಸಂಗತಿಗಳನ್ನು ಕ್ರೂಢೀಕರಿಸಿ ಈ ಪುಸ್ತಕದಲ್ಲಿ ನೀಡಿದ್ದಾನೆ.

ಶಾಸನಾಧಾರಗಳು

ಚರಿತ್ರೆಯ ಪ್ರಮಾಣ ಭೂತವಾದ ಪುನರ್ ನಿರ್ಮಾಣಕ್ಕೆ ಇರುವ ಅತಿ ಪ್ರಮುಖವಾದ ಆಧಾರಗಳೆಂದಿಗೆ ಶಾಸನಗಳು. ಇತರ ಆಧಾರಗಳು ತುಂಬಿಕೊಡಲಾರದ ಕೆಲವು ಅಂಶಗಳನ್ನು ಶಾಸನ ಸಂಪತ್ತು ಒದಗಿಸುತ್ತದೆ. ಮೇಲುಕೋಟೆ ದೇವಾಲಯಗಳ ಚಾರಿತ್ರಿಕ ಹಿನ್ನೆಲೆಯನ್ನು ತಿಳಿಯಲು ನಮಗೆ ಶಾಸನಗಳೇ ಪ್ರಮುಖ ಆಧಾರವಾಗಿವೆ.

ಒಂದು ನಾಡಿನ ಇತಿಹಾಸ ರಚಿಸುವಲ್ಲಿ ಶಾಸನಗಳು ಬಹುಮುಖ್ಯ ಆಕರಗಳಾಗಿವೆ. ಶಾಸನಗಳ ಸೂಕ್ಷ್ಮ ಪರಿಶೀಲನೆ, ಅಧ್ಯಯನದಿಂದ ಆ ಪ್ರದೇಶದ ಭೂ ವಿವರ, ಇತಿಹಾಸ, ಧರ್ಮ, ಸಾಮಾಜಿಕ ಜೀವನ, ಆಡಳಿತ, ವ್ಯಾಪಾರ, ಆರ್ಥಿಕ ಸ್ಥಿತಿ ಇತ್ಯಾದಿ ವಿಷಯಗಳ ಬಗೆಗೆ ಅಮೂಲ್ಯ ಮಾಹಿತಿಯನ್ನು ಪಡೆಯಬಹುದಾಗಿದೆ. ಮೇಲುಕೋಟೆಗೆ ಸಂಬಂಧಿಸಿದಂತೆ ಮೇಲುಕೋಟೆಯಲ್ಲಿ ಹಾಗೂ ಇನ್ನಿತರ ಸ್ಥಳಗಳಲ್ಲಿ ದೊರೆಯುವ ಶಾಸನಗಳು ಈ ಸ್ಥಳದ ಅಧ್ಯಯನದ ಬಗೆಗಿನ ಅಗತ್ಯತೆಯನ್ನು ಪೂರೈಸುತ್ತವೆ.

ಮೇಲುಕೋಟೆಗೆ ಸಂಬಂಧಿಸಿದಂತೆ ಇದುವರೆಗೆ 119 ಶಾಸನಗಳು ದೊರೆತಿವೆ. ಇವುಗಳಲ್ಲಿ ಹೆಚ್ಚಿನವು ಮೇಲುಕೋಟೆಯಲ್ಲೇ ದೊರೆತಿದ್ದು, ಈ ಶಾಸನಗಳು ಕನ್ನಡ, ಸಂಸ್ಕೃತ, ತಮಿಳು, ಪರ್ಷಿಯನ್ ಭಾಷೆಯಲ್ಲಿದ್ದು, ಬಹುಪಾಲು ಕನ್ನಡದ ಶಾಸನಗಳಾಗಿವೆ. ಬಹುಪಾಲು ಶಾಸನಗಳು ಚೆಲುವನಾರಾಯಣಸ್ವಾಮಿ ದೇವಾಲಯದಲ್ಲಿಯೇ ಕಂಡುಬರುತ್ತವೆ. ಉಳಿದವು ತೊಂಡನೂರು ಮತ್ತು ಸುಂಕಾತೊಣ್ಣೂರಿನಲ್ಲಿ ದೊರೆತಿವೆ. ಈ ಸ್ಥಳಕ್ಕೆ ಸಂಬಂಧಿಸಿದ ಶಾಸನಗಳೆಲ್ಲದರ ವಿವರಗಳು ಎಪಿಗ್ರಾಫಿಯ ಕರ್ನಾಟಕ–ಸಂಪುಟ–6, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 1977ರಲ್ಲಿ ದಾಖಲಾಗಿದೆ.

ಈ ಶಾಸನಗಳು ಮೇಲುಕೋಟೆ ದೇವಾಲಯಗಳ ಕುರಿತು ಮಹತ್ವದ ಅಂಶಗಳನ್ನು ಬಹಿರಂಗಪಡಿಸುತ್ತವೆ.

ಅಧ್ಯಯನದ ವಿಧಾನ

ನಿರ್ದಿಷ್ಟ ದೇವಾಲಯಗಳ ಸಮಗ್ರ ಅಧ್ಯಯನಕ್ಕೆ ಕ್ಷೇತ್ರ ಕಾರ್ಯ ಅವಶ್ಯಕವೂ ಸಮರ್ಪಕವೂ ಆದುದಾಗಿದೆ. ಮೇಲುಕೋಟೆ ದೇವಾಲಯಗಳ ಅಧ್ಯಯನದಲ್ಲಿ ಕ್ಷೇತ್ರ ಕಾರ್ಯವನ್ನೇ ಪ್ರಮುಖವಾಗಿ ಅವಲಂಬಿಸಲಾಗಿದೆ. ಮಾಹಿತಿದಾರರ ಜೊತೆ ನೇರ ಮಾತುಕತೆ, ಸಂದರ್ಶನ ಮಾಡಿ ಬರವಣಿಗೆಯಲ್ಲಿ ಮತ್ತು ಧ್ವನಿ ಮುದ್ರಣ ಯಂತ್ರದಲ್ಲಿ ಮಾಹಿತಿಯನ್ನು ದಾಖಲು ಮಾಡಿ ವಿವರಿಸಲಾಗಿದೆ. ಪ್ರಕಟಿತ ಮತ್ತು ಅಪ್ರಕಟಿತ ಆಧಾರ ಗ್ರಂಥಗಳ ಜೊತೆಗೆ ಶಾಸನಗಳನ್ನು ಅಧ್ಯಯನಕ್ಕೆ ಸೂಕ್ತವಾಗಿ ಬಳಸಿಕೊಳ್ಳಲಾಗಿದೆ.

ಮೇಲ್ಕಂಡ ಅಧ್ಯಯನದಲ್ಲಿ ಮೇಲುಕೋಟೆಯ ದೇವಾಲಯಗಳನ್ನು ಕುರಿತ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ದೃಷ್ಟಿಯಿಂದ ವಿವರವಾಗಿ ಅಧ್ಯಯನ ಮಾಡಿರುವುದಿಲ್ಲ. ರಾಜಕೀಯ ಚರಿತ್ರೆ ಹಾಗೂ ಪ್ರಭುತ್ವ ನಿರ್ಮಿತ ಬೃಹತ್ ಸ್ಮಾರಕಗಳ ಸೀಮಿತ ಅಧ್ಯಯನದಿಂದ ಚರಿತ್ರೆಯು ಜನಸಮಾನ್ಯರ ಬದುಕು–ಬವಣೆ, ಸುಖ–ಅಸುಖಗಳ ಬಗೆಗೆ ಏನನ್ನೂ ಹೇಳಲು ಸಾಧ್ಯವಿಲ್ಲ. ಸಮಾಜದ ಒಂದು ವರ್ಗದ ಅದರಲ್ಲೂ ಮೇಲ್ವರ್ಗದ ಬದುಕನ್ನು ಮಾತ್ರ ಪರಿಚಯಿಸಿಕೊಂಡರೆ ಇಡೀ ಸಮಾಜವನ್ನು ಅರ್ಥಮಾಡಿಕೊಂಡಂತಾಗುವುದಿಲ್ಲ. ಜನ ಸಾಮಾನ್ಯರ ಸರಳ ಬದುಕಿನ ಸಮಗ್ರ ಅರವಿನಿಂದ ಮಾತ್ರ ಸಮಾಜದ ಬಹು ಮುಖ್ಯ ಭಾಗವನ್ನು ತಿಳಿದಂತಾದೀತು.

ಟಿಪ್ಪಣಿಗಳು :

1. ಮೋಹನ್‌ಕೃಷ್ಣ ರೈ.ಕೆ., ಪ್ರಭುತ್ವ ಮತ್ತು ಜನತೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004, ಪು. 131.
2. ಅದೇ. ಪು. 131
3. ಬಸವರಾಜ ಸಬರದ, ಸಮುದಾಯ ಮತ್ತು ಸಂಸ್ಕೃತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2002, ಪು. 140
4. Mathew Arnold, Cultue and Anarchy, p.4-32
5. Saketiore, B.A., Ancient Indian History and Culture, Dharwar, 1957, P.3
6. ಚಿದನಾಂದಮೂರ್ತಿ, ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು, 1966, ಪು. 6, 7
7. ಗೋಪಾಲ್. ಬಾ.ರಾ., ಕರ್ನಾಟಕದಲ್ಲಿ ನವ ಶಿಲಾಯುಗ, ಧಾರವಾಡ, 1971, ಪು. 12
8. ಗುಂಡಪ್ಪ.ಡಿ.ವಿ., ಸಂಸ್ಕೃತಿ, ಮೈಸೂರು, 1956, ಪು. 13
9. ಅದೇ, ಪು. 14
10. ಮೋಹನ್‌ಕೃಷ್ಣ ರೈ.ಕೆ., ಪೂರ್ವೋಕ್ತ, ಪು. 2, 3

ಅಧ್ಯಾಯ – 2
ಮೇಲುಕೋಟೆಯ ಚಾರಿತ್ರಿಕ ಹಿನ್ನೆಲೆ ಹಾಗೂ ದೇವಾಲಯಗಳ ಉಗಮ ಮತ್ತು ವಿಕಾಸ

ಮೇಲುಕೋಟೆಯ ಭೌಗೋಳಿಕ ಮತ್ತು ಪೌರಾಣಿಕ ವಿವರಣೆ

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೋಕಿನಲ್ಲಿರುವ ಪ್ರವಾಸೋದ್ಯಮ ದೃಷ್ಟಿಯಿಂದ ಚಾರಿತ್ರಿಕ ಸ್ಮಾರಕಗಳಲ್ಲಿ ಮಹತ್ವದ ಸ್ಥಳವಾಗಿದೆ. ದೂರ–ದೂರದಿಂದ ಪ್ರವಾಸಿಗಳನ್ನು ಆಕರ್ಷಿಸುತ್ತಿರುವ ಸ್ಥಳ ಮೇಲುಕೋಟೆಯಾಗಿದೆ. ದಖನ್ ಪ್ರಸ್ಥಭೂಮಿಯ ದಕ್ಷಿಣದಂಚಿನಲ್ಲಿರುವ ಮೇಲುಕೋಟೆಯು ಕರ್ನಾಟಕದ ಪ್ರಮುಖ ಶ್ರೀವೈಷ್ಣವ ಕ್ಷೇತ್ರ ನಿಸರ್ಗರಮಣೀಯವಾದ ಪರಿಸರ, ಹಲವು ದೇವಾಲಯಗಳು, ಮಂಟಪಗಳು, ಪುಷ್ಕರಣೆಗಳನ್ನು ಹೊಂದಿರುವ ಈ ಸ್ಥಳ, ಹಳೆಯದಾದರೂ ಓರಣವಾದ ಊರು. ಕರ್ನಾಟಕದ ಪ್ರಾಚೀನ ಸಾಂಸ್ಕೃತಿಕ ಕೇಂದ್ರವಾಗಿರುವ ಸ್ಥಳವು ದೇವಾಲಯಗಳ ನಗರವಾಗಿದೆ.

ಸಮುದ್ರಮಟ್ಟದಿಂದ 3589 ಅಡಿ ಎತ್ತರದಲ್ಲಿರುವ ಊರು, ಕಂದು ಬಣ್ಣದ ಗ್ರಾನೈಟ್ ಶಿಲೆಯ ಮೇಲಿದೆ. ಈ ಬೆಟ್ಟವು ಸುತ್ತಲಿನ ಸಮತಟ್ಟಾದ ಭೂ ಭಾಗದಿಂದ 150 ಮೀ. ಎತ್ತರವಾಗಿದೆ. ಈ ಸ್ಥಳವು ಮಂಡ್ಯದಿಂದ 35 ಕಿ.ಮೀ, ಪಶ್ಚಿಮ, ಮೈಸೂರಿನ ವಾಯುವ್ಯಕ್ಕೆ 48 ಕಿ.ಮೀ., ಬೆಂಗಳೂರಿನಿಂದ ನೈರುತ್ಯಕ್ಕೆ 157 ಕಿ.ಮೀ. ದೂರದಲ್ಲಿ ನೆಲೆಸಿದೆ. ಮೇಲುಖೋಟೆಯ $12^{0}.40$ FN ಅಕ್ಷಾಂಶ ಮತ್ತು $76^{0}.43$ FE ರೇಖಾಂಶಗಳಲ್ಲಿ ನೆಲೆಸಿದೆ. ಈ ಬೆಟ್ಟಗಳು ಬೂದು ಮೇಲುಕೋಟೆ ಹಾಗೂ ಕಂದು ಬಣ್ಣದ ಶಿಲೆಗಳಿಂದ ರಚಿತವಾಗಿದೆ.[1] ಬೆಟ್ಟದ ಮೇಲಿನ ಸಮತಟ್ಟಾದ ಭೂ ಭಾಗವು ವಾಸಕ್ಕೆ ಯೋಗ್ಯವಾಗಿದ್ದು, ಹಿತಕರ ವಾತಾವರಣ ಮತ್ತು ನೈಸರ್ಗಿಕ ಆಕರ್ಷಕ ನೋಟವನ್ನು ಹೊಂದಿದೆ. ಗಿರಿಯ ಮೇಲಿಂದ ಹಲವು ಸಣ್ಣ ಕೆರೆಗಳಿರುವ ಕೃಷಿ ಯೋಗ್ಯ ಭೂಮಿಯನ್ನು ನೋಡಬಹುದು. ಬೆಟ್ಟದ ಸಾಲಿಗೆ ಹೊಂದಿಕೊಂಡಂತಿರುವ ತೊಂಡನೂರಿನ ಕೆರೆಯು ಸೌಂದರ್ಯದಿಂದ ಪ್ರಸಿದ್ಧಿ ಪಡೆದಿದೆ.

ಈ ಪ್ರಸ್ಥಭೂಮಿ ಆರ್ಕೇಯನ್ ಕಾಲಕ್ಕೆ ಸೇರಿದ್ದು ಒಂದು ಸಾವಿರ ಮಿಲಿಯನ್ ವರ್ಷಗಳಷ್ಟು ಹಳೆಯದು ಎನ್ನಲಾಗಿದೆ. ಮೇಲುಕೋಟೆಯ ಶಿಲೆಗಳ ನಿರ್ದಿಷ್ಟವಾದ ಕಾಲವನ್ನು ಖಚಿತವಾಗಿ ಇಂದಿಗೂ ಹೇಳಲಾಗಿಲ್ಲ. ಭೂಮಿಯ ಅತ್ಯಂತ ಪ್ರಾಚೀನ ಭಾಗಗಳೆಂದು ಕರೆಯಲಾಗುವ 'ಶೀಲ್ಡ್ ಏರಿಯಾಸ್' ಭಾಗಕ್ಕೆ ಈ ಸ್ಥಳವು ಸೇರಲ್ಪಡುತ್ತದೆ.

‘ರಾಷ್ಟ್ರೀಯ ಪ್ರಾಚ್ಯವಸ್ತು’ ಎಂದು ಘೋಷಿತವಾಗಿರುವ ಬೆಂಗಳೂರಿನ ಲಾಲ್‌ಭಾಗ್‌ನಲ್ಲಿರುವ ಕಲ್ಲು ಸಹ ಈ ಪ್ರದೇಶದ ಕಲ್ಲಿಗೆ ಹೊಂದಿಕೆಯಾಗಿದೆ. ಶ್ರೀ ವೇದಾಂತ ದೇಶಿಕರು ತಮ್ಮ ‘ಸಂಕಲ್ಪ ಸೂರ್ಯೋದಯ’ ಎಂಬ ಗ್ರಂಥದಲ್ಲಿ ಈ ಸ್ಥಳದ ಕುರಿತು ಹೀಗೆ ಹೇಳಿದ್ದಾರೆ. “ಯಾದವಾದ್ರಿಯು ಕರ್ನಾಟಕಕ್ಕೆ ಸುಂದರ ಕರ್ಣಕುಂಡಲದಂತಿದೆ”.

ಸ್ಥಳನಾಮ

ಶಾಸನಗಳಲ್ಲಿ ಈ ಸ್ಥಳವನ್ನು ಹಲವು ಹೆಸರುಗಳಿಂದ ಉಲ್ಲೇಖಿಸಲಾಗಿದೆ. ಅವೆಂದರೆ ಮೇಲುಕೋಟೆ, ಯಾದವಗಿರಿ, ತಿರುನಾರಾಯಣಪುರಂ, ಭೂಲೋಕ ವೈಕುಂಠ, ವೈಕುಂಠ ವರ್ಧನ ಕ್ಷೇತ್ರ, ಜ್ಞಾನಮಂಟಪ ಮತ್ತು ದಕ್ಷಿಣ ಬದರಿಕಾಶ್ರಮ ಎಂಬ ಹೆಸರುಗಳು ಉಲ್ಲೇಖಿತವಾಗಿವೆ.[2] ಕನ್ನಡ ಸಾಹಿತ್ಯ ಪರಿಷತ್ತು ಹೊರತಂದಿರುವ ಕನ್ನಡ ನಿಘಂಟುವಿನಲ್ಲಿರುವಂತೆ, ‘ಮೇಲು’ ಎಂದರೆ ಅಗ್ರಭಾಗ, ಎತ್ತರವಾದ, ಶ್ರೇಷ್ಠವಾದುದು, ಮೇಲ್ಭಾಗದ, ಮೇಲಿನ, ಎಂಬ ಅರ್ಥವನ್ನು ಕೊಡುತ್ತದೆ. ಎಪಿಗ್ರಾಫಿಯ ಕರ್ನಾಟಕದಲ್ಲಿ ತೊಂಡನೂರಿನಲ್ಲಿರುವ ಪಾಂಡವಪುರದ 74ನೇ ನಂಬರಿನ ಶಾಸನವು ‘ಕೋಟೆ’ ಯನ್ನು ಕುರಿತು ಮಾಹಿತಿ ನೀಡುತ್ತದೆ. ಇದು ಕ್ರಿ.ಶ.1189 ರ ಹೊಯ್ಸಳ ದೊರೆ ವೀರಬಲ್ಲಾಳನ ಕಾಲಕ್ಕೆ ಸೇರಿದ್ದು, ಅದಂತೆ ಅಚ್ಯುತಿಮ್ಮಯ್ಯ ಮತ್ತು ವೀರಯ್ಯರು ಯಾದವಗಿರಿ ಕೋಟೆಯ ರಕ್ಷಾಪಾಲಕರಾಗಿದ್ದರು. ಇವರಿಬ್ಬರ ಮಕ್ಕಳು ಕೋಟೆಯ ಹೊಲಗಾಹುತ್ತಿಯನ್ನು ಆಳುತ್ತಿದ್ದರು. ಹೊಲಗಾಹುತ್ತಿ ಎಂದರೆ ಕೋಟೆಯ ಪ್ರದೇಶ ಕಾಯಲು ನೀಡಲಾದ ವೃತ್ತಿ ಎಂದು ಅರ್ಥೈಸಬಹುದು ಅದರಂತೆ ಮೇಲ್ಭಾಗದಲ್ಲಿದ್ದ ಕೋಟೆಯೇ ಆಡುಭಾಷೆಯಲ್ಲಿ ಮೇಲುಕೋಟೆಯಾಗಿರಬೇಕು. ಇಂದಿಗೂ ಕಾಣಸಿಗುವ ಕೋಟೆಗೋಡೆಗಳು ಇದನ್ನು ಸಮರ್ಥಿಸುತ್ತವೆ. 14ನೇ ಶತಮಾನದ ವೀರಬಲ್ಲಾಳನ ಕಾಲದ ಶಾಸನದಲ್ಲಿ ಮೊದಲಬಾರಿಗೆ ‘ಮೇಲುಕೋಟೆ’ ಎಂಬ ಹೆಸರು ಉಲ್ಲೇಕವಾಗಿದೆ. ಮೇಲುಕೋಟೆ ಎಂಬುದು ಈ ಸ್ಥಳದ ಪ್ರಸಿದ್ಧ ಹೆಸರಾಗಿದ್ದು, ಉಳಿದ ಹೆಸರುಗಳು ಪುರಾಣಗಳಲ್ಲಿ ಉಲ್ಲೇಖಿತವಾಗಿವೆ. ಕನ್ನಡ ಸಾಹಿತ್ಯ ಪರಿಷತ್ ಹೊರತಂದಿರುವ ಸ್ಥಳದ ‘ಪ್ರಾಚೀನ ಶಾಸನ (ಕ್ರಿ.ಶ. 1337) ಈ ಸ್ಥಳದ ಹೆಸರನ್ನು ‘ಮೇಲುಕೋಟೆ’ ಎಂದು ಉಲ್ಲೇಖಿಸಿದೆ.[3] ಕನ್ನಡದಲ್ಲಿ ಮೇಲಿನಕೋಟೆಯನ್ನು ಮೇಲುಕೋಟೆ ಎಂದು ತಿಳಿಯಬಹುದು. ಇಂದಿಗೂ ಕಾಣಸಿಗುವ ಕೋಟೆಗೋಡೆಗಳು ಇದನ್ನು ಸಮರ್ಥಿಸುತ್ತದೆ.

ಪುರಾಣದಂತೆ ದ್ವಾಪರಯುಗದಲ್ಲಿ ಯಾದವರು ಬಂದು ನಾರಾಯಣನನ್ನು ಪೂಜಿಸಿದ್ದರಿಂದ 'ಯಾದವಾದ್ರಿ'ಯೆಂದು ಕರೆಯುವರು. ಈ ಹೆಸರು 12ನೇ ಶತಮಾನದ ಹೊಯ್ಸಳರ ಶಾಸನದಲ್ಲಿ ಉಲ್ಲೇಖಿತವಾಗಿದೆ.[4] ನಂತರದ ಶಾಸನಗಳು ಮೈಸೂರು ಸಾಮ್ರಾಜ್ಯ ಸ್ಥಾಪಕರಾದ ಯದು ಮತ್ತು ಕೃಷ್ಣರು ಯಾದವಕುಲಕ್ಕೆ ಸೇರಿದ್ದು, ದ್ವಾರಕದಿಂದ ರಾಜ್ಯಸ್ಥಾಪಿಸಲು ತಮ್ಮ ಮನೆದೇವರಾದ ನಾರಾಯಣನನ್ನು ಪೂಜಿಸಲು ಯಾದವಾದ್ರಿಗೆ ಬಂದರು ಎಂದು ವರ್ಣಿಸಿವೆ. ತಿರುನಾರಾಯಣ ಮೂರ್ತಿಯನ್ನು ಇಲ್ಲಿ ಪ್ರತಿಷ್ಠಾಪಿಸಿದ ನಂತರ ಈ ಸ್ಥಳವನ್ನು ತಿರುನಾರಾಯಣಪುರ ಎಂದು ಕರೆಯಲಾಯಿತು. 'ತಿರು' ಎಂದರೆ ತಮಿಳಿನ 'ಶ್ರೀ' ಪದಕ್ಕೆ ಸಮಾನ. ಈ ಹೆಸರನ್ನು ಉಲ್ಲೇಖಿಸಿರುವ ಆರಂಭದ ಶಾಸನವೆಂದರೆ ಕ್ರಿ.ಶ. 1368ರ ಶಾಸನವಾಗಿದೆ.[5]

ಕ್ರಿ.ಶ. 1582ರ ಶಾಸನವು ಈ ಸ್ಥಳವನ್ನು ಭೂಲೋಕ ವೈಕುಂಠ ಎಂದು ವರ್ಣಿಸಿದೆ.[6] ಕ್ರಿ.ಶ. 1416ರ ಒಂದು ಶಾಸನವು ಈ ಸ್ಥಳವನ್ನು ವೈಕುಂಠವರ್ಧನ ಕ್ಷೇತ್ರ ಎಂದು ಕರೆದಿದೆ.[7] ಮೇಲುಕೋಟೆ ನಾರಾಯಣಸ್ವಾಮಿ ದೇವಾಲಯದ ಹಲವು ಶಾಸನಗಳು ಊರಿನ ಹೆಸರನ್ನು 'ಜ್ಞಾನ ಮಂಟಪ' ಎಂದು ಉಲ್ಲೇಖಿಸಿವೆ. ಈ ಹೆಸರನ್ನು ಉಲ್ಲೇಖಿಸಿರುವ ಆರಂಭಿಕ ಶಾಸನವು ಕ್ರಿ.ಶ. 1458ಕ್ಕೆ ಸೇರಿದೆ.[8] ಶಾಸನದಲ್ಲಿ ಈ ಸ್ಥಳವನ್ನು ದಕ್ಷಿಣ–ಬದರಿಕಾಶ್ರಮ ಎಂದು ಕರೆಯಲಾಗಿದೆ. ಈ ಹೆಸರನ್ನು ತಿಳಿಸುವ ಆರಂಭಿಕ ಶಾಸನವು ಕ್ರಿ.ಶ. 1458ಕ್ಕೆ ಸೇರಿದೆ.[9]

ಮೇಲುಕೋಟೆ ನಾಮವು ತಮಿಳು ಪದದಿಂದ ಬಂದಿರುವ ಸಾಧ್ಯತೆಯಿದೆ. 'ಮೆರ್ಕುಕೊಟ್ಟೆ' ಪದವು ಕ್ರಮೇಣ ಮೇಲುಕೋಟೆಯಾಗಿರಬಹುದು. ಮೆರ್ಕು ಎಂದರೆ ಪಶ್ಚಿಮ, ಕೊಟ್ಟೆ ಎಂದರೆ ಕೋಟೆ. ಈ ಹಿನ್ನೆಲೆಯಲ್ಲಿ ಚೋಳರು ತಮ್ಮ ಪಶ್ಚಿಮದಲ್ಲಿರುವ ಈ ಊರನ್ನು ಈ ಹೆಸರಿನಿಂದ ಕರೆದಿರಬಹುದೆನ್ನಲಾಗಿದೆ.[11] ಈ ಸ್ಥಳಕ್ಕೆ 'ದೊಡ್ಡಗರುಡನಹಳ್ಳಿ' ಎಂಬ ಹೆಸರೂ ಇದೆ. ಹೊಯ್ಸಳರ ಕಾಲದಲ್ಲಿ ಯೋಧರ ಪಡೆಗೆ 'ಗರುಡ' ಎಂದು ಕರೆಯುತ್ತಿದ್ದು, ಗರುಡ ಎಂಬ ಅಂಗರಕ್ಷಕ ಯೋಧಪಡೆ ಇಲ್ಲಿದ್ದುದರಿಂದ ಈ ಹೆಸರು ಬಂದಿರುವ ಸಾಧ್ಯತೆಯಿದೆ. ಈ ಸ್ಥಳವು 'ದೊಡ್ಡಗುರುಗಳಹಳ್ಳಿ' ಎಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದುದು ಮೌಖಿಕ ಆಧಾರದಿಂದ ತಿಳಿದು ಬರುತ್ತದೆ. ಆಚಾರ್ಯ ರಾಮಾನುಜರನ್ನು ದೊಡ್ಡಗುರುಗಳು ಎಂದು ಕರೆಯುತ್ತಿದ್ದು, ಅವರು ಇಲ್ಲಿ ವಾಸಿಸುತ್ತಿದ್ದುದರಿಂದ ಈ ಹೆಸರು ಬಂದಿರುವ ಸಾಧ್ಯತೆ ಇದೆ.

ಮೇಲುಕೋಟೆ–ಪೌರಾಣಿಕ ವಿವರಣೆ

ಸಮಸ್ಯೆ ಮತ್ತು ಸವಾಲುಗಳ ಸಂದಿಗ್ಧ ಹಂತದಲ್ಲೇ ನಂಬಿಕೆಗಳು ಹುಟ್ಟಿಕೊಳ್ಳುತ್ತವೆ. ನಂಬಿಕೆಗಳ ಬೆನ್ನಲ್ಲೇ ಪುರಾಣಗಳು ಸೃಷ್ಟಿಯಾಗುತ್ತವೆ. ಹಾಗಾಗಿ ಪುರಾಣಗಳು ಬದುಕಿನ ಹಲವಾರು ಪ್ರಶ್ನೆಗಳಿಗೆ ಉತ್ತರ ರೂಪದ ಸಮಾಧಾನವೇ ಆಗಿದೆ. ಪುರಾಣ ಧಾರ್ಮಿಕ ಹಿನ್ನೆಲೆಯುಳ್ಳದ್ದು ಹಾಗೂ ಪ್ರತಿಯೊಂದು ಸಾಮಾಜಿಕ ವರ್ಗಕ್ಕೂ ಪುರಾಣ ಪವಿತ್ರವಾದದ್ದು. ಪುರಾಣಗಳೆಂದರೆ ಅಮೂರ್ತ ಭಾವನೆಗಳನ್ನು ಮೂರ್ತಗೊಳಿಸುವ ಸಲುವಾಗಿ ಕಟ್ಟಿದ ವಿವರಣೆ. ಐತಿಹ್ಯ ಹಾಗೂ ಧರ್ಮಗಳೊಂದಿಗೆ ಅವಿನಾಭಾವ ಸಂಬಂಧ ಪುರಾಣದ್ದು. ಮೂಲತಃ ಇವೆರಡೂ ಕಟ್ಟುಕಥೆಯನ್ನಾಧರಿಸಿದ್ದರೂ ಅವುಗಳಾಚೆಗೆ ಚಿಂತನೆಯೂ ಸೇರಿರುತ್ತದೆ. ಮಾನವನ ಬೆಳವಣಿಗೆಯ ಹಂತಗಳನ್ನು ಗುರುತಿಸಲು ಪುರಾಣಗಳು ನೆರವಾಗುತ್ತದೆ. 'ಮಾನವನ ವಿಕಾಸದ ಚರಿತ್ರೆಯೇ ಪುರಾಣ' ಎನ್ನುತ್ತಾರೆ ಆಂಡ್ರೂಲ್ಯಾಂಗ್. 'ಪುರಾಣ ಎನ್ನುವುದು ಚರಿತ್ರೆಯ ಮಾತೃಕೆ' ಎಂದು ಟಿ.ಎಸ್.ಎಲಿಯಟ್ ಸಮರ್ಥಿಸಿದ್ದಾರೆ. 'ಪುರಾಣಗಳ ಮೂಲಕ ಚಾರಿತ್ರಿಕ ಘಟನೆಗಳನ್ನು ಸೈದ್ಧಾಂತಿಕ ಹಿನ್ನೆಲೆಯಿಂದ ಪುನರ್‌ರಚಿಸಲು ಸಾಧ್ಯವಿದೆ.

ಪುರಾಣಗಳ ಅರ್ಥವು ಪ್ರತಿಪಾದಿಸುವ ವಿದ್ವಾಂಸರ ಅಧ್ಯಯನದ ವಿಷಯ ಮತ್ತು ಅವರ ಸೈದ್ಧಾಂತಿಕ ನಿಲುವುಗಳ ಮೇಲೆ ಅವಲಂಬಿತವಾಗಿವೆ. ಮಾನವ ವಿಜ್ಞಾನಿಗಳು "ಪುರಾಣ ಒಂದು ಸಾಮಾಜಿಕ ವರ್ಗದ ಸಾಂಸ್ಕೃತಿಕ ವೀರನಿಗೆ ಆ ಸಾಮಾಜಿಕ ವರ್ಗದ ಸಾಂಸ್ಕೃತಿಕ ಮೂಲಾಂಶಗಳನ್ನು ಆರೋಪಿಸುವ ಕಥಾನಕ"[12] ಎಂದಿದ್ದಾರೆ. ಹರೆಸ್ಕೋವಿಟ್ಸ್ ಅವರು "ನಂಬಿಕೆಗೆ ಬರೆದ ಶಾಸನವನ್ನೇ ಪುರಾಣ ಎನ್ನಬಹುದು. ಒಂದು ನಂಬಿಕೆ ಸಮರ್ಪಕವಾದುದ್ದೆಂದು ಸಮರ್ಥಿಸಿ ಪುರಾಣ ಅದಕ್ಕೆ ಮಹತ್ವವನ್ನು ತಂದು ಕೊಡುತ್ತದೆ. ಪ್ರಚಲಿತವಿರುವ ಆಚರಣೆಗಳಿಗೆ ಪುರಾಣ ಅರ್ಥವನ್ನು ಕಲ್ಪಿಸುತ್ತಿದೆ"[13]ಎಂದಿದ್ದಾರೆ. ಪುರಾಣಗಳು ನಂಬಿಕೆಗೆ ಶಾಸನದ ಮಹತ್ವವನ್ನು ತಂದುಕೊಟ್ಟರೆ, ಆಚರಣೆಗಳು ನಂಬಿಕೆಗಳನ್ನು ಜನಮನದಲ್ಲಿ ಬೇರೂರುವಂತೆ ಮಾಡುವುದು. ಒಂದು ಸಾಮಾಜಿಕ ವರ್ಗದ ಜನರಿಗೆ ತೀರ ಆತ್ಮೀಯವಾಗಿಯೂ ಪವಿತ್ರವಾಗಿಯೂ ಪರಿಣಮಿಸುತ್ತವೆ.

ಪುರಾಣಗಳು ಸಂಪೂರ್ಣವಾಗಿ ಕಾಲ್ಪನಿಕವಾದವುಗಳೇ ಅಥವಾ ಅವುಗಳಿಗೆ ಅಲ್ಪ ಸ್ವಲ್ಪವಾದರೂ ಐತಿಹಾಸಿಕ ಕಾರಣಗಳಿರುತ್ತವೆಯೇ ಎಂಬುದು ಸಾಕಷ್ಟು ಚರ್ಚೆಗೆ ಒಳಗಾಗಿದೆ. ಈ ಸಂಬಂಧವಾಗಿ ಆಳವಾದ ಅಧ್ಯಯನ ಮಾಡಿರುವ ಮ್ಯಾಲಿನೋಸ್ಕಿ ಅವರು ತಿಳಿಸುವಂತೆ ಪುರಾಣ ನಿರ್ಲಿಪ್ತವಾದ ಇತಿಹಾಸವಾಗಿರುವುದಿಲ್ಲ. ಏಕೆಂದರೆ ಇದು ಯಾವುದೋ ಒಂದು

ಸಾಮಾಜಿಕ ಕಾರ್ಯವನ್ನು ನಿರ್ವಹಿಸುತ್ತದೆ. ಉದಾಹರಣೆಗೆ ಯಾವುದೋ ಒಂದು ಗುಂಪನ್ನು ವೈಭವೀಕರಿಸುತ್ತದೆ ಅಥವಾ ಸಾಮಾಜಿಕ ಸ್ಥಾನಮಾನಗಳಲ್ಲಿರುವ ಅಸಮಾನತೆಯನ್ನು ಸಮರ್ಥಿಸುತ್ತದೆ.[14]

ಗಮನಾರ್ಹ ಅಂಶವೆಂದರೆ ಪುರಾಣದ ಕಥೆಗಳನ್ನು ಭಾವುಕತೆಯಿಂದ ವೈಭವೀಕರಿಸಿ ರೋಮಾಂಚನಗೊಳ್ಳದೆ ಇತಿಹಾಸವನ್ನು ಸಮೂಹಿಕ ದೃಷ್ಟಿಯಿಂದ ಅಧ್ಯಯನ ಮಾಡುವ ಅಗತ್ಯವಿದೆ. ಪ್ರತಿಯೊಂದು ಪುರಾಣದ ಕಥೆಯ ಹಿಂದಿನ ಉದ್ದೇಶಗಳು ಅರಿವಿನಿಂದ ಅಂದಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ತಿಳಿಯಬಹುದು. ತಾನು ನಂಬಿರುವ ದೇವರನ್ನು ಹಾಗೂ ತನ್ನ ಸಮುದಾಯದ ಶ್ರೇಷ್ಠತೆಯನ್ನು ಏರುಪೇರುಗಳನ್ನು ತಿಳಿಯಬಹುದು. ಇಂತಹ ಪೌರಾಣಿಕ ಕಥೆಗಳ ವಸ್ತುನಿಷ್ಟತೆಯನ್ನು ಸೂಕ್ಷ್ಮವಾಗಿ ಅರಿಯುವ ಮೂಲಕ ಅಂದಿನ ಸಮಾಜದ ಅಸಮಾನತೆಯ ಅಂಶಗಳನ್ನು ಗುರುತಿಸಬಹುದು.

ಪುರಾಣಗಳ ಪರಿಧಿಯಲ್ಲಿ ಮೇಲುಕೋಟೆಯ ಪೌರಾಣಿಕ ಪ್ರಾಚೀನತೆಯನ್ನು ಅವಲೋಕಿಸಿದಾಗ ಅನೇಕ ಮಹತ್ವದ ಸಂಗತಿಗಳು ಮನದಟ್ಟಾಗುತ್ತದೆ. ಶಿಷ್ಟದೇವತೆಗಳ ವರ್ಣನೆಗಳಿಂದ ಕೂಡಿರುವ ಇಲ್ಲಿನ ಪುರಾಣಕಥೆಗಳು ವಿಷ್ಣುವನ್ನು ಶ್ರೇಷ್ಠನೆಂದು ವೈಭವೀಕರಿಸಿವೆ. ವೈದಿಕ ಸಂಸ್ಕೃತಿಯ ಪ್ರಭಾವವನ್ನು ಇಲ್ಲಿ ನೋಡಬಹುದು. ಕಾಲಕ್ರಮದಲ್ಲಿ ಜನರ ಕಣ್ಣಿನಲ್ಲಿ ಸ್ಥಳದ ಮಹತ್ವವು ಅತಿಶಯವಾಗುವಂತೆ ಸ್ಥಳದ ಮಹಿಮೆಯನ್ನು ಸಾರುವ ಪುರಾಣಕಥೆಗಳನ್ನು ಕಟ್ಟಿರುವುದು ತಿಳಿದುಬರುತ್ತದೆ. ರಾಮ, ಕೃಷ್ಣ, ನಾರದ, ಬ್ರಹ್ಮ ಹೀಗೆ ಹಲವು ದೇವತೆಗಳು ಸ್ವತಃ ಈ ಸ್ಥಳದಲ್ಲಿ ನೆಲೆಸಿದ್ದರು ಎಂದು ನಂಬಲಾಗಿದೆ. ರಾಮಾಯಣ ಮತ್ತು ಮಹಾಭಾರತದ ಘಟನೆಗಳೊಂದಿಗೆ ತಳುಕು ಹಾಕುವ ಪ್ರಯತ್ನ ನಡೆದಿದೆ. ಅರಸರ ಕಣ್ಣಿಗೆ ಸ್ಥಳಪುರಾಣವು ವಿಶಿಷ್ಟವಾಗಿ ಕಾಣುವಂತೆ ಮಾಡಲಾಯಿತು. ಇಲ್ಲಿ ಬ್ರಾಹ್ಮಣ ಸಂಸ್ಕೃತಿಯ ಹಂಬಲ ವ್ಯಕ್ತವಾಗುತ್ತದೆ. ಅಮೂರ್ತವಾದ ಕಲ್ಪನೆಗಳಿಗೆ ಮೂರ್ತರೂಪ ಕೊಡುವ ಕಾರ್ಯಕ್ಕೆ ದೇವಾಲಯಗಳು ಪೂರಕವಾಗಿದ್ದವು. ಶಿಷ್ಟದೇವತೆಗಳ ವರ್ಣನೆಯು ಶ್ರೇಣೀಕೃತ ಸಮಾಜದಲ್ಲಿ ಉನ್ನತ ಸ್ಥಾನವನ್ನು ಪಡೆಯುವಂತಾಯಿತು. ವೈದಿಕ ಸಂಸ್ಕೃತಿಯ ಪರಿಧಿಯಲ್ಲಿ ದೇವಾಲಯಗಳು ಸಾಂಪ್ರದಾಯಿಕತೆ ಮತ್ತು ಮಡಿವಂತಿಕೆಗಳ ಕೇಂದ್ರವಾದವು. ರಾಜಪ್ರಭುತ್ವವು ಇದನ್ನು ಬೆಂಬಲಿಸುವಂತಾದವು. ಇದು ಧಾರ್ಮಿಕ ಪ್ರಭುತ್ವವನ್ನು ಬಲಪಡಿಸಿತು. ರಾಮಾನುಜರ ವಿಶಿಷ್ಟಾದ್ವೈತ ಸಿದ್ಧಾಂತದ ಬೋಧನೆ ಮತ್ತು ಅರ್ಚಾವತಾರದ ಮೂಲಕ ಮಾಡಿದ ಸಾಮಾಜಿಕ ಸುಧಾರಣೆಯ ಪ್ರಯತ್ನಗಳು ಸಂಪೂರ್ಣವಾಗಿ ವೈದಿಕ ಸಂಪ್ರದಾಯದಿಂದ ಹೊರಬರಲಿಲ್ಲ. ವೈದಿಕ ಮುಸುಕನ್ನು ಹೊರತೆಗೆಯುವಲ್ಲಿ

ಯಶಸ್ವಿಯಾಗಲಿಲ್ಲ. ಪುರಾಣಗಳು ನೈತಿಕ ಬೋಧನೆಯ ಜೊತೆಗೆ ಅಧೀನತೆಯ ಅಂಶಗಳನ್ನು ಬಲಪಡಿಸಿದವು.

ಸಿದ್ದಲಿಂಗಯ್ಯನವರು ಅಭಿಪ್ರಾಯ ಪಡುವಂತೆ, ಶಿಷ್ಟ ಸಂಸ್ಕೃತಿಯ ಪುರಾಣಗಳು ಧಾರ್ಮಿಕವಾದ ಆಲೋಚನೆ ಮತ್ತು ಅಭಿವ್ಯಕ್ತಿಯನ್ನು ಹೊಂದಿರುತ್ತವೆ. ಅಮೂರ್ತವಾದ ಪರಿಕಲ್ಪನೆಗಳಿಗೆ ಅಲ್ಲಿ ಅವಕಾಶವಿದೆ. ಪರಲೋಕದ ಕಲ್ಪನೆ ಅಲ್ಲಿ ಯಥೇಚ್ಛವಾಗಿ ಬರುತ್ತದೆ. ಆದ್ದರಿಂದ ಬಹಳ ಸಲ ಶಿಷ್ಟ ಮನಸ್ಸಿನ ಪುರಾಣಗಳು ಪ್ರಬುದ್ಧ ಮನಸ್ಸಿನ ಸೃಷ್ಟಿ ಎನ್ನಬಹುದು[15] ಎಂಬ ಮಾತು ಇಲ್ಲಿ ಉಲ್ಲೇಖಾರ್ಹ. ನಿರ್ದಿಷ್ಟ ದೇವತೆ ಇಲ್ಲದಿದ್ದರೆ ಅದಕ್ಕೆ ಪುರಾಣ ಸೃಷ್ಟಿ ಆಗುವುದಿಲ್ಲ. ಆ ದೇವತೆಗೆ ದೇವಾಲಯ ನಿರ್ಮಿಸುವ ಮೂಲಕ ಪುರಾಣ ಕಥೆಗಳು ಬಲವಾಗುತ್ತವೆ. ದೇವಾಲಯ ನಿರ್ಮಿಸುವ ಮುನ್ನ ಅಥವಾ ನಂತರ ಪುರಾಣಗಳು ಹುಟ್ಟಿಕೊಳ್ಳುತ್ತದೆ. ಪುರಾಣ ಕಥೆಗಳು ದೇವಾಲಯದ ಆಚರಣೆಗಳ ಮೂಲಕ ಆತಂಕವಿಲ್ಲದೆ ಮುಂದುವರೆಯುತ್ತಾ ಹೋಗುವುದನ್ನು ಕಾಣಬಹುದು.

ಮೇಲುಕೋಟೆ ಮತ್ತು ಪುರಾಣಗಳು

ನಾರದೀಯ ಪುರಾಣ

ನಾರದೀಯ ಪುರಾಣದಲ್ಲಿ ಅಂತರ್ಗತವಾಗಿರುವ ಯಾದವಗಿರಿ ಮಹಾತ್ಮೆಯ ಭಾಗದಲ್ಲಿ ಮೇಲುಕೋಟೆಯು ಭೂವೈಕುಂಠವೆಂದು ವರ್ಣಿಸಲ್ಪಟ್ಟಿದೆ. ಇದು ಹನ್ನೆರಡು ಅಧ್ಯಾಯಗಳನ್ನು ಹೊಂದಿದ್ದು, ಮೊದಲ ಅಧ್ಯಾಯದಲ್ಲಿ ಬದರಿನಾರಾಯಣನು ವ್ಯಾಸಾದಿ ಮಹರ್ಷಿಗಳಿಗೆ ಈ ಸ್ಥಳದ ವೈಶಿಷ್ಟ್ಯವನ್ನು ವಿವರಿಸಿದ್ದಾನೆ.[16] ಈ ಕ್ಷೇತ್ರದ ವಿವಿಧ ಸ್ಥಳಗಳು, ತೀರ್ಥಗಳು, ಈ ಕ್ಷೇತ್ರಕ್ಕೆ ಕೊಡುಗೆ ನೀಡಿದ ಮಹಾಪುರುಷರು, ಅವರು ಅನುಭವಿಸಿದ ಫಲಗಳ ಕುರಿತು ವಿವರಿಸಲಾಗಿದೆ. ಮುಂದೆ 2, 3, 4 ನೇ ಅಧ್ಯಾಯಗಳಲ್ಲಿ ಬ್ರಹ್ಮದೇವನು ಸನತ್ಕುಮಾರನಿಗೆ ಕೊಟ್ಟ ಮೂರ್ತಿಯನ್ನು ಮೇಲುಕೋಟೆಯ ಕಲ್ಯಾಣಿತೀರ್ಥದ ತೀರದಲ್ಲಿ ಪೂರ್ವಾಭಿಮುಖವಾಗಿ ಸ್ಥಾಪಿಸಿದ ವಿಚಾರವಿದೆ.[17]

ಆರನೆಯ ಅಧ್ಯಾಯದಲ್ಲಿ ಶ್ರೀರಾಮನು ರಾವಣನೊಂದಿಗೆ ಯುದ್ಧ ಮುಗಿಸಿ ವಿಭೀಷಣನೊಂದಿಗೆ ಅಯೋಧ್ಯೆಗೆ ಬಂದಾಗ ದಿವ್ಯಮೂರ್ತಿಯೊಂದನ್ನು ವಿಭೀಷಣನಿಗೆ ಕೊಡುತ್ತಾನೆ. ಮತ್ತೊಂದು ಪ್ರಸಂಗದ ಪ್ರಕಾರ ಶ್ರೀರಾಮನು ಅದನ್ನು ಹನುಮಂತನಿಗೆ ಕೊಟ್ಟನು. ಹನುಮಂತನು ಅದನ್ನು ಕುಶ ಮಹಾರಾಜನಿಗೆ ಕೊಡಲಾಗಿ ಅವನು ಅದನ್ನು ತನ್ನ ಮಗಳನ್ನು ಕನಕಮಾಲಿನಿಯನ್ನು ಯದುವಂಶೋತ್ಪನ್ನನಾದ ಯಧುಶೇಖರನಿಗೆ

ವಿವಾಹ ಮಾಡಿ ಬಳುವಳಿಯಾಗಿ ಮೂರ್ತಿಯನ್ನು ಕೊಟ್ಟನು. ಮೇಲುಕೋಟೆಯಲ್ಲಿರುವ ರಾಮಪ್ರಿಯನಾದ ಈ ಮೂರ್ತಿಯು ಯದುವಂಶಕ್ಕೆ ಒಂದು ಕ್ರಮವಾಗಿ ಶ್ರೀಕೃಷ್ಣನಿಂದಲೂ ಆರಾಧಿಸಿದ ವಿಚಾರವನ್ನು ಒಳಗೊಂಡಿದೆ.

7 ಮತ್ತು 8ನೇ ಅಧ್ಯಾಯಗಳಲ್ಲಿ ಇಲ್ಲಿನ ಪುಷ್ಕರಣಿಗಳ ಕುರಿತ ವಿಚಾರಗಳಿವೆ. ಇವುಗಳಲ್ಲಿ ವೇದ ಪುಷ್ಕರಣಿ ಎಂದು ಕರೆಯಲಾಗುವ ಕಲ್ಯಾಣಿಯೂ ಸೇರಿರುವ ವಿಚಾರವಿದೆ.[18] 9ನೇ ಅಧ್ಯಾಯದಲ್ಲಿ ದತ್ತಾತ್ರೇಯನ ಅವತಾರವೆತ್ತಿದ ವಿಷ್ಣುವು ತ್ರೇತಾಯುಗದಲ್ಲಿ ನಾಲ್ಕು ವೇದಗಳನ್ನೇ ಶಿಷ್ಯರನ್ನಾಗಿ ಮಾಡಿಕೊಂಡು ಅವರಿಗೆ ನಾಲ್ಕು ವೇದಗಳನ್ನು ಇಲ್ಲಿನ ಕಲ್ಯಾಣಿತೀರ್ಥದಲ್ಲಿ ಬೋಧಿಸಿದನು. ಆದ್ದರಿಂದ ಈ ತೀರ್ಥಕ್ಕೆ ಕಲ್ಯಾಣಿತೀರ್ಥ ಎಂದು ಹೆಸರಾಯಿತು.[19]

ಮತ್ಸ್ಯಪುರಾಣ

ಮತ್ಸ್ಯಪುರಾಣವು 12 ಅಧ್ಯಾಯಗಳನ್ನು ಒಳಗೊಂಡಿದೆ. ಇದರಲ್ಲಿ ಕೃಷ್ಣನು ಜರಾಸಂಧನನ್ನು ಸೋಲಿಸಿದ ನಂತರ ಪ್ರಶಾಂತ ಸ್ಥಳಕ್ಕೆ ಹೋಗುವ ಬಯಕೆಯಾಗುತ್ತದೆ. ಕೃಷ್ಣನನ್ನು ಬಲರಾಮನೊಂದಿಗೆ ಗೋಮಂತಗಿರಿಗೆ ಬಂದು ನೆಲೆಸುತ್ತಾನೆ. ಮುಂದೆ ಇದೆ ಯಾದವಗಿರಿಯಾಯಿತು ಎಂಬ ಉಲ್ಲೇಖವಿದೆ. ಇಲ್ಲಿ ಹೇಳಲಾಗಿರುವ 66 ಕೋಟಿ ತೀರ್ಥಗಳಲ್ಲಿ ಮೇಲುಕೋಟೆಯ ಕಲ್ಯಾಣಿತೀರ್ಥ, ದರ್ಭತೀರ್ಥ, ಪಲಾಸತೀರ್ಥ, ಪದ್ಮತೀರ್ಥ, ನಾರಾಯಣತೀರ್ಥ, ಮೈತ್ರೇಯ ತೀರ್ಥಗಳ ಉಲ್ಲೇಖವಿದೆ.

ಈ ಪುರಾಣದಲ್ಲಿ ಉಲ್ಲೇಖಿಸಿರುವಂತೆ ನರಸಿಂಹನು ಹಿರಣ್ಯಕಷ್ಯಪನನ್ನು ಕೊಂದ ನಂತರ ಗೋಮಂತಗಿರಿಗೆ ಬಂದನು ಹಾಗೂ ದೇವತೆಗಳ ಕೋರಿಕೆಯಂತೆ ಮೇಲುಕೋಟೆಯಲ್ಲಿ ಜನರಿಗೆ ಆಶೀರ್ವದಿಸಲು ನೆಲೆನಿಂತನು. ಗರುಡನು ಶ್ವೇತದೀಪದಿಂದ ಬಿಳಿಮಣ್ಣನ್ನು ಮೇಲುಕೋಟೆಗೆ ತಂದನು ಎಂಬುದು ಇಲ್ಲಿ ಉಲ್ಲೇಖವಾಗಿದೆ. ವೈಷ್ಣವರು ಇದರಿಂದ ಊರ್ಧ್ವಪುಂಡ್ರ (ನಾಮ) ವನ್ನು ತಯಾರಿಸುತ್ತಾರೆ.[20]

ಈ ಪುರಾಣದಲ್ಲಿ ಉಲ್ಲೇಖವಾಗಿರುವಂತೆ ಸ್ಥಳದ ಉತ್ತರ ಭಾಗಕ್ಕಿರುವ ಪಂಚಕಲ್ಯಾಣಿಯು ವೈಕುಂಠಗಂಗೆಯೆಂದೇ ವರ್ಣಿಸಲಾಗಿದೆ. ಯಾರು ಈ ಕಲ್ಯಾಣಿಯಲ್ಲಿ ಸ್ನಾನಮಾಡಿ, ಬಿಳಿಮಣ್ಣಿನ ನಾಮವನ್ನು ಹಣೆಗೆ ಧರಿಸಿ ದೇವರನ್ನು ಧ್ಯಾನಮಾಡುವವರೋ ಅಂತವರಿಗೆ ತಮ್ಮ ಜೀವನದ ಎಲ್ಲಾ ಆಸೆಗಳು ಈಡೇರುವುದಲ್ಲದೆ ಜೀವನದಲ್ಲಿ ಸುಲಭ

ಮುಕ್ತಿ ದೊರೆಯುತ್ತದೆ ಎನ್ನಲಾಗಿದೆ. ಪಿಪ್ಪಲಾದ, ಸತ್ಯಕಾಮ ಮತ್ತು ಮೇಧಾತಿಥಿಯರ ಕಥಾಭಾಗಗಳು ಈ ಕ್ಷೇತ್ರದ ಮಹತ್ವವನ್ನು ವಿವರಿಸಿದೆ.

ಪದ್ಮಪುರಾಣ

ಪದ್ಮ ಪುರಾಣದಲ್ಲಿಯೂ ಸಹ ಮೇಲುಕೋಟೆಯ ಕಲ್ಯಾಣಿ ತೀರ್ಥದ ವೈಶಿಷ್ಟತೆಯನ್ನು ಸಾರುವ ಅಂಶವಿದೆ. ಮಾಘ ಮತ್ತು ಮಕರ ತಿಂಗಳಿನಲ್ಲಿ ಕಲ್ಯಾಣಿಯಲ್ಲಿ ಸ್ನಾನ ಮಾಡುವುದು ಶ್ರೇಷ್ಠವಾದುದು ಮತ್ತು ಭಕ್ತರ ಎಲ್ಲಾ ಪ್ರಾರ್ಥನೆಗಳು ಈ ಕಾಲದಲ್ಲಿ ಈಡೇರುತ್ತದೆ ಎಂದು ತಿಳಿಸಲಾಗಿದೆ.[21] ಕಾಶೀಮಹಾತ್ಮೆಯ ಪುರಾಣದಲ್ಲಿಯೂ ಸಹ ಮೇಲುಕೋಟೆ ಸ್ಥಳದ ವರ್ಣನೆಯಿದೆ.

ವಿಷ್ಣುವನ್ನು ಆರಾಧಿಸುವ 'ಪಾಂಚರಾತ್ರ ಆಗಮ'ಕ್ಕೆ ಸಂಬಂಧಿಸಿದ 'ಸಾತ್ವತ ಸಂಹಿತೆ' ಎಂಬ ಗ್ರಂಥಕ್ಕೆ ಬರೆದಿರುವ 'ಈಶ್ವರಸಂಹಿತಾ' ಎಂಬ ಭಾಷ್ಯದಲ್ಲಿ 'ಯಾದವಾಚಲ ಮಾಹತ್ಮ್ಯೆ' ಎಂಬ ಅಧ್ಯಾಯವು ಮೇಲುಕೋಟೆಯ ಬಗೆಗೆ 300 ಶ್ಲೋಕಗಳನ್ನು ಹೊಂದಿದೆ.[22] ಶ್ಲೋಖದಲ್ಲಿ ಮೇಲುಕೋಟೆಯ ಭೌಗೋಳಿಕ ವರ್ಣನೆ ಮತ್ತು ಗೋಪುರಗಳ ಲಕ್ಷಣದ ಕುರಿತ ವಿವರಣೆಯಿದೆ. ಅದೇ ರೀತಿ ಶಿಲ್ಪಶಾಸ್ತ್ರದ ರೀತ್ಯಾ ಮುಖ್ಯ ದೇವಾಲಯ ನಾರಾಯಣಸ್ವಾಮಿ ದೇವಾಲಯದ ವರ್ಣನೆಯಿದೆ ಹಾಗೂ ನರಸಿಂಹಸ್ವಾಮಿ ಬೆಟ್ಟದ ವರ್ಣನೆಯೂ ಇದೆ. ನಾರಾಯಣಸ್ವಾಮಿ ದೇವಾಲಯದ ದ್ವಾರ ಮತ್ತು ಕಂಬಗಳಲ್ಲಿ ಈ ವರ್ಣನೆಗೆ ಪೂರಕವಾದ ಶಿಲ್ಪಕಲೆಗಳಿವೆ. ಈಶ್ವರ ಸಂಹಿತೆಯ 20ನೇ ಅಧ್ಯಾಯದಲ್ಲಿ ವಿಷ್ಣು ನಾರಾಯಣನಾಗಿ ಮೇಲುಕೋಟೆಯಲ್ಲಿ ನೆಲೆಸಿರುವ ವಿಚಾರವಿದೆ.

ಐತಿಹ್ಯಗಳು : ನಂಬಿಕೆಗೆ ಕಲ್ಪನೆಯ ತೆಳು ಮುಸುಕು ಹೊದಿಸಿರುವುದೇ ಐತಿಹ್ಯ. ನಿರ್ದಿಷ್ಟ ಸ್ಥಳದ ಎಲ್ಲಾ ಸಂಗತಿಗಳನ್ನು ಪ್ರಾದೇಶಿಕ ಸಂಪ್ರದಾಯದ ವೈಲಕ್ಷಣಗಳನ್ನು ಹೇಳುವುದು 'ಸ್ಥಳೀಯ ಐತಿಹ್ಯ'ಗಳ ಮುಖ್ಯ ಉದ್ದೇಶ. ಪ್ರಧಾನ ಸಂಗತಿಗೆ ಪೂರಕವಾದ ಇತರ ಸಂಗತಿಗಳನ್ನು ಪ್ರಾದೇಶಿಕ ಐತಿಹ್ಯ ಸಂಬಂಧಿತ ಪುರಾಣಗಳಲ್ಲಿ ಅಂದರೆ 'ಸ್ಥಳ ಪುರಾಣಗಳಲ್ಲಿ' ಕಾಣಬಹುದು. (ಐತಿಹ್ಯ ಇತಿಹಾಸದ ವ್ಯಕ್ತಿ, ಊರು ಮತ್ತು ಘಟನೆಗಳನ್ನು ಅಲೌಕಿಗೊಳಿಸುವ ಕಥಾಪ್ರಕ್ರಿಯೆ ಎನ್ನಬಹುದು. ಇಲ್ಲಿ ಪೌರಾಣಿಕ ಅಂಶಗಳನ್ನು ತಮ್ಮ ಸ್ಥಳಕ್ಕೆ ಆರೋಪಿಸಿಕೊಳ್ಳುವ ಮನೋಧರ್ಮ ಕಂಡುಬರುತ್ತದೆ.

ಮೇಲುಕೋಟೆಗೆ ಸಮೀಪದಲ್ಲಿರುವ ಧನುಷ್ಕೋಟಿಯ ಬಂಡೆಯ ನಡುವೆ ಸದಾ ಜಿನುಗುವ ನೀರು ಲಕ್ಷ್ಮಣನು ಸೀತೆಯ ದಾಹವನ್ನು ನೀಗಿಸಲು ಹೂಡಿದ

ಬಾಣದಿಂದಾಯಿತು ಎಂಬ ಪ್ರತೀತಿಯಿದೆ. ಯೋಗಾನರಸಿಂಹ ಸ್ವಾಮಿ ದೇವಾಲಯಕ್ಕೆ ಹೋಗುವ ಮಾರ್ಗದಲ್ಲಿ ಎಡಭಾಗಕ್ಕಿರುವ ಪಾಂಡವರಗುಹೆಯಲ್ಲಿ ಪಾಂಡವರು ತಮ್ಮ ವನವಾಸಕಾಲದಲ್ಲಿ ಕೆಲಕಾಲ ತಂಗಿದ್ದರೆಂಬ ನಂಬಿಕೆಯಿದೆ. ಇಲ್ಲಿನ ಸುಪ್ರಸಿದ್ಧ ವೈರಮುಡಿ ಉತ್ಸವದ ಉತ್ಸವ ಮೂರ್ತಿಗೆ ತೊಡಿಸುವ ವೈರಮುಡಿ ಎಂಬ ವಜ್ರಖಚಿತವಾದ ಕಿರೀಟವು ಕುರುಕ್ಷೇತ್ರ ಯುದ್ಧದಲ್ಲಿ ಕರ್ಣನ ಬಾಣದಿಂದ ತುಂಡರಿಸಲ್ಪಟ್ಟ ಅರ್ಜುನನ ಕಿರೀಟದ ಮೇಲುಭಾಗ ಎಂಬ ನಂಬಿಕೆಯಿದೆ. ಮೇಲುಕೋಟೆ ಪಕ್ಕಕ್ಕಿರುವ ಸಮಾನ ಎತ್ತರಹೊಂದಿರುವ 'ಗರಿಕಲ್ಲು' ಎಂಬ ಬೆಟ್ಟವಿದೆ. ಈ ಬೆಟ್ಟವು ಹನುಮಂತನು ಸಂಜೀವಿನಿ ಪರ್ವತವನ್ನು ಹೊತ್ತು ಹೋಗುವಾಗ ಬಿದ್ದ ಪರ್ವತದ ಭಾಗವೇ 'ಗರೀಕಲ್ಲು ಬೆಟ್ಟ' ಎಂಬ ಐತಿಹ್ಯವಿದೆ.

ಪ್ರಾಗೈತಿಹಾಸ ಮತ್ತು ಇತಿಹಾಸ ಕಾಲದಲ್ಲಿ ಮೇಲುಕೋಟೆ

ಯಾವುದೇ ಪ್ರದೇಶದ ಇತಿಹಾಸ, ಸಂಸ್ಕೃತಿಯ ಪುನರ್ರಚನೆಗೆ ಅಲ್ಲಿರುವ ಪುರಾತತ್ವ ಆಧಾರಗಳು ಅವುಗಳ ವೈಜ್ಞಾನಿಕ ಮತ್ತು ವಿಮರ್ಶಾತ್ಮಕ ಅಧ್ಯಯನಕ್ಕೆ ಅತ್ಯಗತ್ಯ. ಈ ಭಾಗವು ಪರಿಸರಾತ್ಮಕವಾಗಿ ಪೂರ್ವೇತಿಹಾಸದ ನೆಲೆಗಳಿಗೆ ಮಹತ್ವ ಪಡೆದಿದೆ. ಮಂಡ್ಯ ಜಿಲ್ಲೆಯ ರಂಗನತಿಟ್ಟು, ಶ್ರೀರಂಗಪಟ್ಟಣ, ಹುಂಬಳ್ಳಿ, ಹಲಗೂರು, ಬೆಳಕವಾಡಿ, ಕುಂತಿಬೆಟ್ಟ, ಶೆಟ್ಟಹಳ್ಳಿ, ತೊಂಡನೂರು, ಮೇಲುಕೋಟೆ, ಹೊಸಕೋಟೆ, ಸಣಬ ಮತ್ತು ಸಿಗನಹಳ್ಳಿಗಳಲ್ಲಿ ಪ್ರಾಗೈತಿಹಾಸಿಕ ನೆಲೆಗಳನ್ನು ಸಂಶೋಧಕರು ಪತ್ತೆ ಹಚ್ಚಿರುತ್ತಾರೆ. ಅಲ್ಲದೆಯೇ ಜಿಲ್ಲೆಯ ಹತ್ತಿರದಲ್ಲಿರುವ ತಿರುಮಕೂಡಲು ನೂತನ ಶಿಲಾಯುಗ, ಬೃಹತ್ ಶಿಲಾಯುಗ ಮತ್ತು ಇತಿಹಾಸ ಕಾಲದ ಸಂಸ್ಕೃತಿಗಳ ಸ್ಪಷ್ಟ ಕುರುಹುಗಳು ದೊರೆತಿದ್ದು, ಕಲ್ಲಿನ ಉಪಕರಣಗಳ ಹಂತದಿಂದ ತಾಂತ್ರಿಕ ಬೌದ್ಧಿಕ ಸುಧಾರಣೆಯನ್ನು ಹೊಂದುತ್ತಾ ನಗರ ಸಂಸ್ಕೃತಿಯ ಹಂತಕ್ಕೆ 2000 ವರ್ಷಗಳ ಅಂತರದಲ್ಲಿ ಹೇಗೆ ಬಂತೆಂಬುದನ್ನು ಇಲ್ಲಿ ಸ್ಥೂಲವಾಗಿ ತಿಳಿಯಲು ಸಾಧ್ಯವಾಗಿದೆ. ಹಾಗೆಯೇ ಬೃಹತ್ ಶಿಲಾಯುಗದ ನೆಲೆಯೆಂದು ಗುರುತಿಸಲ್ಪಟ್ಟಿರುವ ಮೇಲುಕೋಟೆಯು ಸುತ್ತಲಿನ ಪ್ರಾಗೈತಿಹಾಸಿಕ ನೆಲೆಯ ಲಭ್ಯ ಪುರಾವೆಗಳಿಗೆ ಪುಷ್ಟಿ ನೀಡುವಂತಿದೆ. ದಖನ್ ಪ್ರಸ್ಥಭೂಮಿಯ ದಕ್ಷಿಣದಂಚಿನಲ್ಲಿರುವ ಮೇಲುಕೋಟೆಯು ಪ್ರಾಚೀನ ಕಾಲದಿಂದಲೂ ಐತಿಹಾಸಿಕ ಘಟನೆಗಳಿಗೆ ಪ್ರೇರಕವಾದ ಕಾರಣಗಳನ್ನು ಹೊಂದಿದೆ. ಈ ಪ್ರದೇಶದ ಇತಿಹಾಸ ಸರಣಿಗೆ ಪೂರಕವಾದ ಅಂಶಗಳು ಸಾಕಷ್ಟಿದೆ. ಶಿಲಾಯುಗದ ಕಾಲದ ಸಂಸ್ಕೃತಿಯ ಅವಶೇಷಗಳನ್ನು ಹೊಂದಿರುವ ತುಮಕೂರು ಬೆಟ್ಟಗಳು ಮೇಲುಕೋಟೆಗೆ ಸಮೀಪದಲ್ಲಿವೆ. ಇಲ್ಲಿ ಶಿಲಾಯುಗ ಮತ್ತು ಬೃಹತ್ ಶಿಲಾಯುಗಕ್ಕೆ ಸೇರಿದ ಅವಶೇಷಗಳು ಲಭ್ಯವಾಗಿವೆ. ಇದಕ್ಕೆ ಪೂರಕವಾಗಿ ಮೇಲುಕಟೆಯ ಪೂರ್ವ ದಿಕ್ಕಿನಲ್ಲಿರುವ

ಹೊಗರಮ್ಮನ ದೇವಾಲಯದ ಬಳಿ ಬಂಡೆಯೊಂದರ ಮೇಲಿರುವ ಮಾನವನ ರೇಖಾಚಿತ್ರವು ಬೃಹತ್ ಶಿಲಾಯುಗದ ಕಾಲದ ಸ್ಪಷ್ಟ ಉದಾಹರಣೆಯಾಗಿದೆ[23].

ಮೇಲುಕೋಟೆಯ ಬೆಟ್ಟದ ಶ್ರೇಣಿಗೆ ಹೊಂದಿಕೊಂಡಂತಿರುವ ಪಾಂಡವರಗವಿಯು ಬೃಹತ್ ಶಿಲಾಯುಗಕ್ಕೆ ಸೇರಿದ ಮಾನವನ ವಾಸಸ್ಥಾನವಾಗಿದೆ. ಯೋಗಾನರಸಿಂಹಸ್ವಾಮಿ ದೇವಾಲಯಕ್ಕೆ ಹೋಗುವಾಗ ಎಡಕ್ಕಾದಂತಿರುವ ಗವಿಗಳನ್ನು ಪಾಂಡವರ ಗವಿಗಳೆಂದು, ಪಾಂಡವರು ಬಳಸುತ್ತಿದ್ದ ಆರು ತಟ್ಟೆಗಳ ಆಕಾರದ ಸವೆದ ಬಂಡೆಯನ್ನು ತೋರಿಸಲಾಗುತ್ತದೆ. ಆದರೆ ಇವು ಬೃಹತ್ ಶಿಲಾಯುಗಕ್ಕೆ ಸೇರಿದ ಕುರುಹುಗಳಾಗಿವೆ.[24] ಮೇಲುಕೋಟೆಯಲ್ಲಿ ಕಪ್ಪು, ಕೆಂಪು ಹಾಗೂ ಕಪ್ಪುಮಿಶ್ರಿತ ಕೆಂಪು ಹೊಳಪಿನಿಂದ ಕೂಡಿದ ಮಡಿಕೆ-ಕುಡಿಕೆಗಳು ಲಭಿಸಿದ್ದು ಅವುಗಳು ಮೂಲತಃ ಜೇಡಿಮಣ್ಣಿನಿಂದ ತಯಾರಿಸಲಾಗಿದೆ. ಕೆಳಮುಖವಾಗಿ ಭಾಗಿದ ಕಂಠವುಳ್ಳ ಚಪ್ಪಟೆಯಾಕಾರದ ಬೋಗುಣಿ, ತಟ್ಟೆ, ಲೋಟ, ಗಡಿಗೆ, ದುಂಡುತಳದ ಅಗಲ ಬಾಯಿಯ ಹೊಳಪುಳ್ಳ ಸಣ್ಣ-ಸಣ್ಣ ಮಡಕೆ, ಮುಚ್ಚಳವುಳ್ಳ ಮಡಿಕೆ ಮುಂತಾದ ನಾನಾ ಮಾದರಿಯ ಮಡಿಕೆಗಳು ಪತ್ತೆಯಾಗಿದ್ದು, ಅವುಗಳಲ್ಲಿ ಕೆಲವಕ್ಕೆ ಎರಡೂ ಬದಿಯಲ್ಲಿ ಹಿಡಿಕೆಗಳಿವೆ. ಮೇಲುಕೋಟೆಯ ಪಾಂಡವರ ಗವಿ ಪರಿಸರವು ಪ್ರಾಚೀನ ಮಾನವನ ನೆಲೆಯಾಗಿದ್ದುದರಲ್ಲಿ ಯಾವುದೇ ಸಂಶಯವಿಲ್ಲ.

ಡಾ.ಎಂ.ಎಸ್. ಕೃಷ್ಣಮೂರ್ತಿಯವರು ಸಮೀಪದ ಕುಂತಿಬೆಟ್ಟದಲ್ಲಿ ಸಂಶೋಧನೆ ನಡೆಸಿ ಪ್ರಾಗೈತಿಹಾದ ಅವಶೇಷಗಳನ್ನು ಸಂಗ್ರಹಿಸಿ ಆರ್ಕಿಯಾಲಜಿಕಲ್ ಸ್ಟಡೀಸ್‌ನಲ್ಲಿ ಪ್ರಕಟಿಸಿದ್ದಾರೆ. ಮೇಲುಕೋಟೆಯ ಗಿರಿಶ್ರೇಣಿಗೆ ಹೊಂದಿಕೊಂಡಂತೆಯೇ ಇರುವ ತೊಣ್ಣೂರಿನಲ್ಲಿ ಲಭ್ಯವಾಗಿರುವ ಕೆಂಪು, ಕಪ್ಪು ಮತ್ತು ಕೆಂಪು ಮಿಶ್ರಿತ ಮಡಿಕೆಚೂರುಗಳು ಮೈಸೂರು ಜಿಲ್ಲೆಯ ಕೊಪ್ಪ ಹಾಗೂ ಟಿ.ನರಸೀಪುರಗಳಲ್ಲಿ ನಡೆಸಿರುವ ಉತ್ಖನನಗಳಲ್ಲಿ ದೊರಕಿರುವ ಮಡಿಕೆಗಳಿಗೆ ಬಹಳ ಹೋಲಿಕೆಯಾಗುತ್ತವೆ.[25] ಸಮೀಪದ ಸಣಬ ಗ್ರಾಮದಲ್ಲಿಯೂ ಇದುವರೆಗೂ ದಕ್ಷಿಣ ಭಾರತದ ಬೃಹತ್ ಶಿಲಾಯುಗ ಕಾಲದ ನೆಲೆಗಳಲ್ಲಿ ಅಥವಾ ಸಮಾಧಿ ನೆಲೆಗಳಲ್ಲಿ ಕಂಡು ಬರದೆ ಇರುವ ಮೂರು ಮನುಷ್ಯರ ಚಿತ್ರಗಳು ಹಾಗೂ ಕೆಲವು ಸಣ್ಣಕುಳಿಗಳು ಇಲ್ಲಿನ ಸಮಾಧಿಯೊಂದರ ಮೇಲೆ ಇಡುವ ಮಚ್ಚುಗಲ್ಲಿನ ಮೇಲೆ ಕಂಡುಬಂದಿದೆ.[26] ತೊಣ್ಣೂರಿನ ಕೆರೆ ಬೃಹತ್ ಶಿಲಾಯುಗದ ಕಾಲದಿಂದಲೂ ಜನವಸತಿ ಮತ್ತು ವ್ಯವಸಾಯಕ್ಕೆ ಬಳಕೆಯಾಗುತ್ತಿತ್ತು ಮತ್ತು ಆಗಿನಿಂದಲೂ ಬಹಳ ಉಪಯುಕ್ತ ಕರೆಯಾಗಿತ್ತೆಂದು ಹೇಳಬಹುದು. ಹೀಗೆ ಮೇಲುಕೋಟೆಯ ಪರಿಸರವು ಬೃಹತ್ ಶಿಲಾಯುಗಕ್ಕೆ ಸೇರಿದ ಜನವಸತಿಯ ಕೇಂದ್ರವಾಗಿದ್ದು, ಪ್ರಾಗೈತಿಹಾಸಿಕ ಕಾಲದಿಂದಲೂ ತನ್ನ ಪ್ರಾಚೀನತೆಯನ್ನು ಗುರುತಿಸಿಕೊಂಡಿದೆ.

ಇತಿಹಾಸಕಾಲದಲ್ಲಿ ಮೇಲುಕೋಟೆ

ಪ್ರಾರಂಭದಿಂದಲೂ ಇತಿಹಾಸ ಘಟನೆಗಳಿಗೆ ಪ್ರೇರಕ ಅಂಶಗಳನ್ನು ಹೊಂದಿದ್ದ ಮೇಲುಕೋಟೆಯ ಇತಿಹಾಸವನ್ನು ಮೌರ್ಯರ ಕಾಲದಿಂದ ಗುರುತಿಸಬಹುದಾಗಿದೆ. ಜೈನರ ಧಾರ್ಮಿಕ ಗ್ರಂಥಗಳು ತಿಳಿಸುವಂತೆ ಮೌರ್ಯ ದೊರೆ ಚಂದ್ರಗುಪ್ತಮೌರ್ಯನು ಜೈನ ಗುರು ಭದ್ರಬಾಹುವಿನೊಂದಿಗೆ ದಕ್ಷಿಣದ ಶ್ರವಣಬೆಳಗೊಳಕ್ಕೆ (ಕ್ರಿ.ಪೂ. 4ನೇ ಶತಮಾನ) ವಲಸೆ ಬಂದನು. ಇಲ್ಲಿ 12 ವರ್ಷಗಳಿದ್ದು ನಂತರ ಇಲ್ಲಿಯೇ ಕೊನೆಯುಸಿರೆಳೆದನು. ಶ್ರವಣಬೆಳಗೊಳವು ಮೇಲುಕೋಟೆಗೆ ಕೇವಲ 20 ಕಿ.ಮೀ. ದೂರದಲ್ಲಿದೆ. ಅಶೋಕನ ಆಡಳಿತ ಕರ್ನಾಟಕದ ದಕ್ಷಿಣ ಭಾಗದವರೆಗೂ ವಿಸ್ತರಿಸಿತ್ತು ಎಂದು ತಿಳಿಸುವ ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿಶಾಸನ ದೊರೆತಿರುವ ಸ್ಥಳವು ಮೇಲುಕೋಟೆಗೆ ಹೆಚ್ಚು ದೂರ ಇಲ್ಲ. ನಂತರ ಗಂಗರ ಕಾಲದವರೆಗಿನ ಮೇಲುಕೋಟೆಯ ಇತಿಹಾಸವು ಸ್ಪಷ್ಟವಾಗಿ ತಿಳಿದಿಲ್ಲ.

ಗಂಗರು ಈ ಪ್ರಾಂತ್ಯದ ಮಹತ್ವದ ಸಾಂಸ್ಕೃತಿಕ ಬೆಳವಣಿಗೆಗೆ ಕಾರಣರಾದರು. ಈ ಅವಧಿಯಲ್ಲಿ ಪಶ್ಚಿಮ ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಬೆಳವಣಿಗೆಗೆ ಕಾರಣರಾದವರು ಕದಂಬರು. ಪೂರ್ವದಲ್ಲಿ ಪಲ್ಲವರು, ಉತ್ತರದಲ್ಲಿ ಚಾಲುಕ್ಯರು ಮತ್ತು ರಾಷ್ಟ್ರಕೂಟರು, ನಂತರದ ಕಾಲದಲ್ಲಿ ಚೋಳರು ದಕ್ಷಿಣದಲ್ಲಿ ಪ್ರಭಾವ ಹೊಂದಿದ್ದರು. ಗಂಗರು ಕಲೆ, ವಾಸ್ತು ಶಿಲ್ಪಗಳ ಆಶ್ರಯದಾತರಾಗಿದ್ದರು. ಹಿಂದೂ ಧರ್ಮದ ಪ್ರೋತ್ಸಾಹಕರಾಗಿದ್ದು, ಹಲವು ದೇವಾಲಯಗಳನ್ನು ನಿರ್ಮಿಸಿದರು. ಆರಂಭದ ಗಂಗ ದೊರೆಗಳು ಹಿಂದೂಧರ್ಮದ ಅನುಯಾಯಿಗಳಾಗಿದ್ದುದು ತಿಳಿದುಬರುತ್ತದೆ. ನಂತರದ ಗಂಗ ದೊರೆಗಳು ಜೈನ ಧರ್ಮಕ್ಕೆ ಗಣನೀಯ ಪ್ರೋತ್ಸಾಹ ನೀಡಿದರು. 8ನೇ ಶತಮಾನದಲ್ಲಿ ಗಂಗರ ರಾಜಧಾನಿಯಾಗಿದ್ದ ಬೆಂಗಳೂರು ಜಿಲ್ಲೆಯ 'ಮನ್ನೆ'ಯು ಮೇಲುಕೋಟೆಗೆ ದೂರದಲ್ಲಿಲ್ಲ. ಗಂಗರ ಕಾಲದ ಹಲವು ಶಾಸನಗಳು ಮೇಲುಕೋಟೆಯ ಸುತ್ತಲಿನ ಭಾಗಗಳಲ್ಲಿ ಲಭ್ಯವಾಗಿವೆ. ಮೇಲುಕೋಟೆಯಲ್ಲಿ ಅಲ್ಲಲ್ಲಿ ಚದುರಿರುವ ಗಂಗರ ಕಾಲದ ಕಂಬಗಳನ್ನು ನೋಡಬಹುದು. ಗಂಗರ ರಾಜಧಾನಿಯಾಗಿದ್ದ 'ತಲಕಾಡು' ಮಂಡ್ಯ ಜಿಲ್ಲೆಗೆ ಸೇರಿದ್ದು ಮೇಲುಕೋಟೆಗೆ ಸಮೀಪದಲ್ಲಿದೆ. ಇವರ ಅವಧಿಯಲ್ಲಿ ಜೈನ ಧರ್ಮವು ಹೆಚ್ಚಿನ ಪ್ರೋತ್ಸಾಹ ಪಡೆದಿದ್ದರೂ, ಹಿಂದೂ ದೇವಾಲಯಗಳಿಗೆ ದಾನ ನೀಡುವ ಮೂಲಕ ರಾಜರು ಔದಾರ್ಯ ತೋರಿದ್ದರು. ಇವರು ವೈಷ್ಣವ ದೇವಾಲಯಗಳ ಬಗ್ಗೆ ಮೃದುಧೋರಣೆ ಹೊಂದಿದ್ದರು.[27]

ಕ್ರಿ.ಶ. 10ನೇ ಶತಮಾನದಲ್ಲಿ ಚೋಳದೊರೆ ರಾಜರಾಜನಿಂದ ಗಂಗರು ತಮ್ಮ ಪ್ರಾಬಲ್ಯ ಕಳೆದುಕೊಂಡರು ನಂತರದ ದಿನಗಳಲ್ಲಿ ಚೋಳರು ಈ ಪ್ರದೇಶದಲ್ಲಿ ಪ್ರಬಲರಾದಂತೆ ಗಂಗರು ಇತಿಹಾಸದಿಂದ ಮರೆಯಾದರು. ದಕ್ಷಿಣಭಾರತದ ಚೋಳರಾಜ್ಯವ್ಯವಸ್ಥೆಯಲ್ಲಿ ತಾವು ಆಕ್ರಮಿಸಿದ ಪ್ರದೇಶಗಳಲ್ಲಿ ಚೋಳರ ಹೆಸರುಗಳನ್ನು ಇಡುತ್ತಾರೆ. ಮತ್ತು ಆಡಳಿತ ಹಾಗೂ ಸಂಸ್ಕೃತಿಗಳಲ್ಲಿ ತಮ್ಮ ಮೂಲ ಆಡಳಿತದ ನಿಯಮಗಳನ್ನು ಪರಿಚಯಿಸುತ್ತಾರೆ. ಉದಾಹರಣೆಗೆ ಇಲ್ಲಿನ ಹಲವು ಅಗ್ರಹಾರಗಳು ಹಾಗೂ ದೇವಾಲಯಗಳು ಅಂದಿನ ಸಮಕಾಲೀನ ತಮಿಳುನಾಡಿನ ಅಗ್ರಹಾರ ಮತ್ತು ದೇವಾಲಯಗಳ ಮಾದರಿಯಲ್ಲಿಯೇ ರೂಪಿತವಾದವು. ತಮಿಳು ಸಂಸ್ಕೃತಿಯು ಇವರ ಕಾಲದಲ್ಲಿ ಇಲ್ಲಿಗೆ ಪರಿಚಯಿಸಲ್ಪಟ್ಟಿತು. ಕರ್ನಾಟಕ ಮತ್ತು ಮೇಲುಕೋಟೆ ಇತಿಹಾಸದಲ್ಲಿ ಶ್ರೀ ವೈಷ್ಣವ ಮತದ ಬೆಳವಣಿಗೆಯಲ್ಲಿ ಈ ಅವಧಿಯು ಹೆಚ್ಚಿನ ಮಹತ್ವ ಹೊಂದಿದೆ.

ಕ್ರಿ.ಶ. 1117ರ ತರುವಾಯ ಹೊಯ್ಸಳರು ಪ್ರಬಲರಾದರು ಮತ್ತು ಕರ್ನಾಟಕದ ಸಂಸ್ಕೃತಿಗೆ ವಿಶಿಷ್ಟತೆಯನ್ನು ಹಾಗೂ ಸಂಪತ್ತಿನ ಕ್ರೂಢೀಕರಣವನ್ನು ತಮ್ಮ ಎರಡೂವರೆ ಶತಮಾನಗಳ ಆಡಳಿತಾವಧಿಯಲ್ಲಿ ಉಂಟು ಮಾಡಿದರು. ಹೊಯ್ಸಳರು ಗಳಿಸಿದ ಸಂಪತ್ತಿನಿಂದ ಸಾಂಸ್ಕೃತಿಕ ಕ್ಷೇತ್ರಕ್ಕೆ ಏನೆಲ್ಲಾ ಮಾಡಬಹುದು ಎಂಬುದನ್ನು ತೋರಿಸಿದರು. ಅದನ್ನು ತಮ್ಮ ತಾಯ್ನಾಡಿನಲ್ಲಿ ದೇವಾಲಯಗಳನ್ನು ನಿರ್ಮಿಸುವ ಮೂಲಕ ವ್ಯಕ್ತಪಡಿಸಿದರು. ಹೊಯ್ಸಳ ಶೈಲಿ ಎಂದೇ ಕರೆಯಲ್ಪಡುವ ಶೈಲಿಯಲ್ಲಿ ವೈಭವಪೂರ್ಣ ವಾಸ್ತುಶಿಲ್ಪವುಳ್ಳ ನೂರಾರು ದೇವಾಲಯಗಳು ನಿರ್ಮಾಣಗೊಂಡವು. ಬೇಲೂರು, ಹಳೇಬೀಡು, ಮೇಲುಕೋಟೆ ಹಾಗೂ ಸೋಮನಾಥಪುರಗಳೇ ಇದಕ್ಕೆ ನಿದರ್ಶನಗಳು. ಚೋಳರ ಕಾಲದಲ್ಲಿ ತಮಿಳು ಸಂಸ್ಕೃತಿಯಿಂದ ಪ್ರಭಾವಿತವಾಗಿದ್ದ ಪ್ರದೇಶಗಳಲ್ಲಿ ಮತ್ತೊಮ್ಮೆ ಕನ್ನಡ ಸಂಸ್ಕೃತಿಯ ಪುನರುಜ್ಜೀವನಕ್ಕೆ ಹೊಯ್ಸಳರ ದೊರೆ ವಿಷ್ಣುವರ್ಧನನು ಕಾರಣನಾದನು. ಏನೇ ಆದರೂ ಈ ಸಂಸ್ಕೃತಿಯ ಗಮನಾರ್ಹ ಅಂಶವೆಂದರೆ ತಮಿಳು ಸಂಸ್ಕೃತಿಯ ಹಲವು ಅಂಶಗಳು ಮಿಳಿತವಾದುದು. ತಮಿಳುನಾಡಿನಿಂದ ವಲಸೆ ಬಂದ ಶ್ರೀ ವೈಷ್ಣವರು ಇಲ್ಲಿ ನೆಮ್ಮದಿಯ ಆಶ್ರಯ ಪಡೆದುದು ಇದಕ್ಕೆ ಕಾರಣವಾಯಿತು. ವಿಷ್ಣುವರ್ಧನನು ರಾಮಾನುಜರ ಸಂಪರ್ಕದಿಂದ ಶ್ರೀ ವೈಷ್ಣವಮತವು ಪ್ರೋತ್ಸಾಹಗೊಂಡಿತು. ದೇವಾಲಯ ಪೂಜೆ ಮತ್ತು ಆಚರಣೆಗಳನ್ನು ಪ್ರತಿಪಾದಿಸಿದ ರಾಮಾನುಜರ ನಿಲುವಿಗೆ ದೇವಾಲಯ ನಿರ್ಮಾಣದ ಮೂಲಕ ಹೊಯ್ಸಳರು ಆಧಾರವಾಗಿ ನಿಂತು. ಮೇಲುಕೋಟೆಯ ಪ್ರಸಿದ್ಧಿಗೆ ಕಾರಣರಾದರು. ಮೇಲುಕೋಟೆಯ ಗಿರಿಶ್ರೇಣಿಗೆ ಹೊಂದಿಕೊಂಡಂತೆಯೇ ಇರುವ ತೊಂಡನೂರು ಹೊಯ್ಸಳರ ಇತಿಹಾದಲ್ಲಿ ಮಹತ್ವದ ಪಾತ್ರ ವಹಿಸಿದೆ. 12ನೇ ಶತಮಾನದ ಮೊದಲರ್ಧದಲ್ಲಿ ತೊಂಡನೂರು ವಿಷ್ಣುವರ್ಧನ ರಾಜಧಾನಿಯಾಗಿತ್ತು. ತೊಂಡನೂರಿನಲ್ಲಿ ವಿಷ್ಣುವರ್ಧನನ

ಕಾಲದಲ್ಲಿ ನಿರ್ಮಾಣವಾದ ಮೂರು ದೇವಾಲಯಗಳಿವೆ. ಮೇಲುಕೋಟೆ ದೇವಾಲಯ ಸಂಕೀರ್ಣವು ಹೊಯ್ಸಳ ದೊರೆಗಳಿಂದ ನಿರ್ಮಾಣವಾಗಿ ಅವರಿಂದ ಪ್ರೋತ್ಸಾಹಗೊಂಡಿತು. ಹೊಯ್ಸಳರು ಮೇಲುಕೋಟೆಯ ಇತಿಹಾಸದಲ್ಲಿ ಪ್ರಮುಖ ಪಾತ್ರವಹಿಸಿದರು.

ಹೊಯ್ಸಳರ ಅವನತಿಯ ನಂತರ ದಕ್ಷಿಣ ಭಾರತದಲ್ಲಿ ತಲೆಯೆತ್ತಿದ ವಿಜಯನಗರ ಸಾಮ್ರಾಜ್ಯವು ಈ ಪ್ರಾಂತ್ಯದ ಇತಿಹಾಸದಲ್ಲಿ ಗುರುತರ ಪಾತ್ರವಹಿಸಿತು. ಈ ಕಾಲದಲ್ಲಿ ಜೈನರು ಮತ್ತು ವೈಷ್ಣವರ ನಡುವೆ ಗಂಭೀರ ಸಂಘರ್ಷಗಳು ನಡೆಯುತ್ತಿದ್ದವು. ಮೇಲುಕೋಟೆಯು ಒಂದು ಮುಖ್ಯ ಶ್ರೀ ವೈಷ್ಣವ ಕೇಂದ್ರವಾಗಿತ್ತು. ಇವರ ಕಾಲದಲ್ಲಿ ಮೇಲುಕೋಟೆಯು ಸೇರಿದಂತೆ ಈ ಭಾಗವನ್ನು ದಂಡನಾಯಕರ ಕುಟುಂಬವು ನಿಯಂತ್ರಿಸುತ್ತಿತ್ತು. ಈ ಕುಟುಂಬದ ತಿಮ್ಮಣ್ಣ ದಣ್ಣಾಯಕನು ಮೇಲುಕೋಟೆ ದೇವಾಲಯ ಸಂಕೀರ್ಣವನ್ನು ವಿಸ್ತರಿಸಿದ್ದಲ್ಲದೆ ಮೊದಲಿನ ಸ್ಥಿತಿಗೆ ತರುವಲ್ಲಿ ಯಶಸ್ವಿಯಾದನು. ಈ ಕುಟುಂಬವು 15ನೇ ಶತಮಾನದ ಅಂತ್ಯದವರೆಗೂ ಆಡಳಿತ ನಡೆಸಿತು. ತಿಮ್ಮಣ್ಣ ದಣ್ಣಾಯಕನು ಮೇಲುಕೋಟೆ ವೈಭವವನ್ನು ಇಮ್ಮಡಿಗೊಳಿಸಿದರನು.[28]

ತಮಗೆ ತಿಳಿದಿರುವಂತೆ ದಕ್ಷಿಣ ಭಾರತದ ಇತಿಹಾಸದಲ್ಲಿ ದೇವಾಲಯಗಳು ಮಹತ್ವದ ಸಾಂಸ್ಕೃತಿಕ ಕೇಂದ್ರಗಳಾಗಿ ಮಾರ್ಪಾಟಾದುದು ವಿಜಯನಗರದ ಕಾಲದಲ್ಲಿ. ಹಿಂದೂ ಧಾರ್ಮಿಕ ಕೇಂದ್ರಗಳು ಶ್ರದ್ಧೆಯ ಮತ್ತು ವೈಭವದ ಬೆಳವಣಿಗೆಯನ್ನು ಕಂಡವು. ಇವರ ಕಾಲದಲ್ಲಿ ದೇವಾಲಯಗಳ ವಿಸ್ತೀರ್ಣದಲ್ಲಿ ಗೋಪುರಗಳ ರಚನೆಯಲ್ಲಿ ಗುರುತರ ಬದಲಾವಣೆಗಳಾದವು. ಹಲವು ಸುಂದರವಾದ ಮಂಟಪಗಳು ಹಾಗೂ ಹಲವು ಸಹಾಯಕ ಕಟ್ಟಡಗಳ ನಿರ್ಮಾಣದಲ್ಲಿ ವಿಸ್ತಾರವಾಯಿತು. ಈ ದೇವಾಲಯಗಳು ಹೆಚ್ಚಿನ ಭೂಧಾನಗಳು, ಹಣ ಮತ್ತು ಇತರ ಸಂಪತ್ತಿನ ದಾನಗಳಿಂದ ವೈಭವದ ಉತ್ಸವಗಳು ಮತ್ತು ಆಚರಣೆಗಳನ್ನು ವಿಸ್ತರಿಸಲಾರಂಭಿಸಿದವು. ಸಂಗೀತ, ನಾಟಕ, ನೃತ್ಯ, ಇನ್ನಿತರ ಕಲೆಗಳು ಪ್ರೋತ್ಸಾಹಿತಗೊಂಡವು. ಈ ಎಲ್ಲಾ ಲಕ್ಷಣಗಳ ಬೆಳವಣಿಗೆಯು ಮೇಲುಕೋಟೆ ದೇವಾಲಯ ಸಂಕೀರ್ಣದ ಮೂಲಕವೂ ವ್ಯಕ್ತವಾದುದನ್ನು ನೋಡಬಹುದು. ಇವರ ಅವಧಿಯಲ್ಲಿ ಮೇಲುಕೋಟೆ ದೇವಾಲಯಗಳು ಹಾಗೂ ಶ್ರೀ ವೈಷ್ಣವಮತವು ಉನ್ನತ ಆಶ್ರಯವನ್ನು ಪಡೆದು ಈ ಪ್ರಾಂತ್ಯದ ಒಂದು ಪ್ರಬಲ ಧಾರ್ಮಿಕ ಕೇಂದ್ರವಾಯಿತು.

ಕ್ರಿ.ಶ. 1578ರಲ್ಲಿ ಮೈಸೂರಿನ ಒಡೆಯರು ಸ್ವತಂತ್ರ್ಯವಾಗಿ ಆಡಳಿತ ಆರಂಭಿಸಿದರು. ರಾಜಒಡೆಯರು ಮೇಲುಕೋಟೆ ನಾರಾಯಣಸ್ವಾಮಿಯ ಭಕ್ತರಾಗಿದ್ದರು. ಇವರು ದೇವಾಲಯಕ್ಕೆ ಹಲವು ದಾನದತ್ತಿಗಳನ್ನು ನೀಡಿದ್ದಾರೆ. ನಾರಾಯಣಸ್ವಾಮಿ ದೇವಾಲಯದ

ಮಹಾಮಂಟಪದ ಕಂಬದಲ್ಲಿ ರಾಜಒಡೆಯರ ಮೂರ್ತಿಯನ್ನು ನೋಡಬಹುದು. ಮೇಲುಕೋಟೆ ದೇವಾಲಯ ಸಂಕೀರ್ಣದ ಇಂದಿನ ಸಂಪತ್ತು ಹಾಗೂ ವೈಭವವು ಮೈಸೂರಿನ ಒಡೆಯರ ಔದಾರ್ಯದಿಂದಲೇ ಬಂದಿರುವುದರಲ್ಲಿ ಸಂಶಯವಿಲ್ಲ. 18ನೇ ಶತಮಾನದ ಮಧ್ಯಭಾಗದಲ್ಲಿ ಮೈಸೂರು ಪ್ರಾಂತ್ಯದ ಮೇಲೆ ಮರಾಠರ ದಾಳಿಯಾಯಿತು. ಆದರೆ ನಂಜರಾಜಯ್ಯನಿಂದ ಸೋತು ಹಿಮ್ಮೆಟ್ಟಿದರು. ನಂತರ ಹೈದರಾಲಿ ಪ್ರಬಲನಾಗಿ ಕ್ರಿ.ಶ. 1761–1782ರ ವರೆಗೆ ಮೈಸೂರಿನ ಆಡಳಿತ ನಡೆಸಿದನು. ಈತನು ಮರಾಠರು ಮತ್ತು ಬ್ರಿಟಿಷರೊಂದಿಗೆ ಹಲವು ಯುದ್ಧಗಳನ್ನು ಮಾಡಿದನು. ಕ್ರಿ.ಶ. 1769ರಲ್ಲಿ ಮೇಲುಕೋಟೆ ಗಿರಿಶ್ರೇಣಿಯ ಸಮೀಪದಲ್ಲಿ ಮರಾಠರೊಂದಿಗೆ ಯುದ್ದಮಾಡಿ ಅವರನನು ಹಿಮ್ಮೆಟ್ಟಿಸಿದನು. ಹೈದರಾಲಿಯಿಂದ ಸೋತ ಮರಾಠರು ಮೇಲುಕೋಟೆಯನ್ನು ಲೂಟಿ ಮಾಡಿದರು. ಗುರುತು ಸಿಗದ ಹಾಗೆ ಇಲ್ಲಿನ ಧರ್ಮಕೇಂದ್ರಗಳನ್ನು ಸುಟ್ಟು ಹಾಕಿದರಲ್ಲದೆ ತೇರುಗಳಿಗೂ ಬೆಂಕಿಯಿಟ್ಟು, ಅದರ ಕಬ್ಬಿಣದ ಭಾಗವನ್ನು ಸಾಗಿಸಿದರು ಎನ್ನಲಾಗಿದೆ.[29] ನಂತರ ಬಂದ ಟಿಪ್ಪು ಸಹ ಹಿಂದೂ ದೇವಾಲಯಗಳಿಗೆ ಉದಾರ ಪ್ರೋತ್ಸಾಹ ನೀಡಿದನು. ಶಾಸನಗಳು ತಿಳಿಸುವಂತೆ ಟಿಪ್ಪು ಮೇಲುಕೋಟೆ ದೇವಾಲಯಕ್ಕೆ 12 ಆನೆಗಳು, ನಗಾರಿ ಮತ್ತು ಆಭರಣಗಳನ್ನು ದಾನ ನೀಡಿದ್ದಾನೆ. ಟಿಪ್ಪುವಿನ ಮರಣದ ನಂತರ ಬ್ರಿಟಿಷರು, ನಿಜಾಮ ಮತ್ತು ಮರಾಠರು ಮೈಸೂರು ರಾಜ್ಯವನ್ನು ಹಂಚಿಕೊಂಡರು. ಬ್ರಿಟಿಷರು ಮೈಸೂರಿನ ಒಂದು ಭಾಗವನ್ನು ಮೈಸೂರು ಒಡೆಯರ ವಂಶಸ್ಥರಿಗೆ ನೀಡಿದರು. ಈ ಭಾಗವು ಮೈಸೂರು ಅರಸರಿಂದ ಆಳ್ವಿಕೆಗೊಳಪಟ್ಟು, 1956ರ ರಾಜ್ಯ ಪುನರ್ ವಿಂಗಡಣೆಯಾಗುವವರೆಗೂ ಮುಂದುವರೆಯಿತು.

ಮುಮ್ಮಡಿ ಕೃಷ್ಣರಾಜ ಒಡೆಯರು ಧರ್ಮ, ಕಲೆ ಹಾಗೂ ಸಾಹಿತ್ಯದ ಆಶ್ರಯದಾತರಾಗಿದ್ದರು. ಮೇಲುಕೋಟೆ ದೇವಾಲಯ ಸಂಕೀರ್ಣವು ಇವರ ಪ್ರೋತ್ಸಾಹದಿಂದ ಉದಾರ ದಾನದತ್ತಿಗಳನ್ನು ಪಡೆಯಿತು. ಇವರು 1831ರಲ್ಲಿ ಬ್ರಿಟಿಷರಿಂದ ಮೈಸೂರು ರಾಜ್ಯವು ಹಿಂದಕ್ಕೆ ಪಡೆಯುವವರೆಗೂ ಅಧಿಕಾರದಲ್ಲಿದ್ದರು. ಆದರೂ ಒಡೆಯರು ಧರ್ಮ ಮತ್ತು ಸಂಸ್ಕೃತಿಗೆ ತಮ್ಮ ಪ್ರೋತ್ಸಾಹವನ್ನು 1868ರ ತಮ್ಮ ಸಾವಿನವರೆಗೂ ಮುಂದುವರೆಸಿದರು. ಬ್ರಿಟಿಷರು ರಾಜ್ಯದ ಧಾರ್ಮಿಕ ಸಂಸ್ಥೆಗಳ ವಿಚಾರದಲ್ಲಿ ತಲೆಹಾಕಲಿಲ್ಲ. ಈ ಅವಧಿಯು ಹೆಚ್ಚಿನ ಆಸಕ್ತಿಯಿಂದ ಕೂಡಿಲ್ಲ. ಹೀಗೆ ಮೇಲುಕೊಟೆಯು ಹಲವು ರಾಜರ ಉದಾರ ಪ್ರೋತ್ಸಾಹದಿಂದ ಒಂದು ಮಹತ್ವದ ಶ್ರೀ ವೈಷ್ಣವ ಧಾರ್ಮಿಕ ಕೇಂದ್ರವಾಯಿತು.

ದೇವಾಲಯಗಳ ಉಗಮ ಮತ್ತು ಪ್ರಾಚೀನತೆ

ದೇವಾಲಯ : ಪ್ರತಿಮೆಗೊಂದು ನೆಲೆಯಾಗಿ, ಸಾರ್ವಜನಿಕ ಸಮಾವೇಶಕ್ಕೊಂದು ಸ್ಥಳವಾದ ಕಟ್ಟಡಗಳೇ ದೇವಾಲಯ. ದೇವಸ್ಥಾನ, ಗುಡಿ, ದೇವಮಂದಿರ, ದೇವಾಗಾರ, ದೇವಳ, ದೇಗುಲ ಇತ್ಯಾದಿ ಹೆಸರುಗಳೂ ಇರುವ ದೇವಾಲಯದ ವಿಕಾಸದ ವಿವಿಧ ಹಂತಗಳನ್ನು ಗುರುತಿಸುವುದು ಸಾಧ್ಯವಾಗಿಲ್ಲ. ದೇವಾಲಯಗಳು ಬೌದ್ಧ ಸ್ತೂಪಗಳಿಂದ ಉಗಮವಾದುವೆ? ವೇದಕಾಲೀನ ಯಜ್ಞವೇದಿಕೆಗಳಿಂದ ಬೆಳೆದುಬಂದುವೆ? ಸಮಾಧಿ ಮಂದಿರಗಳಾಗಿ ಆರಂಭವಾದುವೆ? ಇಂತಹ ಹಲವಾರು ಪ್ರಶ್ನೆಗಳಿಗೆ ಸಮಂಜಸವಾದ ಉತ್ತರ ಇನ್ನೂ ದೊರೆತಿಲ್ಲ.

ಪ್ರಕೃತಿಪೂಜೆ : ಮನುಷ್ಯನು ತಾನು ದೇವರೆಂದು ನಂಬಿರುವ ಶಕ್ತಿಗೆ, ತಾನೇ ಕಲ್ಪಿಸಿಕೊಂಡ ವಿಗ್ರಹಕ್ಕೆ ಕಾಯಾ, ವಾಚಾ, ಮನಸಾ, ಪೂಜೆ ಸಲ್ಲಿಸುವ ವಿಧಾನ ಹೊಸದೇನಲ್ಲ. ತಾನು ಕಂಡಿರದ, ತನಗಿಂತ ಬಲಿಷ್ಠವೆಂದು ತಿಳಿದ, ಮುನಿದರೆ ಕೆಡುಕನ್ನು, ಒಲಿದರೆ ಒಳಿತನ್ನೂ ಮಾಡುವುದೆಂದು ತಿಳಿದಿರುವ ದೇವರ ಬಗೆಗಿನ ಭಯವೋ, ಭಯಮಿಶ್ರಿತ ಗೌರವವೋ ಪೂಜೆಗೆ ಕಾರಣವಾಗಿರಬೇಕು. ತನ್ನ ಸುತ್ತಲಿನ ನಿಸರ್ಗದ ಸಿಡಿಲು, ಮಿಂಚು, ಬಿರುಗಾಳಿ, ಪ್ರವಾಹ, ಕಾಳ್ಗಿಚ್ಚು, ಭೂಕಂಪ ಮೊದಲಾದ ಅದ್ಭುತ ಕ್ರಿಯೆಗಳು ಆದಿ ಮಾನವನಲ್ಲಿ ವಿಶೇಷವಾದ ಅಚ್ಚರಿಯನ್ನೂ, ಭಯವನ್ನೂ ಹುಟ್ಟಿಸಿರಬೇಕು. ಪ್ರಕೃತಿಯನ್ನೇ ಆರಾಧಿಸುತ್ತಿದ್ದ ಮಾನವ. ಪ್ರಕೃತಿಯ ಈ ವಿಕೋಪಗಳನ್ನು ಕಂಡು ಹೆದರಿ, ತನ್ನನ್ನು ಕಾಯುವ ಶಕ್ತಿಗಾಗಿ ಮೊರೆಹೋಗಿರಬೇಕು. ತನ್ನನ್ನು ಬೆದರಿಸುವ ಹುಲಿ, ಸಿಂಹ, ಸರ್ಪ, ಆನೆ, ಮೊದಲಾದ ಪ್ರಾಣಿಗಳನ್ನು ವೈಭವೀಕರಿಸಿ ಅದಕ್ಕೆ ದೇವತ್ವದ ಕಲ್ಪನೆ ಆರೋಪಿಸಿ ಪೂಜಿಸಲಾರಂಭಿಸಿರಬಹುದು. ದೇವತೆಗಳ ಹುಟ್ಟಿಗೆ ಮನುಷ್ಯನಲ್ಲಿದ್ದ ಭಯವೇ ಮೂಲಕಾರಣವಾಗಿದೆ. ಅದ್ಭುತವಾಗಿರುವುದನ್ನು ತನ್ನ ಅರಿವಿನೊಳಗೆ ತೂರಿಸಿಕೊಳ್ಳಬೇಕು ಎನ್ನುವ ಹಂಬಲ ಮನುಷ್ಯನಿಗೆ ಹಿಂದಿನಿಂದಲೂ ಇದೆ.

ಬಾ.ರಾ.ಗೋಪಾಲ್ ಅವರ ಪ್ರಕಾರ 'ಅಂದಿನ ಮಾನವ ಪ್ರಕೃತಿಯನ್ನು ಅವಲಂಬಿಸಿದ್ದು, ಆಹಾರಕ್ಕಾಗಿ ಮೃಗಗಳಂತೆ ಪ್ರಕೃತಿಯನ್ನೇ ಅವಲಂಬಿಸಿದ್ದನು. ಹಣ್ಣು ಸಿಗದಿದ್ದಾಗ ಪ್ರಾಣಿಗಳನ್ನೇ ಆಹಾರ ಮಾಡಿಕೊಂಡನು. ಬೇಟೆಯು ಆಹಾರ ಗಳಿಸುವ ಏಕಮೇವ ವಿಧಾನವಾಯಿತು. ಯಾರೋ ಒಬ್ಬ ಪ್ರಾಣಿಯನ್ನು ಹೊಡೆಯಲು ಕಲ್ಲನ್ನು ಎಸೆದಿರಬೇಕು. ಅಂದಿನಿಂದ ಕಲ್ಲು ಆಯುಧವಾಯಿತು. ಬೆಂಕಿಯ ಉಪಯೋಗದಿಂದ ಹಸಿ ಮಾಂಸಕ್ಕಿಂತ ಬೇಯಿಸಿದ ಮಾಂಸ ರುಚಿಕರವೆನಿಸಿತು. ವ್ಯವಸಾಯ ತಿಳಿದ ಮೇಲೆ ಒಂದು

ಕ್ರಾಂತಿಯೇ ಆಯಿತು. ಹೀಗೆ ನಂಬಿಕೆಗಳು ಕಲ್ಪನಾ ರೂಪಗಳನ್ನು ಪಡೆದಿದ್ದರಿಂದ ಅದ್ಭುತಗಳ ವ್ಯಕ್ತೀಕರಣ ಉಂಟಾಗಲು ಕಾರಣವಾಯಿತು.[31]

ಪಿತೃಪೂಜೆ : ಸತ್ತವನಿಗೊಂದು ಬದುಕಿದೆ, ಆ ಬದುಕು ಉಳಿದಿರುವವರ ಮೇಲೆ ಪ್ರಭಾವ ಬೀರುತ್ತದೆ ಎಂಬ ನಂಬಿಕೆಯಿಂದ ಪಿತೃಪೂಜೆ ಆರಂಭವಾಗಿರಬೇಕು. ಇಲ್ಲಿ ಮರಣಿಸಿದ ಹಿರಿಯನ ಬಗೆಗಿನ ಪರೋಕ್ಷ ವಿನಯ ಮತ್ತು ಗೌರವವಷ್ಟೇ ಪೂಜೆ ಎಂದು ತಿಳಿಯಬೇಕಾಗುತ್ತದೆ. ಹಾಗೆ ಪೂಜೆಗೊಂಡ ಪಿತೃವಿನ ಸಮಾದಿ, ಆ ಸಮಾಧಿಯ ಮೇಲೆ ಗುರುತಿಗೆ ನೆಟ್ಟಕಲ್ಲು, ಬೆಳೆದ ಮರಗಳು ಪಿತೃವನ್ನು ಪ್ರತಿನಿಧಿಸುವ ಸಂಕೇತಗಳಾಗಿ ಪೂಜೆಗೊಂಡಿರಬೇಕು. ವ್ಯಕ್ತಿಯ ಮರಣದ ವಾರ್ಷಿಕ ತಿಥಿಯಂದು ಶ್ರಾದ್ಧ, ಪಿತೃಪಕ್ಷದ ಆಚರಣೆ, ಪೂಜೆ–ಧೂಪ ಹಾಕುವುದು, ಇವು ಭಾರತೀಯ ಸಂಸ್ಕೃತಿಯಲ್ಲಿ ಪಿತೃಪೂಜೆಯು ಇನ್ನೂ ಉಳಿದು ಬಂದಿರುವುದನ್ನು ಸ್ಪಷ್ಟಪಡಿಸುತ್ತದೆ. ಈ ಹಿನ್ನೆಲೆಯಲ್ಲಿ ವೇದಕಾಲಿನ ಯಾಗ–ಯಜ್ಞಗಳ ವಿವೇಚನೆಯೂ ಅವಶ್ಯಕವಾಗುತ್ತದೆ.

ವೈದಿಕ ಸ್ತೂಪ–ಚೈತ್ಯ

ವೇದಗಳ ಕಾಲದಲ್ಲಿ 'ಅಗ್ನಿದ್ರಿಯ' ಎಂಬ ಸಮಾಧಿ ಮಂದಿರಗಳು ಇದ್ದುವು ಎಂದು ತಿಳಿಯಲಾಗಿದೆ. ಇವುಗಳ ಬಗ್ಗೆ ಸಾಕಷ್ಟು ದಾಖಲೆಗಳು ಲಭ್ಯವಾಗಿಲ್ಲ. ಅಗ್ನಿದ್ರಿಯಗಳೇ ಮೂಲ ಎಂಬ ನಿರ್ಧಾರಕ್ಕೂ ಕೆಲವು ವಿದ್ವಾಂಸರು ಬಂದಿದ್ದಾರೆ.[32] ವೇದಕಾಲೀನ ಯಾಗ–ಯಜ್ಞಗಳೆಲ್ಲವೂ ಪಿತೃಪೂಜೆಯ ಮತ್ತೊಂದು ಮುಖವೆಂದೇ ಭಾವಿಸಿದರೆ ತಪ್ಪಾಗಲಾರದು ಸಮಾಧಿ ಶಬ್ದಕ್ಕೆ ಧ್ಯಾನಸ್ಥಿತಿ ಎಂಬ ಅರ್ಥವಿದೆ. ಸತ್ತ ವ್ಯಕ್ತಿಯು ಧ್ಯಾನ ಸ್ಥಿತಿಯಲ್ಲಿದ್ದಾನೆಂದೇ ತಿಳಿದು ಅವನ ದೇಹವನ್ನು ಹೂಳಿದ ಸ್ಥಳವನ್ನು 'ಸಮಾಧಿ' ಎಂದೇ ಕರೆದಿರಬೇಕು. 'ಸಮಾಧಿ'ಯಲ್ಲಿ ಧ್ಯಾನಸ್ಥಿತಿಯೇ ಪ್ರಧಾನವಾಗುವುದರಿಂದ (ಗುರುಗಳ) ಶವಸಂಸ್ಕಾರ ಮಾಡಿದ ಸ್ಥಳಗಳು ಮಾತ್ರ 'ಸಮಾಧಿ'ಯಾಗುವ ಸಾಧ್ಯತೆಗಳು ಹೆಚ್ಚು. ಈ ಸಾಧ್ಯತೆಯನ್ನು ಒಂದು ಗುಂಪಿನ, ಗ್ರಾಮದ ಹಿತಕ್ಕಾಗಿ ಮರಣಿಸಿದ ನಾಯಕನತ್ತ, ಸ್ವಲ್ಪಮಟ್ಟಿಗೆ ವಿಸ್ತರಿಸಬಹುದು. ಅಷ್ಟೇ ಹೊರತು 'ಸಮಾಧಿ' ಸಾರ್ವತ್ರಿಕವಾಗುವುದಿಲ್ಲ.

'ಚಿತಿ'ಯಿಂದ 'ಚಿತೆ', ಚಿತೆಯಿಂದ 'ಚೈತ್ಯ' ಎಂಬ ಅಭಿಪ್ರಾಯವನ್ನು ಕೆಲವು ವಿದ್ವಾಂಸರು ಸೂಚಿಸಿದ್ದಾರೆ.[33] ಹೆಣವನ್ನು ಸುಡಲು ಸಿದ್ಧಮಾಡಿದ ಬೆರಣಿಯ ರಾಶಿಯನ್ನು 'ಚಿತಿ' ಎಂದು ಅರ್ಥೈಸಲಾಗಿದೆ. ಹಾಗೆ ಸಿದ್ಧಮಾಡಿದ 'ಚಿತೆ'ಯು 'ಚಿತೆ'ಯಾಗಿ ಶವವನ್ನು ಸುಟ್ಟ ನಂತರ ಉಳಿದ ಬೂದಿ, ಮೂಳೆ ಇತ್ಯಾದಿ ಅವಶೇಷಗಳನ್ನು ರಕ್ಷಿಸಿ ಪೂಜಿಸಿದ ಸ್ಥಳಗಳೇ ಚೈತ್ಯಗಳು. ಈ ಎಲ್ಲಾ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಪಾಶ್ಚಾರಿತ್ರಿಕ ಯುಗದ

ಜನರಲ್ಲಿ 'ಪಿತೃಪೂಜೆ' ಬೆಳೆದು ಉಳಿಯಿತಾದರೂ, ಸಮಾಧಿ ಪೂಜೆ ಸಾರ್ವತ್ರಿಕವಾಗಲಿಲ್ಲ ಎಂದು ತಿಳಿಯಬಹುದು.

ಸಿಂಧೂ ನಾಗರೀಕತೆ–ದೇವರುಗಳು

ಸಿಂಧೂ ನದಿಯ ಬಯಲಿನ ನಾಗರೀಕತೆಯ ಬಗೆಗೆ ಅಧ್ಯಯನ ಇನ್ನು ಮುಂದುವರೆದಿದ್ದು. ಅಂತಿಮ ನಿರ್ಧಾರ ಎನ್ನುವ ಹಂತಕ್ಕೆ ಇನ್ನೂ ತಲುಪಿಲ್ಲ ಎಸ್.ಆರ್.ರಾವ್ ಅವರ ಅಭಿಪ್ರಾಯದಂತೆ ಸಿಂಧೂನದಿಯ ಬಯಲಿನ ನಾಗರೀಕತೆಯ ಕಾಲ ವೇದಪೂರ್ವ ದ್ರಾವಿಡರ ಕಾಲಕ್ಕೆ ಸೇರುತ್ತದೆ. ಈ ನಾಗರೀಕತೆಯ ಕಾಲ ಕ್ರಿ.ಪೂ. 2500 ರಿಂದ 1500 ಎಂಬ ಅಭಿಪ್ರಾಯದ ಬಗ್ಗೆ ಹೆಚ್ಚಿನ ಭಿನ್ನಾಭಿಪ್ರಾಯಗಳಿಲ್ಲ. ಭಾರತದಲ್ಲಿ ಕಾಲಕ್ಕಾಗಲೇ ಪ್ರತಿಮೆಗಳ ರಚನೆ ಆರಂಭವಾಗಿರುವುದನ್ನು ಅಲ್ಲಿ ದೊರೆತಿರುವ ಹಲವಾರು ಮುದ್ರೆಗಳು ಸ್ಪಷ್ಟಪಡಿಸಿವೆ.

ಸಿಂಧೂ ನದಿಯ ಬಯಲಿನ ಜನರಿಗೆ ಪ್ರತಿಮೆಗಳ ರಚನೆ ತಿಳಿದಿದ್ದುದು ಅಲ್ಲಿ ದೊರೆತಿರುವ ಹಲವಾರು ಮುದ್ರೆಗಳಿಂದ ಸ್ಪಷ್ಟವಾಗಿದೆ. ಅವು ಪೂಜೆಗೊಳ್ಳುತ್ತಿದ್ದವು ಎಂಬ ಆರ್.ಪಿ.ಚಂದಾ ಅವರ ಅಭಿಪ್ರಾಯವನ್ನು ಜೆ.ಎನ್.ಬ್ಯಾನರ್ಜಿ ತಮ್ಮ 'Development of Hindu Iconography' ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ.[34] ಅದೇ ವಿದ್ವಾಂಸರು ಉಲ್ಲೇಖಿಸಿರುವ ಮ್ಯಾಕ್ಸ್‌ಮುಲ್ಲರ್ ಅವರ ಅಭಿಪ್ರಾಯದಂತೆ ವೇದಕಾಲದ ಜನರಿಗೆ ಪ್ರತಿಮೆಗಳ ಪರಿಚಯವಿರಲಿಲ್ಲ. ಪ್ರತಿಮಾ ಪೂಜೆಯು ಅನಂತರದಲ್ಲಿ ಇಳಿಮುಖವಾಗುತ್ತಿದ್ದ ದೇವತಾ ಪೂಜೆಯ ಒಂದು ಹಂತ.[35] ಬಹುತೇಕ ವಿದ್ವಾಂಸರ ಅಭಿಪ್ರಾಯವು ಹೀಗೆಯೇ ಇದೆ. ಋಗ್ವೇದದಲ್ಲಿ ದೇವತೆಗಳ ಉಲ್ಲೇಕವಿದ್ದರೂ ಅವರನ್ನು ಸ್ತುತಿಸುವ, ಪ್ರಾರ್ಥಿಸುವ ಶ್ಲೋಕಗಳಿದ್ದರೂ, ಪ್ರತಿಮೆಗಳ ಪೂಜೆಯ ಅಥವಾ ದೇವಾಲಯಗಳ ಉಲ್ಲೇಖವಿಲ್ಲ.

ವೇದಕಾಲಿನ ದೇವರುಗಳು : ಇಂದ್ರ, ಅಗ್ನಿ, ವರುಣ, ರುದ್ರ, ವಿಷ್ಣು ಇತ್ಯಾದಿ ದೇವತೆಗಳನ್ನು ಶಾಂತಿ ಮತ್ತು ರಕ್ಷಣೆಗಾಗಿ ಸ್ತುತಿ ಮತ್ತು ಯಾಗ–ಯಜ್ಞಗಳ ಮೂಲಕ ಆರಾಧಿಸುತ್ತಿದ್ದ ವೇದಕಾಲದ ಸಂಸ್ಕೃತಿಯ ಜೊತೆಗೆ ಸಿಂಧೂ ನದಿಯ ಬಯಲಿನ ಜನರ ಪ್ರತಿಮಾ ಪೂಜೆಯ ಪದ್ಧತಿಯೂ ಸೇರಿ, ದೇವತೆಗಳಿಗೆ ಪ್ರತಿಮಾ ಸ್ವರೂಪ ಲಭ್ಯವಾಗಿರಬೇಕು. ಅಂತಹ ಪ್ರತಿಮೆಗಳು ರಕ್ಷಣೆಗಾಗಿ ನಡೆದ ಕಟ್ಟಡಗಳೇ ದೇವಾಲಯಗಳು ಎನಿಸಿಕೊಂಡಿರಬಹುದು.

ಪಿತೃಗಳಿಗೆ ನಿರ್ಮಿಸಿದ ಸಮಾಧಿಯ ಪೂಜೆ ಸಾರ್ವತ್ರಿಕವಾಗದೆ ಹಿಂದೆ ಸರಿದದ್ದು, ಚೈತ್ಯಗಳು ಗಳಿಸಿದ ಮನ್ನಣೆ, ಇಂದಿಗೂ ಒಂದಲ್ಲ ಒಂದು ರೀತಿ ಉಳಿದಿರುವ ಪಿತೃಪೂಜೆ, ಬಹುಶಃ ಸಮಾಧಿಗಳ ಮೇಲೆ ನೆಟ್ಟ ವೃಕ್ಷ, ಶಿಲೆಗಳಿಗೆ ಸಂದ ಪೂಜೆ, ಸಮಾಧಿಗಳ ಮತ್ತು ಚಿತೆಗಳ ಪರಿಕಲ್ಪನೆಯಿಂದಲೇ ನಂತರದ ಕಾಲದಲ್ಲಿ ಆಚರಣೆಗೆ ಬಂದ ಯಾಗ-ಯಜ್ಞ, ಸ್ತೂಪಗಳು, ಪುರಾಣಗ್ರಂಥಗಳಲ್ಲಿ, ಸ್ಥಳಪುರಾಣಗಳಲ್ಲಿ, ದಂತಕಥೆಗಳಲ್ಲಿ, ಶಾಸನಗಳಲ್ಲಿ ಮಾತ್ರ ಉಳಿದಿರುವ, ಈ ಅಸ್ತಿತ್ವದಲ್ಲಿಲ್ಲದಿರುವ ದೇವಾಲಯಗಳು, ಈಗ ಅಸ್ತಿತ್ವದಲ್ಲಿರುವ ಪ್ರಾಚೀನ ದೇವಾಲಯಗಳು-ಪರಸ್ಪರ ನಿರಂತರ ಸಂಬಂಧವನ್ನು ಎಲ್ಲೋ ಕಳೆದುಕೊಂಡು ಅಧ್ಯಯನವನ್ನು ಕ್ಲಿಷ್ಟಗೊಳಿಸಿದೆ.

ಸಾಮಾನ್ಯವಾಗಿ ಬಹುಮುಖ್ಯ ವ್ರತಗಳೆಲ್ಲವೂ ಶ್ರಾವಣದಿಂದ ಆರಂಭವಾಗಿ ಕಾರ್ತಿಕ ಮಾಸಕ್ಕೆ ಮುಗಿಯುತ್ತದೆ. ಇವುಗಳಲ್ಲಿ ಕೆಲವು ಸಾರ್ವತ್ರಿಕ ಸ್ವರೂಪ ಪಡೆದ ಹಬ್ಬಗಳು. ಉದಾಹರಣೆಗೆ ಗೌರಿಹಬ್ಬ, ಗಣೇಶನ ಹಬ್ಬ, ದೀಪಾವಳಿ ಹಬ್ಬ, ಕೆಲವು ಮಿತಿಗಳಿಗೆ ಒಳಪಟ್ಟು ಭೀಮನ ಅಮವಾಸ್ಯೆ, ಚತುರ್ದಶಿ, ವರಮಹಾಲಕ್ಷ್ಮಿ-ಇತ್ಯಾದಿ ವ್ರತಗಳೂ ಇವೆ. ಈ ಎಲ್ಲಾ ವ್ರತಗಳೂ ಪ್ರಕೃತಿಯ ಆರಾಧನೆಯ ಒಂದೊಂದು ಮುಖಗಳೇ ಆಗಿರುವುದನ್ನು ನಿರಾಕರಿಸುವಂತಿಲ್ಲ. ಇದಕ್ಕೆ ಕಾರಣ ನಮ್ಮ ಪ್ರಾಚೀನರ ಬದುಕಿನಲ್ಲಿ ಪಶುಪಾಲನೆ ಮತ್ತು ವ್ಯವಸಾಯಗಳು ಪಡೆದಿದ್ದ ಪ್ರಾಮುಖ್ಯತೆ. ಈ ಸಂದರ್ಭದಲ್ಲಿ ಡಾ.ಸದಾಶಿವ ಅಂಬಾದಾಸ್ ಡಾಂಗೆ ಅವರು 'Indus civilization and the vedic culture', ಎಂಬ ಲೇಖನದಲ್ಲಿ ಉಲ್ಲೇಖಿಸಿರುವ ಆಲ್ಕಾಟ್ ಅವರ ಅಭಿಪ್ರಾಯವು ಸಮರ್ಥನೀಯವಾಗಿದೆ. 'Among all people in the pastroral and agricultural stage of life the bull has a unique importance, and the deifination of the sun and the water is found universally.

ಪ್ರಕೃತಿ ಪೂಜೆಯೇ ಕಾಲಕಳೆದಂತೆ ಪಿತೃಪೂಜೆಯಂತೆ ಬಳಕೆಗೆ ಬಂದು, ಪ್ರತಿಮೆಗಳ ಕಲ್ಪನೆ ಬೆಳೆದು ಪ್ರತಿಮೆಗೆ ರಕ್ಷಣೆ ನೀಡಿದ ಕಟ್ಟಡಗಳೇ ದೇವಾಲಯ ಎಂಬ ಹೆಸರು ಪಡೆದಿದೆ ಎಂದು ಭಾವಿಸಿದರೆ ಉತ್ಪ್ರೇಕ್ಷೆಯಾಗಲಾರದು.

ಡಾ.ಎಸ್.ಶ್ರೀಕಂಠಶಾಸ್ತ್ರಿಯವರ ಅಭಿಪ್ರಾಯದಂತೆ 'ವೇದಯುಗದಲ್ಲಾಗಲೀ, ಹರಪ್ಪ ಸಂಸ್ಕೃತಿಯಲ್ಲಾಗಲೀ ದೇವಾಲಯಗಳಿದ್ದಂತೆ ಕಂಡುಬರುವುದಿಲ್ಲ, ಭಾರತದ ಸಂಸ್ಕೃತಿಯಲ್ಲಿ ಸಾಮೂಹಿಕ ಪ್ರಾರ್ಥನಾ ಪದ್ಧತಿಯು ಇರಲಿಲ್ಲ. ದೇವಾಲಯಗಳಲ್ಲಿ ಹೊಟ್ಟೆಪಾಡಿಗಾಗಿ ಪೂಜೆ ಮಾಡುವ ಅರ್ಚಕರು (ದೇವಲಕರು) ನೀಚಬ್ರಾಹ್ಮಣರೆಂದು ಸ್ಮೃತಿಗಳು ಹೇಳುತ್ತವೆ. ಈ ಕುರಿತು ಮನುಸ್ಮೃತಿಯಲ್ಲಿ ಸ್ಪಷ್ಟ ಉಲ್ಲೇಖವಿದೆ. ಮನಸ್ಮೃತಿಯ ಮೂರನೇ ಅಧ್ಯಾಯದ

153ನೇ ಶ್ಲೋಕವು ದೇವಲಕರ ಕುರಿತು ಬರೆದದ್ದಾಗಿದೆ. ದೇವರ ಪೂಜೆಯಿಂದ ಜೀವಿಸುವವನು, ಅಂದರೆ ದೇವಲಕನು ಹವ್ಯಕವ್ಯಾಧಿಕಾರ್ಯಗಳಲ್ಲಿ ನಿಷಿದ್ಧನು ಎಂದು ಹೇಳಲಾಗಿದೆ. ಇವರನ್ನು ಶುಭಕಾರ್ಯಗಳಿಗಾಗಲೀ, ಶ್ರಾದ್ಧಾಧಿಗಳಿಗಾಗಲೀ ಹಾಗೂ ಔತಣಕೂಟಗಳಿಗೂ ಆಹ್ವಾನಿಸಬಾರದು ಎಂದು ತಿಳಿಸುತ್ತದೆ. ಈ ಕುರಿತು ಡಾ.ಎಸ್.ಶ್ರೀಕಂಠಶಾಸ್ತ್ರಿ ಯವರು ತಮ್ಮ 'ಭಾರತೀಯ ಸಂಸ್ಕೃತಿ' ಕೃತಿಯಲ್ಲಿ ಚರ್ಚಿಸಿದ್ದಾರೆ. ಅಲ್ಲದೆ ದೇವಲಕರ ಕುರಿತು ಯಾಜ್ಞವಲ್ಕ್ಯ ಸ್ಮೃತಿ, ಈಶ್ವರಸಂಹಿತೆ, ಪದ್ಮಸಂಹಿತೆ ಹಾಗೂ ಆಗಮಗಳಲ್ಲಿಯೂ ಉಲ್ಲೇಖಗಳನ್ನು ಮಾಡಲಾಗಿದೆ. ಮೌರ್ಯರು ದೇವತಾ ವಿಗ್ರಹಗಳ ಮೂಲಕ ಮೂಢಜನರನ್ನು ಮೋಸಗೊಳಿಸಿ ರಾಜಕಾರ್ಯವನ್ನು ಸಾಧಿಸುತ್ತಿದ್ದರೆಂದು ಕೌಟಿಲ್ಯನ ಅರ್ಥಶಾಸ್ತ್ರ ಪತಂಜಲಿಯ 'ಮಹಾಭಾಷ್ಯ'ಗಳಿಂದ ತಿಳಿದುಬರುವುದು.[36]

ಪಿತೃಪೂಜೆ, ಪ್ರಕೃತಿಪೂಜೆಗಳೇ ಪ್ರತಿಮಾಪೂಜೆಯಾಗಿ ಮುಂದುವರೆದು, ಪ್ರತಿಮೆಗೆ ಕಟ್ಟಿದ ಕಟ್ಟಡವು ದೇವಾಲಯವಾಗಿ ನಂತರದ ಬದುಕಿನ ಸಾಕ್ಷಿಯಾಗಿ, ಹಿಗ್ಗುತ್ತಾ, ಕುಗ್ಗುತ್ತಾ, ಬೆಳೆಯುತ್ತಾ, ನಾಶವಾಗುತ್ತಾ ಆಯಾಕಾಲದ ಜನತೆಯ ಸಾಂಸ್ಕೃತಿಕ ಮೌಲ್ಯಗಳ ಪ್ರತಿನಿಧಿಯಾಗಿರುವುದು ಸ್ಪಷ್ಟ.

ಅಲೆಯುವ ಸ್ವಭಾವದ ಸ್ಮಶಾನವಾಸಿ ಎನಿಸಿಕೊಂಡ 'ಶಿವ'ನಾಗಲೀ ಪ್ರಕೃತಿಯ ಅಭಿನ್ನಸ್ವರೂಪನೆಂದಾದ ಪುರುಷ ವಿಷ್ಣುವಾಗಲಿ ಸೃಷ್ಟಿಕಾರಣನೆಂದು ಒಪ್ಪಿತನಾದ ಬ್ರಹ್ಮನಾಗಲೀ ಮಾನವನ ಭಾವನೆಯ ವಿವಿಧ ರೂಪಗಳಾದರೂ, ವೇದಕಾಲದಲ್ಲಿ ಅತಿಥಿಗಳಂತೆ, ಗೆಳೆಯರಂತೆ, ಪಿತೃಗಳಂತೆ ಸ್ತುತಿಸಲ್ಪಟ್ಟ ಪುರಾಣಗಳ ಕಾಲಕ್ಕೆ ದೇವತೆಗಳ ಸ್ಥಾನವನ್ನು ಪಡೆದಿದ್ದಾರೆ.

ಪುರಾಣಗಳ ಮೂಲಕ ದೇವತೆಗಳ ಸ್ಥಾನ ಪಡೆದ ಶಿವ, ವಿಷ್ಣು, ಬ್ರಹ್ಮ, ಅವರುಗಳ ವಿವಿಧ ಅವತಾರಗಳು, ಅವರ ಹೆಂಡತಿ, ಮಕ್ಕಳು, ಪರಿವಾರ ಎಂದು ಪರಿಗಣಿತರಾದ ದೇವತೆಗಳು ಪ್ರತಿಮಾ ಸ್ವರೂಪ ಪಡೆದು, ರಕ್ಷಣೆಗೊಂದು ನೆಲೆ ಪಡೆದು ಪೂಜೆಗೊಂಡು ದೇವಾಲಯಗಳ ಆರಂಭಕ್ಕೆ ಕಾರಣವಾಗಿರಬಹುದೆಂದು ಊಹಿಸಬಹುದಾಗಿದೆ.

ವಿವಿಧ ಸ್ವರೂಪಗಳಲ್ಲಿ ದೇವತಾಪೂಜೆ ಉಳಿದು ಬಂದಿದ್ದರೂ ದೇವಾಲಯಗಳು ಆರಂಭವಾದುದು ಯಾವ ಕಾಲದಲ್ಲಿ ಮತ್ತು ಹೇಗೆ, ಎಂಬ ಪ್ರಶ್ನೆಗೆ ಸಮಂಜಸ ಉತ್ತರ ಇನ್ನೂ ದೊರೆತಿಲ್ಲ, ದೇವಾಲಯಗಳ ವಾಸ್ತುಶಿಲ್ಪವನ್ನು ಅಧ್ಯಯನ ಮಾಡಿರುವ ವಿದ್ವಾಂಸರ ಅಭಿಪ್ರಾಯಗಳಲ್ಲೂ ಸಾಮರಸ್ಯವಿಲ್ಲ. ಯಜ್ಞವೇದಿಕೆ, ಯಾಗಶಾಲೆಗಳೇ ದೇವಾಲಯದ

ವಾಸ್ತುಶಿಲ್ಪದ ಮೂಲ ಎಂಬ ಅಭಿಪ್ರಾಯ ಕೆಲವರದಾದರೆ, ಬೌದ್ಧಸ್ತೂಪಗಳೇ ದೇವಾಲಯ ವಾಸ್ತುವಿಗೆ ಆಧಾರ ಎಂಬ ಅಭಿಪ್ರಾಯ ಹಲವರದು.

ಈ ವಿಷಯವಾಗಿ ಡಾ.ಅಲ್ತೇಕರರ ಮಾತುಗಳನ್ನು ಉದ್ಧರಿಸಬಹುದು. ಮೂರ್ತಿ ಪೂಜೆಯ ಆರಂಭ ಮತ್ತು ಬೆಳವಣಿಗೆಗಳ ವಿಷಯವಾಗಿ ಇನ್ನೂ ಕೆಲಸ ನಡೆಯಬೇಕಾಗಿದೆ. ಮನೆಯಲ್ಲಾಗಲೀ, ದೇವಸ್ಥಾನಗಳಲ್ಲಾಗಲೀ ದೇವತಾ ಮೂರ್ತಿಗಳನ್ನು ಪೂಜಿಸುವ ವಿಷಯವನ್ನು ಧರ್ಮಸೂತ್ರಕಾರರು ಸಾಮಾನ್ಯವಾಗಿ ಹೇಳುವುದಿಲ್ಲ. ಮನುವೂ ಸಹ ಹೇಳಿಲ್ಲ. ದೇವಸ್ಥಾನಗಳನ್ನು ಸ್ಥಾಪಿಸುವ ಸಂಪ್ರದಾಯವು ಅಶೋಕನಿಗಿಂತ ಈಚಿನದೆಂದು ಕಾಣುತ್ತಿದೆ. ಬಹುಜನರು ನೆರೆಯುತ್ತಿದ್ದ ಶ್ರೌತಯಜ್ಞಗಳ ಸ್ಥಾನದಲ್ಲಿ ಇವು ಕಾಣಿಸಿಕೊಂಡವು. ಬೌದ್ಧರ ಭವ್ಯ ದೇವಾಲಯಗಳನ್ನು, ವಿಹಾರಗಳನ್ನು ನೋಡಿದ ಹಿಂದೂಗಳ ಮನಸ್ಸಿನಲ್ಲಿ ಅಂತಹ ಸಾರ್ವಜನಿಕ ಆರಾಧನಾ ಕೇಂದ್ರಗಳನ್ನು ಸ್ಥಾಪಿಸಬೇಕೆಂಬ ಇಚ್ಛೆ ಉದಯಿಸಿದ್ದರೂ ಇರಬಹುದು. ಅಂತೂ ನಿಜವಾದ ಕಾರಣಗಳೇನೇ ಇರಲಿ, ದೇವಾಲಯಗಳು ಸಾರ್ವಜನಿಕ ಪೂಜಾ ಕೇಂದ್ರಗಳೆಂದು ಮುಂದೆ ಪರಿಗಣಿತವಾದವು.[37]

ಸಮಾಧಿಗಳೇ ದೇವಾಲಯಗಳ ಮೂಲ ಎಂಬ ಪ್ರಬಲವಾದ ವಾದವೂ ಇದೆ. ಪ್ರಾಗೈತಿಹಾಸಿಕ ಕಾಲದ ಸಮಾಧಿಗಳು, ಪಾಂಡವರ ಗುಡಿಗಳು ದೇವಾಲಯಗಳ ಮೂಲ ಎಂದು ಎನ್.ವೆಂಕಟರಮಣಯ್ಯ ತಿಳಿಸಿದ್ದಾರೆ. ಮಹಾಭಾರತದ ಅನುಶಾಸನಪರ್ವದಲ್ಲಿನ ಒಂದು ಉಲ್ಲೇಖದಂತೆ ದೇವರಿಗೆ ಸ್ಮಶಾನವು ಪ್ರಿಯವಾದ ಸ್ಥಳ ಎಂಬ ನಿಲುವಿನೊಂದಿಗೆ, ಕೆಲವು ಪ್ರಾಚೀನ ಶಿಲ್ಪಶಾಸ್ತ್ರಗಳ ಪ್ರಕಾರ 'ಶಿವಾಲಯಗಳನ್ನು ಊರಿನ ಹೊರಗೆ ನಿರ್ಮಿಸಬೇಕು ಎಂಬ ನಿಯಮವಿದೆ ಎಂಬ ಮಾತಿನ ಪೋಷಣೆ ಪಡೆದು, ಹಲವು ಸಂದರ್ಭಗಳಲ್ಲಿ ಶಿವಾಲಯಗಳನ್ನು ಸಮಾಧಿಗಳ ಮೇಲೆಯೇ ನಿರ್ಮಿಸಲಾಗಿದೆ ಎಂದು ತಿಳಿಸಿ, 'The connection of the temple with the grave yard, therefore, appears to be intimate and anient' ಎಂಬ ತೀರ್ಮಾನಕ್ಕೆ ಬಂದಿದ್ದಾರೆ.[38]

ದೇವಾಲಯಗಳ ಪ್ರಾಚೀನತೆ

ಸಿಂಧು ನದಿಯ ಬಯಲಿನ ನಾಗರೀಕತೆಯ ಕಾಲದ ಮುದ್ರೆಗಳು ವೇದಕಾಲೀನ ಉಲ್ಲೇಖಗಳು ಕ್ರಮವಾಗಿ ಪ್ರತಿಮಾ ಪೂಜೆ ಮತ್ತು ದೇವತಾಪೂಜೆಗಳು ಇದ್ದುದನ್ನು ಸ್ಪಷ್ಟಪಡಿಸುತ್ತವೆ. ಸಿಂಧೂನದಿಯ ಬಯಲಿನ ಜನರ ಪೂಜಾವಿಧಾನದ ಬಗೆಗೆ ಯಾವ ಖಚಿತವಾದ ದಾಖಲೆಗಳಿಲ್ಲವಾದರೂ ವೇದಕಾಲದಲ್ಲಿ ಯಾಗ, ಯಜ್ಞಗಳು ಪೂಜಾವಿಧಾನವಾಗಿದ್ದುವು. ಆ ಕಾಲದಲ್ಲಿ ದೇವಾಲಯಗಳು ಮರ, ಇಟ್ಟಿಗೆಯಂತಹ

ನಾಶವಾಗುವ ವಸ್ತುಗಳಿಂದ ನಿರ್ಮಿತವಾಗಿದ್ದು, ಕಾಲಾನಂತರದಲ್ಲಿ ನಶಿಸಿರುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ. ಕ್ರಿ.ಪೂ. 2ನೇ ಶತಮಾನದ ವೇಳೆಗಾಗಲೇ ಗುಹಾಲಯಗಳ ನಿರ್ಮಾಣ ಆರಂಭವಾಗಿರುವುದನ್ನು ಅಜಂತಾ, ಎಲ್ಲೋರಾ, ಕಾರ್ಲೆ, ಕನ್ಹೇರಿಗಳ ಉದಾಹರಣೆಗಳಿಂದ ತಿಳಿಯಬಹುದು.

ಕ್ರಿ.ಪೂ. 2ನೇ ಶತಮಾನಕ್ಕಾಗಲೇ ದೇವಾಲಯಗಳು ಬೆಳೆದಿರುವ ಪರಿಯನ್ನು ಗಮನಿಸಿದಾಗ ಅವುಗಳ ಉಗಮವನ್ನು ಸಿಂಧು ನದಿಯ ಬಯಲಿನ ನಾಗರೀಕತೆಯ ಜನರ ಕಾಲಕ್ಕೆ ನಿರ್ಧರಿಸಬೇಕಾಗುತ್ತದೆ. ಪೂರ್ಣಸ್ವರೂಪದಲ್ಲಿ ನಿರ್ಮಾಣಗೊಂಡ ಬೌದ್ಧಸ್ತೂಪಗಳು ಆ ಮೊದಲಿದ್ದ ದೇವಾಲಯಗಳಿಂದ ಪ್ರೇರಣೆ ಪಡೆದಿರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಭಾರತೀಯ ವಾಸ್ತುಶಿಲ್ಪ ಅದರಲ್ಲೂ ವಿಶೇಷವಾಗಿ ದೇವಾಲಯ ವಾಸ್ತುಶಿಲ್ಪವು ವೇದಕಾಲದಿಂದಲೂ ಪ್ರೇರಣೆ ಪಡೆದಿದೆ. ವೇದಗಳಲ್ಲಿ ದೇವಾಲಯಗಳ ಅಥವಾ ದೇವಪ್ರತಿಮೆಗಳ ಉಲ್ಲೇಖವಿಲ್ಲದಿರುವುದು ಕುತೂಹಲಕಾರಿಯಾದುದು. ಪುರಾಣ ಮತ್ತು ಸೂತ್ರಗಳ ಕಾಲದಲ್ಲಿ ಅನೇಕ ದೇವಾಲಯಗಳ ಉಲ್ಲೇಖಗಳೇ ಅಲ್ಲದೆ ವೃಕ್ಷ ಮತ್ತು ನಾಗಪೂಜೆಗಳ ಗುರುತುಗಳನ್ನು ಕಾಣಬಹುದು.

ಶಿವರಾಮಕಾರಂತ 'ಚಿತ್ರ ಶಿಲ್ಪ ವಾಸ್ತುಕಲೆಗಳು' ಗ್ರಂಥದಲ್ಲಿ ಅಭಿಪ್ರಾಯಪಟ್ಟಿರುವಂತೆ 'ದೇವರುಗಳಿಗಾಗಿ ಎಂದರೆ ದೇವರ ಮೂರ್ತಿಗಳಿಗೋ, ಸಂಕೇತಗಳಿಗೋ ಆಗಿ ಕಟ್ಟಡ ಕಟ್ಟುವ ಹಂಬಲ ನಮ್ಮಲ್ಲೂ ಎರಡು ಸಾವಿರ ವರ್ಷಗಳ ಹಿಂದೆ ತೊಡಗಿತು. ಈ ಕಟ್ಟಡಗಳು ತಮ್ಮ ಮನೆ ಮಠಗಳಿಗಿಂತ ಹೆಚ್ಚುಕಾಲ ಉಳಿಯಬೇಕೆಂಬ ಅಪೇಕ್ಷೆ ಜನರಿಗಿದ್ದುದರಿಂದ ಹಾಗೆ ಸಾಕಷ್ಟು ದೀರ್ಘಕಾಲ ಉಳಿಯಬಲ್ಲ ವಸ್ತುಗಳಿಂದ ಅವನ್ನು ನಿರ್ಮಿಸತೊಡಗಿದರು. ತಮ್ಮಲ್ಲಿರುವ ಸೌಂದರ್ಯ ಪ್ರಜ್ಞೆಗೆ ಧಾರಾಳ ಅವಕಾಶವನ್ನು ಒದಗಿಸಿದರು. ಅಸಂಖ್ಯ ಗುಹಾಲಯ, ಚೈತ್ಯಾಲಯ, ಸ್ತೂಪ ಮತ್ತು ದೇಗುಲಗಳನ್ನು ಸುಮಾರು ಎರಡು ಸಾವಿರ ವರ್ಷಗಳಿಂದಲೂ ಈ ದೇಶದಲ್ಲಿ ಕಟ್ಟುತ್ತಾ ಬಂದಿದ್ದಾರೆ.[39] ವಿಸ್ಮಯ, ಭಯ, ಗೌರವಗಳಿಂದ ಮೊಳೆತು ಬೆಳೆದ ಪ್ರಕೃತಿ ಪೂಜೆ ಹಾಗೂ ಪಿತೃಪೂಜೆ ಕ್ರಮೇಣ ಪ್ರತಿಮಾರೂಪ ಪಡೆದು ಸಾಂಘಿಕ ಆರಾಧನೆಗಾಗಿ ದೇವಾಲಯಗಳು ನಿರ್ಮಾಣಗೊಂಡವು.

ಬೌದ್ಧ ಭಿಕ್ಷುಗಳು ದೇಶಪರ್ಯಟನೆಯ ಸಮಯದಲ್ಲಿ ಆಶ್ರಯ ಪಡೆದ ಪ್ರಶಾಂತ ವಾತಾವರಣದಲ್ಲಿದ್ದ ಗುಹೆಗಳು, ಕಡೆಯಲ್ಪಟ್ಟ ಗುಹೆಗಳು ಬೌದ್ಧ ವಿಹಾರಗಳಾಗಿ, ಚೈತ್ಯಗಳಾಗಿ, ವೈದಿಕ ಸ್ತೂಪಗಳ ಪ್ರತಿಕೃತಿಗಳಾಗಿ ಬೆಳೆದು ಬಂದವು. ಮಹಾಯಾನ ಪಂಥದ ಒಲವುಗಳಿಗೆ ತಕ್ಕಂತೆ ಪ್ರತಿಮಾಪೂಜೆ, ಸ್ತೂಪ, ವಿಹಾರ, ಚೈತ್ಯಗಳು ಪ್ರಾಶಸ್ತ್ಯ ಪಡೆದವು.

ಧರ್ಮ ಪ್ರವಚನ, ವಿಚಾರ ವಿನಿಮಯ, ಧ್ಯಾನ–ಇತ್ಯಾದಿ ಧಾರ್ಮಿಕ ಚಟುವಟಿಕೆಗಳ ಜೊತೆ–ಜೊತೆಗೆ ಬೋಧನೆಗಾಗಿ ಶಾಲೆಗಳೂ ಸೇರ್ಪಡೆಯಾಗಿ, ಋಷಿವರ್ಗದ ಬೋಧಕರು, ವಿದ್ಯಾರ್ಥಿಗಳು ನೆಲೆಸುವ ತಾಣವಾಗಿ, ಧ್ಯಾನ, ಬೋಧನೆ, ಪೂಜೆಗೆ ಮಾತ್ರವೇ ಅಲ್ಲದೆ ಅಧ್ಯಯನ ಕೇಂದ್ರಗಳಾಗಿಯೂ ಬೌದ್ಧ ಚೈತ್ಯ, ವಿಹಾರಗಳು ಬೆಳೆದು ವಿಸ್ತಾರವಾದವು. ನೆಲೆಸಿದ ಕುಶಲಕರ್ಮಿಗಳಿಂದ ಅಲಂಕಾರ ಪಡೆದು ಸುಂದರವಾಗಿ ಆಕರ್ಷಣೆಯಗುಣವನ್ನು ಪಡೆದವು.

ಕ್ರಿ.ಶ. 2ನೇ ಶತಮಾನದವರೆಗೆ ದೇವತೆಗಳಿಗೆ ಗುಡಿ ಕಟ್ಟಿಸಿ ವಿಗ್ರಹಗಳನ್ನು ಪ್ರತಿಷ್ಠಾಪಿಸಿದ ಬಗ್ಗೆ ಚಾರಿತ್ರಿಕವಾದ ಯಾವುದೇ ದಾಖಲೆಗಳು ಕಂಡು ಬರುವುದಿಲ್ಲ. ಆ ಕಾಲದ ರಾಜರುಗಳಿಗೆ ಜನರಿಂದ ತೆರಿಗೆ ವಸೂಲಿ ಮಾಡಿ ರಾಜ್ಯಾಡಳಿತ ಮಾಡುವುದು ಕಷ್ಟವಾದಾಗ ದೇವಾಲಯದ ಮೇಲೆ ಅವಲಂಬಿಸಬೇಕಾದ ಪರಿಸ್ಥಿತಿ ಅನಿವಾರ್ಯವಾಯಿತು. ಹೋಮ, ಹವನ, ಪೌರೋಹಿತ್ಯ ಇತ್ಯಾದಿ ಕಾರ್ಯನಿರ್ವಹಿಸುತ್ತಿದ್ದ ಪಂಡಿತ ಪುರೋಹಿತರಿಗೂ ಜೀವನೋಪಾಯ ದುಸ್ತರವಾಯಿತು. ಅಂತಹಾ ಸಂದರ್ಭದಲ್ಲಿ ರಾಜರುಗಳು ಪುರೋಹಿತರ ಕುಮ್ಮಕ್ಕಿನಿಂದ ದೇವಾಲಯವನ್ನು ನಿರ್ಮಿಸಲು ಪ್ರಾರಂಭಿಸಿದರು. ದೇವಾಲಯಗಳ ದೇವಾದಾಯವನ್ನು ರಾಜರುಗಳು ಆಡಳಿತ ವ್ಯವಸ್ಥೆಗಾಗಿ ಉಪಯೋಗಿಸಿಕೊಳ್ಳುತ್ತಿದ್ದರು. ಪಂಡಿತ ಪುರೋಹಿತರುಗಳಿಗೂ ಪೂಜೆಯ ನಿರ್ವಹಣೆಗಾಗಿ ಗೌರವ ಧನ ದೊರೆಯುತ್ತಿತ್ತು. ಈ ರೀತಿ ಹುಟ್ಟಿಕೊಂಡ ದೇವಾಲಯ ಸಂಸ್ಕೃತಿ ಶೀಘ್ರದಲ್ಲಿ ದೇಶಾದ್ಯಂತ ವ್ಯಾಪಿಸಿ ಹೆಮ್ಮರವಾಗಿ ಬೆಳೆಯಿತು. ಹೀಗೆ ಪ್ರಾರಂಭವಾದ ದೇವಾಲಯಗಳು ಊರಿಗೊಂದು ಕೇರಿಗೊಂದು ಆದವು. ಪುರಾಣ ದೇವತೆಗಳ ಹೆಸರಿನಲ್ಲಿ ಎಲ್ಲೆಂದರಲ್ಲಿ ದೇವಾಲಯಗಳು ಹುಟ್ಟಿಕೊಂಡವು.[40]

ಜನರು ಕಾಲು ತೊಳೆದುಕೊಂಡು ಪ್ರವೇಶಿಸಬೇಕಾದ ಸ್ಥಳಗಳಲ್ಲಿ ದೇವಾಲಯವೂ (ದೇವಗೃಹ) ಸೇರಿದೆ ಎಂಬುದನ್ನು ಬೌಧಾಯನ ತಿಳಿಸಿರುವನು. ಇದೇ ವಿಷಯವನ್ನು ವಿವರಿಸಿರುವ ಅಪಸ್ತಂಭ ಧರ್ಮಸೂತ್ರ ವಿಧಿಸಿರುವುದೇನೆಂದರೆ ದೇವತಾ ದ್ವಾರದ ಎದುರಾಗಿ ಯಾರೂ ಕಾಲು ಚಾಚಿಕೊಂಡಿರಕೂಡದು ಎಂದು ದೇವಾಲಯಗಳಿಗೆ ಸಂಬಂಧಪಡುವ ಮತ್ತು ಹಿಂದಿನ ಕಾಲದಿಂದ ಬಂದಿರುವ ಈ ವಿಷಯಗಳು ಈಗಲೂ ಆಚರಣೆಯಲ್ಲಿವೆ. ಒಟ್ಟಾರೆ, ವೇದಕಾಲದ ಕೊನೆಯ ಭಾಗದಲ್ಲಿನ ದೇವಾಲಯಗಳು ಜನರ ಸಾಮಾಜಿಕ ಮತ್ತು ಕೊನೆಯ ಭಾಗದಲ್ಲಿನ ದೇವಾಲಯಗಳು ಜನರ ಸಾಮಾಜಿಕ ಮತ್ತು ಮತೀಯ ಜೀವನದ ಪ್ರಧಾನ ಕೇಂದ್ರಗಳಾಗಿದ್ದವು. ಈ ಕಾರಣದಿಂದ ದೇವಾಲಯಗಳೇ ರಾಜನ ರಕ್ಷಣೆಯ ಮತ್ತು ಕೃಪಾಶ್ರಯದ ಅವಲಂಬನೆ ಅತ್ಯವಶ್ಯಕವಾಗಿದ್ದವು.[41]

ಅಶೋಕನು ದೇಶದ ವಿವಿಧ ಭಾಗಗಳಲ್ಲಿ ಒಟ್ಟು ಸುಮಾರು 84,000 ಸ್ತೂಪಗಳನ್ನು ನಿರ್ಮಿಸಿದ್ದನೆಂಬ ಮಾತನ್ನು ಉತ್ಪ್ರೇಕ್ಷೆ ಎಂದು ನಿರಾಕರಿಸಿದರೂ, ಅದೇ ಕಾಲದಲ್ಲಿ ಲುಂಬಿಣಿ, ಬೌದ್ಧಗಯಾ, ಸಾರಾನಾಥ, ಕುಶೀನಗರ, ತಕ್ಷಶಿಲೆ, ಸಾಂಚಿ–ಮುಂತಾದ ಸ್ಥಳಗಳಲ್ಲಿ ಸ್ತೂಪಗಳ ನಿರ್ಮಾಣವಾಗಿರುವುದನ್ನು ನಿರಾಕರಿಸುವಂತಿಲ್ಲ. ಕ್ರಿ.ಪೂ. ಒಂದನೇ ಶತಮಾನಕ್ಕೆ ಮೊದಲೇ ಬೌದ್ಧ ಸ್ತೂಪಗಳು ಇದ್ದುದನ್ನು ಇವು ವೈದಿಕ ಚಿತಿಗಳಿಂದ ಪ್ರೇರಣೆ ಪಡೆದು 'ಚೈತ್ಯ'ಗಳಾಗಿ ಬೆಳೆದು ವಿಸ್ತಾರವಾದುದನ್ನು ವಿದ್ವಾಂಸರು ಸಮರ್ಥಿಸಿದ್ದಾರೆ.

ಕರ್ನಾಟಕದಲ್ಲಿ ದೊರೆತಿರುವ ಅಶೋಕನ ಬಂಡೆಗಲ್ಲು ಶಾಸನಗಳಿಂದ ಈ ಪ್ರದೇಶವು ಅವನ ಪ್ರಭಾವಕ್ಕೆ ಒಳಗಾಗಿತ್ತು ಎಂಬುದು ಸ್ಪಷ್ಟವಾಗಿದೆ. ಗುಲ್ಬರ್ಗ ಜಿಲ್ಲೆಯ ಸನ್ನತಿಯು ಕ್ರಿ.ಶ. 2ನೇ ಶತಮಾನದ ವೇಳೆಗಾಗಲೇ ಬೌದ್ಧರ ಬಹುಮುಖ್ಯ ನೆಲೆಯಾಗಿತ್ತು. ಇಲ್ಲಿ ಬೌದ್ಧ ಸ್ತೂಪದ ಇಟ್ಟಿಗೆಯ ಅವಶೇಷವೇ ಅಲ್ಲದೆ, ಬ್ರಾಹ್ಮಿಲಿಪಿಯ ಶಾಸನಗಳು ದೊರೆತಿವೆ. ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಬಹುಮುಖ್ಯ ಸ್ಥಾನ ಪಡೆದಿರುವ ಶಾತವಾಹನರ ಕಾಲದ ಬನವಾಸಿಯ ಶಾಸನವು ಸ್ಮಾರಕ ಕಲೆ, ನಾಗವಿಗ್ರಹ, ತಟಾಕಗಳ ನಿರ್ಮಾಣದ ಬಗ್ಗೆ ತಿಳಿಸುತ್ತದೆ. ಶಾತವಾಹನರ ಕಾಲದ ದಾನ ಶಾಸನಗಳಿಂದ ದೇವಾಲಯಗಳ ನಿರ್ಮಾಣ ಜನೋಪಯೋಗಿಯಾಗಬೇಕೆಂಬ ಮನೋಭಾವವು ಆ ಕಾಲಕ್ಕಾಗಲೇ ಜನರ ಮನಸ್ಸಿನಲ್ಲಿ ನೆಲೆಗೊಂಡಿತ್ತೆಂದು ತಿಳಿಯಬಹುದು. ಕದಂಬರ ಕಾಲದಲ್ಲಿ ಹಲವು ದೇವಾಲಯಗಳು ನಿರ್ಮಾಣಗೊಂಡವು. ಚಂದ್ರವಳ್ಳಿಯ ಶಾಸನ, ಇದನ್ನು ಸಾಬೀತು ಪಡಿಸುತ್ತದೆ. ಹಲಸಿ ಮತ್ತು ಬನವಾಸಿಗಳಲ್ಲಿ ದೇವಾಲಯ ನಿರ್ಮಾಣವಾದುದನ್ನು ಶಾಸನಗಳು ದೃಢಪಡಿಸಿವೆ.

ಕರ್ನಾಟಕದಲ್ಲಿ ದೇವಾಲಯಗಳ ನಿರ್ಮಾಣಕ್ಕೆ ಪ್ರೇರಣೆ ದೊರೆತದ್ದು ಲಾಕುಲೀಶ ಪಾಶುಪತ ಶೈವಗುರುಗಳಿಂದ, ಗಂಗರು ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಕಲಚೂರಿಗಳು ದೇವಾಲಯಗಳ ನಿರ್ಮಾಣ ಮತ್ತು ಅವುಗಳ ಪೋಷಣೆಗೆ ಕೊಟ್ಟ ಆದ್ಯತೆ ದೇವಾಲಯಗಳ ಬೆಳವಣಿಗೆಗೆ ಪೂರಕವಾಯಿತು. ಬಾದಾಮಿ, ಐಹೊಳೆ, ಪಟ್ಟದಕಲ್ಲುಗಳ ಸುತ್ತ–ಮುತ್ತ ದೇವಾಲಯಗಳ ನಿರ್ಮಾಣ ಕಾರ್ಯ ಬಹಳ ವ್ಯಾಪಕವಾಗಿಯೇ ನಡೆದಿದೆ.

ಕ್ರಿ.ಶ. 12ನೇ ಶತಮಾನದಲ್ಲಿ ಹೊಯ್ಸಳ ಚಕ್ರವರ್ತಿಗಳ ಮೇಲೆ ರಾಮಾನುಜರ ಶ್ರೀ ವೈಷ್ಣವ ಧರ್ಮವು ಮಾಡಿದ ಪ್ರಭಾವದಿಂದ ದೇವಾಲಯಗಳ ಸ್ಥಾಪನೆಯು ವ್ಯಾಪಕವಾಗಿ ನಡೆಯಿತು. ವಿಷ್ಣುವರ್ಧನನು ವೈಷ್ಣವನಾದುದು ಮತ್ತು ಆ ಧರ್ಮವು ದೇವಾಲಯ ಪೂಜೆ ಮತ್ತು ವಿವಿಧ ದೇವಾಲಯ ಆಚರಣೆಗಳಿಗೆ ಹೆಚ್ಚಿನ ಮಹತ್ವ ಕೊಟ್ಟಿದ್ದು, ಅವುಗಳ

ನಿರ್ವಹಣೆಗೆ ನೀಡಿದ ಉದಾರ ದಾನಗಳಿಂದ ಹಲವು ದೇವಾಲಯ ಸಂಕೀರ್ಣಗಳು ತಲೆ ಎತ್ತಿದವು. ಅವುಗಳಲ್ಲಿ ಮೇಲುಕೋಟೆಯ ದೇವಾಲಯ ಸಂಕೀರ್ಣವು ಮುಖ್ಯಸ್ಥಾನ ಪಡೆದಿದೆ.

ಮೇಲುಕೋಟೆ ದೇವಾಲಯ ಸಂಕೀರ್ಣದ ಸ್ಥಾಪನೆ ಮತ್ತು ಬೆಳವಣಿಗೆ

ಮೇಲುಕೋಟೆ ದೇವಾಲಯ ಸಂಕೀರ್ಣದ ಸ್ಥಾಪನೆಯ ಇತಿಹಾಸವನ್ನು ಪುನರ್ರಚಿಸಲು ನಂಬಲರ್ಹ ಐತಿಹಾಸಿಕ ಆಧಾರಗಳಾದ ಶಾಸನಗಳ ಸಂಖ್ಯೆಯು ತುಂಬ ಕಡಿಮೆ. ಇಲ್ಲಿನ ನಾರಾಯಣಸ್ವಾಮಿ ದೇವಾಲಯ ಸಂಕೀರ್ಣದ ಸ್ಥಾಪನೆಗೆ ಸಂಬಂಧಿಸಿದಂತೆಯು ಯಾವುದೇ ಶಾಸನಾಧಾರವಿಲ್ಲ. ಆದುದರಿಂದ ಪೌರಾಣಿಕ ಮತ್ತು ಐತಿಹ್ಯಗಳ ಐತಿಹಾಸಿಕ ವಿಮರ್ಶೆಯನ್ನೇ ಆಧಾರಗಳಾಗಿ ಅಲವಂಬಿಸುವ ಅಗತ್ಯವಿದೆ. ಈ ಭಾಗದಲ್ಲಿ ಸಾಂಪ್ರಾದಾಯಿಕ ಆಧಾರಗಳು ಐತಿಹಾಸಿಕ ಸತ್ಯಾಸತ್ಯತೆ ಮತ್ತು ಶಾಸನಾಧಾರಗಳ ಪುನರ್ ಪರಿಶೀಲನೆಯೊಂದಿಗೆ ಇಲ್ಲಿನ ದೇವಾಲಯ ಸಂಕೀರ್ಣದ ಸ್ಥಾಪನೆ ಮತ್ತು ಬೆಳವಣಿಗೆಯ ಕುರುಹುಗಳನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆ.

ರಾಮಾನುಜರು ದಕ್ಷಿಣಭಾರತದಲ್ಲಿ ಬಲಗೊಳಿಸಿದ ದೇವಾಲಯ ಆಧಾರಿತ ಭಕ್ತಿ ಆಂದೋಲನಕ್ಕೆ ನ್ಯಾಯಯುತ ಕಾರಣವನ್ನು ದೇವಾಲಯಗಳು ಒದಗಿಸಿದವು. ಮೇಲುಕೋಟೆ ದೇವಾಲಯ ಸಂಕೀರ್ಣದಲ್ಲಿ ಮೊಟ್ಟಮೊದಲಿಗೆ ಸ್ಥಾಪಿತವಾದುದು ನಾರಾಯಣಸ್ವಾಮಿ ದೇವಾಲಯ. ನಂತರ ಇನ್ನಿತರ ಗುಡಿಗಳು ನಂತರದ ಕಾಲದಲ್ಲಿ ಸೇರ್ಪಡೆಗೊಂಡು ಹಲವು ರಾಜರ ಕಾಲದಲ್ಲಿ ರಾಜಾಶ್ರಯದೊಂದೊಗೆ ದೇವಾಲಯ ಸಂಕೀರ್ಣವಾಗಿ ರೂಪಿತವಾಯಿತು. ಉಳಿದ ಎಲ್ಲಾ ದೇವಾಲಯಗಳು ನಾರಾಯಣನ ವಿವಿಧ ಅವತಾರಗಳ ಮೂರ್ತಿಗಳು ಹಾಗೂ ಭಕ್ತಿ ಆರಾಧಕರಾದ ಆಳ್ವಾರರ ಮೂರ್ತಿಗಳನ್ನು ಒಳಗೊಂಡಿದೆ. ಸಂಕೀರ್ಣದ ಆರಂಭದ ಹಂತವೇ ನಾರಾಯಣಸ್ವಾಮಿದೇವಾಲಯ. ಇಲ್ಲಿ ಈ ದೇವಾಲಯ ಸ್ಥಾಪನೆಯ ಕುರಿತು ಅರಿಯುವ ಅಗತ್ಯವಿದೆ.

ಈ ದೇವಾಲಯದ ಉಗಮದ ಕುರಿತು ಪುರಾಣಗಳು ಮತ್ತು ಮೌಖಿಕ ಆಕರಗಳು ಮಹತ್ವದ ಮಾಹಿತಿಗಳನ್ನು ಸುಸಂಗತವಾದ ರೀತಿಯಲ್ಲಿ ಹೊರಹಾಕುತ್ತವೆ. ಇವು ತಮ್ಮ ಮಾಹಿತಿಯಲ್ಲಿನ ವ್ಯತ್ಯಾಸಗಳಿಂದ ಹೊರಗಿವೆ. ಇವು ತಿಳಿಸುವಂತೆ ಇಲ್ಲಿನ ಮೂಲ ನಾರಾಯಣ ದೇವಾಲಯದ ಮೂರ್ತಿಯು ರಾಮಾನುಜರು ಮೇಲುಕೋಟೆಗೆ ಬರುವ ಮುಂಚೆಯೇ ಇಲ್ಲಿತ್ತು. ರಾಮಾನುಜರು ಚೋಳರಾಜನಿಂದ ಹಿಂಸಿತನಾಗಿ ಕರ್ನಾಟಕಕ್ಕೆ ಬಂದರು. ಇಲ್ಲಿ ಹೊಯ್ಸಳ ವಿಷ್ಣುವರ್ಧನನ ಆಶ್ರಯ ಪಡೆದರು. ರಾಮಾನುಜರು ತಮ್ಮ

ಪ್ರಭಾವದಿಂದ ವಿಷ್ಣುವರ್ಧನನ ಆಶ್ರಯ ಪಡೆದರು. ರಾಮಾನುಜರು ತಮ್ಮ ಪ್ರಭಾವದಿಂದ ವಿಷ್ಣುವರ್ಧನನ್ನು ಜೈನಧರ್ಮದಿಂದ ವೈಷ್ಣವಮತಕ್ಕೆ ಮತಾಂತರಿಸಿದರು. ಹಾಗೂ ರಾಮಾನುಜರು ವಿಷ್ಣುವರ್ಧನನ ಸಹಾಯದಿಂದ ಈ ಮೂರ್ತಿಗೆ ದೇವಾಲಯ ಸ್ಥಾಪಿಸಿ ಪುನರ್ ಪ್ರತಿಷ್ಠಾಪಿಸಿದರು ಎಂದು ತಿಳಿಸುತ್ತವೆ.

ಮೇಲಿನ ಘಟನೆಗಳು ಯಾವಾಗ ಸಂಭವಿಸಿದವು ಎಂಬುದನ್ನು ಪ್ರಾಸಂಗಿಕವಾದ ಆಧಾರಗಳಿಂದ ಪರೀಕ್ಷಿಸುವ ಮೂಲಕ ಸಮಕಾಲೀನ ಐತಿಹಾಸಿಕ ಆಧಾರಗಳ ಸಹಾಯದಿಂದ ಖಚಿತವಾದ ವಿಷಯಗಳನ್ನು ವಿಸ್ತರಿಸುವ ಅಗತ್ಯವಿದೆ. ಗಮನಾರ್ಹ ಅಂಶವೆಂದರೆ ಈ ಪುರಾಣಕಥೆಗಳು ಮೊದಲಿಗೆ ಗುರುಪರಂಪರೆಯಲ್ಲಿ ಕಾಣಿಸಿಕೊಂಡಿವೆ.

ಕ್ರಿ.ಶ. 13ನೇ ಶತಮಾನಕ್ಕೆ ಗುರುಪರಂಪರೆಯನ್ನು ಗುರಿತಿಸಬಹುದು. ಇದು ವಿಷ್ಣುವರ್ಧನನ ಕಾಲಕ್ಕೆ ಬಹಳ ದೂರವಿಲ್ಲ. ಎರಡನೆಯದಾಗಿ 12ನೇ ಶತಮಾನಕ್ಕೆ ಸೇರಿದ ಸಾಲಿಗ್ರಾಮದ ಶಾಸನವು ರಾಮಾನುಜರ ಮೂರುಜನ ಶಿಷ್ಯರ ಹೆಸರನ್ನು ಸ್ಪಷ್ಟವಾಗಿ ಉಲ್ಲೇಖಿಸಿದೆ.[42] ಇವರ ಹೆಸರುಗಳು ಗುರುಪರಂಪರೆಯಲ್ಲೂ ಉಲ್ಲೇಖಿತವಾಗಿವೆ. ಇದು ತಿಳಿಸುವಂತೆ ರಾಮಾನುಜರು ಸಾಲಿಗ್ರಾಮಕ್ಕೆ ಮೊದಲು ಬಂದು ನೆಲೆಯಾಗಿದ್ದರು. ಗುರುಪರಂಪರೆಯು ತಿಳಿಸುವ ರಾಮಾನುಜರ ವಿವರಗಳು ಐತಿಹಾಸಿಕ ಅಂಶಗಳ ಮೇಲೆ ಅವಲಂಬಿತವಾಗಿವೆ ಎಂದು ತಿಳಿಯಲು ಇದು ಪ್ರಬಲ ಆಧಾರವಾಗಿದೆ. 13ನೇ ಶತಮಾನದ ಅಂತ್ಯಕ್ಕೆ ಸೇರಿದ ಮೇಲುಕೋಟೆಯಲ್ಲಿ ಸಿಕ್ಕಿರುವ ಮತ್ತೊಂದು ಶಾಸನವು, ಮೇಲುಕೋಟೆಯ ತಿರುಮಣ್‌ಗಾಗಿ ರಾಮಾನುಜರು ಬಂದ ಐತಿಹ್ಯವನ್ನು ದೃಢಪಡಿಸುತ್ತದೆ[43] ಹಾಗೂ ರಾಮಾನುಜರು ಮೇಲುಕೋಟೆಗೆ ಬಂದ ವಿಷಯವನ್ನು ಸಹ ಬಲಪಡಿಸುತ್ತದೆ. ಕ್ರಿ.ಶ. 1544ರ ಒಂದು ಶಾಸನವು ಸ್ವಲ್ಪ ನಂತರದ ದಾಖಲೆಯಾದರೂ ರಾಮಾನುಜರು ಯತಿರಾಜಮಠದಲ್ಲಿ ನೆಲೆಯಾದ ಅಂಶವನ್ನು ಸ್ಪಷ್ಟವಾಗಿ ಉಲ್ಲೇಖಿಸುತ್ತದೆ.[44] ಈ ಅಂಶಗಳಿಂದ ನಾವು ಗುರುಪರಂಪರೆಯು ತಿಳಿಸುವ ರಾಮಾನುಜರರ ವಿಚಾರಗಳು ಪ್ರಬಲ ಐತಿಹಾಸಿಕ ಆಧಾರವನ್ನು ಹೊಂದಿದೆ ಎಂಬ ತೀರ್ಮಾನಕ್ಕೆ ಬರಬಹುದು.

ಈ ಎಲ್ಲಾ ಅಂಶಗಳು ಕೆಲವು ಪ್ರಶ್ನೆಗಳನ್ನು ಉದ್ಭವಿಸುವಂತೆ ಮಾಡುತ್ತವೆ, ಅವೆಂದರೆ ಮೇಲುಕೋಟೆಯಲ್ಲಿ ಯಾವಾಗ ರಾಮಾನುಜರು ಬಂದು ನೆಲೆಸಿದರು ಹಾಗೂ ಯಾವಾಗ ದೇವಾಲಯ ಸ್ಥಾಪಿಸಿದರು. ಹಲವು ವಿದ್ವಾಂಸರು ಅಭಿಪ್ರಾಯ ಪಟ್ಟಿರುವಂತೆ 11ನೇ ಶತಮಾನದ ಕೊನೆಯ ಭಾಗದಲ್ಲಿ ರಾಮಾನುಜರು ಕರ್ನಾಟಕಕ್ಕೆ ಆಗಮಿಸಿದರು. ಎಸ್.ಕೃಷ್ಣಸ್ವಾಮಿ ಅಯ್ಯಂಗಾರರು[45] ತಿಳಿಸುವಂತೆ 11ನೇ ಶತಮಾನ ತೊಂಬತ್ತರ ದಶಕದಲ್ಲಿ

ಆಚಾರ್ಯರು ಚೋಳದೊರೆಯಿಂದ ಹಿಂಸಿತರಾದರು. ಈ ವಿಚಾರದ ಕುರಿತು ಮುಂದಿನ ಅಧ್ಯಾಯದಲ್ಲಿ ವಿವರವಾಗಿ ಚರ್ಚಿಸಲಾಗಿದೆ.

'Karnataka through the ages' ಎಂಬ ಗ್ರಂಥದಲ್ಲಿ ಗುರುಪರಂಪರೆಯ ಸಾಹಿತಿಕ ಆಧಾರದ ಮೇಲೆ ಈ ರೀತಿ ಹೇಳಲಾಗಿದೆ. ರಾಮಾನುಜರು ಕರ್ನಾಟಕಕ್ಕೆ ಬಂದಿದ್ದು ಕ್ರಿ.ಶ. 1096ರಲ್ಲಿ, ಹೊಯ್ಸಳರ ರಾಜನಾದ ವಿಷ್ಣುವರ್ಧನನನ್ನು ಶಿಷ್ಯನನ್ನಾಗಿ ಸ್ವೀಕರಿಸಿದ್ದು 1093 ರಲ್ಲಿ ಮತ್ತು ಮೇಲುಕೋಟೆಯ ನಾರಾಯಣನನ್ನು ಪ್ರತಿಷ್ಠೆ ಮಾಡಿದ್ದು 1100[46]ರಲ್ಲಿ. ಅದೇ ಗ್ರಂಥದಲ್ಲಿ ಶ್ರವಣಬೆಳಗೊಳದ ಸ್ಥಳಪುರಾಣದ ಪ್ರಕಾರ ವಿಷ್ಣುವರ್ಧನನು ರಾಮಾನುಜರಿಂದ ತಪ್ತಮುದ್ರಾಂಕನ ಕ್ರಿ.ಶ. 1117ರಲ್ಲಿ ಮಾಡಿಸಿಕೊಂಡ ಎಂದು ಹೇಳಲಾಗಿದೆ ಎಂದು ಉದ್ಧರಿಸಿದ್ದಾರೆ.[47] ಪ್ರಪನ್ನಾಮೃತ ಮತ್ತು ಇಲ್ಲಿ ಹೇಳಿದ ಸಾಹಿತ್ಯಕ ಆಧಾರಗಳು ಬಹಳಷ್ಟು ಮಟ್ಟಿಗೆ ಸರಿಹೊಂದುತ್ತವೆ. ಆದರೆ ಇತಿಹಾಸಕಾರರ ಪ್ರಕಾರ ವಿಷ್ಣುವರ್ಧನನು ಅಧಿಕಾರಕ್ಕೆ ಬಂದದ್ದು ಕ್ರಿ.ಶ. 1107ರಲ್ಲಿ ಅವನು ರಾಮಾನುಜರಿಂದ ದೀಕ್ಷೆಯನ್ನು ಪಡೆದಿದ್ದ ಎಂದು ಹೇಳಲು ಶಾಸನಾಧಾರವಿಲ್ಲ.

ರಾಮಾನುಜರು ಕರ್ನಾಟಕಕ್ಕೆ ಯಾವಾಗ ಬಂದರು ಎಂದರೆ, ಸಾಂಪ್ರದಾಯಿಕ ಆಕರಗಳು ತಿಳಿಸುವಂತೆ ಆಚಾರ್ಯರು ಸಾಲಿಗ್ರಾಮದಲ್ಲಿ ಸ್ವಲ್ಪಕಾಲ ಇದ್ದು ಹಲವು ಜನರನ್ನು ವೈಷ್ಣವಮತಕ್ಕೆ ಮತಾಂತರಗೊಳಿಸಿ, ನಂತರ ಹೊಯ್ಸಳ ಅರಸು ವಿಷ್ಣುವರ್ಧನನಿದ್ದಾಗ ತೊಂಡನೂರಿಗೆ ಬಂದರು. ಆತನ ಸಹಾಯದಿಂದ ಮೇಲುಕೋಟೆಯಲ್ಲಿ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿದರು. ಅವರು ಶ್ರೀರಂಗಕ್ಕೆ ವಾಪಾಸಾಗುವ ಮುನ್ನ ಇಲ್ಲಿ 12 ವರ್ಷಗಳಿದ್ದರು.

ಹೊಯ್ಸಳ ವಿಷ್ಣುವರ್ಧನ ಹಾಗೂ ಮುಮ್ಮಡಿ ಬಲ್ಲಾಳನ ಆಳ್ವಿಕೆಯಲ್ಲಿ ತೊಂಡನೂರು ಅವರ ಉಪರಾಜಧಾನಿಯಾಗಿತ್ತೆಂದು ಹೇಳಲಾಗುತ್ತದೆ.[48] ಕ್ರಿ.ಶ. 1129ರ ಒಂದು ಶಾಸನವು ಚಾಮುಂಡಿಬೆಟ್ಟದಲ್ಲಿ ಸಿಕ್ಕಿದ್ದು[49], ಇದು ತಿಳಿಸುವಂತೆ ವಿಷ್ಣುವರ್ಧನನು ಯಾದವಪುರ (ತೊಂಡನೂರು) ದಲ್ಲಿದ್ದಾಗ ಮರಬಲಿತೀರ್ಥಕ್ಕೆ ದಾನನೀಡಿದ ಅಂಶವಿದೆ. ಕ್ರಿ.ಶ. 1125ರ ಚಿಕ್ಕಮಗಳೂರಿನ ಮತ್ತೊಂದು ಶಾಸನವು ಯಾದವಪುರದಲ್ಲಿ ವಿಷ್ಣುವರ್ಧನನಿದ್ದ ಅಂಶವನ್ನು ದಾಖಲಿಸುತ್ತದೆ.[50] ಆದರೆ, ಈ ಶಾಸನಗಳಲ್ಲಿ ಯಾದವಪುರವನ್ನು ತೊಂಡನೂರಿನೊಂದಿಗೆ ಸಮೀಕರಿಸಲು ಮುಂದಾಗುವ ವಿದ್ವಾಂಸರುಗಳ ಅಭಿಪ್ರಾಯವನ್ನು ಸಮರ್ಥಿಸಿಕೊಳ್ಳಲು ಆ ಶಾಸನಗಳಲ್ಲಿ ಪೂರಕ ಮಾಹಿತಿಗಳಿಲ್ಲ. ಆದರೆ ಅದೇ ಸಂದರ್ಭದಲ್ಲಿ ವಿಷ್ಣುವರ್ಧನನ ಕಾಲಕ್ಕೆ ಸೇರಿದ ಇದೇ ತಾಲ್ಲೂಕಿನ ಶಂಭೂನಹಳ್ಳಿ,[51] ಹಾಗೂ ಹೊಸಕೋಟೆಗೆ[52] ಯಾದವಪುರ

ಎಂಬ ಹೆಸರಿದ್ದ ಅಂಶ ಸ್ಪಷ್ಟವಾಗುತ್ತಿದ್ದು, ಚಾಮುಂಡಿಬೆಟ್ಟದ ಶಾಸನದಲ್ಲಿ ಉಕ್ತವಾಗಿರುವ ಯಾದವಪುರ ಇದೇ ಆಗಿರಬೇಕು ಎಂದು ಅನುಮಾನಿಸಲು ಅವಕಾಶವಿದೆ. ಇವೆಲ್ಲದರ ನಡುವೆಯೂ ಈ ತೊಂಡನೂರ, ಶಾಸನೋಕ್ತ 'ಯಾದವಪುರ' ಎಂದು ಒಪ್ಪಿದರೆ, ಆಗ ಆಚಾರ್ಯರು ಕ್ರಿ.ಶ. 1128ರ ವರೆಗೂ ತೊಂಡನೂರಿನಲ್ಲಿದ್ದರೆಂದು ಒಪ್ಪಬೇಕಾಗುತ್ತದೆ. ಹಾಗೆ ಒಪ್ಪಿದರೆ ರಾಮಾನುಜರ ಜೀವಿತಕ್ಕೆ ಸಂಬಂಧಿಸಿದಂತೆ ಮತ್ತಷ್ಟು ಗೊಂದಲಗಳು ಉದ್ಭವಿಸುತ್ತವೆ. ಹಾಗೆಯೇ ಲಕ್ಷ್ಮಿನಾರಾಯಣ ಗುಡಿಯ ಹಿಂಭಾಗದಲ್ಲಿ ಹೊಯ್ಸಳರ ಕಾಲದ ಅರಮನೆ ಕಟ್ಟಡದ ಅವಶೇಷಗಳಿವೆ ಎಂದು ಹೇಳಲಾಗುತ್ತದಾದರೂ ಇಂದು ಇಲ್ಲಿ ಏನೇನೂ ಉಳಿದಿಲ್ಲ.

ಮೇಲಿನ ಮಾಹಿತಿಗಳು ವಿಷ್ಣುವರ್ಧನನು ಕ್ರಿ.ಶ. 1125–1128 ರ ನಡುವೆಯಾದರೂ ತೊಂಡನೂರಿನಲ್ಲಿದ್ದನೆಂಬುದಕ್ಕೆ ಪೂರಕವಾಗಿವೆ. ಬಹುಶಃ ರಾಮಾನುಜರು ವಿಷ್ಣುವರ್ಧನನನ್ನು ಈ ಅವಧಿಯಲ್ಲಿ ಭೇಟಿ ಮಾಡಿರಬಹುದು. ವಿಷ್ಣುವರ್ಧನನು ದೇವಾಲಯಗಳನ್ನು ನಿರ್ಮಿಸಲು ಕಾರ್ಯಪ್ರೌರುತ್ತನಾದುದು, ಆತನು ರಾಜಕೀಯವಾಗಿ ಬಲಾಢ್ಯವಾದ ನಂತರ. ಬೇಲೂರು ಮತ್ತು ತಲಕಾಡಿನ ಕೀರ್ತಿನಾರಾಯಣ ದೇವಾಲಯಗಳು ನಿರ್ಮಾಣವಾದುದು ಕ್ರಿ.ಶ. 1117, ತೊಂಡನೂರಿನ ನಂಬಿನಾರಾಯಣದೇವಾಲಯವು ಕ್ರಿ.ಶ. 1120, ಆದುದರಿಂದ ಮೇಲುಕೋಟೆಯ ನಾರಾಯಣಸ್ವಾಮಿ ದೇವಾಲಯವು ಕ್ರಿ.ಶ. 1117ರ ನಂತರವೇ ನಿರ್ಮಾಣವಾಗಿರುವ ಸಾಧ್ಯತೆಯೇ ಹೆಚ್ಚಾಗಿದೆ. ಗಮನಾರ್ಹ ಅಂಶವೆಂದರೆ ಮೇಲುಕೋಟೆಯಲ್ಲಿ ಸಿಕ್ಕಿರುವ ವಿಷ್ಣುವರ್ಧನನ ಕಾಲದ ಒಂದು ಶಾಸನದಲ್ಲಿ[53] ಸುರಿಗೆಯ ನಾಗಣ್ಣ ಎಂಬ ವಿಷ್ಣುವರ್ಧನನ ಅಧಿಕಾರಿಯ ಹೆಸರು ಉಕ್ತವಾಗಿದೆ. ಈತನ ಹೆಸರು ತೊಂಡನೂರಿನ ಶಾಸನದಲ್ಲಿಯೂ ಉಲ್ಲೇಖವಾಗಿದೆ.[54] ಆದ್ದರಿಂದ ಮೇಲುಕೋಟೆಯ ನಾರಾಯಣದೇವಾಲಯದ ಗರ್ಭಗುಡಿಯು ಈತನ ಕಾಲದಲ್ಲಿಯೇ ನಿರ್ಮಾಣ–ವಾಗಿರಬಹುದು.

ದೇವಾಲಯದ ಜೀರ್ಣೋದ್ಧಾರವು ಸರಿಸುಮಾರು ಕ್ರಿ.ಶ. 1117 ಮತ್ತು 1128ರ ನಡುವೆ ನಡೆದಿದೆ. ಇದರ ನಡುವೆ ನಿರ್ದಿಷ್ಟ ದಿನಾಂಕವನ್ನು ತಿಳಿಯುವುದು ಸುಲಭ ಸಾಧ್ಯವಲ್ಲ. ಸಾಂಪ್ರದಾಯಿಕ ದಾಖಲೆಗಳಂತೆ ರಾಜನು ರಾಮಾನುಜರ ಪ್ರಭಾವಕ್ಕೊಳಗಾದ ಕೆಲವು ವರ್ಷಗಳ ನಂತರ ನಡೆದಿದೆ.

ಮೇಲುಕೋಟೆಯು ಹೊಯ್ಸಳರ ಕಾಲದಲ್ಲಿ ಒಂದು ಗಿರಿದುರ್ಗವಾಗಿತ್ತು. ಅಲ್ಲಿ ಕೋಟೆಯೂ ಇತ್ತು.[55] ಆದರೆ ಅಲ್ಲಿ ಮುಖ್ಯ ಊರು, ಜನವಸತಿ ಇದ್ದಂತೆ ತೋರುವುದಿಲ್ಲ.

ಮೇಲುಕೋಟೆಯ ಅತ್ಯಂತ ಪ್ರಾಚೀನ ಶಾಸನ ಇಮ್ಮಡಿ ಬಲ್ಲಾಳನ ಕಾಲದ್ದು (ಕ್ರಿ.ಶ. 1189) ಅದಕ್ಕಿಂತ ಮುಂಚಿನ ಶಾಸನ ಯಾವುದೂ ಇಲ್ಲಿಲ್ಲ. ಮೇಲುಕೋಟೆ ಪ್ರವರ್ಧಮಾನಕ್ಕೆ ಬಂದುದು ವಿಜಯನಗರ ಕಾಲದಿಂದ. ತಮ್ಮ ತಪೋಕಾರ್ಯಗಳಿಗೆ ಪ್ರಶಸ್ತವಾದ ಪ್ರದೇಶವಾದ ಮೇಲುಕೋಟೆಯನ್ನು ಆಚಾರ್ಯರು ಆಯ್ಕೆಮಾಡಿದರು. ತಮ್ಮನ್ನಾಶ್ರಯಿಸಿದ್ದ ಭಕ್ತಸಮುದಾಯವನ್ನು ತೊಂಡನೂರಿನಲ್ಲಿ ನೆಲೆಸುವಂತೆ ಮಾಡಿದರು. ಇದರಿಂದಾಗಿ ತೊಣ್ಣೂರು 'ಭಕ್ತ'ರ ಅಂದರೆ 'ತೊಂಡರ' ಊರಾಯಿತು. ರಾಮಾನುಜರು ನೆಲೆಸಿದ್ದ ಮೇಲುಕೋಟೆ ಶ್ರೀ ವೈಷ್ಣವ ಕ್ಷೇತ್ರವಾಗಿ ಪ್ರಸಿದ್ಧಿಗೆ ಬಂದಿತು. ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ ಮೇಲುಕೋಟೆ ಹೆಚ್ಚೆಂದರೆ ಒಂದು ಗ್ರಾಮವಾಗಿದ್ದಿರಬಹುದು. ಒಂದು ಪಕ್ಷ ಅದು ಜನನಿಬಿಡ ಪಟ್ಟಣವಾಗಿದ್ದರೆ, ವಿಷ್ಣುವರ್ಧನನು ನಿರ್ಮಿಸಿದನೆಂದು ಹೇಳಲಾದ ನಂಬಿನಾರಾಯಣ ದೇವಾಲಯವು ರಾಮಾನುಜರ ನೆಲೆಯಾಗಿದ್ದ ಮೇಲುಕೋಟೆಯಲ್ಲೇ ನಿರ್ಮಾಣಾವಾಗಬೇಕಿತ್ತು. ಆದರೆ ಅದು ಅಲ್ಲಿ ನಿರ್ಮಿತವಾಗಲಿಲ್ಲ.

ಇಲ್ಲಿನ ಉತ್ಸವ ಮೂರ್ತಿಗೆ ಸಂಬಂಧಿಸಿದಂತೆ ಇರುವ ಐತಿಹ್ಯದಂತೆ ರಾಮಾನುಜರು ಈ ಮೂರ್ತಿಯನ್ನು ದೆಹಲಿಯ ಬಾದಷಾಹನ ಆಸ್ಥಾನದಿಂದ ತಂದರು ಎಂದು ನಂಬಲಾಗಿದೆ. ಇದನ್ನು ದೆಹಲಿಯಿಂದ ತಂದರು ಎಂಬ ವಿಷಯವನ್ನು ನಂಬುವುದು ತುಂಬಾ ಕಷ್ಟವಾಗಿದೆ. ಇದು ಮುಸ್ಲಿಂ ರಾಜನ ಖಜಾನೆಯಲ್ಲಿದ್ದಿತು, ಎಂದು ಆರಂಭಿಕ ಕಥೆಯ ಕಾರಣದಿಂದ ನಂತರದ ಕಾಲದಲ್ಲಿಯೂ ನಂಬಲಾಗಿದೆ. ಗುರುಪರಂಪರೆಯು ಎಮ್ಮೆಡುರಾಯನ ಆಸ್ತಾನದಲ್ಲಿತ್ತೆಂದು ಹೇಳಿದೆ. ಆದರೆ ಈ ರಾಜ ಇತಿಹಾಸದಲ್ಲಿ ಎಲ್ಲಿಯೂ ಗುರುತಿಸಲ್ಪಟ್ಟಿಲ್ಲ. 'ಕರ್ನಾಟಕದಲ್ಲಿ ರಾಮಾನುಜಾಚಾರ್ಯರು' ಕೃತಿಯಲ್ಲಿ ಬಿ.ಆರ್.ಗೋಪಾಲ್‌ರವರು ಈ ಕಥೆಯನ್ನು ಸಾರಾಸಗಟಾಗಿ ತಿರಸ್ಕರಿಸಿದ್ದಾರೆ. ಹಾಗೂ ಶ್ರೀರಂಗದ ಸ್ಥಳಪುರಾಣದಲ್ಲಿಯೂ ಅಲ್ಲಿನ ಉತ್ಸವಮೂರ್ತಿಯ ವಿಚಾರದಲ್ಲಿ ಇದೇ ಕಥೆಯನ್ನು ಹೆಣೆಯಲಾಗಿದೆ. 'ಶೆಲ್ವಪಿಳ್ಳೆ' ಎಂದು ಕರೆಯಲ್ಪಡುವ ಈ ಮೂರ್ತಿಯನ್ನು ಬ್ರಹ್ಮನು ರಾಮನಿಗೆ ಕೊಟ್ಟನು ನಂತರ ಇದು ಹನುಮಂತ, ಕುಶ, ಶ್ರೀಕೃಷ್ಣನ ಬಳಿ ಕೆಲಕಾಲ ಇತ್ತೆಂದು ನಂತರ ಅದು ಮೇಲುಕೋಟೆಗೆ ಶ್ರೀಕೃಷ್ಣನಿಂದ ಬಂದು ನೆಲೆಸಿತೆಂದು ಐತಿಹ್ಯವಿದೆ.

ಗುರುಪರಂಪರೆಯು ತಿಳಿಸುವಂತೆ ವಿಷ್ಣುವರ್ಧನನು ನೀಡಿದ ಆರ್ಥಿಕ ಸಹಾಯದಿಂದ ನಾರಾಯಣಸ್ವಾಮಿ ದೇವಾಲಯದಲ್ಲಿ ಪೂಜಾವಿಧಿವಿಧಾನಗಳನ್ನು ನಿಯಮಿಸಿದರು ಎಂದು ಗುರುಪರಂಪರೆಯು ತಿಳಿಸುತ್ತದೆ. ಯತಿರಾಜಮಠದಲ್ಲಿರುವ ಪುರಾತನ ಓಲೆಗರಿಯ ಕಾಫಿಯು ತಿಳಿಸುವಂತೆ ಸಂಪೂರ್ಣ ದೇವಾಲಯ ಸಂಕೀರ್ಣದ ನಿರ್ಮಾಣಕ್ಕೆ ವಿಷ್ಣುವರ್ಧನನು ನೀಡಿದ ಹಣದ ಸಹಾಯ ಮತ್ತು ಖರ್ಚಿನ ವಿವರಗಳನ್ನು

ನೀಡುತ್ತದೆ. ಆದರೆ ಉಲ್ಲೇಖಿತ ದೇವಾಲಯಗಳು ಮತ್ತು ಇತರ ಭಾಗಗಳು ವಿಜಯನಗರ ಮತ್ತು ಮೈಸೂರು ಅರಸರಕಾಲದಲ್ಲಿ ಸೇರ್ಪಡೆಗೊಂಡುದಕ್ಕೆ ಶಾಸನಾಧಾರಗಳಿವೆ ಮತ್ತು ವಾಸ್ತುಶಿಲ್ಪ ಲಕ್ಷಣಗಳು ಅದನ್ನು ಸಮರ್ಥಿಸುತ್ತವೆ. ಆದುದರಿಂದ ಈ ದಾಖಲೆಯ ಅಂಶಗಳ ವಿವರಗಳು ಸತ್ಯಕ್ಕೆ ದೂರವಾದವು.

ಹೊಯ್ಸಳರ ಕಾಲದಲ್ಲಿ ದೇವಾಲಯ ಸಂಕೀರ್ಣದ ಬೆಳವಣಿಗೆ

ಮೂರನೇ ಬಲ್ಲಾಳನ ಕಾಲದಲ್ಲಿ ಹೊಯ್ಸಳರ ದಂಡನಾಯಕನಾಗಿದ್ದ ಮಾದಪ್ಪ ದಣ್ಣಾಯಕನು ಪರಮಭಾಗವತ ಮತ್ತು ವಿಷ್ಣುವಿನ ಪರಮಭಕ್ತ ಎಂದು ಹಲವು ಶಾಸನಗಳಲ್ಲಿ ವರ್ಣಿತವಾಗಿದ್ದಾನೆ. ಈತನ ಉದಾರ ದಾನ-ದತ್ತಿಗಳಿಂದ ಇಲ್ಲಿನ ದೇವಾಲಯ ಸಂಕೀರ್ಣವು ಬೆಳವಣಿಗೆಯಾಯಿತು. ಧಾರ್ಮಿಕ ಕರ್ತವ್ಯವೆಂಬಂತೆ ಈತನು ವೈಷ್ಣವ ಮತವನ್ನು ವಿಸ್ತರಿಸಲು ಮುಂದಾದನು. ಈ ಮೂಲಕ ಸ್ವತಃ ರಾಮಾನುಜರಷ್ಟೇ ಈ ಮತದ ಉದ್ಧಾರಕ್ಕೆ ಶ್ರಮಿಸಿದನು.

ಈತನ ಒಂದು ಶಾಸನದಲ್ಲಿ ರಾಮಾನುಜರ ಮತ್ತೊಂದು ಹೆಸರಾದ ಎಂಬೆರುಮಾನಾರ್ (ತಮಿಳು ಹೆಸರು) ಮೊದಲಬಾರಿಗೆ ಉಲ್ಲೇಖವಾಗಿದೆ.[56] ಇದಲ್ಲದೆ ಈತನು ದೇವಾಲಯಕ್ಕೆ ನೀಡಿದ ಹಲವು ದಾನಗಳನ್ನು ಹೇಳುವ ಮೂರು ಶಾಸನಗಳು ಲಭ್ಯವಾಗಿವೆ.[57] ಈತನು ಸಂಕೀರ್ಣದ ವಿಶಾಲ ಪಾತಾಳಾಂಕಣವನ್ನು ನಿರ್ಮಿಸಿದನು. ಈ ದೇವಾಲಯದ ಗರ್ಭಗೃಹ, ಅರ್ಧಮಂಟಪ ಮತ್ತು ಕತ್ತಲೆ ಪ್ರದಕ್ಷಿಣೆ ಭಾಗಗಳು ಹೊಯ್ಸಳರ ಕಾಲದ ನಿರ್ಮಾಣಗಳಾಗಿವೆ. ಇವುಗಳ ವಾಸ್ತುಶೈಲಿಯು ಪೂರ್ವಚೋಳರ ಶೈಲಿಯವಾಗಿದ್ದು 11ನೇ ಶತಮಾನಕ್ಕೆ ಮುಂಚೆಯೇ ಇವು ನಿರ್ಮಾಣವಾಗಿವೆ ಎಂದು ಅಧ್ಯಯನ ತಿಳಿಸುತ್ತದೆ. ಶಾಸನದಂತೆ ಈ ಭಾಗಗಳು ಸುರಿಗೆಯ ನಾಗಯ್ಯನ ಕಾಲದ ನಿರ್ಮಾಣಗಳಾಗಿವೆ. ದೇವಾಲಯ ಸಂಕೀರ್ಣದ ಚಕ್ರತ್ತಾಳ್ವಾರ್‌ಸನ್ನಿಧಿ, ಯಾಗಶಾಲೆ, ತಾಯಾರ್‌ಗುಡಿ, ಅಡಿಗೆಮನೆ, ಇವು ಕತ್ತಲೆ ಪ್ರದಕ್ಷಿಣೆಯ ಕಂಬಗಳ ಶೈಲಿಯಲ್ಲಿರುವುದರಿಂದ ಇವು ಹೊಯ್ಸಳರ ಕಾಲದ ನಿರ್ಮಾಣಗಳಾಗಿವೆ.[58]

ವಿಜಯನಗರದ ಕಾಲದಲ್ಲಿ ದೇವಾಲಯ ಸಂಕೀರ್ಣದ ಬೆಳವಣಿಗೆ

ದೇವಾಲಯ ಸಂಕೀರ್ಣದ ನಂತರದ ಬೆಳವಣಿಗೆಯ ಹಂತವು 15ನೇ ಶತಮಾನದ ಮಧ್ಯಭಾಗದಲ್ಲಿ ಆರಂಭವಾಯಿತು. ಇದು ವಿಜಯನಗರದ ಕಾಲದ ಉದಾರ ಉಪಕಾರ (ದತ್ತಿ) ಗುಣವನ್ನು ಹೊಂದಿದ್ದ ತಿಮ್ಮಣ್ಣ ದಣ್ಣಾಯಕ ಮತ್ತು ಆತನ ಪತ್ನಿಯಾಗಿದ್ದ

ರಂಗಾಂಬಿಕೆ, ಅಧಿಕಾರಿಗಳಿಂದ ಸಾಧ್ಯವಾಯಿತು. ಆಧಾರಗಳಿಂದ ತಿಳಿಯುವುದೇನೆಂದರೆ ತಿಮ್ಮಣ್ಣ ದಣ್ಣಾಯಕನು ವಿಜಯನಗರದ ಅರಸು ಮಲ್ಲಿಕಾರ್ಜುನನ ಕಾಲದಲ್ಲಿ ಈತನ ಪ್ರತಿನಿಧಿಯಾಗಿ ನಾಗಮಂಗಲವನ್ನು ಆಳುತ್ತಿದ್ದನು. ಈತನು ಲೋಹಿತ ಕುಟುಂಬಕ್ಕೆ ಸೇರಿದವನು. ಈ ದಂಪತಿಗಳು ನಾರಾಯಣ ಮತ್ತು ಅವನ ಪತ್ನಿಯಾದ ಲಕ್ಷ್ಮಿಯ ಆರಾಧಕರಾಗಿದ್ದು, ದೇವಾಲಯದ ಆರಾಧನೆಗೆ ಹಲವು ಗ್ರಾಮಗಳನ್ನು ಸರ್ವಮಾನ್ಯವಾಗಿ ನೀಡಿದ್ದಲ್ಲದೆ, ರಾಮಾನುಜಕೂಟಕ್ಕೂ (ಅನ್ನಸತ್ರ) ವ್ಯವಸ್ಥೆ ಮಾಡಿದರು.[59] (ಕ್ರಿ.ಶ.1458) ಈ ಆಶ್ರಯವು ದೇವಾಲಯ ಸಂಕೀರ್ಣದ ಸುಂದರವಾದ ಮಂಟಪದ ನಿರ್ಮಾಣಕ್ಕೆ ಕಾರಣವಾಯಿತು. ಅದೇ ತಾಯಾರ್‌ಗುಡಿಯ ಮುಂದಿರುವ ರಂಗಮಂಪಟ. ಇದು ಮನೋಹರವಾದ ಶಿಲ್ಪಗಳಿಂದ ಶೃಂಗರಿಸಲಾಗಿರುವ ಶ್ರೇಷ್ಠ ಸ್ತಂಭಗಳಿಂದ ಅಲಂಕೃತಗೊಂಡಿದೆ. ಅದೇ ರೀತಿ ಮಹಾಮಂಟಪ ಹಾಗೂ ಕತ್ತಲೆ ಪ್ರದಕ್ಷಿಣೆಗಳ ಸಂಕೀರ್ಣದ ಹೊರಗೋಡೆಯೂ ಇವರ ಕಾಲದ ನಿರ್ಮಾಣವಾಗಿದೆ. ತಿಮ್ಮಣ್ಣ ದಂಡನಾಯಕನು ಮಹಮ್ಮದೀಯರ ದಾಳಿಯ ತರುವಾಯ ಸಮಗ್ರ ಮೇಲುಕೋಟೆಯನ್ನು ಜೀರ್ಣೋದ್ಧಾರ ಮಾಡಿ ಮರುಜೀವ ತುಂಬಿ 'ಜೀರ್ಣೋದ್ಧಾರಕ' ಎಂಬ ಬಿರುದು ಪಡೆದನು.[60]

ಮತ್ತೆ ಈ ದೇವಾಲಯ ಸಂಕೀರ್ಣವು ಕೃಷ್ಣದೇವರಾಯನ ಕಾಲದಲ್ಲಿ ಮತ್ತಷ್ಟು ಬೆಳವಣಿಗೆಯಾದುದನ್ನು ಶಾಸನಗಳು ದೃಢಪಡಿಸುತ್ತವೆ. ಈತನ ಕಾಲದಿಂದ 16ನೇ ಶತಮಾನದ ಅಂತ್ಯದವರೆಗೆ ದೇವಾಲಯವು ಅತಿ ಹೆಚ್ಚಿನ ಭೂಧಾನಗಳನ್ನು ಪಡೆದುದನ್ನು ನೋಡಬಹುದು. ಹಲವು ಕೆರೆ ನೀರಿನ ಆಶ್ರಯಭೂಮಿ ಮತ್ತು ತರಿಭೂಮಿಗಳನ್ನು ಒಳಗೊಂಡ ಹಲವು ಗ್ರಾಮಗಳನ್ನು ದೇವಾಲಯಕ್ಕೆ ದಾನ ನೀಡಲಾಯಿತು. ಅಲ್ಲದೆ ಆ ಗ್ರಾಮಗಳ ತೆರಿಗೆ ವಸೂಲಿಯ ಅಧಿಕಾರವನ್ನು ನೀಡಲಾಯಿತು. ಮೇಲಿನ ಎಲ್ಲಾ ದಾನಗಳನ್ನು ವಿವಿಧ ರೀತಿಯ ತಿನಿಸುಗಳನ್ನು ನೈವೇದ್ಯವಾಗಿ ಒಳಗೊಂಡ ವಿಸ್ತಾರವಾದ ದಿನನಿತ್ಯದ ಆರಾಧನೆಗಾಗಿ ನೀಡಲಾಯಿತು. ಶಾಸನಗಳಲ್ಲಿ ಉಲ್ಲೇಖವಾಗಿರುವ ಹಲವು ಪೂಜಾ ಕೈಂಕರ್ಯಗಳು ಮತ್ತು ಹಲವು ಹೊಸ ಉತ್ಸವಗಳು (ಆಚರಣೆಗಳು) ಈ ಕಾಲದಲ್ಲಿ ಮೊದಲಿಗೆ ಪರಿಚಿತವಾದುದು ಈ ಸಂಕೀರ್ಣದ ಇತಿಹಾಸದಿಂದ ತಿಳಿದು ಬರುತ್ತದೆ. ಇವೆಲ್ಲವೂ ವಿಜಯನಗರದ ಕಾಲದ ವಿಷ್ಣುಭಕ್ತ ಹಲವು ಅಧಿಕಾರಿಗಳ ಕೊಡುಗೆಯ ಫಲವಾಗಿವೆ. ಅವರೆಂದರೆ ಕೃಷ್ಣರಾಯನಾಯಕ ವೆಂಕಟಾದ್ರಿರಾಜ, ತಿರುಮಲರಾಜ ಚನ್ನಯ್ಯದೇವ ಚೋಡ ಮಹಾಅರಸು, ನಾರಾಯಣದೇವ ಮಹಾಅರಸು ಮತ್ತು ಕೊಂಡಯ್ಯದೇವ ಮಹಾಅರಸು, ಈ ದೇವಾಲಯ ಸಂಕೀರ್ಣದ ದ್ವಾರಗೋಪುರವು ಹಂಪಿಯ ವಿರೂಪಾಕ್ಷ ದೇವಾಲಯದ ಉತ್ತರ ಪರಿಧಿಯ ಗೋಪುರ ಸೇರಿದಂತೆ ಹಲವು

ಗೋಪುರಗಳೊಂದಿಗೆ ಸಾದೃಶ್ಯ ಹೊಂದಿರುವುದರಿಂದ ಇದು 15ನೇ ಶತಮಾನದಲ್ಲಿ ನಿರ್ಮಾಣವಾಯಿತೆಂದು ಹೇಳಬಹುದು.

ಮೈಸೂರು ಒಡೆಯರ ಕಾಲದಲ್ಲಿ ದೇವಾಲಯ ಸಂಕೀರ್ಣದ ಬೆಳವಣಿಗೆ

ಮೈಸೂರು ಒಡಯರು ಮೇಲುಕೋಟೆಗೆ ನಾರಾಯಣಸ್ವಾಮಿ ದೇವಾಲಯ ಸಂಕೀರ್ಣದ ಪ್ರಸಿದ್ಧ ಆಶ್ರಯಾತರಾಗಿದ್ದರು. ಮೈಸೂರು ಒಡೆಯರು ತಾವೇ ಹೇಳಿಕೊಂಡಿರುವಂತೆ, ತಾವು ಸಾಮ್ರಾಜ್ಯ ಸ್ಥಾಪಿಸಲು ಮೇಲುಕೋಟೆಯ ನಾರಾಯಣಸ್ವಾಮಿಯ ದಯೆಯೇ ಕಾರಣವಾಯಿತು. ರಾಜಒಡೆಯರು ಒಡೆಯರಲ್ಲಿ ಆರಂಭಿಕರಾಗಿದ್ದಾರೆ. ಇವರು ಹಲವು ಗ್ರಾಮಗಳನ್ನು ದೇವಾಲಯ ಸಂಕೀರ್ಣಕ್ಕೆ ದಾನನೀಡಿದ್ದರಲ್ಲದೆ, ದೇವಾಲಯದ ಒಳಭಾಗದ ಒಂದು ಕಂಬದ ಮೇಲೆ ತಮ್ಮ ಮೂರ್ತಿಯನ್ನು ನಿರ್ಮಿಸಿದ್ದಾರೆ. ಅಲ್ಲದೆ ಮೇಲುಕೋಟೆಯ ಜೀರ್ಣೋದ್ಧಾರಕ್ಕೆ ಉದಾರ ದಾನಗಳನ್ನು ನೀಡಿದ್ದಾರೆ. ಇದೇ ಕಾಲದಲ್ಲಿ ಐದನೇ ಚಾಮರಾಜ ಒಡೆಯರು ಮೇಲುಕೋಟೆ ಕಲ್ಯಾಣಿಯ ಸೋಪಾನಗಳನ್ನು ನಿರ್ಮಿಸಿದರು.[61] ಕೃಷ್ಣರಾಜ ಒಡೆಯರು ಮೇಲುಕೋಟೆ ದೇವಾಲಯ ಸಂಕೀರ್ಣದಲ್ಲಿ ಹಲವು ಉತ್ಸವಗಳನ್ನು ವ್ಯವಸ್ಥೆಗೊಳಿಸಿದರು.[62] ಕೃಷ್ಣರಾಜ ಒಡೆಯರು ಮೇಲುಕೋಟೆಯಲ್ಲಿ ಕಲಿತ ಬ್ರಾಹ್ಮಣರಿಗಾಗಿ ಅಗ್ರಹಾರವನ್ನು ಸ್ಥಾಪಿಸಿದರು.[63] ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೇಲುಕೋಟೆಯು ಗಮನಾರ್ಹ ಬೆಳವಣಿಗೆಗೆ ಸಾಕ್ಷಿಯಾಗಿದೆ. ಕಲ್ಯಾಣಿಯ ಬಳಿ 18 ಅಲಂಕೃತ ಕಂಬಗಳಿಂದ ನಿರ್ಮಿಸಿರುವ ಭುವನೇಶ್ವರಿ ಮಂಟಪವೂ ಸೇರಿದಂತೆ ಹಲವು ಮಂಟಪಗಳು ನಿರ್ಮಾಣಗೊಂಡವು. ಮುಮ್ಮಡಿ ಕೃಷ್ಣರಾಜರು ನಾರಾಯಣನ ಪರಮಭಕ್ತರಾಗಿದ್ದು, ಇದರ ಕುರುಹಾಗಿ ತಮ್ಮ ನಾಲ್ಕು ಹೆಂಡತಿಯರಿರುವ ತಮ್ಮ ಶಿಲಾಮೂರ್ತಿಯನ್ನು ದೇವಾಲಯದ ಸಂಕೀರ್ಣದಲ್ಲಿ ಪ್ರತಿಷ್ಠಾಪಿಸಿದ್ದಾರೆ.

ದೇವಾಲಯ ಕೈಪಿಡಿಯು ಉಲ್ಲೇಖಿಸುವಂತೆ ನಾರಾಯಣಸ್ವಾಮಿ ದೇವಾಲಯ ಸಂಕೀರ್ಣದ ಹೊರ ಕೈಸಾಲೆ ಮತ್ತು ಅದರ ಮೇಲಿನ ಗಾರೆಶಿಲ್ಪಗಳು 1845ರಲ್ಲಿ ಒಡೆಯರ ಕಾಲದಲ್ಲಿ ನಿರ್ಮಾಣಗೊಂಡವು. ಸಂಕೀರ್ಣದ ಪಕ್ಕದಲ್ಲಿರುವ ಪಿಳ್ಳೈ ಲೋಕಾಚಾರ್ಯರ ದೇವಾಲಯವು ಸಹ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ನಿರ್ಮಾಣವಾಗಿದೆ ಎಂಬುದು ಶಾಸನದಿಂದ ತಿಳಿದು ಬರುತ್ತದೆ.[64] ಈ ಅವಧಿಯಲ್ಲಿ ದೇವಾಲಯಕ್ಕೆ ಚಿನ್ನ ಮತ್ತು ಬೆಳ್ಳಿಯ ಪಾತ್ರೆಗಳು ಮತ್ತು ಆಭರಣಗಳು, ಅಮೂಲ್ಯ ಆಭರಣಗಳು, ಉತ್ಸವಗಳಿಗೆ ಉಪಯೋಗಿಸುವ ಹಲವು ವಿಧದ ವಾಹನಗಳು ಹೆಚ್ಚಿನ ಸಂಖ್ಯೆಯಲ್ಲಿ

ಹರಿದುಬರಲಾರಂಭಿಸಿದವು. ಇವುಗಳಲ್ಲಿ ಉತ್ಸವ ಮೂರ್ತಿಗೆ ನೀಡಿದ ಚಿನ್ನದ ಕಿರೀಟವು ಮುಖ್ಯವಾದುದು ಅದೇ 'ರಾಜಮುಡಿ'. ಇದು ರಾಜ ಒಡೆಯರು ನೀಡಿದ ದಾನವಾಗಿದೆ. ಹಾಗೆಯೇ 3ನೇ ಕೃಷ್ಣರಾಜ ಒಡೆಯರು 'ಕೃಷ್ಣರಾಜಮುಡಿ' ಎಂಬ ಕಿರೀಟವನ್ನು ದಾನವಾಗಿ ನೀಡಿದ್ದಾರೆ.

ನರಸಿಂಹಸ್ವಾಮಿ ದೇವಾಲಯ

ಮೇಲುಕೋಟೆಯ ನಾರಾಯಣಸ್ವಾಮಿ ದೇವಾಲಯದಷ್ಟೇ ಮಹತ್ವ ಪಡೆದಿರುವ ಮತ್ತೊಂದು ದೇವಾಲಯ ನರಸಿಂಹಸ್ವಾಮಿ ದೇವಾಲಯ. ಮೇಲುಕೋಟೆಯ ಪೂರ್ವಭಾಗಕ್ಕೆ ಬೆಟ್ಟದ ಮೇಲಿರುವ ಆಲಯವು ಪಶ್ಚಿಮಾಭಿಮುಖವಾಗಿ ನಿಂತಿವೆ. ಈ ದೇವಾಲಯದ ಸ್ಥಾಪನೆ ಹಾಗೂ ಬೆಳವಣಿಗೆಯನ್ನು ಗುರುತಿಸಲು ಅನುವಾಗುವ ಯಾವುದೇ ಶಾಸನಾಧಾರಗಳು ಲಭ್ಯವಿಲ್ಲ. ವಾಸ್ತುಶಿಲ್ಪದ ಲಕ್ಷಣಗಳಿಂದಲೆ ಕಾಲ ಮತ್ತು ಬೆಳವಣಿಗೆಯನ್ನು ತಿಳಿಯಬೇಕಾಗಿದೆ. 360 ಮೆಟ್ಟಿಲುಗಳನ್ನು ಹೊಂದಿರುವ ಆಲಯದ ಮುಖ್ಯಗೋಪುರವು 80 ಅಡಿಗಳಷ್ಟು ಎತ್ತರವಾಗಿದೆ. ಇದರ ಅಧಿಷ್ಠಾನವು ಕಲ್ಲಿನಿಂದ ನಿರ್ಮಿಸಿದ್ದು, ಇದು ಜಗತಿ, ಪಟ್ಟ, ಊರ್ಧ್ವಪದ್ಮ, ಕಂಠ, ಕಂಪ, ತ್ರಿಪಟ್ಟ, ಕುಮುದಗಳಿಂದ ಕೂಡಿದೆ. ಈ ಎಲ್ಲಾ ಶೈಲಿಗಳನ್ನು ಗಮನಿಸಿದರೆ ಇದು ಚೋಳ ಮತ್ತು ಹೊಯ್ಸಳರ ಮಿಶ್ರಗೊಂಡ ಶೈಲಿಯಲ್ಲಿ ನಿರ್ಮಾಣವಾಗಿದೆ. ದ್ವಾರದ ಒಂದು ಕಂಬದಲ್ಲಿ ಧೈನ್ಯ ಭಾವದಿಂದ ಕೈಜೋಡಿಸಿ ನಿಂತಿರುವ ಒಬ್ಬ ದೊರೆಯ ಶಿಲ್ಪವನ್ನು ಕಡೆಯಲಾಗಿದೆ. ಇದು ತಿರುಪತಿಯಲ್ಲಿರುವ ಶ್ರೀ ಕೃಷ್ಣದೇವರಾಯನ ಕಂಚಿನ ಪ್ರತಿಮೆಯನ್ನು ಖಚಿತವಾಗಿ ಹೋಲುತ್ತದೆ.[66] ಇದರ ಕಾಲವನ್ನು ಗುರುತಿಸಲು ಯಾವುದೇ ಲಿಖಿತ ದಾಖಲೆಗಳಿಲ್ಲ. ಗೋಪುರದ ಮೇಲೆ ಕೆತ್ತಲ್ಪಟ್ಟಿರುವ ಅಲಂಕೃತ ಶಿಲ್ಪಗಳು ಹೇಳುವಂತೆ ಇದು ಹೊಯ್ಸಳರ ಕಾಲದ ಕೊನೆಯಲ್ಲಿ ಅಥವಾ ವಿಜಯನಗರದ ಅರಸರ ಆರಂಭದ ಕಾಲದಲ್ಲಿ ನಿರ್ಮಾಣವಾಗಿದೆ.[67] ಗೋಪುರದ ಇಟ್ಟಿಗೆಯ ಉಪಯೋಗ ಮತ್ತು ಶಿಲ್ಪಗಳ ಆಕೃತಿಗಳು ಸಹ ಇದೇ ಕಾಲಕ್ಕೆ ಸೇರಿವೆ. ಆದರೆ ನಿರ್ದಿಷ್ಟ ಕಾಲವನ್ನು ಗುರುತಿಸಲು ಸಾಧ್ಯವಿಲ್ಲ. ಗಮನಾರ್ಹ ಅಂಶವೆಂದರೆ ಗೋಪುರದ ಕಡಿದಾದ ಆಕೃತಿಯು ನಮಗೆ ಚೋಳ ಮತ್ತು ಪಾಂಡ್ಯರ ಕೊನೆಯ ಅವಧಿಯ ಗೋಪುರವನ್ನು ನೆನಪಿಸುತ್ತದೆ.

ಆಲಯದ ಕೇಂದ್ರ ಬಿಂದುವಿನಲ್ಲಿ ಗರ್ಭಗೃಹ ಮತ್ತು ಮುಖಮಂಟಪಗಳನ್ನು ಹೊಂದಿದ್ದು, ಪೂರ್ವಭಾಗಕ್ಕೆ ಮುಖಮಾಡಿದೆ. ಇದು ಅಷ್ಟು ವೈಭವದ ಕಟ್ಟಡವಲ್ಲ ಆದರೂ ಗರ್ಭಗೃಹದ ಮೇಲೆ ಏಕತಳ ಶಿಕರವಿದೆ. ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಿರುವ ಈ

ಭಾಗವು ಇತ್ತೀಚಿನ ಕಾಲದ್ದಾಗಿದೆ. ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿರುವ ಮುಖ್ಯ ಮೂರ್ತಿಯೇ ಶ್ರೀ ಯೋಗಾನರಸಿಂಹ. ಈ ಮೂರ್ತಿಯ ಕಾಲುಗಳು ಅಡ್ಡಲಾಗಿ ಇಡಲ್ಪಟ್ಟು ಯೋಗಪಟ್ಟದಿಂದ ಕೂಡಿದೆ. ಈ ಮೂರ್ತಿಯು ಚತುರ್ಭುಜಗಳನ್ನು ಹೊಂದಿದ್ದು, ಮೇಲಿನ ಎರಡು ಭುಜಗಳಲ್ಲಿ ಬಲಕ್ಕೆ ಚಕ್ರವನ್ನು ಎಡಕ್ಕೆ ಶಂಖವನ್ನು ಧರಿಸಿದೆ. ಅಲಂಕಾರ, ಶಂಖಚಕ್ರ, ಕಿರೀಟ ಇವುಗಳ ಶೈಲಿಯು ಹೊಯ್ಸಳ ಹಾಗೂ ಚೋಳ ಮಿಶ್ರ ಶಿಲ್ಪ ಶೈಲಿಯನ್ನು ಸೂಚಿಸುತ್ತದೆ. ಆದುದರಿಂದ ಇದು ಹೊಯ್ಸಳರ ಕಾಲದ ಕೊನೆಯಲ್ಲಿ ಅಥವಾ ವಿಜಯನಗರದ ಕಾಲದ ಆರಂಭದ ಕಾಲಕ್ಕೆ ಗುರುತಿಸಬಹುದು.

ಹಲವು ಬೆಳ್ಳಿಯ ಪಾತ್ರೆಗಳು ಹಾಗೂ ಆಭರಣಗಳನ್ನು ಮುಮ್ಮಡಿ ಕೃಷ್ಣರಾಜ ಒಡೆಯರು ದೇವಾಲಯಕ್ಕೆ ದಾನ ನೀಡಿದ್ದಾರೆ.[68] ಇವರ ಪತ್ನಿಯಾದ ಲಿಂಗರಾಜಮ್ಮಣ್ಣಿಯು ಚಿನ್ನದ ಕಿರೀಟವನ್ನು ದಾನವಾಗಿ ನೀಡಿದ್ದಾರೆ.[69] ದೇಶಿಕೇಂದ್ರ ಬ್ರಹ್ಮತಂತ್ರ ಪರಕಾಲಸ್ವಾಮಿಗಳು ದೇವಾಲಯಕ್ಕೆ ಬೃಹತ್ ಘಂಟೆಯನ್ನು ನೀಡಿದ್ದಾರೆ. ಕ್ರಿ.ಶ. 1785ರ ಕಾಲದ ಟಿಪ್ಪು ಸುಲ್ತಾನನ ಶಾಸನವು ತಿಳಿಸುವಂತೆ ರಾಜನು ನರಸಿಂಹ ದೇವಾಲಯಕ್ಕೆ 12 ಆನೆಗಳನ್ನು ದಾನ ನೀಡಿದ್ದಾನೆ.[70] ಟಿಪ್ಪುವು ಇದೇ ದೇವಾಲಯಕ್ಕೆ ಬೃಹತ್ ನಗಾರಿಯನ್ನು ಸಹ ದಾನ ಮಾಡಿದ್ದಾನೆ.[71] ಹೀಗೆ ರಾಜಾಶ್ರಯದೊಂದಿಗೆ ಈ ದೇವಾಲಯ ಮೇಲುಕೋಟೆ ದೇವಾಲಯ ಸಂಸ್ಕೃತಿಯಲ್ಲಿ ಮಹತ್ತರ ಸ್ಥಾನವನ್ನು ಪಡೆಯಿತು.

ಮೇಲುಕೋಟೆಯ ಇನ್ನಿತರ ದೇವಾಲಯಗಳು

ನರಸಿಂಹಸ್ವಾಮಿ ದೇವಾಲಯದ ಮುಖ್ಯದ್ವಾರಕ್ಕೆ ಮುಂಚೆಯೇ ಸಿಗುವ ದೇವಾಲಯವೆಂದರೆ ವರಹಾಸ್ವಾಮಿ ದೇವಾಲಯ. ಐತಿಹ್ಯವಿರುವಂತೆ ವರಹಸ್ವಾಮಿ ದೇವಾಲಯಕ್ಕೆ ಹೋದ ನಂತರವೇ ನರಸಿಂಹನ ದೇವಾಲಯಕ್ಕೆ ಹೋಗಬೇಕು. ಇದು ಅತ್ಯಂತ ಸರಳ ನಿರ್ಮಾಣವಾಗಿದ್ದು, ಇದು ಗರ್ಭಗೃಹ ಮತ್ತು ಮುಖಮಂಟಪಗಳನ್ನು ಹೊಂದಿದೆ. ಇದು ಮುಖ್ಯಭಾಗದಲ್ಲಿ ಲಕ್ಷ್ಮೀವರಾಹಾಸ್ವಾಮಿಯ ಮೂರ್ತಿಯನ್ನು ಹೊಂದಿದೆ. ಇದರ ಕಾಲವನ್ನು ಗುರುತಿಸುವುದು ಕಷ್ಟವಾಗಿದೆ. ಇದರ ಪಕ್ಕದಲ್ಲಿಯೇ ಇರುವ ಮತ್ತೊಂದು ದೇವಾಲಯ 'ಬಿಂದುಮಾಧವ' ದೇವಾಲಯ. ಇದು ಯಾವುದೇ ಗುರುತರ ಲಕ್ಷಣಗಳನ್ನು ಒಳಗೊಂಡಿಲ್ಲ. ಇದು ಆಗಮಗಳಲ್ಲಿ ಉಲ್ಲೇಖವಾಗಿರುವ ವಿಷ್ಣುವಿನ 24 ರೂಪಗಳಲ್ಲಿ ಮಾಧವನನ್ನು ನೆನಪಿಸುತ್ತದೆ. ಇದು ಹೊಯ್ಸಳರ ಶೈಲಿಯ ಮೂರ್ತಿ ಮಾಧವನನ್ನು ನೆನಪಿಸುತ್ತದೆ. ಇದು ಹೊಯ್ಸಳರ ಶೈಲಿಯ ಮೂರ್ತಿಯನ್ನು ಹೊಂದಿದ್ದು ಸರಿಸುಮಾರು 13ನೇ ಶತಮಾನಕ್ಕೆ ಸೇರುತ್ತದೆ.

ಇಲ್ಲಿನ ಮತ್ತೊಂದು ಮುಖ್ಯ ದೇವಾಲಯ 'ವೆಂಕಟರಮಣ ದೇವಾಲಯ'. ಇಲ್ಲಿ ಶ್ರೀನಿವಾಸನ ಮೂರ್ತಿಯನ್ನು ನಿಲ್ಲಿಸಲಾಗಿದೆ. ಶಿಖರವಿಲ್ಲದ ಆಲಯವು ನಿರಲಂಕೃತವಾಗಿದೆ. ಮೂಲ ಮೂರ್ತಿಯು ಗರುಡಪೀಠದ ಮೇಲೆ ನಿಂತಿದ್ದು, ಮೂರ್ತಿ ಲಕ್ಷಣದ ಆಧಾರದ ಮೇಲೆ ಇದು 18ನೇ ಶತಮಾನಕ್ಕೆ ಸೇರಿದುದಾಗಿದೆ ಎಂದು ಗುರುತಿಸಬಹುದು. ನಾರಾಯಣಸ್ವಾಮಿ ದೇವಾಲಯದ ಪಕ್ಕದಲ್ಲಿರುವುದೇ 'ವೇದಾಂತದೇಶಿಕರ ದೇವಾಲಯ'. ವಿಶಾಲವಾದ ತೆರೆದ ಹೊರಾಂಗಣವಿರುವ ಈ ದೇವಾಲಯವು ಗರ್ಭಗೃಹ, ಅರ್ಧಮಂಟಪ ಹಾಗೂ ಮಹಾಮಂಟಪಗಳನ್ನು ಹೊಂದಿದೆ. ಗರ್ಭಗುಡಿಯಲ್ಲಿ ವೇದಾಂತದೇಶಿಕರ ಮೂರ್ತಿಯಿದೆ. ಈ ದೇವಾಲಯವು ಸರಿಸುಮಾರು 18 ಅಥವಾ 19ನೇ ಶತಮಾನಕ್ಕೆ ಸೇರಿದುದಾಗಿದೆ.

ಗ್ರಾಮದ ಮುಖ್ಯಬೀದಿಯ ಪೂರ್ವಕ್ಕೆ ಇರುವ ಮತ್ತೊಂದು ದೇವಾಲಯ 'ನಮ್ಮಾಳ್ವಾರ್ ದೇವಾಲಯ', ಇದು ಅತ್ಯಂತ ಹಳೆಯ ದೇವಾಲಯವಾಗಿದ್ದು, ಇತ್ತೀಚಿಗೆ ಜೋರ್ಣೋದ್ಧಾರಗೊಂಡಿದೆ. ಈ ದೇವಾಲಯವು ಶಾಸನದಲ್ಲಿಯೂ ಉಲ್ಲೇಖಗೊಂಡಿದೆ.[72] (ಕ್ರಿ.ಶ. 1368) ಗಮನಾರ್ಹ ಅಂಶವೆಂದರೆ 14ನೇ ಶತಮಾನದಲ್ಲಿಯೇ ಆಳ್ವಾರರಿಗೆ ಪ್ರತ್ಯೇಕವಾದ ದೇವಾಲಯಗಳನ್ನು ಸಮರ್ಪಿಸಿರುವುದು. ನಾರಾಯಣಸ್ವಾಮಿ ದೇವಾಲಯಕ್ಕೆ ಸ್ವಲ್ಪದೂರದಲ್ಲಿರುವ ಮತ್ತೊಂದು ದೇವಾಲಯ 'ಕೇಶವ ದೇವಾಲಯ' ಶಿಖರವಿಲ್ಲದ ಸರಳ ಲಕ್ಷಣಗಳಿರುವ ಒಂದೇ ಕೊಠಡಿಯ ದೇವಾಲಯವಾಗಿದೆ. ಸಮಭಂಗನ ರೂಪದಲ್ಲಿ ನಿಂತಿರುವ ಮೂರ್ತಿಯು ತನ್ನ ನಾಲ್ಕು ಕೈಗಳಲ್ಲಿ ಶಂಖ, ಚಕ್ರ, ಗದೆ ಹಾಗೂ ಪದ್ಮಗಳನ್ನು ಹಿಡಿದಿದೆ. ಇದು ಹೊಯ್ಸಳ ಶೈಲಿಯ ಮೂರ್ತಿಶಿಲ್ಪವಾಗಿದೆ.

ಕೇಶವ ದೇವಾಲಯಕ್ಕೆ ಸ್ವಲ್ಪ ದೂರದಲ್ಲಿಯೇ ನಿರಲಂಕೃತ 'ನಮ್ಮಜೀಯರ್' ದೇವಾಲಯವಿದೆ. ಶ್ರೀ ವೈಷ್ಣವ ಪ್ರಭಂಧಿಕ ಶಾಲೆಯಲ್ಲಿ ಈ ಸಂತನಿಗೆ ಪ್ರತ್ಯೇಕವಾದ ಗುಡಿ ನಿರ್ಮಿಸಿರುವುದು ಅಪರೂಪ. ಆದುದರಿಂದ ಈ ಗುಡಿಯು ಈ ಪ್ರದೇಶದಲ್ಲಿ ವಿಶೇಷತೆಯನ್ನು ಪಡೆದಿದೆ. ನಮ್ಮಜೀಯರ್ ಇಲ್ಲಿ ಕುಳಿತಭಂಗಿಯಲ್ಲಿ ಕೆತ್ತಲ್ಪಟ್ಟಿದ್ದಾರೆ. ಸ್ವಲ್ಪ ದೂರದಲ್ಲಿಯೇ 'ತಿರುಮಂಗಿ ಆಳ್ವಾರ್' ದೇವಾಲಯವಿದೆ. ಹೆಚ್ಚಿನ ಅಲಂಕಾರಗಳಿಲ್ಲದ ಸ್ತಂಭಗಳು ಹಾಗೂ ಶಿಖರವಿರುವ ಗರ್ಭಗೃಹವಿದೆ. ಆದರೆ ಇದರ ಕಾಲವನ್ನ ಗುರುತಿಸಲು ಯಾವುದೇ ಆಧಾರವಿಲ್ಲ. ಈ ಮೂರ್ತಿಯು ಸಾಂಪ್ರದಾಯಿಕ ರೂಪದಲ್ಲಿ ಕೆತ್ತಲ್ಪಟ್ಟಿದ್ದು ತನ್ನ ಕೈಗಳಲ್ಲಿ ವೈಷ್ಣವ ಚಿಹ್ನೆಗಳನ್ನು ಹಿಡಿದಿದೆ.

ನಾರಾಯಣಸ್ವಾಮಿ ದೇವಾಲಯದ ದಕ್ಷಿಣಕ್ಕೆ ಸ್ವಲ್ಪದೂರದಲ್ಲಿರುವ ಕುಲಶೇಖರಾಳ್ವಾರ್ ಗುಡಿಯು ಮತ್ತೊಂದು ಮಹತ್ವದ ದೇವಾಲಯ. ಈ ದೇವಾಲಯವು ಗುರುತರ ವಾಸ್ತುಶಿಲ್ಪಗಳ ವೈಭವವನ್ನು ಹೊಂದಿಲ್ಲ. 4 ಅಡಿ ಎತ್ತರದ ಕುಲಶೇಖರ ಆಳ್ವಾರ್ ಸಮಭಂಗನ ಮತ್ತು ಅಂಜಲಿಹಸ್ತ ರೂಪದಲ್ಲಿದೆ. ಇನ್ನಿತರ ವಾಸ್ತುಶಿಲ್ಪ ಶೈಲಿಗಳ ಆಧಾರದಿಂದ ಹೇಳುವುದಾದರೆ ಇದು 18ನೇ ಶತಮಾನದ ಅಂತ್ಯ ಅಥವಾ 19ನೇ ಶತಮಾನದ ಆರಂಭದಲ್ಲಿ ನಿರ್ಮಾಣವಾದಂತೆ ತೋರುತ್ತದೆ.

ಸಂಕ್ಷಿಪ್ತವಾಗಿ ಹೇಳುವುದಾದರೆ ರಾಮಾನುಜರ ಪ್ರಭಾವದಿಂದ ಈ ಸ್ಥಳವು ಒಂದು ಮುಖ್ಯ ಶ್ರೀ ವೈಷ್ಣವ ಕೇಂದ್ರವಾಯಿತು. ನಿರಂತರವಾಗಿ ಶತಮಾನಗಳ ಕಾಲ ಪಡೆದ ರಾಜಾಶ್ರಯದಿಂದ ಪಡೆದ ಉದಾರ ದಾನ–ದತ್ತಿಗಳಿಂದ ದಕ್ಷಿಣ ಭಾರತದ ಶ್ರೀಮಂತ ಸಂಸ್ಥೆಯಾಯಿತು. ನಂತರ ಇದರ ವೈವಿಧ್ಯಮಯ ಉತ್ಸವ ಮತ್ತು ಆಚರಣೆಗಳಿಂದ ಭಕ್ತಾಧಿಗಳನ್ನು ಆಕರ್ಷಿಸಿತು. ಹೀಗೆ ಮುಜುರಾಯಿ ಇಲಾಖೆಯಿಂದ ಗುರುತಿಸಲ್ಪಟ್ಟಿರುವ ಮೇಲುಕೋಟೆಯಲ್ಲಿ 33 ದೇವಾಲಯಗಳಿವೆ. ಆದುದರಿಂದ ಇದು ಒಂದು ದೇವಾಲಯಗಳ ನಗರವಾಗಿ ಈ ಸ್ಥಳವು ಇಂದಿಗೂ ತನ್ನ ಪ್ರಾಮುಖ್ಯತೆಯನ್ನು ಉಳಿಸಿಕೊಂಡಿದೆ.

ದೇವಾಲಯಗಳು ಗಳಿಸಿದ ಪ್ರಾಮುಖ್ಯತೆ

ದೇವಾಲಯಗಳು ಧಾರ್ಮಿಕ ಕಟ್ಟಡಗಳಾಗಿದ್ದು, ಪ್ರಾಚೀನ ಕಾಲದಿಂದಲೂ ದೇವಾಲಯಗಳ ಕುರಿತು ವಿವರಣೆಗಳು ಸಿಗುತ್ತವೆ. ದೇವಾಲಯಗಳು ಸಾಮೂಹಿಕವಾಗಿ ಪೂಜೆಸಲ್ಲಿಸಲು ಮತ್ತು ಪ್ರಾರ್ಥನೆ ಮಾಡಲು ಅನುಕೂಲವಾದ ಸ್ಥಳ. ದೇವಾಲಯಕ್ಕೆ, ದೇವಸ್ಥಾನ, ಗುಡಿ, ಮಂದಿರ, ದೇವಗಾರ, ದೇವಳ, ದೇಗುಲ ಇನ್ನೂ ಮೊದಲಾದ ಹೆಸರುಗಳಿಂದ ಕರೆಯುವ ವಾಡಿಕೆ ಇದೆ. ಇಂಗ್ಲೀಷ್ ಭಾಷೆಯ 'ಟೆಂಪಲ್' ಎಂಬ ಶಬ್ದಕ್ಕೆ ದೇವರು ನೆಲೆಸಿರುವ ಸ್ಥಳ, ದೇವಾಲಯ, ಎಂಬ ಅರ್ಥವಿದೆ. ನಮ್ಮ ಮನಸ್ಸಿನ ಕಲ್ಪನೆಗೂ ಮೀರಿದ ಹಾಗೂ ಮನಸ್ಸಿಗೆ ಯಾವುದು ಆಧಾರವಾಗಿರುತ್ತದೆಯೋ ಅದು ದೇವರು. ಆದುದರಿಂದ ಪ್ರಾಚೀನ ಕಾಲದಲ್ಲಿ ದೇವಮಂದಿರಗಳ ಕಲ್ಪನೆ ಅಂದಿನ ಜನರ ಭಾವನೆಗೆ ಬಂದಿದ್ದು ವಿಶೇಷವೇ ಸರಿ. ದೇವಾಲಯಗಳ ಪ್ರಾಮುಖ್ಯತೆ ಕುರಿತು ಮಾನಸಾರದಂಥಹ ಗ್ರಂಥಗಳು ವಿಶೇಷ ವಿವರಗಳನ್ನು ನೀಡುತ್ತವೆ.

ಕೆಲವು ದೇವಾಲಯಗಳು ವೈದಿಕ ಧರ್ಮದ ಹಿನ್ನೆಲೆಯಲ್ಲಿ, ಕೆಲವು ದೇವಾಲಯಗಳು ಜಾನಪದ ಹಿನ್ನೆಲೆಯಲ್ಲಿ, ಹಲವು ದೇವಾಲಯಗಳು ಪುರಾಣದ ಹಿನ್ನೆಲೆಯಲ್ಲಿ ಪ್ರಾಮುಖ್ಯತೆ ಪಡೆದಿವೆ. ಪ್ರಾಚೀನ ಭಾರತದ ವಾಸ್ತುಶಿಲ್ಪ ಚರಿತ್ರೆಯಲ್ಲಿ ಇದುವರೆವಿಗೂ ದೇವಾಲಯದ ಆರಂಭದ ಹಂತವು ಶಿಲಾತಯಗದ ಜನರ ಪ್ರಕೃತಿಪೂಜೆ,

ಸಮಾಧಿ ಪೂಜೆಗಳಿಂದ ಗುರುತಿಸಲ್ಪಟ್ಟಿದೆ. ಕ್ರಮೇಣ ಇವು ಪ್ರತಿಮಾರೂಪ ಪಡೆದು ಸಾಂಘಿಕ ಆರಾಧನೆಗಾಗಿ ದೇವಾಲಯಗಳು ನಿರ್ಮಾಣಗೊಂಡಿರಬೇಕು. ಮನುಷ್ಯನು ಪ್ರಾಣಿವರ್ಗದ ಕೆಳಹಂತಗಳಿಂದ ತಲೆಯೆತ್ತಿ ನಿಂತಾಗಲೇ ಧರ್ಮವು ಅವನ ನೆರವಿಗೆ ಬಂತು. ಧರ್ಮದ ಹುಟ್ಟಿಗೆ ಭಯವೂ ಒಂದು ಮೂಲ ಕಾರಣವಾಯಿತು.

ಆದಿ ಮಾನವನು ನಿಸರ್ಗದ ಮಡಿಲಲ್ಲಿ ಅಡಗಿರುವ ವಿಚಿತ್ರ ಅದ್ಭುತಗಳನ್ನು ಕುರಿತು ಭಯವಿಸ್ಮಿತವಾಗಿ ದಿಗ್ಭ್ರಾಂತಗೊಂಡು, ಪ್ರಕೃತಿಯಲ್ಲಿ, ಯಾವುದೋ ಶಕ್ತಿ ಅಡಗಿದೆಯೆಂಬ ಅರಿವಾಗಿ ಅದರ ವಿಚಾರದಲ್ಲಿ ಪೂಜ್ಯಭಾವ ಮೂಡಿತು. ಈ ಕಾರಣದಿಂದಲೇ ಗಿಡ, ಮರ, ನದಿ ಇತ್ಯಾದಿಗಳು ಪೂಜನೀಯವಾದುದಲ್ಲದೆ ಪೂಜ್ಯಸ್ಥಾನಗಳಾದವು. ಅಪೂರ್ವ, ಅದ್ಭುತ, ದಿವ್ಯವೆಂದಾದುದನ್ನು ಅನುಭವಿಸುವ ಸಾಮರ್ಥ್ಯವಿರುವಂತೆಯೇ ಮನುಷ್ಯನಿಗೆ ಅದರ ಪ್ರತಿಕೃತಿಗಳನ್ನು ಕಲ್ಪಿಸಿಕೊಳ್ಳುವ, ರೂಪಿಸುವ ಸೃಜನ ಶಕ್ತಿಯೂ ಬೆಳೆಯಿತು. ನಿಸರ್ಗ ದತ್ತವಾದ ವಸ್ತುಗಳನ್ನು ಸಣ್ಣ ಪ್ರಮಾಣದಲ್ಲಿ ಕಲಾತ್ಮಕವಾಗಿ ಮಾಡಿಕೊಳ್ಳುವ ಹವ್ಯಾಸವೂ ನಿಸರ್ಗ ಸಿದ್ಧವಾದುದೆ. ಧರ್ಮದ ನೆಲೆಯಲ್ಲಿ ಪ್ರತಿಕೃತಿಗಳ ಬಳಕೆಯ ಮುನ್ನ ಪ್ರಕೃತಿ ಸಿದ್ಧವಾದ ಪ್ರತಿಮೆಗಳನ್ನು ಬಳಸುವ ಪದ್ಧತಿ ಇದ್ದಿತು. ಇದಲ್ಲದೆ ಇನ್ನೊಂದು ಬಗೆಯ ಧಾರ್ಮಿಕ ಕಲ್ಪನೆಯೂ ಒಡ ಮೂಡಿತು. ಆದಿ ಮಾನವನು ಭೇಟೆಗೆ ಹೊರಡುವ ಮುನ್ನ ಗುಹೆಯೊಂದರಲ್ಲಿ ಚಿತ್ರಮಂಡಲ ಬರೆದು ಅದರ ನಡುವೆ ತನಗೆ ಬೇಕಾದ ಪ್ರಾಣಿಯ ಆಕಾರವನ್ನು ಬರೆದು ಅದರ ಮೈಮೇಲೆ ಬಾಣವೊಂದು ನಾಟಿದಂತೆ ಗುರುತಿಸಿ ಭೇಟೆಗೆ ಹೊರಡುತ್ತಿದ್ದನು. ಪ್ರಾಣಿಯೊಂದರ ಚರ್ಮವೊಂದನ್ನು ಮೈ ಮೇಲೆ ಧರಿಸಿ ಹೊರಟರೆ ಹಿಡಿದ ಕೆಲಸದಲ್ಲಿ ಜಯ ಎಂಬ ನಂಬಿಕೆ ಕಾಕತಾಳೀಯವಾಗಿ ಆದಿನ ಜಯ ಒದಗಿದರೆ ಅದಕ್ಕೆ ಕಾರಣ ಚರ್ಮ ಪದಾರ್ಥ ಎಂಬ ನಂಬಿಕೆ ಬೇರೂರಿತು. ಅದನ್ನು ಮೈಮೇಲೆ ಧರಿಸಿಕೊಳ್ಳದಿದ್ದಾಗ, ಅದಕ್ಕಾಗಿ ಸಿದ್ಧಪಡಿಸಿದ ಸ್ಥಳದಲ್ಲಿ ಅದನ್ನು ಇರಿಸಿ ಯಾರೂ ಮುಟ್ಟದಂತೆ ನೋಡಿಕೊಂಡು, ತಾನೂ ಮುಟ್ಟುವಾಗ ಎಚ್ಚರವಹಿಸಿದನು. ಆ ವಸ್ತುವು ಅವನ ಆರಾಧ್ಯ ದೈವ ಜೀವನ ರಕ್ಷೆ ಅದನ್ನು ಇರಿಸಿದ ಸ್ಥಳವೇ ದೇವಾಲಯವಾಯಿತು. ಮುಂದೆ ಇದರ ರಕ್ಷಣೆಗೆ ಕಟ್ಟಿದ ಕಟ್ಟಡವೇ ದೇವಾಲಯವಾಗಿ ಬೆಳವಣಿಗೆಯಾಯಿತು.

ಸಿಂಧೂನದಿಯ ಬಯಲಿನಲ್ಲಿ ದೊರೆತ ಆಧಾರಗಳು ದೇವತಾಪೂಜೆ ಇದ್ದುದನ್ನು ಸ್ಪಷ್ಟಪಡಿಸುತ್ತವೆಯಾದರೂ ದೇವಾಲಯದ ಖಚಿತ ಆಧಾರಗಳಿಲ್ಲ. ಮುಂದೆ ವೇದಗಳ ಕಾಲದಲ್ಲಿ ಯಜ್ಞ ಯಾಗಗಳು ಪೂಜಾ ವಿಧಾನದ ಸಂಕೇತಗಳಾಗಿದ್ದವು. ಆಕಾಲದಲ್ಲಿ ಮರ ಇಟ್ಟಿಗೆಗಳಂತಹ ನಾಶವಾಗುವ ವಸ್ತುಗಳಿಂದ ನಿರ್ಮಿತವಾದ ದೇವಾಲಯಗಳು ಕಾಲಾಂತರದಲ್ಲಿ ನಶಿಸಿರುವ ಸಾಧ್ಯತೆಯನ್ನು ತೆಗೆದು ಹಾಕುವಂತಿಲ್ಲ. ಕೆಲವು ಇಟ್ಟಿಗೆಯ ದೇವಾಲಯಗಳನ್ನು ಕಲ್ಲಿನಿಂದ ಪುನರ್ ನಿರ್ಮಾಣ ಮಾಡಿರುವ ದಾಖಲೆಗಳಿವೆ. ಕ್ರಿ.ಪೂ.

ಒಂದನೇ ಶತಮಾನದಲ್ಲಿ ದೇವಾಲಯ ನಿರ್ಮಾಣವಾದುದನ್ನು ಹಲವು ದಾಖಲೆಗಳು ತಿಳಿಸಿವೆ.

ಇವುಗಳ ಜೊತೆಗೆ ಧರ್ಮದ ಪ್ರಭಾವವೂ ದೇವಾಲಯಗಳು ಗಳಿಸಿದ ಪ್ರಾಮುಖ್ಯತೆಗೆ ಪ್ರಮುಖ ಕಾರಣ ಎನ್ನಬಹುದು. ಧಾರ್ಮಿಕ ಮಹತ್ವ ಗಳಿಸಿದ ದೇವಸ್ಥಾನಗಳು ಜನತೆಯನ್ನು ತನ್ನತ್ತ ಆಕರ್ಷಿಸಲಾರಂಭಿಸಿತು. ಇದಕ್ಕೆ ಪೂರಕವಾಗಿ ಮಾನವನ ಕಲ್ಪನಾ ನೆಲೆಯಲ್ಲಿ ಹಲವು ಪುರಾಣ ಕಥೆಗಳು, ಅದರ ಪ್ರಾಮುಖ್ಯತೆಯನ್ನು ಬಲಗೊಳಿಸಿದವು. ಭಾರತದಲ್ಲಿ ರಾಜನು ಧರ್ಮವನ್ನು ಆಡಳಿತದಲ್ಲಿ ಅಳವಡಿಸಿಕೊಂಡಂತೆ ಧರ್ಮ ಕೇಂದ್ರಗಳಾದ ದೇವಾಲಯಗಳು ಮಹತ್ವ ಪಡೆದವು ರಾಜಾಶ್ರಯದಲ್ಲಿ ದಾನದತ್ತಿಗಳ ರೂಪದಲ್ಲಿ ಸಂಪತ್ತಿನ ಕೇಂದ್ರಗಳಾದವು. ರಾಜನಿಂದ ಪ್ರೇರಿತವಾದ ಸಾಮಾನ್ಯ ಜನರೂ ಸಹ ಶಕ್ತಾನುಸಾರ ದಾನ ಧರ್ಮಗಳನ್ನು ನೀಡಲಾರಂಭಿಸಿದರು. ದೇವಾಲಯವನ್ನು ಅವಲಂಬಿಸಿದ ವರ್ಗವೊಂದು ಉದಯವಾಯಿತು. ಅದೇ ಬ್ರಾಹ್ಮಣ ವರ್ಗ. ರಾಜರ ಮತ್ತು ಜನರ ಕಣ್ಣಿಗೆ ದೇವಾಲಯದ ಅಗತ್ಯತೆಯನ್ನು ವೈಭವೀಕರಿಸಲಾರಂಭಿಸಿದರು.

ಸಾಂಸ್ಕೃತಿಕ ಮೆರುಗನ್ನು ನೀಡಲಾರಂಭಿಸಿದ ರಾಜರು ವಿವಿಧ ಕಲಾಶೈಲಿಗಳನ್ನು ದೇವಾಲಯ ನಿರ್ಮಿಸುವಲ್ಲಿ ಅಳವಡಿಸಿದರು. ದೇವಾಲಯ ನಿರ್ಮಾಣದ ಕೆಲಸ ಪುಣ್ಯದ ಕೆಲಸ ಎಂಬ ಭಾವನೆ ಮನೆ ಮಾಡಿತು. ದಾನ ಸಂಸ್ಕೃತಿಯ ಮಹತ್ವವನ್ನು ವ್ಯಾಪಕವಾಗಿ ಸಾರಲಾಯಿತು. ಇದರಿಂದ ಸಂಪತ್ತು ದೇವಾಲಯಗಳ ಕಡೆಗೆ ಹರಿಯಲಾರಂಭಿಸಿತು. ದೇವಾಲಯಗಳು ರಾಜಪ್ರಭುತ್ವವನ್ನು ನಿಯಂತ್ರಿಸುವ ಮಟ್ಟಿಗೆ ತಮ್ಮ ಪ್ರಾಮುಖ್ಯತೆಯನ್ನು ಬಲಪಡಿಸಿದವು. ದಾನ ಶಾಸನಗಳೇ ಭಾರತದಲ್ಲಿ ಹೆಚ್ಚಾಗಿದ್ದುದು ಇದನ್ನು ಪುಷ್ಟೀಕರಿಸುತ್ತದೆ. ಸಮಾಜದ ನಿಯಮಗಳನ್ನು ನಿರೂಪಿಸುವ ಕೇಂದ್ರಗಳಾದವು. ಜನರು ತಮ್ಮ ಜೀವನದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ದೇವಾಲಯವನ್ನು ಅವಲಂಬಿಸುವಂತಾದರು. ಸಮಾಜವನ್ನು ರೂಪಿಸುವ ಕಾರ್ಯದಲ್ಲಿ ತೊಡಗಿದವು. ಧಾರ್ಮಿಕ ಸಂಸ್ಥೆಯಾಗಿ ಮಾತ್ರ ಗುರುತಿಸಿಕೊಳ್ಳದೆ. ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳಾಗಿ ಪ್ರಾಮುಖ್ಯತೆ ಪಡೆದವು. ಜನರ ಭಯ ಭಕ್ತಿಗಳನ್ನು ನಿರಂತರವಾಗಿ ಉಳಿಸುವಂತಹಾ ಆಚರಣೆಗಳು ನಡೆಯಲಾರಂಭಿಸಿದವು. ವೈಭವದ ವಾಸ್ತುಶಿಲ್ಪಗಳ ರಚನೆಗೆ ರಾಜರು ಎಥೇಚ್ಛ ಹಣವನ್ನು ಖರ್ಚು ಮಾಡಿದರು. ಹೀಗೆ ಕಲ್ಲಿನಿಂದ ಆರಂಭವಾದ ದೇವಾಲಯದ ಕಲ್ಪನೆಯು ಇಡೀ ನಾಡಿನ ಜನರ ಜೀವನದಲ್ಲಿ ಪ್ರವೇಶ ಪಡೆದು ಗಳಿಸಿದ ಪ್ರಾಮುಖ್ಯತೆ ಗುರುತರವಾದುದು.

ದೇವತಾ ಮೂರ್ತಿಯ ಪೂಜೆಯ ಸಂದರ್ಭದಲ್ಲಿ ಸಾಮುದಾಯಿಕ ಸಂಪರ್ಕಕ್ಕೆ ಸಾಧನವಾದ ದೇವಾಲಯಗಳು ಮಠಗಳ ಸಂಪರ್ಕದಿಂದ ವಿಸ್ತಾರಗೊಂಡು ವಿದ್ಯಾ

ಕೇಂದ್ರಗಳಾಗಿಯೂ ಕಾರ್ಯನಿರ್ವಹಿಸುತ್ತಾ ವಿವಿಧ ದೃಶ್ಯ ಹಾಗೂ ಶ್ರವ್ಯಕಲೆಗಳು ಪ್ರಗತಿಯನ್ನು ಸಾಧಿಸಲು ಕಾರಣವಾದುವು. ವಾಸ್ತುವಿನ ದೃಷ್ಟಿಯಿಂದಲೂ ವಿಸ್ತಾರಗೊಳ್ಳುತ್ತಿದ್ದ ದೇವಾಲಯಗಳು ತಾಂತ್ರಿಕವಾಗಿ ಅವಶ್ಯಕ ಮಾರ್ಪಾಡುಗಳನ್ನು ಮಾಡಿಕೊಂಡು ಶಿಲ್ಪಕಲೆಯಲ್ಲಿ ಪ್ರಯೋಗಗಳನ್ನು ಮಾಡುತ್ತಾ ತಮ್ಮ ಸೌಂದರ್ಯವನ್ನು ಹೆಚ್ಚಿಸಿಕೊಂಡವು. ದೇವಾಲಯ ನಿರ್ಮಾತೃಗಳು ವಾಸ್ತು ಮತ್ತು ಮೂರ್ತಿ ಶಿಲ್ಪ ಕಲಾವಿದರಿಗೆ ನೀಡಿದ ಪ್ರೋತ್ಸಾಹದಿಂದ ದೇವಾಲಯಗಳ ಪ್ರಾಮುಖ್ಯತೆಯನ್ನು ಹೆಚ್ಚುವಂತೆ ಮಾಡಿದವು. ದೇವಾಲಯಗಳು ಇನ್ನಿತರ ಕಲಾ ಪ್ರಕಾರಗಳಿಗೂ ಆದ್ಯತೆ ನೀಡಿ ಪ್ರೋತ್ಸಾಹಿಸುವಿಕೆಯು ಸಾಂಸ್ಕೃತಿಕ ಪ್ರಾಮುಖ್ಯತೆಗೆ ಕಾರಣವಾಯಿತು. ದೇವಾಲಯಗಳಲ್ಲಿ ದೇವರ ಅಂಗಭೋಗದ ಜೊತೆಗೆ ರಂಗಭೋಗಕ್ಕೆ ಪ್ರಾಶಸ್ತ್ಯ ದೊರೆತದ್ದು ದೃಶ್ಯ ಹಾಗೂ ಶ್ರವ್ಯ ಕಲೆಗೆ ದೊರೆತ ಪ್ರಾಶಸ್ತ್ಯದ ಗುರುತಾಗಿದೆ. ದೇವಾಲಯಗಳು ಜನಸಂಪರ್ಕ ಕೇಂದ್ರಗಳಾದುದರಿಂದಲೇ ಅಲ್ಲಿ ರಂಗಭೋಗದ ಹೆಸರಿನಲ್ಲಿ ದೃಶ್ಯ ಹಾಗೂ ಶ್ರವ್ಯಕಲೆಗಳ ಪ್ರದರ್ಶನವಾಗುತ್ತಿತ್ತು. ಅನೇಕ ಪರ್ವ, ಜಾತ್ರೆ, ಉತ್ಸವಗಳು ಪ್ರಾಶಸ್ತ್ಯ ಪಡೆದವು. ಹಾಗೆಯೇ ದಿವ್ಯದ ಆಚರಣೆಯ ಮೂಲಕ ನ್ಯಾಯಾಲಯಗಳಾಗಿಯೂ ದೇವಾಲಯಗಳು ಪ್ರಾಮುಖ್ಯತೆ ಪಡೆದವು.

ಇತಿಹಾಸ ಪೂರ್ವ ನವಶಿಲಾಯುಗದ ಮಾನವನ ನಡವಳಿಕೆಗಳು ಪ್ರಕೃತಿ ಹಾಗೂ ಪಿತೃಪೂಜೆಗೆ ಪ್ರಾಧಾನ್ಯತೆ ನೀಡಿರುವ ಸಾಧ್ಯತೆಗಳು ಹೆಚ್ಚು. ಆದರೆ ಅದು ಅಭಿವ್ಯಕ್ತಿಗೊಂಡಿರುವ ರೀತಿ ತಿಳಿದು ಬಂದಿಲ್ಲ. ಬೃಹತ್ ಶಿಲಾ ಸಂಸ್ಕೃತಿಯ ಮಾನವನು ಸಮಾಧಿ ಪೂಜೆಗೆ ಮಹತ್ವ ನೀಡಿರುವ ಸಾಧ್ಯತೆಗಳಿವೆ. ವೇದಕಾಲೀನ ಸಂಸ್ಕೃತಿಯಲ್ಲಿ ಪಿತೃಪೂಜೆ, ಪ್ರಕೃತಿ ಪೂಜೆಗೆ ಆದ್ಯತೆ ದೊರೆತಿದೆ. ಇದು ಸ್ತುತಿ, ಹೋಮ ಇತ್ಯಾದಿಗಳ ಮೂಲಕ ಅಭಿವ್ಯಕ್ತವಾಗಿದೆ. ಸಿಂಧೂ ಬಯಲಿನ ನಾಗರೀಕತೆಯ ಕಾಲದಲ್ಲಿ ಪ್ರತಿಮಾ ಪೂಜೆ ಆರಂಭವಾಗಿದೆ. ಬೌದ್ಧ ಮತಾರಂಭದ ನಂತರ ನಾಲ್ಕು ಶತಮಾನಗಳ ಕಾಲ ಒಂದು ಅಸ್ಪಷ್ಟ ಕಾಲ. ಕ್ರಿಪೂ. 2ನೇ ಶತಮಾನದ ವೇಳೆಗೆ ಬೌದ್ಧ ಚೈತ್ಯ, ಸ್ತೂಪ, ವಿಹಾರಗಳು, ನಿರ್ಮಾಣಗೊಂಡು ಸಮಾಧಿ ಪೂಜೆ, ಪಿತೃಪೂಜೆ, ಬೆರೆತು ಪ್ರತಿಮಾ ಪೂಜೆಗೆ ಮಹತ್ವ ದೊರೆತು ಧ್ಯಾನ, ತಪಸ್ಸು ವಸತಿಗೆ ಆಶ್ರಯ ನೀಡಿದ ಕೊರೆದ ಗುಹೆಗಳೇ ದೇವಾಲಯಗಳಾಗಿ, ವಿದ್ಯಾ ಕೇಂದ್ರಳಾಗಿ ಬೆಳೆದವು. ಕ್ರಮೇಣ ಸಾರ್ವಜನಿಕ ಪೂಜಾಗೃಹಗಳಾಗಿ ಸಭಾ ಮಂದಿರಗಳಾಗಿ, ಸತ್ರಗಳಾಗಿ, ಸಂಗೀತ, ಶಿಲ್ಪ ಇತ್ಯಾದಿ ಕಲೆಗಳ ಪೋಷಣೆಯ ಸ್ಥಾನಗಳಾಗಿ, ಮಠಗಳಾಗಿ ವಿಸ್ತಾರಗೊಂಡು ದೇವಾಲಯಗಳು ಮಧ್ಯಯುಗದ ಇತಿಹಾಸದಲ್ಲಿ ವಹಿಸಿದ ಪಾತ್ರ ವಿಶಿಷ್ಟವಾದುದು. 'ದೇವಾಲಯಗಳು ಗ್ರಾಮಗಳ ಸಂಘ ಜೀವನದ ಸಾಂಸ್ಕೃತಿಕ ಕೇಂದ್ರಗಳಂತೆ ಇರುತ್ತವೆ' ಎಂಬ ಬಾ.ರಾ.ಗೋಪಾಲ್ ಅವರ ಅಭಿಪ್ರಾಯದ ಹಿನ್ನೆಲೆಯಲ್ಲಿ ದೇವಾಲಯಗಳು ಪ್ರಾಮುಖ್ಯತೆ ಗಳಿಸಿದವು.

ಟಿಪ್ಪಣಿಗಳು

1. Prabhakar P.Apte, Ravindranatha R.Karnik., (Ed,), Melkote through the ages, Melkote, 1992, P.42
2. E.C.VI, ಪಾಂಡವಪುರ. 157, 124, 164, 127, 128, 129, 131,
3. ಅದೇ, ಪಾಂ. 161
4. ಅದೇ, ಪಾಂ. 124
5. E.C.II, No. 475 (1973 A.D.)
6. E.C.VI, ಪಾಂಡವಪುರ. 140
7. ಅದೇ, ಶ್ರೀರಂಗಪಟ್ಟಣ. 76
8. ಅದೇ, ಪಾಂ. 179
9. ಅದೇ, ಪಾಂ. 179
10. ಅಸೂರಿ ಸಂಪತ್ಕುಮಾರಾಚಾರ್ಯ ಮತ್ತು ಶ್ರೀನಿವಾಸಾಚಾರ್ಯರು, ಯಾದವಗಿರಿ ಜೀರ್ಣೋದ್ಧಾರ, ಮೇಲುಕೋಟೆ, 1956, ಪು.2
11. Prabhakar P. Apte, Ravindranatha R. Karnik, (Ed,)., op, cit., p.59
12. Maranda, pierrie, (Ed)., Mythology, England (penguin Books), 1972, P.229
13. Herskovits, Melville.F., Cultural Anthropology, Newyark, 1960, P. 229.
14. ಶಂಕರನಾರಾಯಣ.ತೀ.ನಂ., ಜನಪದರ ನಡೆ-ನುಡಿ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ, 2004, ಪು. 15.16
15. ಸಿದ್ಧಲಿಂಗಯ್ಯ, ಗ್ರಾಮದೇವತೆಗಳು, ಬೆಂಗಳೂರು, 1997, ಪು. 317
16. ಶ್ರೀನಿವಾಸಯ್ಯಂಗಾರ್ಯ, ಯಾದವಗಿರಿ ಮಹಾತ್ಮೆ, ಪು. 2
17. ಅದೇ, ಪು. 3
18. Prabhakar P. Apte, Ravindranatha R. Karnik, (Ed,)., op, cit., p.42
19. ಹರಿಪ್ರಿಯ, ಮೇಲುಕೋಟೆ ಪರಿಚಯ, ಮೈಸೂರು, ಸಂಸ್ಕೃತಿ ಪ್ರಕಾಶನ, 2004, ಪು. 13

20. Prabhakar P. Apte, Ravindranatha R. Kamik, (Ed,)., op, cit., p.42

21. ibid., p.32

22. ibiod., p.14.15

23. ಪಾರ್ಥಸಾರಥಿ.T.A., (ಸಂ.), ಮಂಡ್ಯ ಜಿಲ್ಲಾ ಗ್ಯಾಸೆಟಿಯರ್, ಮಂಡ್ಯ 2003, ಪು. 39

24. ಪಾರ್ಥಸಾರಥಿ.T.A., (ಸಂ.), ಮಂಡ್ಯ ಪೂರ್ವೋಕ್ತ ಪು. 957

25. ಮಹದೇವ.ಸಿ, (ಸಂ.), ತೊಣ್ಣೂರು, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2009, ಪು. 3

26. ಅದೇ, ಪು. 4

27. ಪಾರ್ಥಸಾರಥಿ.T.A., (ಸಂ.), ಮಂಡ್ಯ, ಪೂರ್ವೋಕ್ತ, ಪು. 957

28. E.C.VI, ಪಾಂಡವಪುರ. 74

29. ಕನ್ನಡ ವಿಶ್ವಕೋಶ, ಸಂಪುಟ. 3, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, 1979, ಪು. 1180

30. ಬಾ.ರಾ.ಗೋಪಾಲ್., ಕರ್ನಾಟಕದಲ್ಲಿ ನವಶಿಲಾಯುಗ, ಧಾರವಾಡ, 1971, ಪು. 10.11

31. ಯಳನಾಡು ಅಂಜನಪ್ಪ., ಧರ್ಮ ಮತ್ತು ಮುಕ್ತ ವಿಚಾರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2008, ಪು. 50

32. ರಾಮಚಂದ್ರರಾವ್.ಎಸ್.ಕೆ., ಭಾರತದ ದೇವಾಲಯ ನೆಲೆ-ಹಿನ್ನೆಲೆ, ಬೆಂಗಳೂರು, 1980, ಪು. 156

33. ಅದೇ, ಪು. 16

34. Banerjea.J.N., Development of Hindu Iconography, calcutta, 1941, p. 46

35. ibid, p. 47

36. ಶ್ರೀಕಂಠಶಾಸ್ತ್ರಿ.S., ಭಾರತೀಯ ಸಂಸ್ಕೃತಿ, ಬೆಂಗಳೂರು, 2006, ಪು. 176

37. Altekar.A.S., Rastrakutas and their Times, poona, 1967, p. 289

38. Venkataramaniah.N., origin of the south Indian Temples, Delhi, 1985, P.2

39. ಶಿವರಾಮ ಕಾರಂತ, ಚಿತ್ರ ಶಿಲ್ಪ ವಾಸ್ತುಕಲೆಗಳು, ಧಾರವಾಡ, 1975, ಪು. 30

40. ನಂಜುಂಡಪ್ಪ,ವೈ.ಡಿ., ಪುರಾಣ ದೇವತೆಗಳ ಪರಾಮರ್ಶೆ ಮತ್ತು ದೇವರು, ಸಿದ್ಧ ಸಾಹಿತ್ಯ ಪ್ರಕಾಶನ, ಅರಸೀಕೆರೆ, 2005, ಪು. 2

41. ಪುಟ್ಟಪ್ಪ.ಕೆ.ವಿ., (ಸಂ.), ಯುಗಯಾತ್ರೀ ಭಾರತೀಯ ಸಂಸ್ಕೃತಿ, ಸಂಪುಟ. 2, ಮೈಸೂರು, 1971, ಪು. 364

42. E.C.V (1976), kr. 56

43. E.C.VI, ಪಾಂಡವಪುರ. 185

44. E.C.VI, ಪಾಂಡವಪುರ. 130

45. Krishnaswami Iyengar.S., Early History of Vaishnavism in south India, Madras, 1920, P. 218

46. Divakar.R.R., (ED.)., Karnataka through the ages, Mysore, 1968, p. 420.

47. ibid., p. 421

48. Rice.B.L., Mysore Gazatteer, Vol-I, 1897

49. E.C.VI, (1976), My. 135

50. M.A.R., 1932, p. 189

51. E.C.VI, ಪಾಂಡವಪುರ. 11

52. ಅದೇ, ಪಾಂ. 225

53. ಅದೇ, ಪಾಂ. 124

54. ಅದೇ, ಪಾಂ. 73

55. ಅದೇ, ಪಾಂ. 74

56. ಅದೇ, ಪಾಂ. 185

57. ಅದೇ. ಪಾಂ. 101, 154, 220

58. Vasantha.R., The Narayanasvami Temple At Melkote, Mysore, 1991, p. 63.64

59. E.C. VI., ಪಾಂಡವಪುರ. 179

60. ಅದೇ, ಪಾಂ. 179

61. E.C. VI., (1976). My. 26

62. ಅದೇ, My. 26

63 ಅದೇ. Kr. 47

64. E.C. VI., ಪಾಂಡವಪುರ. 158. 159

65. ಅಸೂರಿ ಸಂಪತ್ಕುಮಾರಾಚಾರ್ಯ ಮತ್ತು ಶ್ರೀನಿವಾಸಾಚಾರ್ಯರು, ಯಾದವಗಿರಿ ಜೀರ್ಣೋದ್ಧಾರ, ಮೇಲುಕೋಟೆ, 1956, ಪು. 48

66. ತೈಲೂರು ವೆಂಕಟಕೃಷ್ಣ, ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ, ಮಂಡ್ಯ, 2005, ಪು. 39

67. Vasanta.R., Narayana Svami Temple At Melkote, Mysore, 1991, p.5

68. E.C. VI., ಪಾಂಡವಪುರ. 174, 176

69. ಅದೇ, ಪಾಂ. 207

70. ಅದೇ, ಪಾಂ. 197

71. ಅದೇ, ಪಾಂ. 202

72. ಅದೇ, ಪಾಂ. 164

ಅಧ್ಯಾಯ –3

ಮೇಲುಕೋಟೆ ದೇವಾಲಯಗಳು–ಧಾರ್ಮಿಕ ನೆಲೆಗಳು

ದೇವಾಲಯಗಳು–ಧರ್ಮದ ಪ್ರಭಾವ ಮತ್ತು ಪ್ರೇರಣೆಗಳು

ಮಾನವ ವಿಕಾಸದ ಇತಿಹಾಸದೊಂದಿಗೆ ತಳಕು ಹಾಕಿಕೊಂಡು ಬಂದಿರುವ ಪದವೆಂದರೆ 'ಧರ್ಮ'. 'ಧರ್ಮ' ಎನ್ನುವ ಪದಕ್ಕೆ ಸಂವಾದಿಯಾಗಿ 'ರಿಲಿಜಿಯನ್' (Religion) ಎನ್ನುವ ಪದವನ್ನು ಇಂಗ್ಲೀಷ್ ಭಾಷೆಯಲ್ಲಿ ಬಳಸಲಾಗುತ್ತಿದೆ. ಭಾರತೀಯ ಸಂದರ್ಭದಲ್ಲಿ 'ಧರ್ಮ' ಎನ್ನುವ ಪದಕ್ಕೆ 'ಧಾರಣ ಮಾಡಿದುದು', 'ನೀತಿ', 'ನ್ಯಾಯ', 'ಪವಿತ್ರ ಕರ್ತವ್ಯ', 'ಅಹಿಂಸೆ', 'ಭಿಕ್ಷೆ', 'ಆಚರಣೆ', 'ಹಕ್ಕು', 'ಪುರುಷಾರ್ಥ', 'ದಯೆ' ಮುಂತಾದ ಅರ್ಥಗಳು ಕಂಡಬರುತ್ತವೆ. ದೇವಾಲಯಗಳು ಧಾರ್ಮಿಕ ಸಂಸ್ಥೆಗಳಾಗಿದ್ದು, ಸಮಾಜದಲ್ಲಿ ಧರ್ಮ ನಿಯಂತ್ರಣದ ಪ್ರಧಾನ ಪಾತ್ರವನ್ನು ವಹಿಸುತ್ತಿತ್ತು. ಧರ್ಮವನ್ನವಲಂಬಿಸಿಯೇ ದೇವಾಲಯಗಳು ಹುಟ್ಟಿಕೊಂಡವು. ಸಂಸ್ಕೃತಿಯ ಅಂಗಗಳಾದವು. ಧರ್ಮ ಮತ್ತು ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಅರ್ಥಪೂರ್ಣವಾದ ಸಂಬಂಧವಿದೆ. ಧರ್ಮ ಆದರ್ಶವನ್ನು ಹೇಳಿದರೆ ಸಂಸ್ಕೃತಿ ವಾಸ್ತವವನ್ನು ತೆರೆದಿಡುತ್ತದೆ. ಹೀಗಾಗಿ ಧರ್ಮ ಸಂಸ್ಕೃತಿಗಳ ಅಧ್ಯಯನವೆಂದರೆ ಒಂದರ್ಥದಲ್ಲಿ ಆದರ್ಶ ಮತ್ತು ವಾಸ್ತವಗಳ ಅರಿವಾಗಿದೆ. 'ಸಂಸ್ಕೃತಿ' ಎಂಬ ಪದದ ವಿಶಾಲಾರ್ಥದ ಒಡಲಲ್ಲಿಯೇ ಧರ್ಮ ಒಂದು ಭಾಗವಾಗಿರುತ್ತದೆ. ಈ ನಾಡಿನ ಧಾರ್ಮಿಕ ಪರಂಪರೆ ಬಹುದೊಡ್ಡದು. ಕ್ರಿ.ಪೂ. 5000 ವರ್ಷಗಳ ಹಿಂದಿನ ಮಹೆಂಜದಾರೋ–ಹರಪ್ಪ ಸಂಸ್ಕೃತಿಗಳ ಒಡಲೊಳಗೆ ಅನೇಕ ಧರ್ಮಗಳು ಇದ್ದುದನ್ನು ಕಾಣಬಹುದು. ಅನೇಕ ಧರ್ಮಗಳು ಈ ದೇಶದ ಜನ ಸಮುದಾಯದಲ್ಲಿ ಹಂಚಿಹೋಗಿವೆ. ಧರ್ಮವನ್ನವಲಂಬಿಸಿ ಕಲೆ, ಸಾಹಿತ್ಯ, ಸಂಗೀತಗಳು ಹುಟ್ಟಿಕೊಂಡು ಒಂದು ಸಮುದಾಯದ ಸಂಸ್ಕೃತಿಯನ್ನು ಬೆಳೆಸುವಲ್ಲಿ ಸಹಾಯಕವಾಗಿವೆ.

ಮಾನವ ಸಾಮಾಜಿಕ ಜೀವನಕ್ಕೆ ಸ್ಥಿರತೆ ಹಾಗೂ ಭದ್ರತೆಯನ್ನು ನೀಡುವಲ್ಲಿ ಮಂಚೂಣಿಯಲ್ಲಿರುವುದು ಧರ್ಮ, "ಧರ್ಮದ ಸಾರವಾದ ಪಾವಿತ್ರ್ಯತೆಯ ಅಡಿಪಾಯದಲ್ಲಿ ಸಮಾಜವೇ ಮೂರ್ತಿವೆತ್ತ ಸ್ವರೂಪದಂತಿದೆ" ಎಂಬುದಾಗಿ ಸಮಾಜಶಾಸ್ತ್ರಜ್ಞ ಡರ್ಖೀಮ್ ಅಭಿಪ್ರಾಯಪಡುತ್ತಾನೆ. ಧರ್ಮ ವ್ಯಕ್ತಿಗತ ಹಾಗೂ ಸಾಮಾಜಿಕ ಪ್ರಾಮುಖ್ಯವುಳ್ಳ ಕಾರ್ಯನಿರ್ವಹಿಸುತ್ತದೆ. ಧಾರ್ಮಿಕ ಅನುಭವ ಪಡೆಯಲು ವ್ಯಕ್ತಿ ಧ್ಯಾನ, ಚಿಂತನೆ, ಭಕ್ತಿ, ಶ್ರದ್ಧೆ ಮುಂತಾದ ಧಾರ್ಮಿಕ ಕಾರ್ಯದಲ್ಲಿ ತೊಡಗುತ್ತಾನೆ. ಧರ್ಮ ಅವನ ವ್ಯಕ್ತಿತ್ವದ ಬೆಳವಣಿಗೆಗೆ ಹಾಗೂ ಕ್ರಿಯಾಶೀಲತೆಗೆ ಪೂರಕವಾಗಿದೆ ಎನ್ನುವುದು ಎಷ್ಟು ಸತ್ಯವೋ; ಅವನ

ಸಾಮರ್ಥ್ಯದ ಅವಗಣನೆಗೂ ಕಾರಣವಾಗಿದೆ ಎನ್ನುವುದು ಅಷ್ಟೇ ಸತ್ಯ. ಇದು ವ್ಯಕ್ತಿಯ ಮೂಲಕ ಸಮಾಜದಲ್ಲಿ ಸ್ತೋತ್ರ ಸಂಸ್ಕೃತಿಗೆ ಕಾರಣವಾಗಿ, ವ್ಯಕ್ತಿ ತನ್ನ ಚಲನಶೀಲ ಶಕ್ತಿಯನ್ನು ಧರ್ಮದ ಮೂಲಕ ದೇವರೆಂಬ ಜಡಕ್ಕೆ ಆರೋಪಿಸಿಕೊಳ್ಳುವುದರಿಂದ ಸ್ವಶಕ್ತಿಯ ಮೇಲಿನ ನಂಬಿಕೆ ಕಡಿಮೆಯಾಗಿ ಭಯಕ್ಕೂ ಕಾರಣವಾಗಿದೆ. ಚಲನಶೀಲತೆ ಮತ್ತು ಜಡಗಳ ಮಧ್ಯೆ ಪುರೋಹಿತಶಾಹಿ ಪ್ರವೇಶಿಸುವಂತಾಗಿ ಸಮಾಜದ ಶೋಷಣೆಗೂ ಕಾರಣವಾಗಿದೆ ಹಾಗೂ ಸಮಾಜದ ಸ್ಥಗಿತತೆಗೂ ಮತ್ತು ಚಲನಶೀಲತೆಗಳ ಸಂಘರ್ಷಕ್ಕೂ ಕಾರಣವಾಗಿ ಸಮಾಜದ ನೆಮ್ಮದಿ ಕೆಡಲು ಅನುವು ಮಾಡಿಕೊಟ್ಟಿದೆ.[1]

ಧರ್ಮವನ್ನು ಸಾಧನವನ್ನಾಗಿ ಇಟ್ಟುಕೊಂಡು ಸಮಾಜದಲ್ಲಿ ಯಜಮಾನಿಕೆಯನ್ನು ಸ್ಥಾಪಿಸುವುದು ಧಾರ್ಮಿಕ ಪ್ರಭುತ್ವ.[2] ಇದು ಸಮಾಜದಲ್ಲಿ ಶಾಶ್ವತವಾದ ಪರಿಣಾಮವನ್ನು ಬೀರುತ್ತದೆ. ಧಾರ್ಮಿಕ ಪ್ರಭುತ್ವವು ಲೌಕಿಕದೊಂದಿಗೆ ಅಲೌಕಿಕ ಜಗತ್ತನ್ನು ನಿರ್ಮಿಸಿಕೊಂಡು ಜನರ ಬದುಕಿನ ಮೇಲೆ ನೇರ ಪ್ರವೇಶವನ್ನು ಪಡೆಯಿತು. ಮೇಲ್ನೋಟಕ್ಕೆ ಧಾರ್ಮಿಕ ಪ್ರಭುತ್ವವು ಆಚರಣೆಗಳಿಗೆ ಸೀಮಿತಗೊಂಡಂತೆ ಕಂಡುಬಂದರೂ ಅದು ಬದುಕಿನ ಎಲ್ಲಾ ಕ್ಷೇತ್ರಗಳಿಗೂ ವಿಸ್ತರಿಸಿಕೊಂಡಿದೆ. ದೇವಾಲಯಗಳು ಧಾರ್ಮಿಕ ಪ್ರಭುತ್ವವನ್ನು ನಿರಂತರವಾಗಿ ಮುಂದುವರೆಯುವಂತೆ ಮಾಡಿದವು. ಧರ್ಮದ ಚಾರಿತ್ರಿಕ ನೆಲೆಯಲ್ಲಿ ಮೇಲುಕೋಟೆ ದೇವಾಲಯಗಳನ್ನು ಅಧ್ಯಯನ ಮಾಡುವ ಅಗತ್ಯವಿದೆ. ಮೇಲುಕೋಟೆ ದಕ್ಷಿಣ ಭಾರತದ ಪ್ರಮುಖ ಶ್ರೀ ವೈಷ್ಣವ ಮತಕೇಂದ್ರವಾಗಿದ್ದು, ಇಲ್ಲಿನ ವಿಷ್ಣುದೇವಾಲಯಗಳು ಅದರ ಪ್ರತೀಕದಂತೆ ನಿರ್ಮಿಸಲ್ಪಟ್ಟಿವೆ. ಆಳುವ ರಾಜನಿಂದ ಸಾಮಾನ್ಯ ಪ್ರಜೆಯವರೆಗೆ ಒಂದಲ್ಲ ಒಂದು ರೀತಿ ಧರ್ಮ ಮತ್ತು ಧರ್ಮಗುರುಗಳ ಪ್ರಭಾವಕ್ಕೆ ಒಳಗಾಗಿದ್ದರು. ಇದು ಆಚಾರ್ಯ ರಾಮಾನುಜರು ಮೇಲುಕೋಟೆಗೆ ಬಂದ ನಂತರ, ವೈಷ್ಣವ ಧರ್ಮ ಇಲ್ಲಿ ಪಡೆದ ಪ್ರಾಮುಖ್ಯತೆಯಿಂದ ಅರ್ಥವಾಗುತ್ತದೆ.

ಇಲ್ಲಿ ದೇವಾಲಯ ನಿರ್ಮಾಣದ ಮೂಲಕ ಶ್ರೀ ವೈಷ್ಣವ ಧರ್ಮ ಪ್ರಸಿದ್ಧಿ ಪಡೆಯಿತು. ರಾಮಾನುಜರು ದಕ್ಷಿಣ ಭಾರತದಲ್ಲಿ ಬಲಗೊಳಿಸಿದ ದೇವಾಲಯ ಆಧಾರಿತ ಭಕ್ತಿ ಆಂದೋಲನಕ್ಕೆ ಮೇಲುಕೋಟೆ ದೇವಾಲಯಗಳು ಸ್ಪಷ್ಟ ಉದಾಹರಣೆಯಾಗಿವೆ. ಮೇಲುಕೋಟೆ ದೇವಾಲಯಕ್ಕೆ ಸಂಬಂಧಿಸಿದ ಎಲ್ಲಾ ಶಾಸನಗಳು 'ಶ್ರೀಮತೇ ರಾಮಾನುಜಾಯ' ಎಂಬ ಉಲ್ಲೇಖದೊಂದಿಗೆ ಆರಂಭವಾಗುವುದು ಈ ಮತದ ಪ್ರಭಾವವನ್ನು ಗಟ್ಟಿಗೊಳಿಸುತ್ತದೆ. ಧಾರ್ಮಿಕ ಪಂಥಗಳು ಹೆಚ್ಚು ದೊಡ್ಡ ಸಮುದಾಯವಾಗಿ ಬೆಳೆಯಲು ಮಾಡಿದ ಪ್ರಯತ್ನಗಳಲ್ಲಿ ದೇವಾಲಯಗಳ ನಿರ್ಮಾಣ ಮಹತ್ವದ ಬೆಳವಣಿಗೆಗೆ, ನಂತರ ಧಾರ್ಮಿಕ ಪಂಥಗಳ ರಚನೆಯಲ್ಲಿ ವರ್ಣಮಯ ಪರಿವರ್ತನೆಗಳು ನಡೆದವು.

ಒಂದು ಧರ್ಮ ಇತರ ಪ್ರದೇಶಗಳಿಗೆ ಪ್ರವೇಶ ಪಡೆದಾಗ, ಆಯಾ ರಾಜ್ಯದ ಅರಸರುಗಳ ರಾಜಾಶ್ರಯವನ್ನು ಯಾಚಿಸುತ್ತವೆ. ಈ ರೀತಿಯ ರಾಜಾಶ್ರಯವನ್ನು ರಾಮಾನುಜರು ಪಡೆದು, ಧರ್ಮ ಪ್ರಚಾರವನ್ನು ದೇವಾಲಯವನ್ನು ಕೇಂದ್ರವಾಗಿಸಿ ಮಾಡಿಸಿದರು. 12ನೇ ಶತಮಾನದಲ್ಲಿ ಪ್ರಬಲವಾಗುತ್ತಿದ್ದ ಭಕ್ತಿಪರಂಪರೆಗೆ ಸೇರಿದ ಶ್ರೀ ವೈಷ್ಣವ ಧರ್ಮವು ಹೊಯ್ಸಳ ಅರಸ ವಿಷ್ಣುವರ್ಧನನಿಂದ ಪೋಷಣೆ ಪಡೆಯಿತು. ಇದು ಈತನ ಧಾರ್ಮಿಕ ಸಾಮರಸ್ಯವನ್ನು ಸೂಚಿಸಿದಂತಾ, ರಾಜಪ್ರಭುತ್ವಕ್ಕೆ ಧರ್ಮಸಾಮರಸ್ಯ ಅನಿವಾರ್ಯತೆಯು ಇತ್ತೆಂಬುದು ಸ್ಪಷ್ಟವಾಗುತ್ತದೆ. ಈ ಪ್ರಕ್ರಿಯೆ ದೇವಾಲಯ ನಿರ್ಮಾಣದ ಮೂಲಕ ಸಾಧ್ಯವಾಯಿತು ಹಾಗೂ ಧರ್ಮವನ್ನು ಮತ್ತಷ್ಟು ಬಲಗೊಳಿಸಿ ಜನರ ಬದುಕಿನಲ್ಲಿ ಕೇಂದ್ರ ಸ್ಥಾನವನ್ನು ಪಡೆದುಕೊಳ್ಳುವಂತೆ ಮಾಡಿತು.[3]

ಮೇಲುಕೋಟೆಯ ಶಾಸನಗಳಲ್ಲಿ ದಾನಶಾಸನಗಳೇ ಅಧಿಕವಾಗಿವೆ. ಹೀಗಾಗಿ ದಾನ ಸಂಸ್ಕೃತಿಯೇ ಶಾಸನ ಸಂಸ್ಕೃತಿ ಎಂಬ ಮಾತು ಇಲ್ಲಿಗೂ ಅನ್ವಯವಾಗುತ್ತದೆ. ಧರ್ಮದ ಆದರ್ಶದ ನೆಲೆಯಲ್ಲಿ ದೇವಾಲಯಗಳು ಉದಾರ ರಾಜಾಶ್ರಯವನ್ನು ಪಡೆದವು. ದೇವಾಲಯಗಳು ದಾನ ರೂಪವಾಗಿ ಪಡೆದ ಭೂಮಿ ಮತ್ತು ಸಂಪತ್ತು. ಅದನ್ನು ಸಾಂಪ್ರದಾಯಿಕತೆ ಮತ್ತು ದುಡಿವಂತಿಕೆಗಳ ಕೇಂದ್ರಗಳಾಗುವಂತೆ ಮಾಡಿದವು. ಆದರೂ ದೇವಾಲಯದ ರೂಪದಲ್ಲಿ ಸಂಪನ್ಮೂಲಗಳನ್ನು ಒದಗಿಸುವ ಮೂಲಕ ರಾಜರು ದೇವಾಲಯದಲ್ಲಿ ಉದ್ಯೋಗ ನಿರ್ಮಿಸಿ ಸಮಾಜದ ಅನೇಕ ವರ್ಗಗಳಿಗೆ ಜೀವನೋಪಾಯ ಕಲ್ಪಿಸಿದರು.

ದೇವಾಲಯಗಳ ನಿರ್ಮಾಣ ಹಾಗೂ ನಿರ್ವಹಣೆಯಲ್ಲಿ ಧರ್ಮ ಪ್ರಧಾನ ಪಾತ್ರ ವಹಿಸಿದೆ. ಧರ್ಮದ ಹಲವು ಮುಖಗಳಾದ ದಾನ, ದತ್ತಿಗಳು, ಪರೋಕ್ಷವಿನಯ, ಧರ್ಮಪ್ರಸಂಗಗಳು, ಗಳಿಸಿದ ಸಂಪತ್ತಿನ ಸದ್‌ವಿನಿಯೋಗ ಮುಂತಾದ ಮಾರ್ಗಗಳಿಂದ ದೇವಾಲಯಗಳು ಪುಷ್ಟಿಪಡೆಯುತ್ತಿದ್ದವು. ಮೇಲುಕೋಟೆಯ ಬಹುಪಾಲು ಶಾಸನಗಳು ದಾನಶಾಸನಗಳಾಗಿವೆ. ರಾಜರು, ಅಧಿಕಾರಿಗಳು, ಸಾಮಾನ್ಯ ಜನರು, ಸ್ತ್ರೀಯರು ದೇವಾಲಯಕ್ಕೆ ನೀಡಿರುವ ದಾನಗಳು ಅಂದಿನ ಧರ್ಮದ ಪ್ರಭಾವ ಹಾಗೂ ಶ್ರದ್ಧೆ, ನಿಷ್ಠೆಗಳನ್ನು ತೋರಿಸುತ್ತದೆ. ಅಶೋಕನ ಕಾಲದಲ್ಲಿ ಧರ್ಮಬೋಧೆಯ ಕಲಿಕೆಯ ಮಾಧ್ಯಮವೂ ಆಯಿತು. ಆದ್ದರಿಂದ ಶಾಸನಗಳ ಹುಟ್ಟಿಗೆ ಧರ್ಮವೇ ಮುಖ್ಯ ಪ್ರೇರಣೆ.[4]

ವಿಷ್ಣುವರ್ಧನನು ರಾಮಾನುಜರಿಗೆ ನಾರಾಯಣಸ್ವಾಮಿ ದೇವಾಲಯ ನಿರ್ಮಾಣಕ್ಕೆ 1 ಲಕ್ಷ ವರಹಗಳನ್ನು ಕೊಟ್ಟನು.[5] ಶಿವನ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದನು.[6]

ವೀರಬಲ್ಲಾಳನು ಚೆಲ್ವಪಿಳ್ಳೆರಾಯನಿಗೆ ದಾನನೀಡಿದ್ದಾನೆ. ವಿಜಯನಗರದ ಅರಸು ಬುಕ್ಕರಾಯ ಮೇಲುಕೋಟೆ ನಮ್ಮಾಳ್ವಾರರಿಗೆ ಭೂಮಿದಾನ ಮಾಡಿದನು.[7] ಇಮ್ಮಡಿ ದೇವರಾಯನು ತಿರುನಾರಾಯಣ ದೇವರಿಗೆ ಹೊಸಹಳ್ಳಿ ಗ್ರಾಮ ನೀಡಿದನು.[8] ಕೃಷದೇವರಾಯನು ಕ್ರಿ.ಶ. 1528ರಲ್ಲಿ ಹಳ್ಳಿ ಮತ್ತು ಭೂಮಿ ದಾನಮಾಡಿದನು.[9] ವಿಜಯನಗರ ಸದಾಶಿವ ಮಹಾರಾಜರ ಆಜ್ಞೆಯಂತೆ ಅಚ್ಯುತ ಮಹಾರಾಜರು, ನಂದ್ಯಾಲದ ನರಸಿಂಗ ಯಾದವ ಮಹಾ ಅರಸು, ಅವರ ಮಕ್ಕಳಾದ ನಾರದೇಯಿ ಮಹಾ ಅರಸರು ದೇವರ ಧೂಪ ನೈವೇದ್ಯಗಳಿಗೆ ಕೆಲವು ಹಳ್ಳಿಗಳ್ನು ದಾನಮಾಡಿದರು.[10] ಮೈಸೂರರಸರಾದ ರಾಜಒಡೆಯರು ಮೇಲುಕೋಟೆ ಚೆಲ್ವಪಿಳ್ಳೆ ದೇವರ ಗರುಡವಾಹನಕ್ಕೆ ಒಂದು ವೃತ್ತಿಯನ್ನು ದಾನಮಾಡಿದರು.[11] ಚಿಕ್ಕದೇವ ಮಹಾರಾಜರು ಮಂದಗೆರೆಯ ಕೆಲವು ಹಳ್ಳಿಗಳನ್ನು ದೇವರ ಸೇವೆಗಳಿಗೆ ದಾನ ನೀಡಿದ್ದಾರೆ.[12]

ಶ್ರೀ ಕಠೀರವ ಮಹಾರಾಜರು ಮೇಲುಕೋಟೆಯಲ್ಲಿ ಸ್ವನಾಮಾಂಕಿತವಾಗಿ ಬಿಂಧುಮಾಧವ ದೇವಾಲಯ ಕಟ್ಟಿಸಿ ಅನೇಕ ಧರ್ಮಕಾರ್ಯಗಳನ್ನು ಮಾಡಿದ್ದಾರೆ.[13] ದೊಡ್ಡ ಕೃಷ್ಣರಾಜ ಒಡೆಯರು ತೊಂಡನೂರಿನಲ್ಲಿ ಗೋಪಾಲಕೃಷ್ಣಸ್ವಾಮಿಯವರ ಪ್ರತಿಷ್ಠೆ ಮಾಡಿಸಿ ದೇವಾಲಯ ಕಟ್ಟಿಸಿದರು. ಮೇಲುಕೋಟೆಯಲ್ಲಿ ಸ್ವನಾಮಾಂಕಿತವಾಗಿ ಹಾಗೂ ಚೆಲುವರಾಜಮ್ಮಣ್ಣಿಯವರ ನಾಮಾಂಕಿತವಾಗಿ ಕಲ್ಯಾಣಿ ಬಳಿ ಕೆಲವು ಮಂಟಪಗಳು ಹಾಗೂ ಆಳ್ವಾರರ ಗುಡಿಗಳನ್ನು ನಿರ್ಮಿಸಿದರು.[14] ಇಲ್ಲಿ ಕೃಷ್ಣರಾಜ ಒಡೆಯರು ಚೆಲುವರಾಜಮ್ಮಣ್ಣಿಯವರ ಮೇಲಿನ ಪರೋಕ್ಷವಿನಯವನ್ನು ಗುರುತಿಸಬಹುದು. ಟಿಪ್ಪುಸುಲ್ತಾನನು ಕ್ರಿ.ಶ. 1785ರಲ್ಲಿ ತಿರುನಾರಾಯಣ ಮತ್ತು ನರಸಿಂಹ ದೇವರಿಗೆ 12 ಆನೆಗಳನ್ನು ದಾನಮಾಡಿದ್ದಾನೆ.[15] ಇದು ಮುಸಲ್ಮಾನ ಧರ್ಮೀಯ ರಾಜನೊಬ್ಬ ಹಿಂದೂ ದೇವಾಲಯದೊಂದಿಗೆ ಇದ್ದ ಸೌಹಾರ್ದತೆಯನ್ನು ಸೂಚಿಸುತ್ತದೆ.

ಹೊಯ್ಸಳರು ಮತ್ತು ವಿಜಯನಗರದರಸರ ಕಾಲದಲ್ಲಿ ಮೇಲುಕೋಟೆ ಹಲವು ಅಧಿಕಾರಿಗಳ ನಿಯಂತ್ರಣದಲ್ಲಿತ್ತು. ಹಲವು ವರ್ಗದ ಅಧಿಕಾರಿಗಳು ತಮ್ಮ ಅಧಿಕಾರ ವ್ಯಾಪ್ತಿಯ ಪ್ರದೇಶಗಳಲ್ಲಿ ಧರ್ಮಕಾರ್ಯಗಳನ್ನು ಹಮ್ಮಿಕೊಳ್ಳಲು ಸ್ವತಂತ್ರ್ಯರಾಗಿದ್ದರು. ಅದಕ್ಕೆ ಚಕ್ರವರ್ತಿಯ ಅನುಮತಿ ಮತ್ತು ಪ್ರೋತ್ಸಾಹ ಇದ್ದೇ ಇರುತ್ತಿದ್ದವು. ಮಹಾ ಪ್ರಧಾನ ತಿಮ್ಮಣ್ಣದಂಡನಾಯಕನು ಮೇಲುಕೋಟೆ ನಾರಾಯಣಸ್ವಾಮಿ ದೇವಾಲಯಕ್ಕೆ ಸೇರಿದಂತೆ ಲಕ್ಷ್ಮಿ, ಸುದರ್ಶನಾಳ್ವಾರ್ ಮತ್ತು ಚಕ್ರತ್ತಾಳ್ವಾರ್ ಸನ್ನಿಧಿಗೆ ರಂಗಮಂಟಪಗಳನ್ನು ಹಾಗೂ ದೇವಾಲಯದ ಹೊರಗೆ ಕೈಸಾಲೆ ನಿರ್ಮಿಸಿದರು.[16]

ಹೊಯ್ಸಳ ಸೇನಾಧಿಪತಿ ಜ್ಯೋಮಯ್ಯ ಮತ್ತು ಬಲಯ್ಯರು ತಿರುನಾರಾಯಣಪುರದ (ಮೇಲುಕೋಟೆ) ಕೋಟೆ ರಕ್ಷಿಸುತ್ತಿರುವಾಗ, ಅವರ ಮಕ್ಕಳಾದ ನೀಲಯ್ಯ ಮತ್ತು ಚಾಮಯ್ಯರು ದೇವರಿಗೆ ನಂದಾದೀವಿಗೆಯ ಧರ್ಮ ಮಾಡಿದರು.[17] ಮಾದಪ್ಪ ದಣ್ಣಾಯಕನು ನಾಮದ ಗರುಡದೇವರಿಗೆ ಧರ್ಮ ಮಾಡಿದನು.[18] ಕೃಷ್ಣದೇವರಾಯನ ಸೈನ್ಯಾಧಿಕಾರಿಗಳಾದ ಅವುಭಳದೇವರ ಮಕ್ಕಳಾದ ಕೃಷ್ಣರಾಯನಾಯಕನು ವಿವಿಧ ಕೈಂಕರ್ಯಗಳಿಗೆ 254 ವರಹ ಉತ್ಪತ್ತಿಯಾಗುವ ಭೂಮಿ ದಾನ ಮಾಡಿದನು.[19]

ಹಿಂದೂ ಧರ್ಮದ ಧಾರ್ಮಿಕ ಚಟುವಟಿಕೆಗಳಲ್ಲಿ ಸ್ತ್ರೀಯರು ಗಮನಾರ್ಹ ಪಾತ್ರ ವಹಿಸಿದ್ದಾರೆ. ಮಧ್ಯಯುಗದಲ್ಲಿ ದೇವಾಲಯಗಳು ಮತ್ತು ಸ್ತ್ರೀಯರ ಸಂಬಂಧ ಬಹಳ ಹತ್ತಿರವಾಗಿತ್ತು.[20] ಮೇಲುಕೋಟೆ ದೇವಾಲಯಗಳಿಗೆ ಸಂಬಂಧಿಸಿದ ಶಾಸನಾಧಾರಗಳು ಮತ್ತು ಆಚರಣೆಗಳ ಆಧಾರದಿಂದ, ಸ್ತ್ರೀಯರು ಸಹ ಧರ್ಮದಿಂದ ಪ್ರಭಾವಿತವಾಗಿರುವುದು ಸ್ಪಷ್ಟವಾಗುತ್ತದೆ. ಭಾರತೀಯ ಸಮಾಜ ಪುರುಷ ಪ್ರಧಾನವಾದುದು ಎಂಬ ವಾದವಿದ್ದರೂ ಧರ್ಮಕಾರ್ಯಗಳಲ್ಲಿ ಸ್ತ್ರೀಯರು ಹೆಚ್ಚಿನ ಆಸಕ್ತಿ ವಹಿಸಿರುವುದು ಶಾಸನಗಳಿಂದ ಸ್ಪಷ್ಟವಾಗುತ್ತದೆ. ವಿಜಯನಗರ ಆಳ್ವಿಕೆಯ ಕಾಲದಲ್ಲಿ ಮಹಾ ಪ್ರಧಾನ ತಿಮ್ಮಣ್ಣ ದಣ್ಣಾಯಕನ ಪತ್ನಿ, ರಂಗನಾಯಕಮ್ಮಳು ಮೇಲುಕೋಟೆ ದೇವಾಲಯಕ್ಕೆ ರಾಮಾನುಜಕೂಟವೆಂಬ ಅನ್ನಸತ್ರ ಕಟ್ಟಿಸಿ, ನಿತ್ಯ ತದೀಯಾರಾಧನೆ ನಡೆಸುವಂತೆ ಶಾಸನ ಬರೆಸಿದಳು. ತಿರುನಾರಾಯಣ ದೇವಾಲಯದ ಅಮ್ಮನವರ ಸನ್ನಿಧಿ ಮುಂದೆ ಕಲ್ಲುಕಂಬಗಳಿಂದ ಅಲಂಕೃತಗೊಂಡ ರಂಗಮಂಟಪವನ್ನು ನಿರ್ಮಿಸಿದಳು. ದೇವಾಲಯದ ಸುತ್ತ ಕೈಸಾಲೆಯನ್ನು ನಿರ್ಮಿಸಿದಳು ಹಾಗೂ ಶ್ರೀ ವೈಷ್ಣವ ಬ್ರಾಹ್ಮಣರ ತದೀಯಾರಾಧನೆಗೆ ಮೇಲುಕೋಟೆಯ ಕೆಲವು ಗ್ರಾಮಗಳ ಭೂಮಿ ದಾನಮಾಡಿದಳು[21]. ಕ್ರಿ.ಶ. 1469 ವಿಜಯನಗರದ ವಿರೂಪಾಕ್ಷನ ಆಳ್ವಿಕೆಯ ಕಾಲದಲ್ಲಿ, ತಿಮ್ಮಣ್ಣ ಡಣ್ಣಾಯಕನ ಜೊತೆ ಸೇರಿ ಮೇಲುಕೋಟೆಯ ನಾಚ್ಚಿಯಾರಮ್ಮರು, ನಮ್ಮಾಳ್ವಾರ್ ಮತ್ತು ನಾರಾಯಣ ದೇವಾಲಯಗಳ ಕೈಂಕರ್ಯ ಮಾಡಲು 13 ಗೃಹ ನಿರ್ಮಿಸಿ, 12ನ್ನು ಶೋತ್ರಿ ಬ್ರಾಹ್ಮಣರಿಗೂ, ಒಂದು ಗೃಹವನ್ನು ಕೈಂಕರ್ಯಪರರಾದ ಐವತ್ತಿಬ್ಬರಿಗೂ ದಾನಮಾಡಿದಳು.[22] ಕ್ರಿ.ಶ. 1521ರಲ್ಲಿ ವಾಬಜಮ್ಮ ತಿರುನಾರಾಯಣ ದೇವರಿಗೆ ತಿರುನಂದನವನ ಸೇವೆ ಮಾಡಿದಳು.[23] ಬೆಳಗೊಳದ ಅಕ್ಕಚ್ಚಿ ಮತ್ತು ಪೆರುಂದೇವಿ ಎಂಬ ಅಕ್ಕತಂಗಿಯರು ತಿರುನಾರಾಯಣದೇವರಿಗೆ ನಿವೇದನೆ ಮತ್ತು ತಿರುಮಾಲೆ ಕೈಂಕರ್ಯಕ್ಕೆ ಕೆಲವು ಭೂಮಿ ಸಮರ್ಪಿಸಿದರು.[24] ಮೇಲುಕೋಟೆ ಶ್ರೀ ಯೋಗಾನರಸಿಂಹ ಸ್ವಾಮಿಯವರಿಗೆ ಮೈಸೂರು ಸಂಸ್ಥಾನದ ಕೃಷ್ಣರಾಜ ಒಡೆಯರ ಧರ್ಮಪತ್ನಿ ಲಿಂಗರಾಜಮ್ಮಣ್ಣಿಯವರು ಸ್ವರ್ಣಕಿರೀಟ ಮಾಡಿಸಿದರು.[25]

ದೇವಾಲಯಗಳು ಯಾರೊಬ್ಬರ ಮಿತಿಗೆ ಒಳಪಟ್ಟಿದ್ದಲ್ಲ. ದೇವರ ಬಗೆಗಿನ ನಿಷ್ಠೆ, ಶ್ರದ್ಧೆಗಳು ಧರ್ಮ ಎಂದು ಒಪ್ಪಿದ ಒಳ್ಳೆಯ ಕೆಲಸಗಳು ಯಾರು ಬೇಕಾದರೂ ಮಾಡುವಂತಹವು. ಸಾಮಾಜಿಕವಾಗಿ, ಧಾರ್ಮಿಕವಾಗಿ ಹಾಗೂ ಆರ್ಥಿಕವಾಗಿ ಜನತೆಗೆ ಉಪಯೋಗವಾಗುವಂತಹ ಅವರ ಸಾಂಸ್ಕೃತಿಕ ಬದುಕಿಗೆ ಪೋಷಣೆ ನೀಡುವಂತಹ ಯಾವುದೇ ಒಳ್ಳೆಯ ಕಾರ್ಯಕ್ಕೆ ಧನಬಲವೊಂದಿದ್ದರೆ ಮಾತ್ರ ಸಾಲದು ಜನಬಲವೂ ಅವಶ್ಯಕ. ದೇವಾಲಯಗಳ ನಿರ್ಮಾಣ ಮತ್ತು ವ್ಯವಸ್ಥೆಗೆ ಆಳುವ ಅರಸರು ಮತ್ತು ಅಧಿಕಾರಿಗಳಂತೆ ಜನ ಸಾಮಾನ್ಯರೂ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಮೇಲುಕೋಟೆಯ ಹಲವು ಶಾಸನಗಳು ಇದಕ್ಕೆ ಪುಷ್ಠಿನೀಡುತ್ತವೆ. ಮೇಲುಕೋಟೆಯ ಶ್ರೀ ವೈಷ್ಣವರು ತಿರುನಾರಾಯಣಸ್ವಾಮಿಯ ತಿರುವಡಿಯಾಟಿಕ್ಕೂ, ದೇವರ ಅಮೃತಪಡಿ ದೀವಿಗೆ ಎಣ್ಣೆ ಮತ್ತು ನಿತ್ಯ ನೈಮಿತ್ತಿಕಗಳಿಗೆ ಕೆಲವುದಾನ ಮಾಡಿದ್ದಾರೆ.[26] ತೊಂಡನೂರಿನ ಲಕ್ಷ್ಮಿನಾರಾಯಣ ದೇವರಿಗೆ ಹೆಗ್ಗಡೆ ಮಾಚಯ್ಯ ಒಂದೆತ್ತಿನ ಗಾಣದ ಸಾಂಕ, ತೆರಿಗೆಯನ್ನು ಮತ್ತು ಎಣ್ಣೆಯನ್ನು ದಾನಮಾಡಿದನು.[27] ಕೇತಿಶೆಟ್ಟಿಯು 250 ವರಹಗಳನ್ನು ನಾರಾಯಣದೇವಾಲಯದ ಪಾತಾಳಾಂಕಣ ನಿರ್ಮಿಸಲು ದಾನಮಾಡಿದ್ದಾನೆ.[28] ನರಸಿಂಹ ದೇವಾಲಯಕ್ಕೆ ಬೆಟ್ಟೇಗೌಡನು ಬೆಳ್ಳಿಬಟ್ಟಲನ್ನು ದಾನಮಾಡಿದ್ದಾನೆ.[29] ಚಿಕ್ಕಯ್ಯನು ಮೇಲುಕೋಟೆಯಲ್ಲಿ ಭಕ್ತಾಧಿಗಳ ಅನುಕೂಲಕ್ಕಾಗಿ ಕೊಳ ಕಟ್ಟಿಸಿರುವನು. ನಿಂಗಣ್ಣನೆಂಬುವನು ಭಕ್ತರ ಅನುಕೂಲಕ್ಕೆ ಒಂದು ಮಂಟಪವನ್ನು ನಿರ್ಮಿಸಿದ್ದಾನೆ. ದಾನ ಧರ್ಮಾದಿರೂಪದಲ್ಲಿಯೇ ಸಾಮಾನ್ಯರು ದೈಹಿಕವಾಗಿ ಮಾಡುತ್ತಿದ್ದ ಸೇವೆಗಳು ನಡೆಮುಡಿಹಾಸುವ ಅಗಸವರ್ಗ, ಉತ್ಸವ ಹೊರುವ ಒಕ್ಕಲಿಗವರ್ಗ, ದೀಪಾರಾಧನೆಗೆ ಎಣ್ಣೆದಾನ ಮಾಡುವ ಗಾಣಿಗರು, ಹೂಮಾಲೆ ಅರ್ಪಿಸುವ ಮಾಲೆಕಾರರು ದೇವರ ವಸ್ತ್ರ ಶುದ್ಧಗೊಳಿಸುವ ಅಗಸರು ಇಂತಹ ನಿರಾಪೇಕ್ಷ ಸೇವೆಗಳು ಧರ್ಮ ಪ್ರಭಾವಕ್ಕೆ ಮತ್ತಷ್ಟು ಉದಾಹರಣೆಗಳು.

ಒಳ್ಳೆಯ ಮನುಷ್ಯ ಎನಿಸಿಕೊಳ್ಳಲು ಐಶ್ವರ್ಯವನ್ನು ಕೆರೆಗೆ, ಸತ್ರಕ್ಕೆ, ದೇವಾಲಯಕ್ಕೆ ವಿನಿಯೋಗಿಸಬೇಕು. ಕಣ್ಣಿಗೆ ಕಾಣುವ ಮತ್ತು ಕಾಣದ ಎರಡೂ ಫಲಗಳನ್ನು ಕೊಡುವುದೇ ಧರ್ಮ ಇತ್ಯಾದಿ ನಂಬಿಕೆ ಮತ್ತು ಭಾವನೆಗಳಿಂದ ದೇವಾಲಯ ನಿರ್ಮಿಸುವ ಕಾರ್ಯದಲ್ಲಿ ಜನತೆ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಸಾಮಾನ್ಯ ಜನತೆ ದೇವಾಲಯಗಳ ಮೇಲೆ ಹೊಂದಿದ್ದ ನಿಷ್ಠೆ, ನಂಬಿಕೆಗಳಿಗೆ ಗಳಿಸಿದ ಸಂಪತ್ತಿನ ಸದುಪಯೋಗ ಪ್ರಮುಖ ಕಾರಣವಾಗಿತ್ತು. ಧರ್ಮ ಪ್ರಭಾವಿತರಾಗಿ ದೇವಾಲಯ ನಿರ್ಮಾಣಕ್ಕೆ ಹಣವನ್ನು ವಿನಿಯೋಗಿಸಲು ಜನತೆ ಉತ್ಸುಕರಾಗಿದ್ದಾರೆ. ಧರ್ಮಕಾರ್ಯಗಳಿಗೆ ಹಣವನ್ನು ತೊಡಗಿಸುವುದು ಲೇಸೆಂದು ಜನತೆ ನಂಬಿತ್ತು. ದೇವಾಲಯ ನಿರ್ಮಾಣದಿಂದ ಹಣದ

ಸದ್ವಿನಿಯೋಗ ಯಶಸ್ಸು ಕೀರ್ತಿ ಲಭ್ಯವಾಗುತ್ತದೆ, ಹೆಸರು ಅಮರವಾಗುತ್ತದೆ ಇತ್ಯಾದಿ ನಂಬಿಕೆ ಮತ್ತು ಭರವಸೆಗಳಿಂದ ಧರ್ಮ ಪ್ರಭಾವಿತರಾಗಿದ್ದರು. ತಮ್ಮ ಹೆಸರು ದೇವಾಲಯಗಳಿಂದ ಸದಾ ಉಳಿಯುವಂತೆ ಮಾಡಬೇಕು ಎಂಬ ಆಶಯವು ಆ ಕಾಲದ ಜನತೆಯಲ್ಲಿ ಸಾರ್ವತ್ರಿಕವಾಗಿತ್ತು.

ಧರ್ಮ ಪ್ರಸಂಗಗಳು

ಧರ್ಮ ಎನ್ನುವುದು ಬದುಕಿನ ನೈತಿಕ ಮೌಲ್ಯಗಳ ಕಟ್ಟುಪಾಡು ಎನ್ನುವ ನಂಬಿಕೆ, ಆಚರಣೆಯಲ್ಲಿ ಸ್ಥಿರವಾಗಿ ಉಳಿದು ಬಂದು, ಪದ್ಧತಿಗಳನ್ನು ಉಳಿಸಲು ಪುರಾಣಗಳು, ಕಥೆಗಳು, ಕಾವ್ಯಗಳು ಶ್ರಮಿಸುತ್ತವೆ. ಅಖ್ಯಾನ ಮತ್ತು ಉಪಾಖ್ಯಾನಗಳ ಮೂಲಕ ಜನತೆಗೆ ಧರ್ಮ ಬೋಧಿಸುವ ಕಾರ್ಯ ಮೊದಲಿನಿಂದಲೂ ನಡೆದು ಬಂದಿದೆ. ಸಾರ್ವಜನಿಕವಾಗಿ ನಡೆಯುತ್ತಿದ್ದ ಧರ್ಮಪ್ರಸಂಗಗಳಿಂದ ರಾಜರು, ಅಧಿಕಾರಿಗಳು ಮತ್ತು ಸಾಮಾನ್ಯ ಜನತೆ ಪ್ರಭಾವಿತರಾಗುತ್ತಿದ್ದರು. ತಾವು ನಂಬಿದ್ದ ಧರ್ಮಕ್ಕೆ ಸಂಬಂಧಿಸಿದ ಪುರಾಣಕಥೆಗಳನ್ನು ಹೇಳುವುದರ ಮತ್ತು ಕೇಳುವುದರ ಮೂಲಕ ಧಾರ್ಮಿಕ ಜಾಗೃತಿಯನ್ನು ಉಂಟುಮಾಡುವ ಪ್ರಸಂಗಗಳು ಧಾರ್ಮಿಕ ಕಾರ್ಯಗಳಿಗೆ ಪ್ರೇರಣೆಯಾಗಿವೆ. ಧರ್ಮ ಪ್ರಸಂಗಗಳ ಪ್ರೇರಣೆಯಿಂದ ದೇವಾಲಯಗಳ ನಿರ್ಮಾಣ ಮತ್ತು ನಿರ್ವಹಣೆಗೆ ವ್ಯವಸ್ಥೆಗಳಾಗಿವೆ.

ಮೇಲುಕೋಟೆ ದೇವಾಲಯ ಸಂಬಂಧಿ ಹಾಗೂ ಸ್ಥಳ ಮಹಿಮೆಗಳ ಪುರಾಣ ಮತ್ತು ಕಥೆಗಳನ್ನು ಧರ್ಮಪ್ರಸಂಗಗಳಾಗಿ ವರ್ಣಿಸಲಾಗುತ್ತಿತ್ತು. ಇಲ್ಲಿ ಗಮನಾರ್ಹ ಅಂಶವೆಂದರೆ, ಆಗ ತಾನೆ ಹೊಯ್ಸಳ ನಾಡಿಗೆ ಆಗಮಿಸಿದ ರಾಮಾನುಜರು ಪ್ರಬಲವಾಗಿದ್ದ ಜೈನಧರ್ಮವನ್ನು ತಮ್ಮ ತಾತ್ವಿಕ ಸಂವಾದದಲ್ಲಿ ಸೋಲಿಸಿ ಶ್ರೀ ವೈಷ್ಣವ ಮತವನ್ನು ಬಲಗೊಳಿಸಿದರು. ವಿಷ್ಣುವರ್ಧನನು ವೈಷ್ಣವ ಮತಕ್ಕೆ ಮತಾಂತರವಾದ ನಂತರ ರಾಜ ಬೆಂಬಲ ಈ ಮತಕ್ಕೆ ಸಿಕ್ಕಿತು. ನಂತರ ಜನರ ಬೆಂಬಲ ಪಡೆಯುವ ಅಗತ್ಯತೆ ಇತ್ತು.

ನಂತರದ ಹಲವು ಬ್ರಾಹ್ಮಣ ಪಂಡಿತರು ಕಾಲಕ್ರಮದಲ್ಲಿ, ಅರಸನ ಕಣ್ಣಿನಲ್ಲಿ ಹಾಗೂ ಜನರ ಮನಸ್ಸಿನಲ್ಲಿ ಸ್ಥಳದ ಮಹತ್ವವು ಅತಿಶಯವಾಗುವಂತೆ ಕ್ಷೇತ್ರದ ಮಹಿಮೆಯನ್ನು ಬಿಂಬಿಸುವ ಪುರಣ ಹಾಗೂ ನಂಬಿಕೆಗಳನ್ನು ವರ್ಣಿಸಲಾರಂಭಿಸಿದರು. ಪ್ರಬಲವಾಗಿದ್ದ ಶೈವ ಮತ್ತು ಜೈನ ಧರ್ಮಗಳ ಸಂಘರ್ಷಗಳ ನಡುವೆಯೂ ಮೇಲುಕೋಟೆ ದೇವಾಲಯಗಳ ಸ್ಥಾಪನೆ ಹಾಗೂ ನಿರ್ವಹಣೆಗಳು ಸಾಂಗವಾಗಿ ನಡೆಯಲು ಧರ್ಮ ಪ್ರಸಂಗಗಳ ಪಾತ್ರ ಮಹತ್ವದ್ದಾಯಿತು. ನಂತರದ ದಿನಗಳಲ್ಲಿಯೂ ಇಂಥಹ ಪುರಾಣಕಥೆಗಳ ವರ್ಣನೆಗಳು

ನಿರಂತರವಾಗಿ ಮುಂದುವರೆದುದು ಧಾರ್ಮಿಕ ಭಾವನೆಗಳು ದೇವಾಲಯಗಳ ಬೆಳವಣಿಗೆಗೆ ಪೂರಕವಾಯಿತು.

ವೈದಿಕ ಆದರ್ಶಗಳನ್ನು ಪ್ರತಿನಿಧಿಸುವ, ನೀತಿ ಸಂಹಿತೆಗಳನ್ನು ಜನರಿಗೆ ರೂಪಿಸುವ ಕಾರ್ಯದಲ್ಲಿ ಧರ್ಮ ಪ್ರಸಂಗಗಳ ಪಾತ್ರ ಮಹತ್ವದ್ದು.[30] ಪ್ರಜೆಗಳಲ್ಲಿ ಭಯ, ಭಕ್ತಿ ಮೂಡುವಂತೆ ಮಾಡಿ ದೇವಾಲಯದ ಕೆಲಸ ಪುಣ್ಯದ ಕೆಲಸ, ಮೋಕ್ಷ ಲಭಿಸುವ ಕೆಲಸ ಎನ್ನುವ ಧಾರ್ಮಿಕ ಸಂದೇಶವನ್ನು ಧರ್ಮ ಪ್ರಸಂಗಗಳು ಸಾರುತ್ತಿದ್ದುವು. ಭಕ್ತರು ದೇವಾಲಯಗಳಿಗೆ ಗೌರವ ವಿಧೇಯತೆ ತೋರಿಸುತ್ತಿದ್ದರು. ಪುರಾಣಗಳಿಂದ ಪ್ರಭಾವಿತರಾದ ರಾಜರಯ ಎಥೇಚ್ಛವಾಗಿ ದಾನ ನೀಡುತ್ತಿದ್ದರು. ಹಾಗೆಯೇ ಭಕ್ತರೂ ಸಹ ಕಾಣಿಕೆಗಳನ್ನು ನೀಡುವುದರ ಜೊತೆಗೆ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು.

ಮತ, ಧರ್ಮ

ದೇವರು ಮತ್ತು ಅದರ ಜೊತೆಗೆ ಸೇರಿ ಬಂದ ಧರ್ಮಕ್ಕೆ ಒಂದು ಮತದ ಮಿತಿ ದೊರೆತಿರುವುದನ್ನು ಧಾರ್ಮಿಕ ಇತಿಹಾಸದ ಅಧ್ಯಯನದ ಸಂದರ್ಭದಲ್ಲಿ ತಿಳಿಯುತ್ತೇವೆ. ಧರ್ಮವು ಮತದ ಮಿತಿಯನ್ನು ದಾಟಿ ಬೆಳೆದಾಗ 'ತತ್ವ'ವಾಗಿ ವಿಸ್ತರಿಸಿಕೊಳ್ಳುತ್ತದೆ. ತತ್ವವಾಗುವ ಮೊದಲು ಧರ್ಮಕ್ಕೆ ಮತದ ಮಿತಿ ಇರುತ್ತದೆ. ಮತಧರ್ಮವು ಒಂದು ಸಿದ್ಧಾಂತವನ್ನು ನಂಬಿದ ಜನತೆಯನ್ನು ಒಂದುಗೂಡಿಸುತ್ತದೆ. ಮತಧರ್ಮಗಳಲ್ಲೂ ಹಲವು ಒಳಪಂಗಡಗಳನ್ನು ಗುರುತಿಸಬಹುದು. ಇದು ಸಿದ್ಧಾಂತದ ಅನುಷ್ಠಾನವನ್ನು ಅವಲಂಬಿಸಿರುತ್ತದೆ.

ವಿಷ್ಣುವನ್ನು ನಂಬಿ, ಆ ನಂಬಿಕೆಯಿಂದ ರೂಪುಗೊಂಡ ಬದುಕಿನ ಕ್ರಮವನ್ನು ಅನುಸರಿಸುವವರು ವೈಷ್ಣವರು. ಅವರ ಬದುಕಿನ ಕ್ರಮಕ್ಕೊಂದು ರೀತಿಯಿದೆ, ಸಿದ್ಧಾಂತವಿದೆ, ಅನುಷ್ಠಾನ ಮಾರ್ಗವಿದೆ, ಅದು ವೈಷ್ಣವ ಮತ. ಹಾಗೆಯೇ ಶೈವಮತ, ಜೈನಮತ, ಬೌದ್ಧಮತ ಇತ್ಯಾದಿಗಳು. ಅನುಷ್ಠಾನದ ವಿಧಿ–ವಿಧಾನಗಳಲ್ಲಿ ವ್ಯತ್ಯಾಸಗಳಿರುತ್ತವೆ. ಅವುಗಳೇ ವೈಷ್ಣವಕ್ಕೆ ಸಂಬಂಧಿಸಿದ, ವೈಷ್ಣವ, ಶ್ರೀವೈಷ್ಣವ, ಭಾಗವತ, ಶೈವಕ್ಕೆ ಸಂಬಂಧಿಸಿದ ಲಾಕುಳ, ಕಾಳಾಮುಖ, ಪಾಶುಪತ, ಜೈನಕ್ಕೆ ಸಂಬಂಧಿಸಿದ ಶ್ವೇತಾಂಬರ, ದಿಗಂಬರ, ಬೌದ್ಧಕ್ಕೆ ಹೊಂದಿದ ಹೀನಾಯಾನ, ಮಹಾಯಾನ, ವಜ್ರಯಾನ ಇತ್ಯಾದಿ ಪಂಗಡಗಳು ಭಾರತದಲ್ಲಿ ಹುಟ್ಟಿದ ಯಾವುದೇ ಧಾರ್ಮಿಕ ಪಂಥ ಏಕಗಾಮಿಯಾಗಿ ಹರಿದಿದ್ದಿಲ್ಲ. ತನ್ನ ಕಾಲದಲ್ಲಿ ಪ್ರಬಲವಾಗಿದ್ದ ಅನ್ಯಧರ್ಮೀಯ ಪಂಥಗಳ ಜೊತೆಗೆ ವಾಗ್ವಾದಗಳನ್ನು ಸೃಷ್ಟಿಸಿಕೊಂಡು ಆರೋಪ ಪ್ರತ್ಯಾರೋಪಗಳ ಸಮರಮುಖೀ ವಾತಾವರಣದಲ್ಲಿ ಉಸಿರಾಡಿದ್ದೇ ಹೆಚ್ಚು.

ಸಿದ್ಧಾಂತ ಶಿಖಾಮಣಿಗಳ ಅರ್ಥಸಂಕೋಚ ದೃಷ್ಟಿ ಹಾಗೂ ಮತೀಯ ತತ್ವನಿಷ್ಠೆಯ ಜಡಭಾವದ ಪರಿಣಾಮ ಈ ಸಮರಮುಖೀ ವಾತಾವರಣ.

ತಮ್ಮ ನಂಬಿಕೆ ಮತ್ತು ಧರ್ಮಗಳನ್ನು ಬಲಪಡಿಸಿಕೊಳ್ಳಲು ಜನತೆ ಶ್ರಮಿಸುತ್ತದೆ. ಬಲವರ್ಧನೆಗೆ ಹತ್ತೆಂಟು ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುತ್ತದೆ. ಜನಪ್ರಿಯವಾಗಲು ಪ್ರಯತ್ನಿಸುತ್ತದೆ. ತನ್ನನ್ನು ಟೀಕಿಸಿದ, ನಿಂದಿಸಿದ ಜನರ ವಿರುದ್ಧ ಹೋರಾಡುತ್ತದೆ. ದೇವಾಲಯಗಳು ದೇವರ ಹೆಸರಿನಲ್ಲಿ ನಿರ್ಮಾಣವಾದರೂ, ಆ ದೇವರ ಹೆಸರಿನಲ್ಲಿ ಒಂದು ಧರ್ಮ ಬೆಳೆದುದರಿಂದ, ದೇವಾಲಯಗಳು ಧರ್ಮವನ್ನು, ಧರ್ಮವು ದೇವಾಲಯಗಳನ್ನು ರಕ್ಷಿಸಲು ಮತ್ತು ಪೋಷಿಸಲು ಬದ್ಧವಾಗಿದ್ದುವು.

"ಮತಧರ್ಮಗಳನ್ನು ಧಾರ್ಮಿಕ ನಾಯಕರ ಪ್ರವಚನಗಳಿಗಿಂತ ಭಿನ್ನವಾಗಿ ನಿತ್ಯಜೀವನಕ್ಕೆ ಸಂಬಂಧವಿಲ್ಲದ ವಿದ್ಯಮಾನ ಎಂಬಂತೆ ಮಂಡಿಸುವ ಜಡ ವಿಶ್ಲೇಷಣೆಗಳಿಗಿಂತ ಭಿನ್ನವಾಗಿ, ಧರ್ಮದ ಮೇಲಿನ ಅಧ್ಯಯನಗಳು ಮತಧರ್ಮಗಳ ಅಗತ್ಯವನ್ನು ಪ್ರತಿಷ್ಠಾಪಿಸಲು ಮಾಡಿದ ಧರ್ಮಶಾಸ್ತ್ರೀಯ ಪ್ರಯತ್ನ ಆಗಬಾರದು[31] ಎಂಬ ರಹಮತ್ ತರೀಕೆರೆಯವರ ಮಾತು ಇಲ್ಲಿ ಉಲ್ಲೇಖಾರ್ಹ. ಮತ, ಧರ್ಮಗಳನ್ನು ಅವುಗಳ ಚಾರಿತ್ರಿಕ ಅಂತೆಯೇ ಸಾಮಾಜಿಕ ಸಂದರ್ಭಗಳ ಹಿನ್ನೆಲೆಯಲ್ಲಿ ನೋಡಬೇಕಾದ ಅಗತ್ಯವಿದೆ. ಅವುಗಳನ್ನು ಆಯಾ ಕಾಲದ ಸಾಮಾಜಿಕ ಚರಿತ್ರೆಯೊಂದಿಗೆ ಸಂಬಂಧಿಸಿ ಅಧ್ಯಯನ ಮಾಡುವ ಪ್ರಯತ್ನ ಬಹಳ ಕಡಿಮೆ. ಮತ, ಧರ್ಮಗಳು ಶರಣಾಗತಿಯನ್ನು ಬಲವಂತವಾಗಿ ಹೇರುತ್ತದೆ. ಏಕೆಂದರೆ ಆ ಧರ್ಮವನ್ನು ಸರ್ವಸಮ್ಮತಿಯಿಂದ ಒಪ್ಪಿಕೊಂಡಾಗ ಮಾತ್ರವೇ ಅದನ್ನು ಅತ್ಯಂತ ಯಶಸ್ವಿಯಾಗಿ ರಾಜಕೀಯ ಉದ್ದೇಶಗಳಿಗಾಗಿ ಬಳಸಲು ಸಾಧ್ಯ. ರಾಜಕೀಯ ಶಕ್ತಿಯ ಸಂಪಾದನೆಗೆ ಇತರ ಸಮುದಾಯಗಳ ಮೇಲೆ ಮೇಲುಗೈ ಪಡೆಯುವುದು ಅತ್ಯಗತ್ಯ

"ಧರ್ಮವು ಧಾರ್ಮಿಕ ಚೌಕಟ್ಟಿನ ಹೊರಗೂ ವ್ಯಾಖ್ಯಾನಗೊಂಡಾಗ ಮಾತ್ರ ಧಾರ್ಮಿಕ ನಂಬಿಕೆ ಎಂಬುದು ಪರಸ್ಪರ ವಿರೋಧಗಳನ್ನು ಒಳಗೊಂಡ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳಿಂದ ಹುಟ್ಟಿಕೊಳ್ಳುವ ಸಾಂಸ್ಕೃತಿಕ ಆಚರಣೆ"[32] ಎನ್ನುವುದು ಸ್ಪಷ್ಟವಾಗಲು ಸಾಧ್ಯ. ಮತಧರ್ಮಗಳು "ದೈವಕೇಂದ್ರೀತವಾಗಿದ್ದವೇ ವಿನಃ ಮನುಷ್ಯಕೇಂದ್ರಿತವಾಗಿರಲಿಲ್ಲ"[33] ಎಂಬ ರೋಮಿಲಾಥಾಪರ್‌ರವರ ಮಾತು ಗಮನಾರ್ಹ. ಧರ್ಮದ ವಿಶಾಲ ವ್ಯಾಖ್ಯಾನಗಳಿಂದ ಸಾಂಸ್ಕೃತಿಕ ಯಜಮಾನಿಕೆಯನ್ನು ಅರಿಯಲು ಸಾಧ್ಯ. ಮತಧರ್ಮಗಳು, ದೇವತೆಗಳು ಮತ್ತು ವಿಚಾರಗಳನ್ನು ಅಳವಡಿಸಿಕೊಂಡಿರುವ ಬಣ್ಣದಹಾಸು. ಅವುಗಳಲ್ಲಿ

ದೇವಾಲಯ ನಿರ್ಮಾಣವೂ ಸಹ ಒಂದು. ಮತಧರ್ಮಗಳ ಪ್ರತೀಕಗಳಾದ ದೇವಾಲಯಗಳು ಸಾಮಾಜಿಕ ಮತ್ತು ರಾಜಕೀಯ ಅಗತ್ಯತೆಗಳನ್ನು, ಅನಿವಾರ್ಯತೆಗಳನ್ನು ಈಡೇರಿಸಿಕೊಳ್ಳುವ ಪ್ರಬಲ ಮಾಧ್ಯಮವಾದವು. ಆಳುವ ವರ್ಗವು ತನ್ನ ಸೈನಿಕ ಬಲದಿಂದ ಪ್ರಜೆಗಳನ್ನು ಅಧೀನದಲ್ಲಿಡಲು ವಿಫಲವಾದಾಗ ಧರ್ಮದ ಮೊರೆಹೋಗುವುದು ಸಹಜ. ಈ ಪ್ರಕ್ರಿಯೆಯಲ್ಲಿ ದೇವಾಲಯಗಳು ಧರ್ಮವನ್ನು ಮತ್ತಷ್ಟು ಬಲಗೊಳಿಸಿ ಜನರ ಬದುಕಿನಲ್ಲಿ ಕೇಂದ್ರ ಸ್ಥಾನವನ್ನು ಪಡೆದುಕೊಳ್ಳುವಂತೆ ಮಾಡುವಲ್ಲಿ ಪ್ರಮುಖ ಪಾತ್ರವಹಿಸಿತು.

ಇತಿಹಾಸದ ಯಾವನೇ ರಾಜನು ನಿರ್ವಹಿಸುವ ರಾಜಕೀಯ ಮತ್ತು ಸಾಮಾಜಿಕ ನಿಯಂತ್ರಣಕ್ಕೆ ಹಾಗೂ ರಾಜಕೀಯ ಪ್ರಭಾವವನ್ನು ಗರಿಷ್ಠ ವ್ಯಾಪ್ತಿಗೆ ವಿಸ್ತರಿಸಲು ಧರ್ಮ ಮತ್ತು ದಂಡಗಳ ಸಮುಚಿತವಾದ ಅನ್ವಯ ಅಗತ್ಯವಾಗುತ್ತಿತ್ತು.[34] ಆಯಾ ಕಾಲಗಳಲ್ಲಿ ರಾಜನು ಒಂದು ಸಾಮಾಜಿಕ ವ್ಯವಸ್ಥೆಯ ಮುಖ್ಯಸ್ಥನಾಗಿದ್ದರೂ ಸಾಮಾಜಿಕ ವೈವಿಧ್ಯತೆಗಳ ಹಿನ್ನೆಲೆಯಿಂದ ದೇವಾಲಯಗಳು ಪರೋಕ್ಷವಾಗಿ ಆ ಕಾರ್ಯವನ್ನು ಮಾಡುತ್ತಿದ್ದವು ಎಂಬುದು ಸ್ಪಷ್ಟವಾಗುತ್ತದೆ. ರಾಜ್ಯಾಡಳಿತ ಮತ್ತು ಸಾಮಾಜಿಕ ರೀತಿ–ನೀತಿಗಳನ್ನು ಕುರಿತ ವಿವರಗಳಿರುವ ಧರ್ಮಶಾಸ್ತ್ರಗಳಲ್ಲಿನ ತತ್ವಗಳು ಚಾಲ್ತಿಗೆ ಬಂದು, ಈ ನಿಯಮಗಳನ್ನು ನಿರೂಪಣೆ ಮಾಡುವಲ್ಲಿ ದೇವಾಲಯಗಳು ಪ್ರಮುಖ ಪಾತ್ರ ನಿರ್ವಹಿಸಿದವು.

ವೈಷ್ಣವ ಮತ

ಮೇಲುಕೋಟೆ ದಕ್ಷಿಣ ಭಾರತದ ಮಹತ್ವದ ಮತ್ತು ಶ್ರೀ ವೈಷ್ಣವ ಕೇಂದ್ರಗಳಲ್ಲಿ ಒಂದು. ಇಲ್ಲಿನ ದೇವಾಲಯಗಳು ವೈಷ್ಣವ ಮತ ಪ್ರಾಬಲ್ಯದ ಪ್ರತೀಕದಂತಿವೆ. ವಿಶಿಷ್ಟಾದ್ವೈತ ಸಿದ್ಧಾಂತ ಪ್ರತಿಪಾದಕರಾದ ರಾಮಾನುಜರ ಪ್ರಭಾವದಿಂದ ಮೇಲುಕೋಟೆ ಪ್ರಸಿದ್ಧಿಗೆ ಬಂತು. ಮೇಲುಕೋಟೆ ಮತ್ತು ಇಲ್ಲಿನ ದೇವಾಲಯಗಳು ಶ್ರೀ ವೈಷ್ಣವ ಮತದ ಇತಿಹಾಸದೊಂದಿಗೆ ಅತ್ಯಂತ ನಿಕಟ ಸಂಬಂಧ ಹೊಂದಿವೆ. ಶ್ರೀ ವೈಷ್ಣವ ಮತದ ಹಿನ್ನೆಲೆಯನ್ನು ಅರಿಯುವುದು ಇಲ್ಲಿ ಅತ್ಯಂತ ಉಪಯುಕ್ತವಾಗಿರುತ್ತದೆ.

ಕರ್ನಾಟಕದಲ್ಲಿ ಶ್ರೀ ವೈಷ್ಣವ ಮತ

ಕರ್ನಾಟಕದಲ್ಲಿ ಸುಮಾರು ಕ್ರಿಸ್ತಶಕದ ಆರಂಭದಲ್ಲಿಯೇ ವೈಷ್ಣವ ಮತದ ಪ್ರಚಾರವಾಗಿದ್ದಿರಬೇಕು. ಅತ್ಯಂತ ಪ್ರಾಚೀನ ಹಾಗೂ ಕನ್ನಡ ಭಾಷೆಯಲ್ಲಿರುವ ಕ್ರಿ.ಶ. 450ರ ಕದಂಬ ಕಾಕುಸ್ಥವರ್ಮನ ಹಲ್ಮಿಡಿಶಾಸನವು ವಿಷ್ಣುವಿನ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗುತ್ತದೆ.[35] ಶಾಸನಗಳಲ್ಲಿ 'ಭಾಗವತ', 'ವೈಷ್ಣವ' ಎಂಬ ಉಕ್ತಿಗಳು

ದೊರೆಯುತ್ತವೆ. ಆದರೆ ತಮಿಳುನಾಡಿನ ಆಳ್ವಾರರ ಪ್ರಭಾವವು ಈ ಪ್ರದೇಶದ ಮೇಲೆ ಎಷ್ಟರಮಟ್ಟಿಗೆ ಆಯಿತೆಂಬುದು ತಿಳಿಯುವುದು ಕಷ್ಟ. ಕ್ರಿ.ಶ. 10 ಅಥವಾ 11ನೇ ಶತಮಾನಗಳಲ್ಲಿ ವೈಧಿಕಗೊಳಿಸಲ್ಪಟ್ಟ ಭಾಗವತ ಧರ್ಮವು ಕರ್ನಾಟಕದಲ್ಲಿ ಪ್ರಚಾರವಾಗಿದ್ದಿರಬೇಕು.[36] 6ನೆಯ ಶತಮಾನದಲ್ಲಿ 'ಮಹಾಭಾಗವತ'ನಾದ ಚಾಳುಕ್ಯರಾಜ ಮಂಗಳೇಶನು ಬಾದಾಮಿಯಲ್ಲಿ ಪ್ರಸಿದ್ಧ ವೈಷ್ಣವ ಗುಹಾಂತರದೇವಾಲಯವನ್ನು ತೋಡಿಸಿದನು. ಇವರ ಕಾಲದ ವಿಷ್ಣುವಿನ ದೇವಾಲಯಗಳಿಗೆ ಬಿಟ್ಟ ದಾನಗಳ ವಿವರಗಳು, ವೈಷ್ಣವ ಧರ್ಮಕ್ಕೆ ಸಿಕ್ಕಿದ ಆಶ್ರಯ, ಪ್ರೋತ್ಸಾಹವನ್ನು ಎತ್ತಿತೋರಿಸುತ್ತವೆ. ವಿಟ್ಟಯ್ಯ ಮತ್ತು ಚಾವಯ್ಯ ಎಂಬ ಇಬ್ಬರು ವಿಷ್ಣುವಿನ ಶ್ರೀಪಾದವನು ಸೇರಲಿ ಎಂದು ಆಶಿಸಿ, ವಿಷ್ಣುದೇವಾಲಯವೊಂದಕ್ಕೆ ಭೂಮಿಯನ್ನು ಬಿಡಲಾಗಿದೆ.[37] ಲಕ್ಕುಂಡಿ ಮಹಾಜನರನ್ನು ಕುರಿತ, "ವೈಷ್ಣವ ಗೀತಿ ಮನೋಹರರ್" ಎಂಬ ವರ್ಣನೆಯು ಅಪ್ರತಿಮ ಜನಭಕ್ತೆ ಅತ್ತಿಮಬ್ಬೆಯ ಲಕ್ಕುಂಡಿ ಶಾಸನದಲ್ಲಿ ಕಾಣಸಿಗುತ್ತದೆ.

ವಿಷ್ಣುವಿನ ಅವತಾರಗಳಲ್ಲಿ ಬಹು ಜನಪ್ರಿಯದೇವನಾದ ಶ್ರೀರಾಮನ ದೇಗುಲುಗಳೂ ಇಲ್ಲಿದ್ದವು ಎಂಬುದನ್ನು ಶಾಸನಗಳು ತಿಳಿಯಪಡಿಸುತ್ತಿವೆ.[38] ಶ್ರೀ ರಾಮಾನುಜಾಚಾರ್ಯರು ಕರ್ನಾಟಕದ ಮಣ್ಣಿನ ಮೇಲೆ ಕಾಲೂರುವುದಕ್ಕೆ ಮೊದಲೇ ತಮಿಳುನಾಡಿನ ಆಳ್ವಾರರುಗಳ ಶ್ರೀ ವೈಷ್ಣವ ಮತದ ಪ್ರಭಾವವಾಹಿನಿಯು ಇಲ್ಲಿಗೆ ಹರಿದು ಬಂದಿದ್ದಿತು ಎಂಬುದು ಶಾಸನಗಳಿಂದ ಸ್ಪಷ್ಟವಾಗುತ್ತದೆ.

ರಾಮಾನುಜರಿಂದ ಶ್ರೀ ವೈಷ್ಣವ ಮತವು ಒಂದು ಸ್ಪಷ್ಟವಾದ ರೂಪವನ್ನು ಪಡೆಯಿತು. ಇದು ಗೌರವಾಯುತ ಹಿನ್ನೆಲೆಯನ್ನು ಹೊಂದಿದೆ. ಇದು ಸಂಪೂರ್ಣವಾಗಿ ಭಗವಂತನಾದ ವಿಷ್ಣುವಿಗೆ ಶರಣಾಗುವ ತತ್ವವನ್ನು ಆಧಾರವಾಗಿ ಹೊಂದಿದೆ. ರಾಮಾನುಜರಿಗಿಂತ ಹಿಂದಿನ ವೈಷ್ಣವ ಮತಶ್ರದ್ಧೆಯವರಿಂದ ಈ ಪರಿಕಲ್ಪನೆಯು ಬೆಳವಣಿಗೆಗೆ ಬಂದಿತ್ತು. ಈ ಧಾರ್ಮಿಕ ಚಳುವಳಿಯು ಸೈದ್ಧಾಂತಿಕವಾಗಿ ಭಾಗವತ ಮತ್ತು ಭಕ್ತಿಮಾರ್ಗಗಳ ವ್ಯವಸ್ಥೆಯಲ್ಲಿ ಗುರುತಿಸಲ್ಪಡುತ್ತದೆ. ಸೈದ್ಧಾಂತಿಕ ದೃಷ್ಟಿಗಳು ಮತ್ತು ಧರ್ಮದ ಬೀಜಗಳು ಭಗವದ್ಗೀತೆಯಲ್ಲಿ ಗುರುತಿಸಲ್ಪಡುತ್ತವೆ.

ಶ್ರೀ ರಾಮಾನುಜಾಚಾರ್ಯರು

ರಾಮಾನುಜರು ದಕ್ಷಿಣ ಭಾರತದಲ್ಲಿ ಬಲಗೊಳಿಸಿದ ದೇವಾಲಯ ಆಧಾರಿತ ಭಕ್ತಿ ಆಂದೋಲನಕ್ಕೆ, ಸ್ಪಷ್ಟ ಉದಾಹರಣೆ ಮೇಲುಕೋಟೆ. ಇಲ್ಲಿ ತಮ್ಮ ಜೀವಿತದ 14 ವರ್ಷಗಳನ್ನು ಕಳೆದು ಶ್ರೀ ವೈಷ್ಣವ ತತ್ವಗಳನ್ನು ಪ್ರಚಾರ ಮಾಡಲು

ಕೇಂದ್ರವಾಗಿಸಿಕೊಂಡರು.[39] ಮದ್ರಾಸಿನ ಸಮೀಪದಲ್ಲಿರುವ ಶ್ರೀ ಪೆರಂಬುದೂರಿನಲ್ಲಿ ಅಸೂರಿ ಕೇಶವ ಪೆರುಮಾಳ್ ಮತ್ತು ಭೂದೇವಿ ಎಂಬ ದಂಪತಿಗಳಿಗೆ ಮಗನಾಗಿ ಜನಿಸಿದರು. ಹದಿನಾರನೆಯ ವಯಸ್ಸಿನಲ್ಲಿ ಅವರಿಗೆ ವಿವಾಹವಾಯಿತು. ಕಾಂಚೀಪುರದ ಅದ್ವೈತಗುರು ಯಾದವ ಪ್ರಕಾಶರ ಬಳಿ ಶಿಷ್ಯರಾದರು. ರಾಮಾನುಜರಿಗೆ ಅವರ ದೃಷ್ಟಿಯೂ, ವ್ಯಾಖ್ಯಾನಗಳು ಸಮ್ಮತವಾಗದೆ, ಭಿನ್ನಾಭಿಪ್ರಾಯ ಬಂದುದರಿಂದ ಶಿಷ್ಯತ್ವ ತ್ಯಜಿಸಿದರು. ವಿದ್ವಾಂಸರಾಗಿದ್ದ ಅವರ ಕೀರ್ತಿ ಶ್ರೀರಂಗದಲ್ಲಿದ್ದ ಆಚಾರ್ಯ ಯಾಮುನಾಚಾರ್ಯರಿಗೆ ಅರಿವಾಗಿ, ತಮ್ಮ ಕನಸುಗಳನ್ನು ಪೂರ್ಣಗೈಯಬಲ್ಲ ಸಮರ್ಥ ವ್ಯಕ್ತಿ ಈತನೇ ಎಂದು ತೀರ್ಮಾನಿಸಿ, ಆಹ್ವಾನ ನೀಡಿದರು. ವೈವಾಹಿಕ ಜೀವನದಲ್ಲಿ ಹೊಂದಾಣಿಕೆಯಾಗದೆ, ಪ್ರಾಪಂಚಿಕ ಜೀವನವನ್ನು ತೊರೆದು ಸನ್ಯಾಸಿಯಾಗುವಂತೆ ಮಾಡಿತು. ರಾಮಾನುಜರು ಯಾಮುನರ ಮರಣಾ ನಂತರ ಆಳವಂದಾರ್ ಪೀಠಾಧಿಪತಿಯಾದರು. ಕಾಂಚೀಪುರದಲ್ಲಿದ್ದ ಯಾಮುನಾಚಾರ್ಯರು ಭಕ್ತ ಕಾಂಚೀಪೂರ್ಣರ ಹತ್ತಿರ, ಅವರು ಶೂದ್ರರಾಗಿದ್ದರೂ ಶಿಷ್ಯತ್ವವನ್ನು ವಹಿಸಿ ಸಂದೇಹ ಪರಿಹರಿಸಿಕೊಂಡರು.

ಸಾಂಪ್ರಾದಾಯಿಕ ನಂಬಿಕೆಯಂತೆ ರಾಮಾನುಜರಿಗೆ ಚೋಳದೇಶದ ಶೈವರಾಜನಿಂದ ವಿಪತ್ತು ಒದಗಿತು. ಶಿವನೇ ಶ್ರೇಷ್ಠನೆಂದು ರಾಮಾನುಜರಿಂದ ಹೊರಡಿಸಬೇಕೆಂದು ರಾಜ ಹಟತೊಟ್ಟಾಗ, ರಾಜನ ದುರುದ್ದೇಶವನ್ನರಿತ ರಾಮಾನುಜರ ಶಿಷ್ಯ ಕೂರೇಶನು ತಾನೇ ರಾಮಾನುಜರೆಂದು ಹೇಳಿಕೊಂಡು ಆಸ್ಥಾನಕ್ಕೆ ಹೋಗುತ್ತಾನೆ. ಅಲ್ಲಿ ಆತನ ಎರಡೂ ಕಣ್ಣುಗಳನ್ನು ಕೀಳಿಸಿಬಿಡುತ್ತಾನೆ. ಅಪಾಯವನ್ನರಿತ ರಾಮಾನುಜರು ತಲೆತಪ್ಪಿಸಿಕೊಂಡು, ಹೊಯ್ಸಳ ನಾಡಿಗೆ ಬಂದರು. ಯತಿರಾಜರು ಕಾವೇರಿ ನದಿಗೆ ಮೇಲ್ಮೊಗವಾರಿ, ಸತ್ಯಮಂಗಲದ ಮೂಲಕ ಈ ನಾಡನ್ನು ಪ್ರವೇಶಿಸಿದರು. ಆನಂತರ ಒಳಮಾರ್ಗವಾಗಿ ನಡೆದು ಕಾವೇರಿನದಿಯನ್ನು ದಾಟಿ ರಾಮನಾಥಪುರವನ್ನು ತಲುಪಿ, ಅಲ್ಲಿಂದ ಮಿರ್ಲೆ ಮತ್ತು ಸಾಲಿಗ್ರಾಮಗಳನ್ನು ಹಾದು ಹೊಯ್ಸಳ ರಾಜ್ಯದ ಉತ್ತರಗಡಿಯ ರಾಜಧಾನಿ ತೊಂಡನೂರನ್ನು ತಲುಪಿದರು. ಇಲ್ಲಿ ಹೊಯ್ಸಳ ದೊರೆ ವಿಷ್ಣುವರ್ಧನನು ಅವರ ಶಿಷ್ಯನಾಗಿ ವೈಷ್ಣವನಾಗಿ ಪರಿವರ್ತನೆಗೊಂಡನೆಂದು ಹೇಳಲಾಗಿದೆ. ನಂತರ ಮೇಲುಕೋಟೆಗೆ ತೆರಳಿ ದೇವಾಲಯ ಪ್ರತಿಷ್ಠಾಪಿಸುವ ಮೂಲಕ ಧರ್ಮದ ಬಗೆಗೆ ತಮಗಿದ್ದ ಉತ್ಸಾಹವನ್ನು ತೋರ್ಪಡಿಸಿದರೆಂದು ಹೇಳಲಾಗಿದೆ. ಪವಾಡ, ಕಥೆಗಳು ಧರ್ಮಕ್ಕೆ ಶಾಸನ ಬದ್ಧತೆಯನ್ನು ಒದಗಿಸುವಲ್ಲಿ ವಹಿಸುವ ಪಾತ್ರ ಇಲ್ಲಿ ಗಮನಾರ್ಹವಾದುದು. ಕರ್ನಾಟಕದಲ್ಲಿ ಈಗಾಗಲೇ ಶ್ರೀ ವೈಷ್ಣವ ಧರ್ಮವಿದ್ದು, ರಾಮಾನುಜರು ಕರ್ನಾಟಕದಲ್ಲಿ ಆಶ್ರಯ ಪಡೆಯಲು ಇದು ಪ್ರಚೋದನೆ ನೀಡಿರಬೇಕು.

ಶ್ರೀ ರಾಮಾನುಜರು ಮೇಲುಕೋಟೆಯಲ್ಲಿ ಹರಿಜನರ ಸಹಾಯದಿಂದ ಹುತ್ತವೊಂದರಲ್ಲಿದ್ದ ತಿರುನಾರಾಯಣಸ್ವಾಮಿಯವರ ವಿಗ್ರಹವನ್ನು ಮೇಲಕ್ಕೆ ತಂದು ದೇವಾಲಯ ಕಟ್ಟಿ ಪ್ರತಿಷ್ಠಾಪನೆ ಮಾಡಿದರು. ಐತಿಹ್ಯದ ಪ್ರಕಾರ ದೆಹಲಿಯ ಮುಸ್ಲಿಂ ಮುಖ್ಯಸ್ಥನ ಕುವರಿಯ ಬಳಿ ಇದ್ದ ರಾಮಪ್ರಿಯ ಉತ್ಸವಮೂರ್ತಿಯನ್ನು ಕರೆತಂದು ಸ್ಥಾಪಿಸಿದರು. ತಮಗೆ ಸಹಾಯ ಮಾಡಿದ ಪಂಚಮರ ಬಗ್ಗೆ ಅಪಾರ ಅನುಕಂಪಕ, ಕೃತಜ್ಞತೆ ಹಾಗೂ ಬಹಳ ವಾತ್ಸಲ್ಯ ತೋರಿ ಅವರನ್ನು ಮಮತೆಯಿಂದ 'ತಿರುಕ್ಕುಲತ್ತಾರ್', ಅಂದರೆ ಲಕ್ಷ್ಮೀದೇವಿಯ ಕುಲದವರು, ಪವಿತ್ರರು ಎಂಬುದಾಗಿ ಕರೆದು, ಅವರಿಗೆ ತಮ್ಮ ಧರ್ಮ ಬೋಧಿಸಿದರು. ವರ್ಷದಲ್ಲಿ ಒಂದು ದಿವಸ ದೇವಾಲಯ ಪ್ರವೇಶಿಸಿ ಭಗವಂತನ ದರ್ಶನ ಮಾಡುವ ಅವಕಾಶ ಕಲ್ಪಿಸಿದರು. ಮೇಲುಕೋಟೆಯ ದೇವಾಲಯದಲ್ಲಿ ಪಾಂಚರಾತ್ರಾಗಮದ ರೀತ್ಯಾ ಪೂಜಾಧಿಗಳು ನಡೆಯುವಂತೆ ಏರ್ಪಾಡುಗಳನ್ನು ಮಾಡಿದರು. ನಂತರ ಧರ್ಮ ಪ್ರಚಾರದ ಜವಾಬ್ದಾರಿಯನ್ನು ತಮ್ಮ 52 ಶಿಷ್ಯರಿಗೆ ವಹಿಸಿಕೊಟ್ಟರು. ಹೀಗೆ ರಾಮಾನುಜರು ಹೊಯ್ಸಳ ರಾಜ್ಯದಲ್ಲಿ 20 ವರ್ಷಗಳ ಕಾಲ ಆಧ್ಯಾತ್ಮಿಕ ಜ್ಯೋತಿಯಾಗಿ, ಹಲವಾರು ಶ್ರೀ ವೈಷ್ಣವ ದೇವಾಲಯಗಳ ನಿರ್ಮಾಣಕ್ಕೆ ಮೂಲಕಾರಣರಾದರು. ಇಷ್ಟು ಹೊತ್ತಿಗೆ ಚೋಳನಾಡಿನ ಮತಾಂಧ ದೊರೆ ಮಡಿದ ಪರಿಸ್ಥಿತಿ ಅನುಕೂಲವಾದ್ದರಿಂದ ರಾಮಾನಜರು ಶ್ರೀರಂಗಕ್ಕೆ ಹಿಂತಿರುಗಿದರು. ತಮ್ಮ ನೂರಿಪ್ಪತ್ತನೆಯ ವಯಸ್ಸಿನಲ್ಲಿ ಕ್ರಿ.ಶ. 1137ರಲ್ಲಿ ಪರಂದಾಮವನ್ನೈದಿದರು.[40]

ರಾಮಾನುಜರ ಸಿದ್ಧಾಂತ

ರಾಮಾನುಜರು ಅದ್ವೈತವಾದದ ವಿರುದ್ಧವಾಗಿ ವಿಶಿಷ್ಟದ್ವೈತ ಎಂಬ ಸಿದ್ಧಾಂತವನ್ನು ಮಂಡಿಸಿದರು. ಸುಭದ್ರ ತಾತ್ವಿಕ ಆಧಾರವೊಂದರ ಮೇಲೆ ಧರ್ಮ ಸ್ಥಾಪನೆ ಮಾಡುವುದೇ ರಾಮಾನುಜರ ಮಹಾಕಾರ್ಯವಾಗಿತ್ತು. ಈ ಸಿದ್ಧಾಂತವನ್ನು ಮೊದಲು ಮಂಡಿಸಿದವರು ಯಮುನಾಚಾರ್ಯರು.[41] ಭಗವಂತನನ್ನು ಕೈಗೊಳ್ಳುವ ಐದನೆಯ ರೂಪ ಅರ್ಚಾವತಾರ ಅಥವಾ ಪವಿತ್ರ ವಿಗ್ರಹಗಳು. ಭಕ್ತರು ಪೂಜಿಸಲು ಅನುಕೂಲವಾಗಲೆಂಬ ಉದ್ದೇಶ. ರಾಮಾನುಜರು ದಕ್ಷಿಣಭಾರತದಲ್ಲಿ ಬಲಗೊಳಿಸಿದ ದೇವಾಲಯ ಆಧಾರಿತ ಭಕ್ತಿ ಆಂದೋಲನಕ್ಕೆ, ಅರ್ಚಾವತಾರ ಕಲ್ಪನೆ ಕಾರಣ.[42] ರಾಮಾನುಜರು ಪಡೆದ ವೇದಾಂತದ ಆಸ್ತಿಕ್ಯ ಪರಂಪರೆಯು ಉಪನಿಷತ್ತುಗಳು, ಬಾದರಾಯಣದ ವೇದಾಂತಸೂತ್ರ ಮತ್ತು ಭಗವದ್ಗೀತೆ ಈ ಪ್ರಮಾಣತ್ರಯಗಳಲ್ಲಿ ಬೇಕುಗಳನ್ನು ಹೊಂದಿವೆ. ಭಾಗವತ ಪಂಚರಾತ್ರ ಆಗಮಗಳು ಮತ್ತು ಭಗವನ್ಮತ್ತರಾದ ಆಳ್ವಾರರ ಮಾತು ಅದಕ್ಕೆ ಆಧಾರವಾಗಿದೆ. ರಾಮಾನುಜರ ಮೇಲೆ ಬಲವಾದ ಪ್ರಭಾವ ಬೀರಿದುದು ಆಳ್ವಾರರ ತಮಿಳು ಭಕ್ತಿ ಸಂಪ್ರದಾಯ.[43]

ರಾಮಾನುಜರು ಮೂರು ವಸ್ತುಗಳನ್ನು ಅಂತಿಮ ಮತ್ತು ಸತ್ಯ ಎಂದು ಪರಿಗಣಿಸುತ್ತಾರೆ. ಅವು ದ್ರವ್ಯ (ಅಚಿತ) ಜೀವಗಳು (ಚಿತ್) ಮತ್ತು ಭಗವಂತ (ಈಶ್ವರ). ಅವೆಲ್ಲವೂ ಸತ್ಯವೇ ಆದರೂ ಮೊದಲಿನ ಎರಡೂ ಭಗವಂತನನ್ನು ಅವಲಂಬಿಸಿವೆ. ಈ ಬಗೆಯ ಅಂತರ್ಗತವಾದ ಪ್ರತ್ಯೇಕಗೊಳಿಸಲಾರದ ಸ್ಥಿತಿಯನ್ನು ಅಪೃಥಿಕ್‌ಸಿದ್ಧಿ ಎಂದು ಕರೆಯಲಾಗಿದೆ. ದ್ರವ್ಯ ಮತ್ತು ಜೀವಿಗಳನ್ನು ಭಗವಂತನ ಲಕ್ಷಣಗಳೆಂದು ಕರೆಯಲಾಗಿದೆ. ಅವು ನಿಯಂತ್ರಿತವಾದವು, ಅವನು ನಿಯಂತ್ರಿಸುವವನು. ಅವು ಅವಲಂಬಿತಗಳು, ಅವನು ಅವಲಂಬನ, ಅವುಭಾಗಗಳು, ಅವನು ಪೂರ್ಣನು ಅವು ಭಗವಂತನೊಂದಿಗೆ ನಿತ್ಯವಾದರೂ ಅವನಿಂದ ಹೋಗಿರುವಂಥವು. ಅವನು ಅಂತಸ್ಥನು, ಆದರೂ ಅತೀತನು.

ಜೀವವು ಭಗವಂತನ ಒಂದು ಪ್ರಕಾರ ಅಥವಾ ಲಕ್ಷಣ. ಅದು ಭಗವಂತನಿಂದ ಬೇರೆಯಾಗಿದೆ; ಆದರೆ ಅವನಿಂದ ಸ್ವತಂತ್ರವಾಗಿಲ್ಲ ಜೀವರು ಕರ್ಮ ಸಾಹಚರ್ಯದಿಂದ, ಸಂಸಾರದಲ್ಲಿ ಕಷ್ಟಪಡುತ್ತಿದ್ದಾರೆ, ಕರ್ಮದ ಬಂಧನವು ಹುಟ್ಟುಸಾವುಗಳ ಯಾತನಾಪೂರ್ಣ ಚಕ್ರಕ್ಕೆ ಅದನ್ನು ಕಟ್ಟಿಹಾಕುತ್ತದೆ. ಮೋಕ್ಷವನ್ನು ಪಡೆಯಬೇಕಾದರೆ ಮೊದಲು ಅದನ್ನು ಮುರಿಯಬೇಕು. ಅವರ ಪ್ರಕಾರ ಮೋಕ್ಷವೆಂದರೆ ಭಗವಂತನೊಡನೆ ಪಡೆದ ಸಖ್ಯವೇ ಹೊರತು ಜೀವಾತ್ಮನು ಪರಮಾತ್ಮನಲ್ಲಿ ಐಕ್ಯವಾಗುವುದರಲ್ಲಿ[44] ರಾಮಾನುಜರು ನಿಜವಾದ ಜ್ಞಾನವನ್ನು ಭಕ್ತಿಯೊಂದಿಗೆ ಸಮೀಕರಿಸಿದರು. ಏಕೆಂದರೆ ಭಗವಂತನನ್ನು ತಾನು ಸಂಪೂರ್ಣವಾಗಿ ಅವಲಂಬಿಸಿದ್ದೇನೆ ಎಂಬ ಅರಿವಿನ ಮೇಲೆ ಭಕ್ತಿ ಅವಲಂಬಿಸಿದೆ. 'ಮೋಕ್ಷ'ಕ್ಕೆ ಅತ್ಯಂತ ಖಚಿತವಾದ ದಾರಿಯಾಗಿ ಭಕ್ತಿಯನ್ನು ಹೇಳಿದ್ದು ರಾಮಾನುಜರ ಬೋಧನೆಗಳ ಮಹತ್ವಪೂರ್ಣ ಅಂಶ. ಆಳ್ವಾರರಂತೆ ರಾಮಾನುಜರು ಪ್ರಪತ್ತಿಯನ್ನು ಒತ್ತಿ ಹೇಳಿದರು. ಭಗವಂತನ ಇಚ್ಛೆಗೆ ಸಂಪೂರ್ಣವಾಗಿ ಶರಣಾಗತಿಯಾಗುವುದೇ ಪ್ರಪತ್ತಿ. ಮೋಕ್ಷವು, ರಾಮಾನುಜರ ಪ್ರಕಾರ ಭಗವಂತನ ಪ್ರಸಾದ. ಮನುಷ್ಯನ ಮುಕ್ತಿಯು ಭಗವಂತನ ಕೃಪೆಯನ್ನು ಅವಲಂಬಿಸಿದೆ. "ಅದು ಜೀವನಿಗೆ ಸಹಜವಾದದ್ದಲ್ಲ, ಪಡೆದುಕೊಳ್ಳುವಂಥದ್ದು. ಅದು ಜೀವನ ಜನ್ಮಸಿದ್ಧ ಹಕ್ಕಲ್ಲ; ಅದು ಭಗವಂತನಿಂದ ಬರುವ ಬಳುವಳಿ.[45]

ಮೂರ್ತಿಶಿಲ್ಪದಲ್ಲಿ ಇದನ್ನು ಸಾಂಕೇತಿಕವಾಗಿ ಚಿತ್ರಿಸಲಾಗುತ್ತದೆ. ಮೇಲುಕೋಟೆ ನಾರಾಯಣಸ್ವಾಮಿ ಮೂರ್ತಿಯು ಇದಕ್ಕೆ ಸ್ಪಷ್ಟ ಉದಾಹರಣೆಯಾಗಿದೆ.

ಸಮಸ್ತ ಜೀವಿಗಳಿಗೂ ವಿಶಿಷ್ಟಾದ್ವೈತವು ಮೋಕ್ಷದ ಭರವಸೆ ನೀಡಿತು. ಅವರು ಭಗವಂತನಿಗೆ ಶರಣಾಗತರಾದರೆ ಮಾತ್ರ. ಭಕ್ತಿ ಮತ್ತು ಮೋಕ್ಷಗಳ ರಾಮಾನುಜರ ದರ್ಶನವು

ಸಾಮಾಜಿಕ ಚಾಲಕಶಕ್ತಿಯನ್ನಾಗಿ ಮಾಡಿತು. ಜಾತಿಮತ ಭೇದವಿಲ್ಲದೆ ಎಲ್ಲರಿಗೂ ಬೋಧಿಸಿದರು. ವರ್ಷದಲ್ಲಿ ಒಂದು ದಿನ ದೇವಲಯದ ಬಾಗಿಲನ್ನು ಪಂಚಮರಿಗಾಗಿಯೂ ತೆರೆದರು. ರಾಮಾನುಜರ ಆಸ್ತಿಕ ದರ್ಶನವು ಸಮಾಜದ ಹಲವು ಭಾಗಗಳನ್ನು ಮುಟ್ಟುವ ರೀತಿಯಲ್ಲಿ ರೂಪುಗೊಂಡವು.

ಚಾರಿತ್ರಿಕ ವಿಶ್ಲೇಷಣೆ

ದೇವಾಲಯಗಳು ಗ್ರಾಮಗಳ ಆಡಳಿತ ಮತ್ತು ಜಾತಿ ಕಟ್ಟಳೆಯ ಉನ್ನತ ನ್ಯಾಯಾಲಯಗಳಂತೆ ವರ್ತಿಸುತ್ತಿದ್ದವು. ದೇವಾಲಯಗಳು ಧರ್ಮ ಸಾಧನವನ್ನು ಬಳಿಸಿ, ಸಮಾಜದಲ್ಲಿ ಯಜಮಾನಿಕೆಯನ್ನು ಸ್ಥಾಪಿಸುವ ಕೇಂದ್ರಗಳಾಗಿದ್ದವು. ಈ ಎಲ್ಲಾ ಬೆಳವಣಿಗೆಗಳಿಗೆ ಸಾಂಪ್ರದಾಯಿಕ ಬ್ರಾಹ್ಮಣಧರ್ಮವೇ ಮೂಲಕಾರಣವಾಗಿತ್ತು. ಈ ಧರ್ಮಕ್ಕೆ ಪೂರಕವಾಗಿ ಕೆಲವು ಧಾರ್ಮಿಕಸಿದ್ಧಾಂತಗಳು ಹುಟ್ಟಿಕೊಂಡವು. ಮೇಲುಕೋಟೆ ವೈಷ್ಣವ ದೇವಾಲಯಗಳ ವಿಚಾರದಲ್ಲಿ ಈ ಅಂಶಗಳನ್ನು ಸ್ಪಷ್ಟವಾಗಿ ಗುರುತಿಸಬಹುದು.

ಗಮನಾರ್ಹ ಅಂಶವೆಂದರೆ ವಿಶಿಷ್ಟಾದ್ವೈತ ಸಿದ್ಧಾಂತವು ಬ್ರಾಹ್ಮಣ ಏಕಸ್ವಾಮ್ಯದ ಮೇಲೆ ರಚನೆಗೊಂಡ ಸಮಾಜ ವ್ಯವಸ್ಥೆಯನ್ನು ಪ್ರಶ್ನಿಸುವ ಹಂತಕ್ಕೆ ಹೋಗಲಿಲ್ಲ. ಧರ್ಮದ ತಾತ್ವಿಕ ವಿಚಾರಗಳ ಸೂಕ್ಷ್ಮ ಅಂಶಗಳು, ವೈದಿಕ ಧರ್ಮ ಮತ್ತಷ್ಟು ಪ್ರಚಾರವನ್ನು ಪಡೆಯುವಂತೆ ಮಾಡಿತು. 12ನೇ ಶತಮಾನದಲ್ಲಿ ಕಾಣಿಸಿಕೊಂಡ ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತವು ಬ್ರಾಹ್ಮಣಶಾಹಿಯ ಧಾರ್ಮಿಕ ಕಟ್ಟುಪಾಡುಗಳನ್ನು ತಿರಸ್ಕರಿಸಿ ಉಂಟುಮಾಡಿದ ಧಾರ್ಮಿಕ ಆಂದೋಲನದಂತೆ ಇದು ಯಾವ ಪರಿಣಾಮವನ್ನು ಬೀರಲಿಲ್ಲ. ಇದರಿಂದ ಸಾಂಪ್ರದಾಯಿಕತೆಯೇ ಮೊದಲಸ್ಥಾನವನ್ನು ಪಡೆದುಕೊಳ್ಳುವಂತಾಯಿತು.

ರಾಮಾನುಜರ ಸಿದ್ಧಾಂತವು ಉಪನಿಷತ್ತುಗಳನ್ನು, ಬ್ರಹ್ಮಸೂತ್ರವನ್ನು ಆಧರಿಸಿತ್ತು. ಮೋಕ್ಷದ ಲಕ್ಷಣವನ್ನು ವಿವರಿಸುವಲ್ಲಿ ರಾಮಾನುಜರು ಭಗವದ್ಗೀತೆಯ ತತ್ವಗಳನ್ನೇ ನಿಕಟವಾಗಿ ಅನುಸರಿಸುವುದು ಕಂಡುಬರುತ್ತದೆ. ತತ್ವಶಾಸ್ತ್ರ ಹಾಗೂ ಸಾಮಾನ್ಯ ಆಚರಣೆಗಳೆರಡರಲ್ಲಿಯೂ ರಾಮಾನುಜರು ಬ್ರಾಹ್ಮಣ ಸಾಂಪ್ರದಾಯಿಕತೆಯನ್ನೇ ಅನುಸರಿಸಿದರು.[46] ಅನೇಕ ಜನ್ಮ ಪರ್ಯಾಟನಾ ನಂತರದಲ್ಲಿ ಭಗವಂತನ ಪ್ರಾಪ್ತಿಗಾಗಿ ಪ್ರತಿಯೊಂದು ಜೀವಿಯಲ್ಲೂ ಅಂತರ್ಗತವಾದ ಒಂದು ಬಯಕೆಯುಂಟಾಗುತ್ತದೆ. ರಾಮಾನುಜರ ಮೋಕ್ಷದ ಕುರಿತ ಈ ಹೇಳಿಕೆಗಳು ಲೌಕಿಕ ಜಗತ್ತಿಗೆ ಯಾವ ರೀತಿಯಲ್ಲಿಯೂ ಸಂಬಂಧಿಸದ ರೀತಿಯಲ್ಲಿ ಕಂಡುಬರುತ್ತದೆ. ರಾಮಾನುಜರ ವ್ಯಾಖ್ಯಾನಗಳು ಧಾರ್ಮಿಕ

ಜಗತ್ತಿಗೆ ಸಂಬಂಧಿಸಿದ ವ್ಯಾಖ್ಯಾನಗಳೇ ಹೊರತು ಮಾನವನ ದೈನಂದಿನ ಬದುಕಿಗೆ ಸಂಬಂಧಿಸಿದ್ದಲ್ಲ. ಇವರು ದೇವ ಕೇಂದ್ರಿತ ಪ್ರಪಂಚವೊಂದನ್ನು ಸೃಷ್ಟಿಸಿದರು.

ರಾಮಾನುಜರ ಪ್ರಕಾರ ಸಂಸಾರ ಬಂಧನದಿಂದ ವಿಮುಕ್ತರಾದ ಋಷಿಗಳು, ಭಕ್ತರು ಭಗವಂತನ ದೂತರು. ಭಗವಂತನು ಇವರ ಮೂಲಕ ಕಾಣಿಸಿಕೊಳ್ಳುತ್ತಾನೆ. ಇವರು ದೇವ ಮಾನವನ ನಡುವಿನ ಮಧ್ಯವರ್ತಿಗಳಂತೆ. ಮಾನವನ ಸಂಪೂರ್ಣ ಶರಣಾಗತಿ ಧಾರ್ಮಿಕ ಮಧ್ಯವರ್ತಿಗಳ ಮೂಲಕ ನಡೆಯುತ್ತಿತ್ತು. ದೇವಾಲಯಗಳು ಈ ಅಂಶಗಳನ್ನು ಪ್ರಚಾರ ಮಾಡುವ ಕೇಂದ್ರಗಳಾದವು. ಇದನ್ನು ವಿಶಿಷ್ಟಾದ್ವೈತ ಸಿದ್ಧಾಂತವು ಭಕ್ತಿಮಾರ್ಗ ಎಂಬ ಹೆಸರಿನಿಂದ ಕರೆಯಿತು. ರಾಮಾನುಜರು ಮೇಲುಕೋಟೆಯನ್ನು ಬಿಡುವಾಗ ದೇವಾಲಯಗಳ ಕೈಂಕರ್ಯವನ್ನು ನಡೆಸಲು ಮತ್ತು ತಮ್ಮ ತತ್ವ ಪ್ರಚಾರಮಾಡುವ ಪ್ರತಿನಿಧಿಗಳಾಗಿ 'ಜೀಯರ್' ಎಂಬ ಹೆಸರಿನ ಪ್ರತಿನಿಧಿಯನ್ನು ನೇಮಿಸಿದರು. ಅದು ಇಂದಿಗೂ ಮುಂದುವರೆದಿದೆ. ಇವರ ಮೂಲಕ ವೈಷ್ಣವ ತತ್ವಾಚರಣೆಗಳು ನಡೆಯುತ್ತಿದ್ದವು.[47] ಭಕ್ತಿಮಾರ್ಗದ ಮೂಲಕ ಸಂಸಾರದಿಂದ ಬಿಡುಗಡೆ ಹೊಂದಿ, ಜೀವನದ ಅಂತಿಮ ಗುರಿಯಾದ ಮೋಕ್ಷವನ್ನು ಪಡೆಯಲು ಸಾಧ್ಯ ಎಂಬುದಾಗಿ ರಾಮಾನುಜರು ಭಗವದ್ಗೀತೆಗೆ ಬರೆದ ಗೀತಾಭಾಷ್ಯದಲ್ಲಿ ತಿಳಿಸಿದರು. ಬ್ರಾಹ್ಮಣ ಸಾಂಪ್ರದಾಯಿಕತೆಯಿಂದಾಗಿ ಸಮಾಜದ ಕೆಳಮಟ್ಟಕ್ಕೆ ನೂಕಲ್ಪಟ್ಟ ಜನರಿಗೆ ರಾಮಾನುಜರ ಚಿಂತನೆಗಳು ಪರಿಹಾರದ ರೂಪದಲ್ಲಿ ಕಾಣಿಸಿಕೊಳ್ಳುವ ಬದಲು ತಮ್ಮ ಬದುಕಿನಲ್ಲಿ ತಾವೇ ವಿಶ್ವಾಸವಿಡದಂತೆ ಮಾಡಿದವು. ದೇವಾಲಯ ಆಧಾರಿತ, ಪವಿತ್ರ ವಿಗ್ರಹಗಳ ಆರಾಧನೆಗೆ ಇವರು ಕೊಟ್ಟ ಪ್ರಾಮುಖ್ಯತೆ, ಅವರು ಮೋಕ್ಷಕ್ಕಾಗಿ ಮತ್ತೊಮ್ಮೆ ಧಾರ್ಮಿಕತೆಯ ಚೌಕಟ್ಟಿನೊಳಗೆ ಸೇರಿಕೊಳ್ಳಬೇಕಾದ ಅನಿವಾರ್ಯತೆ ಸೃಷ್ಟಿಯಾಯಿತು. ಈ ಧಾರ್ಮಿಕ ಸಂಕೀರ್ಣತೆಯು ದೇವಾಲಯಗಳ ಬೆಳವಣಿಗೆಯಿಂದ ಮತ್ತಷ್ಟು ಜಟಿಲವಾದುದು ಸ್ಪಷ್ಟವಾಗುತ್ತದೆ. ರಾಜಪ್ರಭುತ್ವವು ಇಂಥ ಧಾರ್ಮಿಕ ಕೇಂದ್ರಗಳಿಗೆ ಆಶ್ರಯ ಕೊಡುವ ಒತ್ತಾಯಕ್ಕೆ ಒಳಗಾಗಿತ್ತು.[48]

ವಿಶಿಷ್ಟಾದ್ವೈತ ಸಿದ್ಧಾಂತದ ಹುಟ್ಟು ರಾಮಾನುಜರ ಶ್ರೀ ವೈಷ್ಣವ ಮತ ಪ್ರಚಾರದ ಉದ್ದೇಶ ಹೊಂದಿತ್ತು. ದೇವಾಲಯಗಳು ಅದರ ಚಟುವಟಿಕೆಯ ಕೇಂದ್ರಸ್ಥಾನವನ್ನು ಪಡೆದವು. ಜೈನ ಮತ್ತು ಶೈವ ಮತದವರಿಂದ ಶ್ರೀ ವೈಷ್ಣವ ಮತ ವಿರೋಧ ಎದುರಿಸಬೇಕಾಯಿತು. ಈ ಕಾರಣದಿಂದ ರಾಮಾನುಜರು 'ಶ್ರೀ ವೈಷ್ಣವ ಪಂಚ ಸಂಸ್ಕಾರ' ಎಂಬ ಮತದೀಕ್ಷೆಯನ್ನು ಅನ್ಯಮತಸ್ಥರಿಗೆ ಉಪದೇಶಿಸಿದರು. ಈ ಪಂಚ ಸಂಸ್ಕಾರಗಳು ವಿಷ್ಣುವಿನ ಸಂಕೇತಗಳಾಗಿದ್ದವು. ಸಮಾಜದ ಕೆಳವರ್ಗದ ಜನರು ಮೋಕ್ಷಕ್ಕೆ ಅರ್ಹರು ಎನ್ನುವುದು ವಿಶಿಷ್ಟಾದ್ವೈತ ಸಿದ್ಧಾಂತದಲ್ಲಿ ಕಂಡುಬರುವ ಪ್ರಮುಖ ವಿಚಾರವಾಗಿದೆ. ಅದೇ

ರೀತಿ ದೇವಾಲಯಗಳಿಗೆ ಪಂಚಮರಿಗೂ ಪ್ರವೇಶ ನೀಡುವ ನಿಲುವನ್ನು ವ್ಯಕ್ತಪಡಿಸಿದರು. ಆದರೆ ಇದು ವರ್ಷದಲ್ಲಿ ಒಂದು ದಿನಕ್ಕೆ ಸೀಮಿತವಾಗಿತ್ತು. ಈ ಮತದ ಮೇಲೆ ಹೆಚ್ಚಿನ ನಂಬಿಕೆ ಬರುವ ರೀತಿಯಲ್ಲಿ ಉಪದೇಶಗಳನ್ನು ನೀಡಲಾಯಿತು. ಕೆಳಜಾತಿಯ ಜನರನ್ನು ಈ ಮತಕ್ಕೆ ಸೇರಿಸಿಕೊಳ್ಳುವ ಉದ್ದೇಶದಿಂದ ಅವರಿಗೆ ಮೋಕ್ಷದ ಕಲ್ಪನೆಯನ್ನು ಬೋಧಿಸಲಾಯಿತು. ಅದೇ ರೀತಿ ವಿಷ್ಣುವಿನ ಭಕ್ತರಾಗುವಂತೆ ಮಾಡಲಾಯಿತು. ಈ ಎಲ್ಲಾ ಪ್ರಯತ್ನಗಳ ಹಿಂದಿನ ಉದ್ದೇಶ ಶ್ರೀ ವೈಷ್ಣವ ಮತದ ಪ್ರಚಾರ ಮತ್ತು ಅನುಯಾಯಿಗಳ ಸಂಖ್ಯೆಯನ್ನು ಹೆಚ್ಚಿಸುವುದೇ ಆಗಿತ್ತು. ಮತ ಪ್ರಚಾರಕ್ಕೆ ಹೆಚ್ಚಿನ ಮಹತ್ವ ನೀಡುವುದು ಅನಿವಾರ್ಯವಾಗಿತ್ತು. ದೇವಾಲಯಗಳು ಈ ಎಲ್ಲಾ ಬೆಳವಣಿಗೆಗಳಿಗೆ ಪೂರಕ ಶಕ್ತಿಯನ್ನು ಒದಗಿಸಿದವು.

ವಿಶಿಷ್ಟಾದ್ವೈತವು ಭಗವಂತ ಮತ್ತು ಭಕ್ತನ ಸಂಬಂಧದ ಕುರಿತಾಗಿಯೇ ತನ್ನ ಎಲ್ಲ ತತ್ವಗಳನ್ನು ಸೀಮಿತಗೊಳಿಸಿತು. ಇದು ಧಾರ್ಮಿಕ ಚೌಕಟ್ಟಿನೊಳಗೆ ಸಂಪೂರ್ಣವಾಗಿ ವಿವರಿಸುತ್ತಿತ್ತು. ಜನಸಾಮಾನ್ಯರ ಅರಿವಿಗೆ ನಿಲುಕದ ರೀತಿಯಲ್ಲಿ ಈ ಸಿದ್ಧಾಂತಗಳು ರೂಪುಗೊಂಡಿದ್ದವು. ಭಕ್ತನನ್ನು ಅಧೀನನ್ನಾಗಿಸಿ, ಭಗವಂತನನ್ನು ಪ್ರಧಾನವಾಗಿಸಿ, ವಿಶಿಷ್ಟವನ್ನು ತಿಳಿಸಲಾಗಿದೆ. ಮಾನವನು ಬದುಕು ಅಧೀನದಲ್ಲಿರುವುದು ಎಂಬ ಉಪದೇಶ ನೀಡಲಾಯಿತು. ಈ ಚಿಂತನೆಗಳು ಜನಸಾಮಾನ್ಯರನ್ನು ಗೊಂದಲದಲ್ಲಿ ಸಿಲುಕಿಸಿದ್ದೇ ಅಲ್ಲದೆ, ಸಿದ್ಧಾಂತದಲ್ಲೇ ವಿಭಜನೆ ಕಾಣಿಸಿಕೊಳ್ಳುವಂತೆ ಮಾಡಿತು. ಈ ಸಿದ್ಧಾಂತದೊಳಗೆ ಎರಡು ವಾದಗಳು ಹುಟ್ಟಿಕೊಂಡವು. ಅವುಗಳೆಂದರೆ ಭಗವಂತನು ಪ್ರತಿಯೊಬ್ಬ ಮನುಷ್ಯನನ್ನೂ ರಕ್ಷಿಸುತ್ತಾನೆ ಹಾಗೂ ಮನುಷ್ಯನು ತನ್ನದೇ ಪ್ರಯತ್ನದಿಂದ ಭಗವಂತನನ್ನು ಒಲಿಸಿಕೊಳ್ಳಬೇಕು ಎನ್ನುವುದು.[49] ರಾಮಾನುಜರು ಉಪದೇಶಿಸಿದ ಶರಣಾಗತಿ, ಸ್ವರ್ಗ ಮತ್ತು ನರಕದ ಕಲ್ಪನೆಗಳು ಹಾಗೂ ಅನುಸರಿಸಿದ ಮತ ಪ್ರಚಾರನೀತಿ ಅಂದಿನ ಧಾರ್ಮಿಕ ವೈರುಧ್ಯಗಳನ್ನು ಸೂಚಿಸುತ್ತದೆಯೇ ಹೊರತು ಅಸಮಾನ ಸಾಮಾಜಿಕ ವ್ಯವಸ್ಥೆಯನ್ನು ಪ್ರಶ್ನಿಸಿದಂತೆ ಕಂಡುಬರುವುದಿಲ್ಲ. ದೇವಾಲಯಗಳು ಇದನ್ನು ಸ್ಪಷ್ಟವಾಗಿ ಸೂಚಿಸುವಂತಿದ್ದವು. ಬ್ರಾಹ್ಮಣ ಸಾಂಪ್ರದಾಯಿಕತೆಯು ರಾಮಾನುಜರ ಚಿಂತನೆಗಳಿಂದ ವಿಚಲಿತಗೊಳ್ಳಲಿಲ್ಲ. ದೇವಾಲಯಗಳು ಅದನ್ನು ಇನ್ನಷ್ಟುಗಟ್ಟಿಗೊಳಿಸಿದವು. ರಾಮಾನುಜರು ಜಾತಿವ್ಯವಸ್ಥೆಯನ್ನು ಪ್ರಶ್ನಿಸಿದರಾದರೂ ಅದು ಧಾರ್ಮಿಕ ಚೌಕಟ್ಟಿನಲ್ಲಿತ್ತೆ ವಿನಃ ಶ್ರೇಣೀಕೃತ ಸಮಾಜ ವ್ಯವಸ್ಥೆಯ ಹಿನ್ನೆಲೆಯಲ್ಲಲ್ಲ.

ಧರ್ಮ ಸಂಘರ್ಷಗಳು

ಮೇಲುಕೋಟೆಯು ದಕ್ಷಿಣ ಭಾರತದ ಪ್ರಮುಖ ಶ್ರೀ ವೈಷ್ಣವ ಕೇಂದ್ರಗಳಲ್ಲಿ ಒಂದು. ಹೊಯ್ಸಳರ ವಿಷ್ಣುವರ್ಧನ ರಾಜನ ಆಶ್ರಯದೊಂದಿಗೆ, ರಾಮಾನುಜರ ಪ್ರಭಾವದಿಂದ ಈ ಸ್ಥಳವು ಮಹತ್ವ ಪಡೆಯಿತು. ದೇವಾಲಯಗಳು ಧರ್ಮದ ಪ್ರತಿನಿಧಿಗಳು. ಧಾರ್ಮಿಕ ನೆಲೆಯಲ್ಲಿ ಚಾರಿತ್ರಿಕ ವಿಶ್ಲೇಷಣೆಗೆ ಒಳಪಡಿಸಿದಾಗ ಹೊರಬರುವ ಹಲವು ಸಂಗತಿಗಳು ಅಂದಂದಿನ ಸಮಕಾಲೀನ ಧರ್ಮ ಪಂಥಗಳ ಹಾಗೂ ಸಮಾಜದ ನಿಜಸ್ಥಿತಿಯನ್ನು ಅರಿಯಲು ಅನುವಾಗುತ್ತವೆ. ಈ ಹಿನ್ನೆಲೆಯಲ್ಲಿ ಮೇಲುಕೋಟೆಯ ಧಾರ್ಮಿಕ ಹಿನ್ನೆಲೆಯನ್ನು ಪರಿವೀಕ್ಷಿಸುವುದು ಅಗತ್ಯವಾಗಿದೆ.

ಪ್ರಸಿದ್ಧ ಇತಿಹಾಸಕಾರರಾದ 'ರೋಮಿಲಾ ಥಾಪರ್' ಅವರ ಅಭಿಪ್ರಾಯದಂತೆ, ಭಾರತದ ಧರ್ಮಗಳ ಇತಿಹಾಸವು ಕೇವಲ ಆಚರಣೆಗಳ ಮತ್ತು ವಿಚಾರಗಳ ಅಭಿವ್ಯಕ್ತಿಯಲ್ಲ. ಅವು ಸಾಮಾಜಿಕ ಗುಂಪುಗಳ ಗ್ರಹಿಕೆಗಳು ಹಾಗೂ ಪ್ರೇರಣೆಗಳ ಅಭಿವ್ಯಕ್ತಿಯೂ ಹೌದು. ಈ ಸಂಗತಿಯನ್ನು ತಿಳಿದುಕೊಂಡಾಗ ಮೂಡುವ ಪರಿಕಲ್ಪನೆಗಳು, ಇದುವರೆಗೆ ಪರಿಚಿತವಾಗಿರುವ ನೆಲೆಗಿಂತ ಭಿನ್ನವಾಗಬಹುದು. ಬೇರೆ-ಬೇರೆ ಪಂಥಗಳ ನಡುವಿನ ವಾಗ್ವಾದಗಳು ಮತ್ತು ತತ್ವಜಿಜ್ಞಾಸೆಗಳು ಭಾರತೀಯ ಧರ್ಮಗಳ ಪ್ರಧಾನ ಲಕ್ಷಣವಾಗಿವೆ. ಅವು ಸಮಾಜದಲ್ಲಿ ಧರ್ಮವು ವಹಿಸುತ್ತಿದ್ದ ಪಾತ್ರದ ಹೆಚ್ಚು ವಾಸ್ತವಿಕವಾದ ಚಿತ್ರವನ್ನು ನೀಡುತ್ತವೆ.[50]

ವಿಷ್ಣುವರ್ಧನನ ಹೆಂಡತಿ ಶಾಂತಲೆಯು ಶಿವಭಕ್ತೆಯೂ, ಜಿನಭಕ್ತೆಯೂ ಆಗಿದ್ದಳು. ಈಕೆ ಧರ್ಮೇಶ್ವರನ ವರಪ್ರಸಾದದಿಂದ ಹುಟ್ಟಿದವಳು ಎಂದು ಶಾಸನವು ಉಲ್ಲೇಖಿಸುತ್ತವೆ.[51] ಈಕೆ ಗಿರಿಜೆಯ ಆರಾಧಕಳಾಗಿದ್ದು, ಶಾಂತಲೆಯು ಸನ್ಯಾಸವಿಧಿಯಿಂದ ಮಡಿದಾಗ ಈಕೆಯ ತಾಯಿ ಶಾಂತಲೇಶ್ವರ ಎಂಬ ಶಿವದೇವಾಲಯವನ್ನು ಕಟ್ಟಿಸುತ್ತಾಳೆ.[52] ಅವಳ ಗಂಡ ವಿಷ್ಣುವರ್ಧನನು ಪರಮ ಶ್ರೀ ವೈಷ್ಣವನಾಗಿದ್ದನು. ವಿಷ್ಣುವರ್ಧನನು ಎಲ್ಲಾ ಧರ್ಮಗಳ ಮೇಲೆ ಸಮಾನ ಗೌರವ ವ್ಯಕ್ತಪಡಿಸಿದರೂ, ವಿಷ್ಣುವಿನ ಕಡೆಗೆ ಅವನ ಒಲವು ಹೆಚ್ಚು ಎಂಬುದು ನಿಸ್ಸಂದೇಹವಾದುದು.

ಹೊಯ್ಸಳರ ಕಾಲದಲ್ಲಿ ಜೈನಧರ್ಮವು ಪ್ರಧಾನ ಧರ್ಮವಾಗಿತ್ತು. ಹೊಯ್ಸಳರಿಗಿಂತ ಹಿಂದೆಯೇ ಗಂಗರು, ಚಾಲುಕ್ಯರು ಮತ್ತು ರಾಷ್ಟ್ರಕೂಟರ ಕಾಲದಲ್ಲಿ ಜೈನಧರ್ಮವು ಬೆಳವಣಿಗೆಯಾಗಿತ್ತು. ಹೊಯ್ಸಳರ ಕಾಲದಲ್ಲಿ ಅದರ ವರ್ಚಸ್ಸನ್ನು ಹೆಚ್ಚಿಸಿಕೊಳ್ಳುತ್ತಿತ್ತು ಹಾಗೂ ಪ್ರಧಾನ ಧರ್ಮದ ಸ್ಥಾನವನ್ನು ಗಳಿಸುತ್ತಿತ್ತು.[53]

ವಿಷ್ಣುವರ್ಧನನ ಕಾಲದಲ್ಲಿ ಜೈನಧರ್ಮವು ಪ್ರಬಲವಾಯಿತಲ್ಲದೆ, ಈತನು ಒಬ್ಬ ಪ್ರಬಲ ಜೈನಧರ್ಮಿಯನಾಗಿ ಹೊರಹೊಮ್ಮಿದನು.[54] ಅದರ ಆಶ್ರಯದಾತನಾಗಿ ಗ್ರಾಮ ಮತ್ತು ಭೂದಾನಗಳನ್ನು ನೀಡಿ ಬಸದಿಗಳನ್ನು ದುರಸ್ಥಿಗೊಳಿಸಿದನು.[55] ವಿದ್ವಾಂಸರ ಅಭಿಪ್ರಾಯದಂತೆ ಈತನ ನಿಜನಾಮವಾದ ವಿಷ್ಣುವರ್ಧನನಿಗಿಂತ ಮುಂಚೆ ಬಿಟ್ಟಿದೇವನಾಗಿದ್ದು ನಂತರವೇ ರಾಮಾನುಜರ ಪ್ರಭಾವದಿಂದ ವಿಷ್ಣುವರ್ಧನನಾದನು.

ರಾಮಾನುಜರು ತಮಿಳುನಾಡಿನಿಂದ ಕರ್ನಾಟಕಕ್ಕೆ ಬಂದ ಸಂಗತಿ ಹಾಗೂ ಹೊಯ್ಸಳರಿಂದ ಆಶ್ರಯ ಪಡೆದ ನಂತರದ ಹಾಗೂ ಹಿಂದಿನ ಚಾರಿತ್ರಿಕ ಕಾರಣಗಳನ್ನು ಶೋಧನೆ ಮಾಡುವುದು ಅಗತ್ಯವಾಗಿದೆ. ಧಾರ್ಮಿಕ ಸಮಭಾವದೊಂದಿಗೆ ಮುನ್ನಡೆಯುತ್ತಿದ್ದ ಕನ್ನಡ ನಾಡಿನ ರಾಜರಿಂದ ವೈಷ್ಣವಮತ ಈಗಾಗಲೇ ಆಶ್ರಯ ಪಡೆದುಕೊಂಡಿತ್ತು. ರಾಮಾನುಜರು ಇಲ್ಲಿಗೆ ಬರುವ ಮುಂಚೆಯೇ ತಮಿಳುನಾಡಿನ ಆಳ್ವಾರರ ವೈಷ್ಣವ ಮತದ ಪ್ರಭಾವವು ಕರ್ನಾಟಕದ ಮೇಲೆ ಆಗಿತ್ತು ಎನ್ನುವುದಕ್ಕೆ ಒಂದೆರಡು ಸಾಕ್ಷ್ಯಾಧಾರಗಳಿವೆ. ತಿರುಮಕೂಡಲು ನರಸೀಪುರ ತಾಲ್ಲೂಕಿನ ಸುಮಾರು ಕ್ರಿ.ಶ. 1090ರ ಒಂದು ಶಾಸನದಲ್ಲಿ ವಿಣ್ಣಕರ್ ಆಳ್ವಾರ್ ಎಂಬುವವರಿಗೆ ದತ್ತಿಗಳನ್ನು ಕೊಟ್ಟ ವಿಷಯವಿದೆ.[56]

ಆಳ್ವಾರರ ಭಕ್ತಿ ಪ್ರಧಾನ ಪರಂಪರೆಯು ರಾಮಾನುಜರಿಂದ ಪ್ರಬಲವಾಯಿತು. ಇದು ವಿಷ್ಣುವಿನ ಆರಾಧನೆಯು ಮೊದಲಿಗಿಂತ ಹೆಚ್ಚು ವಿಶಾಲವಾದ ಭೌಗೋಳಿಕ ವ್ಯಾಪ್ತಿಯಿಂದ ಭಕ್ತರನ್ನು ಆಕರ್ಷಿಸಿತು. ಪವಿತ್ರವಾದ ಭೌಗೋಳಿಕ ಕ್ಷೇತ್ರಗಳ ಹುಡುಕಾಟಕ್ಕೆ ಇದು ಕೇಂದ್ರ ಬಿಂದುವಾಗುತ್ತದೆ. ಸ್ಥಳೀಯವಾದ ಮತ ಪಂಥಗಳನ್ನು ಮೀರಿ ಹೆಚ್ಚು ವಿಶಾಲವಾದ ಸಮುದಾಯಗಳನ್ನು ರೂಪಿಸುವ ಪ್ರಯತ್ನದ ಭಾಗವಾಗಿ ಈ ಬೆಳವಣಿಗೆಯನ್ನು ಗುರುತಿಸಬಹುದು. ಈ ಬೆಳವಣಿಗೆಯು ಈ ನಿರ್ದಿಷ್ಟ ಕಾಲಘಟ್ಟದಲ್ಲಿ ಸಂಭವಿಸಲು ಇದ್ದ ಚಾರಿತ್ರಿಕ ಕಾರಣಗಳನ್ನು ಶೋಧನೆ ಮಾಡುವುದು ಅಗತ್ಯವಾಗಿದೆ.

ಇಂತಹ ಭೌಗೋಳಿಕ ಕ್ಷೇತ್ರದ ಹುಡುಕಾಟದಲ್ಲಿ ಆಯ್ಕೆಯಾದ ಸ್ಥಳಗಳಲ್ಲಿ ಮೇಲುಕೋಟೆಯು ಮಹತ್ವದ ಸ್ಥಳ. ಆಗಮಾದಿ ವಿಧಿ-ವಿಧಾನಗಳಿಂದ ಆರಾಧನಾ ಪದ್ಧತಿಗೆ ಒತ್ತು ನೀಡಿ ದೇವಾಲಯ ನಿರ್ಮಾಣದ ಮೂಲಕ ರಾಮಾನುಜರಿಂದ ಈ ಸ್ಥಳ ಪ್ರಸಿದ್ಧಿಗೆ ಬಂದಿತು. ರಾಮಾನುಜರು ಬಿಟ್ಟಿಗದೇವನನ್ನು ಪ್ರಭಾವಿತಗೊಳಿಸಿ ವಿಷ್ಣುವರ್ಧನನಾಗಿ ಮತಾಂತರ ಮಾಡಿದ ನಂತರ ರಾಜನಿಂದ ಉದಾತ್ತ ರಾಜಾಶ್ರಯ ಮತ್ತು ಜಯಘೋಷವನ್ನು ಪಡೆದರು. ನಂತರ ಕುಂಟುತ್ತಾ ಸಾಗಿದ್ದ ಶ್ರೀ ವೈಷ್ಣವ ಮತವು ಪ್ರಬಲವಾಗುವತ್ತ ದಾಪುಗಾಲು ಹಾಕಿತು. ಶ್ರೀ ವೈಷ್ಣವ ಮತದ ಮೇಲಿನ ತನ್ನ ಕಳಕಳಿಯನ್ನು

ಮೇಲುಕೋಟೆಯ ದೇವಾಲಯ ನಿರ್ಮಾಣದ ಮೂಲಕ ವ್ಯಕ್ತಪಡಿಸಿದನು. ಉದಾರವಾದ ದಾನ-ದತ್ತಿಗಳನ್ನು ನೀಡಿದ್ದಲ್ಲದೆ, ಮಠಗಳಿಗೆ ಉದಾರವಾದ ದಾನ ನೀಡಿ ಹಲವು ಸೌಲಭ್ಯಗಳನ್ನು ಒದಗಿಸಿದನು, ಇದು ಹಲವು ಶಾಸನಗಳಿಂದ ಸ್ಪಷ್ಟವಾಗುತ್ತದೆ.

ಈ ಎಲ್ಲಾ ಬೆಳವಣಿಗೆಗಳು ರಾಮಾನುಜರಿಗೆ ಅನುಕೂಲಕರವಾಗಿಯೇ ಪರಿಣಮಿಸಿದವು. ಕರ್ನಾಟಕದಲ್ಲಿ ರಾಮಾನುಜರಿಗೆ ಹೊಯ್ಸಳರ ಆಶ್ರಯವು ಲಭಿಸಿತು. ಹೊಯ್ಸಳ ಅರಸ ವಿಷ್ಣುವರ್ಧನನು ಶ್ರೀ ವೈಷ್ಣವ ಮತವನ್ನು ಸ್ವೀಕರಿಸಿದನು. ಈ ರೀತಿಯಾದ ಹೊಯ್ಸಳರ ಆಶ್ರಯ ಸಿಗುವುದರೊಂದಿಗೆ ಶ್ರೀ ವೈಷ್ಣವ ಮತವು ಕರ್ನಾಟಕದಲ್ಲಿ ವಿಸ್ತಾರವಾಗಿ ಬೆಳೆಯತೊಡಗಿತು.[57] ರಾಮಾನುಜರ ಮತಪ್ರಚಾರವು ಇದರಿಂದ ಚುರುಕುಗೊಳ್ಳುವಂತಾಯಿತು. ಮೇಲುಕೋಟೆ, ಬೇಲೂರು ಮುಂತಾದ ಕಡೆ ವೈಷ್ಣವ ದೇವಾಲಯಗಳು ನಿರ್ಮಾಣಗೊಂಡವು. ಮೇಲುಕೋಟೆ ದೇವಾಲಯದ ಸ್ಥಾಪನೆ ಮೂಲಕ ರಾಮಾನುಜರ ಪ್ರವೇಶವು ಧಾರ್ಮಿಕ ಸಾಮರಸ್ಯದ ಬದಲು ಧಾರ್ಮಿಕ ಸಂಕೀರ್ಣತೆಯನ್ನೇ ಹುಟ್ಟುಹಾಕಿತು.

ಮೇಲುಕೋಟೆ ದೇವಾಲಯದ ಸ್ಥಾಪನೆಯ ಶ್ರೀ ವೈಷ್ಣವ ಮತದ ಪ್ರತೀಕವಾಯಿತು. ಧಾರ್ಮಿಕ ಉದ್ದೇಶದಿಂದ ಅಸ್ತಿತ್ವ ಕಂಡುಕೊಂಡ ದೇವಾಲಯ ಧಾರ್ಮಿಕ ಸಾಮರಸ್ಯದ ಪ್ರತೀಕವಾಗಿ ಮೇಲ್ನೋಟಕ್ಕೆ ಕಂಡರು, ರಾಜಪ್ರಭುತ್ವ ಮತ್ತು ಧಾರ್ಮಿಕಪ್ರಭುತ್ವದ ಹಿನ್ನೆಲೆಯಿಂದ ಧರ್ಮದ ಚಾರಿತ್ರಿಕ ಮತ್ತು ಸಾಮಾಜಿಕ ವಿಶ್ಲೇಷಣೆಗೆ ಒಳಪಡಿಸಿದರೆ, ಧರ್ಮದ ಹಿಂದಿನ ಹಲವು ಮತೀಯ ವಿಭಿನ್ನ ಆಲೋಚನೆಗಳು ಹೊರಬರುತ್ತವೆ. ಹೊಯ್ಸಳರ ಆಳ್ವಿಕೆಯಲ್ಲಿ ಜೈನ, ವೈಷ್ಣವ ಮತ್ತು ಶೈವ ಮತಗಳು ಪ್ರಾಧಾನ್ಯತೆಗಳಿಸಿಕೊಂಡಿದ್ದವು.[58] ಮೊದಲಿಗೆ ವೈಷ್ಣವ ಮತವು ಹೊಯ್ಸಳ ನಾಡಿಗೆ ಆಶ್ರಯ ಅರಸಿ ಬಂದಾಗ ಪ್ರಬಲವಾಗಿದ್ದ ಜೈನಧರ್ಮೀಯರಿಂದ ಪ್ರತಿರೋಧ ಹೆದರಿಸಬೇಕಾಯಿತು. ಜೊತೆಗೆ ಶೈವಧರ್ಮಿಯರಿಂದಲೂ ಪ್ರತಿರೋಧ ಹೆದರಿಸಬೇಕಾಯಿತು. ಜೊತೆಗೆ ಶೈವಧರ್ಮವು ಸಹ ಇಲ್ಲಿ ಹೆಚ್ಚಿನ ಮಾನ್ಯತೆ ಪಡೆದುಕೊಂಡಿತ್ತು. ಮೇಲುಕೋಟೆಯಲ್ಲಿ ದೇವಾಲಯ ಸ್ಥಾಪನೆಗೆ ಮುಂಚೆ ಹಾಗೂ ನಂತರದಲ್ಲಿ ಈ ಮೂರೂ ಪ್ರತಿಷ್ಠಿತ ಧಾರ್ಮಿಕ ಪಂಥಗಳ ನಡುವೆ ಮತೀಯವಾದ ವಿರಸಗಳು ಸಂಭವಿಸಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಚಾರಿತ್ರಿಕ ನೆಲೆಯಲ್ಲಿ ನೋಡುವುದಾದರೆ ಧಾರ್ಮಿಕ ಪಂಥಗಳ ನಡುವಿನ ವಾಗ್ವಾದಗಳು ಮತ್ತು ತತ್ವಜಿಜ್ಞಾಸೆಗಳು ಇಂಡಿಯಾದ ಧರ್ಮಗಳ ಪ್ರಧಾನ ಲಕ್ಷಣವಾಗಿವೆ. ಅವು ಸಮಾಜದಲ್ಲಿ ಧರ್ಮವು ವಹಿಸುತ್ತಿದ್ದ ಪಾತ್ರದ ಹೆಚ್ಚು ವಾಸ್ತವಿಕವಾದ ಚಿತ್ರವನ್ನು ನೀಡುತ್ತವೆ.

ಧರ್ಮದ ಸಾಮಾಜಿಕ ಮತ್ತು ಆರ್ಥಿಕ ಅಗತ್ಯತೆಗಳು ಹಾಗೂ ರಾಜರ ಧಾರ್ಮಿಕ ಸಾಮರಸ್ಯದ ಅನಿವಾರ್ಯತೆಗಳ ನಡುವೆ ಧಾರ್ಮಿಕ ಸಾಮರಸ್ಯದ ಬದಲು ಧಾರ್ಮಿಕ ಬಿಕ್ಕಟ್ಟು ಮತ್ತು ಗೊಂದಲಗಳು ಸೃಷ್ಟಿಯಾದುದಕ್ಕೆ ಇದು ಒಂದು ಉದಾಹರಣೆ. ಈ ನೆಲೆಯಲ್ಲಿ ಧಾರ್ಮಿಕ ವಿರಸಗಳು ಮೇಲುಕೋಟೆಯ ಇತಿಹಾಸದಲ್ಲಿ ಹೇಗೆ ವ್ಯಕ್ತವಾದವು ಎಂಬುದರ ವಿಶ್ಲೇಷಣೆ ಗಮನಾರ್ಹವಾದುದು.

ವೈಷ್ಣವರು ಮತ್ತು ಜೈನರು

ದಕ್ಷಿಣ ಭಾರತದ ಜೈನಧರ್ಮದ ಇತಿಹಾಸವೆಂದರೆ ಕರ್ನಾಟಕದ ಜೈನಧರ್ಮದ ಇತಿಹಾಸವೇ ಆಗಿದೆ.[59] ಮಧ್ಯಯುಗದ ಕರ್ನಾಟಕದಲ್ಲಿ ಜೈನಧರ್ಮವು ಒಂದು ಪ್ರಬಲ ಧರ್ಮವಾಗಿತ್ತು. ಗಂಗರು ತಾವೇ ಸ್ವತಃ ಜೈನರಾಗಿದ್ದು, ಜೈನಧರ್ಮದ ಪ್ರಸಾರಕ್ಕೆ ತಮ್ಮ ಸರ್ವಸ್ವವನ್ನು ಧಾರೆ ಎರೆದರು. ಜೈನ ಧರ್ಮವು ವಿಕಾಸ ಹೊಂದುವುದಕ್ಕೆ ಭದ್ರ ತಳಹದಿ ಹಾಕಿಕೊಟ್ಟವರು ಗಂಗರು.[60] ಕದಂಬರು, ರಾಷ್ಟ್ರಕೂಟರು, ಬಾದಾಮಿಚಾಲುಕ್ಯರು, ಜೈನಧರ್ಮಕ್ಕೆ ವಿಶೇಷ ಪ್ರೋತ್ಸಾಹವನ್ನಿತ್ತಿದ್ದರು. ಹೊಯ್ಸಳರ ಆಳ್ವಿಕೆಯಲ್ಲಿ ಜೈನಧರ್ಮವು ಪ್ರಾಧಾನ್ಯತೆಯನ್ನು ಗಳಿಸಿಕೊಂಡಿತು.

ಮೇಲುಕೋಟೆಯಲ್ಲಿರುವ ಗುಹಾಂತರ ದೇವಾಲಯವು ಗಂಗರ ಕಾಲಕ್ಕೆ ಸೇರಿದ್ದೆಂದು ಗುರುತಿಸಲಾಗಿದೆ.[61] ಮೇಲುಕೋಟೆ ಗ್ರಾಮದ ಉತ್ತರ ಗಡಿಭಾಗದಲ್ಲಿರುವ ಗಂಗರ ಕಾಲದ ಮುರಿದು ಬಿದ್ದಿರುವ ಕಂಬಗಳು ಮತ್ತು ಕೆಲವು ಶಿಲ್ಪಗಳು ಹಾಗೂ ಮೇಲುಕೋಟೆಯ ವಾಯುವ್ಯ ಭಾಗದಲ್ಲಿ ಪೂರ್ಣಯ್ಯನ ಹೊಂಡದ ಬಳಿಯಿರುವ ಸಿಂಹಸ್ಥಂಭಗಳು ಗಂಗರ ಪ್ರಭಾವಕ್ಕೆ ಮೇಲುಕೋಟೆ ಒಳಗಾಗಿದ್ದುದಕ್ಕೆ ದಾಖಲೆಗಳನ್ನು ನೀಡುತ್ತವೆ. ಆದರೆ ಇವರ ಕಾಲಕ್ಕೆ ಸೇರಿದ ಯಾವೊಂದು ಶಾಸನವು ಇಲ್ಲಿ ಲಭ್ಯವಾಗಿಲ್ಲ. ತೊಂಡನೂರಿನಲ್ಲಿ ಲಭಿಸಿರುವ ಏಕೈಕ ಗಂಗರ ಶಾಸನವು ಸುಮಾರು 9ನೇ ಶತಮಾನಕ್ಕೆ ಸೇರಿದುದಾಗಿದೆ.[62] ಮೇಲುಕೋಟೆಯ ಚಿನಕುರಳಿ,[63] ಬೇವಿನಕುಪ್ಪೆ[64] ಮತ್ತು ಕ್ಯಾತನಹಳ್ಳಿ[65]ಗಳಲ್ಲಿ ಗಂಗರಕಾಲದ ಶಾಸನಗಳು ಪತ್ತೆಯಾಗಿವೆ. ಹೀಗೆ ಗಂಗರ ಕಾಲದ ಪ್ರಬಲ ಧರ್ಮವಾದ ಜೈನಧರ್ಮವು ಇಲ್ಲಿ ಪ್ರಚಾರದಲ್ಲಿತ್ತು. ಮೇಲುಕೋಟೆಗೆ 25 ಕಿ.ಮೀ. ದೂರದಲ್ಲಿರುವ ಶ್ರವಣಬೆಳಗೊಳವು ಜೈನಧರ್ಮವು ಇರುವಿಕೆಯನ್ನು ಮತ್ತಷ್ಟು ಪುಷ್ಟೀಕರಿಸುತ್ತದೆ.

ಮೇಲುಕೋಟೆಯಲ್ಲಿ ನಾರಾಯಣಸ್ವಾಮಿ ದೇವಾಲಯದ ಸ್ಥಾಪನೆಗೆ ಮುಂಚೆಯೇ ಜೈನ ಮತ್ತು ವೈಷ್ಣವರ ನಡುವೆ ಮತೀಯ ವಿರಸಗಳು ಸಂಭವಿಸಿದವು, ಇದಕ್ಕೆ ಕೇಂದ್ರವಾದ

ಸ್ಥಳ ಮೇಲುಕೋಟೆಯ ದಕ್ಷಿಣಕ್ಕೆ ಸಮೀಪದಲ್ಲಿರುವ ತೊಂಡನೂರು. ತೊಂಡನೂರು ವಿಷ್ಣುವರ್ಧನ ಹಾಗೂ ಮುಮ್ಮಡಿ ಬಲ್ಲಾಳರ ಆಳ್ವಿಕೆಯಲ್ಲಿ ಹೊಯ್ಸಳರ ಉಪರಾಜಧಾನಿಯಾಗಿತ್ತು.[66] 11ನೇ ಶತಮಾನದ ಕಾಲಕ್ಕಾಗಲೇ ಪ್ರಮುಖ ಶ್ರೀ ವೈಷ್ಣವ ಕ್ಷೇತ್ರವಾಗಿ ತೊಂಡನೂರು ರೂಪಿತಗೊಂಡಿರಬಹುದಾದರೂ, ವಿಷ್ಣುವರ್ಧನನ ಕಾಲದಲ್ಲಿ ಪ್ರಮುಖ ಶ್ರೀ ವೈಷ್ಣವ ಕೇಂದ್ರವಾಗಿ ರೂಪಗೊಂಡು, ರಾಮಾನುಜರಿಂದ ಹೆಚ್ಚಿನ ಪ್ರಾಧಾನ್ಯತೆ ಪಡೆದು ಧಾರ್ಮಿಕ ಕೇಂದ್ರವಾಗಿ ದಕ್ಷಿಣ ಭಾರತದಲ್ಲಿಯೇ ಪ್ರಸಿದ್ಧಿಯಲ್ಲಿತ್ತು. ಮೇಲುಕೋಟೆಯು ಇಲ್ಲಿಂದಲೇ ಆಳ್ವಿಕೆಗೆ ಒಳಪಟ್ಟಿದ್ದನ್ನು ಕ್ರಿ.ಶ. 1189ರ ಶಾಸನವು ಸ್ಪಷ್ಟಪಡಿಸುತ್ತದೆ. ಯಾದವಗಿರಿ ಕೋಟೆಗೆ ಅಚ್ಯುತಮಯ್ಯ ಮತ್ತು ವೀರಯ್ಯ ಎಂಬ ರಕ್ಷಾಪಾಲಕರ ನೇಮಕವಾಗಿದ್ದ ಅಂಶವನ್ನು ಇದು ತಿಳಿಸುತ್ತದೆ. ಗಮನಾರ್ಹ ಅಂಶವೆಂದರೆ ಯಾವುದೇ ಶಾಸನಗಳು ಇಲ್ಲಿ ಜೈನಧರ್ಮವಿದ್ದ ವಿಚಾರವನ್ನು ತಿಳಿಸುವುದಿಲ್ಲ. ಆದರೆ ನಂಬಿನಾರಾಯಣನ ದೇವಾಲಯದಲ್ಲಿ ಸಿಂಹ ಲಾಂಛನವಿರುವ ಪಾಣಿಪೀಠವು ಜೈನಬಸದಿಯಿದ್ದ ಕುರುಹನ್ನು ನೀಡುತ್ತದೆ. ಈ ಊರಿನಲ್ಲಿದ್ದ ಜೈನಬಸದಿ ಬಹುಷಃ ಹಾಳಾದ ನಂತರ ಅದನ್ನು ತಂದು ಇಟ್ಟಿರಬಹುದು. ಈ ಪಾಣಿಪೀಠದ ಮೇಲೆ ಶ್ರೀ ವೈಷ್ಣವ ಲಾಂಛನದ ಫಲಕವನ್ನಿಟ್ಟಿರುವುದು ಗಮನಾರ್ಹ. ಇದು ಜೈನಧರ್ಮದ ಮೇಲಿನ ಗೆಲುವು ಎಂಬಂತಿದೆ.[67] ನೆರೆಯ ಕ್ಯಾತನಹಳ್ಳಿಯ ಕ್ರಿ.ಶ. 1175ರ ಶಾಸನವು ಕೊಡೆಹಾಳ ಬಸದಿಗೆ ತೊಂಡನೂರಿಗೆ 50 ಕೊಳದ ಗದ್ದೆ ಹಾಗೂ 1000 ಕೊಳಗ ಬೆದ್ದಲೆ ಭೂಮಿಯನ್ನು ಖರೀದಿಸಿ ದಾನ ನೀಡಿದ್ದನ್ನು ತಿಳಿಸುತ್ತದೆ.[68]

ರಾಮಾನುಜಾಚಾರ್ಯರ ಕಾಲವು ದಕ್ಷಿಣ ಭಾರತದಲ್ಲಿ ಅಪೂರ್ಣ ಧಾರ್ಮಿಕ ಕ್ರಾಂತಿಯ ಕಾಲ, ಧಾರ್ಮಿಕ ಚಿಂತಕರಿಗೆ ತಮ್ಮದೇ ಆದ ಮತಾಭಿಪ್ರಾಯವನ್ನು ನಿರೂಪಿಸುವ ಅವಶ್ಯಕತೆಯುಂಟಾಯಿತು. ಈ ಮಧ್ಯೆ ಶಿಥಿಲವಾಗುವ ಪ್ರಭಾವಗಳಿದ್ದರೂ ಅವರದೇ ಮಶಶ್ರದ್ಧೆಯನ್ನು ಉಳಿಸಿಕೊಳ್ಳುವ ಕಾರ್ಯದಲ್ಲಿ ನಿರತರಾಗಿದ್ದರು. ಪ್ರಪನ್ನಾಮೃತವು ತಿಳಿಸುವಂತೆ ರಾಮಾನುಜರು ತೊಂಡನೂರಿಗೆ ಬಂದಿದ್ದೇ ತೊಂಡನೂರಿನ ಭಕ್ತರ ಪ್ರಾರ್ಥನೆಯ ಮೇರೆಗೆ ಅವರನ್ನು ನೋಡಲು ಎಂಬುದು ಸ್ಪಷ್ಟವಾಗುತ್ತದೆ.[64]

ಪ್ರಪನ್ನಾವೃತವು ತಿಳಿಸುವಂತೆ ಆಗ ಇಲ್ಲಿ ಆಳುತ್ತಿದ್ದ ವಿಟ್ಟಲ ದೇವರಾಯನು (ಐತಿಹಾಸಿಕ ದಾಖಲೆಗಳಲ್ಲಿ) ಜೈನ ಮತಾಶ್ರಯಿಯಾಗಿದ್ದು, ಇವನ ಮಗಳಿಗೆ ಒಂದು ಬ್ರಹ್ಮರಾಕ್ಷಸವು ಹಿಡಿದಿತ್ತು. ಈ ಪುತ್ರಿಯು ದಿಗಂಬರೆಯಾಗಿದ್ದು ವಿವಸ್ತ್ರಳಾಗಿ ಹೊರಭಾಗದಲ್ಲಿ ಸಹ ಸುತ್ತಾಡುತ್ತಿದ್ದಳು. ವೈದ್ಯರು ಮತ್ತು ಮಂತ್ರವಾದಿಗಳು ಗುಣಪಡಿಸಲು ವಿಫಲರಾದರು. ಆಗ ತೊಂಡನೂರಿನ ರಾಮಾನುಜರ ಭಕ್ತ ತೊಂಡನೂರುನಂಬಿಯು, ರಾಮಾನುಜರ

ಪಾದತೀರ್ಥದಿಂದ ಈ ಬ್ರಹ್ಮರಾಕ್ಷಸರಿಂದ ಇವಳಿಗೆ ಮುಕ್ತಿ ದೊರೆಯುತ್ತದೆ ಎಂದು ಹೇಳಲಾಗಿ ರಾಜ ಮತ್ತು ರಾಣಿಯರು ಅವರ ಉಪದೇಶದಂತೆ ರಾಮಾನುಜರನ್ನು ಅರಮನೆಗೆ ಕರೆಸಿದರು. ಆಗ ರಾಮಾನುಜರ ಪಾದತೀರ್ಥದಿಂದ ಅವಳಿಗೆ ಬ್ರಹ್ಮರಾಕ್ಷಸವು ಬಿಡುಗಡೆಯಾಯಿತು. ಇದರಿಂದ ಸಂತಸಗೊಂಡ ರಾಜನು ರಾಮಾನುಜರನ್ನು ಪ್ರಾರ್ಥಿಸಲು ರಾಜನಿಗೆ ಪಂಚಸಂಸ್ಕಾರಗಳನ್ನು ಮಾಡಿ ಅವನನ್ನು ಶ್ರೀ ವೈಷ್ಣವನನ್ನಾಗಿ ಮಾಡಿದ್ದಲ್ಲದೆ ಅವನಿಗೆ ವಿಷ್ಣುವರ್ಧನ ಮಹಾರಾಜ ಎಂದು ನಾಮಕರಣ ಮಾಡಿದರು.

ಇದರಿಂದ ಜೈನರು ಆಚಾರ್ಯರ ಮೇಲೆ ಕೋಪಗೊಂಡರು. ರಾಜನನ್ನು ಮತಾಂತರಗೊಳಿಸಿದ್ದು ಜೈನರಿಗೆ ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳುವ ಭೀತಿಯುಂಟಾಯಿತು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಹನ್ನೊಂದನೇ ಶತಮಾನದಲ್ಲಿ ಜೈನಧರ್ಮದ ಭದ್ರಮಂದಿರದ ಮಹಡಿ ಮಾತ್ರವಲ್ಲ ಅದರ ಬೇರುಗಳೂ ಸಡಿಲವಾಗುತ್ತಿದ್ದವು.[70] ರಾಜಾಶ್ರಯ ಕಳೆದುಕೊಂಡದ್ದು, ಅದರ ತತ್ವ ಮತ್ತು ಆಚಾರ ವಿಚಾರಗಳಲ್ಲಿ ಆದ ಬದಲಾವಣೆಗಳ ಜೊತೆಗೆ ಇತರ ಧರ್ಮಗಳು ಅದರ ಪ್ರಾಬಲ್ಯವು ಕ್ಷೀಣಿಸಲು ಪ್ರಮುಖ ಕಾರಣಗಳಾದವು. ಇದನ್ನು ಹಲವು ಸಾಹಿತಿಕ ಹಾಗೂ ಶಾಸನಧಾರಗಳು ದೃಢಪಡಿಸುತ್ತವೆ. ಜೈನ ಧರ್ಮಕ್ಕೆ ಶೈವದ ನಂತರ ಪ್ರಬಲ ವಿರೋಧ ಒಡ್ಡಿ ಅದರ ಪ್ರಸಾರಕ್ಕೆ ಅಡ್ಡಿಯನ್ನೊಡ್ಡಿದವರು ವೈಷ್ಣವರು. ಬಹುಷಃ ಈ ಬೆಳವಣಿಗೆಗೆ ಮೊದಲು ಚಾಲನೆ ಸಿಕ್ಕಿದ್ದು ಆಚಾರ್ಯರು ಬಂದ ನಂತರವೆಂದೇ ಹೇಳಬಹುದು.

ತಮ್ಮ ರಾಜ ವೈಷ್ಣವನಾದುದನ್ನು ಕೇಳಿದೊಡನೆಯೇ ಕ್ರುದ್ಧರಾದ ಜೈನರು ರಾಮಾನುಜರನ್ನು ವಾದದಲ್ಲಿ ಸೋಲಿಸಲು ನಿರ್ಣಯಿಸಿದರು. ಆಚಾರ್ಯರು ತಮ್ಮ ಮತವನ್ನು ವಿಸ್ತರಿಸಲು ಅಸಮಾಧಾನ ಹೊಂದಿ, ಅವರು ವಿಟ್ಟಲದೇವನ ಮೇಲ್ವಿಚಾರಣೆಯಲ್ಲಿ ಇತ್ಯರ್ಥಪಡಿಸಲು ಮುಂದಾದರು.[71] ವಾದ ಮಂಟಪದಲ್ಲಿ ವಿದ್ವತ್ತಿನ ವಾದ ವಿವಾದಗಳು 18 ದಿನಗಳವರೆಗೆ ನಡೆದವು. ಹೀಗೆ ವಾದದ ಮಟ್ಟದಲ್ಲಿ ನಡೆದ ಘರ್ಷಣೆ ಹಾಗೂ ಅದರಲ್ಲಿ ದೊರೆತ ಜಯ ಇವುಗಳು ಜನತೆಯ ಮೇಲೆ ಪ್ರಭಾವವನ್ನು ಬೀರಿ ಧರ್ಮಪ್ರಚಾರಕ್ಕೆ ಸಹಾಯಕವಾಗುತ್ತಿದ್ದವೆಂಬುದರಲ್ಲಿ ಸಂದೇಹವಿಲ್ಲ. ಈ ವಿವಾದದಲ್ಲಿ ಜೈನರು ಸಂಪೂರ್ಣವಾಗಿ ಸೋತು ಹೋದರು. ಈ ಘಟನೆ ನಡೆದ ನಂತರ ಕೆಲವು ಜೈನರು ವೈಷ್ಣವ ಮತಕ್ಕೆ ಮತಾಂತರಗೊಂಡರು.[72]

ಶ್ರವಣಬೆಳಗೊಳದ ಸ್ಥಳಪುರಾಣವು ತಿಳಿಸುವಂತೆ ಆಚಾರ್ಯರು ಜೈನರನ್ನು ವಾದದಲ್ಲಿ ಸೋಲಿಸಿದ ನಂತರ, ಜೈನರಿಗೆ ದೊರಕಿದ್ದ ದಾನದತ್ತಿಗಳನ್ನು ನಾಶಮಾಡಿ,

ತೊಂಡನೂರಿನ ಹಲವು ಬಸದಿಗಳನ್ನು ನಾಶಮಾಡಿಸಿ, ಆ ಅವಶೇಷಗಳಿಂದ ಕೆರೆ ನಿರ್ಮಿಸಿದರು ಹಾಗೂ ಸೋತ ಜೈನರನ್ನು ಗಾಣಕ್ಕೆ ಹಾಕಿಸಿ ಕೊಲ್ಲಿಸಿದರು ಎಂಬ ಕಥೆಯಿದೆ.[73] ಇಂತಹಾ ಕಥೆಗಳು ಧಾರ್ಮಿಕ ಸ್ಥಿತಿಗೆ ಸ್ವಲ್ಪಮಟ್ಟಿಗೆ ಕನ್ನಡಿ ಹಿಡಿಯಬಲ್ಲವು.

ಇಲ್ಲಿ ಎರಡು ಮಹತ್ವದ ಅಂಶಗಳನ್ನು ಪರಾಮರ್ಷಿಸುವ ಅಗತ್ಯವಿದೆ. ಮೊದಲನೆಯದು ಬಿಟ್ಟಿದೇವನು ಮತಾಂತರಗೊಂಡುದಕ್ಕೆ ಸಂಬಂಧಿಸಿದ ಭಿನ್ನಾಭಿಪ್ರಾಯಗಳು. ಡಾ.ಡೆರೆಟ್ ಅವರ ಅಭಿಪ್ರಾಯದಂತೆ ರಾಮಾನುಜರು ಇಲ್ಲಿಗೆ ಬರುವ ಮುಂಚೆಯೇ ಈತನಿಗೆ ವಿಷ್ಣುವರ್ಧನನೆಂದು ಹೆಸರಿತ್ತು. 'ಬಿಟ್ಟಿ' ಎಂಬುದು 'ವಿಷ್ಣುವಿನ' ತದ್ಭವವಾದುದರಿಂದ ಅವನು ವೈಷ್ಣವನಾದ ಮೇಲೆ ವಿಷ್ಣುವರ್ಧನನೆಂದು ಹೊಸ ಹೆಸರಿಟ್ಟರೆಂಬುದಕ್ಕೆ ಐತಿಹಾಸಿಕ ಆಧಾರವಿಲ್ಲದಿರುವುದರಿಂದ ಆತ ಮಾತಾಂತರಗೊಳ್ಳಲಿಲ್ಲವೆಂದು ವಾದಿಸಿದ್ದಾರೆ. ಬಿಟ್ಟಿ ಎಂಬುದು ಅವನ ಪ್ರೀತಿಯ ಹೆಸರಾಗಿತ್ತು ಎಂದಿದ್ದಾರೆ.[74] ಮತಾಂತರಗೊಂಡುದಕ್ಕೆ ಯಾವುದೇ ಸ್ಪಷ್ಟ ಶಾಸನಾಧಾರಗಳು ಇಲ್ಲ. ವಿಷ್ಣುವರ್ಧನ ಹಾಗೂ ನಂತರದ ಯಾವುದೇ ದೊರೆಯ ಶಾಸನಗಳು ಇದನ್ನು ಪುಷ್ಟೀಕರಿಸಿಲ್ಲ. ರಾಜನ ಅನುಕಂಪ ಹಾಗೂ ಪ್ರೋತ್ಸಾಹಕ್ಕಾಗಿ ಈ ಧರ್ಮ ಈ ರೀತಿ ವಿಶ್ಲೇಷಿಸಿದೆ.[75] ವಿಷ್ಣುವರ್ಧನನು ರಾಮಾನುಜರನ್ನು ಭೇಟಿ ಮಾಡುವ ಮುಂಚೆಯೇ ಈ ಹೆಸರಿನಿಂದ ಕರೆಯಲ್ಪಡುತ್ತಿದ್ದುದು ತಿಳಿದುಬರುತ್ತದೆ.[76] ವಿಷ್ಣುವರ್ಧನನನ್ನು ನಂತರದ ಶಾಸನಗಳಲ್ಲಿಯೂ ಬಿಟ್ಟಿದೇವನೆಂದು ಕರೆದಿರುವ ಉದಾರಹಣೆಗಳಿವೆ.[77] ಆತ ವಿಷ್ಣುವರ್ಧನನಾದ ಎಷ್ಟೋ ದಿನಗಳ ನಂತರ ಜೈನ ಗುರು ಮಾಧವಚಂದ್ರರಿಗೆ ತಾನೇ ಸ್ವತಃ ದಾನಕೊಟ್ಟಿರುವುದಕ್ಕೆ ಆಧಾರವಿದೆ.[78]

ಶ್ರವಣಬೆಳಗೊಳದ ಮತ್ತೊಂದು ಸ್ಥಳಪುರಾಣವು ತಿಳಿಸುವಂತೆ ರಾಜನು ತನ್ನ ಒಬ್ಬಳು ಹೆಂಡತಿಯೊಂದಿಗೆ ಮತಾಂತರಗೊಂಡಳು. ಬಹಳ ದಿನ ರಾಜನು ಈ ಪ್ರಲೋಭನೆಯನ್ನು ತಡೆಹಿಡಿದನು (ವಿರೋಧಿಸಿದನು) ಆದರೆ ಯುದ್ಧದಲ್ಲಿ ಈತನು ತನ್ನ ಬಲಗೈನ ಒಂದು ಬೆರಳನ್ನು ಕಳೆದುಕೊಂಡುದರಿಂದ ಅವನೊಂದಿಗೆ ಜೈನರು ಸಹಭೋಜನವನ್ನು ನಿರಾಕರಿಸಿದ್ದರಿಂದ ಆತನು ವೈಷ್ಣವನಾದನೆಂದು ತಿಳಿಸುತ್ತದೆ.[79]

ಏನೇ ಆದರೂ ರಾಮಾನುಜರು ರಾಜಾಶ್ರಯವನ್ನು ಉನ್ನತವಾದಿ ಪಡೆದರು. ರಾಜನಿಂದ ಜಯಘೋಷ ಪಡೆದರು. ರಾಮಾನುಜರ ವ್ಯಕ್ತಿತ್ವದಿಂದ ರಾಜನು ಆಕರ್ಷಿತನಾದಂತೆ ತೋರುತ್ತದೆ. ವೈಷ್ಣವರು ನಂತರ ನಿರಂತರವಾಗಿ ತಮ್ಮ ಧರ್ಮವನ್ನು ಬೆಳೆಸಿದರು. ದೇವಾಲಯ ನಿರ್ಮಾಣಕ್ಕೆ ರಾಜನು ಒಲವು ತೋರಿದನು. ಮೇಲುಕೋಟೆಯಲ್ಲಿ

ನಾರಾಯಣಸ್ವಾಮಿ ದೇವಾಲಯದ ಸ್ಥಾಪನೆಗೆ ಆರ್ಥಿಕವಾಗಿ ಸಹಾಯ ಮತ್ತು ದಾನದತ್ತಿಗಳನ್ನು ನೀಡಿದನು. ಇದು ಹಲವು ಶಾಸನಗಳಿಗಿಂತ ಸ್ಪಷ್ಟವಾಗುತ್ತದೆ.

ನಂತರ ಈ ಪ್ರಾಂತ್ಯದಲ್ಲಿ ಪ್ರಬಲವಾಗಿದ್ದ ಜೈನಧರ್ಮದ ಪ್ರಭಾವ ಕುಗ್ಗಿತೆಂಬುದು ನಿಸ್ಸಂಶಯ. ಬಿಟ್ಟಿದೇವನು ರಾಮಾನುಜರ ಪ್ರಭಾವವಾದ ಮೇಲೆ ಹಾಗೂ ವೈಷ್ಣವ ಮತ ಪ್ರಚಾರಕ್ಕೆ ನಿಂತಮೇಲಂತೂ ಅದು ಇನ್ನಷ್ಟು ಇಳಿಮುಖವಾಯಿತು. ಜೈನರಿಗೂ ವೈಷ್ಣವರಿಗೂ ಹೊಯ್ಸಳರ ರಾಜ್ಯದಲ್ಲಿ ಘರ್ಷಣೆಗಳು ಸಂಭವಿಸುತ್ತಿದ್ದವು. ಆದರೆ ಸೌಹಾರ್ದತೆಗಾಗಿ ರಾಜನ ಪ್ರಯತ್ನಗಳು ನಡೆಯುತ್ತಿದ್ದವು.

ವಿಜಯನಗರದ ಆಳ್ವಿಕೆಯ ಕಾಲದಲ್ಲಿ ಅಂದರೆ 14ನೇ ಶತಮಾನದ ಮಧ್ಯಭಾಗದ ಒಂದನೇ ಬುಕ್ಕನ ಕಾಲದಲ್ಲಿ ಜೈನರು ಮತ್ತು ವೈಷ್ಣವರ ನಡುವೆ ಉಂಟಾದ ಘರ್ಷಣೆ ಪ್ರಾಮುಖ್ಯತೆ ಪಡೆದಿದೆ. ಕ್ರಿ.ಶ. 1318ರ ಈ ಶಾಸನದಲ್ಲಿ ಮೇಲುಕೋಟೆಯ ಶ್ರೀ ವೈಷ್ಣವರ ಹೆಸರು ಉಲ್ಲೇಖವಾಗಿದೆ. ಬುಕ್ಕರಾಜನು ಇಬ್ಬರ ಸಮ್ಮುಖದಲ್ಲಿ ಸಮಸ್ಯೆ ಬಗೆಹರಿಸಿ ಧರ್ಮಸಹಿಷ್ಣುತೆಯನ್ನು ಸಾರಿದ ರೀತಿ ಕುಶಲಪೂರ್ಣವಾಗಿದೆ. ಈ ಶಾಸನದ ಕಟ್ಟಳೆಯು ವೈಷ್ಣವರ ಪರವಾಗಿದೆ ಎನಿಸಿದರೂ ಅಲ್ಪಸಂಖ್ಯಾತರಾದ ಜೈನರ ವಿಷಯದಲ್ಲಿ ಅವನು ಸಹಾನುಭೂತಿಯನ್ನು ತೋರಿಸುವುದರೊಂದಿಗೆ ಪ್ರಬಲವಾಗಿದ್ದ ಶ್ರೀವೈಷ್ಣವರನ್ನು ಗೌರವಯುತವಾಗಿ ಉಳಿಸಿಕೊಂಡಿದ್ದಾನೆ. ಮೇಲುಕೋಟೆಯ ಶ್ರೀವೈಷ್ಣವರು ಈ ಸಭೆಯಲ್ಲಿ ಭಾಗವಹಿಸಿರುವುದನ್ನು ನೋಡಿದರೆ, ಈ ಎರಡೂ ಪಂಥಗಳ ನಡುವೆ ವೈಮನಸ್ಸುಗಳು ಮಾಗಿರಲಿಲ್ಲವೆಂಬುದು ಅರಿವಾಗುತ್ತದೆ.

ವೈಷ್ಣವರು ಮತ್ತು ಶೈವರು

ಮೇಲುಕೋಟೆಯು ಕರ್ನಾಟಕದ ಪ್ರಬಲ ಶ್ರೀ ವೈಷ್ಣವ ಕೇಂದ್ರವಾಗಿದ್ದು, ಹೊಯ್ಸಳರ ಕಾಲದಿಂದಲೂ ಅದು ತನ್ನ ಅಸ್ತಿತ್ವವನ್ನು ಕಾಯ್ದುಕೊಂಡಿದೆ. ಶೈವಮತವು ಕರ್ನಾಟಕದ ಮತ್ತೊಂದು ಪ್ರಭಾವಿ ಮತ. ಶೈವ ಮತ್ತು ವೈಷ್ಣವರ ನಡುವೆ ಮೇಲುಕೋಟೆಗೆ ಸಂಬಂಧಿಸಿದಂತೆ ಮತೀಯ ವಿರಸಗಳು ಮೇಲ್ನೋಟಕ್ಕೆ ಕಂಡುಬರದಿದ್ದರೂ ಇಲ್ಲಿನ ಐತಿಹ್ಯಗಳು, ನಂಬಿಕೆಗಳು ಹಾಗೂ ಸ್ಮಾರಕಗಳ ಸೂಕ್ಷ್ಮ ಅಧ್ಯಯನಗಳು ಧಾರ್ಮಿಕ ವಿರಸಗಳಿದ್ದ ಅಂಶವನ್ನು ದೃಢಪಡಿಸುತ್ತವೆ. ಈ ಕಾಲಕ್ಕೆ ಶೈವ ಮತ್ತು ವೈಷ್ಣವರ ಸಾಮರಸ್ಯ ಸಾರುವ ಹಲವು ಉದಾಹರಣೆಗಳಿವೆ. ಶೈವರು ವೈಷ್ಣವ ದೇವಾಲಯವನ್ನು ಹಾಗೂ ವೈಷ್ಣವರು ಶೈವ ದೇವಾಲಯಗಳನ್ನು ಕಟ್ಟಿಸಿದ್ದರು. ಹೊಯ್ಸಳರ ಶಾಸನಗಳ ಆರಂಭದಲ್ಲಿ ಕೇಶವ ಮತ್ತು ಶಿವನಿಗೆ ಒಟ್ಟಿಗೆ ಗೌರವ ಸಲ್ಲಿಸುವ ಪ್ರಾರ್ಥನಾ ಪದ್ಯಗಳಿವೆ.[80]

ವಿಷ್ಣುವರ್ಧನನು ನಿಸ್ಸಂದೇಹವಾಗಿ ವಿಷ್ಣುವಿನ ಕಡೆಗೆ ಹೆಚ್ಚು ಒಲವು ಹೊಂದಿದ್ದರೂ. ಕ್ರಿಶ. 1128ರಲ್ಲಿ ಮೇಲುಕೋಟೆಯ ಶಿವ ದೇವಾಲಯಕ್ಕೆ ದಾನ ನೀಡಿದನು.[81] ತಂದೆಯ ನೆನಪಿಗಾಗಿ ಶೈವ ದೇವಾಲಯ ಒಂದಕ್ಕೆ ದಾನ ನೀಡಿದನು. ಈತನ ಹೆಂಡತಿ ಶಾಂತಲೆಯು ಶಿವಭಕ್ತೆಯಾಗಿದ್ದು, ಈಕೆ ಮಡಿದಾಗ ಅವಳ ತಾಯಿ ಶಾಂತಲೇಶ್ವರ ಶಿವ ದೇವಾಲಯವನ್ನು ಕಟ್ಟಿಸುತ್ತಾಳೆ.[82] (ಕ್ರಿ.ಶ.1135) ವಿಷ್ಣುವರ್ಧನನ ವೈಯಕ್ತಿಕ ನಿಲುವು ಏನೇ ಇದ್ದರೂ, ಅದು ಇವನ ವಿಶಾಲವಾದ ಮನೋಧರ್ಮಕ್ಕೆ ಅಡ್ಡಿ ಬರಲಿಲ್ಲವೆಂಬುದು ಇದರಿಂದ ತಿಳಿದುಬರುತ್ತದೆ. ವಿಜಯನಗರದ ಕಾಲದಲ್ಲಿನ ಧಾರ್ಮಿಕ ಒಲವುಗಳೇನೇ ಇದ್ದರು, ಅನ್ಯಧರ್ಮಗಳ ವಿಚಾರಗಳು ಮತ್ತು ಆಚರಣೆಗಳ ಬಗೆಗೆ ಸಹಿಷ್ಣುತೆಯುಳ್ಳ ಉದಾರ ಮನೋಭಾವವನ್ನು ಹೊಂದಿದ್ದರು. ಮೈಸೂರಿನ ಒಡೆಯರು ಭಗವತಿ ಚಾಮುಂಡೇಶ್ವರಿಯನ್ನು ತಮ್ಮ ಕುಲದೇವತೆಯನ್ನಾಗಿ ಪೂಜಿಸುತ್ತಿದ್ದರು. ಆಕೆಯು ಶೈವ ಮತ್ತು ವೈಷ್ಣವ ಸಂಯೋಜನೆಯನ್ನು ಪ್ರತಿನಿಧಿಸುವ ದೇವತೆಯಾಗಿದ್ದರಿಂದ ರಾಜರು ಆಕೆಯನ್ನು ಆರಾಧಿಸುವ ಮೂಲಕ ಎರಡೂ ಪಂಥಗಳಲ್ಲಿ ಸಾಮರಸ್ಯ ಸಾಧಿಸಿದ್ದರು.[83] ಚಾರಿತ್ರಿಕ ನೆಲೆಯಲ್ಲಿ ನೋಡುವುದಾದರೆ ಧರ್ಮವು ಅತ್ಯಂತ ಸೂಕ್ಷ್ಮ ವಿಚಾರಗಳನ್ನು ಒಳಗೊಂಡಿರುವುದಾಗಿ ಧಾರ್ಮಿಕ ಸಾಮರಸ್ಯ ಎನ್ನುವ ಪ್ರಭುತ್ವದ ಹಿನ್ನೆಲೆಯ ಸರಳ ವ್ಯಾಖ್ಯಾನದಿಂದ ಅರ್ಥೈಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಸ್ಥಳೀಯವಾದ ಮತಪಂಥಗಳನ್ನು ಮೀರಿ ಹೆಚ್ಚು ವಿಶಾಲವಾದ ಸಮುದಾಯಗಳನ್ನು ರೂಪಿಸುವ ಪ್ರಯತ್ನದ ಭಾಗವಾಗಿ ಈ ಬೆಳವಣಿಗೆಯನ್ನು ಗುರುತಿಸಬಹುದು. ಧಾರ್ಮಿಕ ಪಂಗಡಗಳ ನೆರವನ್ನು ಬಳಸಿಕೊಂಡು ರಾಜಕೀಯ ಮನ್ನಣೆಯನ್ನು ಪಡೆದುಕೊಳ್ಳುವ ಪ್ರಕ್ರಿಯೆಗಳು ನಡೆಯುತ್ತಿದ್ದವು. ಆದರೆ ಇಲ್ಲಿ ತೀರ್ಪು ನೀಡುವ ಅರ್ಹತೆಯು ನಿರ್ದಿಷ್ಟ ಮತಕ್ಕೆ ಅಥವಾ ಪಂಥಕ್ಕೊ ಇರುತ್ತಿತ್ತೇ ವಿನಃ ಒಂದು ಧರ್ಮಕ್ಕಲ್ಲ. ಒಂದೇ ರಾಜವಂಶವು ಅಷ್ಟೇಕೆ ಒಂದೇ ರಾಜಕುಟುಂಬವು ಹತ್ತು ಹಲವು ಮತಪಂಥಗಳಿಗೆ ಆಶ್ರಯನೀಡುವ ಪದ್ಧತಿ ರೂಢಿಯಲ್ಲಿತ್ತು. ಆದರೆ ಎಲ್ಲಾ ಧರ್ಮಗಳನ್ನು ಕುರಿತ ಸಮಾನಭಾವಕ್ಕಿಂತ ಹೆಚ್ಚಾಗಿ ರಾಜಕೀಯ ಮತ್ತು ಸಾಮಾಜಿಕ ಅನಿವಾರ್ಯತೆಗಳೇ ಕಾರಣವಾಗಿದ್ದವು. ಈ ಪ್ರಕ್ರಿಯೆ ಧರ್ಮವನ್ನು ಮತ್ತಷ್ಟು ಬಲಗೊಳಿಸಿ ಜನರ ಬದುಕಿನಲ್ಲಿ ಕೇಂದ್ರ ಸ್ಥಾನವನ್ನು ಪಡೆದುಕೊಳ್ಳುವಂತೆ ಮಾಡಿತು.

ಮೇಲುಕೋಟೆಯ ಧಾರ್ಮಿಕ ಚರಿತ್ರೆಯ ಆರಂಭವನ್ನು ನಾವು ರಾಮಾನುಜರು ತಮಿಳುನಾಡಿನಲ್ಲಿದ್ದಾಗಿನಿಂದಲೇ ಗುರುತಿಸಬಹುದು. ಮೇಲುಕೋಟೆಯ ಮತೀಯ ಭಾವನೆಗಳನ್ನು ಅರಿಯುವ ಮುನ್ನ ಆರಂಭದ ಶೈವ ಮತ್ತು ವೈಷ್ಣವರ ಭಾವನೆಗಳನ್ನು ಪರೀಕ್ಷಿಸುವುದರ ಅಗತ್ಯವಿದೆ. ಶೈವ ಮತ್ತು ವೈಷ್ಣವರ ಮೇಲಾಟ ಹಿಂದೂಧರ್ಮದಲ್ಲಿ ಮೊದಲಿನಿಂದಲೂ ಇದ್ದುದೆ. ಶಿವ ಮತ್ತು ವಿಷ್ಣು ಇವರಲ್ಲಿ ಆಗಾಗ ಸ್ಪರ್ಧೆ

ನಡೆಯುತ್ತಿದ್ದುದುಂಟು. ಸಾಂಪ್ರಾದಾಯಿಕ ನಂಬಿಕೆಯಂತೆ ದ್ರಾವಿಡದೇಶದಲ್ಲೆಲ್ಲಾ ರಾಮಾನುಜರ ವೈಷ್ಣವ ಮತ ಪ್ರಭಾವನೋಡಿ ಶೈವರು ಸಹಿಸಲಾರದೇ ಹೋದರು. ಈ ಸಮಯದಲ್ಲಿ 2ನೇ ಕುಲೋತ್ತುಂಗಚೋಳನು ಆಡಳಿತನಡೆಸುತ್ತಿದ್ದನು.[84] ಬಹುಪಾಲು ಚೋಳ ದೊರೆಗಳು ಶೈವರು. ಶಿವನೇ ಶ್ರೇಷ್ಠನೆಂಬ ಮಾತನ್ನು ರಾಮಾನುಜರಿಂದ ಹೊರಡಿಸಬೇಕೆಂದು ರಾಜನು ಹಟತೊಟ್ಟು ಅವರಿಗೆ ಹೇಳಿಕಳುಹಿಸಿದಾಗ, ರಾಜನ ದುರುದ್ದೇಶವನ್ನರಿತ ರಾಮಾನುಜರ ಶಿಷ್ಯ ಕೂರೇಷನು ತಾನೇ ರಾಮಾನುಜನೆಂದು ಹೇಳಿಕೊಂಡು ರಾಜಾಸ್ತಾನಕ್ಕೆ ಹೋಗುತ್ತಾನೆ. ಅಲ್ಲಿ ಶಿವಪಾರಮ್ಯವನ್ನು ಒಪ್ಪದ ಕೂರೇಶನ ಎರಡು ಕಣ್ಣುಗಳನ್ನು ರಾಜನು ಕೀಳಿಸಿಬಿಡುತ್ತಾನೆ. ಅಪಾಯವನ್ನರಿತ ರಾಮಾನುಜರು ತಲೆತಪ್ಪಿಸಿಕೊಂಡು ಚೋಳನಾಡಿನಿಂದ ಹೊಯ್ಸಳನಾಡನ್ನು ಪ್ರವೇಶಿಸುತ್ತಾರೆ.

ಈ ಘಟನೆಯ ಚಾರಿತ್ರಿಕ ಪರಿಶೀಲನೆ ಅಗತ್ಯವಾಗಿವೆ. ಹಲವು ಸಂಶೋಧಕರು ಈ ಗೊಂದಲದ ಕುರಿತು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇದರಿಂದ ಹಲವು ದುರ್ಬಲ ಐತಿಹಾಸಿಕ ತಳಹದಿಗಳು ಈ ಕಥೆಯಲ್ಲಿ ಸ್ಥಾನಪಡೆದಿರುವುದು ಗೊತ್ತಾಗುತ್ತದೆ. ಆದರೆ ಜನರು ಈ ಕಥೆಯನ್ನು ಬಲವಾಗಿ ನಂಬಿದ್ದು ಇದು ಹಲವು ಭಾರಿ ಪುನರಾವರ್ತನೆಯಾಗಿದೆ. ಇಲ್ಲಿಯವರೆಗೂ ಸಂಶೋಧಕರು ರಾಮಾನುಜರನ್ನು ಹಿಂಸಿಸಿದ ಚೋಳರಾಜನನ್ನು ಗುರುತಿಸುವಲ್ಲಿ ವಿಫಲರಾಗಿದ್ದಾರೆ. ಬಹುತೇಕ ಸಂಶೋಧಕರು ತಿಳಿದಿರುವಂತೆ, 2ನೇ ಕುಲೋತ್ತುಂಗನು ರಾಮಾನುಜರಿಗೆ ಹತ್ತಿರದ ಸಮಕಾಲೀನ ದೊರೆ.[85] ಆದರೆ ಈತನು ವೈಷ್ಣವ ವಿರೋಧಿಯಾಗಿ ಕಂಡುಬರುವುದಿಲ್ಲ. ಅವನು ವೈಷ್ಣವ ದೇವಾಲಯಗಳಿಗೆ ಪ್ರೋತ್ಸಾಹ ಕೊಡುತ್ತಿದ್ದು ಹಲವು ದಾನಗಳನ್ನು ಸಹ ನೀಡಿದ್ದಾನೆ.[86] ಅವನ ರಾಜ್ಯ ಶಾಂತಿಯಿಂದಿತ್ತು, ಕುಲೋತ್ತುಂಗನು ಏಕಮನಸ್ಕನಾಗಿರಲಿಲ್ಲ, ನಾಗಪಟ್ಟಣಂನ ಬೌದ್ಧನೆಲೆಗೆ ದಾನ ನೀಡಿದ್ದಾನೆ.[87] ರಾಮಾನುಜ ಸಂಬಂಧಿ ಈ ಕಥೆಯು ಕುಲೋತ್ತುಂಗನಿಗೆ ಸಂಬಂಧಿಸಿದಂತೆ ತಳಪಾಯವಿಲ್ಲದ ಕಥೆಯಾಗಿದೆ.

ಈ ಕಥೆಯು ವೈಷ್ಣವ ಸಾಂಪ್ರದಾಯಿಕ ಮಾಹಿತಿಯಾಗಿದ್ದು, ಅದು ಅನುಮಾನದ ಹೊರಗಿಲ್ಲ. ನಿಜಸಂಗತಿಯೆಂದರೆ ರಾಮಾನುಜರು ಶ್ರೀರಂಗಂನಲ್ಲಿ ಸಕ್ರಿಯವಾಗಿ ಧಾರ್ಮಿಕ ಪಾಲ್ಗೊಳ್ಳುವಿಕೆಯು ರಾಜನ ಗಮನವನ್ನು ಆಕರ್ಷಿಸಿದೆ. ಆದರೆ ಕಿರುಕುಳ ನೀಡಿದ ಕಥೆಗೆ ಯಾವ ದಾಖಲೆಯೂ ಹೊಂದಿಕೆಯಾಗುವುದಿಲ್ಲ. 75 ವರ್ಷಗಳ ಆ ಅವಧಿಯಲ್ಲಿ ಎಲ್ಲಿಯೂ ಯಾವ ಶಾಸನಗಳಲ್ಲಿಯೂ ಈ ಕಥೆಯು (ತಮಿಳು ಮತ್ತು ಕನ್ನಡ) ಉಲ್ಲೇಖಗೊಂಡಿಲ್ಲ. ಚೋಳರ ಸಾವಿರಾರು ಶಾಸನಗಳಲ್ಲಿ ಎಲ್ಲಿಯೂ ಅಸಹಿಷ್ಣುತೆ ಕುರಿತು ಕುರುಹುಗಳಿಲ್ಲ. ಇನ್ನೊಂದು ಕಡೆ ಇವರು ಶೈವ, ವೈಷ್ಣವ ಮತ್ತು ಜೈನಧರ್ಮದ

ಪ್ರೋತ್ಸಾಹಕರಾಗಿದ್ದರು ಎಂದು ಸ್ಪಷ್ಟಪಡಿಸುತ್ತದೆ. ರಾಮಾನುಜರ ಕಾಲದ 200 ವರ್ಷಗಳ ನಂತರ ಈ ದಾಖಲೆಗಳು ಸೃಷ್ಟಿಯಾಗಿವೆ.[88] ಏನೇ ಆದರೂ ರಾಮಾನುಜರು ಚೋಳನಾಡನ್ನು ಬಿಟ್ಟು ಹೊಯ್ಸಳನಾಡನ್ನು ಬಂದು ತಲುಪಿದರು. ರಾಮಾನುಜರ ಈ ಪ್ರವಾಸವು ತಮ್ಮ ಮತ ಪ್ರಚಾರದ ಮುಂದುವರಿಕೆಯ ಮತ್ತು ಶ್ರೀ ವೈಷ್ಣವ ಮತವನ್ನು ಮತ್ತಷ್ಟು ಪ್ರಬಲ ಮಾಡುವ ಬೆಳವಣಿಗೆಯಾಯಿತು. ಈಗಾಗಲೇ ಹೊಯ್ಸಳ ರಾಜ್ಯದಲ್ಲಿ ವೈಷ್ಣವ ಮತ ಅಭಿವೃದ್ಧಿಯಾಗುತ್ತಿದ್ದುದನ್ನು ಶಾಸನಗಳು ದೃಢಪಡಿಸುತ್ತವೆ.

ರಾಮಾನುಜರು ಚೋಳರಾಜನ ಪರಮ ಶತ್ರುವಾದ ಹೊಯ್ಸಳರಾಜನ ಆಶ್ರಯ ಬಯಸಿ ಮೇಲ್ನಾಡಿಗೆ ಬಂದರು. ಇದಕ್ಕೆ ಮತ್ತೊಂದು ಪ್ರಬಲ ಕಾರಣವು ಇತ್ತು. ಚೋಳ ರಾಜನ ಸ್ವಾಧೀನದಲ್ಲಿದ್ದ ಮಳೂರು, ಮಳೂರುಪಟ್ಟಣ, ಮಾರೆಹಳ್ಳಿ, ಕಡಿಮಾಲಂಗಿ ಮತ್ತು ಅಗರದಲ್ಲಿ ವೈಷ್ಣವ ದೇವಾಲಯಗಳಿದ್ದು ಪ್ರಾಂತ್ಯಾಧಿಕಾರಿಗಳಾಗಿ ಶ್ರೀ ವೈಷ್ಣವರೇ ಆಳುತ್ತಿದ್ದರು. ತಡಿಮಾಲಂಗಿಯ ಜನಾರ್ಧನ ದೇವಾಲಯದ ತಳಪಾದಿ ಕಲ್ಲಿನ ತಮಿಳು ಮತ್ತು ಗ್ರಂಥಭಾಷೆಯಲ್ಲಿ ಬರೆದಿರುವ ಶಾಸನಗಳಲ್ಲಿ 'ಶ್ರೀ ವೈಷ್ಣವ ರಕ್ಷೆ' ಎಂಬ ಉಲ್ಲೇಖವಿದೆ, ಇದರ ಕಾಲ ಕ್ರಿ.ಶ. 1014. ರಾಮಾನುಜರ ಆಗಮನಕ್ಕೂ ಮುಂಚೆ ಇಲ್ಲಿ ವೈಷ್ಣವ ಧರ್ಮ ಇತ್ತು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇಲ್ಲಿ ವಿಷ್ಣುಭಕ್ತರಿರುವರೆಂದು ರಾಮಾನುಜರಿಗೆ ತಿಳಿದಿತ್ತು. ಜೊತೆಗೆ ಚೋಳರಾಜರ ಪರಮ ಶತ್ರುಗಳಾದ ಹೊಯ್ಸಳರ ಮೊರೆಹೊಕ್ಕರೆ ತಮ್ಮ ರಕ್ಷಣೆ ಆಗುವುದೆಂದು ತಿಳಿದರು. ಕಾವೇರಿ ನದೀ ತೀರಕ್ಕೆ ಬಂದು ಸತ್ಯಮಂಗಲದ ಬಳಿ ಕಾವೇರಿ ನದಿಯನ್ನು ದಾಟಿ ರಾಮನಾಥಪುರ ತಲುಪಿದರು. ಹತ್ತಿರದ ಸಾಲಿಗ್ರಾಮಕ್ಕೆ ಬಂದರು. ಇಲ್ಲಿ ಶೈವರು ರಾಮಾನುಜರನ್ನು ಅಲಕ್ಷಿಸಲಾಗಿ, ಈ ಗ್ರಾಮಸ್ಥರು ಯಾವ ಕೊಳದಲ್ಲಿ ಸ್ನಾನ ಮಾಡುವರೋ ಆ ಕೊಳದಲ್ಲಿ ರಾಮಾನುಜರು ಪಾದ ಪ್ರಕ್ಷಾಳನಮಾಡಿದ ಕಾರಣ, ಆ ಶೈವರೆಲ್ಲರೂ ನಿರಹಂಕಾರಿಗಳಾದರು. ನಂತರ 1000 ಶೈವರಿಗೆ ವೈಷ್ಣವ ದೀಕ್ಷೆಯನ್ನು ನೀಡಿ ವೈಷ್ಣವರನ್ನಾಗಿ ಮತಾಂತರಿಸಿದರು.[89] ರಾಮಾನುಜರ ದೇವಾಲಯವೂ ಸಹ ಇಲ್ಲಿ ನಿರ್ಮಾಣವಾಗಿದೆ.[90] ಎತ್ತರವಾದ ಒಂದು ಜಗತಿಯ ಮೇಲೆ ಅವರ ಪಾದ ಹಾಗೂ ದೇವಾಲಯದ ಎದುರಿಗೆ 'ಶ್ರೀ ಪಾದತೀರ್ಥ' ಎಂಬ ಕೊಳವಿದೆ. ರಾಮಾನುಜರ ಪವಿತ್ರ ಪಾದಗಳು ಇಲ್ಲಿಯೇ ತೊಳೆಯಲ್ಪಟ್ಟವೆಂದು ಹೇಳಲಾಗುತ್ತದೆ.

ಮೇಲುಕೋಟೆಗೆ ಬರುವ ಮುನ್ನ ರಾಮಾನುಜರು ತಲುಪಿದ್ದು ತೊಂಡನೂರನ್ನು. ತೊಂಡನೂರು ಹೊಯ್ಸಳರ ಕಾಲದಲ್ಲಿ ಪ್ರಸಿದ್ಧಿಗೆ ಬಂದಿತು. ಮೇಲುಕೋಟೆಯು ತೊಂಡನೂರಿನಿಂದಲೇ ನಿಯಂತ್ರಿತವಾಗುತ್ತಿದ್ದರಿಂದ, ಇಲ್ಲಿನ ಶೈವ ಮತ್ತು ವೈಷ್ಣವರ ಸ್ಥಿತಿಗಳ ಉಲ್ಲೇಖ ಇಲ್ಲಿ ಅಗತ್ಯವಾಗುತ್ತದೆ. ತೊಂಡನೂರಿನಲ್ಲಿ ಶೈವಮತವು ಅತ್ಯಂತ

ಪ್ರಬಲವಾಗಿತ್ತೆಂದು ಊಹಿಸಲು ಅವಕಾಶವಿದೆ. ಕಾಲ ಕ್ರಮೇಣ ಶ್ರೀ ವೈಷ್ಣವ ಮತವು ಜನಪ್ರಿಯವಾಗಿದ್ದರಿಂದ ಶೈವ ಮತದ ಪ್ರಾಬಲ್ಯ ಕಡಿಮೆಯಾಗಿದೆ. ಇದನ್ನು ಶೈವ ದೇವಾಲಯಗಳ ಸ್ಥಿತಿಗಳಿಂದ ತಿಳಿಯಬಹುದು. ಸದ್ಯ ಇಲ್ಲಿರುವ ಶೈವಾಲಯಗಳ ಭಗ್ನಸ್ಥಿತಿ, ಅವುಗಳ ರೂಪಾಂತರ, ಅವುಗಳ ಸರಳತೆ, ನಿರಲಂಕರಣ ಇತ್ಯಾದಿಗಳಿಂದ ಶೈವ ಪ್ರಾಬಲ್ಯದ ಕುಗ್ಗುವಿಕೆ ವೇಧ್ಯವಾಗುತ್ತದೆ. ತೊಂಡನೂರಿನ ಕೈಲಾಸೇಶ್ವರ ದೇವಾಲಯ ಪ್ರಸಿದ್ಧವಾದುದು. ಇದು ತೊಣ್ಣೂರಿನ ಪ್ರಾಚೀನ ದೇವಾಲಯವೆಂಬ ಅಭಿಪ್ರಾಯವನ್ನು ವಿದ್ವಾಂಸರು ವ್ಯಕ್ತಪಡಿಸುತ್ತಾರೆ. ಆದರೆ ಆ ದೇವಾಲಯದ ತಳಪಾದಿಕಲ್ಲಿನ ಮೇಲಿರುವ ಶಾಸನದಿಂದ[91] ದೇವಾಲಯವು ಒಂದನೆಯ ನರಸಿಂಹನ (ಕ್ರಿ.ಶ. 1152–1173) ಕಾಲದಲ್ಲಿ ನಿರ್ಮಾಣಗೊಂಡಿರುವ ಅಂಶ ವೇದ್ಯವಾಗುತ್ತದೆ. ಈ ದೇವಾಲಯವು ದುಸ್ಥಿತಿಯಲ್ಲಿದ್ದು, ಅಮ್ಮನವರಗುಡಿ ಮತ್ತು ಚಂಡಿಕೇಶ್ವರಗುಡಿಗಳು ಕುಸಿದಿವೆ. ಗರ್ಭಗುಡಿ ಮತ್ತು ಅರ್ಧಮಂಟಪಗಳಲ್ಲಿ ಯಾವುದೇ ವಾಸ್ತು ವೈಶಿಷ್ಟ್ಯವಿಲ್ಲ. ದೇವಾಲಯದ ಮಿತವ್ಯಯದ ಪರಮಾವಧಿ, ಗುಣಮಟ್ಟದಲ್ಲಿ ಇಳಿಕೆ ಮಾಡಲಾಗಿ ಇದು ತನ್ನ ಅಸ್ಥಿತ್ವ ಕಳೆದುಕೊಂಡಿದೆ. ಕಳಪೆ ತಂತ್ರಗಳು ಇದರಿಂದ ಬಯಲಾಗಿದೆ. ಈ ರೀತಿಯ ನಿರ್ಮಾಣ ಶಾಸ್ತ್ರ ಸಮ್ಮತವಲ್ಲ. ಇಲ್ಲಿನ ಪಾರ್ವತಿದೇವಿ ಶಿಲ್ಪ ಶ್ರೀರಂಗಪಟ್ಟಣದ ಗಂಗಾಧರೇಶ್ವರ ದೇವಾಲಯಕ್ಕೆ ಸ್ಥಳಾಂತರವಾಗಿರುವುದಾಗಿ ಸ್ಥಳೀಯರು ತಿಳಿಸುತ್ತಾರೆ. ರಾಜರು ಮತ್ತು ಇತರರು ಕೈಲಾಸೇಶ್ವರ ದೇವಾಲಯಕ್ಕೆ ದಾನ, ಧರ್ಮ ಮತ್ತು ದತ್ತಿ ನೀಡಿರುವುದು ಶಾಸನಗಳಿಂದ ಸ್ಪಷ್ಟವಾಗುತ್ತದೆ. ಇದು 11ನೇ ಶತಮಾನದಿಂದ ಆರಂಭಿಸಿ 16ನೇ ಶತಮಾನದವರೆಗೆ ಮುಂದುವರೆದಂತೆ ಕಂಡುಬರುತ್ತದೆ. ಶ್ರೀ ವೈಷ್ಣವ ಮತದ ಪ್ರಾಬಲ್ಯದಿಂದ ಶೈವಮತದ ಪ್ರಾಬಲ್ಯ ಕುಗ್ಗಿತು ಎಂಬುದಕ್ಕೆ ಪಾಳುಬಿದ್ದಿರುವ ಕೈಲಾಸೇಶ್ವರ ದೇವಾಲಯವೇ ಸಾಕ್ಷಿಯಾಗಿದೆ.

ಇಲ್ಲಿ ಶೈವಮತಕ್ಕೆ ಸೇರಿದ ಅಂದರೆ ಶಿವನ ಮತ್ತೊಂದು ದೇವಾಲಯದ ಉಲ್ಲೇಖ ಕಂಡುಬರುತ್ತದೆ. ಈ ದೇವಾಲಯ ಅತ್ಯಂತ ಪ್ರಾಚೀನ ದೇವಾಲಯವಾಗಿದ್ದು, ವೀರಬಲ್ಲಾಳನ ಕಾಲದ ಶಾಸನದಲ್ಲಿ ಇದರ ಉಲ್ಲೇಖವಿದೆ[92]. ಇದೇ ಶಾಸನದಲ್ಲಿ ಮೇಲುಕೋಟೆಯ ರಕ್ಷಾಪಾಲಕರಾಗಿದ್ದ ದಂಡನಾಯಕ ಅಚ್ಯುತಮಯ್ಯ ಮತ್ತು ವೀರಯ್ಯರ ಮಕ್ಕಳಾದ ನೀಲಯ್ಯ ಮತ್ತು ಚಾಮಯ್ಯರು ತೊಂಡನೂರು ಅಗ್ರಹಾರದ ಗಡಿಯಲ್ಲಿದ್ದ ನಖರೇಶ್ವರ ದೇವರಿಗೆ ಭೂದಾನ ಮಾಡಿರುವ ವಿಷಯವಿದೆ. ಹೊಯ್ಸಳರ ಅವನತಿಯ ನಂತರ ಇದು ಕಣ್ಮರೆಯಾದುದು ಗಮನಾರ್ಹ.

ಹೀಗೆ ಸ್ಥಳೀಯ ಐತಿಹ್ಯ, ಶಾಸನಾಧಾರ ಮತ್ತು ಲಭ್ಯವಿರುವ ವಾಸ್ತು ಮತ್ತು ಶಿಲ್ಪಾವಶೇಷಗಳಿಂದ ಇಲ್ಲಿ ಶಿವಾಲಯವಿತ್ತೆಂದು ಸ್ಪಷ್ಟವಾಗುತ್ತದೆ. ಈ ದೇವಾಲಯವಿದ್ದ

ಹಿಂಬದಿಯ ಎತ್ತರ ಪ್ರದೇಶದಲ್ಲಿ ಸಾಲಾರ್ ಮಸೂದ್ ಘಾಜಿ ಸೂಫಿ ಸಂತನ ದರ್ಗವನ್ನು ನಿರ್ಮಿಸಲಾಗಿದೆ. ತಮಿಳು ವಸಹಾತುವಿನಂತಿದ್ದ ತೊಂಡನೂರಿನಲ್ಲಿ ಶ್ರೀ ವೈಷ್ಣವ ಧರ್ಮದ ಅಮಿತ ಪ್ರಭಾವದಿಂದ ಶೈವ ದೇವಾಲಯ ತನ್ನ ಅಸ್ಥಿತ್ವ ಕಳೆದುಕೊಂಡಿತು. ಪರಿಣಾಮ ದೇವಾಲಯ ಪಾಳುಬಿದ್ದ ಸೂಫಿಸಂತನ ದರ್ಗ ನಿರ್ಮಾಣವಾಯಿತು. ನಂತರ ದೇವಾಲಯದ ಆವರಣ ಸಹ ದರ್ಗದ ವ್ಯಾಪ್ತಿಗೆ ಸೇರಿತು. ತೊಂಡನೂರಿನ ಕೆರೆ ಏರಿ ಮೇಲೆ ಹೊಯ್ಸಳೇಶ್ವರ ದೇವಾಲಯವಿತ್ತೆಂದು ಗುರುತಿಸಲಾಗಿದೆ.[93] ಈಗ ಅದು ಅದೃಶ್ಯವಾಗಿದೆ. ಇಲ್ಲಿನ ಮಹಾಸತಿಕಲ್ಲುಗಳು, ಬಹುತೇಕ ಶೈವ ಸಂಬಂಧಿ ಶಿಲಾವಶೇಷಗಳು ಹೊಲಗಳ ನಡುವೆ ಹಾಳಾಗಿ ಬಿದ್ದಿವೆ ಮತ್ತು ಕೆಲವು ಕಣ್ಮರೆಯಾಗಿವೆ. ಇವುಗಳಿಂದ ತೊಂಡನೂರಿನಲ್ಲಿ ಶೈವ ಧರ್ಮವು ಪ್ರಬಲವಾಗಿತ್ತೆಂದು ಊಹಿಸಬಹುದು. ಆದರೆ ಕಾಲ ಕ್ರಮೇಣ ಶ್ರೀ ವೈಷ್ಣವ ಮತವು ಜನಪ್ರಿಯವಾಗಿದ್ದರಿಂದ ಶೈವಧರ್ಮದ ಪ್ರಾಬಲ್ಯ ಕಡಿಮೆಯಾಗತೊಡಗಿತು.

ಮೇಲುಕೋಟೆ ದಕ್ಷಿಣ ಭಾರತದ ಪ್ರಬಲ ಶ್ರೀ ವೈಷ್ಣವ ಕೇಂದ್ರ. ಆದರೆ ಇಲ್ಲಿಗೆ ರಾಮಾನುಜರು ಬಂದ ಕಾಲದಿಂದ ಇಂದಿನವರೆಗೂ ಶೈವ ಮತ್ತು ವೈಷ್ಣವ ಮತೀಯ ವಿರಸಗಳು ಸಂಭವಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಲಿಖಿತ ಶಾಸನಾಧಾರಗಳಿಲ್ಲ. ಇಲ್ಲಿರುವ ಐತಿಹ್ಯಗಳು, ಆಚರಣೆಗಳು, ಅವಶೇಷಗಳು, ದೇವಾಲಯ ರೂಪಾಂತರಗಳು ಮತೀಯ ಭಿನ್ನಾಭಿಪ್ರಾಯಗಳು ಇದ್ದುದನ್ನು ದೃಢಪಡಿಸುತ್ತವೆ. ಶ್ರೀ ವೈಷ್ಣವ ಮತ ಇಲ್ಲಿಗೆ ಬರುವ ಮುನ್ನ ಶೈವಮತ ಪ್ರಬಲವಾಗಿತ್ತೆಂದು ಊಹಿಸಲು ಸಾಧ್ಯವಿದೆ.

ಕ್ರಿ.ಶ. 1128ರಲ್ಲಿ ಹೊಯ್ಸಳ ಅರಸ ವಿಷ್ಣುವರ್ಧನನು ಮೇಲುಕೋಟೆಯಲ್ಲಿದ್ದ ಶಿವದೇವಾಲಯಕ್ಕೆ ದಾನ ನೀಡಿದ್ದಾನೆ.[94] ಮೇಲುಕೋಟೆಯ ಉತ್ತರ ಗಡಿಯಲ್ಲಿ ಬಾಲಕಿಯರ ಪ್ರಾಥಮಿಕಶಾಲೆಯ ಮೈದಾನದಲ್ಲಿ ಗಂಗರ ಕಾಲದ ಸ್ಥಂಭಗಳು ಕಾಣಸಿಗುತ್ತವೆ. ಇವು ಗ್ರಾನೈಟ್ ಶಿಲೆಯ ಸುಂದರ ಕಂಬಗಳು ಹಾಗೂ ಘನಾಕೃತಿಯ ತಳವನ್ನು ಹೊಂದಿವೆ. ದುಂಡಾಗಿರುವ ಈ ಕಂಬಗಳು 9–10ನೇ ಶತಮಾನದ ಗಂಗರಕಾಲದ ದೇವಾಲಯಕ್ಕೆ ಬಳಸಿದ ಕಂಬಗಳೆಂಬುದರಲ್ಲಿ ಅನುಮಾನವಿಲ್ಲ. ಇದು ಒಂದು ಕಾಲದಲ್ಲಿ ಶಿವದೇವಾಲಯ ಮೇಲುಕೋಟೆಯಲ್ಲಿದ್ದುದನ್ನು ತಿಳಿಸುತ್ತದೆ. ನರಸಿಂಹಸ್ವಾಮಿ ದೇವಾಲಯದ ಪಶ್ಚಿಮಕ್ಕಿರುವ ಬೃಹತ್ ಏಕಶಿಲಾ ಗಣಪತಿ ವಿಗ್ರಹವು ಗಂಗರು, ರಾಷ್ಟ್ರಕೂಟರು ಮತ್ತು ನಂತರದ ಚಾಲುಕ್ಯ ಸಂಪ್ರದಾಯಗಳನ್ನು ಹೋಲುತ್ತದೆ. ಈ ಮೂರ್ತಿಯ ಅಲಂಕಾರದ ಕೊರತೆ ನೈಜವಾದ ಕೈಗಳು ವಿಶಾಲವಾದ ವಕ್ಷಸ್ಥಳ, ವಿಶಾಲವಾದ ಭುಜಗಳು ಹಾಗೂ ಇನ್ನೂ ಕೆಲವು ಆರಂಭಿಕ ಮೂರ್ತಿಶಿಲ್ಪದ ಲಕ್ಷಣಗಳು ಗಂಗರ ಕಾಲದ ಶಿಲ್ಪಾಕೃತಿಯನ್ನು ಸ್ಪಷ್ಟವಾಗಿ ಹೋಲುತ್ತವೆ.

ಕುತೂಹಲವೆಂದರೆ ತುಂಡನೆಯ ದುಂಡಾದ ಗಂಗರ ಕಾಲದ ಸ್ತಂಭವು ಈ ವಿಗ್ರಹದ ಬಳಿ ಇದ್ದು ಇದು ದೀಪ ಉರಿಸುವ ಕಂಬವಾಗಿ ಉಪಯೋಗಿಸಲ್ಪಡುತ್ತಿದೆ. ಪ್ರಾಚ್ಯಶಾಸ್ತ್ರ ಅಧ್ಯಯನದಿಂದ ಚೋಳ ರಾಜ್ಯದ ಪ್ರಭಾವವಿದ್ದುದು ತಿಳಿಯುತ್ತದೆ. ಚೋಳರು ಶೈವಾರಾಧಕರಾಗಿದ್ದರು. ಮೇಲುಕೋಟೆಯ ಸುತ್ತಲಿನ ಪ್ರದೇಶಗಳೆಲ್ಲವೂ ಶಿವಾರಾಧನೆಯ ಪ್ರದೇಶವಾಗಿದ್ದವು. ಇದು ರಾಮಾನುಜರು ಬರುವ ಮುನ್ನ ಶೈವಧರ್ಮ ಕೇಂದ್ರವಾಗಿದ್ದುದನ್ನು ಖಚಿತಪಡಿಸುತ್ತದೆ. ಸ್ಥಳೀಯ ಐತಿಹ್ಯಗಳು ನಂಬಿಕೆಗಳು ಮತ್ತು ಆಚರಣೆಗಳು ಶೈವಧರ್ಮದ ಪ್ರಭಾವದ ಜೀವಂತಿಕೆಗೆ ಮತ್ತಷ್ಟು ಪುಷ್ಟಿನೀಡುತ್ತಿವೆ.

ಮೇಲುಕೋಟೆಯಲ್ಲಿ ವೈಷ್ಣವ ಮತ್ತು ಶೈವರ ಮತೀಯ ವಿರಸಗಳು ನಡೆದಿವೆ ಎಂಬುದಕ್ಕೆ ಶೈವದೇವಾಲಯದ ರೂಪಾಂತರ ಬಹಳ ಮುಖ್ಯ ಉದಾಹರಣೆಯಾಗಿದೆ. ಮೇಲುಕೋಟೆ ಯತಿರಾಜ ಮಠದಲ್ಲಿರುವ ಊರಿನ ಜೀರ್ಣೋದ್ಧಾರಕ್ಕೆ ಸಂಬಂಧಿಸಿದ ಪುರಾತನ ಓಲೆ ಪುಸ್ತಕದ ಕಾಫಿಯಲ್ಲಿ, ರಾಮಾನುಜರು ನಿಯಮಿಸಿದ 'ನಿಯಮನಪ್ಪಡಿ' ಎಂಬ ಶಾಸನದಲ್ಲಿರುವಂತೆ, ದೇವಸ್ಥಾನದ ವಿಚಾರಣಕರ್ತರಾದ ತಿರುನಾರಾಯಣಜೀಯರಿಗೆ ಶಿವದೇವಾಲಯದ ಶಿವಮತದ ಸನ್ಯಾಸಿಯೊಡನೆ ಕೂಡಿ ನಿತ್ಯ ಪೂಜೆಗಳು ಮತ್ತು ರಥೋತ್ಸವ ಮಾಡಿಸುವುದು ಎಂಬ ಉಲ್ಲೇಖವಿದೆ.[95] ವಿಷ್ಣುವರ್ಧನನು ಕೊಟ್ಟ ಲಕ್ಷವರಹಗಳಿಂದ ನಾರಾಯಣಸ್ವಾಮಿ ಸನ್ನಿಧಿಯನ್ನು ಜೀರ್ಣೋದ್ಧಾರ ಮಾಡಿ ಉಳಿದ ಹಣದಿಂದ ಶಿವದೇವಾಲಯ ಜೀರ್ಣೋದ್ಧಾರವಾಗಿರುವುದು ತಿಳಿದು ಬರುತ್ತದೆ. ದೇವಾಲಯದ ಪರಿಜನರಿಗೆ ಸುತ್ತಲೂ ಮನೆಗಳನ್ನು ಕಟ್ಟಲು ನಿಯಮಿಸಿದೆ. ಶಿವನ ಕೈಂಕರ್ಯವನ್ನು ನೀವೇ ವಿಚಾರಿಸಿಕೊಂಡು ಬರುವುದು ಎಂದು ಸಹ ನಿಯಮಿಸಿದರು. ಪ್ರಾಚ್ಯಶಾಸ್ತ್ರ ಅಧ್ಯಯನ ಮತ್ತು ಶಾಸನಗಳ ಅಂಶಗಳಿಂದ ಇಲ್ಲಿ ಶಿವಾಲಯವಿದ್ದುದು ದೃಢಪಡುತ್ತದೆ. ಆದರೆ ಇಂದು ಆ ದೇವಾಲಯ ಭಕ್ತಿ ಪರಂಪರೆಯ ವೈಷ್ಣವ ಸಂತರಾದ ನಮ್ಮಾಳ್ವಾರ್ ದೇವಾಲಯವಾಗಿ ರೂಪಾಂತರಗೊಂಡಿದೆ. ಕ್ರಿ.ಶ. 1369ರಲ್ಲಿ ಒಂದನೇ ಬುಕ್ಕನ ಕಾಲದ ಒಂದು ಶಾಸನವು ಈ ದೇವಾಲಯಕ್ಕೆ ಭೂಮಿದಾನ ಮಾಡಿದ ಅಂಶ ತಿಳಿಸಿದೆ.[96] ಅಂದರೆ ಇದಕ್ಕೆ ಮೊದಲೆ ದೇವಾಲಯವು ರೂಪಾಂತರಗೊಂಡಿದೆ.

ಇದೇ ಓಲೆಗರಿಯಲ್ಲಿ ಉಲ್ಲೇಖಿಸಿರುವಂತೆ ಮೇಲುಕೋಟೆಯ ಹೆಬ್ಬಾಗಿಲಿನ ಉತ್ತರಕ್ಕೆ ಸಾಗುವ ದಾರಿಯಲ್ಲಿ ಪಶ್ಚಿಮ ಮುಖದ 'ಮುಕ್ಕಣ್ಣಪ್ಪಂ' ಎಂಬ ಶಿವಾಲಯವಿದ್ದು ಅದು ಗರ್ಭಗೃಹ, ಸುಖನಾಸಿ, ಅರ್ಧಮಂಟಪ, ಮಹಾಮಂಟಪ, ಆಸ್ಥಾನಮಂಟಪ, ಒಳಪ್ರದಕ್ಷಿಣೆ, ಅಂಗಳ, ಪಡುವಣಬಾಗಿಲು, ಪಾಕಶಾಲೆ, ನೀರಹೊಂಡಗಳನ್ನು ಹೊಂದಿದೆ. ದಕ್ಷಿಣದ ಬಾಗಿಲಲ್ಲಿ ದೀಪಸ್ತಂಭ, ಪಶ್ಚಿಮದಲ್ಲಿ ಒಂದು ಬಾಗಿಲು, ಇವುಗಳೊಡನೆ

ವಿಮಾನದೊಡಗೂಡಿದ ದೇವಾಲಯವಿದೆ ಎಂಬ ವರ್ಣನೆಯಿದೆ. ಬೆಟ್ಟದ ಪಶ್ಚಿಮದ ಗ್ರಾಮದಂಚಿನಿಂದ ಎತ್ತಿದ ತೆರಿಗೆಯಿಂದ ಮಾಸೋತ್ಸವ, ಪಕ್ಷೋತ್ಸವ ಮುಂತಾದವನ್ನು ನಡೆಸಬೇಕೆಂಬ ಉಲ್ಲೇಖಗಳಿವೆ. ಈ ಎಲ್ಲಾ ಲಕ್ಷಣಗಳನ್ನು ಇಂದಿಗೂ ಈ ದೇವಾಲಯ ಹೊಂದಿದ್ದು ವೈಷ್ಣವ ಸಂಬಂಧಿ ಮೂರ್ತಿಶಿಲ್ಪಗಳು ಕೆತ್ತಲ್ಪಟ್ಟು ನಮ್ಮಾಳ್ವಾರ್ ದೇವಾಲಯವಾಗಿದೆ. ದೇವಾಲಯದ ಎದುರಿಗಿರುವ ಮಂಟಪದಲ್ಲಿರುವ ಲಿಂಗದಶಿಲ್ಪ ಹಾಗೂ ನಾಗಪ್ರತಿಮೆಗಳು ಇಂದಿಗೂ ನೋಡಸಿಗುತ್ತವೆ. ಆದರೆ ದೇವಾಲಯದ ಮೂಲಲಿಂಗ ಅದೃಶ್ಯವಾಗಿದೆ. ದೇವಾಲಯವು ಸಂಪೂರ್ಣವಾಗಿ ನವೀಕರಣವಾಗಿದೆ. ವೈಷ್ಣವ ದೇವಾಲಯಗಳಲ್ಲಿ ಸಾಮಾನ್ಯವಾಗಿರುವ ಅಲಂಕೃತ ಶಿಲ್ಪಗಳು, ಅಲಂಕೃತ ಕಂಬಗಳು ಇಲ್ಲಿಲ್ಲ. ಎಲ್ಲಾ ಕಂಬಗಳು ಚಪ್ಪಟೆಯಾಗಿ ನಿರಲಂಕೃತವಾಗಿವೆ. ವೈಷ್ಣವ ತಿಲಕವನ್ನು ಸುಖನಾಸಿಯ ದ್ವಾರಬಾಗಿಲಿನಲ್ಲಿ ಅಪ್ರಬುದ್ಧವಾಗಿ ಕೆತ್ತಲಾಗಿದೆ. ಸ್ಥಳೀಯ ಐತಿಹ್ಯದಂತೆ ಇಲ್ಲಿದ್ದ ಲಿಂಗವನ್ನು ನಂಜನಗೂಡಿಗೆ ಸ್ಥಳಾಂತರಿಸಲಾಯಿತು. ನಂತರ ಅದು ಪ್ರಸಿದ್ಧ ಶೈವ ಕೇಂದ್ರವಾಗಿ ಪ್ರಸಿದ್ದಿಗೆ ಬಂದಿತು ಎಂಬ ನಂಬಿಕೆಯಿದೆ. ಮತ್ತೊಂದು ನಂಬಿಕೆಯಂತೆ ಮೇಲುಕೋಟೆಯಿಂದ 5 ಮೈಲಿ ದೂರದ ನಾರಾಯಣದುರ್ಗದಲ್ಲಿರುವ ಲಿಂಗವೇ ಇದು ಎನ್ನಲಾಗಿದೆ. ಈ ದುರ್ಗದಲ್ಲಿರುವ ನಾರಾಯಣನ ಪ್ರತಿಮೆಯ ಬದಲಾಗಿ ಲಿಂಗಸ್ಥಾಪಿಸಲಾಯಿತು ಎಂಬ ಸ್ಥಳೀಯರ ಹೇಳಿಕೆಗೆ ಪೂರಕವಾಗಿ ಇಲ್ಲಿ ವಿಷ್ಣುವಿನ ದ್ವಾರಪಾಲಕರಾದ ಜಯವಿಜಯರ ಸುಂದರ ಮೂರ್ತಿಗಳಿವೆ. ಈ ಮೇಲಿನ ಎಲ್ಲಾ ಅಂಶಗಳು ಶೈವ ಮತ್ತು ವೈಷ್ಣವರ ಮತೀಯ ಭಿನ್ನಾಭಿಪ್ರಾಯಗಳನ್ನು ಹೊರಹಾಕುತ್ತವೆ.

ಮೇಲಿನ ವಿವರಗಳಿಂದ ತಿಳಿದು ಬರುವ ಅಂಶಗಳೆಂದರೆ ವಿಷ್ಣುವರ್ಧನನು ವೈಷ್ಣವನಾದರೂ ಧಾರ್ಮಿಕ ಸಾಮರಸ್ಯವನ್ನು ಮೆರೆದಿದ್ದಾನೆ. ರಾಮಾನುಜರು ಶಿವದೇವಾಲಯಕ್ಕೆ ಸಮಾನ ಆಸಕ್ತಿ ಹೊಂದಿರುವುದು ತಿಳಿದು ಬರುತ್ತದೆ. ರಾಜನಿಗೆ ಇಲ್ಲಿ ಪ್ರಭುತ್ವದ ಅಗತ್ಯತೆಯ ಅರಿವು ಇದ್ದುದರಿಂದ ಇಲ್ಲಿ ಅಸಮಾನತೆಗೆ ಆಸ್ಪದ ಕೊಡಲಿಲ್ಲ. ಇದನ್ನು ಹೊಯ್ಸಳರ ಇನ್ನಿತರ ಶಾಸನಗಳು ದೃಢಪಡಿಸುತ್ತವೆ.

ರಾಮಾನುಜರು ಶೈವ ತತ್ವಗಳಿಗೆ ಭೇದಹೊಂದಿದ್ದರೂ ಅವರ ಆರಾಧನೆಗೆ ಅಡ್ಡಿಯಾಗಲಿಲ್ಲ. ಆದರೆ ಬಹುಸಂಖ್ಯಾತರೂ ಮತ್ತು ಪ್ರಬಲವಾಗಿದ್ದ ಶೈವಮಂತಾನುಯಾಯಿಗಳನ್ನು ವೈಷ್ಣವ ಮತದ ಬೆಳವಣಿಗೆಗೆ ಪೂರಕವಾಗಿ ಬಳಸಿಕೊಳ್ಳುವ ಉದ್ದೇಶವಿದ್ದಂತೆ ತೋರುತ್ತದೆ. ಆದರೆ ಬಹಿರಂಗವಾಗಿ ಎಲ್ಲಿಯೂ ರಾಮಾನುಜರಿಗೆ ಶೈವದ್ವೇಷವಿದ್ದಂತೆ ಕಂಡುಬರುವುದಿಲ್ಲ. ಅವುಬಲರಾಜನ ಮಕ್ಕಳಾದ ವೆಂಕಟಾದ್ರಿರಾಜನು ಕೆಲವು ಗ್ರಾಮಗಳನ್ನು ನಮ್ಮಾಳ್ವಾರ್ ದೇವಾಲಯಕ್ಕೆ ದಾನ ನೀಡಿದ್ದಾನೆ. ಅಂದರೆ ಅದಕ್ಕೆ

ಮುಂಚೆಯೇ ದೇವಾಲಯವು ರೂಪಾಂತರಗೊಂಡಿದೆ. ಇದಕ್ಕೆ ಹಿಂದೆ ಎಲ್ಲಿಯೂ ನಮ್ಮಾಳ್ವಾರ್ ದೇವಾಲಯದ ಉಲ್ಲೇಖವಿಲ್ಲ. (ಕ್ರಿ.ಶ. 1368) ಹೊಯ್ಸಳರ ಅವನತಿಯ ಅನಂತರ ಶೈವಮತವೂ ತನ್ನ ಪ್ರಾಬಲ್ಯ ಕಳೆದುಕೊಳ್ಳಲಾರಂಭಿಸಿತು. ನಿರಂತರ ರಾಜಾಶ್ರಯ, ಹೆಚ್ಚಾದ ಮತಾನುಯಾಯಿಗಳು ದಾನಧರ್ಮಗಳಿಂದ ವೈಷ್ಣವಧರ್ಮ ಮೇಲುಕೋಟೆಯಲ್ಲಿ ಪ್ರಬಲವಾಯಿತು. ವೈಷ್ಣವರ ಪ್ರಾಬಲ್ಯದಿಂದ ಶೈವಧರ್ಮ ಕ್ಷೀಣಿಸಲಾರಂಭಿಸಿತು.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾಗಿ ಹೊಸದೊಂದು ಆಡಳಿತ ಕ್ರಮ ಜಾರಿಗೆ ಬಂದ ನಂತರ ಶೈವ ಮತ್ತು ವೈಷ್ಣವರ ತಾತ್ವಿಕ ನಿಲುವುಗಳು ಸಂಘರ್ಷಾತ್ಮಕವಾದ ಸಂಕೀರ್ಣತೆಯನ್ನು ಸೃಷ್ಟಿಸಿದವು.[97] ಇದಕ್ಕೆ ಮೇಲುಕೋಟೆಯಲ್ಲಿ ಸಂಕೀರ್ಣತೆಯನ್ನು ಸೃಷ್ಟಿಸಿದವು. ಇದಕ್ಕೆ ಮೇಲುಕೋಟೆಯಲ್ಲಿ ಅವರ ಕಾಲದಲ್ಲಿ ನಡೆದ ದೇವಾಲಯ ರೂಪಾಂತರ ಉದಾಹರಣೆ. ಅರಸರ ಸಹಿಷ್ಣುತೆಯ ಭಾವನೆಗಳು 'ಹರಿ-ಹರ' ಪರಂಪರೆಯನ್ನು ರೂಪಿಸಿದ್ದವು. ಇದನ್ನು ಮೇಲುಕೋಟೆಗೆ ಹತ್ತಿರದಲ್ಲಿರುವ ಸೋಮನಾಥಪುರ ದೇವಾಲಯ ಪ್ರತಿನಿಧಿಸುತ್ತಿತ್ತು. ಆದರೂ ಇಲ್ಲಿ ವಿರಸಗಳಿದ್ದುದು ಗಮನಾರ್ಹ. ದೇವಾಲಯ ರೂಪಾಂತರ ಮಾಡಿದಾಗಲೂ ಇಲ್ಲಿ ಶೈವರಿಂದ ಪ್ರಬಲ ಪ್ರತಿರೋಧ ವ್ಯಕ್ತವಾಗದಿರುವುದಕ್ಕೆ ಅದರ ಪ್ರಾಬಲ್ಯದ ಕುಗ್ಗುವಿಕೆಯ ಪ್ರಮಾಣ ಅರಿವಾಗುತ್ತದೆ. ಹೊಯ್ಸಳರ ಕಾಲದವರೆಗೆ ಸಾಮರಸ್ಯ ಸ್ಥಿತಿಯಲ್ಲಿದ್ದ ಮೇಲುಕೋಟೆ ನಂತರ ಅದನ್ನು ಮರೆತಿದ್ದು, ವಿಜಯನಗರದ ಅರಸರ ಪ್ರಭಾವ ಈ ಕ್ಷೇತ್ರದಲ್ಲಿ ಕಡಿಮೆಯಾಗಿರುವುದನ್ನು ತೋರಿಸುತ್ತದೆ. ಚಾರಿತ್ರಿಕ ನೆಲೆಯಲ್ಲಿ ನೋಡುವುದಾದರೆ ಧಾರ್ಮಿಕ ಪಂಥಗಳ ಅಸಹಿಷ್ಣುತೆ ತಾವು ಒಂದು ನಿರ್ದಿಷ್ಟ ಧಾರ್ಮಿಕ ಸಮುದಾಯಕ್ಕೆ ಸೇರಿದವರು ಎಂಬ ಭಾವನೆಯನ್ನು ಪ್ರತಿಬಿಂಬಿಸುತ್ತವೆ. ಆದರೆ ಅವು ಆ ಪಂಥಗಳ ವಿರುದ್ಧ ಹಿಂದೂಗಳೆಲ್ಲರು ತಳೆದ ಒಟ್ಟು ದೃಷ್ಟಿಕೋನವನ್ನು ಪ್ರತಿನಿಧಿಸುವುದಿಲ್ಲ. ಅಂದರೆ ದೇವಾಲಯಗಳು ಎಂಬ ಸ್ಮಾರಕಗಳು ಕೇವಲ ಒಂದು ಗುಂಪಿನ ಪ್ರಯತ್ನದ ಫಲವಾಗಿ ನಿರ್ಮಾಣವಾದವು.

ಶೈವ ಮತ್ತು ವೈಷ್ಣವರ ವಿರಸಕ್ಕೆ ಮತ್ತೊಂದು ಪೂರಕ ಅಂಶವೆಂದರೆ ಮೇಲುಕೋಟೆಯ ಮುಖ್ಯ ದೇವಾಲಯ ನಾರಾಯಣಸ್ವಾಮಿ ದೇವಾಲಯ. 'Melkote through the ages'ನಲ್ಲಿ ರವೀಂದ್ರನಾಥ ಆರ್ ಕರಣಿಕ್ ಅವರು ಈ ದೇವಾಲಯದ ಮೂಲ ಮೂರ್ತಿ ಶಿವನೆಂದು ಪ್ರತಿಪಾದಿಸಿದ್ದಾರೆ. ಚೋಳರ ಪ್ರಭಾವ ಮೇಲುಕೋಟೆಯಲ್ಲಿದ್ದುದು, ಸುತ್ತಲಿನ ಹಾಗೂ ಸ್ಥಳೀಯರು ಬಹುತೇಕ ಶಿವನ ಆರಾಧಕರಾಗಿರುವುದು ಹಾಗೂ ರಾಮನ ಪೌರಾಣಿಕ ಘಟನೆಗಳು ಇದು ಶೈವ ದೇವಾಲಯ ಎಂದು ಹೇಳುತ್ತವೆ ಎಂದಿದ್ದಾರೆ. ಸಂಸ್ಕೃತ

ಗ್ರಂಥಗಳು ತಿಳಿಸುವಂತೆ ರಾಮನು ಆರಂಭದಲ್ಲಿ ಶಿವನ ಆರಾಧಕನಾಗಿದ್ದು, ಇದನ್ನು ಶ್ರೀರಂಗದ ದೇವಾಲಯದ ಸ್ತಂಭದಲ್ಲಿ ಗುರುತಿಸಲಾಗಿದೆ.

ವೈಷ್ಣವರು ಯಾವಾಗಲೂ ಮೊದಲಿನ ಆಧ್ಯತೆಯನ್ನು ಉನ್ನತ ಸಾಧನೆ ಮಾಡಿದವರಿಗೆ ಮೂರ್ತಿ ಸ್ಥಾಪಿಸುತ್ತಿದ್ದರು. ರಾಮನು ಈ ಆದ್ಯತೆ ನೀಡುವ ವ್ಯಕ್ತಿಗಳಲ್ಲಿ ಪ್ರಮುಖ ಎಂಬ ಆಧಾರದ ಮೇಲೆ ಈ ಅಭಿಪ್ರಾಯಕ್ಕೆ ಬಂದಿದ್ದಾರೆ. ರಾಮಾನುಜರು ಈ ದೇವಾಲಯವನ್ನು ನಾರಾಯಣಸ್ವಾಮಿ ಮೂರ್ತಿಯನ್ನಿಟ್ಟು ರೂಪಾಂತರಿಸಿದ್ದರು ಎಂಬುದು ಇವರವಾದ.[98] ಆದರೆ ಆಚಾರ್ಯರು ಮೂರ್ತಿಭಂಜಕರಾಗಿ ಕೆಲಸ ಮಾಡಿರುವುದಕ್ಕೆ ಸ್ಪಷ್ಟ ದಾಖಲೆಗಳಿಲ್ಲ. ಈ ದೇವಾಲಯವು ಆಗಮಶಾಸ್ತ್ರಗಳ ಹಿನ್ನೆಲೆಯಿಂದ ಕಟ್ಟಲ್ಪಟ್ಟಿದೆ ಹಾಗೂ ರಾಮನು ಶಿವನ ಆರಾಧಕನಾಗಿದ್ದನು ಎಂಬುದು ವಾಲ್ಮೀಕಿ ರಾಮಾಯಣದಲ್ಲೆಲ್ಲಿಯೂ ಉಲ್ಲೇಖಗೊಂಡಿಲ್ಲ.

ಮತ್ತೊಂದು ಗಮನಾರ್ಹ ಅಂಶವೆಂದರೆ ಶೈವ ಮತ್ತು ವೈಷ್ಣವರ ವಿರಸಗಳು ಈ ಸ್ಥಳದಲ್ಲಿ ನಿರಂತರವಾಗಿದ್ದುದು. ಅದು 20ನೇ ಶತಮಾನದ ಆರಂಭದಲ್ಲಿ ಉಂಟಾದ ಒಂದು ಧಾರ್ಮಿಕ ಭಿನ್ನಾಭಿಪ್ರಾಯದಿಂದ ತಿಳಿದುಬರುತ್ತದೆ. ಮೇಲುಕೋಟೆಯ ಮುಖ್ಯ ಬೀದಿಯಾದ ಕಲ್ಯಾಣಿ ಬೀದಿಯಲ್ಲಿ ವಿನಾಯಕನ ಮೂರ್ತಿಯನ್ನು ಬಾಜಾಭುಜಂತ್ರಿಯೊಂದಿಗೆ ಕೊಂಡೊಯ್ಯುವ ವಿಚಾರದಲ್ಲಿ ಇಲ್ಲಿನ ಶ್ರೀ ವೈಷ್ಣವರು ಮತ್ತು ಶೈವರ ನಡುವೆ ಭಿನ್ನಾಭಿಪ್ರಾಯ ಉಂಟಾಗಿ, ಮೂರ್ತಿಯನ್ನು ಕೊಂಡೊಯ್ಯದಂತೆ ನಿರ್ಬಂಧಿಸಿದಾಗ ವಿಚಾರವು ಡಿಸ್ಟಿಕ್ ಮಾಜಿಸ್ಟ್ರೇಟ್ ಬಳಿ ವಿಚಾರಣೆಗೊಂಡಿತು. 1919ರಲ್ಲಿ ಈ ಬೀದಿಗಳಲ್ಲಿ ಶ್ರೀ ವೈಷ್ಣವರು ವಾಸವಿರುವ ಕಾರಣ ಹಾಗೂ ಚೆಲುವನಾರಾಯಣಸ್ವಾಮಿ ಮತ್ತು ಸಂಬಂಧಿಸಿದ ಮೂರ್ತಿಯನ್ನು ಮಾತ್ರ ಮೆರವಣಿಗೆ ಮಾಡುವ ಸಂಪ್ರದಾಯವಿರುವ ಕಾರಣ ವಿನಾಯಕನನ್ನು ಮೆರಣಿಗೆಗೆ ಮಾಡುವಂತಿಲ್ಲ. ಆದರೆ ಭಾಜಾಭಜಂತ್ರಿ ಇಲ್ಲದೆಯೇ ವಿನಾಯಕನನ್ನು ಕೊಂಡೊಯ್ಯಬಹುದು. ಶಾಂತಿಗೆ ಭಂಗ ಭರುವುದೆಂಬ ಕಾರಣದಿಂದ ಈ ನಿರ್ಧಾರಕ್ಕೆ ಬರಲಾಯಿತು. 1926ರಲ್ಲಿ ಶೈವರು ಮತ್ತೆ ಮೈಸೂರು ಸರ್ಕಾರಕ್ಕೆ ಕೋರಿಕೆ ಸಲ್ಲಿಸಿದಾಗ ಶ್ರೀ ವೈಷ್ಣವ ಕೇಂದ್ರವಾಗಿರುವ ಇಲ್ಲಿ ಹಿಂದಿನಿಂದಲೂ ನಾರಾಯಣನನ್ನು ಮಾತ್ರ ಮೆರೆಸುವ ಸಂಪ್ರದಾಯವಿರುವುದರಿಂದ ಇನ್ನಿತರ ಮೂರ್ತಿಗಳನ್ನು ಮೆರೆಸಿದರೆ ಧಾರ್ಮಿಕ ಶಾಂತಿಗೆ ಧಕ್ಕೆ ಬರುತ್ತದೆ ಎಂಬ ಕಾರಣದಿಂದ ಮೈಸೂರು ಸರ್ಕಾರವು ಈ ಕೋರಿಕೆಯನ್ನು ತಿಸ್ಕರಿಸಿತು.[99]

ಇಲ್ಲಿ ಕೆಲವು ದೃಢಪಡಿಸುವ ಆಧಾರಗಳು ಶೈವ ಮತ್ತು ವೈಷ್ಣವರ ವಿರಸಗಳನ್ನು ತಿಳಿಸುತ್ತದೆ. ವೈಷ್ಣವರಿಗೆ ಒಂದು ಎಚ್ಚರಿಕೆ ಕೊಡಲಾಗಿದೆ. ಅದೆಂದರೆ 'ಶಿವನನ್ನು ಪೂಜಿಸಬಾರದು'. ಇದು ಮೇಲುಕೋಟೆಯಲ್ಲಿ ಅತ್ಯಂತ ಶಕ್ತಿಶಾಲಿಯಾಗಿದೆ. ಅದು ಮುಂದುವರೆದು "ಒಂದು ಕಾಡು ಆನೆಯಿಂದ ಜೀವಕ್ಕೆ ಅಪಾಯ ಬಂದರೆ, ರಕ್ಷಣೆಗೂ ಸಹ ಶಿವ ದೇವಾಲಯ ಪ್ರವೇಶಿಸಬಾರದು" ಎಂಬ ಮಾತಿದೆ. ವೈಷ್ಣವರು ಶಿವನ ಆರಾಧಕರ ಪ್ರಭುತ್ವ ಪಡೆಯಲು ನಾರಾಯಣಸ್ವಾಮಿ ಮೂರ್ತಿಯ ಪ್ರತಿಷ್ಠಾಪನೆಯ ನಂತರವೂ ಸಾಧ್ಯವಾಗಿಲ್ಲ.

ತೆಂಗಲೈ ಮತ್ತು ವಡಗಲೈ

13ನೇ ಶತಮಾನದಲ್ಲಿ ವಿಶಿಷ್ಟಾದ್ವೈತ ಶ್ರೀ ವೈಷ್ಣವಧರ್ಮ ಎರಡು ಕವಲುಗಳಾಗಿ ಒಡೆದು ಹೋಯಿತು. ಅವೆ ತೆಂಗಲೈ ಮತ್ತು ವಡಗಲೈ ಎಂಬ ವಿಭಾಗಗಳು. ವಡಗಲೈ ಎಂದರೆ ಉತ್ತರದ ಶಾಖೆ ಎಂದರ್ಥ. ತೆಂಗಲೈ ಎಂಬುದು ದಕ್ಷಿಣ ಭಾಗದ ಶಾಖೆ. ವಡಗಲೆಯವರು ಸಂಸ್ಕೃತ ಪ್ರಮಾಣ ಗ್ರಂಥಗಳಿಗೆ ಪ್ರಾಧಾನ್ಯ ಕೊಡುತ್ತಿದ್ದುದರಿಂದಲೂ ಹಾಗೆಯೇ ತೆಂಗಲೆಯವರು ದ್ರಾವಿಡ ಪ್ರಬಂಧಗಳಿಗೆ ಹೆಚ್ಚು ಪ್ರಾಧಾನ್ಯತೆಕೊಡುತ್ತಿದ್ದುದರಿಂದಲೂ ಈ ವಿಭಾಗ ತಲೆದೋರಿದೆ.[100] ತೆಂಗಲೈ ಶಾಖೆ ವರ್ಣಾಶ್ರಮ ಧರ್ಮ ನಿಯಮಗಳನ್ನು ಸಡಿಲಗೊಳಿಸುವ ಮನೋಭಾವ ಹೊಂದಿತ್ತು. ಆದರೆ ವಡಗಲೈ ಶಾಖೆ ವರ್ಣಾಶ್ರಮ ಧರ್ಮಗಳನ್ನು ವಿಧಿಸುವ ಪುರಾತನ ನಿಯಮಗಳನ್ನು ಸಡಿಲಗೊಳಿಸಲಿಚ್ಛಿಸಲಿಲ್ಲ.

ಇವೆರಡೂ ಶಾಖೆಗಳಿಗಿರುವ ಅನೇಕಾನೇಕ ಭೇದಗಳನ್ನು ನಿರೂಪಿಸಲಾಗಿದೆ. ವಡಗಲೈ ಶಾಖೆಯ ಪ್ರಧಾನ ಪ್ರವರ್ತಕರು ವೇದಾಂತದೇಶಿಕರು. ಪಿಳ್ಳೈಲೋಕಚಾರ್ಯರು ಮತ್ತು ಮಣವಾಳ ಮಹಾ ಮುನಿಗಳು ತೆಂಗಲೈಶಾಖೆಯ ಮುಖ್ಯ ಪ್ರವರ್ತಕರಾಗಿದ್ದಾರೆ. ಭಗವಂತನ ದಯೆಯನ್ನು ಸಂಪಾದಿಸಿಕೊಳ್ಳಲು ಪುರುಷಪ್ರಯತ್ನ ಅತ್ಯಾವಶ್ಯಕವೆಂಬುದು ವಡಗಲೆಯವರ ಸಿದ್ಧಾಂತ. ಆದರೆ ತೆಂಗಲೆಯವರು ಪುರುಷ ಪ್ರಯತ್ನಕ್ಕೆ ಬೆಲೆಯೇ ಇಲ್ಲವೆಂದು ಭಗವಂತನ ದಯೆ ಸಹಜವೂ ಅನಿವಾರ್ಯವೂ ಆಗಿರುವುದು ಇದಕ್ಕೆ ಕಾರಣವೆಂದೂ ಹೇಳಿ 'ನಿರ್ಹೇತುಕ ಕೃಪೆಯ' ಸಿದ್ಧಾಂತವನ್ನು ಪ್ರತಿಪಾದಿಸುತ್ತಾರೆ.[101] ಲೋಕಾಚಾರ್ಯರ ಮಾರ್ಗದರ್ಶನದ ತೆಂಗಲೈ ಎಂಬ ಒಳಪಂಗಡವು ಭಗವಂತನು ಪ್ರತಿಯೊಬ್ಬ ಮನುಷ್ಯನನ್ನೂ ರಕ್ಷಿಸುತ್ತಾನೆ, ತಾಯಿಬೆಕ್ಕು ತನ್ನ ಮರಿಯನ್ನು ಹಿಡಿದುಕೊಂಡು ಅಪಾಯದಿಂದ ಪಾರುಮಾಡುವ ಹಾಗೆ (ಮಾರ್ಜಾಲ ಕಿಶೋರನ್ಯಾಯ) ಎಂದು ಹೇಳಿತು.

ಆದ್ದರಿಂದ ಮನುಷ್ಯನು ಏನೂ ಮಾಡಬೇಕಾಗಿಲ್ಲ, ಸುಮ್ಮನೆ ಭಗವಂತನಿಗೆ ಶರಣಾದರೆ ಸಾಕು. ವಡಗಲೈ ಪಂಥದಂತೆ ಮನುಷ್ಯನು ತನ್ನದೇ ಪ್ರಯತ್ನದಿಂದ ಭಗವಂತನನ್ನು ಹಿಡಿದುಕೊಳ್ಳಬೇಕು ಎಂದು ಹೇಳಿತು. ಮರಿಕೋತಿಯು ಅಪಾಯದಿಂದ ಪಾರಾಗಲು ತಾಯನ್ನು ಭದ್ರವಾಗಿ ಹಿಡಿದುಕೊಳ್ಳುವ ಹಾಗೆ (ಮರ್ಕಟ ಕಿಶೋರನ್ಯಾಯ) ಎಂದು ಹೇಳಿತು.

ತಾತ್ವಿಕ ನೆಲೆಯಲ್ಲಿ ಹುಟ್ಟಿಕೊಂಡ ಈ ಭಿನ್ನಾಭಿಪ್ರಾಯಗಳು ನಂತರದ ದಿನಗಳಲ್ಲಿ ಗಟ್ಟಿಗೊಂಡವು. ಮೇಲುಕೋಟೆಯಲ್ಲಿ ತೆಂಗಲೈ ಮತ್ತು ವಡಗಲೈ ಶಾಖೆಗಳಿಗೆ ಸೇರಿದ ವೈಷ್ಣವರಿದ್ದು ತಮ್ಮ ಭಿನ್ನತೆಯನ್ನು ಉಳಿಸಿಕೊಂಡಿದ್ದಾರೆ. ಅದು ಇಂದಿಗೂ ಬಲವಾಗಿರುವುದರ ಅಂಶಗಳು ದೇವಾಲಯಗಳ ಮೂಲಕ ವ್ಯಕ್ತವಾಗಿವೆ. ವೈಷ್ಣವ ಮತದ ಆಂತರಿಕ ವಿರಸಕ್ಕೆ ಇದು ಸ್ಪಷ್ಟ ಉದಾಹರಣೆಯಾಗಿದೆ. ಅಧ್ಯಯನದಿಂದ ತಿಳಿಯುವ ಅಂಶವೆಂದರೆ ಈ ಸ್ಥಳದಲ್ಲಿ ಆರಂಭದಲ್ಲಿ ತೆಂಗಲೈ ಶಾಖೆಯ ಪ್ರಭಾವ ಹೆಚ್ಚಾಗಿತ್ತು. ವಡಗಲೆ ಶಾಖೆಗೆ ಸೇರಿದ ಜನರು ಇಲ್ಲಿಗೆ ಯಾವಾಗ ಬಂದರು ಎಂದು ಹೇಳಲು ಸ್ಪಷ್ಟ ದಾಖಲೆಗಳಿಲ್ಲ. ಜನಶೃತಿಯಿರುವಂತೆ ಮೈಸೂರು ಅರಸರ ಕಾಲದಲ್ಲಿ ವಡಗಲೈ ಶಾಖೆಯ ಪ್ರಭಾವ ಮೇಲುಕೋಟೆಯಲ್ಲಿ ಹೆಚ್ಚಾಯಿತು. ಪರಕಾಲಸ್ವಾಮಿಗಳು ಮೈಸೂರು ಅರಸರ ಆಸ್ಥಾನದಲ್ಲಿ ರಾಜಗುರುಗಳಾಗಿದ್ದರು. ಇವರು ರಾಜನಿಗೆ ಮುದ್ರಾಂಕಿತ ಮಾಡಿದರು. ಆದರೆ ತೆಂಗಲೈ ಶಾಖೆಯವರು ಮುದ್ರಾಂಕಿತ ಮಾಡಲು ನಿರಾಕರಿಸಿದು. ಆನಂತರ ರಾಜನಿಗೆ ಸಮೀಪವರ್ತಿಯಾಗಿದ್ದ ಪರಕಾಲ ಸ್ವಾಮಿಗಳು ಮೇಲುಕೋಟೆ ದೇವಾಲಯ ಸಂಕೀರ್ಣದಲ್ಲಿ ಹೆಚ್ಚಿನ ಸೌಲಭ್ಯ ಮತ್ತು ಮರ್ಯಾದೆಗಳನ್ನು ಹೊಂದುವಂತಾದರು.

ವಡಗಲೈಯವರು ಮೇಲುಕೋಟೆಗೆ ಬಂದಾಗ ತೆಂಗಲೈಯವರೊಂದಿಗೆ ವಿರಸಗಳು ಅನಿವಾರ್ಯವಾಯಿತು. ಅಸ್ತಿತ್ವಕ್ಕಾಗಿ ಸಂಘರ್ಷಾತ್ಮಕ ಬೆಳವಣಿಗೆಗಳು ಸಾಮಾನ್ಯವಾದವು. ವಡಗಲೈಯವರು ಹೆಚ್ಚಿನ ಮಾನ್ಯತೆ ಪಡೆಯಲು ಹಲವು ದಾರಿಗಳನ್ನು ಕಂಡುಕೊಂಡರು. ವಡಗಲೈ ಶಾಖೆಯ ಹಿರಿಯರು ರಾಜನಿಗೆ ಹತ್ತಿರವಿದ್ದುದರಿಂದ ದೇವಾಲಯದಲ್ಲಿ ಹೆಚ್ಚಿನ ಅವಕಾಶಗಳನ್ನು ಪಡೆದರು. ಈ ಎರಡು ಶಾಖೆಗಳವರು ತಮ್ಮ ಪ್ರತ್ಯೇಕತೆಯನ್ನು ಸ್ಥಳದಲ್ಲಿ ಕಾಯ್ದುಕೊಂಡಿದ್ದಾರೆ. ಇವರ ಆಚರಣೆಗಳು, ಹಬ್ಬಹರಿದಿನಗಳಲ್ಲಿ ವ್ಯಕ್ತವಾಗುತ್ತವೆ. ಚಾಂದ್ರಮಾನ ಮತ್ತು ಸೌರಮಾನಗಳಲ್ಲಿ ವಿಭಿನ್ನ ನಿಲುವುಗಳಿವೆ. ಇಬ್ಬರ ನಡುವೆ ವೈವಾಹಿಕ ಸಂಬಂಧಗಳಿಲ್ಲ. ಭೋಜನ ಪದ್ಧತಿಯಲ್ಲಿ ವ್ಯತ್ಯಾಸವಿದ್ದು, ಇಬ್ಬರ ನಡುವೆ ಸಹಭೋಜನವಿಲ್ಲ. ಗಂಡಸರಿಗಿಂತ ಹೆಂಗಸರಲ್ಲಿ ಈ ಭಿನ್ನಾಭಿಪ್ರಾಯಗಳು ಹೆಚ್ಚಾಗಿ ಆರಣೆಯಲ್ಲಿವೆ. ಮೇಲುಕೋಟೆ ದೇವಾಲಯ ಸಂಕೀರ್ಣದಲ್ಲಿ ಎರಡೂ ಶಾಕೆಗಳವರಿಗೂ ಪ್ರಾಧಾನ್ಯತೆ

ಕಲ್ಪಿಸಲಾಗಿದೆ. ಪ್ರಬಂಧ ಪಾರಾಯಣ ಮಾಡುವಾಗ ಈ ಶಾಖೆಗಳವರು ತಮ್ಮದೇ ಗುಂಪಿನಲ್ಲಿ ನಿಲ್ಲುತ್ತಾರೆ. ಉತ್ಸವಗಳಲ್ಲೂ ಹಿಂದೆ ಮುಂದೆ ನಿಲ್ಲುತ್ತಾರೆ. ವಿವಿಧ ಕೈಂಕರ್ಯಗಳಲ್ಲಿ ನಿರ್ದಿಷ್ಟ ಪಾಲು ಪಡೆದಿರುವ ಅಂಶವು ದೇವಾಲಯದ ಕೈಪಿಡಿಯಿಂದ ತಿಳಿಯುತ್ತದೆ. ಹೀಗೆ ಮೇಲುಕೋಟೆಯಲ್ಲಿ ಈ ಎರಡೂ ಶಾಖೆಗಳು ತಾತ್ವಿಕ ಭಿನ್ನಾಭಿಪ್ರಾಯಕ್ಕಿಂತ ವಿಭಿನ್ನವಾದ ಪ್ರತ್ಯೇಕತೆಯನ್ನು ಉಳಿಸಿಕೊಂಡಿದ್ದಾರೆ.

ಇವರ ಆಂತರಿಕ ವಿರಸಕ್ಕೆ ಒಂದು ಸ್ಪಷ್ಟ ಉದಾಹರಣೆಯೆಂದರೆ ದೇವರಿಗೆ ಧರಿಸುವ ನಾಮದ ವಿಚಾರದಲ್ಲಿ ಉಂಟಾಗಿರುವ ಗೊಂದಲ. ವೈಷ್ಣವರು ಧರಿಸುವ 'ಊರ್ಧ್ವಪುಂಡ್ರ' ನಾಮದಲ್ಲಿ ಈ ಎರಡೂ ಶಾಖೆಗಳು ಸ್ವಲ್ಪ ವ್ಯತ್ಯಾಸ ಕಾಯ್ದುಕೊಂಡಿವೆ. ಪೀಠವಿರುವ ನಾಮವನ್ನು ತೆಂಗಲೆಯವರು ಧರಿಸಿದರೆ. ಪೀಠರಹಿತವಾದ 'ಯು' ಆಕಾರದ ನಾಮವನ್ನು ವಡಗಲೈಯವರು ಧರಿಸುವರು. ಇಲ್ಲಿನ ಪ್ರಮುಖ ದೇವಾಲಯ ಯೋಗಾನರಸಿಂಹಸ್ವಾಮಿಗೆ ಯಾವ ನಾಮ ಧರಿಸಬೇಕು ಎಂಬ ವಿಷಯದಲ್ಲಿ ಎರಡೂ ಶಾಖೆಯವರು ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ಅರಸರರಿಗೆ ಹತ್ತಿರವಾದಾಗ ವಡಗಲೈಶಾಖೆಯವರ ನಾಮವನ್ನು ದೇವರಿಗೆ ಧರಿಸುತ್ತಿದ್ದರಿಂದ ಅದನ್ನು ಮುಂದುವರೆಸುವಂತೆ ಅವರು ಹೇಳುತ್ತಿದ್ದು, ತೆಂಗಲೆಯು ಮೂಲನಿವಾಸಿಗಳಾಗಿದ್ದು ತಮ್ಮ ನಾಮವನ್ನು ಧರಿಸುವಂತೆ ವಾದಿಸಿದ್ದಾರೆ. ಇದು ಇಂದಿನ ಸ್ಥಿತಿಯಲ್ಲದೆ ಶತಮಾನಗಳಿಂದಲೂ ಇಂತಹ ಮತೀಯ ಭಿನ್ನಭಾವನೆಗಳು ನಡೆಯುತ್ತಿದ್ದವು. ಸ್ಥಳದ ಕೆಲವು ತೆಂಗಲೆ ಮತ್ತು ವಡಗಲೆ ಪ್ರತಿನಿಧಿಸುವ ನಾಮಫಲಕಗಳಲ್ಲಿ ಭಿನ್ನವಾಗಿರುವುದು ಇದಕ್ಕೆ ಪುಷ್ಟಿನೀಡುತ್ತದೆ. ಮೈಸೂರು ಅರಸರ ಪ್ರಭಾವ ಈ ಸ್ಥಳದ ಮೇಲೆ ಕಡಿಮೆಯಾದ ನಂತರ ತೆಂಗಲೆ ನಾಮವನ್ನು ದೇವರಿಗೆ ಧರಿಸುತ್ತಿದ್ದರು. ಈ ಗೊಂದಲ ಮೊದಲು ನ್ಯಾಯಾಲಯಕ್ಕೆ ಬಂದಾಗ ನ್ಯಾಯಾಲಯವು ಯಥಾಸ್ಥಿತಿಯನ್ನು ಉಳಿಸಿಕೊಳ್ಳುವಂತೆ ಆದೇಶಿಸಿತ್ತು. ಆದರೆ ದೇವಾಲಯದಲ್ಲಿ ಈ ನಾಮಫಲಕವು ಅಪಹರಣವಾದ ಮೇಲೆ ಮತ್ತೆ ಈ ಗೊಂದಲವು ನ್ಯಾಯಾಲಯದಲ್ಲಿದ್ದು, ತಾತ್ಕಾಲಿಕವಾಗಿ ದೇವರಿಗೆ ತಿಲಕವನ್ನು (ಕೆಂಪ) ಮಾತ್ರ ಧರಿಸುವಂತೆ ನ್ಯಾಯಾಲಯ ಆದೇಶಿಸಿದೆ. ಹೀಗೆ ತಾತ್ವಿಕವಾಗಿ ವೈಷ್ಣವ ಮತದಲ್ಲಿ ಉಂಟಾದ ಭಿನ್ನಾಭಿಪ್ರಾಯಗಳು ಮತೀಯ ಸಾಮರಸ್ಯದ ಮೇಲೆ ಉಂಟುಮಾಡಿದ ಪ್ರಹಾರವು ದೇವಾಲಯಗಳ ಮೂಲಕ ಸ್ಪಷ್ಟವಾಗಿ ವ್ಯಕ್ತವಾದವು.

ಆಳ್ವಾರರು

ಪ್ರಮುಖ ಶ್ರೀ ವೈಷ್ಣವ ಕೇಂದ್ರವಾದ ಮೇಲುಕೋಟೆ ದೇವಾಲಯಗಳೊಂದಿಗೆ ಆಳ್ವಾರರ ಪ್ರಭಾವ ನಿಖಟವಾದುದು. ಆದ್ದರಿಂದ ಆಳ್ವಾರರ ಹಿನ್ನೆಲೆ ಮತ್ತು ಚಿಂತನೆಗಳ ವಿವರಣೆ ಇಲ್ಲಿ ಅತ್ಯಂತ ಉಪಯುಕ್ತವಾಗಿರುತ್ತದೆ. ರಾಮಾನುಜರ ಮೇಲೆ ಬಲವಾದ

ಪ್ರಭಾವ ಬೀರಿದುದು ಆಳ್ವಾರರ ತಮಿಳು ಭಕ್ತಿಸಂಪ್ರದಾಯ. ರಾಮಾನುಜ ದರ್ಶನದ ಈಶ್ವರವಾದದ ಆಧಾರವೂ ಅವರ ಸರ್ವಸಮಾನತೆಯ ಭಾವನೆಯೂ ಆಳ್ವಾರರ ತಮಿಳು ಭಕ್ತಿಸಂಪ್ರದಾಯದಿಂದ ಬಂದುದೆಂದು ಹೇಳಬಹುದು. ಈ ಧಾರ್ಮಿಕ ಬೆಳವಣಿಗೆಯ ಸೈದ್ಧಾಂತಿಕ ಅಂಶಗಳು ಭಕ್ತಿಮಾರ್ಗಗಳ ವ್ಯವಸ್ಥೆಯಲ್ಲಿ ಗುರುತಿಸಲ್ಪಡುತ್ತವೆ. ದಕ್ಷಿಣ ಭಾರತದಲ್ಲಿ ಮೊದಲಬಾರಿಗೆ 6ನೇ ಶತಮಾನದಲ್ಲಿ ಭಕ್ತಿಚಳುವಳಿ ಕಾಣಿಸಿಕೊಂಡಿತು. ಪ್ರಮುಖವಾಗಿ ಇದು ಸಾಮಾಜಿಕ ನಿರ್ಬಂಧಗಳ ವಿರುದ್ಧದ ಪ್ರತಿಕ್ರಿಯೆಯಾಗಿತ್ತು. ಚಳುವಳಿಯಲ್ಲಿ ಹಲವು ಸಂತರು ತಮ್ಮ ಬಲವಾದ ದೈವತ್ವ, ಆಧ್ಯಾತ್ಮಿಕ ಯೋಗ, ತಮ್ಮ ವಿಶಾಲವಾದ ಅನುಭವಗಳಿಂದ ಜೀವನದ ಸಮಸ್ಯೆಗಳನ್ನು ನಿವಾರಿಸಲು ಪರಿಣಾಮಕಾರಿಯಾಗಿ ಮತ್ತು ಪ್ರಾಮಾಣಿಕವಾಗಿ ಪ್ರಯತ್ನಿಸಿದರು. ಆಳ್ವಾರರು ಮತ್ತು ನಾಯನ್ನಾರರಿಂದ ತಮಿಳುನಾಡಿನಲ್ಲಿ ಭಕ್ತಿ ಚಳುವಳಿ ಆರಂಭವಾಯಿತು. ಕರ್ನಾಟಕದಲ್ಲಿ 12ನೇ ಶತಮಾನದಲ್ಲಿ ಭಕ್ತಿ ಚಳುವಳಿ ಆರಂಭವಾಯಿತು. ಕೆಲವು ಹಿಂದೂ ಸಂತರು ಮತ್ತು ಆಚಾರ್ಯರು ಕ್ಷಿಪ್ರಗತಿಯಲ್ಲಿ ಪ್ರವರ್ಧಮಾನಕ್ಕೆ ಬಂದರು. ವೈದಿಕ ಮತ್ತು ಸಾಂಪ್ರದಾಯಿಕ ಹಿಂದೂ ಧರ್ಮದ ಅರ್ಥಹೀನ ಆಚರಣೆಗಳನ್ನು ವಿರೋಧಿಸುವ ಮೂಲಕ ಹಿಂದೂ ಧರ್ಮವನ್ನು ಮತ್ತೊಮ್ಮೆ ಶಕ್ತಗೊಳಿಸುವ ಉದ್ದೇಶವಿತ್ತು. ರಾಮಾನುಜರು ಇಲ್ಲಿಗೆ ಬರುವ ಮುನ್ನವೇ ಆಳ್ವಾರರ ವೈಷ್ಣವ ಧರ್ಮದ ಪ್ರಭಾವವು ಕರ್ನಾಟಕದ ಮೇಲೆ ಆಗಿತ್ತು ಎನ್ನಲು ಶಾಸನಾಧಾರಗಳಿವೆ. ತಿರುಮಕೂಡಲು ನರಸೀಪುರ ತಾಲ್ಲೂಕಿನ ಸುಮಾರು 1090 ರ ಒಂದು ಶಾಸನದಲ್ಲಿ ವಿಣ್ಣಕರ್ ಆಳ್ವಾರ್ ಎಂಬುವವರಿಗೆ ದತ್ತಿಕೊಟ್ಟ ವಿಷಯವಿದೆ.[102] ಇದನ್ನು ಬಿಟ್ಟರೆ ರಾಮಾನುಜರು ಕರ್ನಾಟಕಕ್ಕೆ ಬರುವ ಮುನ್ನ ತಮಿಳು ಆಳ್ವಾರರ ಪ್ರಭಾವದ ಪ್ರಮಾಣ ಅಳೆಯಲು ಬೇರೆ ಸಾಧನಗಳಿಲ್ಲ.

ತಮಿಳುನಾಡಿನಲ್ಲಿ ವಿಷ್ಣುಭಕ್ತಿಯು ಶಕ್ತಿಯುತ ಚಳುವಳಿಯಾಗಿ ಹೊರಹೊಮ್ಮಿತು. ಸರಣಿರೂಪದಲ್ಲಿ ಬಂದ ಬೋಧಕರ ಪ್ರಭಾವದಿಂದ ಇದು ಪ್ರಬಲವಾಯಿತು. ಅವರು ಸಾಂಪ್ರದಾಯಿಕವಾಗಿ ಆಳ್ವಾರರು ಎಂಬ ಹೆಸರಿನಿಂದ ಗೌರವಿಸಲ್ಪಡುತ್ತಾರೆ. ತಮಿಳು ಪದವಾದ 'ಆಳ್ವಾರ್' ಎಂದರೆ ಜಗತ್ತಿನ ಭಕ್ತಿಯನ್ನು ಯಾರು ಆಳುತ್ತಾರೆಯೊ ಅವರು, ಎಂಬ ಅರ್ಥವಿದೆ. ದೇವರಿಗೆ ಸಂಪೂರ್ಣ ಶರಣಾಗುವ ತಮ್ಮ ತತ್ವಗಳ ಮೂಲಕ. ಶ್ರೀ ವೈಷ್ಣವ ಮತಕ್ಕೆ ವೈಶಿಷ್ಟ್ಯಪೂರ್ಣ ರೂಪವನ್ನು ಕೊಟ್ಟರು. ಆಳ್ವಾರರು ಸ್ಥಳೀಯ ತಮಿಳು ಭಾಷೆಯನ್ನು ಬಳಸಿದರು. ತಮ್ಮ ಧಾರ್ಮಿಕ ತತ್ವಗಳ ಅಭಿವ್ಯಕ್ತಿ ಮತ್ತು ಅದರಲ್ಲಿ ಜನರ ಹೃದಯಸ್ಪರ್ಶಿ ಮೌಲ್ಯಗಳ ಅಂಶಗಳಿವೆ.

ಆಳ್ವಾರರ ಕಾಲಕ್ಕೆ ಸಂಬಂಧಿಸಿದಂತೆ ಭಿನ್ನಾಭಿಪ್ರಾಯಗಳಿವೆ. ಸಾಂಪ್ರದಾಯಿಕ ಆಕರಗಳು ಕಲಿಯುಗದ ಆರಂಭಕ್ಕೆ ಆಳ್ವಾರರ ಕಾಲವನ್ನು ಹೇಳುತ್ತವೆ. ಆದರೆ ಕ್ರಿ.ಶ. 2 ರಿಂದ 8ನೇಯ ಶತಮಾನಗಳ ನಡುವೆ ಪ್ರವರ್ಧಮಾನಕ್ಕೆ ಬಂದರು ಎಂದು ನಂಬಲಾಗಿದೆ. ಸಂಪ್ರದಾಯದಂತೆ 12 ಆಳ್ವಾರರು ಕೆಳಗಿನ ಕಾಲಾನುಕ್ರಮದಂತೆ ಬದುಕಿದ್ದರು.

1) ಪೊಗ್ಯೆ ಆಳ್ವಾರ್

2) ಪೂದತ್ತ ಆಳ್ವಾರ್

3) ಪೈಯಿ ಆಳ್ವಾರ್

4) ತಿರುಮಲ್ಶೈ ಶೈ ಆಳ್ವಾರ್

5) ಕುಲಶೇಖರ ಆಳ್ವಾರ್

6) ತೊಂಡರಡಿಪೋಡಿ ಆಳ್ವಾರ್

7) ತಿರುಪ್ಪಣ್ ಆಳ್ವಾರ್

8) ತಿರುಮಂಗಿ ಆಳ್ವಾರ್

9) ಪೆರಿ ಆಳ್ವಾರ್

10) ಆಂಡಾಳ್

11) ನಮ್ಮಾಳ್ವಾರ್

12) ಮಧುರಕವಿ ಆಳ್ವಾರ್

ಆಳ್ವಾರರಲ್ಲಿ ಪೊಗ್ಯೆ, ಪೂದತ್ತ ಮತ್ತು ಪೆಯಿ ಆಳ್ವಾರರು ಆರಂಭದ ಆಳ್ವಾರರಾಗಿದ್ದು. 5 ಮತ್ತು 6ನೇ ಶತಮಾನಗಳಿಗಿಂತ ಹಿಂದೆಯೇ ಇವರು ಬದುಕಿದ್ದರು. ಅವರ ಬೋಧನೆಗಳು ಮೃದು ಮತ್ತು ಸರಳವಾಗಿದ್ದು ತಿಳಿಯಲು ಸರಳವಾಗಿದ್ದವು. ನಂತರ ತಿರುಮಲೈಶೈ ಆಳ್ವಾರರು ಬರುತ್ತಾರೆ. ಅವರು ತಮ್ಮ ಹೆಸರನ್ನು ಚೆಂಗಲ್‌ಪುಟ್ ಜಿಲ್ಲೆಯಲ್ಲಿರುವ ತಮ್ಮ ಹುಟ್ಟಿದ ಹಳ್ಳಿಯಿಂದ ಪಡೆದರು. ಅವರೇ ಹೇಳಿರುವಂತೆ ಇವರು ಮೊದಲನೇ ಮಹೇಂದ್ರವರ್ಮನ ಸಮಕಾಲೀನವರಾಗಿದ್ದಾರೆ.[103] ವೈಷ್ಣವಧರ್ಮ ಸ್ವೀಕರಿಸುವ ಮುನ್ನ ಇವರು ಜೈನರಾಗಿ, ಬೌದ್ಧರಾಗಿ ಮತ್ತು ಶೈವರಾಗಿ ನಂತರದಲ್ಲಿ ಅವರು ವೈಷ್ಣವ ಮತವನ್ನು ಆದರದಿಂದ ಸ್ವೀಕರಿಸಿದರು ಮತ್ತು ಆಳ್ವಾರರಾದರು.

ತೊಂಡರಡಿಪ್ಪಾಡಿ ಆಳ್ವಾರರು (ಆರಾಧಕನ ಪಾದದ ಧೂಳು) ಇವರು ಬ್ರಾಹ್ಮಣರಾಗಿದ್ದರು. ಅವರ ನಿಜನಾಮ ವಿಪ್ರನಾರಾಯಣ. ಇವರ ಕುರಿತ ಒಂದು ಕಥೆಯಂತೆ ಇವರು ನೃತ್ಯದ ಹುಡುಗಿಯನ್ನು ಪ್ರೀತಿಮಾಡಲಾಗಿ, ರಂಗನಾಥದೇವರು ತಾನೇ ಸಂಪೂರ್ಣವಾಗಿ ಅವರು ವಿವಾಹವಾಗಲು ಅನುವು ಮಾಡಿದರು. ಇವರು ತಮ್ಮ ಪದ್ಯಗಳಲ್ಲಿ ವೈಷ್ಣವೇತರರನ್ನು ಪ್ರಬಲವಾಗಿ ಟೀಕಿಸಿದ್ದಾರೆ. ವಿಷ್ಣುಭಕ್ತಿಯನ್ನು ಸಾರಿದ ಅವರ ಪ್ರಕಾರ ಅದೇ ಅತ್ಯುನ್ನತ ಶಕ್ತಿ. "ಯಾರು ವಿಷ್ಣುಭಕ್ತಿಯನ್ನು ತಮ್ಮ ಮನಸ್ಸಿನಲ್ಲಿ ಸ್ಥಿರವಾಗಿ ಹೊಂದಿರುತ್ತಾರೋ ಅವರು ಜೀವವಿರುವ ಎಲ್ಲವನ್ನೂ ಕೊಲೆ ಮಾಡಿದ ಪಾಪವನ್ನು ಹೊಂದಿದ್ದರೂ, ಅವರು ಪಾಪದ ಫಲವನ್ನು ಅನುಭವಿಸುವುದಿಲ್ಲ" ಎಂದಿದ್ದಾರೆ.[104] ಇವರು ಜೈನ ಮತ್ತು ಬೌದ್ಧಧರ್ಮಗಳಲ್ಲಿ ಅಸಹನೆ ಹೊಂದಿದ್ದರು.

ನಂತರದಲ್ಲಿ ಬರುವವರೇ ತಿರುಮಂಗಿ ಆಳ್ವಾರರು ಇವರು ಪ್ರಸಿದ್ಧ ಆಳ್ವಾರರುಗಳಲ್ಲಿ ಒಬ್ಬರು. ತಿರುವಳ್ಳಿ ತಿರುನಗರಿಯ ಮೂಲನಿವಾಸಿಗಳು ಹಾಗೂ ಗಮನಾರ್ಹವೆಂದರೆ ಇವರು ಶೂದ್ರ ಜಾತಿಗೆ ಸೇರಿದವರು. ಇವರು ಕುಮುದವಳ್ಳಿ ಎಂಬಾಕೆಯನ್ನು ಮದುವೆಯಾದರು. ಅವಳು ನಾರಾಯಣನ ಅಪ್ಪಟ ಭಕ್ತೆಯಾಗಿದ್ದು, ಅವಳ ಪ್ರಭಾವದಿಂದ ಇವರು ವೈಷ್ಣವರಾದರು ಕೆಲವು ಕಾಲ ಚೋಳರ ಸೈನ್ಯದಲ್ಲಿ ಸೇವೆ ಮಾಡಿದರು. ಇವರು ಧಾರ್ಮಿಕ ಭಕ್ತಿಯುಳ್ಳ ದರೋಡೆಕೋರರಾಗಿದ್ದರು. ನಾಗಪಟ್ಟಣಂನಲ್ಲಿರುವ ಚಿನ್ನದ ಬುದ್ಧನ ಪ್ರತಿಮೆಯನ್ನು ದರೋಡೆಮಾಡಿ, ಶ್ರೀರಂಗಂನ ದೇವಾಲಯದ ರಂಗಮಂಪಟವನ್ನು ಜೀರ್ಣೋದ್ಧಾರಮಾಡಿದರು. ಅವರ ಶ್ಲೋಕಗಳಲ್ಲಿ ದೇವರ ಮೂರ್ತಿಗಳ ವರ್ಣನೆಗಳಿವೆ. ಇವರ ಪದ್ಯಗಳಲ್ಲಿ ಅಂದಿನ ಧಾರ್ಮಿಕ ಪರಿಸ್ಥಿತಿಯು ಕಾಣಸಿಗುತ್ತವೆ. ಅವರು ಬೌದ್ಧ ಮತ್ತು ಜೈನರೊಂದಿಗೆ ಅಸಹನೆ ಹೊಂದಿದ್ದು, ಶೈವರೊಂದಿಗೆ ಸ್ನೇಹದಿಂದಿದ್ದರು. ಇವರ ಗೀತೆಗಳು ದೇವರೊಂದಿಗಿನ ಪ್ರೇಮವನ್ನು ವರ್ಣಿಸಿವೆ.

ಕುಲಶೇಖರ ಆಳ್ವಾರರು ಕೇರಳದ ರಾಜರಾಗಿದ್ದು, 8ನೇ ಶತಮಾನದಲ್ಲಿ ಬದುಕಿದ್ದರೆಂದು ತಿಳಿದುಬರುತ್ತದೆ. ಇವರು ಕೆಳವರ್ಗದ ಸಮಾಜದಿಂದ ಬಂದವರಾಗಿದ್ದರು. ತಮಿಳು ಮತ್ತು ಸಂಸ್ಕೃತಗಳಲ್ಲಿ ನಿಪುಣತೆಗಳಿಸಿದ್ದರು. ತಮಿಳು ದೇಶದಲ್ಲಿ ರಾಮನ ಪೂಜೆಯನ್ನು ಮಾಡಲು ತಳಪಾಯಹಾಕಿದರು. ಇವರು ಚಿದಂಬರಂನಲ್ಲಿ ನಟರಾಜನಿಗೆ ಸಂಬಂಧಿಸಿದ ಗೀತೆಗಳನ್ನು ಹಾಡುವಲ್ಲಿ ಅಲಕ್ಷ್ಯ ತೋರಲಿಲ್ಲ. ಅವರು ತಮ್ಮ ಸಿಂಹಾಸನವನ್ನು ತ್ಯಜಿಸಿ ತಮ್ಮ ಕೊನೆಯ ದಿನಗಳನ್ನು ಶ್ರೀರಂಗಂನಲ್ಲಿ ಕಳೆದರು. ಕೇರಳ ಮತ್ತು ತಮಿಳುನಾಡುಗಳಲ್ಲಿ ವೈಷ್ಣವ ಧರ್ಮದ ಬೆಳವಣಿಗೆಯಲ್ಲಿ ಇವರ ಪ್ರಭಾವ ಗುರುತರವಾದುದು.

ಪೆರಿ ಆಳ್ವಾರರು 8ನೇ ಶತಮಾನದ ಅಂತ್ಯ ಹಾಗೂ 4ನೇ ಶತಮಾನದ ಆರಂಭದಲ್ಲಿ ಬದುಕಿದ್ದರು. ಇವರು ತಿರುನಲ್ವೈಲಿ ಜಿಲ್ಲೆಯ ಶ್ರೀ ವಿಲ್ಲಿಪುತ್ತೂರಿನ ಬ್ರಾಹ್ಮಣರಾಗಿದ್ದರು. ಇವರು 'ವಿಷ್ಣುಚಿತ್ತ' ಎಂದು ಹೆಸರಾಗಿದ್ದರು. ಪಾಂಡ್ಯರಾಜ ಶ್ರೀಮಾರನ (815–862 ಕ್ರಿಶ) ಆಸ್ಥಾನದಲ್ಲಿ ನಡೆದ ಧಾರ್ಮಿಕ ವಾಗ್ವಾದದಲ್ಲಿ ನಾರಾಯಣನ ಶ್ರೇಷ್ಠತೆಯನ್ನು ಸ್ಥಾಪಿಸುವ ಪ್ರಯತ್ನ ಮಾಡಿದರು. ಇವರು ಆಂಡಾಳರ ಸಾಕುತಂದೆ.

ಆಂಡಾಳ್ ಪೆರಿಯಾಳ್ವಾರರ ಸಾಕುಮಗಳು. ಆಳ್ವಾರರ ಸ್ಥಾನ ಪಡೆದ ಏಕೈಕ ಮಹಿಳೆ. ಶ್ರೀ ವೈಷ್ಣವ ಆರಾಧಕರಲ್ಲಿಯೇ ಧೈನ್ಯತೆಯಿರುವ ವ್ಯಕ್ತಿತ್ವವಾಗಿದೆ. ಈಕೆ ಕ್ರಿಶ. 716ರಲ್ಲಿ ಜನಿಸಿದಳು.[105] ಅವಳು ತನ್ನನ್ನೇ ವಿಷ್ಣುವಿಗೆ ಅರ್ಪಿಸಿಕೊಂಡಳು. ಧಾರ್ಮಿಕ ಭಕ್ತಿಯ ಭಾವಪರವಶತೆಯನ್ನು ಪ್ರದರ್ಶಿಸಿದಳು. ಅವಳು ಆರಂಭದಿಂದಲೇ ತಾನೇ ದೇವರ ಪ್ರಿಯತಮೆ ಎಂದು ತಿಳಿದುಕೊಂಡಳು. (ವಿಜಯನಗರದ ಅರಸು ಶ್ರೀ ಕೃಷ್ಣದೇವರಾಯನ ತೆಲುಗು ಕೃತಿ ಆಮುಕ್ತ ಮಾಲ್ಯದ ಕಥಾವಸ್ತು ಆಂಡಾಳ್) ತಿರುಪ್ಪಾವಿ ಮತ್ತು ನಾಚ್ಚಿಯಾರ್ ತಿರುಮೊಳಿಗಳು ಅವಳ ಮಧುರವಾದ ಭಕ್ತಿಯಿಂದ ಸ್ವಾರಸ್ಯವಾಗಿ ರಚಿಸಿದ ರಚನೆಗಳಾಗಿವೆ. ಇಲ್ಲಿ ಕೃಷ್ಣನು ನಾಯಕ ಮತ್ತು ಈಕೆಯೇ ನಾಯಕಿಯಾಗಿದ್ದು, ತನ್ನ ಅಳುಕದ ಪ್ರೀತಿಯನ್ನು ಈ ಪದ್ಯಗಳಲ್ಲಿ ಅಭಿವ್ಯಕ್ತಿಗೊಳಿಸಿದ್ದಾಳೆ. ಅವಳು ದೇವರೊಂದಿಗೆ ಮದುವೆಯಾದಂತೆ ಕಂಡ ಕನಸನ್ನು, ಸುಂದರವಾದ ಗೀತೆಗಳಲ್ಲಿ ವರ್ಣಿಸಿದ್ದಾಳೆ. ಈ ಗೀತೆಗಳು ಇವತ್ತಿಗೂ ಶ್ರೀ ವೈಷ್ಣವರ ವಿವಾಹ ಸಂದರ್ಭದಲ್ಲಿ ಹಾಡಾಲಗುತ್ತದೆ. ಆಂಡಾಳರ ಗೀತೆಗಳು ಜನಸಾಮಾನ್ಯರನ್ನು ಮೊರೆಯಿಡುತ್ತಿವೆ ಮತ್ತು ಅವರ ಉನ್ನತ ಮಾನವೀಯತೆಯ ಅಂಶಗಳಿರುವ ಶ್ಲೋಕಗಳು ನಿಜವಾಗಿಯೂ ಭಾವಪೂರಿತ ಅಭಿವ್ಯಕ್ತಿಗಳಾಗಿವೆ.

ಕೊನೆಯ ಆಳ್ವಾರರೇ ನಮ್ಮಾಳ್ವಾರ್. ಶಠಗೋಪ ಅಥವಾ ಮಾರನ್ ಎಂದೂ ಸಹ ಕರೆಯುತ್ತಾರೆ. ಇವರು ತಿರುನಲ್ವೇಲಿ ಹತ್ತಿರ ಕುರುಗೂರಿನಲ್ಲಿ 'ವೆಲ್ಲಾಳ' (ಕೃಷಿಕ ಜಾತಿ) ಕುಟುಂಬದಲ್ಲಿ ಜನಿಸಿದರು. ಇವರಿಂದ ಕುರುಗೂರು ಗ್ರಾಮವು ನಂತರ ಆಳ್ವಾರ್ ತಿರುನಗರಿ ಎಂದು ಪ್ರಸಿದ್ಧಿಯಾಯಿತು. ಇವರು 9ನೇ ಶತಮಾನದ ಕೊನೆಯಲ್ಲಿ ಬದುಕಿದ್ದರು. ಅವರು ತಮ್ಮ 35ನೇ ವರ್ಷದಲ್ಲಿ ಆಧ್ಯಾತ್ಮಿಕದತ್ತ ವಾಲಿದರು. ಆ ಸಂದರ್ಭದಲ್ಲಿ ಇವರು ಶಠಗೋಪ (ಕಳ್ಳತನ ವಿರೋಧಿಸುವ) ಎಂಬ ಬಿರುದನ್ನು ಪಡೆದರು. ನಮ್ಮಾಳ್ವಾರ್ ಅವರ ಬೋಧನೆಗಳಲ್ಲಿ ರಾಮಾನುಜರ ಸಿದ್ಧಾಂತದ ಕುರುಹುಗಳನ್ನು ನೋಡಬಹುದು.[106] ಇದನ್ನು ಅವರ ತಿರು–ವಿರುಹರಿ, ತಿರು ಅಸಿರಿಯಮ್, ತಿರುವಂಡಾಡಿ ಮತ್ತು ತಿರುವಾಯ್‌ಮೊಳಿಗಳಲ್ಲಿ ಕಾಣಬಹುದು. ಕೆ.ಎ.ನೀಲಕಂಠಶಾಸ್ತ್ರಿಯವರು ಹೇಳಿರುವಂತೆ "ಜಗತ್ತಿನ ಪ್ರಸಿದ್ಧ ತತ್ವಜ್ಞಾನಿಯ ಅನುಭವ ಮತ್ತು ತತ್ವಜ್ಞಾನದ ಚಿಂತನೆಗಳು ಹಾಗೂ

ಗಹನವಾದ ಧರ್ಮವನ್ನು ಒಂದಾಗಿ ಸೇರಿಸಿವೆ".[107] ನಮ್ಮಾಳ್ವಾರ್ ಹೇಳುವಂತೆ ನಾರಾಯಣನಿಗೆ ಸ್ವಯಂ ಶರಣಾಗುವವನು ಅತ್ಯುನ್ನತ ಶಕ್ತಿ ಮತ್ತು ಒಳ್ಳೆಯಗುಣಗಳ ಅಂಶವಾಗಿರುತ್ತಾನೆ. ಇವರ ಗೀತೆಗಳು ಆಳ್ವಾರರು ರಚಿಸಿರುವ ಶ್ಲೋಕಗಳಲ್ಲಿ ಎರಡನೇ ದೊಡ್ಡ ಸಂಖ್ಯೆಯ ಗೀತೆಗಳಾಗಿವೆ.

ಆಳ್ವಾರರ ತತ್ವಗಳು ವೇದ ಮತ್ತು ಪ್ರಮಾಣ ಧರ್ಮಗ್ರಂಥಗಳಿಗೆ ಆಳವಾದ ಋಣಬದ್ಧತೆಯನ್ನು ಹೊಂದಿವೆ. ಭಕ್ತಿಶಾಲೆಯ ಆಧ್ಯಾತ್ಮಿಕ ವಾತಾವರಣ ಸೃಷ್ಟಿಸಿ, ಜನರ ನಾಯಕರಾಗಿ, ತಮ್ಮ ನಂಬಿಕೆಗಳನ್ನು ಹೆಚ್ಚು ಜನರಲ್ಲಿ ಪ್ರಚಾರ ಮಾಡಲು ಪ್ರಯತ್ನಿಸಿದರು. ಭಕ್ತಿ ಪ್ರಧಾನವಾದ ಅವರ ತಮಿಳು ಶ್ಲೋಕಗಳು ವೈಷ್ಣವ ವೇದಗಳಂತೆ ಕಂಡುಬರುತ್ತಿವೆ.[108]

ಮೇಲುಕೋಟೆ ದೇವಾಲಯಗಳೊಂದಿದೆ ತಮಿಳು ಭಕ್ತಿ ಸಂಪ್ರದಾಯದ ಆಳ್ವಾರರು ಹೊಂದಿರುವ ಸಂಬಂಧದ ಅರಿವು ಮತ್ತು ಚಾರಿತ್ರಿಕ ನೆಲೆಯಲ್ಲಿ ಪ್ರಾದೇಶಿಕವಾಗಿ ಆಳ್ವಾರರ ಚಿಂತನೆಗಳ ಪ್ರಭಾವದ ವಿಶ್ಲೇಷಣೆಯು ಸಹ ಅಗತ್ಯವಾಗಿದೆ. ಮೇಲುಕೋಟೆಯಲ್ಲಿ ಆಳ್ವಾರರಿಗೆ ಸಿಕ್ಕಿರುವ ಸ್ಥಾನಮಾನಗಳು ಅವರ ಪ್ರಭಾವವನ್ನು ನಿರೂಪಿಸುತ್ತವೆ. ಇಲ್ಲಿ ಪ್ರಮುಖ ಆಳ್ವಾರರಾದ ಕುಲಶೇಖರ ಆಳ್ವಾರ್, ಪೆರಿಯಾಳ್ವಾರ್, ತಿರುಮಂಗಿ ಆಳ್ವಾರ್ ಮತ್ತು ನಮ್ಮಾಳ್ವಾರ್‌ರಿಗೆ ಪ್ರತ್ಯೇಕವಾದ ದೇವಾಲಯಗಳನ್ನೇ ನಿರ್ಮಿಸಲಾಗಿದೆ. ಆಳ್ವಾರರ ರಚನೆಯಾದ ತಿರುವಾಯ್‌ಮೊಳಿ ಪದ್ಯಗಳಲ್ಲಿ ಮೇಲುಕೋಟೆಯ ಉಲ್ಲೇಖವಿದೆ. ನಿಗಧಿತ ಅವಧಿಗಳಲ್ಲಿ ಈ ದೇವಾಲಯಗಳಲ್ಲಿ ಉತ್ಸವಗಳು ಮತ್ತು ದ್ರಾವಿಡ ದಿವ್ಯ ಪ್ರಬಂಧಗಳನ್ನು ಹಾಡಲಾಗುತ್ತದೆ. ಆಳ್ವಾರರು ರಚಿಸಿದ ದೈವಿಕ ಪದ್ಯಗಳನ್ನು ದಿವ್ಯಪ್ರಬಂಧಗಳೆಂದು, ಅವು ವೇದಗಳಿಗೆ ಸಮನಾದುದು ಎಂಬ ನಂಬಿಕೆಯಿದೆ. ಗಮನಾರ್ಹ ಅಂಶವೆಂದರೆ 4000 ದಿವ್ಯಪ್ರಬಂಧಗಳಲ್ಲಿ 10 ಪದ್ಯಗಳು ಮಾತ್ರ ಮಧುರಕವಿಯಿಂದ ರಚಿತವಾಗಿದ್ದು (ನಮ್ಮಾಳ್ವಾರರ ಶಿಷ್ಯ) ಉಳಿದವು ನಮ್ಮಾಳ್ವಾರರಿಂದ ರಚನೆಯಾದುದಾಗಿವೆ. ವಿಶೇಷವೆಂದರೆ ಇತರ ವೈಷ್ಣವ ಕೇಂದ್ರಗಳಲ್ಲಿ 'ತಿರುಪ್ಪಲ್ಲಂಡು' ಎಂಬ ಪೆರಿಯಾಳ್ವಾರರ ರಚಿತ ಪದ್ಯದಿಂದ ಹಾಡಲು ಆರಂಭವಾದರೆ, ಮೇಲುಕೋಟೆಯಲ್ಲಿ 'ಕಣ್ಣಿನುಂ ಸಿರುತ್ತಂಬ' ಎಂಬ ಪದ್ಯದಿಂದ ಆರಂಬಿಸಿ ನಂತರ ತಿರುಪ್ಪಲ್ಲಂಡು ಹಾಡಲಾಗುತ್ತದೆ. ಇದು ತಿಳಿಸುವಂತೆ ಶ್ರೀವೈಷ್ಣವ ಆರಾಧಕನು, ಭಗವಂತನ ಆರಾಧಕನಿಗಿಂತ ಹೆಚ್ಚಿನ ಗೌರವ ಹೊಂದಿದ್ದಾನೆ. ಮೇಲುಕೋಟೆಯಲ್ಲಿ ಈ ಸಂಪ್ರದಾಯವಿದ್ದು, 'ಕಣ್ಣಿನುಂ ಸಿರುತ್ತಂಬ' ಹಾಡಿದ ನಂತರವೇ ಇತರ ದಿವ್ಯ ಪ್ರಬಂಧಗಳನ್ನು ಹಾಡಲಾಗುತ್ತದೆ.[109]

ಮೇಲುಕೋಟೆಯಲ್ಲಿ ನಡೆಯುವ ಉತ್ಸವಗಳಲ್ಲಿ ಆಳ್ವಾರರು ರಚಿಸಿದ ಪದ್ಯಗಳದೇ ಪ್ರಧಾನ ಪಾತ್ರವಾಗಿದೆ. ದೇವಾಲಯಗಳು ಆಳ್ವಾರರ ತತ್ವಪ್ರಧಾನ ಪದ್ಯಗಳನ್ನು ಹಾಡುವ ಮೂಲಕ ಜನರಿಗೆ ತಿಳಿಸುವ ಮಾಧ್ಯಮವಾಗಿ ಕೆಲಸ ಮಾಡಿವೆ. ಇತರ ಶ್ರೀ ವೈಷ್ಣವ ಕ್ಷೇತ್ರಗಳಂತೆ ಮೇಲುಕೋಟೆಯಲ್ಲಿ, ಮಾಘಮಾಸದಲ್ಲಿ ನಡೆಯುವ ಅಧ್ಯಯನೋತ್ಸವದಲ್ಲಿ, ನಾರಾಯಣಸ್ವಾಮಿ, ತಾಯಾರ್‌ಗುಡಿ, ನರಸಿಂಹ ಮತ್ತು ನಮ್ಮಾಳ್ವಾರ್ ದೇವಾಲಯಗಳಲ್ಲಿ 4000 ದಿವ್ಯ ಪ್ರಬಂಧಗಳನ್ನು ಮೂರು ಬಾರಿ ಹೇಳಲಾಗುತ್ತದೆ. ಬ್ರಹ್ಮೋತ್ಸವ ಮತ್ತು ನರಸಿಂಹ ಜಯಂತಿಗಳಂದು ತಿರುಮಂಗಿ ಆಳ್ವಾರರು ರಚಿಸಿದ ತಿರುಪಾಯ್‌ಮೊಳಿಯ 10 ಪದ್ಯಗಳನ್ನು ನರಸಿಂಹರಿಗೆ ಸಂಬಂಧಿಸಿದಂತೆ ಹಾಡುವರು. ಯದುಗಿರಿ ನಾಚ್ಚಿಯರ್ ತಿರುನಕ್ಷತ್ರ, ಪವಿತ್ರೋತ್ಸವ, ಪಲ್ಲವೋತ್ಸವ ಮತ್ತು ರಾಮಾನುಜರ ತಿರುನಕ್ಷತ್ರಗಳಂದು 10 ದಿನಗಳ ಕಾಲ ಆಳ್ವಾರರ ಪದ್ಯಗಳ ವರ್ಣನೆ ಮಾಡಲಾಗುತ್ತದೆ. ನಮ್ಮಾಳ್ವಾರ್ ತಿರುಮಂಗಿ ಆಳ್ವಾರ್, ಪಿಳ್ಳೈಲೋಕಾಚಾರ್ಯ ಮತ್ತು ಮನವಾಳ ಮಹಾಮುನಿಗಳ ತಿರುನಕ್ಷತ್ರಗಳಲ್ಲಿಯೂ, ಸಂಬಂಧಿಸಿದ ದೇವಾಲಯಗಳಲ್ಲಿ ಆಳ್ವಾರ್ ರಚಿತ ಹಾಡುಗಳನ್ನು ಹಾಡುವ ಸಂಪ್ರದಾಯವಿದೆ. ಏಕಾದಶಿ ದಿನದಂದು ನಾರಾಯಣನು ತಿರುಪತಿಯ ಶ್ರೀನಿವಾಸನಂತೆಯೇ ಅಲಂಕೃತವಾಗುವನು. ಆ ದಿನ ಆಂಡಾಳ್‌ರಿಂದ ರಚಿತವಾದ ನಾಚ್ಚಿಯಾರ್ ತಿರುವಾಯ್‌ಮೊಳಿಯನ್ನು ಹಾಡಲಾಗುತ್ತದೆ. ದಿವ್ಯಪ್ರಬಂಧಗಳು ಮೇಲುಕೋಟೆ ದೇವಾಲಯ ಆರಾಧನೆಯಲ್ಲಿ ಅತ್ಯಂತ ಮಹತ್ವದ ಸ್ಥಾನಗಳಿಸಿವೆ. ಆಳ್ವಾರ್ ಚಿಂತನೆಗಳನ್ನೊಳಗೊಂಡ ಹಾಡುಗಳನ್ನು ಹಾಡುವ ಸಂಪ್ರದಾಯ ಇಂದಿಗೂ ಮುಂದುವರೆದಿದೆ. ರಾಮಾನುಜರಿಗೆ ವಿಶಿಷ್ಟಾದ್ವೈತ ಸಿದ್ಧಾಂತ ರಚನೆಗೆ ಮುನ್ನೋಟ ಕೊಟ್ಟವರು ಆಳ್ವಾರರಾಗಿದ್ದು, ರಾಮಾನುಜರ ಸಾಂಪ್ರದಾಯಿಕ ನಿಯಮಗಳನ್ನವಲಂಬಿಸಿರುವ ಇಲ್ಲಿನ ದೇವಾಲಯಗಳು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಆಳ್ವಾರರೊಂದಿಗೆ ಸಂಬಂಧ ಹೊಂದಿವೆ. 12 ಆಳ್ವಾರರ ತಾಮ್ರದ ಪ್ರತಿಮೆಗಳು ಇಲ್ಲಿದ್ದು ನಿಗಧಿತ ಅವಧಿಗಳಲ್ಲಿ, ಉತ್ಸವಗಳು ನಡೆಸಲ್ಪಡುತ್ತವೆ.

ಆಳ್ವಾರರೊಂದಿಗೆ ಮೇಲುಕೋಟೆ ದೇವಾಲಯಗಳು ಅವಿನಾಭಾವ ಸಂಬಂಧ ಹೊಂದಿವೆ. ಆದರೆ ಧಾರ್ಮಿಕ ನೆಲೆಯಲ್ಲಿ ಮಾತ್ರ ಇದು ಕ್ರಿಯಾಶೀಲವಾದುದು. ಸ್ಪಷ್ಟವಾಗುತ್ತದೆ. ಆಳ್ವಾರರ ನೇರ ಪ್ರಭಾವವಿಲ್ಲದ ಇಲ್ಲಿನ ದೇವಾಲಯಗಳು ಸಾಮಾಜಿಕ ನೆಲೆಯಲ್ಲಿ ಉಂಟುಮಾಡಿದ ಬದಲಾವಣೆಗಳು ಪರಿಣಾಮಕಾರಿಯಾಗಿರಲಿಲ್ಲ. ರಾಮಾನುಜರಿಗೆ ಮುಂಚೆಯೇ ಶ್ರೀ ವೈಷ್ಣವ ಮತ ಕರ್ನಾಟಕದಲ್ಲಿ ಆಳ್ವಾರರಿಂದ ಪ್ರಚಾರವಾಗಿದ್ದುದನ್ನು ಶಾಸನಗಳು ದೃಢಪಡಿಸಿವೆ. ವೈಷ್ಣವಮತ ಪ್ರಚಾರದಲ್ಲಿ, ಭಕ್ತಿ ಸಂಪ್ರದಾಯದಿಂದ ಉದಿತವಾದ ಆಳ್ವಾರರ ತಾತ್ವಿಕ ಚಿಂತನೆಗಳನ್ನು ದೇವಾಲಯ ನಿರ್ಮಾಣದ ಮೂಲಕ ಬಲಪಡಿಸುವ ಪ್ರಯತ್ನ ನಡೆದಿದೆ. ವಿವಿಧ ಜಾತಿ-ವರ್ಗಗಳಿಂದ

ಬಂದಿದ್ದ ಆಳ್ವಾರರ ಉದಾತ್ತ ಚಿಂತನೆಗಳು ರಾಮಾನುಜರಿಗೆ ಧರ್ಮ ಪ್ರಸಾರದಲ್ಲಿ ಪ್ರಮುಖ ಪಾತ್ರವಹಿಸಿವೆ. ಭಕ್ತಿ ಪರಂಪರೆಯ ಮೂಲ ಉದ್ದೇಶವಾದ ಜಾತಿ ಅಸಮಾನತೆಯನ್ನು ತೊಡೆದುಹಾಕಲು ಆಳ್ವಾರು ಪ್ರಯತ್ನಿಸಿದರು. ಆದರೆ ಈ ಪ್ರಾದೇಶಿಕ ನೆಲೆಯಲ್ಲಿ ಅವರ ಪ್ರಭಾವ ಅಲ್ಪವಾದುದು. ಜಾತಿ ಸಮಾನತೆಯ ಕಲ್ಪನೆಯ ಸ್ವೀಕೃತಿ ವೈಷ್ಣವ ಮತ ಪ್ರಚಾರ ಮತ್ತು ಅನುಯಾಯಿಗಳ ಸಂಖ್ಯೆಯನ್ನು ಹೆಚ್ಚಿಸುವ ಪ್ರಯತ್ನವಾಯಿತು. ಮೇಲುಕೋಟೆಯಲ್ಲಿ ಆಳ್ವಾರರಿಗೆ ದೇವಾಲಯಗಳನ್ನು ನಿರ್ಮಿಸಿದ್ದರೂ, ಆ ಮೂಲಕ ಜಾತಿ ಸಮನ್ವಯವನ್ನು ಸಾರುವ ಅವರ ತತ್ವಗಳು ಸಾಕಾರವಾಗಿಲ್ಲ. ಇಂದಿಗೂ ಬಲವಾಗಿರುವ ಜಾತಿ ಅಸಮಾನತೆಗಳು ಇದನ್ನು ದೃಢಪಡಿಸುತ್ತವೆ. ತಮಿಳು ಪುರೋಹಿತವರ್ಗ ಆಳ್ವಾರರುಗಳನ್ನು ತಮ್ಮ ವೈಷ್ಣವಮತಕ್ಕೆ ಸೀಮಿತಗೊಳಿಸಿಕೊಂಡಿದ್ದಾರೆ. ಆಳ್ವಾರರ ತಾತ್ವಿಕ ಚಿಂತನೆಗಳು ತಮಿಳು ಭಾಷೆಯಲ್ಲಿದ್ದು, ಮೇಲುಕೋಟೆ ದೇವಾಲಯಗಳಲ್ಲಿ ಇದೇ ಭಾಷೆಯಲ್ಲಿ ಹಾಡಲಾಗುತ್ತದೆ. ಸ್ಥಳೀಯ ಭಾಷೆಯಾದ ಕನ್ನಡವನ್ನಾಡುವ ಜನರಿಗೆ ತಮಿಳು ಮತ್ತು ಸಂಸ್ಕೃತದ ಬಳಕೆಯಿಂದ ಅದರ ಪ್ರಭಾವ ವಿಫಲವಾಗಿದೆ. ಇಂದಿಗೂ ಸಂಸ್ಕೃತ ಮತ್ತು ತಮಿಳುಭಾಷೆಗಳಲ್ಲಿಯೇ ಹಾಡುವ ಕ್ರಮವು, ಕೇವಲ ಸಾಂಪ್ರದಾಯಿಕ ಆಚರಣೆಯ ಉದ್ದೇಶವನ್ನು ಬಿಂಬಿಸುವಂತಿದೆ. ಆಳ್ವಾರರ ದಿವ್ಯಪ್ರಬಂಧಗಳನ್ನು ವೇದಗಳಿಗೆ ಸಮಾನವಾದುವ ಎಂದು ಭಾವಿಸುವ ಮೂಲಕ, ವೈದಿಕ ಆಚರಣೆಗಳ ಪುನರ್ಬಲನಕ್ಕೆ ಅವಕಾಶವಾಯಿತು. ರಾಮಾನುಜರು ಸಾಂಪ್ರದಾಯಿಕತೆಯ ಚೌಕಟ್ಟಿನಲ್ಲಿಯೇ ಕೆಲಸ ಮಾಡಿದುದು, ಆಳ್ವಾರರ ತಾತ್ವಿಕ ನೆಲೆಗಳು ಔದಾರ್ಯವನ್ನು ಸೂಚಿಸುತ್ತಿದ್ದರೂ ಮಡಿವಂತಿಕೆಯ ಮುಸುಕಿನಲ್ಲಿ ಮರೆಯಾಗಿಬಿಟ್ಟವು. ಭಕ್ತಿ ಸಂಪ್ರದಾಯವು ಬ್ರಾಹ್ಮಣ ಸೂತ್ರಗಳಿಂದ ಬೇರ್ಪಡಿಸಿಕೊಂಡು ಬಹಿರಂಗ ಪ್ರತಿಭಟನೆಗೆ ಧುಮುಕಿದರು, ಆಳ್ವಾರರ ತಾತ್ವಿಕ ಪ್ರಭಾವ ಇಲ್ಲಿ ಬಸವಣ್ಣನವರ ಕಾಲದಲ್ಲಾದ ಧಾರ್ಮಿಕ ಆಂದೋಲನಗಳಂತೆ, ಯಾವುದೇ ಗುರುತರ ಸಾಮಾಜಿಕ ಬದಲಾವಣೆ ತರಲಿಲ್ಲ.

ವೈಷ್ಣವ ಮತಶ್ರದ್ಧೆಹೊಂದಿದ್ದ ಆಳ್ವಾರರು ಸಂಪೂರ್ಣವಾಗಿ ಭಗವಂತನಾದ ವಿಷ್ಣುವಿಗೆ ಶರಣಾಗುವ ತತ್ವನ್ನು ಆಧಾರವಾಗಿ ಹೊಂದಿದೆ. ಈ ಸೈದ್ಧಾಂತಿಕ ದೃಷ್ಟಿಗಳು ಭಗವದ್ಗೀತೆಯಲ್ಲಿ ಉಲ್ಲೇಖವಾಗಿವೆ. ವೈದಿಕ ಭಾಗವಗತ ಸಂಪ್ರದಾಯವನ್ನೇ ಆಳ್ವಾರರು ಅನುಸರಿಸಿಕೊಂಡು ಬಂದರು.[110] ವೈದಿಕ ಧರ್ಮವನ್ನು ಖಂಡಿಸಿದಾಗ ರಾಮಾನುಜರು ಅದನ್ನು ಸಮರ್ಥಿಸಿದರು. ಹೀಗೆ ವಿಷ್ಣುಕೇಂದ್ರಿತ ಪಂಥವಾಗಿ ಗುರುತಿಸಿಕೊಂಡು, ವೈಷ್ಣವೇತರ ಪಂಥಗಳ ಜೊತೆ ಮನಸ್ತಾಪ ಮತ್ತು ಭೇದಹೊಂದಿದರು. ಇದು ಮೇಲುಕೋಟೆಯ ಇತಿಹಾಸ ಮತ್ತು ದೇವಾಲಯ ಆರಾಧನಾ ಪದ್ಧತಿಗಳಿಂದ ದೃಢವಾಗುತ್ತದೆ. ಪ್ರಬಲ ಶೈವಮತ ಕೇಂದ್ರವಾಗಿದ್ದ ಮೇಲುಕೋಟೆ ವೈಷ್ಣವ ಕೇಂದ್ರವಾಗಿ ಪರಿವರ್ತನೆಯಾಯಿತು.

ಇಲ್ಲಿನ ವೈಷ್ಣವರು ಇತರ ಪಂಥಗಳೊಂದಿಗೆ ಅಸಮಾಧಾನ ಹೊಂದಿದರು. ತಿರುಮಲೈ ಶೈ ಆಳ್ವಾರರ ಒಂದು ಶ್ಲೋಕದಂತೆ "ಜೈನರು ಅಜ್ಞಾನಿಗಳು, ಬೌದ್ಧರು ದೇವರನ್ನು ಮರೆತವರು, ಶೈವರು ಸಣ್ಣಮನುಷ್ಯರು" ಎಂಬ ಮಾತಿದೆ.[111] ತೊಂಡರಡಿಪ್ಪಾಡಿ ಆಳ್ವಾರರು ತಮ್ಮ ಪದ್ಯಗಳಲ್ಲಿ ವೈಷ್ಣವೇತರರನ್ನು ಪ್ರಬಲವಾಗಿ ಟೀಕಿಸಿದ್ದಾರೆ. ಅವರ ಪ್ರಕಾರ ವಿಷ್ಣು ಮಾತ್ರ ಅತ್ಯುನ್ನತ ಶಕ್ತಿ. ಅವರ ಮಾತಿನಂತೆ "ಯಾರು ವಿಷ್ಣುವನ್ನು ಆರಾಧಿಸುವರೋ ಅವರು ಜೀವವಿರುವ ಎಲ್ಲವನ್ನು ಕೊಲೆ ಮಾಡಿದ ಪಾಪ ಹೊಂದಿದ್ದರು, ಪಾಪದ ಫಲವನ್ನು ಅನುಭವಿಸುವುದಿಲ್ಲ.[112] ಇವು ತಾವು ಒಂದು ನಿರ್ದಿಷ್ಟ ಧಾರ್ಮಿಕ ಸಮುದಾಯಕ್ಕೆ ಸೇರಿದವರು ಎಂಬ ಭಾವನೆಯನ್ನು ಪ್ರತಿಬಿಂಬಿಸುತ್ತವೆ. ಈ ರೀತಿಯ ಏಕನಿಷ್ಠ ಭಾವನೆಗಳು ಸಾಮರಸ್ಯದ ಬದಲು ಸಂಕೀರ್ಣತೆಯನ್ನು ಉಂಟುಮಾಡಿದವು. ಮೇಲುಕೋಟೆಯ ಶಿವದೇವಾಲಯವು 14ನೇ ಶತಮಾನದಲ್ಲಿ, ನಮ್ಮಾಳ್ವಾರ್ ದೇವಾಲಯವಾಗಿ ರೂಪಾಂತರವಾಗಿರುವುದು ಇದಕ್ಕೆ ಸ್ಪಷ್ಟ ಉದಾಹರಣೆಯಾಗಿದೆ.[113] ಈ ರೀತಿಯ ಧಾರ್ಮಿಕ ಬೆಳವಣಿಗೆಯು ಸಾಮಾಜಿಕ ಮೇಲುಗೈಯನ್ನು ಸಾಧಿಸುವ ಬ್ರಾಹ್ಮಣರ ಹಂಬಲವು ಕೆಲಸ ಮಾಡಿರುವುದನ್ನು ಸ್ಪಷ್ಟಪಡಿಸುತ್ತದೆ.

ಗ್ರಾಮದೇವತೆಗಳು ಮತ್ತು ಆರಾಧಕರು

ಗ್ರಾಮದೇವತೆ, ಅಧಿದೇವತೆ, ಕುಲದೇವತೆ, ಮನೆದೇವತೆ – ಈ ಮುಂತಾದ ಹೆಸರುಗಳಿಂದ ನಾವು ಜನಪದದೇವತೆಗಳನ್ನು ಕರೆಯುತ್ತೇವೆ. ಇವುಗಳ ಸಾಂಸ್ಕೃತಿಕ ಒಳನೋಟಗಳ ಸೂಕ್ಷ್ಮ ಅಧ್ಯಯನ ಇಲ್ಲಿ ಅಗತ್ಯವಾಗಿದೆ. ಗ್ರಾಮದೇವತೆ ಎಂದರೆ ಕೇವಲ ಧಾರ್ಮಿಕ ಆಚರಣೆ ಎಂದು ಭಾವಿಸುವುದಕ್ಕಿಂತ, ಗ್ರಾಮಜೀವನದ ಹಲವು ಹತ್ತು ಮುಖಗಳನ್ನು ತೆರೆದು ತೋರಿಸುವ ಸಾಧನ ಎಂದು ಹೇಳುವುದೇ ಸೂಕ್ತ.[114] ಜನಪದರ ಬದುಕು ಗ್ರಾಮದೇವತೆಗಳ ನಿಯಂತ್ರಣದಲ್ಲಿತ್ತು ಹಾಗೂ ಗ್ರಾಮದೇವತೆಗಳೊಂದಿಗೆ ಬೆಸೆದುಕೊಂಡಿರುತ್ತಿತ್ತು. "ಶಿವ ಮತ್ತು ವಿಷ್ಣುವಿನಂಥ ದೇವತೆಗಳು ಎಷ್ಟೇ ಮಾನ್ಯರಾಗಿದ್ದರೂ ಜನರ ಕಷ್ಟ ಕಾಲದಲ್ಲಿ ನೆರವಿಗೆ ಬಂದು ಆತ್ಮೀಯವಾಗುವುದು ಗ್ರಾಮದೇವತೆ"[115] ಎನ್ನುವುದು ಗ್ರಾಮೀಣರ ಗಾಢ ನಂಬಿಕೆ. ನಮ್ಮ ಸಾಮಾನ್ಯ ಜನತೆಯ ಚರಿತ್ರೆಯನ್ನು ತಿಳಿದುಕೊಳ್ಳಲು ಜನಪದ ದೇವತೆಗಳ ವೈಜ್ಞಾನಿಕ ಅಧ್ಯಯನ ತುಂಬಾ ಅಗತ್ಯವೆನಿಸುತ್ತದೆ. ರಾಜ ಮಹಾರಾಜರ ವೈಭವದ ಘಟನೆಗಳೇ ಈ ದೇಶದ ಇತಿಹಾಸದ ಬಹು ಪುಟಗಳನ್ನು ತುಂಬಿರುವುದರಿಂದ, ಜನಸಾಮಾನ್ಯರ ಬದುಕಿನ ಬಗೆಗೆ ಅವರ ಪ್ರಯತ್ನಗಳ ಬಗೆಗೆ ಅವರುಂಡ ಸುಖ–ದುಃಖಗಳ ಬಗೆಗೆ ನಮ್ಮ ಚರಿತ್ರೆ ಮೌನತಾಳಿದೆ. ಇಂತಹ ಗಾಢ ಮೌನವನ್ನು ಮುರಿಯಲು, ಜನಸಾಮಾನ್ಯರ ನಂಬಿಕೆ, ಆಚಾರ ವಿಚಾರಗಳನ್ನು ಅರಿಯಲು

ಗ್ರಾಮ ದೇವತೆಗಳ ಅಧ್ಯಯನ ನಿಜಕ್ಕೂ ಕುತೂಹಲಕಾರಿಯಾಗಿದೆ. ದೇಶದ ಸಾಂಸ್ಕೃತಿಕ ಚರಿತ್ರೆಯನ್ನು ಸರಿಯಾಗಿ ರೂಪಿಸಲು ಜನ ಸಾಮಾನ್ಯರ ಜೀವನ ವಿಧಾನವನ್ನು ಸ್ಪಷ್ಟವಾಗಿ ಅರ್ಥೈಸಿಕೊಳ್ಳಲು ಜನಪದ ದೇವತೆಗಳ ವೈಜ್ಞಾನಿಕ ಅಧ್ಯಯನ ತೀರಾ ಅಗತ್ಯವಾಗಿದೆ.[116] ಜನಪದ ದೇವತೆಗಳ ಪ್ರಭಾವ ಶಿಷ್ಟದೇವತೆಗಳ ಮೇಲೆ ಮತ್ತು ಶಿಷ್ಟ ದೇವತೆಗಳ ಪ್ರಭಾವ ಜನಪದ ದೇವತೆಗಳ ಮೇಲೆ ಉಂಟಾಗಿದೆ. ಹೀಗೆ ಎರಡು ವಿಭಿನ್ನ ಸಂಸ್ಕೃತಿಗಳನ್ನು ಅಧ್ಯಯನ ಮಾಡುವುದರಿಂದ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಲು ಅನುಕೂಲವಾಗುತ್ತದೆ. ಗ್ರಾಮದೇವತೆಗಳ ಅಧ್ಯಯನ ಮನುಷ್ಯನ ನಿಜವಾದ ಚರಿತ್ರೆಯನ್ನು ಹೊರಗೆಡಹುತ್ತದೆ. ಈ ಕಾರಣದಿಂದ ಇಂತಹ ಅಧ್ಯಯನ ಹೆಚ್ಚು ಪ್ರಸ್ತುತವಾಗುತ್ತದೆ.

ದೇವತೆಗಳ ಮೂಲಕ ಪ್ರಕಟವಾಗಬಹುದಾದ ಮಾನವನ ಪ್ರಯತ್ನ, ಸಾಧನೆ, ನೋವು, ಬವಣೆಗಳನ್ನು ಇಲ್ಲಿ ಸೂಕ್ಷ್ಮವಾಗಿ ಗುರುತಿಸಬಹುದಾಗಿದೆ. ಧಾರ್ಮಿಕ ಪ್ರಭುತ್ವದಲ್ಲಿ ಕೆಳವರ್ಗಗಳು ನಿರ್ಲಕ್ಷ್ಯಕ್ಕೆ ಒಳಪಟ್ಟಂತೆ ಧಾರ್ಮಿಕ ನಂಬಿಕೆ, ಆಚರಣೆಗಳೂ ನಿರ್ಲಕ್ಷ್ಯಕ್ಕೆ ಒಳಪಟ್ಟವು. ಹಿಂದೂ ಧರ್ಮ ಎನ್ನುವ ಪರಿಕಲ್ಪನೆ ವೈದಿಕ ದೇವರುಗಳಿಗಷ್ಟೇ ಸೀಮಿತಗೊಂಡಿತು. ಇದು ಚರಿತ್ರೆಯುದ್ದಕ್ಕೂ ಕಂಡುಬರುವ ವಾಸ್ತವ ಸಂಗತಿ. ದೇವತೆಗಳು ಮಾನವನ ಸೃಷ್ಟಿಯಾದ್ದರಿಂದ ಮಾನವ ನಿರ್ಮಿತ ಶ್ರೇಣೀಕೃತ ಸಮಾಜ ವ್ಯವಸ್ಥೆಯಂತೆಯೇ, ದೇವತೆಗಳ ಸ್ಥಾನಮಾನ ಇರುತ್ತವೆ ಎಂಬ ಅಂಶ ಸ್ಪಷ್ಟವಾಗುತ್ತದೆ. ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆ ಧಾರ್ಮಿಕ ನಂಬಿಕೆಗಳಲ್ಲೂ ಕಂಡುಬರುವದು ಸಹಜ ಬೆಳವಣಿಗೆಗೆ. ಬ್ರಾಹ್ಮಣ ಸಂಸ್ಕೃತಿಗೆ ರಾಜಾಶ್ರಯ ಸಿಕ್ಕಿ ಅದು ವಿಸ್ತಾರವಾಗಿ ಬೆಳೆದು ಪ್ರಬಲವಾದಂತೆ, ಬ್ರಾಹ್ಮಣೇತರ ಸಂಪ್ರದಾಯಗಳು ಪ್ರಬಲತೆ ಹೊಂದಲಿಲ್ಲ. ಇಲ್ಲಿ ಬ್ರಾಹ್ಮಣೇತರರು ಬ್ರಾಹ್ಮಣ ಸಂಸ್ಕೃತಿಯನ್ನು ಅಳವಡಿಸಿಕೊಳ್ಳುವ ಒತ್ತಾಯಕ್ಕೊಳಗಾದವು. ಇದು ಪ್ರಬಲ ಮತ್ತು ಅಧೀನ ಎಂಬ ವಿಂಗಡಣೆಗೆ ಕಾರಣವಾಯಿತು. ಪ್ರಬಲ ದೇವತೆಗಳು ಧರ್ಮವನ್ನು ಕಾಪಾಡುವ ಜವಾಬ್ದಾರಿಯನ್ನು ಹೊತ್ತಂತೆ ಕಾರ್ಯ ನಿರ್ವಹಿಸುತ್ತಿದ್ದವು. ಅಧೀನ ದೇವತೆಗಳು ಕ್ಷುದ್ರದೇವತೆಗಳಾಗಿ, ಸೇವಕರಾಗಿ ಕೆಲಸ ಮಾಡಬೇಕಾಯಿತು. ಇದು ಶ್ರೇಣೀಕೃತ ಸಮಾಜ ಮಾದರಿಯನ್ನು ಸೂಚಿಸುತ್ತದೆ. ಇಂಥ ವಿಂಗಡಣೆಗಳು ಜಾತಿ ಆಧಾರಿತ ಸಮಾಜವನ್ನು ಇನ್ನಷ್ಟು ಗಟ್ಟಿಮಾಡುವ ಹಾಗೂ ಜಾತಿ ಹಿನ್ನೆಲೆಯಿಂದ ಸಮಾಜವನ್ನು ಒಡೆಯುವ ಲಕ್ಷಣಗಳನ್ನು ತೋರುತ್ತದೆ. ಗಮನಾರ್ಹ ಅಂಶವೆಂದರೆ ಗ್ರಾಮಗಳಲ್ಲಿ ನಿರಲಂಕೃತ ಕಲ್ಲುಗಳಿಗೆ ಗುಡಿಸಲುಗಳಲ್ಲಿ ಪೂಜಿಸುತ್ತಿದ್ದ. ಗ್ರಾಮದೇವತೆಯ ಆರಾಧಕರಿಗೆ ರಾಜಾಶ್ರಯ ಸಿಗಲಿಲ್ಲ. ಆದರೂ ಶಿಷ್ಟದೈವಾರಾಧಕರು ಅವುಗಳಿಗೆ ಮಹತ್ವ ನೀಡುತ್ತಿದ್ದರು. ಕಾರಣ ಅವರನ್ನು ವೈದಿಕ ಸಂಪ್ರದಾಯದೊಳಗೆ ಸೇರಿಸಿಕೊಳ್ಳುವ ಪ್ರಯತ್ನ. ಗ್ರಾಮದೇವತೆಗಳಿಗೆ ಬ್ರಾಹ್ಮಣರು ತಮಗಿಷ್ಟ ಬಂದ ಪುರಾಣಗಳನ್ನು ಸೃಷ್ಟಿಸಿ ಜನ ನಂಬುವಂತೆ ಮಾಡಿದರು.

ಮೇಲ್ವರ್ಗಗಳು ತಮ್ಮ ಜಾತಿ, ಅಧಿಕಾರಕ್ಕಾಗಿ ದೇವತೆಗಳನ್ನು ಬಳಸಿಕೊಂಡರೆ, ಕೆಳವರ್ಗಗಳು ತಮ್ಮ ಬದುಕಿನ ನೋವು, ಶೋಷಣೆ, ಅನ್ಯಾಯ ಮರೆಯುವುದಕ್ಕೆ ಆರಾಧನೆ ಮಾಡಿದರು. ವೈದಿಕ ದೇವರುಗಳ ದೇವಾಲಯಗಳು ಬೃಹತ್ ಕಟ್ಟಡಗಳಾಗಿ ಅಲಂಕೃತವಾಗಿ ನಿರ್ಮಾಣಗೊಂಡರೆ, ಗ್ರಾಮದೇವತೆಗಳ ದೇವಾಲಯಗಳು ನಿರಲಂಕೃತವಾಗಿ, ಗುಡಿಸಲುಗಳ ಮಾದರಿಯಲ್ಲಿ ನಿರ್ಮಾಣಗೊಂಡವು.

ಮೇಲುಕೋಟೆಯ ಗ್ರಾಮದೇವತೆಗಳು

ಮೇಲುಕೋಟೆಯು ಪ್ರಸಿದ್ಧ ಶ್ರೀ ವೈಷ್ಣವ ಕೇಂದ್ರವಾಗಿದ್ದು, ಶಿಷ್ಟದೇವತೆಯಾದ ವಿಷ್ಣುವಿನ ಆರಾಧನೆ ಪ್ರಧಾನವಾದುದು ಹಾಗೂ ಪ್ರಬಲವಾಗಿದೆ. ಇಲ್ಲಿ ಶಿಷ್ಟ ಸಂಸ್ಕೃತಿಯ ಪ್ರಭಾವಕ್ಕೆ ಸಿಲುಕದೆ ಭಿನ್ನವಾದ ಜಾನಪದ ಸಂಸ್ಕೃತಿ ಬೆಳೆದುಕೊಂಡು ಬಂದಿದೆ. ಆದರೆ ನಂತರದ ದಿನಗಳಲ್ಲಿ ಶಿಷ್ಟ ಸಂಸ್ಕೃತಿಯ ಪ್ರಭಾವ ಗ್ರಾಮದೇವತೆಗಳ ಆರಾಧನೆಯ ಮೂಲಕ ಜಾನದಪ ಸಂಸ್ಕೃತಿ ಬೆಳೆದುಕೊಂಡು ಬಂದಿದೆ. ಆದರೆ ನಂತರದ ದಿನಗಳಲ್ಲಿ ಶಿಷ್ಟ ಸಂಸ್ಕೃತಿಯ ಪ್ರಭಾವ ಗ್ರಾಮದೇವತೆಗಳ ಆರಾಧನೆಯ ಮೂಲಕ ಜಾನಪದ ಸಂಸ್ಕೃತಿಯ ಮೇಲಾಗಿ ವಿಭಿನ್ನ ಸಾಂಸ್ಕೃತಿಕ ಆಚರಣೆಳು, ನಂಬಿಕೆಳು ರೂಢಿಗೆ ಬಂದಿವೆ. ಇಲ್ಲಿಯೂ ಯಜಮಾನ ಸಂಸ್ಕೃತಿಯ ಹಿಡಿತವನ್ನು ಗುರುತಿಸಬಹುದು. ಮೇಲುಕೋಟೆಯಲ್ಲಿ ಗ್ರಾಮದ ವಿವಿಧ ಸಮುದಾಯಗಳು ಸಾಮೂಹಿಕವಾಗಿ ಅಥವಾ ಪ್ರತ್ಯೇಕವಾಗಿ ಆಚರಣೆಗೈಯುವ ಪುರುಷ ಮತ್ತು ಸ್ತ್ರೀ ದೈವಗಳ ದೇವಾಲಯಗಳಿವೆ. ಪ್ರಧಾನವಾಗಿ ಮಾರಮ್ಮನನ್ನು ಗ್ರಾಮದೇವತೆಯಾಗಿ, ಗ್ರಾಮ್ಯದೇವತೆಗಳಾದ ಕಾಳಮ್ಮ, ಬನ್ನಂತಮ್ಮ, ವರನಂದಿ (ಹೊಗರಕಲ್ಲಮ್ಮ) ದೇವತೆಗಳು ಪ್ರಮುಖವಾದವುಗಳು. ಇಲ್ಲಿ ಸಂಸ್ಕೃತಿ ಪ್ರಧಾನ ಸಂಶೋಧನೆಗೆ ಶಾಸನಗಳು ಪೂರಕವಾಗಿಲ್ಲ. ಜನಸಮುದಾಯವನ್ನು ಪ್ರತಿನಿಧಿಸುವ ಯಾವೊಂದು ಶಾಸನ ಮೇಲುಕೋಟೆಯಲ್ಲಿ ಲಭ್ಯವಿಲ್ಲ. ಜನಸಾಮಾನ್ಯರ ನಿಜವಾದ ಸಂಸ್ಕೃತಿಯ ಬಗೆಗೆ ನಮ್ಮ ಹಿಂದಿನ ಸಾಹಿತ್ಯ–ಇತಿಹಾಸ ಹೇಗೆ ಮೌನ–ತಾಳಿವೆಯೋ ಹಾಗೆಯೇ ಶಾಸನಗಳು ಮೌನತಾಳಿವೆ. ಆದುದರಿಂದ ಸಾಮಾನ್ಯರ ನಂಬಿಕೆ ಆಚರಣೆಗಳು, ಜಾನಪದ ಕಥೆ, ಗೀತೆಗಳನ್ನು, ಅಧ್ಯಯನಕ್ಕೆ ಆಧಾರವಾಗಿ ಬಳಸಿಕೊಳ್ಳಲಾಗಿದೆ.

ಬಿಸಿಲ ಮಾರಮ್ಮ

ಮೇಲುಕೋಟೆಯ ಪ್ರಧಾನ ಶಿಷ್ಟ ದೈವವಾದ ನಾರಾಯಣಸ್ವಾಮಿ ದೇವಾಲಯದ ವಾಯುವ್ಯ ಭಾಗದಲ್ಲಿ ಬಿಸಿಲು ಮಾರಮ್ಮನಗುಡಿಯಿದೆ. ಪ್ರತಿ ಗ್ರಾಮದವರು ಮಾರಮ್ಮನನ್ನು ಸ್ಥಳೀಕರಿಸಿಕೊಳ್ಳುವುದು ಕಂಡುಬರುತ್ತದೆ. ಇಲ್ಲಿ ಸದಾ ಬಿಸಿಲಿನಲ್ಲಿ ಇರುವ ಮಾರಮ್ಮನಿಗೆ

ಬಿಸಿಲಮಾರಮ್ಮ ಎಂಬುದಾಗಿ ಕರೆಯುವರು. ಈ ದೇವಾಲಯಕ್ಕೆ ಯಾವುದೇ ಅಲಂಕೃತ ಕಟ್ಟಡವಿಲ್ಲ. ಒಂದು ಅಡಿ ಚಪ್ಪಡಿಯಮೇಲೆ ಒಂದು ಕಲ್ಲನ್ನು ಇಡಲಾಗಿದೆ, ಇದೇ ಮಾರಮ್ಮ. ಅದರ ಸುತ್ತಲೂ ಆಧುನಿಕ ಗಾರೆಯಿಂದ 10 ಅಡಿ ಎತ್ತರದ ಗೋಡೆ ನಿರ್ಮಿಸಲಾಗಿದೆ. ದಕ್ಷಣಭಾಗದಲ್ಲಿ ದ್ವಾರಬಾಗಿಲಿದೆ. ಎದುರಿಗೆ ಬಲಿಕಂಬ ನೆಡಲಾಗಿದೆ. ಒಕ್ಕಲಿಗರು, ಶೆಟ್ಟರು, ಅರಸರು, ಹಜಾಮರು, ಮಾದಿಗ, ಹೊಲೆಯರು ಹೀಗೆ ಹಲವು ಜಾತಿಯ ಜನ ಮಾರಿಯ ಆರಾಧಕರಾಗಿದ್ದಾರೆ. ಗ್ರಾಮದ ಸರ್ವ ರೋಗಗಳಿಂದ ಮುಕ್ತಿ ಮಾಡುವ ದೇವತೆ ಎಂಬ ನಂಬಿಕೆಯಿದೆ.

ಮಾರಮ್ಮನ ಕುರಿತ ಪುರಾಣ

ಗ್ರಾಮದೇವತೆಗಳನ್ನು ಅರ್ಥೈಸಲು ಸಾಮಾನ್ಯ ಜನತೆಯಲ್ಲಿ ಹಾಸುಹೊಕ್ಕಾಗಿರುವ ಪುರಾಣ ಕಥೆಗಳೇ ಆಧಾರ. ಜನಸಮುದಾಯದ ಚರಿತ್ರೆ ಹುಡುಕಲು ಪುರಾಣ ಕಥೆಗಳು ಶಕ್ತ ಸಾಧನಗಳು. ಜನಪದ ಪುರಾಣಗಳು ಕಟ್ಟು ಕಥೆಯಲ್ಲ ಅವು ಬಹುಸಂಖ್ಯಾತ ಜನತೆಯ ಬದುಕಿಗೆ ಹಿಡಿದ ಕನ್ನಡಿ.[117] ಡಾ. ಸಿದ್ಧಲಿಂಗಯ್ಯನವರು ಕರ್ನಾಟಕದ ಗ್ರಾಮದೇವತೆಗಳನ್ನು 3 ವಿಭಾಗಗಳಲ್ಲಿ ವರ್ಗೀಕರಿಸಿದ್ದಾರೆ. ರಾಷ್ಟ್ರೀಯದೇವತೆಗಳು, ಪ್ರಾಂತೀಯದೇವತೆಗಳು ಮತ್ತು ಸ್ಥಳೀಯ ದೇವತೆಗಳೆಂದು ವಿಂಗಡಿಸದ್ದಾರೆ. ಮೊದಲ ವರ್ಗಕ್ಕೆ ಸೇರುವ ಮಾರಮ್ಮನಿಗೆ ಸಂಬಂಧಿಸಿದ ಪುರಾಣ ಸ್ವಲ್ಪ ವ್ಯತ್ಯಾಸವಾದರೂ ಇಲ್ಲಿ ಆಶಯ ಒಂದೇ ಆಗಿದೆ. ಬ್ರಾಹ್ಮಣನ ಮನೆಗೆ ಬಂದ ಕದಿರಪ್ಪ ಎಂಬ ದಲಿತನೊಬ್ಬ ಪ್ರತಿಭಾನ್ವಿತನಾಗಿದ್ದು, ತಾನು ಬ್ರಾಹ್ಮಣನೆಂದು, ತನಗೆ ವೇದಾಭ್ಯಾಸ ಮಾಡಿಸಬೇಕೆಂದು ಕೇಳಿಕೊಂಡನು. ಇದನ್ನು ಬ್ರಾಹ್ಮಣ ನಂಬಿ ಅವನನ್ನು ತನ್ನ ಮನೆಯಲ್ಲಿರಿಸಿಕೊಂಡು ವಿದ್ಯಾಭ್ಯಾಸ ಮಾಡಿಸಿದನು. ನಂತರ ತನ್ನ ಮಗಳನ್ನು ಅವನಿಗೆ ಕೊಟ್ಟು ವಿವಾಹ ಮಾಡಿದನು. ಕೆಲವು ವರ್ಷಗಳಾದ ಮೇಲೆ ವೃದ್ಧೆಯಾದ ದಲಿತನ ತಾಯಿ ತನ್ನ ಮಗನನ್ನು ಹುಡುಕುತ್ತಾ ಅಲ್ಲಿಗೆ ಬಂದಳು. ಯುವಕನು ಆಕೆಯನ್ನು ಬ್ರಾಹ್ಮಣ ವಿಧವೆಯಂತೆ ಮಾಡಿ, ಮೂಗಿಯಂತಿರಬೇಕೆಂದು ಹೇಳುತ್ತಾನೆ. ಸೊಸೆಯು ಮಾಡುವ ಅಡುಗೆ ಅತ್ತೆಗೆ ರುಚಿಸುವುದಿಲ್ಲ. ಬೇಸತ್ತ ತಾಯಿ “ಈ ಗೊಡ್ಡುಸಾರು ಏನು ಚಂದ? ಸತ್ತ ಕುರಿ ಕಾಲಾದ್ರೂ ನೆಂಚಿಕೊಳ್ಳಾಕೆ ಇದ್ದಿದ್ರೆ” ಎಂದು ಗೊಣಗುತ್ತಾಳೆ. ಅವಳಿಗೆ ಇಬ್ಬರು ಗಂಡುಮಕ್ಕಳು ಜನಿಸುತ್ತಾರೆ. ಅವರು ತಂದೆಯ ವೃತ್ತಿಯನ್ನು ಅನುಕರಿಸುತ್ತಾರೆ. ಇದರಿಂದ ತನ್ನ ಗಂಡನ ಜಾತಿಯನ್ನು ಸೊಸೆ ಗ್ರಹಿಸಿದಳು. ತನ್ನ ತಂದೆಗೆ ಈ ವಿಷಯವನ್ನು ತಿಳಿಸಿ ನಾಯಿ ಮುಟ್ಟಿದ ಮಡಕೆಯನ್ನು ಏನು ಮಾಡಬೇಕೆಂದು ಕೇಳಿದಳು. ತಂದೆ ಅದನ್ನು ಬೆಂಕಿಗೆ ಹಾಕಬೇಕೆಂದು ಹೇಳುವನು. ತಾನಿದ್ದ ಮನೆಗೆ ಬೆಂಕಿ ಹಚ್ಚಿಕೊಂಡು ಸಾಯುವಳು. ನಂತರ ಅವಳ ಆತ್ಮ ಊರಿನಲ್ಲಿ ಮೈದುಂಬಿ ತನ್ನ ಹಬ್ಬ ಮಾಡಬೇಕೆಂದೂ ಹೇಳುವುದು.[118]

ಕೆಳಜಾತಿಯ ಹುಡುಗನು ತನ್ನ ಸಾಮಾಜಿಕ ಸ್ಥಾನಮಾನವನ್ನು ಎತ್ತರಿಸಿಕೊಳ್ಳುವ ಪ್ರಯತ್ನ ಈ ಪುರಾಣಕಥೆಯಲ್ಲಿ ಮೂಲ ಆಶಯವಾಗಿದೆ. ಯುವಕನ ಪಾಂಡಿತ್ಯ ಪ್ರೇಮವು ಇಲ್ಲಿ ವ್ಯಕ್ತವಾಗಿದೆ. ಪಾಂಡಿತ್ಯಕ್ಕಾಗಿ ಆತ ಬ್ರಾಹ್ಮಣನೆಂದು ಸುಳ್ಳು ಹೇಳುತ್ತಾನೆ. ತನ್ನ ತಾಯಿಯನ್ನು ಬ್ರಾಹ್ಮಣ ವಿಧವೆಯಂತೆ ಸಿಂಗರಿಸಿದ್ದು ವಸ್ತ್ರಧರಿಸುವಲ್ಲಿದ್ದ ಭಿನ್ನತೆಗಳನ್ನು ತಿಳಿಸುತ್ತದೆ. ತನ್ನ ತಾಯಿ ಮನೆಗೆ ಬಂದಾಗ ಆಹಾರ ಪದ್ಧತಿಯ ಕಾರಣದಿಂದ ಅವನ ಜಾತಿ ಬಹಿರಂಗಗೊಂಡುದು ಸ್ಪಷ್ಟವಾಗುತ್ತದೆ. ಆದರೆ ಈ ಕಥೆಯಲ್ಲಿ ಮಾರಮ್ಮ ಕ್ರೋಧಗೊಂಡದ್ದು ಗಂಡನ ವೃತ್ತಿಯ ಅರಿವಾದಾಗ. ಉತ್ತಮ ಕುಲದ ಮನಸ್ಸಿನಲ್ಲಿ ಸುಪ್ತವಾಗಿ ಕಾಡುವ ವರ್ಣಸಂಕರದ ಭಯ, ಕೆಳವರ್ಗದ ಮನಸ್ಸಿನಲ್ಲಿ ಗುಪ್ತವಾಗಿ ಇರಬಹುದಾದ ವರ್ಣಸಂಕರದ ಬಯಕೆಯೇ ಈ ಬಗೆಯ ಪುರಾಣಗಳ ಪ್ರೇರಣೆಯಾಗಿದೆ. ಕೆಳವರ್ಗದ ಮಾಂಸಾಹಾರ ಪದ್ಧತಿಯು ಇಲ್ಲಿ ಅಸಹನೀಯತೆಯನ್ನು ಮೇಲ್ವರ್ಗದವರಿಗೆ ಉಂಟುಮಾಡಿದೆ. ಚರ್ಮ ಹದ ಮಾಡಿ ಪಾದರಕ್ಷೆ ತಯಾರಿಸುವ ವೃತ್ತಿ ಬಗ್ಗೆ ಇರುವ ಅಸಹನೆ ವ್ಯಕ್ತವಾಗಿದೆ. ಅಂತರ್ಜಾತಿ ವಿವಾಹದ ಮೇಲಿದ್ದ ನಿಷೇಧ, ವೃತ್ತಿ ಮತ್ತು ಆಹಾರದ ಕಾರಣದಿಂದ ಕೀಳೆನಿಸಿದ್ದ ದಲಿತ ತರುಣ ಮೇಲ್ವರ್ಗ ಸೇರುವ ಪ್ರಯತ್ನದಲ್ಲಿ ಶಾಪಗ್ರಸ್ತನಾಗಿ ಅಪರಾಧಿಯಾಗಿ ಬಲಿಯಾದ ದುರಂತ ಪುರಾಣದಲ್ಲಿದೆ. ಈ ಪುರಾಣಕಥೆ ಹೆಚ್ಚು ಪ್ರಚಾರವಾದಷ್ಟು ಜಾತಿ ವ್ಯವಸ್ಥೆಯನ್ನು ಗಟ್ಟಿಗೊಳಿಸುವುದು ಸುಲಭ. ಕುಲವನ್ನು ಕೆಡಿಸಿದರೆ ದೇವತೆ ಸಿಟ್ಟಿಗೆದ್ದು ಶಾಪಕೊಡುತ್ತಾಳೆಂಬ ವಿಚಾರವನ್ನು ಪ್ರಚಾರಪಡಿಸಲು ಕಥೆ ಪೂರಕವಾಗಿದೆ.

ಬಿಸಿಲು ಮಾರಮ್ಮನ ಆಚರಣೆಗಳು

ಆಚರಣೆಯಲ್ಲಿದ ಯಾವ ದೈವದ ಅಸ್ತಿತ್ವ ಸಾಧ್ಯವಿಲ್ಲ. ಜನಪದ ಧರ್ಮ ಮತ್ತು ಸಂಸ್ಕೃತಿಗೆ ಆಚರಣೆಯೇ ಬೆನ್ನೆಲುಬು. ದೇವತೆಗಳಿಗೂ ಮತ್ತು ಮಾನವನಿಗೂ ಇರುವ ಸಂಬಂಧ ಅಭಿನಯಗೊಳ್ಳುವ ವಿವರಗಳೇ ಆಚರಣೆಗಳು, ಪುರಾಣಕತೆ ಮರೆತುಹೋದರೂ ಆಚರಣೆ ಆತಂಕವಿಲ್ಲದೆ ಮುಂದುವರೆಯುತ್ತದೆ. "ಮತ ಧರ್ಮಗಳಿಗೆ ಸಂಬಂಧಿಸಿದಂತೆ, ಅಗೋಚರ ದೈವಶಕ್ತಿಗಳ ಪ್ರೀತ್ಯರ್ಥವಾಗಿ ಮಾನವ ನಡೆಸುತ್ತಾ ಬಂದಿರುವ ಮತಾಚಾರಗಳಿಗೆ ಕರ್ಮವಿಧಿಗಳಿಗೆ ಆಚರಣೆ ಎಂಬ ಹೆಸರಿದೆ".[119] ಆಚರಣೆಗಳು ಐತಿಹಾಸಿಕ ಅಂಶವೊಂದನ್ನು ಅಭಿನಯಿಸಿ ತೋರಿಸುತ್ತದೆ. "ಚರಿತ್ರೆಯ ಅನೇಕ ಸಂಗತಿಗಳು ಅಳಿದು ಹೋದರೂ ಅವು ಆಚರಣೆಯಲ್ಲಿ ಜೀವಂತವಾಗಿರುತ್ತವೆ".[120] ಒಂದು ಜನಾಂಗದ ಜೀವನ ವಿಧಾನದ ಬೇಡಿಕೆಯ ಅಂಗವಾಗಿ ಆಚರಣೆ ರೂಪು ಪಡೆಯುತ್ತದೆ ಹಾಗೂ ಬಹುಕಾಲ ಬಾಳುತ್ತದೆ. ಭಯಭಕ್ತಿಯಿಂದಲೂ ತನ್ಮಯತೆಯಿಂದ ತೊಡಗುವಿಕೆಯಿಂದ ಭಕ್ತರು ಆಚರಣೆಗಳನ್ನು ಮಾಡುತ್ತಾರೆ. ಮಾಡದಿದ್ದರೆ ಕಂಟಕ ಬರುತ್ತದೆಂಬ ನಂಬಿಕೆಯಿಂದ ಆಚರಣೆ ನಿಲ್ಲಿಸುವುದಿಲ್ಲ.

ಮೇಲುಕೋಟೆಯ ನಾರಾಯಣಸ್ವಾಮಿಗೆ ನಡೆಯುವ ವೈರಮುಡಿ ಬ್ರಹ್ಮೋತ್ಸವದ 15 ದಿನ ಮುಂಚೆ ಮಾರಿ ಹಬ್ಬ ವರ್ಷಕ್ಕೆ ಒಂದು ಬಾರಿ ನಡೆಯುವ ಸಂಪ್ರದಾಯವಿದೆ. ಒಕ್ಕಲಿಗೆ ಸಮುದಾಯದ ಮುಖಂಡರು ಹಬ್ಬ ನಡೆಯುವ 8 ದಿನಕ್ಕೆ ಮುಂಚೆ ಸಭೆ ಸೇರಿ ಹಬ್ಬದ ರೂಪು ರೇಖೆಗಳನ್ನು ತೀರ್ಮಾನಿಸುವರು. ಇವರನ್ನು 'ಹತ್ತರ ಮನುಷ್ಯರು' ಎನ್ನುವರು. ಸಾರುವಯ್ಯನನ್ನು ನೇಮಿಸಿ ಸಾರಿಸುವರು. ಸಾರುವ ವ್ಯಕ್ತಿ ದಲಿತನಾಗಿರುತ್ತಾನೆ. ಅದರಲ್ಲೂ ಅಸ್ಪೃಶ್ಯನಾಗಿರುತ್ತಾನೆ. ಅದಕ್ಕೆ ಆತನಿಗೆ ಹಬ್ಬದಂದು ಒಂದು ಮರಿತಲೆ, ಹಣ ಹಾಗೂ ಹೆಂಡ ನೀಡುವರು. ಮಡಿ ಪಾಲಿಸುವಂತೆ ಆತನಿಗೆ ಎಚ್ಚರಿಕೆ ನೀಡುವರು. ಸಾರಿದ ನಂತರ ಊರಿನ ಯಾರೊಬ್ಬರೂ ಊರುಬಿಡುವಂತಿಲ್ಲ. ಸೂಕತವಿದ್ದವರು, ಹುಟ್ಟು ಮರಣಗಳು ಸಂಭವಿಸಿದ ಮನೆಯವರು ಮುಟ್ಟಾದ ಹೆಂಗಸರು ದೇವಾಲಯಕ್ಕೆ ಹೋಗುವಂತಿಲ್ಲ.

ಹಬ್ಬದ ದಿನದಂದು ಈ ದೇವತೆಯ ಪೂಜಾಹಕ್ಕು ಪಡೆದಿರುವ ಅಗಸರು ಮಾರಮ್ಮನ ಮುಖವಾಡ ಹಾಗೂ ಇತರ ಅಲಂಕಾರಿಕ ಸಾಮಾಗ್ರಿಯ ಪೆಟ್ಟಿಗೆಯನ್ನು ತರುವರು. ಪಂಚಕಲ್ಯಾಣಿಯಲ್ಲಿ ಅವನ್ನು ಶುಚಿಮಾಡಬೇಕು. ನಂತರ ಅಲ್ಲಿಂದ ಕುಂಬದಲ್ಲಿ ನೀರುತಂದು ಗುಡಿಯ ಮಾರಿಶಿಲೆಯನ್ನು ಶುಚಿಮಾಡುವರು. ಈ ಆಚರಣೆಯಲ್ಲಿ ವೈದಿಕ ಬ್ರಾಹ್ಮಣನ ಹಾಜರಿ ಇರುತ್ತದೆ. ಗುಡಿಗೆ ದೇವತೆ ಮರಳುವಾಗ ಮಡಿವಾಳ ಜನಾಂಗದವರು ನಡೆಮುಡಿ ಹಾಸುವರು. ಇಲ್ಲಿನ ಶಿಷ್ಟದೇವತೆಯಾದ ನಾರಾಯಣ ದೇವಾಲಯವು ಹಬ್ಬಕ್ಕೆ ಪೂಜಾಸಾಮಾಗ್ರಿಗಳು ಹಾಗೂ ಹಣವನ್ನು ಬಂಡಿಕಾರರ (ಒಕ್ಕಲಿಗರ) ವಶಕ್ಕೆ ಕೊಡುವರು. ಜೊತೆಗೆ ನಗಾರಿ ಮಾರ್ಯದೆ ಕೊಡಬೇಕು.[121] ಮುಖವಾಡವನ್ನು ವೈದಿಕ ಬ್ರಾಹ್ಮಣಧರಿಸುವನು. ನಂತರ ಅಭಿಷೇಕ ಮಾಡುವನು, ನಂತರವೇ ಮಡಿವಾಳರು ಪೂಜಿಸಬೇಕು. ಬ್ರಾಹ್ಮಣ ನಿರ್ಗಮಿಸಿದ ನಂತರವೇ ಬಲಿಕೊಡಬೇಕು. ಎಲ್ಲ ಜಾತಿಯ ಮುಖಂಡರ ಹಾಜರಿಯು ದೇವಾಲಯದಲ್ಲಿರುತ್ತದೆ.

ಗ್ರಾಮದೇವತೆಯ ಹಬ್ಬ ಬಲಿ ಪ್ರಧಾನವಾದ ಆಚರಣೆ. ಇಲ್ಲಿ ಕುರಿ ಹಾಗೂ ಕೋಳಿಯನ್ನು ಬಲಿಕೊಡುವ ಪದ್ಧತಿ ಸಾಮಾನ್ಯವಾಗಿದೆ. ಕೋಣನ ಬಲಿಕೊಡುವ ಆಚರಣೆ ಮರೆಯಾಗಿದೆ. ಕುರಿಕಡಿಯುವವನು ದಲಿತವರ್ಗಕ್ಕೆ ಸೇರಿದ್ದು, ಕೊರಳಿಗೆ ಹಾರಹಾಕಲಾಗುತ್ತದೆ. ಕುರಿಯನ್ನು ಕಡಿದು ಅದರ ಬಲಗಾಲನ್ನು ಬಾಯಿಗಿಟ್ಟು, ಅದರ ಕೊಬ್ಬಿನಿಂದ ತಲೆಯ ಮೇಲೆ ದೀಪ ಹಚ್ಚುವರು. ಭಕ್ತರು ತಂದ ಅನ್ನಕ್ಕೆ ರಕ್ತಬೆರೆಸಿ ಊರಿನ ಸುತ್ತ ಎರಚುವರು. ಇಲ್ಲಿ ಕೋಣನ ಸ್ಥಾನವನ್ನು ಕುರಿಗಳು ಪಡೆದಂತೆ ಕಾಣುತ್ತದೆ. ಹಿಂದೆ ಬಲಿಯನ್ನು ರಾತ್ರಿ 10ರ ನಂತರ ಆಚರಿಸುವ ಪದ್ಧತಿಯಿದ್ದು, ಒಕ್ಕಲಿಗರು ಕೋರ್ಟ್ ಮೆಟ್ಟಿಲೇರಿ ಹಗಲಿನಲ್ಲಿ ಬಲಿಕೊಡುವ ಸ್ವಾತಂತ್ರ್ಯ ಪಡೆದಿದ್ದಾರೆ. ಬಲಿಯಿಂದ ಬಂದ ಕುರಿಯ

ತಲೆಗಳನ್ನು ಹತ್ತರ ಮನುಷ್ಯನು ತನಗಿಷ್ಟವಾದ ಒಂದನ್ನು ಆಯ್ಕೆ ಮಾಡಿದ ನಂತರ ಮೂರು ಭಾಗವಾಗಿ ವಿಂಗಡಿಸುವರು. ಅದು ಕ್ರಮವಾಗಿ ಅಗಸರು, ಅಜಾಮರು ಮತ್ತು ದಲಿತರಿಗೆ ಸೇರುತ್ತದೆ. ಭಕ್ತರ ಅನ್ನದ ರಾಶಿಯೂ 3 ಭಾಗವಾಗುತ್ತದೆ. ದೇವತೆಗಾಗಿ ರಕ್ತವನ್ನು ಚೆಲ್ಲುವುದರ ಮೂಲಕ, ತಮ್ಮ ದೇವತೆಯೊಂದಿಗೆ ರಕ್ತ ಸಂಬಂಧ ಏರ್ಪಟ್ಟಿತೆಂದು ಈ ಜನರ ನಂಬಿಕೆ. ವರ್ಣಸಂಕರವನ್ನು ತಪ್ಪಿಸಲು ಹುಟ್ಟಿದ ಮೇಲಿನ ಪುರಾಣಕಥೆಯ ಹಾಗೂ ಆಚರಣೆಗಳ ನಿಜಾರ್ಥ ಸಾಮಾನ್ಯ ಜನರಿಗೆ ತಿಳಿದಿಲ್ಲ ಹಾಗೂ ಸಂಪ್ರದಾಯ ಉಲ್ಲಂಘಿಸದಿರುವಿಕೆಯ ಒಪ್ಪಿಗೆಯಂತೆ ಸಂಭ್ರಮದಿಂದ ಆಚರಣೆ ಮಾಡುತ್ತಾರೆ.

ದಲಿತರನ್ನು ಬಿಟ್ಟು ಗ್ರಾಮದ ಎಲ್ಲಾಜಾತಿಯ ಜನರು ಮಾರಿಹಬ್ಬದಂದು ದೇವಾಲಯಕ್ಕೆ ಬರುವರು. ಒಂದು ತಟ್ಟೆ ಅಥವಾ ತಣಿಗೆಯಲ್ಲಿ ತಂಬಿಟ್ಟು ಇಟ್ಟು ಕಣಿಗಲೆ ಹೂವಿನಿಂದ ಸಿಂಗರಿಸಿ, ಅದರ ಮೇಲೆ ದೀಪ ಇಟ್ಟು ಹೆಣ್ಣು ಮಕ್ಕಳು ಮೆರವಣಿಗೆಯಲ್ಲಿ ಆಲಯಕ್ಕೆ ಬರುವರು. ಇದನ್ನು ತಂಬಿಟ್ಟಿನಾರತಿ ಎನ್ನುವರು. ಆರತಿ ತರುವಾಗ ಸಾಮಾಜಿಕ ಅಸಮಾನತೆ ಗುರುತಿಸಬಹುದು. ಮೊದಲು ಊರ ಮುಖಂಡರು ನಂತರ ಮೇಲುವರ್ಗ ಹಾಗೂ ಮಧ್ಯಮ ಜಾತಿಯವರ ಆರತಿ. ಕೊನೆಗೆ ಕೆಳಜಾತಿಯವರ ಆರತಿಗಳು ಬರುತ್ತವೆ. ಮೊಸರನ್ನ ಅಕ್ಕಿ, ಎಳ್ಳುಗಳನ್ನು ಆಲಯದ ಮಡಿಬಟ್ಟೆಗೆ ಹಾಕುವರು. ಗಮನಾರ್ಹ ಅಂಶವೆಂದರೆ ಮಡಿವಾಳರು ವಂಶಪಾರಂಪರ್ಯವಾಗಿ ಅರ್ಚಕ ವೃತ್ತಿ ಮಾಡುತ್ತಿದ್ದು. ಪೂಜೆವೇಳೆ ಸ್ತ್ರೀ ವೇಷಧಾರಿಯಾಗುತ್ತಾನೆ. ಇದು ಹಿಂದೆ ಸ್ತ್ರೀಯರು ಇಲ್ಲಿ ಪೂಜಿಸುತ್ತಿದ್ದುದನ್ನು ಸಾಂಕೇತಿಕವಾಗಿ ಸೂಚಿಸುತ್ತದೆ.

ಬೇರೆಲ್ಲಾ ಮಾರಮ್ಮ ದೇವತೆಗಿಂತ ಬಿಸಿಲುಮಾರಮ್ಮನ ಉಪಾಸನೆ ವಿಶಿಷ್ಟವಾದುದು ಮನೆಯಲ್ಲಿ ಯಾರಿಗಾದರೂ ಅಮ್ಮ ಕಾಣಿಸಿಕೊಂಡರೆ ಅಥವಾ ಚರ್ಮ ಸಂಬಂಧಿ ಖಾಯಿಲೆಗಳಿದ್ದರೆ ಮಂಗಳವಾರ ಮತ್ತು ಶುಕ್ರವಾರ ಅಮ್ಮನ ಕಲ್ಲಿಗೆ ಬೇವಿನಸೊಪ್ಪು ಇಟ್ಟು ಪೂಜಿಸಿ ಸೊಪ್ಪನ್ನು ಅರೆದು ಅರಿಶಿಣಮಿಶ್ರಣ ಮಾಡಿ ಮೈಗೆ ಹಚ್ಚುವರು. 5ನೇ ದಿನ ಅವನಿಗೆ ಸ್ನಾನ ಮಾಡಿಸಿ ಗುಡಿಗೆ ಬಂದು ಎಳನೀರು ಮತ್ತು ಮೊಸರನ್ನ ನೈವೇದ್ಯ ಮಾಡಿ ನೀರನ್ನು ರೋಗಿಗೆ ಎರಚುವರು. ಇದರಿಂದ ಅಮ್ಮ ಹೋಗುವುದೆಂಬ ನಂಬಿಕೆಯಿದೆ. ಗಮನಾರ್ಹ ಅಂಶವೆಂದರೆ ಇಲ್ಲಿ ಪೂಜಾರಿಯ ಮಧ್ಯಸ್ತಿಕೆ ಇರುವುದಿಲ್ಲ. ನೇರವಾಗಿ ಯಾವುದೇ ಅಡೆತಡೆಯಿಲ್ಲದೆ ಸುಲಿಗೆಯೂ ಇಲ್ಲದೆ ಪೂಜಿಸುವರು. "ವೈದಿಕರು ಮತ್ತು ಇತರ ಮೇಲುಜಾತಿಯ ಜನ ಗ್ರಾಮದೇವತೆಗಳನ್ನು ಪೂಜಿಸಲು ಅಸಹ್ಯಪಟ್ಟು ಕೊಳ್ಳುವರು. ಆದರೆ ಅವರು ನಂಬಿರುವ ಶಿವ, ವಿಷ್ಣು ಮುಂತಾದ ದೇವರುಗಳು ಅವರನ್ನು ಪಾರುಮಾಡದಿದ್ದಾಗ ಗ್ರಾಮದೇವತೆಯನ್ನು ಆಶ್ರಯಿಸುವರು (ಸಾಧ್ಯವಾದರೆ ಯಾರಿಗೂ ಗೊತ್ತಾಗದಂತೆ)[122] ಎಂಬ

ಮಾತು ಇಲ್ಲಿ ಅನ್ವಯವಾಗುತ್ತಾರೆ. ಬ್ರಾಹ್ಮಣರು ಸಹ ಚರ್ಮಸಂಬಂಧಿ ಖಾಯಿಲೆ ಅಥವಾ ಇನ್ನಿತರ ಮಾನಸಿಕ ತೊಳಲಾಟದ ಸಂದರ್ಭದಲ್ಲಿ "ಗುಡಿಗೆ ಬಂದು ಎಣ್ಣೆ ಮೊಸರನ್ನಗಳಂತಹ ಸಾತ್ವಿಕ ಆಹಾರಗಳನ್ನು ಅರ್ಪಿಸಿ ತಂಪು ನೀಡುವ ಆಚರಣೆಯಿದೆ. ಮೇಲುಕೋಟೆಗೆ ವೈದಿಕ ದೇವತೆಗಳ ಪ್ರವೇಶದಿಂದಾಗಿ ಗ್ರಾಮದೇವತೆಗಳ ಪ್ರಭಾವ ಮೇಲ್ನೋಟಕ್ಕೆ ಕಡಿಮೆಯಾದಂತೆ ಕಾಣುತ್ತದೆ. ಸಾಂಪ್ರದಾಯಿಕ ಆಚರಣೆಗಳಾದ ಕೊಂಡಹಾಯುವ, ಸಿಡಿ ಆಚರಣೆ, ಉರುಳುಸೇವೆ, ಕಂಬನೆಡುವ, ಉತ್ಸವನಡೆಸುವ ಮೊದಲಾದ ಆಚರಣೆಗಳು ಜೀವಂತರವಾಗಿ ಉಳಿದಿಲ್ಲ. ಆದರೂ ಗ್ರಾಮೀಣ ಜನರು ವೈದಿಕ ದೇವತೆಗಳ ಮೇಲೆ ಹೆಚ್ಚಿನ ಭರವಸೆ ಹೊಂದಿದಂತೆ ಕಂಡುಬರುವುದಿಲ್ಲ. ಮಾರಮ್ಮನನ್ನು ತಮ್ಮ ಗ್ರಾಮದ ಸಕಲ ಕಂಠಕಗಳ ರಕ್ಷಕಿಯೆಂದು, ಸುಖನೆಮ್ಮದಿತರುವ ಅಧಿದೇವತೆಯೆಂದು ನಂಬಿರುವ ಇಲ್ಲಿನ ಜನತೆ ಧಾರ್ಮಿಕವಾಗಿ ದೇವತೆಯಿಂದ ಪ್ರಭಾವಿತರಾಗಿದ್ದಾರೆ.

ಗ್ರಾಮದೇವತೆ ಮಾರಮ್ಮ ಮೇಲುಕೋಟೆಯ ವೈದಿಕ ಪ್ರಧಾನ ದೇವತೆ ನಾರಾಯಣನ ಸಹೋದರಿ ಎಂಬ ನಂಬಿಕೆ ಬಲವಾಗಿದೆ. ಈ ದೇವರ ಉತ್ಸವ ಈ ಗುಡಿಯ ಮುಂದೆ ಹಾದು ಹೋಗುವಾಗ ನಿಂತು ಹೋಗುವ ಪದ್ಧತಿಯಿದ್ದು, ಇದು ಮಾರಮ್ಮ ತನ್ನ ಅಣ್ಣನನ್ನು ನೋಡಲು ನಿಲ್ಲುತ್ತದೆ ಎಂಬ ನಂಬಿಕೆಯಿದೆ. ಬ್ರಾಹ್ಮಣ ಸಂಸ್ಕೃತಿ ಪ್ರಾದೇಶಿಕವಾಗಿ ಮಾರ್ಪಡುತ್ತಾ ಹೋದಂತೆ ಸಂಮಿಶ್ರ ಸಂಪ್ರದಾಯಗಳು ಬೆಳೆಯುತ್ತಾ ಹೋದುದು ಚರಿತ್ರೆಯಿಂದ ತಿಳಿದು ಬರುವ ವಾಸ್ತವ ಸಂಗತಿ. ಇದು ಹೊಂದಾಣಿಕೆಯ ಸ್ವರೂಪದಲ್ಲಿ ಆಗುತ್ತಿತ್ತೆಂಬುದಕ್ಕೆ ಇದು ಉದಾಹರಣೆಯಾಗಿದೆ. ಬ್ರಾಹ್ಮಣರು ಭೂಮಾಲೀಕರಾಗಿ ಹಾಗೂ ಮಹಾಜನರಾಗಿ ಅಧಿಕಾರ ಮತ್ತು ಸವಲತ್ತುಗಳನ್ನು ಪಡೆದು ಕೊಂಡುದು, ಗ್ರಾಮೀಣ ಜನರನ್ನು ವೈದಿಕ ಸಂಸ್ಕೃತಿಯ ತೆಕ್ಕೆಯೊಳಗೆ ಬರುವಂತೆ ಮಾಡಿತು. ಆದರೆ ಇದರಿಂದ ಶ್ರೇಣೀಕೃತ ಸಮಾಜ ವ್ಯವಸ್ಥೆ ಬದಲಾಗಲಿಲ್ಲ. ಜಾನಪದೀಯರಿಂದ ನೇರವಾಗಿ ಪೂಜೆಗೊಳಪಡುತ್ತಿದ್ದ ದೇವತೆ ವೈದಿಕ ಅರ್ಚಕನ ಪ್ರವೇಶದಿಂದ ವೈದಿಕ ಸಂಪ್ರದಾಯಗಳನ್ನು ಗಟ್ಟಿಗೊಳಿಸಿಕೊಂಡಿತು. ಸಂಸ್ಕೃತ ಶ್ಲೋಕಗಳ ಆರಾಧನೆ ಆರಂಭವಾಯಿತು. ಹೋಮ, ಪುಣ್ಯ, ಮಡಿವಂತಿಕೆಗಳು ಜೀವ ಪಡೆದವು. ಹೀಗೆ ಶಿಷ್ಟ ದೇವತೆಗಳ ಪ್ರಭಾವ ಜನಪದ ದೇವತೆಗಳ ಮೇಲಾಗಿ ವಿಭಿನ್ನ ಸಂಸ್ಕೃತಿಗಳ ಚರಿತ್ರೆ ಸೃಷ್ಟಿಯಾಯಿತು.

ಇಲ್ಲಿ ಬಿಸಿಲು ಮಾರಮ್ಮನ ಗುಡಿಗೆ 8 ಅಡಿ ಎತ್ತರದ ನಾಲ್ಕುಗೋಡೆ ಇದ್ದು, ಮೇಲ್ಛಾವಣಿ ಇಲ್ಲ. ದೇವಿಯ ಆರಾಧಕರು ದೇವಾಲಯಕಟ್ಟಲು ಮುಂದಾದಾಗ, ಮಾರಮ್ಮ ದೇವತೆಯು ಮೈದುಂಬಿ ಬಂದಿತು. ತನಗೆ ಗುಡಿಕಟ್ಟುವುದನ್ನು ನಿರಾಕರಿಸಿತು. ತಾನು ತನ್ನ

ಅಣ್ಣನಾದ ಚೆಲುವರಾಯಸ್ವಾಮಿಯ ಉತ್ಸವವನ್ನು ನೋಡಬೇಕು ಎಂಬ ಕಾರಣ ನೀಡಿತು. ಹಾಗೆಯೇ ತಾನು ಆಗಾಗ ಹೊರಗೆ ಹೋಗಿ ಬರಬೇಕಿರುವುದರಿಂದ ಬಾಗಿಲನ್ನು ಸಹ ಹಾಕಬಾರದೆಂದು ಆಜ್ಞೆ ಮಾಡಿತು. ಇಂಥಹ ಕಥೆಗಳಲ್ಲಿ ವೈದಿಕ ಮುದ್ರೆ ಸ್ಪಷ್ಟವಾಗಿ ಕಂಡುಬರುತ್ತದೆ. ಈ ಬೆಳವಣಿಗೆಗಳು ಧಾರ್ಮಿಕ ವಿಸ್ತರಣೆಯಾಗಿ ಕಂಡುಬಂದರೂ ಅಧಿಕಾರದ ವಿಸ್ತರಣೆಯೇ ಇವುಗಳ ಮೂಲ ಆಶಯವಾಗಿದೆ. ಮೈದುಂಬಿದ ವ್ಯಕ್ತಿಯ ಸುಪ್ತಪ್ರಜ್ಞೆ ಇಲ್ಲಿ ವ್ಯಕ್ತವಾಗಿದೆ. ತನ್ನ ಆರಾಧಕರು ಸೂರಿಲ್ಲದ ಪರಿಸ್ಥಿತಿ ಇರುವಾಗ ತಾನೂ ಅದೇ ರೀತಿ ಇರುವೆನೆಂಬ ಆಶಯ ಈ ಮೂಲಕ ವ್ಯಕ್ತವಾಗಿರುವ ಸಾಧ್ಯತೆಯೂ ಇಲ್ಲದಿಲ್ಲ.

ಕಾಳಮ್ಮ

ಮೇಲುಕೋಟೆಯಲ್ಲಿ ಆಚರಣೆಗೆ ಒಳಪಡುವ ಮತ್ತೊಂದು ಗ್ರಾಮದೇವತೆ ಕಾಳಮ್ಮ, ಮೇಲುಕೋಟೆಯ ಉತ್ತರದಲ್ಲಿ ಊರಹೊರಭಾಗಕ್ಕಿದೆ. ಮೂಲದಲ್ಲಿ ಇದೊಂದು ಸಾಮಾನ್ಯ ಹುತ್ತ, ವರ್ಷಕ್ಕೊಮ್ಮೆ ಷಷ್ಠಿಯ ಸಂದರ್ಭದಲ್ಲಿ ಹುತ್ತವನ್ನು ಪೂಜಿಸುವುದು ಹಿಂದುಗಳ ಸಂಪ್ರದಾಯ. ಅದಕ್ಕೆ ದೇವಾಲಯ ನಿರ್ಮಾಣ ಮಾಡಿ ಕಾಳಿಯನ್ನು ಸ್ಥಾಪಿಸಲಾಗಿದೆ. ಒಂದು ಕಾಲದಲ್ಲಿ ಕೇವಲ ಹುತ್ತವಾಗಿ ಪೂಜಿಸಲ್ಪಡುತ್ತಿದ್ದು ಕ್ರಮೇಣ ದೇವಸ್ಥಾನ ನಿರ್ಮಾಣಗೊಂಡು ಗ್ರಾಮದ ಜನರೆಲ್ಲರೂ ತಮ್ಮ ಕಷ್ಟ-ಸುಖಗಳಿಗೆ ಆಶ್ರಯಿಸುವ ಸ್ಥಿತಿಯನ್ನು ಪಡೆದು ಕಾಳಮ್ಮ ಎಂಬ ಹೆಸರು ಹೊಂದಿದ್ದು ಹಿಂದೂಧರ್ಮದಲ್ಲಿ ಸೋಜಿಗವಲ್ಲ. ಮಾನವ ಅಪಾಯಕಾರಿಯಾದ ಯಾವುದನ್ನು ಕಂಡರೂ ಪ್ರಾಣ ಭಯದಿಂದ ಉಳಿವಿಗಾಗಿ ದೀನನಾಗಿ ವರ್ತಿಸುತ್ತಾನೆ. ನಾಗರಹಾವು ಅದಕ್ಕೆ ಉತ್ತಮ ಉದಾಹರಣೆ. ಹುತ್ತ ಪವಿತ್ರ ಸ್ಥಾನವಾಗಿ ಪೂಜಿಸುವುದನ್ನು ರೂಢಿಸಿಕೊಂಡು ಕ್ರಮೇಣ ದೇವಾಲಯ ನಿರ್ಮಾಣವಾಗಿರುವುದು ಗೋಚರವಾಗುತ್ತದೆ. ಈ ಹಿನ್ನೆಲೆಯಲ್ಲಿ ಕಾಳಮ್ಮ ದೇವತೆ ಅಸ್ಥಿತ್ವಕ್ಕೆ ಬಂದುದಾಗಿದೆ. ಇಲ್ಲಿ ಕಾಳಸರ್ಪ ಇರುವಿಕೆಗಾಗಿ ಹುತ್ತದ ಪೂಜೆ ಮುಂದೆ ಕಾಳಮ್ಮ ದೇವತೆಯಾಗಿರುವುದೆಂದು ಊಹಿಸಲು ಸಾಧ್ಯವಿದೆ.

ಮಣ್ಣುಗೋಡೆಯ ಸಣ್ಣಗುಡಿಯನ್ನು ಆಧುನಿಕಗಾರೆಯಿಂದ ಸ್ವಲ್ಪ ದೊಡ್ಡ ದೇವಾಲಯ ನಿರ್ಮಿಸಲಾಗಿದೆ. ಕಾಳಿವಿಗ್ರಹ ಇಲ್ಲಿದ್ದು ಅದು ಪುರಾತನ ವಿಗ್ರಹವಾಗಿದೆ. ನಾಲ್ಕು ಕೈಗಳಿದ್ದು ಮೇಲಿನ ಎರಡು ಕೈಗಳಲ್ಲಿ ಕಮಲವಿದ್ದು, ಬಲ ಕೆಳಗಿನ ಕೈಯಲ್ಲಿ ಖಡ್ಗ ಮತ್ತು ಎಡಕೆಳಗಿನ ಕೈಯಲ್ಲಿ ಕಪಾಲವಿದೆ. ಇಂದು ವಿಗ್ರಹ ಹಲವುಬಾರಿ ಬಣ್ಣ ಲೇಪಿಸಿಕೊಂಡು, ವಸ್ತ್ರಗಳು ಮತ್ತು ಆಭರಣಗಳಿಂದ ಅಲಂಕೃತಗೊಂಡಿದೆ. ಇದರ ಪ್ರಾಚೀನತೆ ಗುರುತಿಸಲು ಇಲ್ಲಿರುವ ಭೈರವಮೂರ್ತಿ ಸಹಕಾರಿಯಾಗಿದೆ. ಇದು 3 ಅಡಿ ಎತ್ತರವಾಗಿದ್ದು

ಸಮಭಂಗ ಭಂಗಿಯಲ್ಲಿ ನಿಂತಿದ್ದು, ರುಂಡಮಾಲೆ ಮತ್ತು ಕಿರೀಟ ಧರಿಸಲಾಗಿದೆ. ನಾಲ್ಕು ಕೈಗಳಿದ್ದು ಮೇಲಿನ ಎಡ ಮತ್ತು ಬಲಗೈಗಳಲ್ಲಿ ಡಮರುಗ ಹಿಡಿದಿದ್ದು, ಕೆಳಗಿನ ಎರಡು ಕೈಗಳಲ್ಲಿ ಖಡ್ಗ ಮತ್ತು ರುಂಡವನ್ನು ಹಿಡಿದಿದೆ. ಈ ಲಕ್ಷಣಗಳು ಕ್ರಿ.ಶ. 10-11ನೇ ಶತಮಾನದ ಮೂರ್ತಿಶಿಲ್ಪಗಳನ್ನು ಹೋಲುತ್ತದೆ.

ಕಾಳಮ್ಮನ ಕುರಿತ ಪುರಾಣ

ಇತರ ಕಡೆಗಳಂತೆ ಇಲ್ಲಿಯೂ ಸ್ವಲ್ಪ ವ್ಯತ್ಯಾಸಗಳೊಂದಿಗೆ ಪುರಾಣಕಥೆ ಹೇಳುತ್ತಾರೆ. ಬ್ರಾಹ್ಮಣಕುಲದಲ್ಲಿ ಹುಟ್ಟಿದ 'ಸತ್ಯಶ್ರೀ ಬಾಲಗೌರಿ' ಎಂಬ ಕನ್ಯೆಯನ್ನು ಕದಿರಪ್ಪ ಎಂಬ ದಲಿತ ಯುವಕ ವೆಂಕಂಭಟ್ಟ ಎಂಬ ಬ್ರಾಹ್ಮಣನೆಂದು ಸುಳ್ಳು ಹೇಳಿ ಮದುವೆಯಾದನು. ಇವರಿಗೆ 5 ಗಂಡು ಮಕ್ಕಳಾಗುತ್ತಾರೆ. ಅವು ಗುರುಗಳು ಕಲಿಸಿದ ಪಾಠ ಕಲಿಯದೆ ತಂದೆಯ ಸಾಂಪ್ರದಾಯಿಕ ಚಪ್ಪಲಿ ಹೊಲಿಯುವ ವೃತ್ತಿಯನ್ನು ಅನುಕರಿಸಲಾರಂಭಿಸಿದವು. ಕದಿರಪ್ಪನ ತಾಯಿ ಕದಿರವ್ವೆಯು ಮಗನನ್ನು ಹುಡುಕಿಕೊಂಡು ಬಂದಳು. ಮಗನು ತಾಯಿಗೆ ಬ್ರಾಹ್ಮಣರು ಧರಿಸುವ ಸೀರೆ ತೊಡಿಸಿ, ತಲೆಬೋಳಿಸಿ, ಮೂಗಿಯಂತಿರಬೇಕೆಂದು ಹೇಳಿ ಮನೆಗೆ ಕರೆತಂದನು. ಬಾಲಗೌರಿಯು ಈಕೆಯನ್ನು ಆನಂದದಿಂದ ಸತ್ಕರಿಸಿದಳು. ಊಟ ಮಾಡುವಾಗ ತಾಯಿಗೆ ಬ್ರಾಹ್ಮಣರ ಸಪ್ಪೆಯಾದ ಊಟ ಹಿಡಿಸದೆ. "ನನ್ಮಗನೆ ತುಪ್ಪದ ಎಂಜಲಿಗೋಸ್ಕರ ಈ ಬ್ರಾಹ್ಮಣರ ಮನೆ ಎಂಜಲು ತಿಂದ್ಕೊಂಡಿದ್ದೀಯ" ಎಂದಳು. ಈ ಮಾತು ಕೇಳಿಸಿಕೊಂಡ ಬಾಲಗೌರಿಗೆ ಗಂಡನ ಜಾತಿ ತಿಳಿಯಿತು. ತನ್ನ ಮನೆಗೆ ಬೆಂಕಿ ಇಟ್ಟಳು, ತನ್ನ ಗಂಡನಿಗೆ ಊರಗೌಡನ ಎಮ್ಮೆ ಗರ್ಭದಲ್ಲಿ ಕೋಣವಾಗಿ ಹುಟ್ಟುವಂತೆ ತಾನು ಗ್ರಾಮದೇವತೆಯಾಗಿ ಆ ಕೋಣ ಬಲಿತೆಗೆದುಕೊಳ್ಳುವುದಾಗಿ ಶಾಪ ನೀಡಿದಳು. ತನ್ನ ಮಕ್ಕಳನ್ನು ಗ್ರಾಮದೇವತೆ ಹಬ್ಬದಲ್ಲಿ ಬಲಿಮರಿಯಾಗುವಂತೆ ಶಾಪಕೊಟ್ಟಳು. ತನ್ನ ಕುಲಗೆಡಿಸಿದ ಗಂಡನನ್ನು ಕಾಳಿ ಅವತಾರ ತಾಳಿ ಕೋಣದ ರೂಪದಲ್ಲಿ ಬಲಿತೆಗೆದುಕೊಂಡಳು.

ಜಾತಿ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಆಶಯ ಈ ಕಥೆಯಲ್ಲಿದೆ. ಬಾಲಗೌರಿ ವೈದಿಕ ಮನೆತನದಲ್ಲಿ ಹುಟ್ಟಿದ್ದರೆ, ಕದಿರಪ್ಪ ದಲಿತ ಜನಾಂಗಕ್ಕೆ ಸೇರಿದವನು. ಇಲ್ಲಿ ಎರಡು ಸಂಸ್ಕೃತಿಗಳ ನಡುವೆ ಇರುವ ಭಿನ್ನತೆಗಳನ್ನು ಗುರುತಿಸಬಹುದು. ವೃತ್ತಿ ಮತ್ತು ಆಹಾರದಿಂದ ಕೀಳುಜಾತಿ ಎನಿಸಿಕೊಂಡ ಕದಿರಪ್ಪ ಅಪರಾಧಿ ಸ್ಥಾನದಲ್ಲಿ ನಿಂತು ಬಲಿಯಾಗುತ್ತಾನೆ. ಕೆಳವರ್ಗದವರು ಕೋಣನ ಮಾಂಸವನ್ನು ಆಹಾರವಾಗಿ ಉಪಯೋಗಿಸುತ್ತಿದ್ದುದು, ಮೇಲ್ವರ್ಗದವರಿಗೆ ಅಸಹನೀಯವಾಗಿ ಕಂಡಿದೆ. ಅದೇ ಗಂಡನನ್ನು ಕೋಣನಾಗಿ ಹುಟ್ಟು

ಎಂದು ಶಾಪ ಹಾಕಲು ಪ್ರೇರಣೆಯಾಗಿದೆ. ಈ ಪುರಾಣಗಳ ರಚನೆಯಾದ ನಂತರವೂ ಸಹ ಕೋಣನ ಬಲಿಯ ಆಚರಣೆಯನ್ನು ಜಾರಿಗೆ ತಂದಿರಬಹುದಾದ ಸಾಧ್ಯತೆಗಳಿವೆ. ಕೆಳಜಾತಿಯವರು ತೊಡುತ್ತಿದ್ದ ಉಡುಗೆಗಳು ಮೇಲ್ವರ್ಗಕ್ಕೆ ಅಸಹನೀಯವಾಗಿತ್ತು. ಹೀಗೆ ಹಲವು ವಿಭಿನ್ನತೆಗಳಿಂದ ಕೆಳಜಾತಿಯ ಯುವಕ ಸಾಮಾಜಿಕ ಅಂತಸ್ತನ್ನು ಪಡೆಯಲು ಇಚ್ಚಿಸುವುದು ಸಾಮಾನ್ಯವಾದ ಅಂಶವಾಗಿದೆ.

ಕಾಳಮ್ಮನ ಆಚರಣೆಗಳು

ವರ್ಷಕ್ಕೊಮ್ಮೆ ಕಾಳಮ್ಮನ ಹಬ್ಬ ಇಲ್ಲಿ ನಡೆಯುವ ಸಂಪ್ರದಾಯವಿದೆ. ಬಿಸಿಲುಮಾರಮ್ಮನ ಆರಾಧನೆಯಲ್ಲಿ ಒಕ್ಕಲಿಗರ ಪಾತ್ರ ಪ್ರಧಾನವಾದರೆ, ಕಾಳಮ್ಮನ ಆರಾಧನೆಯಲ್ಲಿ ಗಾಣಿಗರ ಪಾತ್ರ ಪ್ರಧಾನವಾದುದು. 'ಹತ್ತರ ಮನುಷ್ಯರು' ಎಂದು ಕರೆಯುವ ಹತ್ತುಜನ ಗಾಣಿಗ ಜಾತಿಗೆ ಸೇರಿದ ವ್ಯಕ್ತಿಗಳು ಸಭೆ ಸೇರಿ ಹಬ್ಬದ ದಿನವನ್ನು ತೀರ್ಮಾನ ಮಾಡುವರು. 15 ದಿನಗಳ ಮುಂಚೆ ಸಭೆಸೇರಿ ಹಬ್ಬದ ದಿನವನ್ನು ಸಾರಲು ಹೇಳುವರು. ಗ್ರಾಮದ ಜನರನ್ನು ಮಾನಸಿಕವಾಗಿ ಸಜ್ಜುಗೊಳಿಸುವ ಆಚರಣೆ ಇದಾಗಿದೆ. ಇಲ್ಲಿ ಸಾರುವ ವ್ಯಕ್ತಿ ದಲಿತಜಾತಿಯವನು. ಈ ಆಚರಣೆ ಮರೆಯಾಗಿದೆ. ಈತನಿಗೆ 'ಕುಳುವಾಡಿ' ಎಂದು ಕರೆಯುವರು. ಆತ ದಿನವೂ ಸ್ನಾನ ಮಡಿಮಾಡಿ, ಮೇಲುಕೋಟೆ ನಾಮವನ್ನು ಧರಿಸಬೇಕು. ಇಲ್ಲಿ ಶಿಷ್ಟ ಸಂಸ್ಕೃತಿಯ ಪ್ರಭಾವ ನಾಮದ ರೂಪದಲ್ಲಾಗಿದೆ. ಸಾರುವ ದಿನ ಕಂಬವನ್ನು ನೆಡುವರು. ಕಂಬವನ್ನು ದೇವತೆಗೆ ಗಂಡನೆಂದು ನಂಬಲಾಗಿದೆ. ಈ ನಡುವೆ ಯಾರಾದರು ಗ್ರಾಮದಲ್ಲಿ ಸತ್ತರೆ ಹಬ್ಬ ನಡೆಯುವುದಿಲ್ಲ. ಮುಟ್ಟಾದವರು ಹಾಗೂ ಸೂತಕದ ಮನೆಯವರಿಗೆ ದೇವಾಲಯ ಪ್ರವೇಶವಿಲ್ಲ. ಬ್ರಾಹ್ಮಣ ಕೇರಿಗಳಲ್ಲಿ ಸಾರುವ ಸಂಪ್ರದಾಯವಿಲ್ಲ.

ಹಬ್ಬದ ದಿನ ಕಲ್ಯಾಣಿಯಿಂದ ದೇವರನ್ನು ತರುವ ಮೂಲಕ ಆರಂಭಿಸುವರು. ಮದುವೆಯಾಗಿರದ 8 ವರ್ಷದ ಹುಡುಗಿಯರ ತಲೆಯಮೇಲೆ ಕುಂಬಗಳನ್ನು ಹೊರಿಸಿ ದೇವರನ್ನು ತರುವರು, ಕುಂಬದಲ್ಲಿ ನೀರು ತುಂಬಿ ಹೊಂಬಾಳೆ ಹಾಕಿ ಪೂಜಿಸುವರು. ಗಂಡಸರು ಕತ್ತಿಹಿಡಿದುಬರುವರು, ದಾಸಯ್ಯನು ಜಾಗಟೆ ಬಡಿಯುವನು. ವಾಲಗದ ಸಮೇತ ಮೆರವಣಿಗೆಯ ಮೂಲಕ ಕರಗತರುವರು. 'ಕಾಳಮ್ಮನಿಗೆ ಉಘೆ' ಎಂದು ಕೂಗುವರು. ಈ ಆಚರಣೆಯಲ್ಲಿ ವೈದಿಕ ಬ್ರಾಹ್ಮಣ ಅರ್ಚಕನ ಹಾಜರಿ ಇರುತ್ತದೆ. ಮಡಿವಾಳರು ದೇವತೆಗೆ ನಡೆಮುಡಿ ಹಾಸುವರು, ಹಾಗೆ ಅವರೇ ಎರಡು ಪಂಜನ್ನು ಹಿಡಿದಿರುತ್ತಾರೆ. ದೇವತೆಯನ್ನು ಗುಡಿಗೆ ತಂದು ಪ್ರತಿಷ್ಠಾಪಿಸುವರು. ಬ್ರಾಹ್ಮಣ ಅರ್ಚಕನನ್ನು ಇಲ್ಲಿ ಕರೆಸಲೇಬೇಕು. ಆತ

ಒಂದು 'ಪುಣ್ಯ' ಎಂಬ ಶುಚಿಗೊಳಿಸುವ ಕೆಲಸಮಾಡುವನು. ಹೋಮದ ಆಚರಣೆ ಸಾಮಾನ್ಯವಾಗಿರುತ್ತದೆ. ದೇವಾಲಯದ ಎದುರಿಗಿರುವ ಹೋಮಕುಂಡದಲ್ಲಿ ಚಂಡಿಹೋಮ ಮಾಡುವರು. ನಂತರ ಹಾಲು, ಮೊಸರು, ಜೇನು, ತುಪ್ಪ, ದರ್ಬೆಗಳನ್ನು ಉಪಯೋಗಿಸಿ ಕಾಳಮ್ಮನಿಗೆ ಅಭಿಷೇಕ ಮಾಡುವರು. ಆಗ ಸಂಸ್ಕೃತ ಶ್ಲೋಕಗಳನ್ನು ಪಠಿಸುತ್ತಾರೆ. ಶಿಷ್ಟದೇವತೆಗಳಿಗೆ ಮಾಡುವಂತೆ ವಿವಿಧ ರೀತಿಯ ಹೂವುಗಳಿಂದ ಅಲಂಕರಿಸುವರು. ಹಬ್ಬದ ದಿನ ಕಾಳಿಯು ವ್ಯಕ್ತಿಯ ಮೈಮೇಲೆ ಆವಾಹನೆಯಾಗುತ್ತದೆ. ಜನರು ತಮ್ಮ ನೋವುಗಳನ್ನು ದೇವತೆ ಜೊತೆ ತೋಡಿಕೊಳ್ಳುವರು. ಗ್ರಾಮದ ಮಹಿಳೆಯರು ತಂದ ತೊಂಬಿಟ್ಟಿನಾರತಿಗೆ ಪೂಜೆಮಾಡಿ. ಕೋಸಂಬರಿ, ಪಾನಕ ಮತ್ತು ಪುಳಿಯೋಗರೆಯನ್ನು ಪ್ರಸಾದವಾಗಿ ಕೊಡುವರು. ಇಲ್ಲಿ ಎಲ್ಲಾ ಪೂಜಾಕೈಂಕರ್ಯಗಳು ವೈದಿಕ ಅರ್ಚಕನ ನಿರ್ದೇಶನದಂತೆ ನಡೆಯುತ್ತದೆ. ವಿಶಿಷ್ಟ ಆಚರಣೆಯೆಂದರೆ ಹಿರಿಯರಿಗೆ ಮಾಲೆಹಾಕಿ ಮರ್ಯಾದೆಮಾಡುವರು ಹಾಗೂ ಶದಾರಿಯನ್ನು ಭಕ್ತಾಧಿಗಳ ತಲೆಯ ಮೇಲೆ ಮುಟ್ಟಿಸುವರು. ಗಮನಾರ್ಹ ಅಂಶವೆಂದರೆ ಮೇಲುಕೋಟೆ ಶಿಷ್ಟದೇವಾಲಯಗಳಲ್ಲಿ ಇಂಥಹ ಆಚರಣೆ ರೂಢಿಯಲ್ಲಿದ್ದು ಇಲ್ಲಿಯೂ ಅನುಕರಣೆಯಾಗಿರುವುದನ್ನು ಸೂಚಿಸುತ್ತದೆ. ಸೂತಕ ಪರಿಹಾರಕ್ಕೆ ಬ್ರಾಹ್ಮಣ ಅರ್ಚಕರು ಗಂಜಲ, ಸುಣ್ಣ ಹಾಕಿ, ಪುಣ್ಯ ಮಾಡುವ ಆಚರಣೆಯಿದೆ. ಇಲ್ಲಿ ಮತ್ತೊಂದು ಗಮನಾರ್ಹ ಅಂಶವೆಂದರೆ ವೈದಿಕ ಅರ್ಚಕನು ಮಧ್ಯವರ್ತಿಯಾಗಿ ಬಂದಿರುವುದು. ಶಿಷ್ಟ ಆರಾಧನೆ ಪದ್ಧತಿಯಾದ ಹೋಮದ ಆಚರಣೆ, ಅಭಿಷೇಕ, ಸಂಸ್ಕೃತ ಶ್ಲೋಕಗಳ ಬಳಕೆ, ಅಲಂಕಾರ ಪದ್ಧತಿ, ಸಾತ್ವಿಕ ಆಹಾರದ ಪ್ರಸಾದಗಳೆಲ್ಲವು ಬದಲಾಗುತ್ತಿರುವ ಗ್ರಾಮದೇವತೆಗಳ ಆಚರಣೆಗಳು, ಇಲ್ಲಿ ವೈದಿಕ ಯಜಮಾನ ಸಂಸ್ಕೃತಿ ನೇರವಾಗಿ ಪ್ರಭಾವ ಉಂಟುಮಾಡಿದೆ. ಶಿಷ್ಟ ಸಂಪ್ರದಾಯದ ಗ್ರಾಮದೇವತೆಯಂತೆ ಇಲ್ಲಿ ಕಾಣಿಸುತ್ತಾಳೆ.

ಹಬ್ಬದ ದಿನವನ್ನು ಬಿಟ್ಟರೆ ಉಳಿದ ದಿನಗಳಲ್ಲಿ ಕಾಳಮ್ಮನಿಗೆ ಗಾಣಿಗಜಾತಿಯ ಸ್ತ್ರೀಯೇ ಅರ್ಚಕ ವೃತ್ತಿ ಮಾಡುವಳು. ಈ ವೃತ್ತಿ ವಂಶಪಾರಂಪರ್ಯವಾಗಿದ್ದು, ಕೆಲವು ಬಾರಿ ತನ್ನ ಹತ್ತಿರದ ಪುರುಷ ಸಂಬಂಧಿಯನ್ನು ನೇಮಿಸುವಳು. ಇಲ್ಲಿ ಸ್ತ್ರೀ ಅರ್ಚಕಿಯು ಇಲ್ಲಿನ ಬ್ರಾಹ್ಮಣರು ಮಾಡುವ ಮಡಿ ಆಚರಣೆಯನ್ನು ಅನುಕರಿಸುವಳು. ಪುರುಷ ಅರ್ಚಕರು ಬ್ರಾಹ್ಮಣರನ್ನು ಹೊರತುಪಡಿಸಿ ದೇವಿ ಪೂಜೆ ಮಾಡುವುದಿಲ್ಲ. ಅರ್ಚಕ ಸ್ಥಾನ ಇಲ್ಲಿ ಬ್ರಾಹ್ಮಣರಿಗೆ ಮಾತ್ರ ಎಂಬ ನಂಬಿಕೆ ಬಲವಾಗಿದೆ. ಪುರುಷ ಅರ್ಚಕನು ಇಲ್ಲಿ ಸ್ತ್ರೀ ವೇಷ ಭೂಷಣಗಳನ್ನು ಧರಿಸುತ್ತಾನೆ. ಗಮನಾರ್ಹ ಅಂಶವೆಂದರೆ ಮಾತೃದೇವತೆಯು ಜೀವಸೃಷ್ಟಿಗೆ ಕಾರಣ, ಆಹಾರಧಾನ್ಯ ಒದಗಿಸುವವಳು, ಸಕಲ ರೋಗನಿವಾರಕಳು ಎಂಬ ನಂಬಿಕೆಯಿಂದ ಸ್ತ್ರೀಯರೇ ಆಕೆಗೆ ಪೂಜಿಸಲು ಅರ್ಹತೆಯನ್ನು ಮೊದಲು ಪಡೆದಿದ್ದು ನಂತರದ ದಿನಗಳಲ್ಲಿ ಅದು ಮರೆಯಾಗಿರುವುದನ್ನು ಸ್ಪಷ್ಟಪಡಿಸುತ್ತದೆ.

ಕಾಳಮ್ಮನಿಗೆ ಕುರಿಗಳನ್ನು ಬಲಿಕೊಡುವ ಪದ್ಧತಿ ಇಲ್ಲಿ ಸಾಮಾನ್ಯವಾಗಿದೆ. ಕೋಣನ ಬಲಿ ಇಲ್ಲಿ ಈಗ ಆಚರಣೆಯಾಗಿ ಉಳಿದಿಲ್ಲ. ಆದರೆ ಆಲಯದ ಎದುರಿಗೆ ಕೋಣನಕಲ್ಲು ಎಂಬ ಕಲ್ಲಿದ್ದು ಕೋಣನ ಬಲಿಪದ್ಧತಿ ಇದ್ದುದನ್ನು ಸ್ಪಷ್ಟಪಡಿಸುತ್ತದೆ. ಶಿಷ್ಟ ದೇವತೆಯ ಪ್ರಭಾವ ಈ ಆಚರಣೆಗಳ ಅಳಿವಿಗೆ ಕಾರಣವಾಗಿದೆ. ಮೇಲುಕೋಟೆಯಿಂದ 2 ಮೈಲಿ ದೂರವಿರುವ ಬಳಘಟ್ಟ ಗ್ರಾಮದ ದೇವತೆ ಹಟ್ಟಿಮಾರಮ್ಮನಿಗೆ ಕೋಣನ ಬಲಿಕೋಡುವ ಪದ್ಧತಿ ಜೀವಂತವಾಗಿದೆ. ಇಲ್ಲಿ ಕೋಣನ ಬದಲಿಗೆ ಕುರಿಯನ್ನು ಬಲಿಕೊಡುತ್ತಿದ್ದಾರೆ. ಕುರಿಗಳಿಗೆ ಹಾರಹಾಕಿ ನೀರು ಚಿಮುಕಿಸಿ ಒದರಿದನಂತರ ಅಪ್ಪಣೆ ಆಯಿತು ಎಂದು ಕಡಿಯುವರು. ಇಲ್ಲಿ ಕಡಿಯುವವರು ದಲಿತರಾಗಿರುತ್ತಾರೆ. ಕೆಲವರು ತಮ್ಮ ಸಾಮರ್ಥ್ಯನುಸಾರ ಕೋಳಿ, ಮೇಕೆ ಬಲಿ ನೀಡುವರು. ದೇವಿರ ಹೆಸರೇಳಿ ಬಿಟ್ಟ ಮರಿಗೆ ಕಿವಿ ಕತ್ತರಿಸುವರು. ಈಚಲ ಹೆಂಡವನ್ನು ಬಾಟಲಿಗೆ ಹಾಕಿ ಹೂವಿನಿಂದ ಸ್ಪರ್ಶಿಸಿದಾಗ ಅದು ಉಕ್ಕುತ್ತದೆ. ಅದನ್ನ ಮೇಕೆಗೆ ಕುಡಿಸುವರು. ಅದು ಮತ್ತಿನಿಂದ ನೆಗೆಯಲಾರಂಭಿಸಿದಾಗ ಅಮ್ಮನನ್ನು ನೋಡಲು ನೆಗೆಯುತ್ತಿದೆ ಎಂದು ಭಾವಿಸಿ ಕಡಿಯುವರು. ಗುಡಿಯ ಮುಂದೆ ಶುಭ್ರವಾದ ಒಂದು ಬಟ್ಟೆ ಹಾಸಿ ಅದರ ಮೇಲೆ ಭಕ್ತರು ತಂದ ಅನ್ನವನ್ನು ಸುರಿಯುವರು. ಜೊತೆಗೆ ತಂಬಿಟ್ಟು, ಅಕ್ಕಿ, ಬೆಂದವರೆಕಾಳುಗಳನ್ನು ಸುರಿಯುವರು ಅದನ್ನು 'ಮಡೆ' (ಉಪಾರ) ಎನ್ನುವರು. ಮಡೆ ಅನ್ನ ಹಾಗೂ ದೇವಿಕೊಟ್ಟ ಬಲಿಯ ತಲೆಗಳನ್ನು ದಲಿತರು, ವಾದ್ಯದವರು, ಮಡಿವಾಳದವರು ಹಂಚಿಕೊಳ್ಳುವರು. ದೇವರು ಮಡೆ ಅನ್ನ ತಿನ್ನುತ್ತದೆ, ಹಾಗೂ ತಾನು ಉಪಯೋಗಿಸುವ ಮದ್ಯವನ್ನು ಮೇಕೆಗೆ ಕುಡಿಸಿ ದೇವಿಯೂ ತನ್ನರೀತಿಯ ಆಹಾರಸೇವಿಸುವಳು ಎನ್ನುವ ಹಿನ್ನೆಲೆಯಿಂದ ನಡೆಯುವ ಕ್ರಿಯೆಯಾಗಿದೆ. ದೈವದ ಹೆಸರಲ್ಲಿ ಎಲ್ಲರ ಮನೆಯ ಅನ್ನವನ್ನು ಎಲ್ಲರೂ ತಿನ್ನುವುದು. ಹಿಂದಿನ ಸಹಕಾರ ಜೀವನದ ಕುರುಹು ಹೀಗೆ ಆಚರಣೆಯಲ್ಲಿ ಉಳಿದಿದೆ ಎಂದು ಊಹಿಸಬಹುದು.

ಹಬ್ಬದಲ್ಲಿ ಸಾರುವುದು, ಮರಿಕಡಿಯುವುದು, ಆಲಯಕ್ಕೆ ಚಪ್ಪರ ಹಾಕುವುದು ಇನ್ನಿತರ ದೈಹಿಕ ಕೆಲಸಗಳು ದಲಿತರದಾಗಿರುತ್ತದೆ. ಆದರೆ ದಲಿತರಿಗೆ ದೇವಾಲಯಕ್ಕೆ ಪ್ರವೇಶವಿಲ್ಲ. ಮಡೆಗೆ ದಲಿತರು ಅನ್ನ ಹಾಕುವಂತಿಲ್ಲ. ಕಡಿದ ಮರಿಯನ್ನು ಅವರ ಮನೆಯ ಬಳಿಗೆ ಹೊತ್ತು ಸಾಗಿಸುವವರು ದಲಿತರು. ಅದಕ್ಕಾಗಿ ಅವರಿಗೆ ಸಿಗುವುದು ಮದ್ಯ. ಬಲಿತಲೆ ಹಾಗೂ ಮಡೆ ಅನ್ನ. ಗಮನಾರ್ಹ ಅಂಶವೆಂದರೆ ಇನ್ನಿತರ ಗ್ರಾಮದೇವತೆಯ ಹಬ್ಬಗಳಲ್ಲಿ ಜನಿವಾರ ಧರಿಸಿ ಅರ್ಚಕರಾಗುವ ದಲಿತರು ಇಲ್ಲಿ ದೇವಾಲಯ ಪ್ರವೇಶವನ್ನೇ ಕಳೆದು ಕೊಂಡಿದ್ದಾರೆ.

ಕಾಳಮ್ಮನನ್ನು 'ಪ್ಲೇಗಮ್ಮ' ಎಂಬ ಹೆಸರಿನಿಂದಲೂ ಇಲ್ಲಿ ಕರೆಯುತ್ತಾರೆ. ಊರಿನಲ್ಲಿ ಪ್ಲೇಗ್‌ರೋಗ ಬಂದಾಗ ಜನ ಊರ ಹೊರಗೆ ಇದ್ದು ಈ ದೇವಾಲಯ ಆಶ್ರಯಿಸುತ್ತಿದ್ದರು. ಜನ ಹೆಚ್ಚಾದರೆ ಮಂಟಪ ಹಾಗೂ ಕಲ್ಲು ಪೊಟರೆಗೆ ಆಶ್ರಯಕ್ಕೆ ತೆರಳುತ್ತಿದ್ದರು. ರೋಗವಾಸಿಗಾಗಿ ಕಾಳಮ್ಮನನ್ನು ಆರಾಧಿಸುತ್ತಿದ್ದರು. ಬೇವಿನ ಸೊಪ್ಪಿನಿಂದ ರೋಗ ಗುಣವಾಗುತ್ತದೆಂದು ನಂಬಿರುವರು. ನಂತರ ಕಾಲರಾ, ಸಿಡುಬು ಇನ್ನಿತರ ರೋಗಗಳಿಗೂ ಕಾಳಮ್ಮ ದೇವತೆಯಾದಳು. ಸಾಮಾನ್ಯ ಮುಗ್ಧ ಜನತೆ ತಮ್ಮ ರೋಗಗಳನ್ನು ದೇವಿಯೇ ಗುಣಪಡಿಸುವಳೆಂಬ ಭಾವನೆಗಳು ನಂತರದಲ್ಲಿ ಈ ಅಂಶಗಳು ಪುರಾಣಗಳಿಗೆ ಸೇರ್ಪಡೆಗೊಂಡಿರುವ ಸಾಧ್ಯತೆಗಳಿವೆ. ಹಬ್ಬಗಳಲ್ಲಿ ಬೇವಿನ ಸೊಪ್ಪಿಗೆ ಪ್ರಾಧಾನ್ಯತೆ ಕೊಡುವ ಕಾರಣ ಇದೇ ಆಗಿದೆ. ದೇವಾಲಯದ ಮುಂದೆ ಬೇವಿನ ಮರವಿದ್ದು ಕಾಳಮ್ಮ ಬೇವಿನ ವೃಕ್ಷದಲ್ಲಿ ಗುರುತಿಸಿ ಕೊಂಡಿದ್ದಾಳೆ. ತಮ್ಮ ಹಸು, ಎಮ್ಮೆಗಳಿಗೆ ಖಾಯಿಲೆ ಬಂದರೂ ದೇವಿಯನ್ನೇ ಆಶ್ರಯಿಸುವರು. ವಾಸಿಯಾದರೆ ಹಾಲನ್ನು ಕೊಡುವ ಹರಕೆ ಮಾಡುವರು. ಹೀಗೆ ಸಾಮಾನ್ಯರು ತಮ್ಮ ನೋವು-ನಲಿವುಗಳನ್ನು ಹಂಚಿಕೊಳ್ಳಲು ದೇವತೆಯ ಮೊರೆ ಹೋಗುವರು. ಸಾಮಾನ್ಯರ ಜೀವನದೊಂದಿಗೆ ಕಾಳಮ್ಮ ಹಾಸುಹೊಕ್ಕಾದ ಸಂಬಂಧ ಹೊಂದಿರುವಳು. ಅನ್ಯಾಯಗಳು ನಡೆದಾಗ ಅನ್ಯಾಯಕ್ಕೆ ಒಳಗಾದ ವ್ಯಕ್ತಿ ಕೋಳಿಯೊಂದಿಗೆ ಬಂದು ಅದರ ರಕ್ತವನ್ನು ಕೈಗೆಮೆತ್ತಿಸಿ ಗುಡಿಯ ಗೋಡೆಯಲ್ಲಿ ಒತ್ತುವನು. ತನ್ನ ವೈರಿಯನ್ನು ಆ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳುತ್ತಾನೆ. ಅನ್ಯಾಯ ಮಾಡಿದ ವ್ಯಕ್ತಿ ಮಾನಸಿಕ ಯಾತನೆಯಿಂದ ವಾಂತಿ ಭೇದಿಯಾಗಿ ಹಲವು ಖಾಯಿಲೆ ಬಂದು ದೇವಿಯ ಮುಂದೆ ಕ್ಷಮಾಪಣೆ ಕೇಳುವನು. ದೇವಿಯ ಹೆಸರಿನಲ್ಲಿ ಪ್ರಮಾಣಗಳೂ ನಡೆಯುವುದುಂಟು.

ವರನಂದನ (ಹೊಗರಕಲ್ಲಮ್ಮ)

ಮೇಲುಕೋಟೆಯಲ್ಲಿ ಕಾಣಸಿಗುವ ಗ್ರಾಮದೇವತೆಗಳಲ್ಲಿ ವರನಂದಮ್ಮನ ಉಪಾಸನೆ ಒಂದು ವಿಶಿಷ್ಟಪೂರ್ಣವಾದ ಮಹತ್ವ ಪಡೆದಿದೆ. ನಾರಾಯಣಸ್ವಾಮಿ ದೇವಾಕಲಯ ಸಂಕೀರ್ಣದ ಪೂರ್ವಭಾಗದ ಗಿರಿಶ್ರೇಣಿಗೆ ಹೊಂದಿಕೊಂಡಂತಿರುವ ಸ್ವಾಭಾವಿಕವಾಗಿ ನಿರ್ಮಾಣಗೊಂಡಿರುವ ಗುಹೆಯೊಂದರಲ್ಲಿ ಈ ದೇವತೆಯು ನೆಲೆನಿಂತಿದ್ದಾಳೆ. ಈ ಗುಹೆಯು ಬೃಹತ್ ಶಿಲಾಯುಗದ ಮಾನವನ ನೆಲೆಯಾಗಿತ್ತೆಂದು ಗುರುತಿಸಲಾಗಿದೆ.[123] ಒರಟಾದ ಕಾಡುಗಲ್ಲುಗಳ ಬೃಹತ್ ಬಂಡೆಯೊಂದರಲ್ಲಿ ಗುಹೆಯನ್ನು ಕಡೆಯಲಾಗಿದೆ. ನಿರಲಂಕೃತವಾದ ಹಾಗೂ ವ್ಯವಸ್ಥಿತವಲ್ಲದ ಕೆತ್ತನೆಯು ಇದಾಗಿದೆ. ಸಪ್ತಮಾತೃಕೆಯರ ಎರಡು ಮೂರ್ತಿಶಿಲ್ಪಗಳ ಹೊರತಾಗಿ ದೇವಾಲಯದಲ್ಲಿ ಯಾವುದೇ ಆಕರ್ಷಕ ಮೂರ್ತಿಯಿಲ್ಲ. ಕಡಿದಾದ ಮೆಟ್ಟಿಲುಗಳಿದ್ದು, ಅವು ಅವ್ಯವಸ್ಥಿತವಾಗಿದೆ. ಜನಪದರು ತಾವೇ ಸ್ವಯಂಶಕ್ತಿಯಿಂದ

ನಿರ್ಮಿಸಿಕೊಂಡ ಸೋಪಾನಗಳಿವು. ಶಿಷ್ಟ ದೇವತೆಗಳ ದೇವಾಲಯದಲ್ಲಿರುವ ಯಾವುದೇ ಅಲಂಕಾರಿಕ ಲಕ್ಷಣಗಳು ಇಲ್ಲಿಲ್ಲ. ಬೃಹತ್ತಾದ ಕಲ್ಲನ್ನೇ ಜನಪದರು ತಮ್ಮ ದೇವತೆಯೆಂದು ನಂಬಿದ್ದಾರೆ. ಮೇಲುಕೋಟೆಗೆ ಸಮೀಪದಲ್ಲಿರುವ ಕದಲಗೆರೆ, ಕಾಡೇನಹಳ್ಳಿ ಹಾಗೂ ನ್ಯಾಮನಹಳ್ಳಿ ಗ್ರಾಮದ ಜನರು ಇವಳನ್ನು ಗ್ರಾಮದೇವತೆಯಾಗಿ ಆರಾಧಿಸುತ್ತಾರೆ.

ಗಮನಾರ್ಹ ಅಂಶವೆಂದರೆ ಜನಪದ ದೇವತೆ ಮತ್ತು ಶಿಷ್ಟದೇವತೆಗಳನ್ನು ತೌಲನಿಕವಾಗಿ ಅಭ್ಯಸಿಸುವ ಉದ್ದೇಶ ಇಲ್ಲಿ ಮುಖ್ಯವಾಗಿದೆ. ಜನಪದ ದೇವತೆಯ ಪ್ರಭಾವ ಶಿಷ್ಟದೇವತೆಯ ಮೇಲೆ ಮತ್ತು ಶಿಷ್ಟ ದೇವತೆಯ ಪ್ರಭಾವ ಜನಪದ ದೇವತೆಯ ಮೇಲೆ ಉಂಟಾಗಿದೆ. ಇದು ಮೇಲುವರ್ಗ ಹಾಗೂ ಕೆಳವರ್ಗಗಳ ನಡುವಿನ ಸಂಘರ್ಷವಾಗಿದೆ. ದೇವತೆಗಳ ಮೂಲಕ ಪ್ರಕಟವಾದ ಬಹುದಾದ ಮಾನವನ ಪ್ರಯತ್ನ ಸಾಧನೆ, ಸಾಧ್ಯತೆಗಳನ್ನು ಇಲ್ಲಿ ಸೂಕ್ಷ್ಮವಾಗಿ ಗುರುತಿಸಬಸಹುದಾಗಿದೆ. ಹೊರಗಮ್ಮ ದೇವತೆಯ ಅಧ್ಯಯನ ಕುತೂಹಲಕಾರಿಯಾಗಿದ್ದು, ಶಿಷ್ಟದೇವತೆಯು ಶ್ರೇಣೀಕೃತ ವ್ಯವಸ್ಥೆಯನ್ನು ಕಿತ್ತೊಗೆಯುವ ಅಂಶವಿದೆ. ವೈದಿಕ ಸಂಸ್ಕೃತಿಗೆ ಈ ದೇವತೆಯನ್ನು ಸೇರಿಸುವ ಪ್ರಯತ್ನ ಹಾಗೂ ಅದರ ವಿಫಲತೆಯು ಇಲ್ಲ ಎದ್ದುಕಾಣುತ್ತದೆ. ಕೆಳವರ್ಗದ ಮನಸ್ಸಿನಲ್ಲಿ ಇರಬಹುದಾದ ವರ್ಣಸಂಕರದ ಬಯಕೆಯು ಇಲ್ಲಿ ವ್ಯಕ್ತವಾಗುತ್ತದೆ. ವಿಭಿನ್ನ ಪೌರಾಣಿಕ ಹಿನ್ನೆಲೆ ಹಾಗೂ ವಿಶಿಷ್ಟ ನಂಬಿಕೆಗಳು ಮತ್ತು ಆಚರಣೆಗಳ ಮೂಲಕ ವರನಂದಮ್ಮನ ಆರಾಧನೆಯು ಈ ಸ್ಥಳದಲ್ಲಿ ವಿಶಿಷ್ಟತೆ ಪಡೆದಿದೆ.

ವರನಂದಮ್ಮನ ಕುರಿತ ಪುರಾಣ

ಮೇಲುಕೋಟೆಯ ಶಿಷ್ಟದೇವತೆಯಾದ ನಾರಾಯಣನೊಂದಿಗೆ ನೇರ ಸಂಬಂಧದೊಂದಿಗೆ ಗುರುತಿಸಿಕೊಂಡಿರುವ ವರನಂದಿಯ ಪುರಾಣಕಥೆಯು ಜಾನಪದರ ಮತ್ತು ಶಿಷ್ಟರ ನಡುವೆ ಭಿನ್ನತೆಯನ್ನು ಹೊಂದಿದೆ. ಜನಾಪದರ ಸಾಮಾಜಿಕ ಹಂಬಲ ಇವರ ಕಥೆಯಲ್ಲಿ ವ್ಯಕ್ತವಾದರೆ, ಶಿಷ್ಟ ಸಂಸ್ಕೃತಿಯು ಅದನ್ನು ತನ್ನ ಕಥೆಯ ಮೂಲಕ ತಿರಸ್ಕರಿಸುವುದನ್ನು ಕಾಣಬಹುದು. ಮೇಲುಕೋಟೆಯ ಗಿರಿಶ್ರೇಣಿಯ ಪೂರ್ವದ ಬುಡದಲ್ಲಿರುವ ಕದಲಗೆರೆ, ಕಾಡೇನಹಳ್ಳಿ, ನ್ಯಾಯನಹಳ್ಳಿ ಗ್ರಾಮದ ಜನರು ವರನಂದಿಯನ್ನು ಗ್ರಾಮದೇವತೆಯಾಗಿ ಆರಾಧಿಸುತ್ತಾರೆ. ಶಿಷ್ಟ ಸಂಸ್ಕೃತಿಯಿಂದ ಉಪೇಕ್ಷೆಗೊಳಪಟ್ಟ ಜಾನಪದರು ಈ ದೇವತೆಯ ಆರಾಧನೆಯ ಮೂಲಕ, ಸಮನಾದ ಮತ್ತೊಂದು ಜಾನಪದ ಸಂಸ್ಕೃತಿಯ ಹುಟ್ಟಿಗೆ ಕಾರಣವಾಗಿರುವ ಅಂಶವು ಈ ಕಥೆಯಿಂದ ವ್ಯಕ್ತವಾಗುತ್ತದೆ.

ಒಮ್ಮೆ ದೇವೇಂದ್ರನ ಸಭೆಯಲ್ಲಿ ಗಂಧರ್ವರಿಗೂ ಮತ್ತು ಯಕ್ಷರಿಗೂ ಜಾತಿಯ ವಿಷಯದಲ್ಲಿ ವಾಗ್ವಾದ ನಡೆದು ಘರ್ಷಣೆಗೆ ಕಾರಣವಾಯಿತು. ನಾರದನು ಮಧ್ಯ ಪ್ರವೇಶಿಸಿ ಜಾತಿನಿಂದನೆ ಹಾಗೂ ವೈಷಮ್ಯಗಳು ಸಾಧುವಲ್ಲ ಎಂದು ಇಬ್ಬರಿಗೂ ತಿಳಿಹೇಳಿದನು. ನಾರದರು ಒಂದು ಸವಾಲು ಹಾಕಿದರು. ಏನೆಂದರೆ ಯಾರು ಭೂಲೋಕದಲ್ಲಿ ಹುಟ್ಟಿ ದೇವರನ್ನು ಮೆಚ್ಚಿಸುವರೋ ಅವರು ಮೇಲು, ಈ ಕೆಲಸ ಯಾರು ಮಾಡುವಿರಿ? ಗಂದರ್ವರಾಜನಾದ 'ಸುತಾಳನು' ಇದಕ್ಕೆ ಒಪ್ಪಿ, ಕಾಶಿಯಲ್ಲಿ ಗುಂಡುಬ್ರಾಹ್ಮಣನಾಗಿ ಹುಟ್ಟಿ ಮಠಾಧಿಪತಿಯಾಗಿ ವಿಪ್ರ ಬ್ರಾಹ್ಮಣರನ್ನು ಶಿವಮತಕ್ಕೆ ಮತಾತಂತರಿಸಿದನು. ಹರಿನಾಮಸ್ಮರಣೆ ಮತ್ತು ವೈಷ್ಣವ ಚಿಹ್ನೆ ಹಾಕಿದವರನ್ನು ಹಿಂಸಿಸಿದನು. ಇದನ್ನು ತಿಳಿದ ನಾರಾಯಣನು ವೇಷಧರಿಸಿ ಕಾಶಿಯಲ್ಲಿ ಹರಿನಾಮಸ್ಮರಣೆ ಮಾಡಿದಾಗ, ಗುಂಡು ಬ್ರಾಹ್ಮಣನ ಸೇವಕರು ಬಂಧಿಸಲು ಪ್ರಯತ್ನಿಸಿ ವಿಫಲರಾದರು. ಸ್ವತಃ ಗುಂಡು ಬ್ರಾಹ್ಮಣನೇ ಬಂದಾಗ ಹರಿಯಿಂದ ಶಾಪಗ್ರಸ್ಥನಾದ. ಅದರಂತೆ ನೀನು ಮೂರ್ತಿ ಆರಾಧನೆಗಳಿಲ್ಲದ ಆಕಾರ ಭೂಮಿಯನ್ನೇ ದೇವರೆಂದು ನಂಬಿರುವ ಮ್ಲೇಚನಾಗಿ (ಮುಸಲ್ಮಾನ) ಹುಟ್ಟು ಎಂದು ಶಾಪ ನೀಡಿದ. ನೊಂದ ಬ್ರಾಹ್ಮಣನು ಶಿವನನ್ನು ಕುರಿತು ತಪಸ್ಸುಮಾಡಿದನು. ಶಿವನಿಂದ ಲಕ್ಷ್ಮಿಯು ತನಗೆ ಮಗಳಾಗಿ ಹುಟ್ಟಬೇಕು ಶ್ರೀಹರಿಯು ತನಗೆ ಅಳಿಯನಾಗಬೇಕು ಎಂಬ ವರಪಡೆದನು. ಶಿವನು ನಂತರ ಬ್ರಾಹ್ಮಣನಿಗೆ ಶಿವ ಮತ್ತು ವಿಷ್ಣುವಿನ ಸಮಾನತೆಯ ಬೋಧನೆ ಮಾಡುವನು. ಮುಂದಿನ ಜನ್ಮದಲ್ಲಿ ಈ ವರವು ಫಲಿಸುತ್ತದೆ ಎಂದನು.

ಮುಂದೆ ಈತ ಮಹಮ್ಮದ್ (ಮುಸಲ್ಮಾನ ರಾಜ) ಸುರತಾಳನಾಗಿ ಹುಟ್ಟಿದನು. ಮಹಾರಾಷ್ಟ್ರದ ರಾಜ ರಂಗವರ್ಮನ ಮಗಳು ಚಂದ್ರಮುಖಿಯನ್ನು ವಿವಾಹವಾದನು. ಹಿಂದಿನ ಜನ್ಮದ ನೆನಪು ಬಂದು ರಾಜನು ಪಾಪ ಪರಿಹಾರಕ್ಕೆ 108 ದಿವ್ಯಕ್ಷೇತ್ರ ಸುತ್ತಿ ತೀರ್ಥ ಸೇವಿಸಿ ಮೂರ್ತಿಗಳನ್ನು ಕೊಳ್ಳೆ ಹೊಡೆದನು. ವಿಪ್ರರ ಸಲಹೆಯಂತೆ ಮೇಲುಕೋಟೆ (ಯಾದವಗಿರಿ)ಗೆ ತನ್ನ ದಂಡು ಸಮೇತ ಬಂದು ಇಲ್ಲಿ ಭಕ್ತರಿಗೆ ಅನ್ನದಾನ ಮಾಡಿಸಿ ಅಪಾರ ಮುತ್ತುರತ್ನ ಸಂಪತ್ತಿನೊಂದಿಗೆ ಇಲ್ಲಿನ ಮೂರ್ತಿ ನಾರಾಯಣನನ್ನು ಕೊಂಡೊಯ್ದನು. ಇದರಿಂದ ಕಂಗಾಲಾದ ಇಲ್ಲಿನ ಬ್ರಾಹ್ಮಣರು ಇಲ್ಲಿಂದ ವಲಸೆಹೋದರು. ಗ್ರಾಮೀಣರು ಈತನನ್ನು 'ಪಾದುಷಾಹ' ಎಂದು ಕರೆಯುವರು (ನಾರಾಯಣನು ಈತನಿಗೆ ಪಾದದಲ್ಲಿ ದರ್ಶನ ನೀಡಿದ್ದಾದರಿಂದ ಈ ಹೆಸರು ಬಂದಿತು ಎಂಬ ನಂಬಿಕೆಯಿದೆ). ನಂತರ ರಾಜನ ಸಂಪತ್ತು ದ್ವಿಗುಣವಾಯಿತು. ನಂತರ ತನ್ನ ವಜೀರ (ಮಂತ್ರಿ)ನ ಸಲಹೆಯಂತೆ ಯಜ್ಞವನ್ನು ಮಾಡಿಸಿದನು. ಏಕೆಂದರೆ ತನ್ನ ಹೆಂಡತಿಗೆ ಮಕ್ಕಳಾಗಿರಲಿಲ್ಲ. ಯಜ್ಞವು ಫಲಿಸಲಿಲ್ಲ. ಬ್ರಹ್ಮನ ಒತ್ತಾಯದ ಮೇರೆಗೆ ಲಕ್ಷ್ಮಿಯು ಪಾದುಷಾನ ಮಗಳಾಗಿ ಹುಟ್ಟಲು ಒಪ್ಪಿದಳು. ನಾರದನು ಕೊಟ್ಟ ಪುಷ್ಪವನ್ನು ಸೇವಿಸಿದ ಚಂದ್ರಮುಖಿಯು 'ವರನಂದಿಗೆ' ಜನ್ಮ

ನೀಡಿದಳು. ಗಮನಾರ್ಹವೆಂದರೆ ಇಲ್ಲಿ ವರದಿಂದ ಲಕ್ಷ್ಮಿ ಜನಿಸಿದಳು. ಪಾದುಷಾನ ದೈಹಿಕ ಸಂಪರ್ಕದಿಂದಲ್ಲ. ಆದುದರಿಂದ ಈಕೆ ವರನಂದಿಯಾದಳು. (ಹುಟ್ಟಿದಾಗ ಕಾಮಧೇನು 'ನಂದಿ'ಯ ಹಾಲು ಕುಡಿದುದರಿಂದ 'ನಂದಿ' ಸೇರ್ಪಡೆಯಾಯಿತು) ವರನಂದಿಯು ಚಂದ್ರಮುಖಿಯ ಕರ್ಣದಿಂದ ಹೊರಬಂದಳು. ಮುಸಲ್ಮಾನರು ಈಕೆಗೆ 'ಬೂಚಿನಾನಿ' (ಬೇಬಿನಾಚ್ಚಿಯರ್) ಎಂದು ಹೆಸರಿಟ್ಟರು. ವಿಪ್ರರು ವರನಂದಿ ಎಂದು ಹೆಸರಿಟ್ಟರು. ಸೀತೆಹೇಗೆ ಭೂಮಿಯಿಂದ ಬಂದಳೋ ಹಾಗೆಯೇ ವರನಂದಿ ವರದಿಂದ ಬಂದಳು ಎಂಬ ನಂಬಿಕೆಯಿದೆ. ಮುಲ್ಲಾನು ಕಟ್ಟಿದ ಮಂತ್ರವನ್ನು ಮಗು ಕಿತ್ತೊಗೆಯಿತು. ಅವರ ಉಡುಗೆತೊಡಗೆಯನ್ನು ತಿರಸ್ಕರಿಸಿತು. ಆಸ್ತಾನದ ವಿಪ್ರರು ಇದ್ದ ಮನೆಯಲ್ಲಿ ಅವರ ಮಡದಿಯರಿಂದ ಮಗುವಿನ ಹಾರೈಕೆ ಹಿಂದೂ ಸಂಪ್ರಾಯದಂತೆ ನಡೆಯುತ್ತಿತ್ತು.

ರಾಜನಿಂದ ಬಂಧಿಯಾಗಿದ್ದ ಮೇಲುಕೋಟೆ ನಾರಾಯಣನ ಮೂರ್ತಿಯು ಕನಸಿನಲ್ಲಿ ವರನಂದಿಯ ಕನಸಿನಲ್ಲಿ ತುರ್ಕರ ಮಗಳೆ ನನ್ನನ್ನು ಬಂಧನದಿಂದ ಬಿಡಿಸುವಂತೆ ಕೇಳಿತು. 5ವರ್ಷದ ವರನಂದಿಯು ತನ್ನ ತಂದೆಗೆ ಆ ದಿವ್ಯ ಮಾತನಾಡುವ ಬೊಂಬೆಯನ್ನು ಕೊಡುವಂತೆ ಹಠಹಿಡಿದಳು. ಆ ವಯಸ್ಸಿನಲ್ಲಿ ಪ್ರಹ್ಲಾದನಂತೆ ವಿಪ್ರರಿಗೆ ಸಕಲಶಾಸ್ತ್ರ ವಿದ್ವತ್ತನ್ನು ವಿಪ್ರರಿಗೆ ಹೇಳುತ್ತಿದ್ದಳು. ವರನಂದಿಯ ಬೇಡಿಕೆಯಂತೆ ರಾಜನು ಖಜಾನೆಯಲ್ಲಿದ್ದ ಮಾತನಾಡುವ ಮೂರ್ತಿಯನ್ನು ಮಗಳಿಗೆ ನೀಡಿದನು. ಅದನ್ನು ಶಯನಾಗೃಹದಲ್ಲಿಟ್ಟುಕೊಂಡು, ಇರುಳೆಲ್ಲಾ ಗೊಂಬೆಯಾಗಿರುತ್ತಿದ್ದ ಹರಿಯು ರಾತ್ರಿ ಮಾನವರೂಪ ತಾಳಿ ವರನಂದಿಯೊಂದಿಗೆ ದಾಂಪತ್ಯ ಜೀವನ ಮಾಡುತ್ತಿದ್ದ. ವರನಂದಿ ರಾತ್ರಿ 18ರ ಪ್ರಾಯದ ಹುಡುಗಿಯಾಗುತ್ತಿದ್ದಳು. ನಾರಾಯಣನು ವರನಂದಿಗೆ ನಿಮ್ಮ ತಂದೆಗೆ ನಮ್ಮಿಬ್ಬರ ಮದುವೆ ಮಾಡುವಂತೆ ಕೇಳೆಂದನು. ಅನ್ಯ ಧರ್ಮೀಯನೊಂದಿಗೆ ತಮ್ಮ ಮಗಳ ವಿವಾಹ ನಡೆಯುವುದನ್ನು ರಾಜ-ರಾಣಿಯರು ವಿರೋಧಿಸುತ್ತಾರೆ. ಚೆಲುವಯ್ಯ-ವರನಂದಿ ಈಗ ಅವರ ಮಾತನ್ನು ಧಿಕ್ಕರಿಸಿ ವಿವಾಹವಾಗಬೇಕಾಯಿತು. ನಂತರ ನಾರಾಯಣನು ತಾನೇ ಮದುವೆ ಸಿದ್ಧತೆ ನಡೆಸಿದನು. ಆಗ ವರನಂದಿಯು ಹೇಳಿದಳು. ನಿನಗೆ ಈಗಾಗಲೇ ನಾಲ್ಕು ಹೆಂಡತಿಯರಿದ್ದಾರೆ. ಅವರು ನನ್ನನ್ನು ಆಧರಿಸುತ್ತಾರೆಯೇ ಎಂದು ಅತ್ತಳು. ಆಗ ನಾರಾಯಣನು 'ಅವರನ್ನು ಕಂಡರೆ ನನಗೆ ಅರೆಗಣ್ಣು, ನಿನ್ನನ್ನು ಕಂಡರೆ ನಿಜಗಣ್ಣು' ಎಂದು ಸಮಾಧಾನಪಡಿಸಿದನು. ಕೆಲವರು ಪರಿಪರಿಯಾಗಿ ಇಬ್ಬರನ್ನು ನಿಂದಿಸಿದರು. 'ಅಚ್ಚ ತುರುಕರು ಹೆಣ್ಣಿಗೆ ತುದಿಗಾಲಲ್ಲೇ ಪಾಪಾಸು, ತುರುಬಿಲ್ಲ, ನೆರಿಯಿಲ್ಲ, ಏನೆಂದು ಅವಳನ್ನು ಸೆರೆಹಿಡಿದು ತಂದಾನೋ' ಎಂದರು. ಮತ್ತೆ ಕೆಲವರು 'ಎತ್ತು ಎಮ್ಮೆಗಳನ್ನು ಕಾಯುವ ಆ ವೈಷ್ಣವರ ಹುಡುಗನನ್ನು ಏನೆಂದು ಮೆಚ್ಚಿದಳು' ಎಂದು ವರನಂದಿಯನ್ನು ಅಂದರು. ವರನಂದಿಯು 'ನನ್ನ ಹಣೆಯಲ್ಲಿ ಹಾಗೆ ಬರೆದಿತ್ತು ಮೇಲುಕುಲದವರನ್ನು ಕೂಡಿಕೊಂಡೆ' ಎಂದಳು.

ನಾರಾಯಣನು ತಿಮ್ಮಪ್ಪನನ್ನು ಮದುವೆಗೆ ಕರೆದಾಗ, ಅವನು ಹೇಳಿದನು ಮ್ಲೇಚ ಹುಡುಗಿಯನ್ನು ಮದುವೆಯಾಗುವುದು ಅಪಮಾನಕರ ಆದುದರಿಂದ ಮದುವೆಗೆ ಬರುವುದಿಲ್ಲವೆಂದನು. ಚೆಲುವಯ್ಯನು ತಿಮ್ಮಪ್ಪನನ್ನು ಹಿಯಾಳಿಸಿದನು. ನಂಜನಗೂಡಿನ ನಂಜಯ್ಯನು ಬರಲು ತಿರಸ್ಕರಿಸಿದನು. ಸಾಬರ ಹುಡುಗಿ ತರುವುದು ಕುಲಕ್ಕೆ ಅಪಮಾನ ಎಂದನು. ಅದಕ್ಕೆ ಚೆಲುವಯ್ಯ ನೀನೇಕೆ ಚಾಮುಂಡಿಯನ್ನು ಮಡಗಿದ್ದಿ ಎಂದು ಹೀಯಾಳಿಸಿದನು. ಚುಂಚನಗಿರಿ ಭೈರವನೂ ಸಹ ತಿರಸ್ಕರಿಸಿದನು. ಆದರೂ ತನ್ನ ಭಕ್ತರ ಸಹಕಾರದಿಂದ ವಿವಾಹವಾದನು. ವರನಂದಿ ಅನ್ಯ ಮತೀಯ ಹೆಣ್ಣಾದರೂ ಕುಲದೈವದ ಮನಸ್ಸು ಗೆದ್ದಿದ್ದಾಳೆ ಎಂದು ಸಂಭ್ರಮದಿಂದ ನೆರವೇರಿಸಿದರು.

ಇತ್ತ ಮೇಲುಕೋಟೆಯಲ್ಲಿ ಉತ್ಸವ ಮೂರ್ತಿಯಿಲ್ಲದೆ ರಾಮಾನುಜರು ಕಂಗಾಲಾದರು. ತನ್ನ ಸ್ವಾಮಿಯು ದೆಹಲಿಯಲ್ಲಿರುವುದು ಕನಸಿನಿಂದ ಗೊತ್ತಾಯಿತು. ಸಾವಿರಾರು ದಲಿತ ಶಿಷ್ಯರೊಂದಿಗೆ ಆಚಾರ್ಯರು ದೆಹಲಿಗೆ ಬಂದರು. ಅಲ್ಲಿದ್ದ ಮೂರ್ತಿಗಳ ರಾಶಿಯನ್ನು ರಾಜತೋರಿಸಿದನು. ಆಚಾರ್ಯರು ಅದಾವುದುನ್ನು ಒಪ್ಪಲಿಲ್ಲ. ತಾವೇ ಕರೆದು ಬಂದರೆ ಕರೆದುಕೊಂಡು ಹೋಗಿ ಎಂದನು. ವರನಂದಿಯು ನಿದ್ರಿಸುತ್ತಿದ್ದಾಗ ರಾಮಪ್ರಿಯ, ಶೆಲ್ವಿಪಿಳ್ಳೈ ಎಂದು ಕರೆದರು. ಅದು ರಾಮಾನುಜರ ಬಳಿಗೆ ಬಂದಿತು. ಪಾದುಷಾಹ ಮಹಾರಾಜನು ಆಚಾರ್ಯ ದರ್ಶನದಿಂದ ತನ್ನ ಪಾಪ ನಿವಾರಣೆ ಮಾಡಿಕೊಂಡಿದ್ದನು. ಪ್ರೀತಿಯ ಮಗಳು ರಾಜಕುಮಾರಿ ಏನಾದರೂ ಆ ವಿಗ್ರಹ ಬೇಕೆಂದು ಕೇಳಿದರೆ ರಾಜನು ಹಿಂದಕ್ಕೆ ಪಡೆಯುವನೆಂಬ ಭಯದಿಂದ ಆಚಾರ್ಯರು ದೆಹಲಿಯಿಂದ ವೇಗವಾಗಿ ದೂರ ಬಂದರು. ಕೆಲವು ಬ್ರಾಹ್ಮಣರಿಂದ ತನ್ನ ಪ್ರೀತಿಯ ವಿಗ್ರಹವನ್ನು ತೆಗೆದುಕೊಂಡು ಹೋದರೆಂದು ರಾಜಕುಮಾರಿಗೆ ಗೊತ್ತಾದಾಗ ದುಃಖಿತಳಾಗಿ, ಗೋಳಾಡಿ ಅನ್ನಾಹಾರಗಳನ್ನು ತೊರೆದು ಕೃಶಳಾದಳು. ನಂತರ ತಂದೆಯ ಅನುಮತಿ ಪಡೆದು ದಾಸದಾಸಿಯರ ಗುಂಪಿನೊಂದಿಗೆ ಹಾಗೂ ತನ್ನ ಸಹೋದರ ಹಮ್ಮೀರನೊಂದಿಗೆ ಯಾದವಗಿರಿ ಕಡೆಗೆ ಹೊರಟಳು.

ಇತ್ತ ವರನಂದಿಯು ಬರದಿದ್ದರೆ ತಾನು ಬರುವುದಿಲ್ಲ ಎಂದು ನಾರಾಯಣನು ಹಠ ಹಿಡಿದನು. ತಾನು ಕುಳಿತಿದ್ದ ರಥವನ್ನು ಕರ್ಣನು ರಥವನ್ನು ತುಳಿದಂತೆ ಭೂಮಿಗೆ ತುಳಿದನು. ವರನಂದಿಯು ನಾರಾಯಣನನ್ನು ಸೇರಿಕೊಂಡಳು ನಂತರವಷ್ಟೇ ರಥ ಹೊರಟಿತು. ಮೇಲುಕೋಟೆಯ ಸಮೀಪಕ್ಕೆ ಬಂದಾಗ ಇಲ್ಲಿನ ಬ್ರಾಹ್ಮಣರು ಅಡ್ಡಗಟ್ಟಿ ಈ ಹುಡುಗಿ ಯಾರೆಂದು ಕೇಳಿದರು. ನಮ್ಮ ಸ್ವಾಮಿಗೂ ಇವಳಿಗೂ ಏನು ಸಂಬಂಧ ಇವಳನ್ನು ಇಲ್ಲೇ ಇಳಿಸಿ ಎಂದರು. ರಾಮಾನುಜರನ್ನೇ ನಿಂಧಿಸಿದರು ಮತ್ತು ಅನುಮಾನಿಸಿದರು.

ವಿಪ್ರರು ಅವಳನ್ನು ಊರಿನೊಳಗೆ ಬಿಡಲು ನಿರಾಕರಿಸಿದರು. ಸಂಪ್ರದಾಯಸ್ಥ ಬ್ರಾಹ್ಮಣರು ಅವಳನ್ನು ಗುಡಿಯಿಂದ ಹೊರಗಿರಿಸುವ ಕುಟಿಲೋಪಾಯದಲ್ಲಿ ತೊಡಗುತ್ತಾರೆ. ಮಿತ್ರರಿಗೂ ವರನಂದಿಯ ಸಹಾಯಕರಿಗೂ ದೊಂಬಿ ಘರ್ಷಣೆಗಳಾದವು. ನಂತರ ಮ್ಲೇಚ್ಛ ಕನ್ಯೆಯನ್ನು ಗುಡಿಯೊಳಗೆ ಸೇರಿಕೊಳ್ಳುವ ವಿಚಾರದಲ್ಲಿ ಚರ್ಚೆಗಳಾದವು. ವಿಪ್ರರು ಅವಳನ್ನು ನೀನು 'ಹೊರಗಿರಮ್ಮ'–ಹೊರಗಿರಮ್ಮ' ಎಂದರು. ಮುಂದೆ ಇದು ಜನಪದರ ಬಾಯಲ್ಲಿ ಹೊರಗಮ್ಮ ಆಗಿ ಹೊಗರಕಲ್ಲಮ್ಮಳಾಗುತ್ತಾಳೆ. ರಾಮಾನುಜರು ಇದನ್ನು ವಿರೋಧಿಸಿದರು, ಅಸಹಾಯಕರಾಗಿ ಇತ್ತ ಮೂರ್ತಿಯನ್ನು ಪ್ರತಿಷ್ಠಾಪಿಸಿದರು.

ಇತ್ತ ವರನಂದಿಯು ಲೋಕಾಪವಾದಗಳು ಹಾಗೂ ನಿಂದನೆಗಳನ್ನು ಸಹಿಸಲಾಗದೆ ಮೇಲುಕೋಟೆಯ ನಾರಾಯಣನ ಗುಡಿಯ ಪೂರ್ವದಲ್ಲಿರುವ ಗುಹೆಯೊಂದರಲ್ಲಿ ವಾಸವಾಗಿದ್ದಳು. ನಾರಾಯಣನು ದಿನನಿತ್ಯ ಸುರಂಗದ ಮೂಲಕ ಬಂದು ವರನಂದಿಗೆ ಸಮಾಧಾನ ಮಾಡುತ್ತಿದ್ದನು. ಲೋಕನಿಂದನೆಯಿಂದ ಮನನೊಂದ ವರನಂದಿಯು ತನ್ನ ಸೇವಕಿಯರೊಂದಿಗೆ 12 ದಿವಸ ವ್ರತಮಾಡಿದಳು. 12ನೇಯ ದಿವಸ ತಾನಿದ್ದ ಗುಹೆಯಲ್ಲಿ ನರ್ತನ ಮಾಡಿ ಪರಂಜ್ಯೋತಿಯಾಗಿ ಅವಳ ಆತ್ಮ ನಾರಾಯಣಸ್ವಾಮಿ ದೇವಾಲಯದ ನಾರಾಯಣನ ಪಾದದಲ್ಲಿ ಐಕ್ಯವಾಯಿತು. ಆ ಸಂದರ್ಭದಲ್ಲಿ ಜೋರಾಗಿ ಮಳೆಸುರಿಯಿತು. ಇದನ್ನು ನೋಡಿದ ಬ್ರಾಹ್ಮಣರು ಆಶ್ಚರ್ಯಗೊಂಡರು. ಆಚಾರ್ಯರಿಂದ ಇದು ವರನಂದಿಯ ಪವಾಡ ಎಂದು ತಿಳಿದರು. ಬ್ರಾಹ್ಮಣರು ತಮ್ಮ ತಪ್ಪಿಗೆ ಕ್ಷಮೆಯಾಚಿಸಿದರು. ನಾವು ಇವಳನ್ನು ಮಗಳಿಗಿಂತ ಹೆಚ್ಚಾಗಿ ವರಲಕ್ಷ್ಮೀಯ ಪೂಜೆ ಮಾಡುವೆವೆಂದು ಹೇಳಿದರು. ತಾಯಿಯನ್ನು ಹಿಯಾಳಿಸಿದ್ದಕ್ಕಾಗಿ ಬ್ರಾಹ್ಮಣರು ತಮ್ಮ ಮೊದಲ ಪೂಜೆಯನ್ನು ಪಾದಕ್ಕೆ ಮಾಡಬೇಕು ಎಂಬ ನಿಯಮವಾಯಿತು.

ಇತ್ತ ವರನಂದಿಯ ಶವವನ್ನು ಗುಡಿಯಲ್ಲಿಯೇ ಸಮಾಧಿ ಮಾಡಿದರು. ತಮ್ಮನಾದ ಹಮ್ಮೀರನಿಂದ ಭೂಶಾಂತಿ ಮಾಡಿಸಿದರು. ಸಕಲ ಶಾಸ್ತ್ರಗಳಿಂದ ವಿಪ್ರರ ನಿಯಮದಂತೆ ತಿಥಿ ಅನ್ನಸಂತರ್ಪಣೆಗಳು ನಡೆದವು. ಇವಳು ದೂರದೂರು ಇವಳು ಏನು ಮಾಡಬೇಕು ಎಂದಾಗ, ಆಚಾರ್ಯರು ಹೊಗರಮ್ಮನ ಗುಡಿಯ ಬಂಡೆಯ ಮೇಲೆ ಒಂದು ತೆಂಗಿನಕಾಯಿ ಹೊಡೆದರು ಅವು ಮೂರು ಹೋಳುಗಳಾಗಿ ಕ್ರಮವಾಗಿ ಕದಲಗೆರೆ, ಕಾಡೇನಹಳ್ಳಿ, ನ್ಯಾಮನಹಳ್ಳಿಯಲ್ಲಿ ಬಿದ್ದವು. ಇನ್ನು ಮುಂದೆ ಇವು ಈ ತಾಯಿಯ ತವರು ಮನೆಗಳು. ಈ ಮೂರು ಗ್ರಾಮಗಳು ಬ್ರಾಹ್ಮಣರು ನಾಚುವ ರೀತಿಯಲ್ಲಿ, ಮಧ್ಯಮಾಂಸಗಳಿಲ್ಲದೆ ಮಡಿ ನಿಯಮಗಳಿಂದ, ಮೈಲಿಗೆಯಿಲ್ಲದೆ ವ್ರತನಿಯಮಗಳಿಂದ 12 ದಿವಸಗಳು ಗ್ರಾಮದಲ್ಲಿ ಹಬ್ಬದಾಚರಣೆ ಮಾಡಬೇಕು ಎಂದು ಆಚಾರ್ಯರು ತಿಳಿಸಿದರು. ತವರು ಮನೆಯಿಂದ ಮಗಳನ್ನು ಪ್ರೀತಿಯಿಂದ ಕಳುಹಿಸುವಂತೆ ನೇಮಕ ಮಾಡಿದರು.[124]

ವರನಂದಿಯೊಂದಿಗೆ ಬಂದ 101 ಜನ ಸಖಿಯರು ಗ್ರಾಮದ ಎಲ್ಲಾ ಜಾತಿಗಳಲ್ಲಿ ಹಂಚಿಹೋದರು ಹಬ್ಬದಲ್ಲಿ ಬಟ್ಟೆ ಶುದ್ಧಿಮಾಡುವ ಅಗಸರು, ಮಡಿಕೆ ಒದಗಿಸುವ ಕುಂಬಾರರು, ಗುಡಿ ಬಂಡಿ ಚಿನ್ನಗಳನ್ನು ಕೊಡುವ ಆಚಾರರು, ಎಣ್ಣೆ ಒದಗಿಸುವ ಗಾಣಿಗರು, ನಾಟ್ಯ, ಸಂಗೀತ, ಗಾನ, ವಾದ್ಯಮೇಳಗಳನ್ನು ಮಾಡುವ ವೀರಮಕ್ಕಳು (ಹರಿಜನರು) ಕೃಷಿ ಕಾರ್ಯ ಮಾಡುವ ಒಕ್ಕಲಿಗರುಗಳಾಗಿ ಸಖಿಯರು ಸೇರಿಹೋದರು ಎಂಬ ನಂಬಿಕೆಯಿದೆ.

ಮೇಲಿನ ಪುರಾಣಕಥೆಯಿಂದ ಉಧಿತವಾಗುವ ಅಂಶಗಳು

ಶಿಷ್ಟಸಂಸ್ಕೃತಿಯ ಕೆಲವು ಸಾಮಾಜಿಕ ನಿರ್ಬಂಧಗಳಿಂದ ಹತಾಶರಾಗದ ಸಾಮಾನ್ಯ ಜನತೆ ಗ್ರಾಮದೇವತೆಯಲ್ಲಿ ಭರವಸೆಯ ಬೆಳಕನ್ನು ಕಾಣುವ ಪ್ರಯತ್ನ ಈ ಪುರಾಣದ ಉಗಮಕ್ಕೆ ಕಾರಣವಾಗಿದೆ. ಇದು ವೈದಿಕ–ಅವೈದಿಕ ಸಂಸ್ಕೃತಿಗಳ ನಡುವೆ ನಡೆಯುವ ಸಂಘರ್ಷವಾಗಿದೆ. ಮೇಲುವರ್ಗ ಹಾಗೂ ಕೆಳವರ್ಗಗಳ ನಡುವೆ ನಡೆಯುವ ಸಂಘರ್ಷದ ಕಥೆಯಾಗಿದೆ. ಇಲ್ಲಿ ಶಿಷ್ಟದೇವತೆಯೊಂದು ಜಾತಿವ್ಯವಸ್ಥೆಯನ್ನು ಹಾಗೂ ಮತೀಯ ಭಾವನೆಯನ್ನು ಧಿಕ್ಕರಿಸುವ ಪ್ರಯತ್ನ ಪುರಾಣದಲ್ಲಿ ವ್ಯಕ್ತವಾಗಿದೆ. ಜನಪದ ದೇವತೆಯ ಪ್ರಭಾವ ಶಿಷ್ಟ ದೇವತೆಯ ಮೇಲೆ ಮತ್ತು ಶಿಷ್ಟ ದೇವತೆಯ ಪ್ರಭಾವ ಜನಪದ ದೇವತೆಯ ಮೇಲೆ ಉಂಟಾಗಿದೆ. ಈ ಜಾನಪದೀಯ ಪುರಾಣದಲ್ಲಿ ವೈದಿಕ ಮುದ್ರೆ ಸ್ಪಷ್ಟವಾಗಿ ಕಂಡುಬರುತ್ತದೆ. ಈ ರೀತಿಯ ಕಲ್ಪನೆ ಶಿಷ್ಟ ಸಂಸ್ಕೃತಿಯ ಪ್ರಭಾವದಿಂದ ಉಂಟಾದದ್ದು ಎನ್ನಬಹುದು. ಸಾಂಪ್ರದಾಯಿಕತೆ ಮತ್ತು ಮಡಿವಂತಿಕೆಗಳಿಂದ ಮೇಲ್ವರ್ಗವೆನಿಸಿದ್ದ ಜನರ ಆಚರಣೆಗಳ ಅನುಕರಣೆಯ ಹಂಬಲ ಈ ಬಗೆಯ ಪುರಾಣದ ಮೂಲ ಪ್ರೇರಣೆಯಾಗಿರಬಹುದು.

ಜಾತಿನಿಂದನೆಗೊಳಗಾದ ಸುರತಾಳನು ಗುಂಡು ಬ್ರಾಹ್ಮಣನಾಗಿ ಹುಟ್ಟಿ ವಿಷ್ಣುಭಕ್ತರನ್ನು ಹಿಂಸಿಸುವುದು ಹಾಗೂ ಹರಿಯಿಂದ ಶಾಪಕ್ಕೊಳಗಾಗುವುದು ಇದು ಇಲ್ಲಿನ ಶಿಷ್ಟದೇವತೆಯಾದ ವಿಷ್ಣುವಿನ ಪಾರಮ್ಯವನ್ನು ತಿಳಿಸುವ ಪ್ರಯತ್ನವಾಗಿದೆ. ಮ್ಲೇಚ್ಛ (ಮುಸಲ್ಮಾನ) ನಾಗಿ ಹುಟ್ಟು ಎಂದು ಶಾಪಗ್ರಸ್ಥನಾದುದು ಸಮಕಾಲೀನ ಮುಸಲ್ಮಾನರ ದಾಳಿಗಳಿಂದ ನೊಂದಿದ್ದ ಜನ ಅವರ ಮೇಲಿದ್ದ ಅಸಮಾನತೆಯನ್ನು ವ್ಯಕ್ತಪಡಿಸಿದುದಾಗಿದೆ. ಮುಸಲ್ಮಾನರ ದಾಳಿಯಿಂದ ಲೂಟಿಯಾದ ಇಲ್ಲಿನ ಉತ್ಸವಮೂರ್ತಿಯನ್ನು ದೆಹಲಿಯಿಂದ ತಂದ ರಾಮಾನುಜರ ಕಥೆಯು ಶಿಷ್ಟ ಸಂಸ್ಕೃತಿಯದ್ದಾಗಿದ್ದು ಇದರಿಂದ ಜಾನಪದ ಪುರಾಣವು ಪ್ರಭಾವಿತವಾಗಿದೆ. ಐತಿಹಾಸಿಕ ತಳಹದಿಯಿಲ್ಲದ ಈ ಕಥೆಯನ್ನು 'ಕರ್ನಾಟಕದಲ್ಲಿ

ಶ್ರೀ ರಾಮಾನುಜಾಚಾರ್ಯರು' ಎಂಬ ಕೃತಿಯಲ್ಲಿ ಬಾ.ರಾ.ಗೋಪಾಲ್ ರವರು ವಾಸ್ತವಾಂಶಗಳ ಮತ್ತು ಕಲ್ಪನೆಗಳ ಕಲಸುಮೇಲೋಗರ ಎಂದಿದ್ದಾರೆ.[125] ಅಲ್ಲದೆ ಶ್ರೀರಂಗದ ಉತ್ಸವಮೂರ್ತಿಯ ವಿಚಾರದಲ್ಲಿಯೂ ಇದೇ ಕಥೆಯು ಹೆಣೆಯಲ್ಪಟ್ಟಿದೆ. ಮುಸ್ಲಿಂ ರಾಜನ ಸಂಪರ್ಕದಿಂದ ಹುಟ್ಟಿಲ್ಲ, ಅವಳು ಹಿಂದೂ ತಾಯಿಗೆ ವರದಿಂದ ಹುಟ್ಟಿದವಳು ಹಾಗೂ ಬ್ರಾಹ್ಮಣರ ಶುಶ್ರೂಶೆಯಿಂದ ಬೆಳೆದಳು. ಮುಸಲ್ಮಾನರ ಸಂಸ್ಕೃತಿಯ ಆಚರಣೆಗಳನ್ನು ಧಿಕ್ಕರಿಸಿದಳು. ಉಡುಗೆ ತೊಡುಗೆಗಳನ್ನು ಧರಿಸುತ್ತಿರಲಿಲ್ಲ ಎಂಬ ಹೇಳಿಕೆಗಳು ತಮ್ಮ ಧರ್ಮದ ವ್ಯಾಪ್ತಿಯಲ್ಲಿ ತಮ್ಮ ದೇವತೆಯನ್ನು ಉಳಿಸಿಕೊಳ್ಳುವ ಹಾಗೂ ಪವಿತ್ರತೆಯನ್ನು ಉಳಿಸಿಕೊಳ್ಳುವ ಪ್ರಯತ್ನವಾಗಿದೆ. ಇನ್ನೊಂದು ಗಮನಾರ್ಹ ಅಂಶವೆಂದರೆ ಪ್ರಬುದ್ಧ ಮನಸ್ಸಿನ ಶಿಷ್ಟ ಪುರಾಣಗಳ ಸೃಷ್ಠಿಯ ಪ್ರಭಾವವಾಗಿರುವುದು. ನಾರದನು ಕೊಟ್ಟ ಪುಷ್ಪದಿಂದ ಚಂದ್ರಮುಖಿ ಗರ್ಭವತಿಯಾದುದು. ರಾಮಾಯಣದ ದಶರಥನ ಪುತ್ರಕಾಮೇಷ್ಠಿಯಾಗವನ್ನು ನೆನಪಿಸುತ್ತದೆ. ಇವಳು ವರದಿಂದ ಬಂದವಳು ಎಂಬುದು ಸೀತೆಯು ಹೇಗೆ ಭೂಗರ್ಭದಿಂದ ಬಂದಳು ಎಂಬುದನ್ನು ನೆನಪಿಸುತ್ತದೆ. ಐದನೇ ವರ್ಷದಲ್ಲಿಯೇ ವಿಪ್ರರಿಗೆ ಸಕಲ ವಿದ್ವತ್ತನ್ನು ಹೇಳುತ್ತಿದ್ದ ಅಂಶ ಪ್ರಹ್ಲಾದನ ಕಥೆಯಿಂದ ಪ್ರಭಾವಿತವಾಗಿದೆ. ವರನಂದಿಯ ಹಠ ಹಿಡಿದ ನಾರಾಯಣನು ರಥವನ್ನು ಭೂಮಿಯಲ್ಲಿ ತುಳಿದದ್ದು ಕರ್ಣನ ಮಹಾಭಾರತದ ಪ್ರಸಂಗವನ್ನು ನೆನಪಿಸುತ್ತದೆ. ಹೀಗೆ ರಾಮಾಯಣ, ಮಹಾಭಾರತದಂತಹ ಪುರಾಣಗಳು ಇಂತಹ ಪುರಾಣಗಳ ರಚನೆಗೆ ಪೂರಕವಾಗಿ ಕೆಲಸಮಾಡಿದೆ. ಶಿಷ್ಟ ಸಂಸ್ಕೃತಿಯ ಪುರಾಣದಂತೆ ಅಮೂರ್ತವಾದ ಪರಿಕಲ್ಪನೆಗಳಿಗೆ ಇಲ್ಲಿ ಅವಕಾಶವಾಗಿದೆ.

ಶಿಷ್ಟ ದೇವತೆಯಾದ ನಾರಾಯಣ (ಚೆಲುವಯ್ಯ)ನು ಮ್ಲೇಚ್ಛ ಜಾತಿಯ ಕನ್ಯೆಗೆ ಮನಸೋತು ಪ್ರೀತಿಸಲು ಆರಂಭಿಸುತ್ತಾನೆ. ಈ ವಿಷಯ ವರನಂದಿಯ ತಂದೆ-ತಾಯಿಗೆ ತಿಳಿದು ಅನ್ಯಧರ್ಮೀಯ' ವಿವಾಹವನ್ನು ತಿರಸ್ಕರಿಸುತ್ತಾರೆ. ನಾರಾಯಣ ಮತ್ತು ವರನಂದಿಯರು ಜನರಿಂದ ವಿಧ-ವಿಧವಾಗಿ ನಿಂದನೆಗೊಳಗಾದರು. ನಿಂದನೆಗೆ ಹೆದರಿದ ವರನಂದಿಯು ರೋಧಿಸುವಿಕೆ ಹಾಗೂ ತಿರುಪತಿ ತಿಮ್ಮಪ್ಪ, ನಂಜನಗೂಡಿನ ನಂಜಯ್ಯ ಮತ್ತು ಚುಂಚನಗಿರಿ ಭೈರವನು ನಾರಾಯಣನನ್ನು ಹಿಯಾಳಿಸಿದರು. ನಾರಾಯಣನ ಬಂದು-ಬಳಗ ಯಾರೂ ಬರದಿದ್ದಾಗ ತಾವಿಬ್ಬರೇ ಮದುವೆ ತಯಾರಿ ಮಾಡುತ್ತಾರೆ. ಉತ್ತಮ ಕುಲದ ಮನಸ್ಸಿನಲ್ಲಿ ಸುಪ್ತವಾಗಿ ಕಾಡುವ ವರ್ಣಸಂಕರದ ಭಯ, ಕೆಳವರ್ಗದ ಮನಸ್ಸಿನಲ್ಲಿ ಗುಪ್ತವಾಗಿ ಇರಬಹುದಾದ ವರ್ಣಸಂಕರದ ಬಯಕೆಯೇ ಈ ಬಗೆಯ ಪುರಾಣದ ಮೂಲ ಪ್ರೇರಣೆಯಾಗಿದೆ. ಪ್ರೀತಿಯ ಮುಂದೆ ಯಾವ ಜಾತಿಯೂ ಇಲ್ಲ ಎಂದು ನಾರಾಯಣನು ಇಲ್ಲಿ ನಿರೂಪಿಸಿದ್ದಾನೆ. ಜಾನಪದರ ಆರೋಗ್ಯಕರ ಮನಸ್ಸಿಗೊಂದು ಉದಹಾರಣೆಯಾಗಿದೆ. ಅಂತರ್ಜಾತಿ ವಿವಾಹಕ್ಕೆ ಹೋಗುವ ವಧು-ವರರು ಸಹಜವಾಗಿ

ಎದುರಿಸುವ ಸಮಸ್ಯೆಗಳು ಇವಾಗಿವೆ. ನಾರಾಯಣನ ಮೂಲಕ ಜಾನಪದರು ಸರಿಯಾದ ಉತ್ತರ ನೀಡಿದ್ದಾರೆ.

ವರನಂದಿ ನಾರಾಯಣನೊಂದಿಗೆ ಮೇಲುಕೋಟೆಗೆ ಬಂದಾಗ ಸಂಪ್ರದಾಯಸ್ಥ ಬ್ರಾಹ್ಮಣರು ಅವಳನ್ನು ಊರಿನೊಳಗೆ ಸೇರಿಸಲಿಲ್ಲ. ಗುಡಿಯಿಂದ ಹೊರಗಿಡಲು ಅವರು ಪ್ರಯತ್ನಿಸಿದರು. ಊರಿನ ಹೊರಗಿರಮ್ಮ ಎಂದರು. ಈ ನಿಂದನೆಗಳಿಂದ ವರನಂದಿಯು ರೋದಿಸಿದಳು. ಇದನ್ನು ಲೆಕ್ಕಿಸದ ನಾರಾಯಣನು ಅವಳನ್ನು ತನ್ನಲ್ಲಿ ಐಕ್ಯಮಾಡಿಕೊಂಡನು. ಇದು ಶಿಷ್ಟ ದೇವತೆಯೇ ಜಾತಿ ನಿರ್ಬಂಧಗಳನ್ನು ಹೊಡೆದು ಹಾಕುವ ಯತ್ನವಾಗಿದೆ. ದೇವತೆಯಾದ ವರನಂದಿಯ ಹಬ್ಬವನ್ನು ಬ್ರಾಹ್ಮಣರು ನಾಚುವ ರೀತಿಯಲ್ಲಿ ಆಚರಿಸಬೇಕು ಎಂಬ ಕಟ್ಟಳೆ ಹಾಗೂ ಮಡಿ ಮೈಲಿಗೆ ವ್ರತಾಚರಣೆಗಳಿಂದ ನಡೆಯಬೇಕು ಎಂಬ ನಿಯಮವನ್ನು ಆಚಾರ್ಯರು ಮಾಡುತ್ತಾರೆ. ಮಡಿವಂತಿಕೆಯಿಂದ ಶ್ರೇಷ್ಠರೆನಿಸಿದ್ದ ಬ್ರಾಹ್ಮಣರಿಂದ ದೂರೀಕರಿಸಲ್ಪಟ್ಟ ಕೆಳಜಾತಿಯ ಜನರು ತಾವು ಸಹ ಮಡಿಮೈಲಿಗೆಗಳಿಂದ ವ್ರತಾಚರಣೆಯ ಮೂಲಕ ತಾವು ನಿಮಗಿಂತ ಕಡಿಮೆಯಿಲ್ಲ ಎಂದು ತೋರಿಸಲು ಮುಂದಾದರು. ಆಹಾರ ಪದ್ಧತಿಯಲ್ಲಿ ವ್ಯತ್ಯಾಸ ಹೊಂದಿರ ಜಾನಪದರು ಮದ್ಯ ಮಾಂಸಗಳನ್ನು ತ್ಯಜಿಸಲು ಮುಂದಾಗುತ್ತಾರೆ. ಇಲ್ಲಿ ನಿಂದನೆಗಳಿಂದ ನೊಂದ ಜಾನಪದರು ಈ ಮೂಲಕ ತಮ್ಮ ಶ್ರೇಷ್ಠತೆಯನ್ನು ಗುರುತಿಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ.

ನಿಂದನೆಗಳಿಂದ ನೊಂದ ವರನಂದಿ ಪ್ರಾಣಾರ್ಪಣೆ ಮಾಡುವುದು ಹಾಗೂ ಆಶ್ಚರ್ಯಕರವಾಗಿ ನಾರಾಯಣನಲ್ಲಿ ಐಕ್ಯವಾದಾಗ ಗಾಬರಿಗೊಂಡ ಬ್ರಾಹ್ಮಣರು ತಮ್ಮ ತಪ್ಪಿನ ಅರಿವಾಗಿ ಕ್ಷಮೆಯಾಚಿಸುವ ಹಾಗೂ ವರನಂದಿಯನ್ನು ನಾರಾಯಣನ ಹೆಂಡತಿಯೆಂದು ಒಪ್ಪಿಕೊಳ್ಳುವ ಅಂಶವು ಜಾನಪದದ ದೃಷ್ಟಿಯಲ್ಲಿ ಮೇಲ್ವರ್ಗಕ್ಕೆ ಕೊಟ್ಟ ಶಿಕ್ಷೆಯಾಗಿದೆ. ಆದರೆ ಗಮನಾರ್ಹ ಅಂಶವೆಂದರೆ, ಮೂಲ ದೇವಾಲಯದ ನಾರಾಯಣಸ್ವಾಮಿಯ ಪಾದದಲ್ಲಿ ಬಿಟ್ಟರೆ ಇನ್ನೆಲ್ಲಿಯೂ ಅವಳ ಉಪಗುಡಿ ಊರಿನಲ್ಲಿಲ್ಲ. ಊರಿನ ಹೊರಗೆ ಸ್ವಾಭಾವಿಕ ಗುಹೆಯೊಂದರಲ್ಲಿ ಕಲ್ಲಿನಿಂದಲೇ ಆಕೆಯನ್ನು ಆರಾಧಿಸುತ್ತಾರೆ. ಸಾಂಪ್ರದಾಯಿಕ ಪತ್ನಿಯರಾದ ಶ್ರೀದೇವಿ–ಭೂದೇವಿಯರನ್ನು ಚೆಲುವ ನಾರಾಯಣನ ಉತ್ಸವಗಳಲ್ಲಿ ಮೆರೆಸುತ್ತಾರೆ. ಇಲ್ಲಿ ಶಿಷ್ಟ ಸಂಸ್ಕೃತಿಯು ಜಾನಪದ ಸಂಸ್ಕೃತಿಯನ್ನು ತುಳಿದು ಹಾಕಿದುದಕ್ಕೆ ಸ್ಪಷ್ಟ ಉದಾಹರಣೆಯಾಗಿದೆ.

ಪುರಾಣ ಕಥೆಯ ಆರಂಭದಲ್ಲಿ ಶೈವ ಮತ್ತು ವೈಷ್ಣವರ ವಿರಸಗಳು ವ್ಯಕ್ತವಾಗಿವೆ. ಹರಿಯನ್ನು ದ್ವೇಷಿಸುತ್ತಿದ್ದ ಗುಂಡುಬ್ರಾಹ್ಮಣನು ಶಾಪಗ್ರಸ್ಥನಾಗುತ್ತಾನೆ. ವಿಷ್ಣುವನ್ನು ನಿಂಧಿಸಿದರೆ

ಏನೆಲ್ಲಾ ಆಗುತ್ತವೆ ಎಂಬ ವಿವರಗಳನ್ನು ನೀಡಿ ವಿಷ್ಣು ಪಾರಮ್ಯವನ್ನು ಎತ್ತಿಹಿಡಿಯುವ ಅಂಶ ಕಥೆಯಲ್ಲಿ ವ್ಯಕ್ತವಾಗುತ್ತದೆ. ಶಾಪದಿಂದ ಭಯಗೊಂಡ ಗುಂಡುಬ್ರಾಹ್ಮಣನು ಶಿವನನ್ನು ಮೆಚ್ಚಿಸಿ ತಪಸ್ಸು ಮಾಡಿ, ವರಪಡೆದಾಗ ಶಿವನು ದೇವರಲ್ಲಿ ಯಾವುದೇ ವ್ಯತ್ಯಾಸವಿಲ್ಲ ನಾವೆಲ್ಲರೂ ಒಂದೆ ಎಂಬ ಸಾಮರಸ್ಯದ ಬೋಧನೆ ನೀಡಿದ್ದಾನೆ.

ಇಲ್ಲಿ ಮತ್ತೊಂದು ಗಮನಾರ್ಹ ಅಂಶವೆಂದರೆ ಕೆಲವು ಬದಲಾವಣೆಯೊಂದಿಗೆ ಶಿಷ್ಟ ಸಂಸ್ಕೃತಿಯಲ್ಲಿಯೂ ಈ ಪುರಾಣ ಕಥೆಯು ಸ್ಥಾನ ಪಡೆದಿದೆ. ಮತೀಯ ವೈಷಮ್ಯಗಳು ಬಲವಾಗಿದ್ದ ಆ ಕಾಲದಲ್ಲಿ, ಹಿಂದೂ ದೇವಾಲಯಗಳ ಮೇಲೆ ದಾಳಿಗಳು ಮುಂದುವರೆದಿದ್ದವು. ಇದರಿಂದ ಭಯಗೊಂಡ ಜನತೆ ಇದರಿಂದ ತಪ್ಪಿಸಿಕೊಳ್ಳಲು ಇಂಥಹಾ ಪುರಾಣ ಕಥೆಯನ್ನು ಹೆಣೆದಿರುವ ಪ್ರಯತ್ನವನ್ನು ತಳ್ಳಿಹಾಕುವಂತಿಲ್ಲ. ಏಕೆಂದರೆ ಐತಿಹಾಸಿಕ ತಳಹದಿಯಿಲ್ಲದ ಈ ಕಥೆಯಲ್ಲಿ ವ್ಯಕ್ತವಾಗುವ ಅಂಶಗಳು ಸತ್ಯಕ್ಕೆ ದೂರವಾದವು. ಉತ್ಸವ ವಿಗ್ರಹವಾದ ಚೆಲುವನಾರಾಯಣನನ್ನು ರಾಮಾನುಜಾಚಾರ್ಯರು ದೆಹಲಿಗೆ ಹೋಗಿ, ಅಲ್ಲಿ ಸುಲ್ತಾನನ ಸಂಪರ್ಕ ಉಂಟಾಗಿ ಹಲವಾರು ಕುತೂಹಲಕರ ಘಟನೆಗಳ ಬಳಿಕ ಆ ವಿಗ್ರಹವನ್ನು ಮೇಲುಕೋಟೆಗೆ ತಂದರೆಂದು ಸಾಂಪ್ರದಾಯಿಕ ಕಥೆ ಹೇಳುತ್ತದೆ. ಇದು ಉತ್ತರ ಭಾರತದಲ್ಲಿ ಗಲಿಬಿಲಿಯ ಕಾಲ. ದೆಹಲಿಯು ಮಹಮದೀಯರ ದಾಳಿಗಳಿಗೆ ತುತ್ತಾಗಿತ್ತು. ಅಲ್ಲಿ ದೃಢವಾದ ಯಾವುದೇ ಸರಕಾರವೂ ಇರಲಿಲ್ಲ. ಸಾಂಪ್ರದಾಯಿಕ ಕಥೆಗೆ ಐತಿಹಾಸಿಕ ತಳಹದಿಯೇ ಇಲ್ಲಿ. ಅಂದಿನ ದಿನಗಳ ಪ್ರಯಾಣದ ರೀತಿ, ಸಂಚಾರ ಮಾಧ್ಯಮಗಳನ್ನು ಗಮನಕ್ಕೆ ತಂದುಕೊಂಡರೆ ಆಚಾರ್ಯರು ದೆಹಲಿಗೆ ಹೋಗಿ ಅಲ್ಲಿ ಕೆಲ ಕಾಲವಿದ್ದು ಮೇಲುಕೋಟೆಗೆ ಬರಲು ಒಂದು ವರ್ಷಕ್ಕೂ ಹೆಚ್ಚಿನ ಸಮಯ ಹಿಡಿಯುತ್ತಿತ್ತು. ಆದುದರಿಂದ ಇದು ವಾಸ್ತವಕ್ಕೆ ದೂರವಾದುದು. ಧಾರ್ಮಿಕವಾಗಿ ಮಹತ್ವಪಡೆಯುತ್ತಿದ್ದ ಮೇಲುಕೋಟೆಯನ್ನು ದಾಳಿಯಿಂದ ತಪ್ಪಿಸಲು ತಮ್ಮ ದೈವವನ್ನು ಮುಸಲ್ಮಾನರ ಕನ್ಯೆಯೊಂದಿಗೆ ವೈವಾಹಿಕ ಸಂಬಂಧ ಬೆಸೆಯುವ ಪ್ರಯತ್ನ ನಡೆದಿದೆ. ನಂತರ ಮರಾಠರ ದಾಳಿಯನ್ನು ಬಿಟ್ಟು ಯಾವುದೇ ಮುಸ್ಲಿಂರ ದಾಳಿಗಳು ಮೇಲುಕೋಟೆಯಲ್ಲಿ ನಡೆದಿಲ್ಲ. ನಾರಾಯಣಸ್ವಾಮಿ ದೇವಾಲಯದಲ್ಲಿ ಇಂದಿಗೂ 'ಡೆಲ್ಲಿ ಉತ್ಸವ' ನಡೆಯುತ್ತಿದ್ದು, ಇದು ಉತ್ಸವಮೂರ್ತಿಯನ್ನು ತಂದ ದಿವಸದ ನೆನಪು ಎಂದು ನಂಬಲಾಗಿದೆ. ಇಂತಹ ಮತೀಯ ಹೊಂದಾಣಿಕೆಯ ಪ್ರಯತ್ನಗಳು ನಂತರವೂ ಮುಂದುವರೆದವು. ಮುಂದೆ ಟಿಪ್ಪುಸುಲ್ತಾನನ ಕಾಲದಲ್ಲಿ ದೇವಾಲಯಕ್ಕೆ ಆನೆಗಳನ್ನು ಹಾಗೂ ದೊಡ್ಡ ಡೋಲನ್ನು ದಾನವಾಗಿ ನೀಡಿದ್ದಾನೆ. ಟಿಪ್ಪುವಿನ ನೆನಪಿಗಾಗಿ ನಾರಾಯಣಸ್ವಾಮಿ ದೇವಾಲಯದಲ್ಲಿ ಇಂದಿಗೂ ಸಾಯಂಕಾಲ 'ದೀವಟಿಗೆ ಸಲಾಂ' ಪೂಜೆ ನಡೆಯುತ್ತದೆ. ವಿಶೇಷವೆಂದರೆ ಆ ವ್ಯಕ್ತಿಯು ಮುಸಲ್ಮಾನರು

ನಮಸ್ಕರಿಸುವಂತೆಯೇ ದೀವಟಿಗೆಯನ್ನು ಹಿಡಿದು ನಮಸ್ಕರಿಸುತ್ತಾನೆ. ಇಂತಹ ಸಾಮರಸ್ಯ ಮನೋಭಾವದ ಆಚರಣೆಗಳು ಪುರಾಣಗಳನ್ನು ಜೀವಂತವಾಗಿಸಿದವು.

ವರನಂದಮ್ಮನ ಆಚರಣೆಗಳು

ಮೇಲುಕೋಟೆ ಬೆಟ್ಟದ ತಪ್ಪಲಿನ ಕದಲಗೆರೆ, ಕಾಡೇನಹಳ್ಳಿ ನ್ಯಾಮನಹಳ್ಳಿಯ ಜನರು ವರನಂದಮ್ಮನ ಹಬ್ಬವನ್ನು ಆಚರಿಸುವರು. ಈ ಗ್ರಾಮಗಳು ವರನಂದಿಯ ತವರುಮನೆಯಾಗಿದ್ದು, ತವರಿಗೆ ಬರುವ ವರನಂದಿಯನ್ನು ಜಾನಪದರು ಅತ್ಯಂತ ನಿಷ್ಠೆಯಿಂದ ಆಚರಿಸುವರು. ಗೌರಿಹಬ್ಬವಾದ 21 ದಿನಗಳ ಒಳಗಾಗಿ ರಂಗಮಂಟಪದಲ್ಲಿ ಬಾಳೆಕಂಬ ಕಟ್ಟುವರು. ಕಂಬ ಕಡಿಯುವ ವ್ಯಕ್ತಿಯು ಸ್ನಾನ ಮಡಿ ಮಾಡಿಕೊಂಡು ಕಂಬವನ್ನು ತರಬೇಕು. ಹಬ್ಬ 12 ದಿನ ಇದೆ ಎಂದಾಗ ಸಾರಲಾಗುತ್ತದೆ. ಗ್ರಾಮದೇವತೆಯ ಹಬ್ಬಕ್ಕೆ ಗ್ರಾಮದ ಜನರನ್ನು ಮಾನಸಿಕವಾಗಿ ಮತ್ತು ಆರ್ಥಿಕವಾಗಿ ಸಿದ್ಧಗೊಳಿಸುವ ಆರಂಭದ ಆಚರಣೆ ಇದಾಗಿದೆ. ಜನರಿಗೆ ಹಬ್ಬದ ಸೂಚನೆಯ ಜೊತೆಗೆ ಅವರು ಪಾಲಿಸಬೇಕಾದ ವಿಧಿ ನಿಷೇಧಗಳನ್ನು ತಿಳಿಸಲಾಗುತ್ತದೆ. 12 ದಿನ ಗ್ರಾಮದಲ್ಲಿ ಕಂಟು ಹಾಕಬಾರದು. ಈ ಅವಧಿಯಲ್ಲಿ ಜನನ ಅಥವಾ ಮರಣ ಆದವರ ಮನೆಯವರು ಹಬ್ಬದಲ್ಲಿ ಪಾಲ್ಗೊಳ್ಳುವಂತಿಲ್ಲ. ಮುಟ್ಟಾದ ಹೆಂಗಸರು ಊರಿನಿಂದ ಹೊರಗಿರಬೇಕು. ಮದ್ಯ, ಮಾಂಸಗಳನ್ನು ಉಪಯೋಗಿಸುವಂತಿಲ್ಲ. ಗಂಡ–ಹೆಂಡತಿಯರು ಸೇರುವಂತಿಲ್ಲ. ಸಾರುವವನು "12 ದಿನಕ್ಕೆ ತಾಯಿಯ ಹಬ್ಬ ನಡೀತದೆ, ಒಳ್ಳೆಯವರೆಲ್ಲ ಒಳಗಿರಿ, ಕೆಟ್ಟವರೆಲ್ಲ ಹೊರಗಿರಿ, ಮೆಣಸಿನಕಾಯಿ ಸುಡಬೇಡಿ, ಕಂಟು ಹಾಕಬೇಡಿ" ಎಂದು ಸಾರುತ್ತಾನೆ. ಸಾರುವ ವ್ಯಕ್ತಿಯು ಕೆಳಜಾತಿಯವನಾಗಿರುತ್ತಾನೆ. ಅದರಲ್ಲೂ ಅಸ್ಪೃಶ್ಯ ಪಂಗಡಕ್ಕೆ ಸೇರಿರುತ್ತಾನೆ. ಆತ ಸಾರಿದ ದಿನದಿಂದ ಹಬ್ಬ ಆಗುವ ತನಕ ಮಡಿಯನ್ನು ಪಾಲಿಸಬೇಕು.

ನಂತರ ಹೀರಂದಾರಿಯ ಹರಿಜನರು ರಂಗಮಂಟಪಕ್ಕೆ ದಂಡು ಕಟ್ಟಬೇಕು. ರಂಗದ ಕುಣಿತ ಆರಂಭವಾಗುತ್ತಿದ್ದಂತೆ ಹಬ್ಬದ ಆಚರಣೆ ಆರಂಭವಾಗುತ್ತದೆ. ರಂಗಮಂಟಪದಲ್ಲಿ ಬೆಂಕಿಹಾಕುವರು. 12 ದಿನಗಳ ಕಾಲ ಸೂರ್ಯನು ಉದಯಿಸುವವರೆಗೂ ರಾತ್ರಿಯಿಡಿ ರಂಗಕುಣಿಯುವರು. ವರನಂದಿಯ ಕುರಿತ ಜಾನಪದಗೀತೆಗಳನ್ನು ಹಾಡುತ್ತಾ, ತಮಟೆ ಭಾರಿಸುತ್ತಾ ಕುಣಿಯುವರು. ತಾಯಿಯು ರಂಗಕುಣಿತದಿಂದ ಸಂತಸಗೊಳ್ಳುವಳು ಎಂಬ ನಂಬಿಕೆಯಿದೆ. ಹರಿಜನರು ರಂಗದ ಕುಣಿತದಲ್ಲಿ ಪ್ರಮುಖ ಪಾತ್ರ ವಹಿಸುವರು.

12ನೇಯ ದಿವಸ ವರನಂದಿಯನ್ನು ತನ್ನ ಗಂಡನಮನೆಗೆ ತಲುಪಿಸುವ ದಿನವಾಗಿದೆ. ಇವರೇ ವಿಪ್ರರೇನೋ ಎಂಬಂತೆ ಪ್ರತಿಹಂತದಲ್ಲೂ ಮಡಿಯನ್ನು ಆಚರಿಸುತ್ತಾರೆ.

ಬಲಿಕೊಡುವ ಆಚರಣೆ ಈ ಗ್ರಾಮದೇವತೆಯ ಹಬ್ಬದಲ್ಲಿ ನಿಷೇಧಿಸಲ್ಪಟ್ಟಿದೆ. ಊರಿನ ಎಲ್ಲಾ ಬೀದಿಗಳಲ್ಲಿ ಮಾವಿನತೋರಣಗಳಿಂದ ಸಿಂಗರಿಸಲಾಗುತ್ತದೆ. ಹಬ್ಬದಲ್ಲಿ ಹರಿಜನರ ಪಾತ್ರ ಮಹತ್ವದ್ದಾಗಿದೆ. ಇವರನ್ನು 'ವೀರಮಕ್ಕಳು' ಎಂಬ ಹೆಸರಿನಿಂದ ಕರೆಯುವರು. ಹಬ್ಬದಲ್ಲಿ ಹರಿಜನರ ಜವಾಬ್ದಾರಿಗಳನ್ನು ಕಟ್ಟಳೆಯ ರೂಪದಲ್ಲಿ ದಾಖಲಿಸಲಾಗಿದೆ. ಹರಿಜನರಿಲ್ಲದೆ ಹಬ್ಬವನ್ನು ಯಶಸ್ವಿಯಾಗಿ ನಡೆಸಲು ಸಾಧ್ಯವಿಲ್ಲ. ರಾಮಾನುಜರು ಉತ್ಸವ ಮೂರ್ತಿಯನ್ನು ತರುವಾಗ ಹಾಗೂ ನಂತರ ಬೆಂಬಲಿಗರಾಗಿದ್ದ ಹರಿಜನರು ನಾರಾಯಣನಿಗೆ ಅತ್ಯಂತ ಪ್ರಿಯರಾದವರಾಗಿದ್ದಾರೆ. ಅವರು ನಾರಾಯಣನು ತಮ್ಮೊಂದಿಗೆ ರಕ್ತಸಂಬಂಧ ಹೊಂದಿದ್ದಾನೆ ಎಂಬ ನಂಬಿಕೆ ಹೊಂದಿದ್ದಾರೆ.

ಈ ದಿನ ಎಲ್ಲಮನೆಯವರು ಮೈಲಿಗೆಗಳಿಲ್ಲದೆ ಶುಭ್ರವಾಗಿ, ಮಧ್ಯಾಹ್ನದ ವೇಳೆಗೆ ರಂಗ ಮಂಟಪದ ಬಳಿ ಸೇರುವರು. ತಾಯಿಗೆ ಹರಕೆ ಕಟ್ಟಿಕೊಂಡವರು ತಾಯಿಯ ಹೆಸರಿನಲ್ಲಿ ಬಾಯಿಗೆ ಬೀಗ ಹಾಕಿಸಿಕೊಳ್ಳುವರು. ಹೆಣ್ಣುಮಕ್ಕಳು ಹೆಚ್ಚಾಗಿ ಈ ಸಂಪ್ರದಾಯ ಆಚರಿಸುವರು. ರಂಗಮಂಟಪದ ವ್ಯಾಪ್ತಿಯಲ್ಲಿ ಪಾದರಕ್ಷೆ ತೊಡುವಂತಿಲ್ಲ ಹಾಗೂ ವಾಹನಗಳಿಗೂ ಪ್ರವೇಶವಿಲ್ಲ. ನಂತರ ವರನಂದಿ ಹಾಗೂ ಆಕೆಯ ಸಖಿಯರು (ವೀರಮಕ್ಕಳು) ಮೈದುಂಬಿ ಬರುವರು. ಈ ಸಂದರ್ಭದಲ್ಲಿ ಅತ್ಯಂತ ಭಯ-ಭಕ್ತಿಗಳಿಂದ ಜನರು ವರನಂದಿಯ ಚಲನ ವಲನಗಳನ್ನು ಗಮನಿಸುವರು. ಮೈದುಂಬಿ ಬಂದ ವ್ಯಕ್ತಿಗಳು ಮುಸಲ್ಮಾನ ಸಂಪ್ರದಾಯದಲ್ಲಿರುವ ಬುರುಕಾದ ಮಾದರಿಯ ಬಿಳಿಬಣ್ಣದ ನಿಲುವಂಗಿಯನ್ನು ಧರಿಸಿರುತ್ತಾರೆ. 8 ರಿಂದ 10 ಜನರ ಮೇಲೆ ದೇವರು ಮೈದುಂಬಿ ಬರುತ್ತದೆ. ನಂತರ ಅಲಂಕೃತಗೊಂಡಿರುವ ಎತ್ತಿನ ಗಾಡಿಯ ಮೇಲೆ ಇವರನ್ನು ಊರಿನ ಎಲ್ಲಾ ಬೀದಿಗಳಲ್ಲಿ ಮೆರವಣಿಗೆ ಮಾಡುವರು. ತಮ್ಮ ಶಕ್ತಾನುಸಾರ ಜನರು ಹೂವಿನ ಹಾರಗಳನ್ನು ತಮ್ಮ ಇಷ್ಟ ದೇವತೆಗೆ ಧರಿಸುವರು. ಮೈದುಂಬಿ ಬಂದ ವ್ಯಕ್ತಿಯು ಕೆಲವು ಉರ್ದು ಪದಗಳನ್ನು ಉಪಯೋಗಿಸಿ ಮಾತನಾಡುವುದು ವಿಶೇಷ. ಈ ಮೆರವಣಿಗೆಯಲ್ಲಿ ವರನಂದಿಯೊಂದಿಗೆ ಬಂದ ಗಂಧರ್ವಕನ್ನಿಕೆಯರು ಎಂಬ ನಂಬಿಕೆಯಿರುವ ದಲಿತರು ವಾದ್ಯ ಮೇಳಗಳನ್ನು ನುಡಿಸುವರು ಊರಿನಲ್ಲಿ ಸಕಲರಿಗೂ ದರ್ಶನವಾದನಂತರ ಬಂಡಿಯು ವರನಂದಮ್ಮನ ಗುಡಿಯ ಕಡೆಗೆ ನಡೆಯುವುದು. ತನ್ನ ಭಕ್ತರು ಕೇಳುವ ಪ್ರಶ್ನೆಗಳಿಗೆ ಉತ್ತರಕೊಡುತ್ತಾ ಬೆಳೆದಿರುವ ಹಸಿರಾದ ರಾಗಿ ಪೈರುಗಳ ಮಧ್ಯೆ ಓಡುತ್ತಾಳೆ. ಈಕೆ ಹೋದಕಡೆ ಸಮೃದ್ಧಿಯಾದ ಬೆಳೆಯಾಗುತ್ತದೆ ಎಂಬ ನಂಬಿಕೆಯಿದೆ. ವಿಶೇಷವೆಂಬಂತೆ ತಾಯಿ ಹೊರಡುವಾಗ ಮಳೆಯಾಗುತ್ತದೆ ಎಂಬ ನಂಬಿಕೆಯಿದೆ. ಭಕ್ತರು ಅವಳ ಹಿಂದೆಯೇ ತೆರಳುವರು. ವರನಂದಿ ಹಾಗೂ ಮೂರು ಗ್ರಾಮಗಳಿಂದ ಬಂದ ಆವಾಹನೆಗೊಂಡ ಎಲ್ಲಾ ಸಖಿಯರು ದೇವಾಲಯದ ಬಳಿ ಸೇರುವರು ಭಕ್ತಾಧಿಗಳ ಪ್ರಶ್ನೆಗೆ ಉತ್ತರಿಸುವರು.

ವರನಂದಮ್ಮನ ಗುಡಿಯ ಮಂಟಪಕ್ಕೆ ಹರಕೆ ಹೊತ್ತ ಭಕ್ತಾಧಿಗಳು ಬಾಳೆಹಣ್ಣಿನ ಗೊನೆಯನ್ನು ಕಟ್ಟುವರು. ವರನಂದಿಗೆ ಬಾಳೆಹಣ್ಣು ಪ್ರಿಯವಾದುದು ಎಂಬ ನಂಬಿಕೆಯಿದೆ. ಬಿಳಿಯ ನಿಲುವಂಗಿಯನ್ನು ಧರಿಸಿರುವ, (ಮುಸಲ್ಮಾನರು ಧರಿಸುವ ವಸ್ತ್ರದ ಹೋಲಿಕೆ ಇದೆ) ತಾಯಿಯನ್ನು ಮೈದುಂಬಿಕೊಂಡಿರುವ ವ್ಯಕ್ತಿಗಳು ದೇವಾಲಯದ ಬಳಿ ಸೇರುವರು. ಮೂರು ಊರುಗಳ ಮೈದುಂಬಿದ ವ್ಯಕ್ತಿಗಳು ಅಲ್ಲಿ ಸೇರುವರು. ಸ್ಮಾರ್ಥ ಬ್ರಾಹ್ಮಣರು ಈ ದೇವಾಲಯದಲ್ಲಿ ಪೂಜಾ ಕೈಂಕರ್ಯ ಮಾಡುವರು. ತಾವೇ ತಾಯಿಯ ಗುಡಿಯಲ್ಲಿ ಪೂಜೆ ಸಲ್ಲಿಸುತ್ತಿದ್ದ ಜಾನಪದರು ನಂತರದ ದಿನಗಳಲ್ಲಿ ಬ್ರಾಹ್ಮಣರನ್ನು ಪೂಜೆಗೆ ನಿಯಮಿಸಿದ್ದಾರೆ. ಪ್ರಸಾದ ಮತ್ತು ತೀರ್ಥಗಳನ್ನು ಸ್ವೀಕರಿಸಿದ ನಂತರ ಎಲ್ಲಾ ಗ್ರಾಮದ ಜನರು ದೈವ ಆವಾಹಿಕ ವ್ಯಕ್ತಿಯ ಹಿಂದೆಯೇ ಬರುವರು. ತದನಂತರ ರಾತ್ರಿಯಿಡಿ ಜಾನಪದರು ತಮ್ಮ ಕಷ್ಟ ಸುಖಗಳನ್ನು ದೇವತೆಯೊಂದಿಗೆ ಹಂಚಿಕೊಳ್ಳುವರು. ಅವರ ಎಲ್ಲಾ ಪ್ರಶ್ನೆಗಳಿಗೂ ತಾಳ್ಮೆಯಿಂದ ಉತ್ತರಕೊಡುವುದನ್ನು ನೋಡಬಹುದು. ಮಡಿಮೈಲಿಗೆಗಳಲ್ಲಿ ವ್ಯತ್ಯಾಸವಾದರೆ ಅದನ್ನು ಖಂಡಿಸುವ ದೇವತೆಯು, ಅದು ಮುಂದುವರೆದರೆ ಕಠಿಣ ಶಾಪಕೊಡುವ ಬೆದರಿಕೆ ಹಾಕುತ್ತದೆ. ಜಾನಪದರು ಆ ಮಾತನ್ನು ಮೀರದಂತೆ ನಡೆದುಕೊಳ್ಳುವ ಮನೋಸ್ಥಿತಿ ಹೊಂದಿದ್ದಾರೆ.

ಟಿಪ್ಪಣಿಗಳು

1. ಯಳನಾಡು ಅಂಜನಪ್ಪ, ಧರ್ಮ ಮತ್ತು ಮುಕ್ತ ವಿಚಾರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2008, ಪು.16
2. ಮೋಹನಕೃಷ್ಣ ರೈ. ಕೆ., ಪ್ರಭುತ್ವ ಮತ್ತು ಜನತೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004, ಪು.127
3. ಅದೇ, ಪು. 131
4. ಪಂಚಮುಖಿ, ಕರ್ನಾಟಕದ ಶಾಸನಗಳು, ಪು. 8
5. ಅಸೂರಿ ಸಂಪತ್ಕುಮಾರಾಚಾರ್ಯ ಮತ್ತು ಶ್ರೀನಿವಾಸಾಚಾರ್ಯರು, ಯಾದವಗಿರಿ ಜೀರ್ಣೋದ್ಧಾರ, ಮೇಲುಕೋಟೆ, 1956, ಪು. 48
6. E.C.VI, ಹೊಸಹಳ್ಳಿ, 217
7. E.C.VI, ಪಾಂಡವಪುರ, 164
8. ಅದೇ, ಪಾಂ. 152
9. ಅದೇ, ಪಾಂ. 138
10. ಅದೇ, ಪಾಂ. 128, 130
11. ಅದೇ, ಪಾಂ. 128
12. E.C.VI, ಕೃ.ಪೇ, 16
13. ಅಸೂರಿ ಸಂಪತ್ಕುಮಾರಾಚಾರ್ಯ ಮತ್ತು ಶ್ರೀನಿವಾಸಾಚಾರ್ಯರು, ಪೂರ್ವೋಕ್ತ, ಪು. 43
14. ಅದೇ, ಪು. 43
15. E.C.VI, ಪಾಂಡವಪುರ. 262
16. ಅದೇ, ಪಾಂ. 179
17. ಅದೇ, ಪಾಂ. 74
18. ಅದೇ, ಪಾಂ. 157, 154, 155
19. ಅದೇ, ಪಾಂ. 134

20. Saraswathi Nanaiah.N., The position of Women During Vijayanagara period, Mysore, 1992, p. 100

21. E.C.VI, ಪಾಂಡವಪುರ. 144, 179

22. ಅದೇ, ಪಾಂ. 163

23. ಅದೇ, ಪಾಂ. 213

24. ಅದೇ, ಪಾಂ. 178

25. ಅದೇ, ಪಾಂ. 195

26. ಅದೇ, ಪಾಂ. 164

27. ಜವರೇಗೌಡ.ದೇ. (ಸಂ.), ಸುವರ್ಣ ಮಂಡ್ಯ, ಮೈಸೂರು, 2006, ಪು. 108

28. E.C.VI, ಪಾಂಡವಪುರ. 135

29. ಅದೇ, ಪಾಂ. 211

30. ಮೋಹನ್‌ಕೃಷ್ಣರೈ.ಕೆ., ಪೂರ್ವೋಕ್ತ, ಪು. 131

31. ರಹಮತ್ ತರೀಕೆರೆ, ಕನ್ನಡ ಸಂಶೋಧನೆಗಳ ತಾತ್ವಿಕ ವಿಚಾರ, ಕನ್ನಡ, ವಿ.ವಿ., ಹಂಪಿ, 2009, ಪು. 134

32. ಮೋಹನ್‌ಕೃಷ್ಣ ರೈ.ಕೆ., ಪೂರ್ವೋಕ್ತ, ಪು. 127

33. ರಾಜಾರಾಜಹೆಗಡೆ (ಸಂ.), ಭಾರತೀಯ ಇತಿಹಾಸ, ಸಮಾಜ ಮತ್ತು ಸಂಸ್ಕೃತಿ, ಬೆಂಗಳೂರು, 2004, ಪು. 27

34. ಸುರೇಂದ್ರರಾವ್.ಬಿ., ಸಾಮಾಜಿಕ ಪ್ರಕ್ರಿಯೆಗಳು ಮತ್ತು ಧಾರ್ಮಿಕ ಆಂದೋಲನಗಳು, ಕರ್ನಾಟಕ ಚರಿತ್ರೆ, (ಸಂ.), ಬಿ.ಸುರೇಂದ್ರರಾವ್, ಸಂಪುಟ 2, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1997, ಪು. 225

35. MAR, 1936, p. 73

36. ಚಿದಾನಂದಮೂರ್ತಿ.ಎಂ., ಕನ್ನಡಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು, 1979, ಪು. 182

37. South Indian Inscriptions, IX.I. 28, 959-60 A.D.

38. E.C XI, Cl. 21

39. ಚಿದಾನಂದಮೂರ್ತಿ.ಎಂ., ಪೂರ್ವೋಕ್ತ, ಪು. 186

40. ಸ್ವಾಮಿ ರಾಮಕೃಷ್ಣಾನಂದ, ಶ್ರೀರಾಮಾನುಜಾಚಾರ್ಯ, ಮೈಸೂರು, 2006, ಪು. 200

41. ಹರಿದಾಸ ಭಟ್ಟಾಚಾರ್ಯ (ಸಂ.), ಯುಗಯಾತ್ರಿ ಭಾರತೀಯ ಸಂಸ್ಕೃತಿ, ಮೈಸೂರು ವಿಶ್ವವಿದ್ಯಾಲಯ, 1975, ಪು. 166–167

42. ಸುರೇಂದ್ರರಾವ್.ಬಿ., ಪೂರ್ವೋಕ್ತ, ಪು. 225

43. ಅದೇ

44. ಕರ್ನಾಟಕ ಪರಂಪರೆ (ಸಂ.1), ಮೈಸೂರು ರಾಜ್ಯ ಸರ್ಕಾರ, ಬೆಂಗಳೂರು, 1970, ಪು. 504–505

45. ಸುರೇಂದ್ರರಾವ್.ಬಿ., ಪೂರ್ವೋಕ್ತ, 226

46. ಹರಿದಾಸ ಭಟ್ಟಾಚಾರ್ಯ (ಸಂ), ಪೂರ್ವೋಕ್ತ, ಪು. 166–167

47. ಅಸೂರಿ ಸಂಪತ್ಕುಮಾರಾಚಾರ್ಯರು ಮತ್ತು ಶ್ರೀನಿವಾಸಯ್ಯಂಗಾರ್ಯರು, ಪೂರ್ವೋಕ್ತ, ಪು. 11

48. ಮೋಹನ್‌ಕೃಷ್ಣ ರೈ.ಕೆ., ಪೂರ್ವೋಕ್ತ, ಪು. 159

49. ಸುರೇಂದ್ರರಾವ್.ಬಿ., ಪೂರ್ವೋಕ್ತ, ಪು. 227

50. ರಾಜಾರಾಮಹೆಗಡೆ, ಭಾರತೀಯ ಇತಿಹಾಸ, ಸಮಾಜ ಮತ್ತು ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2004, ಪು. 49

51. E.C., V, Hn, 166 (1123. A.D.)

52. E.C.V, Hn, 89 (1135. A.D.)

53. Gopal.R., Cultural study of Hoysala Inscription, Mysore, 2000, p. 36-37

54. E.C. III, My, 16 (1128 A.D)

55. E.C. V, Bl, 124

56. E.C. III, Tn. 24 (1090 A.D)

57. Derrett J.D.M, The Hoysalas, oxford university press, oxford, 1951, p. 57

58. Willam Coelho, The Hoysala vamsa, Bombay 1950, p. 292

59. ಚಿದಾನಂದಮೂರ್ತಿ.ಎಂ., ಪೂರ್ವೋಕ್ತ, ಪು. 73

60. ಮಿರ್ಜಿ ಅಣ್ಣಾರಾಯ, ಜೈನಧರ್ಮ, ಬೆಳಗಾಂ, 1997, ಪು. 103

61. ಮಂಡ್ಯ ಜಿಲ್ಲಾ ಗ್ಯಾಸೆಟಿಯರ್, ಮಂಡ್ಯ ಜಿಲ್ಲೆ, ಬೆಂಗಳೂರು, 1967, ಪು. 348

62. ಮಹದೇವ.ಸಿ., (ಸಂ), ತೊಣ್ಣೂರು, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2009, ಪು. 39

63. E.C., VI, ಪಾಂಡವಪುರ, 52, 135

64. ಅದೇ, ಪಾಂ, 324

65. ಅದೇ, ಪಾಂ, 16

66. B.L. Rice, Mysore Gazetteer, Vol-I, 1897

67. ಮಹದೇವ.ಸಿ. (ಸಂ), ಪೂರ್ವೋಕ್ತ, ಪು. 127

68. E.C., VI, ಪಾಂಡವಪುರ, 15

69. ಪ್ರಪನ್ನಾಮೃತ, 24ನೇ ಆಶ್ವಾಸ

70. ಚಿದಾನಂದಮೂರ್ತಿ.ಸಿ., ಪೂರ್ವೋಕ್ತ, ಪು. 113

71. Sheik Ali, B., (Ed), The Hoysala Dynasty, prasaranga, University of Mysore, 1972, p. 307

72. ಪ್ರಪನ್ನಾಮೃತಂ, 24ನೇ ಆಶ್ವಾಸ

73. Mysore, Gazatteer, Vol-II, part. III

74. Derrett J.D.M, The Hoysalas, oxford, 1951, p. 57

75. Sheik Ali. B. (Ed.), The Hoysala Dynasty, Mysore, 1972, p, 308

76. M.A.R., 1944

77. E.C. III, Tn. 151 (1117 A.D)

78. William coello, The Hoysala vamsa, Bombay, 1950, p. 290

79. Sheik Ali, B., 'Hoysala Dynasty, Mysore, 1972, p. 307

80. ಚಿದಾನಂದಮೂರ್ತಿ.ಎಂ., ಪೂರ್ವೋಕ್ತ, ಪು. 188

81. E.C. III, My. 16

82. E.C. IV. Hn. 89

83. ಸುರೇಂದ್ರರಾವ್. ಬಿ., (ಸಂ), ಕರ್ನಾಟಕ ಚರಿತ್ರೆ, ಸಂಪುಟ 3, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1997, ಪು. 340

84. Sheik Ali. B., Hoysala Dynasty, Mysore, 1972, p. 305

85. Sheik Ali, B., Op. cit, 305

86. Gopal.R., op. cit., p. 63-64

87. Sheik Ali. B., op. cit, p. 306

88. R. Gopal., op. cit., p. 66

89. ಭಾಷ್ಯಂಸ್ವಾಮಿ (ಸಂ)., ಪ್ರಪನ್ನಾಮೃತ, ಸಂಸ್ಕೃತ ಸಂಶೋಧನಾ ಸಂಸತ್, ಮೇಲುಕೋಟೆ, 2008, ಪು. 80

90. M.A.R., 1913, p. 16

91. E.C. VI, ಪಾಂಡವಪುರ. 100. 101

92. ಅದೇ, ಪಾಂ. 105

93. ಮಹದೇವು.ಸಿ., ತೊಣ್ಣೂರು, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2009, ಪು. 126

94. E.C., VI, My. 16

95. 'ಜೀರ್ಣೋದ್ಧಾರಾಧಿ'., ಯತಿರಾಜಮಠದಲ್ಲಿರುವ ಪುರಾತನ ಓಲೆ ಪುಸ್ತಕದ ಕಾಪಿ, ಪು. 22

96. E.C., VI, ಪಾಂಡವಪುರ. 164

97. ಸುರೇಂದ್ರರಾವ್.ಬಿ. (ಸಂ), ಕರ್ನಾಟಕ ಚರಿತ್ರೆ, ಸಂಪುಟ. 3, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. 348

98. Prabhakar p. Apte, Ravindranath R. Karnik., (Ed.), Melkote through the ages, Melkote, 1992, p. 197-198

99. ರಾಮಯ್ಯ.ಬಿ., ದೇವಾಲಯದ ಕೈಪಿಡಿ, ಮೈಸೂರು, 1937, ಪು. 447–448

100. ಕರ್ನಾಟಕ ಪರಂಪರೆ ಸಂಪುಟ. 1, ಮೈಸೂರು ರಾಜ್ಯ ಸರ್ಕಾರ, ಬೆಂಗಳೂರು, 1970, ಪು. 83

101. ಅದೇ, ಪು. 84

102. E.C. III, Tn. 24 (1090. A.D.)

103. Nilakanta shastry.K.A., Development of Religion in south India, Madras, 1963, p. 45

104. Sannaraje Gowda, Impact of Bhakthi Monement on life and Conditions of south India, Mysore, p. 36

105. Ibid., p. 37

106. ಸುರೇಂದ್ರರಾವ್.ಬಿ.(ಸಂ.), ಸಾಮಾಜಿಕ ಪ್ರಕ್ರಿಯೆಗಳು ಮತ್ತು ಧಾರ್ಮಿಕ ಆಂದೋಲನಗಳು, ಕರ್ನಾಟಕ ಚರಿತ್ರೆ, ಸಂಪುಟ. 2, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1997. ಪು. 224

107. Nilakanta Shatri. K.A., Development of Religion in south India, Madras, 1963, p. 47

108. Majumdar.R.C., Ancient India, Delhi, 2003, p. 435

109. Prabhakar p. Apte, Ravindranatha. R. Kamik., Melkote throuht the ages, Melkote, 1992, p. 8

110. ಚಿದಾನಂದಮೂರ್ತಿ.ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು, 1979, ಪು. 181

111. Sannaraje Gowda., Impact of Bhakti monement on life and condition of south India, Mysore, p. 31

112. ibid., p. 31

113. E.C. VI, ಪಾಂ. 162

114. ಸಿದ್ಧಲಿಂಗಯ್ಯ, ಗ್ರಾಮದೇವತೆಗಳು, ಬೆಂಗಳೂರು, 1997, ಪು. 2

115. Henry whitehead, The village Gods of south India, Delhi, 1921, p. 16

116. ಬಸವರಾಜ ಸಬರದ., ಸಮುದಾಯ ಮತ್ತು ಸಂಸ್ಕೃತಿ, ಬೆಂಗಳೂರು, 2002., ಪು. 77

117. ಸಿದ್ಧಲಿಂಗಯ್ಯ., ಪೂರ್ವೋಕ್ತ, ಪು. 41

118. ಮೇಲುಕೋಟೆಯ ಬಲರಾಮೇಗೌಡರು ಹೇಳಿದ ಕಥೆ

119. ಜೀ. ಶಂ. ಪರಮಶಿವಯ್ಯ, ಕನ್ನಡ ವಿಶ್ವಕೋಶ, ಸಂಪುಟ. 1, ಪು. 703

120. ಸಿದ್ಧಲಿಂಗಯ್ಯ., ಪೂರ್ವೋಕ್ತ, ಪು. 72

121. ರಾಮಯ್ಯ ಬಿ., ಮೇಲುಕೋಟೆ ನಾರಾಯಣಸ್ವಾಮಿ ದೇವಾಲಯದ ಕೈಪಿಡಿ, ಮೈಸೂರು, 1937, ಪು. 346

122. ಮೋಹನ್‌ಕೃಷ್ಣ ರೈ.ಕೆ., ಪೂರ್ವೋಕ್ತ, ಪು. 150

123. ಪಾರ್ಥಸಾರಥಿ.ಟಿ.ಎಂ., ಮಂಡ್ಯ ಜಿಲ್ಲಾ ಗ್ಯಾಜೆಟಿಯರ್, ಮಂಡ್ಯ, 2003, ಪು. 39

124. ಕದಲಗೆರೆ ಗ್ರಾಮದ ಸುದರ್ಶನಗೌಡರು (ಜಾನಪದ ಸಾಹಿತಿ) ಸಂದರ್ಶನದಲ್ಲಿ ಒದಗಿಸಿದ ಮಾಹಿತಿ

125. ಗೋಪಾಲ.ಬಾ.ರಾ., ಕರ್ನಾಟಕದಲ್ಲಿ ಶ್ರೀ ರಾಮಾನುಜಾಚಾರ್ಯರು, ಮೈಸೂರು, 1984, ಪು. 37

ಅಧ್ಯಾಯ – 4
ದೇವಾಲಯಗಳು – ಸಾಮಾಜಿಕ ಕೇಂದ್ರಗಳು

ದೇವಾಲಯಗಳ ಸಾಮಾಜಿಕ ನೆಲೆಯ ಅಧ್ಯಯನ ಅವುಗಳ ಪ್ರಾಮುಖ್ಯತೆಯನ್ನು ಅರಿವಿಗೆ ತರುತ್ತದೆ. ಹಾಗೆಯೇ ದೇವಾಲಯಗಳನ್ನು ಒಂದು ಸಾಮಾಜಿಕ ಕೇಂದ್ರವಾಗಿ ಭಾವಿಸಿ ಅಧ್ಯಯನಕ್ಕೊಳಪಡಿಸಿದಾಗ, ಅದು ಜನತೆಯ ಮೇಲೆ ಬೀರಿದ ಪ್ರಭಾವ, ಜನತೆ ದೇವಾಲಯಗಳನ್ನು ಕಂಡ ರೀತಿ ಹಾಗೂ ಸಾಮಾಜಿಕ ಹಾಗೂ ಸಾಂಸ್ಕೃತಿಕ ಏರಿಳಿತಗಳಲ್ಲಿ ಅದರ ಪಾತ್ರ ಹೀಗೆ ಬಹುಮುಖಗಳನ್ನು ನೋಡಬಹುದು. ರಾಮಾನುಜಾಚಾರ್ಯರ ಪ್ರಭಾವದಿಂದ ಆರಂಭವಾದ ಮೇಲುಕೋಟೆ ದೇವಾಲಯ ಸಂಕೀರ್ಣವು ಇದಕ್ಕೆ ಸ್ಪಷ್ಟ ಉದಾಹರಣೆಯಾಗಿದೆ. ಇಲ್ಲಿನ ದೇವಾಲಯಗಳ ಸಾಮಾಜಿಕ ಜೀವನದ ಮೇಲಿನ ಪರಿಣಾಮಗಳ ಕುರಿತು ಅಧ್ಯಯನ ಕೈಗೊಂಡಾಗ ಕೆಲವು ಕುತೂಹಲಕಾರಿಯಾದ ಸಂಗತಿಗಳು ತಿಳಿಯುತ್ತವೆ. ದೇವಾಲಯಗಳು ಕೇವಲ ಪೂಜಾಸ್ಥಾನಗಳು ಮಾತ್ರವಲ್ಲ ಎನ್ನುವುದು ಆಗ ಮಾತ್ರ ಸ್ಪಷ್ಟವಾಗಲು ಸಾಧ್ಯ. ಅವು ಧಾರ್ಮಿಕ ಸಂಸ್ಥೆಗಳಾಗುವುದರ ಜೊತೆಗೆ ಸಾಮಾಜಿಕ ಮತ್ತು ಆರ್ಥಿಕ ಸಂಸ್ಥೆಗಳೂ ಆಗಿರುತ್ತಿದ್ದವು.

ಕರ್ನಾಟಕದಲ್ಲಿ ದೇವಾಲಯಗಳ ನಿರ್ಮಾಣಕ್ಕೆ ಪ್ರೇರಣೆ ದೊರೆತದ್ದು ಲಾಕುಲೀಶ, ಪಾಶುಪತ ಶೈವಗುರುಗಳಿಂದ.[1] ರಾಮಾನುಜರು ದಕ್ಷಿಣ ಭಾರತದಲ್ಲಿ ಬಲಗೊಳಿಸಿದ ದೇವಾಲಯಗಳ ಮೂಲಕ ಪವಿತ್ರ ವಿಗ್ರಹಗಳ ಆಧಾರಿತ ಆರಾಧನೆಯು ಸಾಮಾಜಿಕ ನಡವಳಿಕೆಯನ್ನು ನಿಯಂತ್ರಿಸುವ ಶಕ್ತಿಯನ್ನು ಮತ್ತಷ್ಟು ಗಟ್ಟಿಗೊಳಿಸಿತು.[2] ಅಂತಹಾ ದೇವಾಲಯಗಳ ಗುಂಪಿನಲ್ಲಿ ಮೇಲುಕೋಟೆ ನಾರಾಯಣಸ್ವಾಮಿ ದೇವಾಲಯ ಸಂಕೀರ್ಣದ ಪಾತ್ರ ಮಹತ್ವದ್ದು. ರಾಜಪ್ರಭುತ್ವ ಮತ್ತು ಧಾರ್ಮಿಕ ಪ್ರಭುತ್ವವನ್ನು ಬಲಪಡಿಸುವ ಕೆಲಸವನ್ನು ದೇವಾಲಯಗಳು ವ್ಯವಸ್ಥಿತವಾಗಿ ಮಾಡಿದವು. ಆ ನೀತಿ ಸಂಹಿತೆಗಳು ವೈದಿಕ ಗ್ರಂಥಗಳಲ್ಲಿ ಉಲ್ಲೇಖಿತವಾದ ವೈದಿಕ ಆದರ್ಶಗಳನ್ನು ಪ್ರತಿಪಾದಿಸುತ್ತಿದ್ದವು. ದೇವಾಲಯಗಳ ಜೊತೆಗೆ ಮಠಗಳು ಅಂಗ ಸಂಸ್ಥೆಗಳಾಗಿ ಕಾಣಿಸಿಕೊಂಡವು. ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಅರಸರ ಮನೆತನಗಳು ಇಲ್ಲಿನ ದೇವಾಲಯ ನಿರ್ಮಾಣ ಹಾಗೂ ಅವುಗಳ ಪೋಷಣೆಗೆ ಪ್ರಥಮ ಆದ್ಯತೆಯನ್ನು ನೀಡಿದವು. ದೇವಾಲಯಗಳಿಗೆ ದಾನ–ದತ್ತಿಗಳನ್ನು ನೀಡಿ ಅದನ್ನು ಒಂದು ಸಂಸ್ಥೆಯಾಗಿ ಬೆಳೆಸಿದರು. ರಾಜ್ಯ ವ್ಯವಸ್ಥೆಯಲ್ಲಿ ರಾಜಪ್ರಭುತ್ವದಷ್ಟೇ ಪ್ರಮುಖ ಸ್ಥಾನವನ್ನು ದೇವಾಲಯಗಳು ಪಡೆದುಕೊಂಡವು.

ದೇವಾಲಯಗಳು ಗ್ರಾಮಗಳ ಆಡಳಿತ ಮತ್ತು ಜಾತಿ ಕಟ್ಟಳೆಯ ಉನ್ನತ ನ್ಯಾಯಾಲಯಗಳಾಗಿದ್ದವು. ದೇವಾಲಯದ ಕೆಲಸಕಾರ್ಯಗಳಲ್ಲಿ ಭಾಗವಹಿಸುವುದು ಜಾತಿಯನ್ನು ಅವಲಂಬಿಸಿಕೊಂಡಿರುತ್ತಿತ್ತು. ಜಾತಿವ್ಯವಸ್ಥೆ ಮತ್ತು ದೇವಾಲಯಗಳು ಒಟ್ಟೊಟ್ಟಿಗೆ ಸಾಗುತ್ತಿದ್ದವು. ಪ್ರಜೆಗಳಲ್ಲಿ ಭಯ–ಭಕ್ತಿ ಮೂಡುವಂತೆ ಮಾಡಿ ಆ ಮೂಲಕ ಪ್ರಭುತ್ವವನ್ನು ಒಪ್ಪಿಕೊಳ್ಳುವಂತೆ ಮಾಡುವ ಕೆಲಸವನ್ನು ದೇವಾಲಯಗಳು ಮಾಡುತ್ತಿದ್ದವು. ರಾಜಪ್ರಭುತ್ವಕ್ಕೆ ದೇವಾಲಯಗಳು ಅನಿವಾರ್ಯವಾಗಿದ್ದರಿಂದ ಅಪಾರವಾದ ದಾನದತ್ತಿಗಳನ್ನು ನೀಡಲಾಗುತ್ತಿತ್ತು. ದೇವಾಲಯದ ಕೆಲಸ ಪುಣ್ಯದ ಕೆಲಸ, ಮೋಕ್ಷ ಲಭಿಸುವ ಕೆಲಸ ಎನ್ನುವ ಧಾರ್ಮಿಕ ಸಂದೇಶವನ್ನು ಸಾರಲಾಗಿತ್ತು. ಜನತೆಯು ದೇವಾಲಯಗಳನ್ನು ಶಾಸನಬದ್ಧ ಮತ್ತು ವಿಶ್ವಾಸಾರ್ಹ ಎಂಬುದಾಗಿ ನಂಬಿ, ಗೌರವ, ವಿಧೇಯತೆ ತೋರಿಸುತ್ತಿದ್ದರು.

ದೇವಾಲಯಗಳನ್ನು ಅಗೌರವಿಸಿದರೆ ಕಠಿಣ ಶಿಕ್ಷೆಯನ್ನು ನೀಡಲಾಗುತ್ತಿತ್ತು. ಈ ಕಾರಣದಿಂದಾಗಿ ದೇವಾಲಯಗಳು ಹರಸುವ ಮತ್ತು ಶಪಿಸುವ ಕೇಂದ್ರಗಳೂ ಆಗಿದ್ದವು.

ಇಲ್ಲಿನ ದೇವಾಲಯಗಳು ಧರ್ಮದ ಪ್ರಭಾವದಿಂದ ಹಲವು ಮೂಲಗಳಿಂದ, ದಾನ–ದತ್ತಿಗಳಿಂದ ಸಂಪತ್ತಿನ ಕೇಂದ್ರಗಳಾದವು. ದೇವಾಲಯದ ನಿರ್ವಹಣೆಗಾಗಿ ಹಲವು ಉದ್ಯೋಗಗಳು ಸೃಷ್ಟಿಯಾದವು. ಮಠಗಳ ಬೆಳವಣಿಗೆ ಹಾಗೂ ಶಿಕ್ಷಣದ ಅಭಿವೃದ್ಧಿಯಿಂದ ಪ್ರಾಮುಖ್ಯತೆ ಪಡೆದವು. ತನ್ನ ಸುತ್ತಲಿನ ಪ್ರದೇಶದ ಆರ್ಥಿಕ ಹಾಗೂ ಸಾಂಸ್ಕೃತಿಕ ಕೇಂದ್ರ ಹಾಗೂ ವ್ಯಾಪಾರೀ ಕೇಂದ್ರಗಳಾದವು. ಕೃಷಿ ಮತ್ತು ಉದ್ದಿಮೆಗಳು ದೇವಾಲಯಗಳ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸಬೇಕಾಯಿತು. ದೇವಾಲಯದ ಉತ್ಸವ ಮತ್ತು ಆಚರಣೆಗಳು ಇಲ್ಲಿನ ಸಾಂಸ್ಕೃತಿಕ ಮೆರುಗನ್ನು ಹೆಚ್ಚಿಸಿದವು.

ದೇವಾಲಯಗಳು ಈ ಎಲ್ಲಾ ಕಾರಣಗಳಿಂದಾಗಿ ಮಧ್ಯಕಾಲೀನ ಚರಿತ್ರೆಯಲ್ಲಿ ವಿಶಿಷ್ಟವಾಗಿ ಕಂಡುಬರುತ್ತವೆ. ಅಂದಿನ ಶ್ರೇಣೀಕೃತ ಸಮಾಜ ವ್ಯವಸ್ಥೆಯ ಪ್ರತಿಬಿಂಬಗಳಂತೆ ಇದ್ದ ದೇವಾಲಯಗಳು ಧಾರ್ಮಿಕ ಪ್ರಭುತ್ವದ ಪ್ರತಿನಿಧಿಗಳಾಗಿದ್ದವು.

ರಾಜಪ್ರಭುತ್ವಕ್ಕೆ ದೇವಾಲಯಗಳಿಂದ ಅಪಾರವಾದ ಆದಾಯ ಲಭ್ಯವಾಗುತ್ತಿತ್ತು. ಈ ಕಾರಣದಿಂದಾಗಿಯೇ ದೇವಾಲಯಗಳನ್ನು ರಾಜನ ಖಜಾನೆ ಎಂಬ ಹೆಸರಿನಿಂದಲೂ ಕರೆಯಲಾಯಿತು. ದೇವಾಲಯಗಳು ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳ ಮೂಲಕ ಜನತೆಯನ್ನು ಅಧೀನದಲ್ಲಿಟ್ಟುಕೊಂಡವು ಇದು ರಾಜಪ್ರಭುತ್ವವನ್ನು ಸುಲಭವನ್ನಾಗಿಸಿ ರಾಜ್ಯದ ಮೇಲೆ ಹತೋಟಿಯನ್ನು ಸಾಧಿಸುವಂತೆ ಮಾಡಿತು. ಜೊತೆಗೆ ಸಾಂಪ್ರದಾಯಿಕತೆ ಮತ್ತು ಮಡಿವಂತಿಕೆಗಳ ಕೇಂದ್ರವಾದವು.

ದೇವಾಲಯಗಳು ಮತ್ತು ಜನತೆ

ಸಮಾಜದ ಅವಿಭಾಜ್ಯ ಅಂಗ ದೇವಾಲಯಗಳು. ಇಂದಿಗಿಂತ ಹೆಚ್ಚಾಗಿ ಹಿಂದೆ ದೇವಾಲಯಗಳು ಜನತೆಯನ್ನು ವಿವಿಧ ಕಾರಣಗಳಿಂದ ಆಕರ್ಷಿಸಿದ್ದವು. ಭಾರತದ ಜನತೆಯಲ್ಲಿ ವಿಹಾರಾರ್ಥ ಪ್ರವಾಸಿಗಳಿಗಿಂತಲೂ ತೀರ್ಥಯಾತ್ರಾ ಪ್ರಾವಾಸಿಗಳ ಸಂಖ್ಯೆಯೇ ಅಧಿಕ. ಜನರ ಬದುಕಿನಲ್ಲಿ ಪ್ರಮುಖ ಪಾತ್ರ ವಹಿಸಿರುವ ದೇವಾಲಯಗಳು, ಅವರ ಮೇಲೆ ಬೀರಿದ ಪ್ರಭಾವ ಕುತೂಹಲಕಾರಿಯಾದುದು. ಜನತೆಯು ದೇವಸ್ಥಾನವನ್ನು ಕಂಡರೀತಿ ವಿಭಿನ್ನತೆಗಳಿಂದ ಕೂಡಿತ್ತು. 'ಒಂದು ದೇಶದ ನಿಜವಾದ ಚರಿತ್ರೆಯೆಂದರೆ ಅದು ಜನರ ಚರಿತ್ರೆ.[3] ಜನರ ಬದುಕಿನ ರೀತಿ, ಅನುಸರಿಸಿದ ಧರ್ಮ ಕಟ್ಟಿದ ಕಲೆ, ಜೀವನದ ಸಮಸ್ಯೆಗಳು ಮತ್ತು ಮೌಲ್ಯಗಳು ದೇವಾಲಯಗಳಿಂದ ಪ್ರಭಾವಿತವಾಗಿದ್ದವು. ಶ್ರೇಣೀಕೃತ ಸಮಾಜ ವ್ಯವಸ್ಥೆಯಲ್ಲಿ ಮೇಲ್ತುದಿಯ ಜನರ ಚರಿತ್ರೆಯೇ ರಾಜ್ಯದ ಚರಿತ್ರೆಯಾಗಿ ರಚನೆಗೊಂಡಿರುವುದನ್ನು ನೋಡಬಹುದು. ಇಲ್ಲಿ ರಾಜಪ್ರಭುತ್ವ ಮತ್ತು ಧಾರ್ಮಿಕ ಪ್ರಭುತ್ವದ ಹಿಡಿತದಲ್ಲಿ ಸಿಕ್ಕಿ ನಿರ್ಲಕ್ಷಕ್ಕೆ ಒಳಪಟ್ಟ ಜನರನ್ನು ಪ್ರಸ್ತುತ ಅಧ್ಯಯನದಲ್ಲಿ 'ಜನತೆ' ಎನ್ನುವ ವ್ಯಾಖ್ಯಾನದೊಳಗೆ ಸೇರಿಸಿಕೊಳ್ಳಲಾಗಿದೆ. ಕೆಳಸ್ತರದ ಜನರ ಚರಿತ್ರೆ ನಿರ್ಲಕ್ಷಕ್ಕೆ ಒಳಗಾಗುವುದಕ್ಕೆ ಮೇಲ್ವರ್ಗವು ಸ್ಥಾಪಿಸಿದ ಯಜಮಾನಿಕೆ ಮೂಲ ಕಾರಣ ಎನ್ನುವುದು ಗ್ರಾಮ್‌ಶಿ ಅವರ ವಾದ. ಈ ಯಜಮಾನಿಕೆಯನ್ನು ಸ್ಥಾಪಿಸುವಾಗ ಬಲಪ್ರಯೋಗದೊಂದಿಗೆ ಮನವೊಲಿಕೆಯ ತಂತ್ರವನ್ನು ಅನುಸರಿಸಲಾಗುತ್ತದೆ. ಅವು ಒಂದು ವ್ಯವಸ್ಥೆಗಳಾಗಿ ಕಂಡುಬರುತ್ತವೆ. ಅಂತಹ ವ್ಯವಸ್ಥೆಗಳಲ್ಲಿ ಧಾರ್ಮಿಕ ಪ್ರಭುತ್ವದ ಪ್ರತೀಕವಾಗಿದ್ದ ದೇವಾಲಯಗಳು ಮಹತ್ವದ ಪಾತ್ರ ವಹಿಸಿದ್ದವು. ಸಮಾಜದ ಜನತೆಯನ್ನು ನಿಯಂತ್ರಿಸುವ ಕೇಂದ್ರವಾಗಿ ಮತ್ತು ಧರ್ಮದ ಸಾಧನದಿಂದ ಸಮಾಜದಲ್ಲಿ ಯಜಮಾನಿಕೆಯನ್ನು ಸ್ಥಾಪಿಸುವ ವೇದಿಕೆಯಾಗಿಯೂ ಕೆಲಸ ಮಾಡಿದೆ. ಜನತೆಯ ಅಂತರಂಗದ ಬದುಕು ದೇವಾಲಯಗಳಿಗೆ ಸ್ಪಂದಿಸಿದ ರೀತಿ ವಿಭಿನ್ನವಾಗಿತ್ತು. ಎಲ್ಲಾ ವರ್ಗದ ಜನರನ್ನು ಒಂದೇ ವೇದಿಕೆಗೆ ತರುವ ಕಾರ್ಯವನ್ನು ದೇವಾಲಯಗಳು ನಿರ್ವಹಿಸಿದರೂ, ಕೆಳವರ್ಗದ ಬಹುಸಂಖ್ಯಾತ ಜನರು ಶೋಷಣೆಗೆ ಒಳಗಾದರು. ಬಹು ಸಂಖ್ಯಾತ ಮುಗ್ಧ ಜನತೆಯ ಮನದಲ್ಲಿ ದೇವಾಲಯಗಳು ಧರ್ಮ-ದೇವರ ಹೆಸರಿನಲ್ಲಿ ಭಯವನ್ನು ಬಿತ್ತಿವೆ. ಅದರ ಬೇರುಗಳು ಇಂದಿಗೂ ಬಲವಾಗಿದ್ದು ಸಾಮಾನ್ಯರು ಅದರಿಂದ ಹೊರಗೆ ಬಂದು ಸಮಾನ ಸಮಾಜವನ್ನು ಕಾಣಲು ಸಾಧ್ಯವಾಗಿಲ್ಲ.

ಮೇಲುಕೋಟೆಯು ಆಲಯಾಶ್ರಿತ ಗ್ರಾಮವಾಗಿದೆ. ಗ್ರಾಮದ ಪ್ರತಿಯೊಂದು ಜಾತಿಯ ಜನರೂ ದೇವಾಲಯದೊಂದಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸಂಬಂಧ ಹೊಂದಿದವರೇ ಆಗಿದ್ದಾರೆ. ಜನತೆಯೊಂದಿಗೆ ಇಲ್ಲಿನ ದೇವಾಲಯಗಳ ಸಂಬಂಧ,

ಪಡೆದಿರುವ ಜವಾಬ್ದಾರಿಗಳು, ಇಲ್ಲಿನ ಸಾಮಾಜಿಕ ಜೀವನದ ಸ್ಥಿತಿಯ ಮೇಲೆ ಅವುಗಳ ಪ್ರಭಾವವನ್ನು ಅರಿಯಲು ಅಗತ್ಯ ಮಾಹಿತಿ ನೀಡುತ್ತವೆ. ಇಲ್ಲಿನ ದೇವಾಲಯಗಳನ್ನು ಸಾಮಾಜಿಕ ನೆಲೆಯಲ್ಲಿ ಅಧ್ಯಯನ ಮಾಡುವುದರಿಂದ ಸಾಂಸ್ಕೃತಿಕ ಏರಿಳಿತಗಳ ಬಹುಮುಖಗಳನ್ನು ನೋಡಬಹುದು. ಜನಜೀವನದ ಅವಿಭಾಜ್ಯ ಅಂಗವಾಗಿ ದೇವಾಲಯಗಳು ನಿರ್ವಹಿಸಿದ ಪಾತ್ರಕ್ಕೆ ರಾಮಾನುಜರ ಪ್ರಭಾವದಿಂದ ಆರಂಭವಾದ ಮೇಲುಕೋಟೆ ದೇವಾಲಯ ಸಂಕೀರ್ಣವು ಸ್ಪಷ್ಟ ಉದಾಹರಣೆಯೆಂದು ಹೇಳಬಹುದು.

ಕೆಳವರ್ಗಗಳು

ಜನಸಾಮಾನ್ಯರ ಸಂಸ್ಕೃತಿ ನಿಜವಾದ ಸಂಸ್ಕೃತಿಯಾಗುತ್ತದೆಯೇ ಹೊರತು ಯಾವುದೇ ಒಬ್ಬ ರಾಜನ ಸಂಸ್ಕೃತಿ, ಒಂದು ಮತಧರ್ಮದ ನಿರ್ಣಯಗಳು ಇಡೀ ಜನ ಸಮುದಾಯವನ್ನು ಪ್ರತಿನಿಧಿಸಲಾರವು. ನಮ್ಮ ಹಿಂದಿನ ಸಾಹಿತ್ಯ ಇತಿಹಾಸ ಹೇಗೆ ಜನಸಾಮಾನ್ಯರ ಬಗೆಗೆ, ಅವರ ಸಂಸ್ಕೃತಿಯ ಬಗೆಗೆ ಮೌನ ತಾಳಿವೆಯೋ ಹಾಗೆ ಶಾಸನಗಳೂ ಅವರ ಬಗೆಗೆ ಮೌನ ತಾಳಿವೆ. ಹೀಗಾಗಿ ಇಲ್ಲಿ ಜನತೆ ಮತ್ತು ಶಾಸನಗಳ ಸಂಬಂಧ ಪೂರಕವಾಗಿರದೆ, ಶಾಸನಗಳು ಆಯಾಕಾಲದ ರಾಜನ ಪ್ರಭುತ್ವವನ್ನು ಮತ-ಧರ್ಮದ ನಿಯಮಗಳನ್ನು ಜನತೆಯ ಮೇಲೆ ಹೇರುವ ವಾಹಕಗಳಾಗಿವೆ. ಶಾಸನಗಳು ಜನಸಾಮಾನ್ಯರ ಜೀವನ ವಿಧಾನ ಕುರಿತು ಎಲ್ಲಿಯೂ ವಿವರವಾಗಿ ಬಿಚ್ಚಿಕೊಳ್ಳುವುದಿಲ್ಲ. ಇಲ್ಲಿನ ಸ್ಮಾರಕಗಳ ಕುರಿತ ವಿವರ ಹೊತ್ತಿರುವ ಶಾಸನಗಳು ಜನತೆಯ ಕುರಿತು ಹೆಚ್ಚಿನ ಮಾಹಿತಿ ನೀಡುವುದಿಲ್ಲ. ಚಾತುರ್ವರ್ಣ ವ್ಯವಸ್ಥೆಯಲ್ಲಿ ಬಾಳಿದ ಅಂದಿನ ಜನತೆ ತೊಂದರೆ ಸಂಕಟಗಳಲ್ಲಿಯೂ ಆದರ್ಶ ನೀತಿಯಂತಹಾ ಮೌಲ್ಯಗಳನ್ನು ಎತ್ತಿಹಿಡಿದಿರುವುದು ಕಂಡುಬರುತ್ತದೆ. ಶಾಸನಗಳ ಉಲ್ಲೇಖದಿಂದ ಇಡೀ ಜನ ಜೀವನದ ವಿವರಗಳನ್ನು ತಿಳಿಯಲು ಸಾಧ್ಯವಾಗದಿದ್ದರೂ, ಪ್ರಕಟವಾಗಿರುವ ಕೆಲಸಂಗತಿಗಳನ್ನು ಸಂಗ್ರಹಿಸಿ ಜನತೆಯ ಜೀವನ ಕ್ರಮದ ಬಗೆಗೆ ಊಹಿಸಲು ಸಾಧ್ಯವಿದೆ. ಮೇಲುಕೋಟೆ ದೇವಾಲಯದಲ್ಲಿ ಇಂದಿಗೂ ಜೀವಂತವಾಗಿರುವ ಕೆಲವು ಆಚರಣೆಗಳು, ನಿಯಮಗಳು ಅವರ ದೇವಾಲಯದೊಂದಿಗಿನ ಪಾತ್ರದ ಕುರಿತು ವಿವರಿಸಲು ಪ್ರಬಲ ಆಧಾರಗಳಾಗಿವೆ.

ಚರಿತ್ರೆ ಅಧ್ಯಯನವು ಜನಕೇಂದ್ರಿತವಾದಾಗ ಮಾತ್ರ ಸಂಸ್ಕೃತಿಯ ವಿಸ್ತಾರ ಅಧ್ಯಯನ ಸಾಧ್ಯ. ಯಾವುದೇ ಒಂದು ಪ್ರದೇಶದ ಸಂಸ್ಕೃತಿ ಮತ್ತು ಚರಿತ್ರೆಯ ಕುರಿತು ಚರ್ಚೆ ನಡೆಸುವಾಗ ಲಿಖಿತ ಆಕರಗಳಂತೆ ಅಲ್ಲಿನ ಮೌಖಿಕ ಆಕರಗಳಲ್ಲಿ ಕಂಡುಬರುವ ಚಾರಿತ್ರಿಕ

ವಿವರಗಳು ಅಲಕ್ಷಿತವಾಗಿರುವ ಹಲವಾರು ಸಾಂಸ್ಕೃತಿಕ ಜಗತ್ತನ್ನು ತಿಳಿದುಕೊಳ್ಳಲು ಚರಿತ್ರೆಕಾರರಿಗೆ ಸಹಕಾರಿಯಾಗುತ್ತದೆ.

ಧಾರ್ಮಿಕ ಪ್ರಭುತ್ವಕ್ಕೆ ಸಿಕ್ಕಿ ತತ್ತರಿಸಿದವರಲ್ಲಿ ಪ್ರಮುಖವಾಗಿ ಮಹಿಳೆಯರು ಮತ್ತು ದಲಿತರನ್ನು ಗುರುತಿಸಬಹುದು. ದೇವದಾಸಿ ಪದ್ಧತಿಯ ಆಚರಣೆಯು ಸ್ತ್ರೀಯರ ಮೇಲಾದ ಶೋಷಣೆಯೇ ಆಗಿತ್ತು. ಸಾಮಾಜಿಕ ಸಂಕೀರ್ಣತೆಯನ್ನು ಸಡಿಲಗೊಳಿಸುವ ಪ್ರಯತ್ನಗಳು ನಡೆದರೂ ಸಾಧ್ಯವಾಗಲಿಲ್ಲ. ಹೀಗೆ ದೇವಾಲಯಗಳು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಮಾಜದ ರಚನೆಯನ್ನು ನಿರೂಪಿಸುವ ಪಾತ್ರವಹಿಸಿದವು. ಆಡಳಿತ ಮತ್ತು ಜಾತಿ ಕಟ್ಟಳೆಯ ಉನ್ನತ ನ್ಯಾಯಾಲಯಗಳಾಗಿದ್ದ ದೇವಾಲಯಗಳು ಜಮೀನುದಾರರಂತೆ ಕಾರ್ಯನಿರ್ವಹಿಸುತ್ತಿದ್ದವು. ಕೆಳವರ್ಗಗಳ ಪರವಾಗಿ ಹುಟ್ಟಿಕೊಂಡ ಪ್ರತಿಯೊಂದು ಸಿದ್ಧಾಂತಗಳೂ ಕ್ರಮೇಣ ಧರ್ಮವಾಗಿ ರೂಪುಗೊಂಡವು. ಇದರಿಂದಾಗಿ ಆರಂಭಿಕ ಆಶಯಗಳು ಮತ್ತು ಬೋಧನೆಗಳು ಮೂಲೆಗುಂಪಾಗಿ ಸಾಂಪ್ರದಾಯಿಕತೆಯೇ ಮೊದಲ ಸ್ಥಾನವನ್ನು ಪಡೆದುಕೊಳ್ಳುವಂತಾಯಿತು. ಪ್ರಜೆಗಳ ಸ್ಮಾರಕಗಳು ಅರಸಕೇಂದ್ರಿತ ಚರಿತ್ರೆಯಲ್ಲಿ ಸಂಪೂರ್ಣವಾಗಿ ನಿರ್ಲಕ್ಷಕ್ಕೆ ಒಳಗಾದವು. ಕೆಳವರ್ಗದ ಜನರ ಮನೆಗಳು, ಗ್ರಾಮದೇವತೆಗಳ ಗುಡಿಗಳು ನಿಲರಂಕೃತವಾಗಿ ನಿರ್ಲಕ್ಷಗೊಂಡವು

ಪ್ರಭುತ್ವದ ಸ್ಮಾರಕಗಳಾಗಿದ್ದ ದೇವಾಲಯಗಳಲ್ಲಿ ಕೆಳವರ್ಗದ ಪಾತ್ರವನ್ನು ಸಾಮಾಜಿಕ ನೆಲೆಯಲ್ಲಿ ಅರಿಯಬೇಕಿದೆ. ಕೆಳಸ್ತರದ ಇತಿಹಾಸವನ್ನು ಅರಿಯಲು ಇರುವ ದಾಖಲೆಗಳು ಅತ್ಯಲ್ಪವಾದವು. ಆದುದರಿಂದ ಪ್ರಸ್ತುತ ಅಧ್ಯಯನದಲ್ಲಿ ಮೌಖಿಕ ಆಕರಗಳು ಮತ್ತು ನಂಬಿಕೆ ಹಾಗೂ ಆಚರಣೆಗಳನ್ನು ಆಧಾರವಾಗಿ ಸಂಗ್ರಹಿಸಲಾಗಿದೆ.

ಕೆಳವರ್ಗದ ಚರಿತ್ರೆಯಲ್ಲಿ ಧಾರ್ಮಿಕ ನಿರ್ಲಕ್ಷಕ್ಕೊಳಪಟ್ಟ ಒಂದು ವರ್ಗ 'ಅಸ್ಪೃಶ್ಯರು' (ದಲಿತರು). ಆಚಾರ್ಯ ರಾಮಾನುಜರು ನೀಡಿದ ಒಂದು ದಿನದ ದೇವಾಲಯದ ಪ್ರವೇಶ ಹಾಗೂ ದೇವಾಲಯದಿಂದ ಸಿಕ್ಕ ಅಲ್ಪ ಮನ್ನಣೆಗಳು ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಗೆ ಸಮರ್ಥನೆಗಳಂತಿದ್ದವು. ದಲಿತರು ಸಮಾನತೆಗಾಗಿ ಹಂಬಲಿಸುತ್ತಿದ್ದರೂ, ಅವರ ಭಾವನೆಗಳಿಗೆ ಮನ್ನಣೆ ಸಿಗಲಿಲ್ಲ. ಅಸ್ತಿತ್ವದಲ್ಲಿದ್ದ ಸಾಮಾಜಿಕ ವ್ಯವಸ್ಥೆಯೊಡನೆ ಸಂಧಾನ ಮಾಡಿಕೊಳ್ಳಲು ಕೆಳಸ್ತರದವರನ್ನು ಪ್ರೇರೇಪಿಸಿತು. ದೇವಾಲಯಗಳು ದಲಿತರ ಸ್ಥಾನಮಾನದಲ್ಲಿ ಬದಲಾವಣೆ ತರುವ ಬದಲಾಗಿ ಪರಿಸ್ಥಿತಿಯನ್ನು ಮತ್ತಷ್ಟು ಜಟಿಲಗೊಳಿಸಿತು. ಇದರಿಂದ ಸಮಾಜದಲ್ಲಿ ಕೆಳಸ್ತರದ ಜನರ ಭಾವನೆಗಳು ಕಮರಿಹೋದವು.

ಹೀಗೆ ದೇವಾಲಯದ ಸಾಮಾಜಿಕ ಅಧ್ಯಯನದಿಂದ ಕೆಳವರ್ಗಗಳ ಬದುಕು, ಬವಣೆ, ನೋವುಗಳನ್ನು ಅರಿಯಲು ಸಾಧ್ಯವಿದೆ. ಸಾಮಾಜಿಕ ಕೇಂದ್ರಗಳಾಗಿ ಗುರುತಿಸಿಕೊಂಡ ದೇವಾಲಯಗಳು ಉಂಟುಮಾಡಿದ ಏರುಪೇರುಗಳು ಸೃಷ್ಠಿ ನಿಯಮಗಳೆಂಬಂತೆ ಹೊರಬಂದವು. ದೇವಾಲಯದ ಆಚರಣೆಯ ನಿಯಮಗಳನ್ನು ಪ್ರಶ್ನಿಸದೇ ಆಚರಿಸುವ ಮನೋಪ್ರೌರುತ್ತಿಯ ಈ ವರ್ಗಗಳು ನಿರಂತರವಾಗಿ ನಿರ್ಲಕ್ಷಕ್ಕೊಳಪಟ್ಟವು. ಮತ, ಧರ್ಮಗಳ ಸೈದ್ಧಾಂತಿಕ ಸಮರ್ಥನೆಗಳು ಕೆಳವರ್ಗದ ಜೀವನ ಶೈಲಿಯಲ್ಲಿ ಬದಲಾವಣೆ ತರಲಿಲ್ಲ. ಅದಕ್ಕೆ ಸ್ಪಷ್ಟ ಉದಾಹರಣೆಗಳೇ ದೇವಾಲಯಗಳು. ಸಮಕಾಲೀನ ಸಾಮಾಜಿಕ ಆದರ್ಶಗಳು ಎಂದು ನಂಬಲಾಗಿದ್ದ ನಿಯಮಗಳು ಪ್ರಮುಖವಾಗಿ ವ್ಯಕ್ತವಾದುದು ದೇವಾಲಯಗಳಲ್ಲಿ.

ಸಮುದಾಯ ಕೇಂದ್ರಗಳಾಗಿ ದೇವಾಲಯಗಳು

12ನೇ ಶತಮಾನದ ಸಾಮಾಜಿಕ ಮತ್ತು ಧಾರ್ಮಿಕ ಪ್ರಕ್ರಿಯೆಗಳಲ್ಲಿ ದೇವಾಲಯಗಳು ವಿಶಿಷ್ಟ ಪಾತ್ರ ನಿರ್ವಹಿಸಿದವು. ಸಾಮಾಜಿಕ ಮತ್ತು ಧಾರ್ಮಿಕ ತತ್ವ ಸಿದ್ಧಾಂತಗಳನ್ನು ಬಲಪಡಿಸಿದ ದೇವಾಲಯಗಳಿಗೆ, ರಾಮಾನುಜರು ದಕ್ಷಿಣ ಭಾರತದಲ್ಲಿ ಬಲಗೊಳಿಸಿದ ದೇವಾಲಯ ಆಧಾರಿತ ಅರ್ಚಾವತಾರ ಕಲ್ಪನೆಯು ಮತ್ತಷ್ಟು ಪುಷ್ಠಿನೀಡಿತು.[4] ರಾಜ್ಯಾಡಳಿತ ಮತ್ತು ಸಾಮಾಜಿಕ ರೀತಿನೀತಿಗಳನ್ನು ಕುರಿತ ವಿವರಗಳು ಧರ್ಮಶಾಸ್ತ್ರಗಳನ್ನು ಬಲಪಡಿಸಿದವು. ಅಧಿಕಾರವರ್ಗವು ಬ್ರಾಹ್ಮಣರ ಗುಂಪುಗಳಿಗೆ ನಿರ್ಮಿಸಿದ ದೇವಾಲಯಗಳು ಸಾಂಸ್ಥಿಕ ಆಧಾರದೊಂದಿಗೆ ಧಾರ್ಮಿಕ ಸಿದ್ಧಾಂತಗಳನ್ನು ಒಪ್ಪಿಕೊಂಡು ಅವುಗಳನ್ನು ಬಲಪಡಿಸುವುದರಲ್ಲಿ ಒಂದುಗೂಡಿದವು. ದೇವಾಲಯಗಳು ರಾಜತ್ವ ಮತ್ತು ಪುರೋಹಿತಶಾಹಿಯನ್ನು ಬಲಪಡಿಸಿ, ಸಮಾಜದ ಊಳಿಗಮಾನ್ಯ ಅಂಶಗಳನ್ನು ಬಲಗೊಳಿಸುತ್ತಿದ್ದವು. ಸಾಂಪ್ರದಾಯಿಕತೆ ಮತ್ತು ಮಡಿವಂತಿಕೆಗಳು ಸಮಾಜದ ಶ್ರೇಣೀಕೃತ ಜಾತಿವ್ಯವಸ್ಥೆಯನ್ನು ರಕ್ಷಿಸುತ್ತಿದ್ದವು. ಇಂಥಹಾ ಹಲವು ವೈರುಧ್ಯಗಳು ದೇವಾಲಯಗಳಿಂದ ವ್ಯಕ್ತವಾದರೂ ದೇವಾಲಯಗಳು ಸಾಮಾಜಿಕ ಸ್ವರೂಪದ ಜನಜೀವನದ ಖಚಿತ ಅಭಿವ್ಯಕ್ತಿಗಳಾಗಿದ್ದವು.

ರಾಮಾನುಜರು ದಕ್ಷಿಣಭಾರತದಲ್ಲಿ ಬಲಗೊಳಿಸಿದ ದೇವಾಲಯ ಆಧಾರಿತ ಅರ್ಚಾವತಾರ ಕಲ್ಪನೆಗೆ ಮೇಲುಕೋಟೆ ದೇವಾಲಯ ಸಂಕೀರ್ಣವು ಉತ್ತಮ ಉದಾಹರಣೆ. ಹೊಯ್ಸಳರ ಕಾಲದಲ್ಲಿ ರಾಮಾನುಜರ ಅಮಿತ ಪ್ರಭಾವದಿಂದ ಭಾಗವತದ ಭಾಗವಾದ ವೈಷ್ಣವಧರ್ಮ ಈ ಪ್ರದೇಶದ ಸಾಮಾಜಿಕ ಜೀವನದ ಮೇಲೆ ಮಹತ್ವದ ಪ್ರಭಾವ ಬೀರಿತು.

12ನೇ ಶತಮಾನಕ್ಕೆ ಮುಂಚೆ ಇದು ಪ್ರಮುಖ ನೆಲೆಯಾಗಿರಲಿಲ್ಲ. ಹೊಯ್ಸಳ ವಿಷ್ಣುವರ್ಧನನಿಂದ ಸಿಕ್ಕ ಪ್ರೋತ್ಸಾಹದಿಂದ ಹಾಗೂ ನಂತರದ ರಾಜರಿಂದ ಸಿಕ್ಕ ಭೂಮಿ ಹಾಗೂ ದಾನ ದತ್ತಿಗಳಿಂದ ದೇವಾಲಯ, ಸಮಾಜದಲ್ಲಿ ಪ್ರಮುಖ ಸ್ಥಾನ ಪಡೆಯಿತು. ಹೊಯ್ಸಳರು ಗಳಿಸಿದ ಸಂಪತ್ತು ಮತ್ತು ಶಕ್ತಿಯನ್ನು ದೇವಾಲಯ ನಿರ್ಮಾಣದ ಮೂಲಕ ವ್ಯಕ್ತಪಡಿಸಿದರು. ನಂತರ ಪ್ರಭಾವಿ ಸಮಾಜಿಕ ವರ್ಗವಾದ ತಮಿಳು ಶ್ರೀ ವೈಷ್ಣವ ಬ್ರಾಹ್ಮಣರ ಆಗಮನವಾಯಿತು. ಅಲ್ಲದೆ ಬ್ರಾಹ್ಮಣೇತರ ಹಲವು ಜಾತಿಗಳ ಜನರು ದೇವಾಲಯದಲ್ಲಿ ಹಲವು ಸೇವೆಗಳಿಗಾಗಿ ನೇಮಕಗೊಂಡರು. ಪಾಂಚರಾತ್ರ ಆಗಮವು ಇದರ ಅಗತ್ಯತೆಯನ್ನು ಹೇಳುತ್ತದೆ. ಜೊತೆಗೆ ದೇವಾಲಯದ ಜಮೀನನ್ನು ಉಳುಮೆ ಮಾಡಲು ಕೃಷಿಕವರ್ಗ, ಕಾರ್ಮಿಕರು ಮತ್ತು ಕೂಲಿಯ ಶೂದ್ರಜಾತಿಯವರು ಇಲ್ಲಿ ಬಂದು ನೆಲೆನಿಂತರು. ಶಿಲ್ಪಿಗಳು ಇನ್ನಿತರ ಉದ್ಯೋಗಾಕಾಂಕ್ಷಿಗಳು ಇಲ್ಲಿ ನೆಲೆನಿಂತರು. ದೇವರ ಮತ್ತು ಬ್ರಾಹ್ಮಣರ ಕೆಲವು ನಿಗದಿತ ಸೇವೆ ಮಾಡಲು ಗ್ರಾಮಸಮುದಾಯಗಳು ದೇವಾಲಯಕ್ಕೆ ಸೇರಿಸಲ್ಪಟ್ಟವು. ಹೀಗೆ ಹೊಯ್ಸಳರ ಕಾಲದಲ್ಲಿ ಮೇಲುಕೋಟೆ ದೇವಾಲಯ ಸಂಕೀರ್ಣವು ಸಾಮಾಜೀಕರಣದ ಅತಿ ಮುಖ್ಯ ಕೇಂದ್ರವಾಗಿ ಸ್ಥಾನ ಪಡೆಯಿತು. ಹೊಯ್ಸಳರ ಅವನತಿಯ ನಂತರ ಪ್ರಾಬಲ್ಯಕ್ಕೆ ಬಂದ ವಿಜಯನಗರದ ಅರಸರು. ಸಾಂಸ್ಕೃತಿಕ ಸಂಸ್ಥೆಗಳಾದ ದೇವಾಲಯಗಳ ಆಶ್ರಯದಾತರಾಗಿ ಹಿಂದೂ ಧರ್ಮ ರಕ್ಷಣೆಯ ಉದ್ದೇಶ ಹೊಂದಿದ್ದರು. ಇವರ ಕಾಲದಲ್ಲಿ ಶ್ರೀ ವೈಷ್ಣವ ಧರ್ಮವು ಶ್ರೀಮಂತ ರಾಜಾಶ್ರಯ ಪಡೆದು ಈ ಪ್ರದೇಶದಲ್ಲಿ ಅತ್ಯಂತ ಪ್ರಬಲ ಧರ್ಮವಾಯಿತು. ಮೇಲುಕೋಟೆಯಲ್ಲಿ ಸುಮಾರು 30 ಶಾಸನಗಳು ಇವರ ಕಾಲದಲ್ಲಾದ ದೇವಾಲಯ ಬೆಳವಣಿಗೆಯನ್ನು ತಿಳಿಸುತ್ತವೆ. ವಿಜಯನಗರದ ದೊರೆ ಮಲ್ಲಿಕಾರ್ಜುನನ ಕಾಲದಲ್ಲಿ ದಂಡನಾಯಕನಾಗಿದ್ದ ತಿಮ್ಮಣ್ಣ ದಣ್ಣಾಯಕನು ಶಾಸನಗಳಲ್ಲಿ 'ಯಾದವಗಿರಿ ಜೀರ್ಣೋದ್ಧಾರಕ' ಎಂಬ ಬಿರುದುಪಡೆದಿದ್ದಾನೆ.[5] ಕೃಷ್ಣದೇವರಾಯನ ಕಾಲದಲ್ಲಿ ಶ್ರೀರಂಗಪಟ್ಟಣದ ದಂಡನಾಯಕ ಕೃಷ್ಣರಾಯ ನಾಯಕ,[6] ಇಮ್ಮಡಿ ದೇವರಾಯ,[7] ಸದಾಶಿವ ಮಹಾರಾಜ,[8] ಸದಾಶಿವರಾಯನ ಕಾಲದ ಕೊಂಡರಾಜಯ್ಯದೇವ[9] ಮುಂತಾದವರು ದೇವಾಲಯ ಜೀರ್ಣೋದ್ಧಾರದಲ್ಲಿ ಆಸಕ್ತಿ ಹೊಂದಿದ್ದುದು ಸ್ಪಷ್ಟವಾಗುತ್ತದೆ. ರಾಜರ ಮತ್ತು ದಂಡನಾಯಕರ ಉದಾರ ಭೂಮಿ ಮತ್ತು ಹಣದ ದಾನ ಪಡೆದು, ವರ್ಣರಂಜಿತ ಆಚರಣೆಗಳು ಮತ್ತು ಉತ್ಸವಗಳು ಆರಂಭಗೊಂಡವು. ಸಂಗೀತ, ನೃತ್ಯ, ನಾಟಕಗಳು ಪ್ರೋತ್ಸಾಹಗೊಂಡವು. ಹೀಗೆ ಮೇಲುಕೋಟೆಯ ದೇವಾಲಯಗಳು ಸಮುದಾಯ ಕೇಂದ್ರಗಳಾಗಿ ಮತ್ತಷ್ಟು ಬಲಗೊಂಡವು. ನಂತರದ ಅರಸರಾದ ಮೈಸೂರಿನ ಒಡೆಯರು ಜಂಗಮ ಪಂಥದ ಅನುಯಾಯಿಗಳೆಂಬಂತೆ ತೋರಿದರೂ ವಿಷ್ಣುವಿನ ಪಂಥದ ಕಡೆಗೆ ಅವರ ಒಲವು ಹೆಚ್ಚಾಗಿ ಹರಿಯಿತು.[10] ಇಂದು ಮೇಲುಕೋಟೆಯ ಶ್ರೀಮಂತಿಕೆ ಮತ್ತು ವೈಭವಗಳು ಮೈಸೂರು ಒಡೆಯರ ಪರೋಪಕಾರ ಗುಣಗಳಿಂದ ಬಂದಿವೆ ಎಂದರೆ

ಉತ್ಪ್ರೇಕ್ಷೆಯಾಗುವುದಿಲ್ಲ.[11] ಚಿಕ್ಕದೇವರಾಜ ಒಡೆಯರು ಮೇಲುಕೋಟೆಯ ನಾರಾಯಣನ ನಿಷ್ಠಾವಂತ ಭಕ್ತರಾಗಿದ್ದರು.[12] ಮೇಲುಕೋಟೆ ದೇವಾಲಯಗಳು ಸಾಮಾಜಿಕ-ಧಾರ್ಮಿಕ ಮುಖ್ಯ ಕೇಂದ್ರವಾಗಿ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಪಡೆದ ಪ್ರಾಮುಖ್ಯತೆ ಮತ್ತು ಪರಂಪರೆಯನ್ನು ಮೈಸೂರಿನ ರಾಜರು ಮುಂದುವರೆಸಿದರು. ಇದು ದೇವಾಲಯಗಳ ಪ್ರಾಮುಖ್ಯತೆ ಪುನಶ್ಚೇತನಗೊಳ್ಳಲು ಕಾರಣವಾಯಿತು. ಮೇಲುಕೋಟೆಯ ನಾರಾಯಣಸ್ವಾಮಿ ದೇವಾಲಯದಲ್ಲಿರುವ ಮುಮ್ಮಡಿ ಕೃಷ್ಣರಾಜ ಒಡೆಯರ ಮತ್ತು ನಾಲ್ಕು ಪಟ್ಟದರಸಿಯರ ಭಕ್ತವಿಗ್ರಹಗಳು ಸಾಮಾಜೀಕರಣ ಮತ್ತು ಸಂವಹನದ ಅನೌಪಚಾರಿಕವೂ ಪರೋಕ್ಷವೂ ಆದ ಮಾಧ್ಯಮವಾಗಿ ವರ್ತಿಸಿದವು ಎಂದು ಹೇಳಬಹುದು.

ದೇವಾಲಯಗಳು ಗ್ರಾಮಗಳ ಸಂಘಜೀವನದ ಸಾಂಸ್ಕೃತಿಕ ಕೇಂದ್ರಗಳಂತೆ ಇರುತ್ತವೆ.[13] ಎಂಬ ಡಾ. ಬಾ.ರಾ.ಗೋಪಾಲ್ ಅವರ ಅಭಿಪ್ರಾಯದ ಹಿನ್ನೆಲೆಯಲ್ಲಿ ಮೇಲುಕೋಟೆ ದೇವಾಲಯಗಳು ಬಹಳ ಮುಖ್ಯವಾದವು. ಇವು ಕೇವಲ ಒಂದು ಪೂಜಾಸ್ಥಾನವಾಗಲಿ, ಧಾರ್ಮಿಕ ಸಂಸ್ಥೆಯಾಗಲಿ ಆಗಿರದೆ ಸಂಕೀರ್ಣವಾದ ಸಾಮಾಜಿಕ ಆರ್ಥಿಕ ಸಂಸ್ಥೆಯಾಗಿತ್ತು. ಜನಜೀವನದಲ್ಲಿ ಮಹತ್ತರವಾದ ಪಾತ್ರವನ್ನು ನಿರ್ವಹಿಸುತ್ತಿತ್ತು. ದೈನಿಕ, ಸಾಪ್ತಾಹಿಕ, ಮಾಸಿಕ, ವಾರ್ಷಿಕ ಉತ್ಸವಗಳು ಹಾಗೂ ವಿಶೇಷ ಸಮಾರಂಭಗಳನ್ನು ಇಲ್ಲಿ ನಡೆಸಲಾಗುತ್ತಿತ್ತು. ಸಾಮೂಹಿಕ ಉತ್ಸವಗಳು ಜನರು ಒಂದೆಡೆ ಸೇರಲು ಅವಕಾಶ ಮಾಡಿಕೊಡುತ್ತಿದ್ದವು. ಎಲ್ಲಾ ಜಾತಿಯ ಜನರು ಪಾಲ್ಗೊಳ್ಳುತ್ತಿದ್ದುದು, ಪ್ರಜಾಸತ್ತಾತ್ಮಕ ಲಕ್ಷಣದ ಸೂಚನೆಯಾಗಿತ್ತು. ಮೇಲುಕೋಟೆ ದೇವಾಲಯಗಳು ಕಲೆ ಮತ್ತು ಶಿಕ್ಷಣದ ಕೇಂದ್ರವಾಗಿದ್ದವು. ಸಂಗೀತ, ನರ್ತನ ಸೇವೆಗಳಿಗೆ ಅವಕಾಶವಿತ್ತು. ವಾಸ್ತುವಿನ ದೃಷ್ಟಿಯಿಂದಲೂ ವಿಸ್ತಾರಗೊಂಡ ದೇವಾಲಯಗಳು ತಾಂತ್ರಿಕವಾಗಿ ಅವಶ್ಯಕ ಮಾರ್ಪಾಡುಗಳನ್ನು ಮಾಡಿಕೊಂಡು, ಶಿಲ್ಪಕಲೆಯಲ್ಲಿ ಪ್ರಯೋಗಗಳನ್ನು ಮಾಡುತ್ತಾ ತಮ್ಮ ಸೌಂದರ್ಯವನ್ನು ಹೆಚ್ಚಿಸಿಕೊಂಡದ್ದು ದೇವಾಲಯ ನಿರ್ಮಾತೃಗಳು ವಾಸ್ತು ಮತ್ತು ಶಿಲ್ಪ ಕಲಾವಿದರಿಗೆ ನೀಡಿದ ಪ್ರೋತ್ಸಾಹಕ್ಕೆ ಸಾಕ್ಷಿಗಳಾಗಿವೆ. ದೇವರ ಅಂಗಭೋಗದ ಜೊತೆಗೆ ರಂಗಭೋಗಕ್ಕೆ ಪ್ರಾಶಸ್ತ್ಯ ದೊರೆತದ್ದು ದೃಶ್ಯ ಹಾಗೂ ಶ್ರವ್ಯಕಲೆಗೆ ದೊರೆತ ಪ್ರಾಶಸ್ತ್ಯದ ಗುರುತಾಗಿದೆ. ವಿವಿಧ ವಾದ್ಯ, ಗೀತ, ಶಿಲ್ಪಕಲೆ, ವರ್ಣಚಿತ್ರಗಳಿಗೆ ನೀಡಿದ ಪ್ರೋತ್ಸಾಹ ಸಾಂಸ್ಕೃತಿಕ ಮೌಲ್ಯದ ಪ್ರಗತಿಯನ್ನು ಸೂಚಿಸುತ್ತವೆ. ದೇವದಾಸಿಯರು ತಮ್ಮ ಕಲೆಯ ಮೂಲಕ ಜನರಿಗೆ ಲೌಕಿಕ ಮನರಂಜನೆಯನ್ನು ನೀಡುತ್ತಿದ್ದರು. ದೇವತಾಮೂರ್ತಿಯ ಪೂಜೆಯ ಸಂದರ್ಭದಲ್ಲಿ ಸಾಮುದಾಯಿಕ ಸಂಪರ್ಕಕ್ಕೆ ಸಾಧನವಾದ ದೇವಾಲಯಗಳು ಮಠಗಳ ಸಂಪರ್ಕದಿಂದ ವಿಸ್ತಾರಗೊಂಡು ವಿದ್ಯಾಕೇಂದ್ರಗಳಾಗಿ ಕಾರ್ಯನಿರ್ವಹಿಸಲಾರಂಭಿಸಿದವು. ದೇವಾಲಯ ಸ್ಥಾನಾಚಾರ್ಯರಾದ 'ಜೀಯರ್'ಗಳು

ಅದರ ನೇತೃತ್ವ ವಹಿಸಿದ್ದರು.[14] ಪುರಾಣಗಳು, ಪ್ರವಚನಗಳ ಮೂಲಕ ಸಾಮಾನ್ಯ ಜನರಿಗೂ ಶಿಕ್ಷಣ ನೀಡಲಾಗುತ್ತಿತ್ತು. ಇಲ್ಲಿನ ದೇವಾಲಯಗಳು ಮತ್ತು ಮಠಗಳಿಗೆ ಹೊಂದಿಕೊಂಡಂತಿದ್ದ 'ರಾಮಾನುಜಕೂಟ'ಗಳೆಂಬ ಅನ್ನಸತ್ರಗಳು ವೈಷ್ಣವ ಭಕ್ತರಿಗೆ ಅನ್ನದಾನ ಮಾಡುತ್ತಿದ್ದವು.[15] ಅನೇಕ ಸಂದರ್ಭಗಳಲ್ಲಿ ನ್ಯಾಯಾಲಯಗಳಾಗಿಯೂ ಕಾರ್ಯನಿರ್ವಹಿಸಿವೆ.

ಎಲ್ಲಕ್ಕಿಂತ ಮಿಗಿಲಾಗಿ ಪ್ರಾದೇಶಿಕವಾಗಿ ದೇವಾಲಯವು ಆರ್ಥಿಕ ಆಧಾರವಾಗಿ ಪರಿಣಮಿಸಿತ್ತು. ಇಲ್ಲಿನ ದೇವಾಲಯಗಳು ಹಲವು ಮೂಲಗಳಿಂದ ಸಂಪತ್ತನ್ನು ಸಂಗ್ರಹಿಸುತ್ತಿದ್ದವು. ಅರಸರು, ಅಧಿಕಾರಿಗಳು, ವೈಯಕ್ತಿಕವಾಗಿ ಜನರು ನೀಡುತ್ತಿದ್ದ ಕೊಡುಗೆಗಳು, ದಾನ ದತ್ತಿಗಳು, ಚಿನ್ನ, ಗೋವು, ದವಸದಾನ್ಯಗಳು ದೇವಾಲಯದ ಪ್ರಮುಖ ಸಂಪತ್ತಾಗಿತ್ತು. ಜೊತೆಗೆ ಅನೇಕ ಅಧಿಕಾರ ಸವಲತ್ತುಗಳನ್ನು ಪಡೆದಿದ್ದವು. ಜಮೀನ್ದಾರರ ಸ್ಥಾನ ಪಡೆದಿದ್ದ ದೇವಾಲಯಗಳು ಭಾರೀ ಸಂಪತ್ತಿನ ಕೇಂದ್ರಗಳಾಗಿದ್ದವು. ಹಲವು ಉದ್ದೇಶಗಳಿಗಾಗಿ ದೇವಾಲಯವು ಉದ್ಯೋಗ ಒದಗಿಸುತ್ತಿತ್ತು. ಪುರೋಹಿತರು, ಸಂಗೀತಗಾರರು, ನರ್ತಕಿಯರು, ಅಡುಗೆಯವರು, ದೀಪಹಚ್ಚುವವರು, ಕಸಗುಡಿಸುವವರು, ಕಾವಲುಗಾರರು.[16] ಮುಂತಾದವರು ಉದ್ಯೋಗ ಪಡೆದಿದ್ದರು. ಇಂಥಹ ಹುದ್ದೆಗಳಿಗೆ ಹೆಚ್ಚಿನ ಮನ್ನಣೆ ಇರುತ್ತಿತ್ತು. ವಿವಿಧ ಜಾತಿಯ ಜನರು ಇಲ್ಲಿ ಕೆಲಸ ಮಾಡುತ್ತಿದ್ದು, ದೇವಾಲಯದಲ್ಲಿ ಕೆಲಸ ಮಾಡುವುದು ಹೆಚ್ಚಿನ ಮರ್ಯಾದೆ ಎಂಬ ಭಾವನೆ ಇತ್ತು. ಏಕೆಂದರೆ, ದೇವಾಲಯವು ವಿಶೇಷ ಅಧಿಕಾರ, ಗೌರವ ಪ್ರತಿಷ್ಠೆಯ ಸ್ಥಳವಾಗಿತ್ತು. ವ್ಯಕ್ತಿಯು ಮಾಡುತ್ತಿದ್ದ ಕೆಲಸಕ್ಕಿಂತ ಎಲ್ಲಿ ಆ ಕೆಲಸ ಮಾಡುತ್ತಿದ್ದಾನೆ ಎಂಬುದರ ಮೇಲೆ ಸ್ಥಾನಮಾನವು ನಿರ್ಣಯವಾಗುತ್ತಿದ್ದಿತು.

ದೇವಾಲಯವು ಜನಸಂಪರ್ಕ ಕೇಂದ್ರವಾದುದರಿಂದ ಅನೇಕ ಜಾತ್ರೆ, ಉತ್ಸವಗಳು ವ್ಯಾಪಾರಿ ವರ್ಗಕ್ಕೆ ಅನುಕೂಲಕರವಾಗಿತ್ತು. ಸಂತೆಗಳು ವ್ಯವಸ್ಥೆಗೊಳ್ಳುತ್ತಿದ್ದು, ಕುಶಲಕರ್ಮಿಗಳು, ವ್ಯಾಪಾರಸ್ಥರು ಅಂಗಡಿಗಳನ್ನು ದೇವಾಲಯಗಳ ಸುತ್ತ ತೆರೆದು ತೆರಿಗೆ ಪಾವತಿಸುತ್ತಿದ್ದರು. ಕೃಷಿ ಮತ್ತು ಉದ್ದಿಮೆಗಳು ದೇವಾಲಯಗಳ ನಿಯಂತ್ರಣದಲ್ಲಿದ್ದವು. ಹೀಗೆ ದೇವಾಲಯವು ಸುವ್ಯವಸ್ಥಿತವಾದ ಸಾಮಾಜಿಕ ಮತ್ತು ಆರ್ಥಿಕ ಹಾಗೂ ಸೌಂದರ್ಯಾತ್ಮಕ ಸಂಸ್ಥೆಯಸ್ಥಾನವನ್ನು ಅಲಂಕರಿಸಿತ್ತು. ಇಲ್ಲಿನ ದೇವಾಲಯಗಳು ತನ್ನದೇ ನಿಯಮ ನಿಬಂಧನೆಗಳು, ಹಕ್ಕುಬಾಧ್ಯತೆಗಳು, ಕಾರ್ಯನಿರತ ಸಿಬ್ಬಂದಿ, ಆಡಳಿತ ವರ್ಗ, ಸಮಿತಿಗಳನ್ನು ಹೊಂದಿದ್ದವು. ಜನಜೀವನದ ಪ್ರತಿಯೊಂದು ಮುಖದೊಂದಿಗೆ ದೇವಾಲಯಕ್ಕೆ ನಿಕಟ ಸಂಬಂಧವಿತ್ತು. ಉತ್ಸವಗಳ ಮೂಲಕ ಎಲ್ಲಾ ಜಾತಿಗಳಿಗೆ ಸೇರಿದ ಜನರನ್ನು ಒಟ್ಟಿಗೆ ಕಲೆಹಾಕಿ ಅವರ ಸಮಾನತೆಯನ್ನು ಮನವರಿಕೆ ಮಾಡಿಕೊಡುವ ಮಹತ್ಕಾರ್ಯ

ನಡೆಯುತ್ತಿತ್ತು. ಧಾರ್ಮಿಕಾಚರಣೆಗಳ ಮೂಲಕ ಸಮುದಾಯದ ಸಾಮಾಜಿಕ ಪರಂಪರೆಯನ್ನು ಪುನಶ್ಚೇತನಗೊಳಿಸುತ್ತಿದ್ದವು. ಜೊತೆ ಜೊತೆಗೆ ಇಲ್ಲಿನ ದೇವಾಲಯಗಳು ರಾಜತ್ವವನ್ನೂ, ಪುರೋಹಿತಶಾಹಿಯನ್ನು ಬಲಪಡಿಸುತ್ತಿತ್ತು. ಸಾಂಪ್ರದಾಯಿಕತೆ ಮತ್ತು ಮಡಿವಂತಿಕೆಯನ್ನು ಪುಷ್ಟಿಗೊಳಿಸುತ್ತಿತ್ತು. ದೇವರ ಹೆಸರಲ್ಲಿ **ದೇವದಾಸಿಪದ್ಧತಿಯ ಮೂಲಕ ಮಹಿಳೆಯ ಶೋಷಣೆ,** ಶ್ರೇಣೀಕೃತ ಸಮಾಜವನ್ನು ಜೀವಂತವಾಗಿರಿಸಿದವು. ಒಟ್ಟಿನಲ್ಲಿ ಮೇಲುಕೋಟೆ ದೇವಾಲಯಗಳು ಸಮುದಾಯವನ್ನು ಆಕರ್ಷಿಸಿ ಕೇಂದ್ರವಾಗುವಂತೆ ಮಾಡಿದವು.

ರಾಮಾನುಜರ ಸಾಮಾಜಿಕ ಪ್ರಭಾವ

12ನೇ ಶತಮಾನದ ಸಾಮಾಜಿಕ ಪ್ರಕ್ರಿಯೆಗಳಲ್ಲಿ ದೇವಾಲಯಗಳು ವಿಶಿಷ್ಟ ಪಾತ್ರ ನಿರ್ವಹಿಸಿದವು. ರಾಮಾನುಜರು ದಕ್ಷಿಣ ಭಾರತದಲ್ಲಿ ಬಲಗೊಳಿಸಿದ ದೇವಾಲಯ ಆಧಾರಿತ ಆಂದೋಲನಕ್ಕೆ ಆರ್ಚಾವತಾರ ಕಲ್ಪನೆಯು ಪುಷ್ಟಿನೀಡಿತು.[17] ವಿಶಿಷ್ಟಾದ್ವೈತ ಸಿದ್ಧಾಂತದ ಪ್ರತಿಪಾದಕರಾದ ರಾಮಾನುಜರು ತಮ್ಮ ದೀರ್ಘವಾದ ಬದುಕಿನ ಎರಡು ದಶಕಗಳನ್ನು ಕರ್ನಾಟಕದಲ್ಲಿ ಕಳೆದರು. ರಾಮಾನುಜರು ತಮ್ಮ ತಾತ್ವಿಕ ಚಿಂತನೆಗಳ ಸಾಮಾಜಿಕ ಪ್ರಯೋಗಗಳಿಗೆ ಮೇಲುಕೋಟೆ ದೇವಾಲಯ ನಿರ್ಮಾಣದೊಂದಿಗೆ ಚಾಲನೆ ನೀಡಿದರು. ರಾಮಾನುಜರು ಮೇಲುಕೋಟೆ ದೇವಾಲಯಗಳಲ್ಲಿ ತಮ್ಮ ಸಾಮಾಜಿಕ ನಿಲುವುಗಳನ್ನು ನಿರೂಪಿಸಲು ತಂದ ಗುರುತರ ಆಚರಣೆಗಳ ಪ್ರಭಾವವನ್ನು ಹಾಗೂ ಅವರ ತತ್ವಗಳ ಮಾನವೀಯ ಅಂಶಗಳನ್ನು ಇಲ್ಲಿ ಪರೀಕ್ಷಿಸಲಾಗುತ್ತದೆ. ಅವರ ತಾತ್ವಿಕ ಬೋಧನೆಗಳು ನಿರ್ಧರಿಸಬಹುದಾದ ಆಧಾರಗಳಾದರೂ, ಅವರ ಸಾಮಾಜಿಕ ಪ್ರಭಾವದ ಕುರಿತ ಪ್ರಯತ್ನಗಳು ಕಡಿಮೆ ಎಂದೇ ಹೇಳಬಹುದು. ರಾಮಾನುಜರಿಗೆ ಸಂಬಂಧಿಸಿದಂತೆ ಮೇಲುಕೋಟೆಯಲ್ಲಿ ಸಮಕಾಲೀನವಾದ ಒಂದು ಶಾಸನವೂ ಲಭ್ಯವಿಲ್ಲ. ಪ್ರಬಲ ಜನಶ್ರುತಿಯೇ ಇದಕ್ಕೆ ಆಧಾರವಾಗಿದೆ. ಇಲ್ಲಿನ ಪ್ರಧಾನ ದೇವಾಲಯವಾದ ನಾರಾಯಣಸ್ವಾಮಿ ದೇವಾಯದ ಮುಖ್ಯದ್ವಾರದ ಬಲಭಾಗದಲ್ಲಿರುವ ರಾಮಾನುಜರ ಗುಡಿಗೆ, ಆಲಯದಲ್ಲಿ ಯಾವುದೇ ಆಚರಣೆಗಳು, ಉತ್ಸವಗಳ ಆರಂಭದ ಮೊದಲು ನಮನ ಸಲ್ಲುತ್ತದೆ. ಇಲ್ಲಿನ ಎಲ್ಲಾ ಶಾಸನಗಳ ಆರಂಭ ರಾಮಾನುಜರ ಹೆಸರಿನೊಂದಿಗೆ ಆರಂಭವಾಗುತ್ತವೆ. ನಂಬಿಕೆಗಳು, ಆಚರಣೆಗಳು ಹಾಗೂ ರೂಢಿಗಳಿಂದ ಅವರ ಸಾಮಾಜಿಕ ಪ್ರಭಾವದ ಅಂಶಗಳು ಸ್ಪಷ್ಟವಾಗುತ್ತವೆ.

ಹಿಂದೂ ಧರ್ಮ ಮೋಕ್ಷ ಪಡೆಯಲು ಒಂದು ದಾರಿಯನ್ನು ತೋರಿಸದೆ. ಹಲವು ದಾರಿಗಳನ್ನು ತೋರಿಸಿತ್ತು. ಸಾಮಾಜಿಕ ಒಪ್ಪಂದಗಳ ಕೊರತೆಯ ಕಾರಣಕ್ಕೆ ಅವರು ಸಾಮಾಜಿಕ ದೌರ್ಬಲ್ಯಗಳನ್ನು ಗುಣಪಡಿಸುವ (ಪರಿಹರಿಸುವ) ಯೋಚನೆ ಮಾಡಲಿಲ್ಲ. ಅಸ್ಪೃಶ್ಯತೆ ಮತ್ತು ಲಿಂಗ ಅಸಮಾನತೆಗಳಂತಹ ಪಿಡುಗುಗಳು ಮರೆಯಾಗಲಿಲ್ಲ. ಇದು ಅತ್ಯಂತ ನಿರ್ವಿವಾದ ಸಂಗತಿ. ಐತಿಹಾಸಿಕ ವ್ಯಕ್ತಿ ಆತನ ಸಾಮಾಜಿಕ ವಾತಾವರಣದ ಹಿನ್ನೆಲೆಯ ವಿರುದ್ಧ ತೀರ್ಮಾನಿತವಾದನು ಮತ್ತು ಆತ ತನ್ನ ಜ್ಞಾನ ಆಧಾರಿತವಾಗಿ ನಿರ್ಧರಿತವಾಗಲಿಲ್ಲ. ಅವನು ಸಹಜವಾಗಿ ನಂಬಿಕೆಗಳ ಬಲಿಪಶುವಾಗಿದ್ದನು. ಅವನು ಉನ್ನತವಾದ ಹಂತಕ್ಕೆ ಏರಲು ಆ ಕಾಲದ ನಂಬಿಕೆಗಳನ್ನು ದಾಟಿಹೋಗಲು ಸಿದ್ಧವಿರಬೇಕಿತ್ತು. ಅವನಿದ್ದ ಸಂಸ್ಥೆಯಲ್ಲಿ ನಾಯಕನಾಗಲು ಮುಂದೆ ಬಂದರೆ, ಅಂಥವರು ವಿಲಕ್ಷಣರೀತಿಯಲ್ಲಿ ಕಷ್ಟಪಡಬೇಕಿತ್ತು ಅಥವಾ ಧರ್ಮಬಲಿಯಾಗುತ್ತಿದ್ದರು. ಮಧ್ಯಯುಗದ ಭಾರತದ ಇತಿಹಾಸದಲ್ಲಿ ಮಾನವೀಯ ದುಃಖಗಳು ಅತ್ಯಂತ ಸಹಿಸಲದಳವಾಗಿದ್ದವು. ಮಾನವ ಜೀವಿಯ ಅಸಮಾನತೆಗಳು ಅಸ್ಪೃಶ್ಯತೆಯ ರೂಪದಲ್ಲಿ ಸ್ಪಷ್ಟವಾಗಿ ತೋರುತ್ತಿದ್ದವು ಮತ್ತು ಜಾತಿ ಪದ್ಧತಿಯು ದುಸ್ತರವಾದ ಸಾಮಾಜಿಕ ತಡೆಗೋಡೆಯಾಗಿತ್ತು. ಆದರೆ ಹೆಚ್ಚು ಬದಲಾವಣೆಗಳು ಮತ್ತು ಉತ್ತಮ ಜೀವನದ ಭರವಸೆಗಳು ಸಮಾಧಾನ ಪಡಿಸುವ ಧಾರ್ಮಿಕ ಚಿಂತನೆಗಳು ಪ್ರತಿಪಲವಾಗಿ ಬಲಗೊಳ್ಳಲಾರಂಭಿಸಿತು. ಭಕ್ತಿ ಚಳುವಳಿಯು ಇದನ್ನೇ ಸಲಹೆಮಾಡುತ್ತದೆ. ಮೇಲಿನ ಅಹಿತವಾದ ವಿಷಯಗಳನ್ನು ತೃಪ್ತಿಗೊಳಿಸುವ ಪ್ರಯತ್ನ ಮಾಡಲಾಯಿತು. ತಮಿಳು ಭಕ್ತಿ ಸಂಪ್ರದಾಯದ ಆಳ್ವಾರರ ಚಿಂತನೆಗಳಂದ ಪ್ರಭಾವಿತರಾದ ರಾಮಾನುಜರು ತಮ್ಮ ತತ್ವಗಳ ಮೂಲಕ ಹಾಗೂ ಸೇವೆ ಮಾಡಲು ತಾವೇ ಉದಾಹರಣೆಯಾಗಿ ಸಾಮಾನ್ಯರಿಗೆ ಮತ್ತು ಇತರರಿಗೆ ಸೇವೆ ಮಾಡಿ ಸಾಮಾಜಿಕ ಪ್ರಭಾವ ಉಂಟು ಮಾಡಿದರು. ತಮ್ಮ ತತ್ವಗಳ ಪ್ರಯೋಗಕ್ಕೆ ದೇವಾಲಯ ಆರಾಧನೆ ಪದ್ಧತಿಯನ್ನು ಬಲಗೊಳಿಸಿದರು. ಮೇಲುಕೋಟೆಯಲ್ಲಿ ದೇವಾಲಯ ನಿರ್ಮಿಸುವ ಮೂಲಕ ತಮ್ಮ ತಾತ್ವಿಕ ಚಿಂತನೆಗಳ ಪ್ರಯೋಗಕ್ಕೆ ಮುಂದಾದರು. ಮೇಲಿನ ಚಿಂತನೆಗಳ ಹಿನ್ನೆಲೆಯಲ್ಲಿ ಅವರ ಸಾಮಾಜಿಕ ಪ್ರಯೋಗದ ಪರಿಣಾಮಕತ್ವವನ್ನು ಮೇಲುಕೋಟೆಗೆ ಸಂಬಂಧಿಸಿದಂತೆ ಇಲ್ಲಿ ಅಧ್ಯಯನ ಮಾಡಲಾಗುತ್ತದೆ.

ರಾಮಾನುಜರ ಕೆಲವು ಸಾಮಾಜಿಕ ನಿಲುವುಗಳು

ರಾಮಾನುಜರು ಮೇಲುಕೋಟೆಗೆ ಆಗಮಿಸುವ ಮುನ್ನ ಅವರ ಆರಂಭಿಕ ಜೀವನದಲ್ಲಿ ಹಲವು ಮಾನವೀಯ ನಿಲುವುಗಳು ಪ್ರಕಟವಾಗಿದ್ದುದನ್ನು ನೋಡುವುದರ ಅಗತ್ಯವಿದೆ. ಅನುಕಂಪ, ದಾನ ಮತ್ತು ಜಾತಿಶ್ರೇಷ್ಠತೆಯ ಕುರಿತ ಅವಿಧೇಯತೆ ಇಲ್ಲಿ ಎದ್ದು

ಕಾಣುವ ಅಂಶಗಳಾಗಿವೆ. ರಾಮಾನುಜರ ಪ್ರಕಾರ ದೇವರು ಸಂತರಿಗೆ ಮತ್ತು ಪಾಪಿಗಳಿಗೆ ದಯಾಪರನಾದ ಮೂರ್ತಿಕೃತ ವಸ್ತು. ಇವರು ಲಿಂಗ, ಜಾತಿ, ಅಂತಸ್ತಿನ ಆಧಾರದ ಮೇಲೆ ಜ್ಞಾನಕ್ಕಾಗಿ ಹಾತೊರೆಯುವವರಿಗೆ ಭೇದ-ಭಾವ ಮಾಡಲಿಲ್ಲ. ಬ್ರಾಹ್ಮಣರಂತೆ ಶೂದ್ರರು ಸಹ ಜ್ಞಾನಕ್ಕೆ ಸಮಾನವಾಗಿ ಅರ್ಹರು ಎಂಬುದನ್ನು ಸೂಕ್ಷ್ಮವಾಗಿ ಸಲಹೆ ಮಾಡಿದರು. ಇದನ್ನು ಸ್ಪಷ್ಟಪಡಿಸಲು ಕೆಲವು ನಡವಳಿಕೆಗಳು ಇಲ್ಲಿ ಉಲ್ಲೇಖಾರ್ಹ.

ಜನಶೃತಿಯಂತೆ ರಾಮಾನುಜರು ಕಾಂಚೀಪುರದ ವರದರಾಜ ದೇವಾಲಯದಲ್ಲಿ ಕೈಂಕರ್ಯ ನಿರತರಾಗಿದ್ದಾಗ, ಅದೇ ದೇವಾಲಯದಲ್ಲಿ ಶೂದ್ರನಾಗಿದ್ದ ಕಾಂಚೀಪೂರ್ಣನೆಂಬ ಮಾಲಾಕಾರನ ಪರಿಚಯವಾಯಿತು. ಅವರ ಕರ್ತವ್ಯ ನಿಷ್ಠೆಯಿಂದ ಆಕರ್ಷಿತರಾದ ಆಚಾರ್ಯರು ಅವರನ್ನು ತಮ್ಮ ಮನೆಗೆ ಊಟಕ್ಕೆ ಆಹ್ವಾನಿಸಿದರು. ಅವರು ಮನೆಗೆ ಬಂದಾಗ ರಾಮಾನುಜರು ಮನೆಯಲ್ಲಿಲ್ಲದ ಕಾರಣ ಊಟ ಮಾಡಿ ಹೊರಟು ಹೋದರು. ಆಚಾರ್ಯರ ಪತ್ನಿ ಎಲೆ ಎತ್ತಿಹಾಕಿ ಗೋಮಯದಿಂದ ಆ ಜಾಗ ಶುದ್ಧಿ ಮಾಡಿ ಉಚ್ಚಿಷ್ಟವಾದ ಅಡಿಗೆಯನ್ನು ಹೊರ ಎಸೆದರು. ನಂತರ ಮನೆಗೆ ಬಂದ ಆಚಾರ್ಯರು ಇದರಿಂದ ವ್ಯಥೆಪಟ್ಟರು. ಈಗಲೂ ಆಚಾರಶೀಲ ಬ್ರಾಹ್ಮಣರ ಮನೆಯಲ್ಲಿ ಶೂದ್ರರಿಗೆ ಬಡಿಸುವ ಅಡಿಗೆಯನ್ನು ಬೇರೆಯಾಗಿ ತೆಗೆದಿರಿಸಿ, ಉಳಿದ ಆಹಾರವನ್ನು ಉಪಯೋಗಿಸುವುದಿಲ್ಲ. ಆಚಾರ್ಯರು ಕಾಂಚೀಪೂರ್ಣರಿಗೆ ಪ್ರಣಾಮ ಮಾಡಲು ಯತ್ನಿಸಿದಾಗ ಕಾಂಚಿಪೂರ್ಣರೇ ತಡೆದು ಸಮಾಧಾನ ಮಾಡಿದಂತೆ ತಿಳಿಯುವುದು. ಇದು ಸ್ಮೃತಿಗೆ ವಿರೋಧವಾದ ಕಾರ್ಯವಾಗಿತ್ತು. ಜ್ಞಾನಿಗಳಾದ ಕಾಂಚೀಪೂರ್ಣರನ್ನು ತಮ್ಮ ಗುರುಗಳಾಗಲು ಹಾಗೂ ಅವರ ನಿರಹಂಕಾರದ ನಡೆಯನ್ನು ಮೆಚ್ಚಿದ್ದರು.[18] ರಾಮಾನುಜರ ಗುರುಗಳಾದ ಗೋಷ್ಠಿಪೂರ್ಣರು, ಆಚಾರ್ಯರ ಪ್ರಾಮಾಣಿಕತೆ, ಸಹನೆ, ದೃಢನಿರ್ಧಾರ ಹಾಗೂ ಜ್ಞಾನದಾಹವನ್ನು ಪರೀಕ್ಷಿಸಿ ಅವರಿಗೆ ಬಹು ರಹಸ್ಯವಾದ 'ಅಷ್ಟಾಕ್ಷರೀ ಮಂತ್ರೋಪದೇಶ' ಮಾಡಿದರು. ಅದರ ಜಪದಿಂದ ಶಾಶ್ವತಶಾಂತಿ ಪ್ರಾಪ್ತಿ ಸಾಧ್ಯ, ಮೋಕ್ಷ ಖಂಡಿತ ಲಭ್ಯ ಎಂದು ಹೇಳಿ, ಅದನ್ನು ಗೋಪ್ಯವಾಗಿಟ್ಟುಕೊಳ್ಳಬೇಕೆಂದು, ಎಲ್ಲರಿಗೂ ತಿಳಿಸಿದರೆ ನರಕ ಪ್ರಾಪ್ತವಾಗುತ್ತದೆ ಎಂದು ಎಚ್ಚರಿಸಿದರು. ಜೀವರಾಶಿಯ ಬಗ್ಗೆ ಅವರಿಗಿದ್ದ ಮಮತೆಯ ಕಾರಣ, ಎಲ್ಲರನ್ನು ಸ್ವರ್ಗಕ್ಕೆ ಕರೆದೊಯ್ಯುವ ಈ ಮಂತ್ರವನ್ನು ತಾನೊಬ್ಬನೇ ಬಳಸಿ ಉದ್ಧಾರವಾಗುವುದು ಸ್ವಾರ್ಥವೆಂದು ಬಗೆದು, ಒಂದು ಎತ್ತರವಾದ ಗೋಪುರದ ಮೇಲೆ ನಿಂತು ಎಲ್ಲರನ್ನು ಕರೆದು ಎಲ್ಲರಿಗೂ ಕೇಳಿಸುವಂತ ಗಟ್ಟಿಯಾಗಿ ಪ್ರಣವಪೂರ್ವಕವಾಗಿ ಹೇಳಿದರು. ರಾಮಾನುಜರು ಬ್ರಾಹ್ಮಣರ ನಿಷೇಧಗಳನ್ನು ಮುರಿದಿದ್ದರಿಂದ ಅವರು ಪ್ರತಿಭಟಿಸಿದರು. ಗೋಷ್ಠಿಪೂರ್ಣರು ನಂಬಿಕೆ ದ್ರೋಹ ಮಾಡಿದ್ದಕ್ಕೆ ಚೆನ್ನಾಗಿ ನಿಂದಿಸಿದರು. ನರಕಕ್ಕೆ ಹೋಗೆಂದು ಶಪಿಸಿದರು. ತಾನು ನರಕಕ್ಕೆ ಹೋಗುವುದರಿಂದ

ಸಾವಿರಾರು ಜನರು ಸ್ವರ್ಗ ಪಡೆಯುವರು ಇದು ತನಗೆ ಹೆಮ್ಮೆ ಎಂದರು. ಮುನಿಗಳಿಗೆ ಈ ಮಾತು ಆಳಪರಿಣಾಮ ಉಂಟುಮಾಡಿತು. ಆಚಾರ್ಯರಿಗೆ 'ಎಂಬೆರುಮಾನಾರ್' (ನನ್ನಗುರು) ಎಂಬ ಬಿರುದು ನೀಡಿದರು.[19] ರಾಮಾನುಜರಿಗಿಂತ ಮುಂಚೆ ಯಾವ ಬ್ರಾಹ್ಮಣರು ಈ ರೀತಿ ಸಾಂಪ್ರದಾಯಿಕತೆ ಮೀರಿ ನಡೆಯಲಿಲ್ಲ. ಪ್ರಣವಪೂರ್ವಕ ಹೇಳಿಕೆಯು ವರ್ಣಧರ್ಮಕ್ಕೆ ವಿರೋಧವಾಗಿತ್ತು. ಅವರ ಈ ಬಗೆಯ ಕ್ರಾಂತಿಕಾರೀ ನಿಲುವುಗಳು ಒಂದು ಸಾಮಾಜಿಕ ಆಂದೋಲನವನ್ನು ಎಷ್ವರ ಮಟ್ಟಿಗೆ ಚಾಲನೆಗೊಳಿಸಿದುವು ಎಂಬುದು ಮುಖ್ಯವಾಗಿದೆ. ರಾಮಾನುಜರ ಆಸ್ತಿಕ ದರ್ಶನವು ಸಮಾಜದ ಹಲವು ಭಾಗಗಳನ್ನು ಮುಟ್ಟುವ ರೀತಿಯಲ್ಲಿ ರೂಪುಗೊಂಡಿದ್ದಿತು.

ಜಾತಿಯಿಂದ ಶೂದ್ರನಾದ ಧನುರ್ದಾಸನು ರಾಮಾನುಜರ ಅಚ್ಚುಮೆಚ್ಚಿನ ಶಿಷ್ಯನಾಗಿದ್ದನು. ರಾಮಾನುಜರ ದಿವ್ಯೋಪದೇಶದಿಂದ ಸಾಂಸಾರಿಕ ಜೀವನದಿಂದ ಹೊರಬಂದು ಆಧ್ಯಾತ್ಮ ಜೀವನ ನಡೆಸಲು ರಾಮಾನುಜರ ಶಿಷ್ಯನಾಗಿ ಅವರ ಸೇವೆಯಲ್ಲಿ ಕಾಲಕಳೆಯುತ್ತಿದ್ದನು. ಯತಿರಾಜರು ಕಾವೇರಿ ಸ್ನಾನಕ್ಕೆ ಹೋಗುವಾಗ ಬ್ರಾಹ್ಮಣ ಶಿಷ್ಯನ ಹೆಗಲಮೇಲೆ ಕೈಯಿಟ್ಟುಕೊಂಡು ಹೋಗುತ್ತಿದ್ದರು. ಸ್ನಾನಮುಗಿಸಿ ರಂಗನಾಥನ ದರ್ಶನಕ್ಕೆ ಬರುವಾಗ ಧನುರ್ದಾಸನ ಹೆಗಲಮೇಲೆ ಕೈಯೂರಿ ಬರುತ್ತಿದ್ದರು.[20]

ಮೇಲಿನ ಅಂಶಗಳಿಂದ ತಿಳಿದುಬರುವ ಕೆಲವು ಮುಖ್ಯ ವಿಷಯಗಳೆಂದರೆ, ಈ ಘಟನೆಗಳು ಸತ್ಯವಾಗಿದ್ದರೆ ಆಚಾರ್ಯರು ವರ್ಣಧರ್ಮಕ್ಕೆ ವಿರೋಧವಾಗಿ ನಡೆದರೆಂದು ಹೇಳಿದಂತಾಗುತ್ತದೆ. ಆದರೆ ಸಾಂಪ್ರದಾಯಿಕ ವ್ಯಕ್ತಿಗಳು ಇದನ್ನು ಅಲ್ಲಗಳೆಯುತ್ತಾರೆ. ರಾಮಾನುಜರು ಕಾಂಚೀಪೂರ್ಣರ ಅತಿಥಿ ಸತ್ಕಾರದಲ್ಲಿ ಉಚ್ಚಿಷ್ಟ ಭೋಜನ ಮಾಡಲಿಲ್ಲ. ಅವರ ಕಾಲಿಗೆ ನಮಸ್ಕರಿಸಲು ಬಂದಾಗು ಕಾಂಚೀಪೂರ್ಣರು ಬಿಡಲಿಲ್ಲ. ಆದ್ದರಿಂದ ಆಚಾರ್ಯರು ಸ್ಮೃತಿಗೆ ವಿರೋಧಿಗಳಲ್ಲ ಎಂಬ ನಂಬಿಕೆಯಿದೆ. ಅಷ್ಟಾಕ್ಷರಿ ಮಂತ್ರವನ್ನು 'ಪ್ರಣವಪೂರ್ವಕವಾಗಿ' ಸ್ತ್ರೀ ಶೂದ್ರಾದಿಗಳಿಗೆ ಹೇಳಿಕೊಡುವಂತಿರಲಿಲ್ಲ ಹಾಗೂ ಧರ್ಮಧಾಸನ ವಿಷಯದಲ್ಲಿ ರಾಮಾನುಜರ ವರ್ತನೆಯನ್ನು ಒಪ್ಪಲಾಗಿಲ್ಲ. ಹೀಗೆ ಆಚಾರ್ಯರ ವರ್ಣಧರ್ಮದ ವಿರೋಧಿ ವರ್ತನೆಗಳು ಸಾಮಾಜಿಕ ಸಮಾನತೆಯ ಇಂಗಿತವನ್ನು ವ್ಯಕ್ತಪಡಿಸುತ್ತವೆ.

ಮೇಲುಕೋಟೆಯಲ್ಲಿ ರಾಮಾನುಜಾಚಾರ್ಯರು

ತಮಿಳುನಾಡಿನಲ್ಲಿ ಚೋಳರಾಜನ ಧರ್ಮಾಂಧತೆಯ ಕಾರಣದಿಂದ ತಮ್ಮ ಉಳಿವು ಹಾಗೂ ಮತ ಪ್ರಚಾರಕ್ಕೆ ಕರ್ನಾಟಕ ಸುಖಕರವಾಗಿರುವುದನ್ನು ಅರಿತುಕೊಂಡು ಈ ನಾಡಿಗೆ

ಬಂದರು. ಕಾವೇರಿನದಿಯನ್ನು ಅನುಸರಿಸಿ ಸತ್ಯಮಂಗಲದ ಮೂಲಕ ಈ ನಾಡನ್ನು ಪ್ರವೇಶಿಸಿದರು. ನಂತರ ರಾಮನಾಥಪುರವನ್ನು ತಲುಪಿ ಅಲ್ಲಿಂದ ಮಿರ್ಲೆ ಹಾಗೂ ಸಾಲಿಗ್ರಾಮಗಳನ್ನು ಹಾದು ಹೊಯ್ಸಳ ದಕ್ಷಿಣ ರಾಜಧಾನಿಯಾದ ತೊಂಡನೂರಿಗೆ ಬಂದರು. ಹೊಯ್ಸಳ ದೊರೆ ಬಿಟ್ಟಿದೇವನನ್ನು ವೈಷ್ಣವ ಮತಕ್ಕೆ ಮತಾಂತರಿಸಿ ವಿಷ್ಣುವರ್ಧನನಾಗಿಸಿದರು. ರಾಜಾಶ್ರಯ ಪಡೆದ ಆಚಾರ್ಯರು ತಮ್ಮ ಧಾರ್ಮಿಕ ಮತ್ತು ಸಾಮಾಜಿಕ ಪ್ರಕ್ರಿಯೆಗಳಿಗೆ ಆಯ್ಕೆ ಮಾಡಿಕೊಂಡ ಕೇಂದ್ರ ಮೇಲುಕೋಟೆ. ಇಲ್ಲಿ 14 ವರ್ಷ ಇದ್ದು, ದೇವಾಲಯ ನಿರ್ಮಿಸಿ ಕಾರ್ಯ ಪ್ರವೃತ್ತರಾದರು.

ರಾಮಾನುಜರು ಮೇಲುಕೋಟೆಗೆ ಪ್ರಯಾಣ ಮಾಡುವಾಗ ಈ ಪ್ರದೇಶವು ದಟ್ಟವಾದ ಅರಣ್ಯವಾಗಿದ್ದು ಅವರಿಗೆ ತಮ್ಮ ಕನಸಿನಲ್ಲಿ ಕಂಡ ವಿಷ್ಣುವಿನ ದಾರಿಯಾವುದೆಂದು ಗೊತ್ತಾಗಲಿಲ್ಲ. ಇವರು ದಟ್ಟ ಅರಣ್ಯದಲ್ಲಿ ಮುಂದುವರೆದರು. ಬಹುಶಃ ಇಲ್ಲಿ ಗಿರಿಜನರು ಇದ್ದಿರಲೇಬೇಕು. (ಗಿರಿ ಅಥವಾ ಬೆಟ್ಟದಲ್ಲಿ ವಾಸಿಸುವ ಬುಡಕಟ್ಟು) ಅವರು ಆಚಾರ್ಯರಿಗೆ ದಾರಿಯನ್ನು ಕಂಡುಹಿಡಿದು ಸಾಗಲು ಅನುವು ಮಾಡಿಕೊಟ್ಟರು. ಇದರ ಫಲವಾಗಿ ರಾಮಾನುಜರು ಮೇಲುಕೋಟೆ ತಲುಪಲು ಸಾಧ್ಯವಾಯಿತು. ಇಲ್ಲಿ ಅವರು ದೇವರನ್ನು ಕಂಡರು. ಜೀವನದ ಶಾಶ್ವತ ಸಂಜೀವಿನಿ ಅದಾಗಿತ್ತು. ವೇದಗಳಲ್ಲಿ ಪ್ರತಿಫಲಿತವಾಗಿರುವ ಅವರ ಆಧ್ಯಾತ್ಮ ಪ್ರಯಾಣವು ಈ ಭೂಮಿಯಲ್ಲಿ ಪೂರ್ಣವಾಯಿತು. ತಮ್ಮ ಸಹಾಯ ಮಾಡಿದ ಗಿರಿಜನರಿಗೆ ವಂದನೆ ಅರ್ಪಿಸಿದರು. ಅವರ ಒರಟು ಹವ್ಯಾಸ ಮತ್ತು ಅಜ್ಞಾನಗಳನ್ನು ಹೋಗಲಾಡಿಸಿದರು. ಗಿರಿಜನರು ಯಾವುದೇ ಮರು ಸೇವೆಯನ್ನು ಬಯಸದೇ ಸಹಾಯಮಾಡಿದರು. ಆಚಾರ್ಯರು ಅನುಕಂಪದಿಂದ ಈ ಬುಡಕಟ್ಟು ಜನರನ್ನು ಆತ್ಮೀಯವಾಗಿ ಗುರುತಿಸಿದರು. ಯಾವುದೇ ಕುಲಕ್ಕೆ ಸೇರದ ಒಂದು ಹೊರಗಿನ ವರ್ಗ ಅದಾಗಿತ್ತು. ಸಾಮಾಜಿಕ ಹವ್ಯಾಸಗಳು (ವೃತ್ತಿ) ಬದಲಾಗದಿರಬಹುದು. ಚರ್ಮ, ಮೂಳೆ, ರಕ್ತಗಳ ಬದಲಾವಣೆಗೆ ಅನುಮತಿ ನೀಡದಿರಬಹುದು, ಆದರೆ ಒಬ್ಬ ವ್ಯಕ್ತಿಯ ಬೆಲೆ ಮತ್ತು ವರ್ಚಸ್ಸುಗಳು ಪರಿಪೂರ್ಣತೆಯ ಭರವಸೆಯ ಹಾದಿಯಲ್ಲಿ ಅವು ಗುರುತಿಸಲ್ಪಡುತ್ತವೆ. ಇದು ರಾಮಾನುಜರ ಸಾಮಾಜಿಕ ಸಂಬಂಧಗಳ ನಿರ್ವಹಣೆಯ ವಿಚಾರದಲ್ಲಿ ಅವರ ಕೊಡುಗೆಯಾಗಿದ್ದು ಅವರ ಹೊರನೋಟದ ಅಂಶವಾಗಿದೆ.

ರಾಮಾನುಜರು ತಮ್ಮ ಶಿಷ್ಯರು ಹಾಗೂ ಗ್ರಾಮದ ಜನತೆಯ ಸಹಾಯದಿಂದ ಯಾದವಗಿರಿಯಲ್ಲಿ ದೇವಸ್ಥಾನ, ಊರು, ಮನೆ, ಕೊಳ ಇತ್ಯಾದಿಗಳಾಗಿ ಜೀರ್ಣೋದ್ಧಾರ ಮಾಡಿದರು.[21] ಹರಿಜನರ ಸಹಾಯದಿಂದ ಹುತ್ತವೊಂದರಲ್ಲಿದ್ದ ತಿರುನಾರಾಯಣಸ್ವಾಮಿಯ ವಿಗ್ರಹವನ್ನು ಮೇಲಕ್ಕೆ ತಂದು ದೇವಾಲಯ ಕಟ್ಟಿ ಪ್ರತಿಷ್ಠಾಪಿಸಿದರು. ವ್ರತಬದ್ಧವಾದ ತಮ್ಮ

ಸಿದ್ಧಾಂತದ ಮೂಲಕ ಐಹಿಕ ಜೀವನ ಹಾಗೂ ಅಮರತ್ವವನ್ನು ತಿರಸ್ಕರಿಸಿದರು. ಅಮೂರ್ತ ಚಿಂತನೆಗಳ ಜೊತೆಗೆ ವ್ಯವಹರಿಸಿದ ಕಾರಣ ಬೌದ್ಧಿಕ ಚರ್ಚೆ ಮಾಡಲು ಹಾಗೂ ಸಾಮೂಹಿಕ ಬೆಂಬಲ ಪಡೆಯಲು ಅವರು ಆರಾಧನೆ ಮತ್ತು ಆಚರಣೆಯ ಮಾರ್ಗಗಳ ಜೊತೆಗೆ ವ್ಯವಹರಿಸಿದರು. ದೇವರ ಮೂರ್ತಿರೂಪದ ಆರಾಧನೆಯ ಕಲೆಯಲ್ಲಿ ಆರಾಧಿಸುವ ಸಂಸ್ಕೃತಿಯನ್ನು ಯಾರು ಒಪ್ಪುವಿರೋ ಅವರಿಗಾಗಿ ಮೇಲಿನ ಅಂಶಗಳನ್ನು ರೂಪಿಸಿದರು. ಆಚಾರ್ಯರ 'ಶ್ರೀರಂಗಗದ್ಯ'ವು ಇವರ ಮೂರ್ತಿಪೂಜೆಯ ನಂಬಿಕೆಗೆ ಉದಾಹರಣೆಯಾಗಿದೆ. ಇವರ ಆಚರಣೆಗಳು ಉಪನಿಷತ್ ಮತ್ತು ಪುರಾಣಗಳು ಉಲ್ಲೇಖವಾಗಿರುವ ಅಂಶಗಳಿಂದ ಮಾನ್ಯತೆ ಪಡೆದಿವೆ. ಮೇಲುಕೋಟೆಯಲ್ಲಿ ಇಂಥಹ ಆಲೋಚನೆಗಳಿಗೆ ದೇವಾಲಯ ಸ್ಥಾಪನೆಯೊಂದಿಸಿ ಚಾಲನೆ ನೀಡಿದರು.

ರಾಮಾನುಜರ ತಿರುಕ್ಕುಲತ್ತಾರ್ ಕಲ್ಪನೆ

ರಾಮಾನುಜರ ಆಲೋಚನೆಯಲ್ಲಿ ಪವಿತ್ರ ಸಹಜ ಪ್ರವೃತ್ತಿಯನ್ನು ಗುರುತಿಸಬಹುದು. ಸಮಾಜದ ಯಾವುದೋ ಗುಂಪಿನ ವರ್ತನೆಯಿಂದ ಆಧ್ಯಾತ್ಮಿಕವಾಗಿ ಸಾಮರಸ್ಯವಿಲ್ಲದ ಪರಿಸ್ಥಿತಿಯಲ್ಲಿ, ಎಲ್ಲರನ್ನು ಗುರುತಿಸುವ ಹಾಗೂ ಅದರಲ್ಲಿ ಸೇರಿಸುವ ಜವಾಬ್ದಾರಿಯನ್ನು ಹೊರುವ ಅವರ ಮನೋಪ್ರವೃತ್ತಿ ಸ್ವೀಕಾರಾರ್ಹವಾದುದು. ತಿರುಕುಲತ್ತಾರ್ ಕಲ್ಪನೆಯು ರಾಮಾನುಜರಿಂದ ಹೊರ ಬಂದ ಭಾವ. ಅಸ್ಪೃಶ್ಯತೆಯ ವಿಷಯದಲ್ಲಿ ರಾಮಾನುಜರ ದೃಷ್ಟಿಯು ಇಲ್ಲಿ ಮಹತ್ವ ಪಡೆದುಕೊಂಡಿದೆ. ಈ ಗೌರವ ಪಡೆದ ಬ್ರಾಹ್ಮಣ ಸಂತರಲ್ಲಿ ರಾಮಾನುಜರು ಅಗ್ರಗಣ್ಯರಾಗಿದ್ದಾರೆ. ಸಾಮಾನ್ಯವಾಗಿ ನಂಬಲಾಗಿರುವಂತೆ ಸಮಾಜದ ಈ ವರ್ಗವನ್ನು ಮೇಲೆತ್ತಲು ಶ್ರಮಿಸಿದರು. ಇವರ ಪ್ರವೃತ್ತಿ ಮತ್ತು ಸಾಮರ್ಥ್ಯವು ಇವರನ್ನು ಆಧ್ಯಾತ್ಮಿಕ ಜೀವನದ ಜೊತೆಗೆ ಸೇರಿಸುವಷ್ಟು ಸಮರ್ಥವಾಗಿತ್ತು. 'ತಿರುಕ್ಕುಲತ್ತಾರ್' ಇದು ತಮಿಳು ಪದವಾಗಿದ್ದು ಇದರರ್ಥ ಅನುಕಂಪದ ನಡೆಯ ಮನುಷ್ಯ.[22] ತಮಿಳಿನಲ್ಲಿ 'ತಿರು' ಎಂದರೆ 'ಶ್ರಿ' ಎಂಬರ್ಥ. ಆದ್ದರಿಂದ ಅವರನ್ನು ಲಕ್ಷ್ಮಿದೇವಿಯ ಕುಲದವರು ಎಂದು ಕರೆಯುವರು.[23]

ರಾಮಾನುಜರ ಇಂಥಹ ದಯಾಪರತೆಗೆ ಕಾರಣ ಅಸ್ಪೃಶ್ಯವರ್ಗವು ತೋರಿದ ಸಹಕಾರ ಮನೋಭಾವ ಕಾರಾಣವಾಗಿತ್ತು. ಚೋಳದೊರೆಯಿಂದ ಆಚಾರ್ಯರು ತೊಂದರೆಗೀಡಾದಾಗ, ಅಸ್ಪೃಶ್ಯರು ರಾಜ್ಯದಿಂದ ಹೊರಬರಲು ಅವರಿಗೆ ಆಶ್ರಯ, ರಕ್ಷಣೆ ಹಾಗೂ ಸತ್ಕಾರಗಳನ್ನು ಆದರದಿಂದ ಮಾಡಿದ್ದರು.[24] ಪಂಚಮರು ರಾಮಾನುಜರಿಗೆ ಮೇಲುಕೋಟೆಗೆ ಬರಲು ಹಾದಿಸುಗಮ ಮಾಡಿದರು. ಉತ್ಸವಮೂರ್ತಿ ಗುರುತಿಸಲು

ಹಾಗೂ ಪ್ರತಿಷ್ಠಾಪಿಸಲೂ ಸಹಾಯ ಮಾಡಿದರು ಹಾಗೂ ದೇವಾಲಯ ನಿರ್ಮಾಣದಲ್ಲಿ ಸಹಕರಿಸಿದರು. ಚೆಲುವರಾಯ ಅಥವಾ ರಾಮಪ್ರಿಯ ಉತ್ಸವಮೂರ್ತಿಯನ್ನು ಮುಸ್ಲಿಂ ಸುಲ್ತಾನನಿಂದ ತರಲು ಪಂಚಮರು ಸಹಾಯ ಮಾಡಿದರು. ಕೃತಜ್ಞತಾ ಪೂರ್ವಕವಾಗಿ ಆಚಾರ್ಯರು ಅಸ್ಪೃಶ್ಯರಿಗೆ ಮೇಲುಕೋಟೆಯ ಕಲ್ಯಾಣಿ ತೀರ್ಥದಲ್ಲಿ ಸ್ನಾನಕ್ಕೂ ಇಲ್ಲಿನ ಪ್ರಮುಖ ದೇವಾಲಯ ನಾರಾಯಣಸ್ವಾಮಿ ದೇವಾಲಯದ ಬಲಪೀಠದವರೆಗೆ ಬಂದು ಭಗವಂತನ ದರ್ಶನ ಮಾಡಬಹುದೆಂದು ಅನುಮತಿ ಕೊಟ್ಟರು.[25]

ಸಾಮಾಜಿಕ ನೇರ ದೃಷ್ಟಿಯಲ್ಲಿ ನೋಡುವುದಾದರೆ ಆಚಾರ್ಯರ ನಿಲುವು ಗಮನಾರ್ಹ, 'ತಿರುಕ್ಕುಲತ್ತಾರ್' ವರ್ಗವು ಜಾತಿಯಿಂದ ಬಹಿಷ್ಕರಿಸಲ್ಪಟ್ಟ ವರ್ಗಕ್ಕೆ ಸೇರಿದವರಾಗಿದ್ದು, ಅವರ ಅಸಹಾಯಕತೆ ಮತ್ತು ಅಸಫಲತೆಗಳನ್ನು ಆಚಾರ್ಯರು ಗುರುತಿಸಿದ್ದರು. ಒಂಬತ್ತು ಶತಮಾನಗಳಿಗೂ ಹಿಂದೆ ರಾಮಾನುಜಾಚಾರ್ಯರು ಈ ಹಕ್ಕನ್ನು ಅಸ್ಪೃಶ್ಯರಿಗೆ ನೀಡಿದ್ದು ಔದಾರ್ಯದ ಕೆಲಸವಾಗಿತ್ತು. ಭಾರತ ಸಂವಿಧಾನದ 17ನೇ ಪ್ರಕರಣದಂತೆ 'ಅಸ್ಪೃಶ್ಯತೆ' ಪ್ರತಿಬಂಧಿಸಿದ ಮೇಲೆ ಪೂಜಾಸ್ಥಳ ಪ್ರವೇಶಿಸಲು ಸಮಾನ ಹಕ್ಕಿದೆ. 1955ರ 22ನೇ ಅಸ್ಪೃಶ್ಯತಾ ಅಧಿನಿಯಮದಂತೆ ಈ ಹಕ್ಕನ್ನು ಇನ್ನೊಬ್ಬರು ಕಿತ್ತುಕೊಳ್ಳುವುದು ಅಪರಾಧವಾಗುತ್ತದೆ. ಇಂತಹ ಆಲೋಚನೆಗಳು ಮಾನವನ ಪರಿಶುದ್ಧತೆಗಾಗಿ ಅಗತ್ಯವಾದುವು. ಸಮಾಜದ ವಿಮರ್ಶೆ ಮತ್ತು ಸುಧಾರಣೆಗಳ ಕೆಲವು ಒಳ್ಳೆಯ ಅಂಶಗಳು ಅದರಲ್ಲಿ ಅಂತರ್ಗತವಾಗಿದ್ದವು.

ರಾಮಾನುಜರ ಜಾತೀಯತೆಯ ನಿಲುವು

ದೇವಾಲಯಗಳು ವೈಯಕ್ತಿಕ ಶ್ರದ್ಧೆಯುಳ್ಳವರ ಕೆಲವರಿಂದ ಆರಂಭವಾಗಿ, ಸಮಾಜದ ಹಲವು ವರ್ಗಗಳ ಜೊತೆ ಸಂಬಂಧ ಗುರುತಿಸುವ ಆಕಾಂಕ್ಷೆ ಹೊಂದಿತ್ತು. ರಾಮಾನುಜರ ನಿಲುವುಗಳು ಮೇಲುಕೋಟೆ ದೇವಾಲಯದ ಮೂಲಕ ವ್ಯಕ್ತವಾಗಿದ್ದು, ಮೇಲಿನ ಅಂಶಕ್ಕೆ ಪೂರಕವಾಗಿದೆ. ಇದಕ್ಕೆ ಸಂಬಂಧಿಸಿದಂತೆ "ಶಾತ್ತಾದ ಶ್ರೀ ವೈಷ್ಣವರು" ಎಂಬ ಪಂಗಡದ ಉಗಮ ಮುಖ್ಯ ಬೆಳವಣಿಗೆ. ಇವರು ರಾಮಾನುಜರ ತತ್ವ ಸಿದ್ಧಾಂತಗಳನ್ನು ಆಯ್ಕೆಮಾಡಿದ್ದು, ತಮ್ಮನ್ನು ತಾವೇ ದೇವಾಲಯ ಕೈಂಕರ್ಯದಲ್ಲಿ ಮಿತಿಗೊಳಿಸಿಕೊಂಡಿದ್ದಾರೆ. ಇವರು ಪವಿತ್ರ ಜನಿವಾರವನ್ನು ಧರಿಸುವುದಿಲ್ಲ, ಇವರು ವೇದ ಮತ್ತು ವೇದಾಂತವನ್ನು ಅಧ್ಯಯನ ಮಾಡಲು ಅರ್ಹತೆ ಹೊಂದಿದ್ದರೂ.[26] ವೇದಾಧ್ಯಯನದ ಫಲಗಳು ನಿರಾಕರಿಸಲ್ಪಟ್ಟಿದ್ದವು. ಇವರು ಪಂಚ ಸಂಸ್ಕಾರ ದೀಕ್ಷೆಯನ್ನು ಪಡೆದಿರಬೇಕು ಹಾಗೂ ದ್ರಾವಿಡ ವೇದಾಂತದ ಪರಿಚಯ ಹೊಂದಿರಬೇಕು. ಸಂಸ್ಕೃತ ವೇದದ ದೃಷ್ಟಿಯಲ್ಲಿ ಯಾರು

ಪವಿತ್ರ ಜನಿವಾರ ಧರಿಸುವುದಿಲ್ಲವೊ ಅವನೇ ಶಾತ್ತಾದ. ಜನಿವಾರ ಧರಿಸಿದರೆ ದ್ರಾವಿಡ ವೇದ ಓದಲು ಅನರ್ಹನಾಗುತ್ತಾನೆ. ಅಂದರೆ ಯಾರು ಆಚಾರ್ಯರ ಸಿದ್ಧಾಂತ ಒಪ್ಪುವರೊ ಹಾಗೂ ಸಂಸ್ಕೃತ ವೇದಾಂತ ಅಧ್ಯಯನ ಮಾಡುವರೊ ಅವನೇ ನಿಜವಾದ ಶ್ರೀವೈಷ್ಣವ ಎಂದರ್ಥ. ರಾಮಾನುಜರು ಶಾತ್ತಾದ ಪಂಗಡದ ಘನತೆಯನ್ನು ಗುರುತಿಸಿದರು. ಇದು ಎಲ್ಲಾ ಬ್ರಾಹ್ಮಣೇತರ ಜಾತಿಗಳನ್ನು ಹೊಂದಿತ್ತು. ಆಚಾರ್ಯರ ದೃಷ್ಟಿ ಮತ್ತು ದಾರಿಯನ್ನು ಸ್ವೀಕರಿಸಿತು. ಬ್ರಾಹ್ಮಣೇತರರೂ ಶ್ರೀ ವೈಷ್ಣವ ಪಂಥದಲ್ಲಿ ಸೇರುವಂತಾಯಿತು. ಆರಂಭದ ದಿನಗಳಲ್ಲಿ ಈ ಶ್ರೇಣಿಯ ಬೆಳವಣಿಗೆಗೆ ಬ್ರಾಹ್ಮಣ ಮತ್ತು ಬ್ರಾಹ್ಮಣೇತರರ ನಡುವೆ ಸಮಸ್ಯೆಯನ್ನು ತಂದೊಡ್ಡಿತು. ನಂತರ ಅವರು ಬ್ರಾಹ್ಮಣೇತರಿಗಿಂತ ಹೆಚ್ಚಿನ ಗೌರವ ಪಡೆದರು.[27] ಈ ವರ್ಗ ಮೇಲುಕೋಟೆ ದೇವಾಲಯಗಳಲ್ಲಿ ರಾಮಾನುಜರಿಂದ ಉದ್ಯೋಗಾವಕಾಶಗಳನ್ನು ಪಡೆದರು. ಇವರು ಇಲ್ಲಿ 'ಬೇತ ಮಂಗಲದ ಶಾತ್ತಾದವರು' ಎಂದು ಗುರುತಿಸಿಕೊಂಡರು.

ದೇವಾಲಯ ನಿರ್ಮಾಣದಲ್ಲಿ ಹಾಗೂ ನಂತರದಲ್ಲಿ ಇವರು ಗುರುತರ ಪಾತ್ರವಹಿಸಿದರು. ಅವರು ಜ್ಯೋತಿಷ್ಯ, ಔಷಧ, ಸಂಗೀತ, ನೃತ್ಯ ಮತ್ತು ಅಲಂಕಾರಿಕ ನಿಪುಣತೆ ಪಡೆದಿದ್ದು, ಭಗವಂತನ ಭಕ್ತಿಯಲ್ಲಿ ಮುಳುಗುತ್ತಿದ್ದರು. ಮೇಲುಕೋಟೆಯಲ್ಲಿರುವ ಹಲವು ಹನುಮಂತನ ಗುಡಿಗಳಲ್ಲಿ ಪೂಜಾರಿಗಳಾಗಿ ಆಶ್ರಯ ಪಡೆದರು. ಮೇಲುಕೋಟೆಯ ದೇವಾಲಯಗಳ ಉತ್ಸವಗಳಲ್ಲಿ ಇವರದ್ದು ಪ್ರಧಾನ ಪಾತ್ರವಾಗಿತ್ತು. ದೇವರಿಗೆ ಹೂಮಾಲೆ ಒದಗಿಸುವ, ದೀಪಗಳನ್ನು ಹಿಡಿಯುವ, ದೇವರಿಗೆ ಛತ್ರಿ ಹಿಡಿಯುವ, ವೈಷ್ಣವರು ಧರಿಸುವ ನಾಮತಯಾರಿಸುವ ಜವಾಬ್ದಾರಿಗಳನ್ನು ಹೊಂದಿದ್ದರು. ಬ್ರಾಹ್ಮಣೇತರ ವರ್ಗದಿಂದ ಬಂದ ಶಾತ್ತಾದ ಪಂಗಡದ ಕುರಿತು ಆಚಾರ್ಯರ ನಿಲುವು ಗಮನಾರ್ಹವಾದುದು.

ಆಚಾರ್ಯರ ಜಾತ್ಯಾತೀತ ಆಕರ್ಷಣೆಗಳ ಕಡೆಗೆ ಒಲವನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ಅವರು ಪ್ರಕೃತಿ ಸ್ವಾಭಾವದ ಪ್ರಾಮುಖ್ಯತೆಗೆ ಒತ್ತು ನೀಡಿದರು. ಅದು ಆಧ್ಯಾತ್ಮಿಕ ಜೀವನವನ್ನು ದೂರಮಾಡಲಿಲ್ಲ.[28] ಆಚಾರ್ಯರು ಎಲ್ಲಾ ಜಾತಿಯ ಜನರಿಗೂ ದೇವಾಲಯದ ಉದ್ಯೋಗವಕಾಶ ನೀಡಿದರು.ಇವತ್ತಿಗೂ ಮೇಲುಕೋಟೆ ದೇವಾಲಯದಲ್ಲಿ ಹಲವು ಜಾತಿಯ ಜನರು ಉದ್ಯೋಗ ಪಡೆದಿದ್ದಾರೆ. ಇದು ಸಂಭವನೀಯವದಲ್ಲಿದೆ. ಈ ಪರಿಸ್ಥಿತಿಯು ಹಿಂದಿನಿಂದಲೂ ನಡೆದು ಬಂದಿರುತ್ತದೆ. ಇದು ಮೇಲುಕೋಟೆ ದೇವಾಲಯಗಳಿಗೆ ಸುತ್ತಲಿನ ಪ್ರದೇಶದ ಜನತೆ ಹತ್ತಿರವಾಗುವಂತೆ ಮಾಡಿತು. ಪೂರ್ಣಸಮುದಾಯವು ದೇವಾಲಯಗಳ ಆಚರಣೆಗಳಲ್ಲಿ ಪಾಲ್ಗೊಳ್ಳಲಾರಂಭಿಸಿತು. ಮೇಲ್ವರ್ಗಕ್ಕೆ ಸೀಮಿ ತವಾಗಿದ್ದ ಆಚರಣೆಗಳು ಸ್ವಲ್ಪ ಮಟ್ಟಿಗೆ ಬದಲಾಯಿಸಲ್ಪಟ್ಟಿದ್ದವು.

ಭಾಗವತ ಸಂಪ್ರದಾಯದ ಪಂಚಸಂಸ್ಕಾರ ಇಲ್ಲಿ ನಿರ್ಲಕ್ಷಿತ ಜಾತಿಗೆ ಮತ್ತು ವರ್ಗಕ್ಕೆ ಕಟ್ಟಳೆಮಾಡಿತು. ಮೂರ್ತಿಪೂಜೆಯು ಎಲ್ಲಾ ಜಾತಿಗಳಿಗೂ ತೆರೆದುಕೊಂಡಿತು. ವೇದಾಂತ ಸೂತ್ರ ತೀರ್ಮಾನಿಸಿದಂತೆ ಶೂದ್ರರು ಉಪನಿಷದ್ ಧ್ಯಾನ ಮಾಡಲು ಅನರ್ಹರು. ಶ್ರೀ ವೈಷ್ಣವ ಇತಿಹಾಸದಲ್ಲಿ ಒಂದು ಪ್ರಗತಿಪರ ಬೆಳವಣಿಗೆಯೆಂದರೆ ಈ ನಿರ್ಬಂಧದ ಮೂಲೋಚ್ಚಾಟನೆಗೆ ಪ್ರಯತ್ನವಾಯಿತು. ದೀಕ್ಷೆ ಪಡೆಯುವ ಹೊಸ ಆಚರಣೆಯು ರೂಢಿಗೆ ಒಂದಿತು. ಅದೇ ಪಂಚಸಂಸ್ಕಾರ. ಅದು ಪ್ರಾಯೋಗಿಕರವಾಗಿ ಕಾಂತಿಹೀನವಾಯಿತು. ಧಾರ್ಮಿಕ ಮಂತ್ರಗಳು ಪರಿಚಯಿಸಲ್ಪಟ್ಟು, ಅವು ವೇದಿಕ ಮಂತ್ರಗಳಲ್ಲಿ ಸೇರಿಸಲ್ಪಟ್ಟವು. ಇದನ್ನು ರಹಸ್ಯಪ್ರಯ ಎನ್ನುವರು. ಇದು ಅಲಕ್ಷಿತ ಜಾತಿಗಳಿಗೂ ಸಹ ತೆರೆಯಲ್ಪಟ್ಟವು.

ರಾಮಾನುಜರ ದೇವಾಲಯ ಆಧಾರಿತ ಆರ್ಥಿಕ ಚಿಂತನೆ

ರಾಮಾನುಜರ ನಂಬಿಕೆಯಂತೆ ಅಸಮರ್ಥನೀಯ ನಡವಳಿಕೆಗಳ ಅಥವಾ ಮನೋವೃತ್ತಿಗಳ ಆಚರಣೆಗಳು ಮಾನವನ ಸಮಾನತೆ ಮತ್ತು ಶ್ರೇಷ್ಠತೆಗಳನ್ನು ಮರೆಯಾಗಿಸುತ್ತದೆ. ಇವರು ಸ್ವಾವಲಂಬನೆಯ ವಿಚಾರದಲ್ಲಿಯೂ ಸೇವೆಯ ತತ್ವವನ್ನು ಪ್ರೋತ್ಸಾಹಿಸಿದರು. ಇನ್ನೊಂದು ಅರ್ಥದಲ್ಲಿ ಪ್ರಯೋಜನದ ಪ್ರವೃತ್ತಿಗಳ ಪ್ರಾಮುಖ್ಯತೆಯನ್ನು ಒತ್ತಿಹೇಳಿದರು. ಈ ತತ್ವವು ಸಾಮಾಜಿಕ ವ್ಯವಸ್ಥೆಯಲ್ಲಿ ಗಮನಿಸಬೇಕಾದ್ದು. ರಾಮಾನುಜರಿಂದ ಚಿಂತಿಸಲ್ಪಟ್ಟ ಆರ್ಥಿಕ ಪೂರ್ವಸಿದ್ಧತೆಯು ವೈಯಕ್ತಿಕ ಅಗತ್ಯತೆಯ ಯೋಗ್ಯವಾದ ತತ್ವವನ್ನು ಆಧಾರವಾಗಿ ಹೊಂದಿತ್ತು. ಜನರ ಅಗತ್ಯತೆಗಳು ಸಂಖ್ಯೆಯಲ್ಲಿ ಅಥವಾ ಜಾತಿಯಲ್ಲಿ ಒಂದೇ ಆಗಿರುವುದಿಲ್ಲ. ಆದರೆ ತೃಪ್ತಿಯು ಸಾಮೂಹಿಕ ಅನುಭವವಾಗಿದೆ. ಈ ಅಂಶವು ರಾಮಾನುಜರಿಂದ ಮೇಲುಕೋಟೆಯಲ್ಲಿ ದೇವಾಲಯದ ಆಚರಣೆಗಳ ಮೂಲಕ ಪ್ರಾಯೋಗವಾಯಿತು. ಅವಕಾಶಗಳ ರೂಪದಲ್ಲಿ ಆರ್ಥಿಕ ಪಾಲ್ಗೊಳ್ಳುವಿಕೆಯು ಪಾಲುದಾರರ ನಡುವೆ ಸಾಮಾಜಿಕ ಸ್ಥಾನಮಾನ ಬದಲಾಯಿಸಲು ಸಾಧ್ಯವಿಲ್ಲ. ಆದರೆ ಈ ಪರಿಸರ ಎಲ್ಲಾ ಜನರನ್ನು ಒಂದೇ ಹಂತದಲ್ಲಿ ಹಿಡಿದಿರುತ್ತದೆ. ಆಧ್ಯಾತ್ಮಿಕ ಪ್ರೇರಣೆಯಿಂದ ಒಬ್ಬರು ಮತ್ತೊಬ್ಬರನ್ನು ಅವಲಂಬಿಸುವಂತೆ ಮಾಡುತ್ತದೆ. ಕೊಡುವ ಮತ್ತು ತೆಗೆದುಕೊಳ್ಳುವ ಮನೋವೃತ್ತಿಗಳು ಉನ್ನತ ಮತ್ತು ಕೀಳು ಎಂಬ ಸಂದರ್ಭವನ್ನು ಸೃಷ್ಟಿಸುವುದಿಲ್ಲ. ಆಚಾರ್ಯರು ಸಾಮಾಜಿಕ ಜೀವನದಲ್ಲಿ ದೇವಾಲಯದಂಥ ಸಂಸ್ಥೆಗೆ ಒತ್ತುಕೊಡುವ ಮೂಲಕ ಸಮಾಜದ ಹಲವು ಪಿಡುಗುಗಳ ಗೈರುಹಾಜರಿಯಲ್ಲಿ ತನ್ನ ಸದುದ್ದೇಶ ಸಾಧಿಸುವ ಉದ್ದೇಶ ಹೊಂದಿದ್ದರು.

ಉತ್ಸವಗಳ ಆರ್ಥಿಕ ದೃಷ್ಟಿ

ಆಚಾರ್ಯರು ಉತ್ಸವಗಳ ಸಂದರ್ಭದಲ್ಲಿ ಸಾಮೂಹಿಕ ಊಟದ ಮತ್ತು ಆಶ್ರಯದ ಸೌಕರ್ಯಗಳ ವ್ಯವಸ್ಥೆ ಪರಿಚಯಿಸಿದರು. 'ರಾಮಾನುಜ ಕೂಟ' ಎಂಬ ಸಂಸ್ಥೆಯು ಇದಕ್ಕೆ ಉದಾಹರಣೆಯಾಗಿದೆ. ವಿಜಯನಗರದ ಕಾಲದಲ್ಲಿ ನೀಡಿದ ಕೆಲವು ದಾನಶಾಸನಗಳು ಇದನ್ನು ಸ್ಪಷ್ಟಪಡಿಸುತ್ತವೆ. ಕೃಷ್ಣದೇವರಾಯ, ಸದಾಶಿವರಾಯರ ಕಾಲದಲ್ಲಿ ಮೇಲುಕೋಟೆ ರಾಮಾನುಜಕೂಟಕ್ಕೆ ಭೂಮಿ ದಾನಮಾಡಲಾಗಿದೆ.[29] ನಿಗದಿತ ಉತ್ಸವಗಳಾದ ಮಂಟಪೋತ್ಸವ, ತಿರುನಕ್ಷತ್ರ, ರಥೋತ್ಸವ ಸಂದರ್ಭದಲ್ಲಿ ರಾಮಾನುಜಕೂಟಗಳು ಆಹಾರ ಮತ್ತು ಆಶ್ರಯ ಒದಗಿಸುತ್ತಿದ್ದವು. ಇದು ರಾಮಾನುಜರ ಆವಿಷ್ಕಾರವಾಗಿರದೆ, ಇದು ಆಳ್ವಾರರು ರಚಿಸಿದ ಶ್ಲೋಕಗಳಲ್ಲಿ ವ್ಯಕ್ತವಾಗಿದ್ದು, ಇದನ್ನು ಆಚಾರ್ಯರು ಅನುಕರಿಸಿದ್ದರು.[30]

ರಾಮಾನುಜರು ದೇವಾಲಯಗಳ ಸುತ್ತಲಿನ ದಟ್ಟ ಅರಣ್ಯ ವಾಸಯೋಗ್ಯ ಸ್ಥಳವನ್ನಾಗಿಸಿದರು. ನೀರಿನ ಸಮಸ್ಯೆಯನ್ನು ಬಗೆಹರಿಸಲು ನೀರಿನ ಕಾಲುವೆಗಳನ್ನು ನಿರ್ಮಿಸಲು ಮತ್ತು ಯಾವಾಗಲೂ ನೀರಿನ ಸೌಕರ್ಯ ಇರುವಂತೆ ಮಾಡಲು ಆಚಾರ್ಯರು ಆಸಕ್ತಿ ಹೊಂದಿದ್ದರು. ಗಿರಿಶ್ರೇಣಿಗಳಿಂದಾವರಿಸಿರುವ ಮೇಲುಕೋಟೆಯಲ್ಲಿ ಇವರ ಪ್ರಭಾವವು ಜೀವನದ ಎಲ್ಲಾ ಸಾಧ್ಯವಿರುವ ನಡೆಯಲ್ಲಿ ನಿಜವಾಗಿಯೂ ಸಾಧಿತವಾಗಿದೆ. ಉತ್ತಮ ಸಂಖ್ಯೆಯ ಕೊಳಗಳು, ಬಾವಿಗಳು, ಉಪಕೊಳಗಳು, ಸರೋವರಗಳು ಅಸ್ಥಿತ್ವಕ್ಕೆ ಬಂದವು. ಮೇಲುಕೋಟೆಯ ಕಲ್ಯಾಣಿಕೊಳ ಇವರಿಂದ ಕಟ್ಟಲ್ಪಟ್ಟಿದ್ದು, ಅದ್ಭುತ ಕಟ್ಟಡವಾಗಿದ್ದು ನಿರಂತರವಾಗಿ ನೀರಿನ ಸರಬರಾಜು ಅಂತರ್ಜಲ ಹಾಗೂ ಬೆಟ್ಟದ ಮೇಲಿಂದ ಬಂದು ಸೇರುತ್ತದೆ. ತೊಂಡನೂರಿನಲ್ಲಿರುವ ಕೆರೆಯು ಮೇಲುಕೋಟೆಯ ದಕ್ಷಿಣಕ್ಕೆ ಕೆಲವೇ ಮೈಲಿದೂರದಲ್ಲಿದ್ದು ಆಚಾರ್ಯರ ಅದ್ಭುತ ತಾಂತ್ರಿಕ ಕಾರ್ಯಕ್ಕೆ ಉದಾಹರಣೆಯಾಗಿದೆ.

ರಾಮಾನುಜರು ಮೇಲುಕೋಟೆಯಲ್ಲಿ ವಿವಿಧ ಸೇವೆಗಳಿಗಾಗಿ ನೇಕಾರರು, ಮಡಿವಾಳರು, ದೇವರ ಪಲ್ಲಕ್ಕಿ ಹೋರುವವರು, ಇತರರಿಗೆ ಉದ್ಯೋಗಾವಕಾಶ ನೀಡಿದರು. ಮಹತ್ವದ ಅಂಶವೆಂದರೆ ಇವರ ಆಲೋಚನೆಯಲ್ಲಿ ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡುವುದು ದೃಢಪಡುತ್ತದೆ. ಜನರನ್ನು ಪಾಲ್ಗೊಳ್ಳುವಂತೆ ಮಾಡುವುದು, ಅವರು ಉತ್ಪಾದಿಸುವ ಪದಾರ್ಥಗಳ ಉಪಯೋಗವನ್ನು ಗುರುತಿಸುವುದು ಮತ್ತು ಸಮಾಜವನ್ನು ಸ್ವಾವಲಂಬಿಯನ್ನಾಗಿಸುವ ದಾರಿಯಲ್ಲಿ ಯೋಚಿಸಿದರು. ಇಂದು ನಾವು ಕೈಗಾರಿಕೆಗಳನ್ನು ಮಾನವ ಶಕ್ತಿಗೆ ಬದಲು ಜೀವವಿರುವ ಶಕ್ತಿಯನ್ನು ಬಳಸುವುದು ಎಂದು ತಿಳಿದಿದ್ದೇವೆ.

ಮಾನವ ಶಕ್ತಿಯ ರಕ್ಷಣೆ ಮತ್ತು ಸಮಯದ ಉಳಿತಾಯ ಮತ್ತು ಹೆಚ್ಚು ಉತ್ಪಾದನೆ ಕೈಗಾರಿಕೆಗಳ ಉದ್ದೇಶವಾಗಿದೆ. ಈ ರೀತಿಯ ಉಪಯೋಗದಿಂದ ಮಾನವನ ಶಕ್ತಿಯು ವಿಶ್ರಾಂತಿ ಪಡೆಯಲು ಹಂಬಲಿಸುತ್ತದೆ. ಇದು ಬಹುಶಃ ರಾಮಾನುಜರ ಮನಸ್ಸಿನಲ್ಲಿ ಸಂಭವಿಸಿದೆ ಹಾಗೂ ಅವರು ಇದರಲ್ಲಿ ಇಚ್ಚೆಹೊಂದಿರಲಿಲ್ಲ. ಮೇಲುಕೋಟೆ ದೇವಾಲಯ ಆಧಾರಿತ ಗುಡಿ ಕೈಗಾರಿಕೆಗಳೆಂದರೆ, ಧಾರ್ಮಿಕ ಉಪಯೋಗೀ ವಸ್ತ್ರಗಳ ತಯಾರಿಕೆಯ ಬಟ್ಟೆನೇಯಿಗೆ ಕೈಗಾರಿಕೆಗಳು, ಶ್ರೀವೈಷ್ಣವರು ಧರಿಸುವ ಬಿಳಿಯ ನಾಮದ ತಯಾರಿಕೆಯ ಕೈಗಾರಿಕೆ, ದೇವರಿಗೆ ಬೇಕಾದ ಹೂಮಾಲೆಗಳು, ಅರಿಶಿಣ, ಕುಂಕುಮ ತಯಾರಿಕಾ ಕೈಗಾರಿಕೆಗಳು, ದೇವಾಲಯದಿಂದ ಪ್ರೇರಣೆ ಪಡೆದಿದ್ದವು. ಮಹಿಳೆಯರು ಎಲೆಗಳನ್ನು ತಯಾರಿಸುವ ಮೂಲಕ ಅವರಿಗೆ ಉದ್ಯೋಗ ಹಾಗೂ ಆಹಾರ ನೀಡುವ ಅವಕಾಶಗಳು ಲಭ್ಯವಾದವು. ಮಹಿಳೆಯರು ದೇವಾಲಯದ ಪದಾರ್ಥಗಳನ್ನು ಸ್ವಚ್ಚ ಮತ್ತು ಆಕರ್ಷಣೆಯನ್ನಾಗಿ ಮಾಡುವ ಕೆಲಸಕ್ಕೆ ನಿಯಮಿಸಿದರು. ದೇವಾಲಯಗಳಿಗೆ ಬಿಟ್ಟ ದತ್ತಿ ಭೂಮಿಗಳಲ್ಲಿ ರೈತರು ಸೇವಾ ಮನೋಭಾವದಿಂದ ದುಡಿಯುತ್ತಿದ್ದರು. ದೇವಾಲಯದ ಅಗತ್ಯಗಳಾದ ಅಕ್ಕಿ, ತರಕಾರಿಗಳು, ಅರಿಶಿಣ, ಎಲೆ, ಅಡಿಕೆ, ಇನ್ನಿತರ ಪದಾರ್ಥಗಳು ಬೆಳೆಯಲ್ಪಡುತ್ತಿದ್ದು, ವ್ಯಾಪಾರಕ್ಕೆ ಪ್ರೇರಣೆ ದೊರೆತಂತಾಯಿತು.

ಆದಾಯದ ಸಮಾನ ಹಂಚಿಕೆಯು ಒಂದು ಪೂರ್ವ ಅಗತ್ಯತೆ. ಏಕೆಂದರೆ ನ್ಯಾಯವಾದ ಹಂಚಿಕೆ ಮತ್ತು ತೃಪ್ತಿಯುತ ವಿಧಾನದಲ್ಲಿ ಹಂಚುವುದು ಅತ್ಯಗತ್ಯ. ಇದು ಅಂತ್ಯವಿಲ್ಲದ ಬೇಡಿಕೆ ಮತ್ತು ಕೊಡುಗೆಯ ಚಕ್ರಗತಿಯ ಬೆಳವಣಿಗೆಯಾಗಿದೆ. ಆದಾಯ ಹಂಚಿಕೆಯು ಹಲವಾರು ವಿಧಾನಗಳನ್ನು ಹೊಂದಿದೆ. ಅದು ಶಾಶ್ವತವಾಗಿರಬಹುದು ಅಥವಾ ನಿಗದಿತವಾಗಿರಬಹುದು. ಇದು ಸಾರ್ವಜನಿಕ ಉದ್ದೇಶಕ್ಕಾಗಿರಬಹುದು ಅಥವಾ ಸಾಮಾಜಿಕ ಜೀವನದ ನಿಗದಿತ ಅಂಶಗಳ ಸಂರಕ್ಷಣೆಯಾಗಿರಬಹುದು. ಬಳುವಳಿಗಳು (ಉಡುಗೊರೆ) ನಿರಂತರವಾಗಿರಬಹುದು ಅಥವಾ ಶಾಶ್ವತವಾದ ಅನುದಾನವಾಗಿರಬಹುದು ಮತ್ತು ದೇಣಿಗೆಯಾಗಿರಬಹುದು. ದೇವಾಲಯಗಳು ಸಾಮಾಜಿಕ ಕ್ಷೇಮಕ್ಕಾಗಿ ದುಡಿಯುವಂತೆ ರಾಮಾನುಜರು ತಮ್ಮ ವಿಶಾಲ ಮನೋಭಾವದಿಂದ ಮಾನವ ಪ್ರೇಮದ ವ್ಯವಸ್ಥೆಗೆ ಸಲ್ಲುವಂತೆ ನಿಯಮ ಬರೆದರು. ಇದನ್ನು ಅನುಸರಿಸಿ ಜನರು ತಮ್ಮ ಆಸ್ತಿಯ ಕೆಲವು ಭಾಗಗಳನ್ನು ದೇವಾಲಯಗಳಿಗೆ ದಾನಮಾಡಿದರು. ಸಾಮಾಜಿಕ ಜೀವನದ ಕ್ಷೇಮಕ್ಕಾಗಿ ಅದು ರಾಮಾನುಜರ ಆಲೋಚನೆಯಾಗಿತ್ತು. ದಾನ ಮತ್ತು ದತ್ತಿಗಳು ಎಂಬ ಹೆಸರಿನಲ್ಲಿ ಉಡುಗೊರೆಗಳು ಹೆಚ್ಚಿನ ಸಂಖ್ಯೆಯಲ್ಲಿ ವಿವಿಧ ರೂಪಗಳಲ್ಲಿ ವಿವಿಧ ಉದ್ದೇಶಗಳಿಗಾಗಿ ನೀಡಲ್ಪಟ್ಟವು. ಮೇಲುಕೋಟೆಯ ಬಹುತೇಕ ಶಾಸನಗಳು ದಾನ ಶಾಸನಗಾಳಗಿರುವುದಕ್ಕೆ ಪೂರಕವಾಗಿದೆ.

ಸಾಮಾಜಿಕ ರಚನೆಯಲ್ಲಿ ಪಾಲ್ಗೊಳ್ಳುವಿಕೆಯ ಯೋಜನೆಯ ಆಲೋಚನೆಯು ರಾಮಾನುಜರಿಂದ ಬಂದಿತು. ಇದು ಸಮಾಜದ ಕ್ರಿಯಾತ್ಮಕ ವ್ಯಕ್ತಿಯ ಅಪಾರವಾದ ಕಾಳಜಿಯಾಗಿದೆ. ಆಚಾರ್ಯರು ಅರಣ್ಯವಾಗಿದ್ದ ಮೇಲುಕೋಟೆಯನ್ನು ವಿಷ್ಣುವರ್ಧನನ ಸಹಾಯದಿಂದ ಎಲ್ಲರ ಸಹಕಾರದಿಂದ ಒಂದು ಸಮಾಜವನ್ನು ವ್ಯವಸ್ಥೆಮಾಡಿದರು. ಇಲ್ಲಿ ಸಾಮಾಜಿಕ ಸ್ವರೂಪ ಮತ್ತು ಸಂಸ್ಥೆಗಳ ರಚನೆಯ ಯೋಜನೆಗೆ ನಿಜವಾಗಿಯೂ ಪ್ರಯತ್ನಿಸಿದರು. ಈ ಗ್ರಾಮವು ನಾರಾಯಣನಿಂದ ಮುಖ್ಯ ಸ್ಥಾನವನ್ನು ಪಡೆದು ಮಾದರಿ ಗ್ರಾಮವಾಯಿತು. ಈ ಪ್ರದೇಶವನ್ನು ಆಚಾರ್ಯರು ಸುಂದರ ನಂದನವನ್ನಾಗಿಸಲು ಪ್ರಯತ್ನಿಸಿದರು. ಈ ವಿಷಯದಲ್ಲಿ ರಾಮಾನುಜರ ಜಾತ್ಯಾತೀತ ಭಾವನೆಯು ಶ್ಲಾಘನಾರ್ಹ ಇದು ಸಮಾಜದ ಕ್ಷೇಮಕ್ಕೆ ಕೊಟ್ಟ ಕೊಡುಗೆಯಾಗಿದ್ದು, ಜೀವನದ ಒಂದು ವಿಶಿಷ್ಟ ನಡೆಯಾಗಿದೆ.

ಮೇಲಿನ ವಿವರಗಳಿಂದ ಉದಿತವಾಗುವ ಅಂಶಗಳು

ರಾಮಾನುಜರು ದೇವಾಲಯಗಳ ಮೂಲಕ ಮೂಡಿಸಿದ ಅರ್ಚಾಯವತಾರ ಕಲ್ಪನೆಯು ದಕ್ಷಿಣಭಾರತದಲ್ಲಿ ಎಷ್ಟರ ಮಟ್ಟಿಗೆ ಸಾಮಾಜಿಕ ಪ್ರಭಾವವನ್ನುಂಟು ಮಾಡಿತು ಎಂಬುದರ ಪರೀಕ್ಷೆ ಅಗತ್ಯವಾಗಿದೆ. ಪಂಚಮರಿಗೆ ಒಂದು ದಿನಕ್ಕೆ ದೇವಾಲಯ ದರ್ಶನದ ಅವಕಾಶ ಕೊಟ್ಟಿದ್ದು, ಜಾತಿಗಳ ಭೇದವಿಲ್ಲದೆ ಧರ್ಮ ಬೋಧನೆ ಮಾಡಿದ್ದು, ಜಾತಿ ಅಸಮಾತನೆಯ ಧೋರಣೆಗಳಿಗೆ ಅವರ ಸಮಾನತೆಯನ್ನು ಸಾರುವ ನಿಲುವುಗಳು ಸಮಾಜದ ವಿಮರ್ಶೆ ಮತ್ತು ಸುಧಾರಣೆಗಳಂತಹ ಒಳ್ಳೆಯ ಅಂಶಗಳು ಅವರಲ್ಲಿದ್ದುದನ್ನು ತಿಳಿಸುತ್ತವೆ. ಆದರೆ ಇವುಗಳ ಹಿಂದಿದ್ದ ಅವರ ಮುಖ್ಯ ಉದ್ದೇಶ ಶ್ರೀ ವೈಷ್ಣವ ಮತದ ಪ್ರಚಾರ ಎಂಬ ಅಂಶವನ್ನು ಮರೆಯುವಂತಿಲ್ಲ.

ರಾಮಾನುಜರು ಜಾತಿ ವ್ಯವಸ್ಥೆಯನ್ನು ಪ್ರಶ್ನಿಸಿದರಾದರೂ ಅದು ಧಾರ್ಮಿಕ ಹಿನ್ನೆಲೆಯಿಂದ ಕೂಡಿತ್ತೇ ವಿನಃ ಶ್ರೇಣೀಕೃತ ಸಮಾಜ ವ್ಯವಸ್ಥೆಯ ಹಿನ್ನೆಲೆಯಿಂದಲ್ಲ. ವೈದಿಕ ಆಚರಣೆಗಳ ವ್ಯಾಪ್ತಿಗೆ ಇತರ ವರ್ಗಗಳನ್ನು ಸೇರಿಸುವ ಪ್ರಯತ್ನವಾಯಿತೇ ವಿನಃ, ಧಾರ್ಮಿಕ ಪ್ರಭುತ್ವವನ್ನು ಸಡಿಲಗೊಳಿಸಿ ಮಾನವನನ್ನು ದಾಸ್ಯಗಳಿಂದ ಬಿಡುಗಡೆಗೊಳಿಸುವ ಕಾರ್ಯ ಆಗಲಿಲ್ಲ. ಇವರ ಧಾರ್ಮಿಕ ಚಿಂತನೆಗಳು ಬ್ರಾಹ್ಮಣ ಅಥವಾ ಪುರೋಹಿತ ವರ್ಗದ ನೆಲೆಯಲ್ಲಿಯೇ ರೂಪುಗೊಂಡಿರುವುದು ಇದರಿಂದ ಸ್ಪಷ್ಟವಾಗುತ್ತದೆ. ದೇವಾಲಯಗಳು ವೈಷ್ಣವ ಸಂಪ್ರದಾಯದ ಕೇಂದ್ರಗಳಾಗಿ ಬೆಳೆದು, ಲೌಕಿಕ ಜಗತ್ತಿನ ದಾಸ್ಯ ಮನೋಧರ್ಮವನ್ನು ಅಲೌಕಿಕತೆಯ ಹೆಸರಿನಲ್ಲಿ ಮುಂದುವರೆಯುವಂತೆ ಮಾಡಿದವು.

ಸಮಾಜದ ಎಲ್ಲಾ ವರ್ಗಗಳನ್ನು ದೇವಾಲಯದ ಅವಲಂಬಿಗಳನ್ನಾಗಿ ಮಾಡುವ ಪ್ರಯತ್ನ ಪುರೋಹಿತಶಾಹಿಯ ಪ್ರಭುತ್ವದ ಪುನರ್‌ಸ್ಥಾಪನೆಗೊಳ್ಳುವಂತಾಯಿತು. ಇವರು ಪ್ರತಿಪಾದಿಸಿರುವ ತತ್ವಗಳು ಧರ್ಮಕೇಂದ್ರಿತವಾಗಿದ್ದವು. ಎಲ್ಲಾ ಜಾತಿಗಳನ್ನು ದೇವಾಲಯದ ಆರಾಧನೆಗೆ ಒಳಪಡಿಸುವ ಚಿಂತನೆಯು ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳಲ್ಲಿ ಬದಲಾವಣೆ ತರಲಿಲ್ಲ. ಆಚಾರ್ಯರ ಈ ಕಲ್ಪನೆಯು ಮಾನವನ ಬದುಕನ್ನು ಮತ್ತಷ್ಟು ಸಂಕೀರ್ಣಗೊಳಿಸಿತು. ಗಮನಾರ್ಹ ಅಂಶವೆಂದರೆ ರಾಮಾನುಜರು ತಮ್ಮ ಚಿಂತನೆಗಳಲ್ಲಿ ಅಂದಿನ ಜಾತಿ ಆಧಾರಿತ ಸಮಾಜವನ್ನು ಪ್ರಶ್ನಿಸುವ ಬದಲು ಧರ್ಮದ ಮೂಲಕ ಸಮಾಜವನ್ನು ನೋಡುವ ಮತ್ತು ಅಲೌಕಿಕ ಪ್ರಪಂಚವೊಂದನ್ನು ನಿರ್ಮಿಸುವ ಕೆಲಸವನ್ನು ಮಾಡಿದರು.

ದೇವಾಲಯ ಮತ್ತು ಜಾತಿ ಪದ್ದತಿ

ಯಾವುದೇ ಕಾಲದ ಸಾಮಾಜಿಕ ಸಂಸ್ಥೆಯ ಯಶಸ್ವಿ ಕ್ರಿಯೆಗಳು ಸಾಮಾಜಿಕ ಅಸಂಖ್ಯ ವರ್ಗಗಳ ಮತ್ತು ಜಾತಿಗಳ ಜೊತೆ ಹೊಂದಿರುವ ಸಂಬಂಧದ ಪರಿಮಾಣವನ್ನು ಅವಲಂಬಿಸಿರುತ್ತದೆ. ದೇವಾಲಯಗಳು ಗ್ರಾಮಗಳ ಆಡಳಿತ ಮತ್ತು ಜಾತಿ ಕಟ್ಟಳೆಯ ಉನ್ನತ ನ್ಯಾಯಾಲಯಗಳಾಗಿದ್ದವು. ದೇವಾಲಯದ ಕೆಲಸ ಕಾರ್ಯಗಳಲ್ಲಿ ಭಾಗವಹಿಸುವುದು ಜಾತಿಯನ್ನು ಅವಲಂಬಿಸಿಕೊಂಡಿರುತ್ತಿತ್ತು. ಜಾತಿಯ ಆಧಾರದ ಮೇಲೆಯೇ ವಿವಿಧ ಜನವರ್ಗದವರು ದೇವಾಲಯಗಳಲ್ಲಿ ಹಕ್ಕನ್ನು ಅನುಭವಿಸಬೇಕಿತ್ತು.[31] ಬ್ರಾಹ್ಮಣರು ಮಾತ್ರ ಗರ್ಭಗುಡಿ ಪ್ರವೇಶ ವಿಗ್ರಹಕ್ಕೆ ಪೂಜೆ ಮಾಡುವ ಅವಕಾಶವಿತ್ತು. ಅವರ ಕೆಳಗಿನ ಅಂತಸ್ತಿನವರು ಗರ್ಭಗುಡಿ ಮುಂದೆ ನಿಲ್ಲಬಹುದಿತ್ತು. ಮೂರನೆಯ ಅಂತಸ್ತಿನ ಜನರು ದೇವಾಲಯದ ಪ್ರಾಂಗಣದಲ್ಲಿ ಸೇರಬಹುದಿತ್ತು. ಇನ್ನೂ ಕೆಳ ಅಂತಸ್ತಿನವರು ದೇವಾಲಯದ ಪಾಳಿ ಆಚೆಯೇ ನಿಲ್ಲಬೇಕಿತ್ತು. ಅಸ್ಪೃಶ್ಯರು ದೇವಾಲಯದ ಎಷ್ಟೋ ಅಂತರದಲ್ಲಿ ನಿಲ್ಲಬೇಕಿತ್ತು. ಜಾತಿ ವ್ಯವಸ್ಥೆ ಮತ್ತು ದೇವಾಲಯಗಳು ಒಟ್ಟೊಟ್ಟಿಗೆ ಸಾಗುತ್ತಿದ್ದವು ಎನ್ನುವುದು ಮೇಲಿನ ವರ್ಗೀಕರಣದಿಂದ ಸ್ಪಷ್ಟವಾಗುತ್ತದೆ. ಜನರಲ್ಲಿ ಭಯ, ಭಕ್ತಿ ಮೂಡಿಸಿ ಧಾರ್ಮಿಕ ಪ್ರಭುತ್ವದಿಂದ ರಾಜಪ್ರಭುತ್ವವನ್ನು ರಕ್ಷಿಸುತ್ತಿದ್ದವು. ಜನರು ಅದನ್ನು ಶಾಸನಬದ್ಧ ಮತ್ತು ವಿಶ್ವಾಸಾರ್ಹ ಎಂಬುದಾಗಿ ನಂಬಿ ಗೌರವ, ವಿಧೇಯತೆ ತೋರಿಸುತ್ತಿದ್ದರು.[32] ಹನ್ನೆರಡನೆಯ ಶತಮಾನದಲ್ಲಿ ಅಸಮಾನತೆ ಸಾರುವ ಧಾರ್ಮಿಕ ಪ್ರಭುತ್ವ ಪಡೆದಿದ್ದ ದೇವಾಲಯಗಳನ್ನು ಬಸವಣ್ಣನವರು ತಿರಸ್ಕರಿಸಿದ್ದರು. ಘನಿಗಟ್ಟಿದ್ದ ಭಾರತದ ಜಾತಿ ವ್ಯವಸ್ಥೆಯ ಆಚರಣೆಗಳು ದೇವಾಲಯಗಳಲ್ಲಿ ಹೆಚ್ಚು ವ್ಯಕ್ತವಾಗುತ್ತಿದ್ದವು. ಆಚರಣೆಯಲ್ಲಿದ್ದ ದಾನ ನೀಡುವ ವ್ಯವಸ್ಥೆಯೂ ಶ್ರೇಣೀಕೃತ ಸಮಾಜ ವ್ಯವಸ್ಥೆಗೆ ಪೂರಕವಾಗಿಯೇ ಇತ್ತು. ದೇವಾಲಯಗಳು

ಗ್ರಾಮೀಣ ಜನರನ್ನು ಕ್ರಮೇಣ ವೈದಿಕ ಸಂಸ್ಕೃತಿಯ ತೆಕ್ಕೆಯೊಳಗೆ ಬರುವಂತೆ ಮಾಡಿದವು. ಸಮಾಜದ ಕೆಳವರ್ಗದ ಜನರಿಗೆ ಅಧಿಕಾರ, ಸವಲತ್ತುಗಳನ್ನು ಒದಗಿಸಿದಾಗ ಅವರ ಆರ್ಥಿಕ ಪರಿಸ್ಥಿತಿ ಬದಲಾಗಬಹುದೇ ಹೊರತು ಶತಮಾನಗಳಿಂದ ಬಂದ ಶ್ರೇಣೀಕೃತ ಸಮಾಜ ವ್ಯವಸ್ಥೆ ಬದಲಾಗಲು ಸಾಧ್ಯವಾಗಲಿಲ್ಲ. ಬ್ರಾಹ್ಮಣರ ಸಾಂಪ್ರದಾಯಿಕತೆ ಮತ್ತು ಮಡಿವಂತಿಕೆಗಳು ವಿಚಲಿತಗೊಳ್ಳದೆ ಮತ್ತಷ್ಟು ಗಟ್ಟಿಗೊಂಡವು ಸಿದ್ಧಾಂತಗಳು ಧರ್ಮಗಳಾಗಿ ರೂಪುಗೊಂಡ ಬಳಿಕ ಅವುಗಳ ಆರಂಭಿಕ ಆಶಯಗಳು, ಬೋಧನೆಗಳು ಮೂಲೆಗುಂಪಾಗಿ ಸಾಂಪ್ರದಾಯಿಕತೆಯೇ ಮೊದಲ ಸ್ಥಾನವನ್ನು ಪಡೆಯುವಂತಾಯಿತು.

ಮೇಲೆ ಉಲ್ಲೇಖಿಸಿರುವ ದೇವಾಲಯ ಆಧಾರಿತ ಜಾತಿ ವ್ಯವಸ್ಥೆಯ ನಿಲುವುಗಳು ಮೇಲುಕೋಟೆ ದೇವಾಲಯಗಳಿಗೂ ಅನ್ವಯವಾಗುತ್ತವೆ. ಗಮನಾರ್ಹ ಅಂಶವೆಂದರೆ ಜಾತಿಪದ್ಧತಿಯ ಕುರಿತು ವಿಶ್ಲೇಷಣೆ ಮಾಡಿದ ಆಚಾರ್ಯರ ವಿಶಿಷ್ಟಾದ್ವೈತ ಸಿದ್ಧಾಂತದ ಕೆಲವು ವಿಭಿನ್ನ ನಿಲುವುಗಳು, ಅಲ್ಪ ಬದಲಾವಣೆಯನ್ನು ತರುವುದರಲ್ಲಿ ಯಶಸ್ವಿಯಾಗಿರುವುದು. ಇದು ಕುತೂಹಲಕಾರಿ ಕೆಲಸವಾಗಿದ್ದು ಯಾವ ವರ್ಗ ಮತ್ತು ಜಾತಿ ಹೆಚ್ಚು ಪ್ರಾಮುಖ್ಯತೆ ಪಡೆದಿದೆ ಎಂಬುದನ್ನು ಗುರುತಿಸಲು ಸಹಾಯಕವಾಗಿದೆ. ದೇವಾಲಯಗಳು ಸಾಮಾಜಿಕ ವರ್ಗಗಳ ಮೇಲೆ ಬೀರಿದ ಪ್ರಭಾವ ಅರಿಯಲು ಸಹಾಯಕವಾಗಿದೆ. ಶಾಸನಗಳಿಂದ ಸಿಗುವ ಮಾಹಿತಿ ಅತ್ಯಂತ ಕಡಿಮೆ. ಐತಿಹಾಸಿಕ ದಾಖಲೆಗಳ ಜೊತೆಗೆ ಸಂದರ್ಶನ ಮಾಡಿ, ದೇವಾಲಯಗಳ ಹಿನ್ನೆಲೆಯಲ್ಲಿ ಪರಿಸ್ಥಿತಿಯನ್ನು ತಿಳಿದು, ಅದನ್ನು ಅಗತ್ಯವಿರುವ ಕಡೆ ಬಳಸಿಕೊಳ್ಳಲಾಗಿದೆ.

ಮೇಲುಕೋಟೆ ದೇವಾಲಯಗಳಿಗೆ ಸಂಬಂಧಿಸಿದ ಕೆಲವು ಶಾಸನಗಳು ಹಲವು ವರ್ಗಗಳ ಬಗ್ಗೆ ಮಾಹಿತಿ ನೀಡುತ್ತವೆ. ಅವರು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ದೇವಾಲಯದ ಕೆಲಸಗಳಲ್ಲಿ ಸಂಬಂಧ ಹೊಂದಿರುವುದು ಸ್ಪಷ್ಟವಾಗುತ್ತದೆ. ಮೇಲುಕೋಟೆಯ ಸಾಮಾಜೀಕರಣದ ಒತ್ತಾಯದ ಶಕ್ತಿಯಾಗಿ ಇಬ್ಬರು ಮಹತ್ವದ ಏಜೆಂಟರು ಕೆಲಸ ಮಾಡಿದ್ದಾರೆ. ಅದೆಂದಿರೆ ದೇವಾಲಯಗಳು ಮತ್ತು ಬ್ರಾಹ್ಮಣರು. ದೇವಾಲಯವು ಸಾಮಾಜೀಕರಣದ ಸಾಂಸ್ಥಿಕ ರೂಪವಾಗಿ ಕಾರ್ಯ ನಿರ್ವಹಿಸಿತು. ಇಲ್ಲಿನ ಬಹುತೇಕ ಶಾಸನಗಳು ರಾಜರು ಮತ್ತು ಅಧಿಕಾರಿ ವರ್ಗಗಳಾಗಿದ್ದು ಕೆಲವೇ ಶಾಸನಗಳು ಇತರ ಕೆಳವರ್ಗಗಳ ಕುರಿತು ಮಾಹಿತಿ ಹೊಂದಿವೆ. ಜನಸಾಮಾನ್ಯರ ಬಗೆಗೆ ಇಲ್ಲಿ ಶಾಸನಗಳು ಮೌನ ತಾಳಿವೆ. ಹೀಗೆ ಇವು ಜನತೆ ಮತ್ತು ಶಾಸನಗಳ ಸಂಬಂಧ ಪೂರಕವಾಗಿರದೆ, ಆಯಾ ಕಾಲದ ರಾಜನ ಪ್ರಭುತ್ವವನ್ನು ಪ್ರಚುರಪಡಿಸುವ ವಾಹಕಗಳಂತಿವೆ.

ದೇವಾಲಯಗಳಲ್ಲಿ ವಿವಿಧ ಜಾತಿಗಳ ಪಾಲ್ಗೊಳ್ಳುವಿಕೆ

ಸಾಂಪ್ರಾದಾಯಿಕ ಸಮಾಜವ್ಯವಸ್ಥೆಯ ಪ್ರತೀಕವಾಗಿದ್ದ ಮೇಲುಕೋಟೆಯ ದೇವಾಲಯಗಳು, ಶ್ರೀ ವೈಷ್ಣವ ಬ್ರಾಹ್ಮಣರಿಂದ ನಿಯಂತ್ರಿತವಾಗುತ್ತಿದ್ದವು. ರಾಮಾನುಜರು ಹೊಯ್ಸಳ ವಿಷ್ಣುವರ್ಧನನ ಮೇಲೆ ಉಂಟುಮಾಡಿದ ಪ್ರಭಾವದಿಂದ ಶ್ರೀ ವೈಷ್ಣವ ಧರ್ಮವು ದೇವಾಲಯದ ಪೂಜೆ ಮತ್ತು ಆಚರಣೆಗಳನ್ನು ಪ್ರತಿಪಾದಿಸಿ ರಾಜಾಶ್ರಯ ಪಡೆಯಿತು. ಆರಂಭದಲ್ಲಿ 'ಯಾದವ ನಾರಾಯಣ ಚತುರ್ವೇದಿ ಮಂಗಲ'ದಲ್ಲಿ ಬ್ರಾಹ್ಮಣರ ನೆಲೆಯು ಆಶ್ರಯಹೊಂದಿತ್ತು. ಆಚಾರ್ಯರು ಮೇಲುಕೋಟೆಗೆ ಬಂದ ನಂತರ ಈ ಸ್ಥಳದ ಶ್ರೇಷ್ಠತೆ ವೃದ್ಧಿಯಾಯಿತು. ನಂತರ ಬ್ರಾಹ್ಮಣ ನೆಲೆಗಳು ಕ್ರಮೇಣ ಮೇಲುಕೋಟೆಯಲ್ಲಿ ಬೆಳವಣಿಗೆ ಹೊಂದಿತು. ಹೊಯ್ಸಳ ರಾಜರು ಮತ್ತು ಅಧಿಕಾರಿಗಳು ಹಾಗೂ ನಂತರದ ರಾಜರು ಹೆಚ್ಚು ಶ್ರೀ ವೈಷ್ಣವ ಬ್ರಾಹ್ಮಣರು ಈ ಸ್ಥಳಕ್ಕೆ ನೇಮಿಸಲ್ಪಟ್ಟರು. ಹೀಗೆ ಸಂಪತ್ತಿನ ಏರಿಕೆ, ಶ್ರೀ ವೈಷ್ಣವ ಧರ್ಮಕ್ಕೆ ಸಿಕ್ಕ ಉದಾತ್ತ ಆಶ್ರಯ, ದೇವಾಲಯ ನಿರ್ಮಾಣ ಬ್ರಾಹ್ಮಣರಿಗೆ ಆಶ್ರಯ ನೀಡಿದವು. ಆಚಾರ್ಯರು ದೇವಾಲಯ ಕೈಂಕರ್ಯಗಳನ್ನು ಪರಿಚಯಿಸಿ ಶ್ರೀರಂಗಕ್ಕೆ ಹೊರಡುವಾಗ 'ಐಂಬತ್ತಿರುವರ್' ಎಂಬ ಐವತ್ತೆರಡು ಶ್ರೀ ವೈಷ್ಣವ ಬ್ರಾಹ್ಮಣರಿಗೆ ದೇವಾಲಯ ಕೈಂಕರ್ಯಕ್ಕೆ ನೇಮಿಸಿದರು.[33] ನಂತರ ಇವರು ಸ್ಥಾನಿಕಾಧಿಕಾರಿಗಳಾದರು. ನಂತರ ಮೇಲುಕೋಟೆಯ ಶ್ರೀ ವೈಷ್ಣವ ಬ್ರಾಹ್ಮಣರು ಕಾಲಕ್ರಮದಲ್ಲಿ ಅರಸರ ಮತ್ತು ಜನರ ಕಣ್ಣಿನಲ್ಲಿ ಸ್ಥಳದ ಮಹತ್ವವು ಅತಿಶಯವಾಗುವಂತೆ ಕ್ಷೇತ್ರ ಮಹಿಮೆಯ ಕಥೆಗಳನ್ನು ಕಟ್ಟಿದರು. ಅದು ಪವಿತ್ರ ಕ್ಷೇತ್ರ ಮಾತ್ರವಲ್ಲದೆ ರಾಮಾಯಣ ಮತ್ತು ಮಹಾಭಾರತದ ಕಾಲದಲ್ಲಿಯೂ ಈ ಕ್ಷೇತ್ರದ ಸಂಬಂಧವನ್ನು ನಂಬಲಾಗಿತ್ತು. ಸಾಂಪ್ರದಾಯಿಕ ನಂಬಿಕೆಯಂತೆ ರಾಮಾನುಜರು ಕೆಲವು ಕಾಲ ಮೇಲುಕೋಟೆಯಲ್ಲಿದ್ದರು. [ಏಕೆ ಇಂತಹ ಸಂಪ್ರದಾಯ ಅಥವಾ ಪುರಾಣ ಶ್ರೀವೈಷ್ಣವರಿಂದ ಸೃಷ್ಟಿಯಾಯಿತು. ಈ ಸಿದ್ಧಾಂತವನ್ನು ಇಲ್ಲಿ ವಿಶ್ಲೇಷಿಸುವ ಅಗತ್ಯವಿದೆ. ರಾಮಾನುಜರ ಭೇಟಿಯನ್ನು ಇಲ್ಲಿ ಪುರಾವೆಯಿಲ್ಲದೆ ನಂಬಿ ಪುರಾಣಗಳ ರೂಪದಲ್ಲಿ ರಚಿಸಿ, ಭಾರತದಾದ್ಯಂತ ಅಸಂಖ್ಯ ನೆಲೆಗಳಲ್ಲಿ ಇದನ್ನು ನಂಬಲಾಗಿದೆ. ಇಂಥ ಪ್ರಸಿದ್ಧ ಆಚಾರ್ಯರ ಹೆಸರು ಬ್ರಾಹ್ಮಣ ನೆಲೆಯಾದ ಮೇಲುಕೋಟೆಯಲ್ಲಿ ಉದ್ದೇಶಪೂರ್ವಕವಾಗಿ ಸೇರಿಸಲ್ಪಟ್ಟಿದೆ. ಸ್ಥಳದ ಪವಿತ್ರತೆ ಮತ್ತು ಬ್ರಾಹ್ಮಣರ ಶ್ರೇಷ್ಠತೆಯನ್ನು ಹೆಚ್ಚಿಸಲು ಹೀಗೆ ಮಾಡಿರುವ ಸಾಧ್ಯತೆಗಳು ಹೆಚ್ಚಾಗಿವೆ.[34]] ನಂತರ ದೇವಾಲಯ ಸಂಕೀರ್ಣದ ಬೆಳವಣಿಗೆಯು ಹೊಯ್ಸಳ ಮತ್ತು ವಿಜಯನಗರದ ರಾಜರು ಮತ್ತು ಅಧಿಕಾರಿಗಳಿಂದ ಹೆಚ್ಚು ಸಂಖ್ಯೆಯ ವೈಷ್ಣವ ಬ್ರಾಹ್ಮಣರು ಈ ಸ್ಥಳಕ್ಕೆ ನೇಮಿಸಿದರು.

ಹೀಗೆ ದೇವಾಲಯ ನಿರ್ಮಾಣ ವೈಷ್ಣವ ಬ್ರಾಹ್ಮಣ ವಲಸೆಗಾರರಿಗೆ ಮೇಲುಕೋಟೆ ಆಶ್ರಯ ನೀಡಿತು. ಇಂದಿಗೂ ಶ್ರೀ ವೈಷ್ಣವ ಬ್ರಾಹ್ಮಣ ಜಾತಿಯ ಒಂದು ಸಂಸ್ಥೆಯಾಗಿ

ದೇವಾಲಯದೊಂದಿಗೆ ನಿಕಟ ಸಂಬಂಧವನ್ನು ಹೊಂದಿದ್ದಾರೆ, ಮೇಲುಕೋಟೆ ದೇವಾಲಯದಲ್ಲಿ ಈ ವರ್ಗವು ಅನುತ್ಪನ್ನಕಾರಕ ಕಾಯಕದಲ್ಲಿ ನಿರತರಾಗಿದ್ದಾರೆ. (ದೇವಾಲಯದ ಕೆಲಸ). ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, 13ನೇ ಶತಮಾನದ ನಂತರ ಈ ಪ್ರದೇಶವು ಅನುತ್ಪಾದಕ ಉದ್ಯೋಗಸ್ತವರ್ಗದ ಉಗಮಕ್ಕೆ ಉದಾಹರಣೆಯಾಯಿತು. ಇಲ್ಲಿ ಸಾಮಾಜಿಕ ಸಂಘಟನೆಯೊಂದು ಅಸ್ತಿತ್ವಕ್ಕೆ ಬಂದಿತು. ಇದು 3 ಆಧಾರವನ್ನು ಹೊಂದಿತ್ತು. ಅದು ಧರ್ಮ ಸಮ್ಮತ ಅಧಿಕಾರ ಹೊಂದಿತ್ತು.

1) ಹಿಂದೂ ಮೂರ್ತಿಗಳು, ವೇದ ಪ್ರಾಮಾಣ್ಯ , ವಿಷ್ಣುಪುರಾಣ, ರಾಮಾಯಣ ಮತ್ತು ಮಹಾಭಾರತ.

2) ಬ್ರಾಹ್ಮಣತ್ವದ ಪಾರಮ್ಯತೆ, ಶ್ರೇಷ್ಠತೆ ಹಾಗೂ ಪ್ರಾಧಾನ್ಯತೆ

3) ದೇವಾಲಯದ ಆಚರಣೆಗಳ ಪಾವಿತ್ರತೆ.

ಮೇಲುಕೋಟೆ ದೇವಾಲಯ ಸಂಕೀರ್ಣದಲ್ಲಿ ಶ್ರೀ ವೈಷ್ಣವರು ಬ್ರಾಹ್ಮಣರಲ್ಲಿಯೇ ದೊಡ್ಡ ವಿಭಾಗಗಳನ್ನು ಸ್ಥಾಪಿಸಿದರು. ಉಲ್ಲೇಖವಾಗಿರುವಂತೆ ಪೂಜಾರಿಗಳು, ಪರಿಚಾರಕರು, ಅಧ್ಯಾಪಕರು ಒಂದು ಭದ್ರವಾದ ವಿಭಾಗವನ್ನು ದೇವಾಲಯ ಸಿಬ್ಬಂದಿಗಳ ನಡುವೆ ವ್ಯವಸ್ಥೆ ಮಾಡಿದ್ದಾರೆ. ದೇವಾಲಯ ಆಡಳಿತ ಮಂಡಳಿಯು ಶ್ರೀ ವೈಷ್ಣವ ಮಠ ಹಾಗೂ ಐಂಬತ್ತಿರುವರ್ ವೈಷ್ಣವರ ನಿಯಂತ್ರಣದಲ್ಲಿದೆ. ಬಹುಪಾಲು ಶ್ರೀ ವೈಷ್ಣವ ಬ್ರಾಹ್ಮಣರು ದೇವಾಲಯದಿಂದ ನೇರವಾಗಿ ಉದ್ಯೋಗ ಪಡೆಯದಿದ್ದರೂ ದೇವಾಲಯದ ಹಲವು ಸೌಲಭ್ಯಗಳನ್ನು ಅನುಭವಿಸುತ್ತಿದ್ದಾರೆ. (ಉಚಿತವಾದ ಸೌಲಭ್ಯಗಳು) ಬ್ರಾಹ್ಮಣರು ಅವರ ವಿದ್ಯಾಭ್ಯಾಸ (ಜ್ಞಾನ) ಮತ್ತು ಧಾರ್ಮಿಕ ಶ್ರದ್ಧೆಗಳಿಂದ ಗೌರವಾನ್ವಿತರಾಗಿದ್ದಾರೆ. ಚಾತುರ್ವರ್ಣದಲ್ಲಿ ಶ್ರೇಷ್ಠರೆನಿಸಿದ್ದ ಇವರು, ಅದನ್ನು ಚಾಚೂತಪ್ಪದೆ ಪಾಲಿಸುತ್ತಿದ್ದರು. ಇವರು ದೇವಾಲಯದ ಸುತ್ತಲೂ ನೆಲೆಸಿದ್ದರು. ಚಾತುರ್ವರ್ಣ ಪದ್ಧತಿಯು ಮೇಲುಕೋಟೆಯಲ್ಲಿ ಕಠಿಣವಾಗಿದ್ದುದಕ್ಕೆ ಇಂದಿಗೂ ಅವರ ಜಾತಿಗನುಗುಣವಾಗಿ ಜನರು ನಿಗಧಿತ ಸ್ಥಳದಲ್ಲಿ ವಾಸಿಸುತ್ತಿದ್ದಾರೆ.

ಅಧ್ಯಯನದಲ್ಲಿ ತೊಡಗುತ್ತಿದ್ದ ಇವರು, ವೇದಗಳು, ಉಪನಿಷತ್, ಪುರಾಣಗಳು, ಮಹಾಭಾರತ ಮತ್ತು ರಾಮಾಯಣ, ಭಗವದ್ಗೀತೆಗಳು ಸೇರಿದಂತೆ ವೈಜ್ಞಾನಿಕ ಮತ್ತು ಧಾರ್ಮಿಕ ಜ್ಞಾನಗಳಿಸುತ್ತಿದ್ದರು. ದೇವಾಲಯದಲ್ಲಿ ಅಧ್ಯಾಪಕರು. ಆಚಾರ್ಯಪುರುಷರು, ಅಧ್ಯಯನ ಉಪಾಧ್ಯಾಯರುಗಳು ಬ್ರಾಹ್ಮಣರಾಗಿದ್ದು, ಪುರಾಣಗಳನ್ನು ಓದುವ ಕೆಲಸ ಮಾಡುವವರು.[35] ಇವರು ದೇವಾಲಯದ ಮುಖ್ಯ ವ್ಯಕ್ತಿಗಳಾಗಿದ್ದು ಹೆಚ್ಚಿನ

ಗೌರವಾನ್ವಿತರಾಗಿದ್ದರು. ಆಗಮೋಕ್ತ ರೀತ್ಯಾ ಕೆಲಸಮಾಡುವ ಆರ್ಚಕರು, ಪರಿಚಾರಿಕರು, ಸ್ಥಾನಿಕರು, ಬ್ರಾಹ್ಮಣ ವರ್ಗದವರಾಗಿದ್ದು, ದೇವಾಲಯದಲ್ಲಿ ಪ್ರಭಾವಶಾಲಿಗಳಾಗಿದ್ದರು. ಇವರ ನಿರ್ದೇಶನವಿಲ್ಲದೆ ದೇವಾಲಯದ ಯಾವುದೇ ದೈವಿಕ ಕೈಂಕರ್ಯಗಳು ಜರುಗುವುದಿಲ್ಲ.

ವರ್ಣವ್ಯವಸ್ಥೆಯಲ್ಲಿ ಶ್ರೇಷ್ಠರೆನಿಸಿದ್ದ ಬ್ರಾಹ್ಮಣರು ದೇವಾಲಯಗಳ ಮೂಲಕ ಹೆಚ್ಚು ಅನುಕೂಲಗಳನ್ನು ಪಡೆದಿದ್ದರು. ವಿಜಯನಗರದ ಅರಸು ಮಲ್ಲಿಕಾರ್ಜುನನು ಒಂದು ಗ್ರಾಮವನ್ನು ಅಗ್ರಹಾರದ ರೂಪದಲ್ಲಿ ಬ್ರಾಹ್ಮಣರಿಗೆ ಕೊಟ್ಟಿದ್ದಾನೆ. ಅಲ್ಲಿನ ಜಮೀನನ್ನು 20 ವೃತ್ತಿಗಳಾಗಿ ಶ್ರೀ ವೈಷ್ಣವರ ನಡುವೆ ವಿಭಾಗಿಸಲಾಗಿದ್ದು, ಅವರ ಗೋತ್ರ ಮತ್ತು ಹೆಸರುಗಳು ಉಲ್ಲೇಖಗೊಂಡಿದೆ.[36] ಮಲ್ಲಿಕಾರ್ಜುನ ದೊರೆಯೇ ಕ್ರಿ.ಶ. 1471ರಲ್ಲಿ ಕುರುಕುಲವಾಮಪಡಿಯಲ್ಲಿ ಆಳ್ವಾರರ ಸೇವೆಯನ್ನು ನಡೆಸಲು ಶ್ರೀ ವೈಷ್ಣವ ಮಹಾಜನರಿಗೆ ದಾನ ಮಾಡಲಾಗಿದೆ.[37] ದೇವಾಲಯದಲ್ಲಿ ಆಚರಣೆಯಂತೆ ವೈದಿಕ ಮಹನೀಯರೆನಿಸಿದ್ದ ಪರಕಾಲಮಠದ ಸ್ವಾಮಿಗಳು, ಯತಿರಾಜಮಠದ ಸ್ವಾಮಿಗಳಿಗೆ, ಅಹೋಬಲಮಠದ ಸ್ವಾಮಿಗಳಿಗೆ, ತೋಟಾದ್ರಿಮಠದ ಸ್ವಾಮಿಗಳಿಗೆ ಹಾಗೂ ಇನ್ನಿತರರಿಗೆ ದೇವಸ್ಥಾನದಲ್ಲಿ ವೈಭವಯುತ ಶ್ರೀಮಂತ ಮರ್ಯಾದಿಗಳು ನಡೆಯುತ್ತಿದ್ದವು.[38] ಇಲ್ಲಿನ ನಾರಾಯಣಸ್ವಾಮಿ ದೇವಾಲಯದಲ್ಲಿ ನಿತ್ಯಕಟ್ಲೆ ತಳಿಗೆಯಲ್ಲಿ ಆಗುವ ಪಾಲಿನಲ್ಲಿ ತೆರೆಯ ಒಳಗೆ ಮತ್ತು ತೆರೆಯ ಹೊರಗಿನ ಪ್ರಸಾದ ವಿನಿಯೋಗ ಎಂಬ 2 ವಿಧದ ವಿನಿಯೋಗ ಆಚರಣೆಯಲ್ಲಿದ್ದು, ತೆರೆಯ ಒಳಗೆ ವಿನಿಯೋಗವಾಗುವ ಪ್ರಸಾದ ಬ್ರಾಹ್ಮಣರಿಗೆ ಮಾತ್ರ ಸಲ್ಲುತ್ತದೆ. ಹೆಚ್ಚುಕಟ್ಟಳೆ ಉತ್ಸವಗಳಲ್ಲಿ ಸಹ 100 ಸೇರು ಅಕ್ಕಿ ವಿನಿಯೋಗವಾದರೆ ಎಲ್ಲವೂ ಶ್ರೀ ವೈಷ್ಣವ ಬ್ರಾಹ್ಮಣರಲ್ಲಿಯೇ ಹಂಚಿಕೆಯಾಗುತ್ತದೆ.[39] ತೆರೆಯ ಹೊರಗೆ ವಿನಿಯೋಗವಾಗುವ ಪ್ರಸಾದದಲ್ಲಿಯು ಬಹುಪಾಲು ಫಲಾನುಭವಿಗಳು ಬ್ರಾಹ್ಮಣರೇ ಆಗಿದ್ದು, ಉತ್ಸವದಲ್ಲಿ ಭಾಗವಹಿಸುವ ಇತರ ಜಾತಿಯವರಿಗೆ ಅಲ್ಪಪ್ರಸಾದ ವಿನಿಯೋಗವಾಗುತ್ತದೆ.

ಕ್ರಿ.ಶ. 1582ರ ವಿಜಯನಗರದ ಶ್ರೀ ರಂಗರಾಯನ ಕಾಲದ ಒಂದು ಶಾಸನವು ಮುದ್ರೆ ಹಾಕಿಕೊಂಡಿರುವ ಶ್ರೀವೈಷ್ಣವ ಬ್ರಾಹ್ಮಣರಿಗೆ ತಿರುನಾಳಿನಲ್ಲಿ ಸಿಗಬೇಕಾದ ತಿಂಗಳ ಸಂಬಳ ಹಾಗೂ ಪ್ರತಿದಿನವೂ ಒಂದು ತಳಿಗೆ ಪ್ರಸಾದ ಅವರಿಗೆ ಸಲ್ಲಬೇಕು ಎಂಬ ನಿಯಮವನ್ನು ಉಲ್ಲೇಖಿಸಿದೆ.[40] ಹಲವು ಶಾಸನಗಳಲ್ಲಿ ಹಾಗೂ ದೇವಾಲಯದ ಕೈಪಿಡಿಯಲ್ಲಿ ಪ್ರಸಾದದ ಹಂಚಿಕೆಯಲ್ಲಿನ ನಿಯಮಗಳಿಂದ ತಿಳಿದುಬರುವುದೇನೆಂದರೆ ದೇವಾಲಯದಲ್ಲಿ ತಯಾರಾದ ಪ್ರಸಾದಕ್ಕಾಗಿ ಹೆಚ್ಚಿನ ಬೇಡಿಕೆಯಿತ್ತು. ಅದನ್ನು ಪಾವಿತ್ರ ರೂಪದಲ್ಲಿ ನೋಡುತ್ತಿದ್ದ ಜನರಿಗೆ ವಿನಿಯೋಗವಾಗುವಾಗ ಪಾಲಿಸಬೇಕಾದ ನಿಯಮಗಳನ್ನು ಪಾಲಿಸಲಾಗುತ್ತಿತ್ತು. ಆದರೆ ಇಲ್ಲಿಯೂ ಕೆಲವು ವರ್ಗಗಳಿಗೆ ಮಾತ್ರ ಹೆಚ್ಚಿನ ಪ್ರಾಶಸ್ತ್ಯ

ನೀಡುತ್ತಿದ್ದ ಅಂಶ ಸ್ಪಷ್ಟವಾಗುತ್ತದೆ. ರಾಜರಿಗೆ ಮತ್ತು ವೈಷ್ಣವರಿಗೆ ಸಲ್ಲಬೇಕಾದ ಪ್ರಸಾದದ ಭಾಗವನ್ನು ಶಾಸನಗಳು ಕಟ್ಟುಬದ್ಧವಾಗಿ ನಿಯಮಿಸಿದೆ. ಆಲಯಾಶ್ರಿತ ಇತರ ಜನರಿಗೆ ಹಂಚಿಕೆಯ ಕುರಿತು ಏನನ್ನೂ ಹೇಳುವುದಿಲ್ಲ. ಕ್ರಿ.ಶ. 1535ರ ಒಂದು ಶಾಸನವು 'ರಾಜಮಾನ್ಯ'ವಾಗಿ ಸಲ್ಲುವ ಪ್ರಸಾದದ ಕುರಿತು ವಿವರಿಸಿದೆ.[41]

ಇಲ್ಲಿನ ಮತ್ತೊಂದು ಮುಖ್ಯ ದೇವಾಲಯ ಯೋಗಾನರಸಿಂಹಸ್ವಾಮಿ ದೇವಾಲಯದಲ್ಲಿ ಈ ಪದ್ಧತಿಯೇ ಜಾರಿಯಲ್ಲಿದೆ. ಮೇಲುಕೋಟೆಯ ನಾರಾಯಣಸ್ವಾಮಿ ದೇವಾಲಯದಲ್ಲಿ ಸ್ಥಳವಾಸದ ಅಕ್ಕಿ ಮತ್ತು ಭಟಮಾನ್ಯ ಭತ್ಯೆಗಳನ್ನು ಇಲ್ಲಿನ ಶ್ರೀ ವೈಷ್ಣವ ಬ್ರಾಹ್ಮಣರು ಪಡೆಯುತ್ತಿದ್ದಾರೆ. ಇದು ಹಿಂದಿನಿಂದಲೂ ಬಂದ ಆಚರಣೆಯಾಗಿದೆ. ದೇವಾಲಯದಲ್ಲಿ ಯಾವುದೇ ಉದ್ಯೋಗವಿಲ್ಲದೆ ಬ್ರಾಹ್ಮಣರಿಗೂ ದೇವಾಲಯದಿಂದ ಸ್ಥಳವಾಸದ ಅಕ್ಕಿ ಕೊಡಲಾಗುತ್ತದೆ. ತಿಂಗಳಿಗೆ ಒಂದಾವರ್ತಿ ವಿನಿಯೋಗವಾಗುತ್ತದೆ. ಭಟಮಾನ್ಯವನ್ನು ಅನ್ನದ ರೂಪದಲ್ಲಿ ಕೊಡಲಾಗುತ್ತದೆ. ಆಚಾರಪರರಿಗೆ ಅನ್ನದ ಬದಲು ಅಕ್ಕಿ ನೀಡಲಾಗುತ್ತದೆ. ಕುಟುಂಬದ ಸದಸ್ಯರ ಸಂಖ್ಯೆಯ ಆಧಾರದ ಮೇಲೆ ಹಂಚಿಕೆ ನಡೆಯುತ್ತಿತ್ತು.[42]

ಎಲ್ಲಾ ಮಹಾಜನರು ಅರ್ಚಕ ವರ್ಗಕ್ಕೆ ಸೇರಿರಲಿಲ್ಲ. ಅರ್ಚಕರಿಗೆ ಹಲವು ಸೇವಕರ ಅಗತ್ಯವಿರುತ್ತಿತ್ತು. ದೇವರಿಗೆ ಅಲಂಕರಿಸುವ, ನೀರೊದಗಿಸುವ ಸಹಾಯಕರು ಬ್ರಾಹ್ಮಣರಾಗಿದ್ದರು ಬಹುಪಾಲು ಸಿಬ್ಬಂದಿಗಳು ವೇದ ವಿದ್ಯೆಗಳಿಸಿದ್ದರು. ಸಂದರ್ಭೋಚಿತವಾಗಿ ಅವರು ಹುದ್ದೆಗೆ ಆಯ್ಕೆಯಾಗುತ್ತಿದ್ದರು. ಅನುಭವವು ಅವರಿಗೆ ಉನ್ನತ ಗೌರವ ಒದಗಿಸುತ್ತಿತ್ತು. ಇಂದಿಗೂ ಇಲ್ಲಿ ಈ ಪದ್ಧತಿಗಳು ಆಚರಣೆಯಲ್ಲಿವೆ. ಮೇಲುಕೋಟೆಯಲ್ಲಿ ಗಣನೀಯವಾದ ಶ್ರೀ ವೈಷ್ಣವ ಬ್ರಾಹ್ಮಣರ ಸಂಖ್ಯೆ ನೆಲೆಸಿತ್ತು. ಇವರೆಲ್ಲರು ಪೂಜಾರಿಗಳಾಗಿ ಹಲವು ಗುಡಿಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಕೊನೆಪಕ್ಷ ಒಬ್ಬ ಗಂಡು ಅಭ್ಯರ್ಥಿಯು ಎಲ್ಲಾ ಶ್ರೀ ವೈಷ್ಣವ ಮನೆಯಿಂದ ದೇವಾಲಯದಲ್ಲಿ ಉದ್ಯೋಗ ಪಡೆದಿದ್ದು, ಇಂದಿಗೂ ಅದೇ ಪರಿಸ್ಥಿತಿ ಮುಂದುವರೆದಿದೆ. ದೇವಾಲಯದಲ್ಲಿ ಕೆಲಸ ಮಾಡುವ ಇವರು ಶ್ರೇಷ್ಠತೆ ಹಾಗೂ ವಿಶಿಷ್ಟಗೌರವಗಳನ್ನು ಪಡೆದಿದ್ದರು. ಹೀಗೆ ಬ್ರಾಹ್ಮಣರು ದೇವಾಲಯಗಳಲ್ಲಿ ಹೆಚ್ಚಿನ ಅನುಕೂಲಗಳನ್ನು ಪಡೆದುದ್ದಲ್ಲದೆ ಜಾತಿಯಿಂದ ಶ್ರೇಷ್ಠರೆನಿಸಿದ್ದರು.

ಮೇಲುಕೋಟೆಯ ಶ್ರೀ ವೈಷ್ಣವ ಬ್ರಾಹ್ಮಣರು ಇತರೆ ವಿಭಾಗದ ಬ್ರಾಹ್ಮಣರಿಗಿಂತ ಹೋಲಿಕೆಯಲ್ಲಿ ತುಂಬ ಪ್ರತ್ಯೇಕವಾಗಿ ಉಳಿಯುತ್ತಾರೆ. ತಮಿಳು ಸಂಸ್ಕೃತಿಯ ಪ್ರಭಾವ ಇವರ ಮೇಲೆ ಹೆಚ್ಚಾಗಿದ್ದು, ಆಡುಭಾಷೆಯಾಗಿ ಕನ್ನಡದ ಬದಲು ತಮಿಳನ್ನು ಬಳಸುವರು. ತಮಿಳುನಾಡಿನ ವಲಸಿಗರಾದ ಇವರು ತಮ್ಮ ಮೂಲ ಸಂಸ್ಕೃತಿಗೆ ಬದ್ಧರಾಗಿದ್ದಾರೆ.

ದೇವಾಲಯದಲ್ಲಿ ಮಾತ್ರ ಪಠನೆಯು ಬಹುಪಾಲು ತಮಿಳು ಭಾಷೆಯಲ್ಲಿಯೇ ನಡೆಯುತ್ತದೆ. ಭಕ್ತಿಪಂಥದ ಆಳ್ವಾರರ ಪ್ರಭಾವ ಆರಂಭದಲ್ಲಾದರೂ, ನಂತರದ ದಿನಗಳಲ್ಲಿ ಸಾಂಪ್ರದಾಯಿಕತೆ, ವೈದಿಕ ಸಂಸ್ಕೃತಿಯ ಆಚರಣೆಗಳು ಮತ್ತು ಮಡಿವಂತಿಕೆಗಳು ಬಲವಾಗಲಾರಂಭಿಸಿದವು. ವರ್ಣ ನಿಯಮಗಳನ್ನು ಎತ್ತಿ ಹಿಡಿಯುವ ಕೆಲಸದಲ್ಲಿ ಇವರು ಕೆಲಸ ಮಾಡಿದರು. ಅದು ದೇವಾಲಯದಲ್ಲಿ ವ್ಯಕ್ತವಾಗುತ್ತಿತ್ತು. ಶ್ರೇಣಿಗನುಗುಣವಾಗಿ ಉಡುಗೊರೆ ನೀಡಿದ ರಾಜರು ಇದನ್ನು ಬಲಪಡಿಸಿರುವುದು ಇಲ್ಲಿನ ಶಾಸನಗಳಿಂದ ದೃಢಪಡುತ್ತದೆ.

ಮೇಲುಕೋಟೆಯಲ್ಲಿ ಶ್ರೀ ವೈಷ್ಣವ ಬ್ರಾಹ್ಮಣರೇ ಸಮಾಜದಲ್ಲಿ ಮೇಲುವರ್ಗಕ್ಕೆ ಸೇರಿದವರಾಗಿದ್ದರು. ಅವರಲ್ಲಿಯೇ ಹಲವು ಜಾತಿ, ಉಪಜಾತಿಗಳು ಇದ್ದುದು ಅವು ದೇವಾಲಯದೊಂದಿಗೆ ವಿಭಿನ್ನ ಸಂಬಂಧಗಳನ್ನು ಹೊಂದಿದ್ದವು. ಇದು ಅವರ ಆಚರಣೆ ಮತ್ತು ತತ್ವ ಸಿದ್ಧಾಂತಗಳಿಂದ ಆಧಾರವಾಗಿತ್ತು. ಮೊದಲಿಗೆ ತೆಂಗಲೆ ಮತ್ತು ವಡಗಲೈ ಎಂಬ ಎರಡು ಪಂಥಗಳು ಇಲ್ಲಿ ಮುಖ್ಯ ಪಾತ್ರ ವಹಿಸಿದೆ. ಈ ಎರಡು ಪಂಥಗಳು ವೇದಗಳ ಅಧ್ಯಯನಗಳನ್ನು ವಿಭಿನ್ನವಾಗಿ ವಿಶ್ಲೇಷಿಸುತ್ತವೆ. ಇದನ್ನು ಕ್ರಿಶ್ಚಿಯನ್ನರ ಕ್ಯಾಥೋಲಿಕ್ ಮತ್ತು ಪ್ರಾಟಸ್ಟೆಂಟರ ಪಂಥಗಳಿಗೆ ಹೋಲಿಸಬಹುದು. 13ನೇ ಶತಮಾನದಲ್ಲಿ ವಿಶಿಷ್ಟಾದ್ವೈತ ಪಂಥದಲ್ಲಿ ಆದ ಈ ವಿಭಜನೆಯು ನಂತರ ಈ ಕ್ಷೇತ್ರದ ಮೇಲೆ ಮಹತ್ವ ಪರಿಣಾಮ ಉಂಟುಮಾಡಿತು.[43] ತಮಿಳನ್ನು ಬಳಸುವ ಇವೆರಡು ಪಂಥಗಳು ಹಲವು ವಿಭಿನ್ನತೆಗಳನ್ನು ಹೊಂದಿವೆ. ವಡಗಲೆಯವರು ಕನ್ನಡವನ್ನೂ ಬಳಸುವರು. ಇವರು ಬಹುತೇಕ ಮಂದಿ ಮತಾಂತರಹೊಂದಿದವರು. ಹೊಯ್ಸಳರ ಕಾಲದಲ್ಲಿ ತೆಂಗಲೆಯವರು ಪ್ರಾಭವಿಗಳಾಗಿದ್ದು, ನಂತರ ಮೈಸೂರು ಒಡೆಯರ ಕಾಲದಲ್ಲಿ ಒಡಗಲೈ ಪಂಥ ಪರಕಾಲಮಠದ ಪ್ರಭಾವದಿಂದ ಹೆಚ್ಚಿನ ಮಾನ್ಯತೆ ಪಡೆಯಿತು. ಮೊದಲು ಭಕ್ತಿ ನಂತರ ಶರಣಾಗತಿ ತತ್ವ ವಡಗಲೈದಾದರೆ, ತೆಂಗಲೆಯು ಮೊದಲು ಶರಣಾಗತಿ ನಂತರ ಭಕ್ತಿಯನ್ನು ಪ್ರತಿಪಾದಿಸಿತು. ತೆಂಗಲೆ ಪಂಥದಲ್ಲಿ ಶ್ರೀ ವೈಷ್ಣವ ಪಂಥ ಸೇರಿದ ಶೂದ್ರರಿಗೆ ಸ್ಥಾನವಿತ್ತು. ವಡಗಲೆಯವರಿಗೆ ದ್ರಾವಿಡ ದಿವ್ಯ ಪ್ರಬಂಧಗೊತ್ತಿರಲಿಲ್ಲ.

ರಾಮಾನುಜರು ಈ ಎರಡೂ ಪಂಥಗಳ ನಡುವೆ ಭೇದ ತೋರದೆ ಸಮಾನ ವ್ಯತ್ಯಾಸ ನೀಡಿದರು. ಅದನ್ನು ಉಭಯ ವೇದಾಂತದ ಪ್ರತಿಪಾದನೆಯಲ್ಲಿ ಉಲ್ಲೇಖಿಸಿದ್ದಾರೆ. 19ನೇ ಶತಮಾನದ ಆರಂಭದಿಂದ ಮೇಲುಕೋಟೆಯಲ್ಲಿ ಈ ಎರಡು ಪಂಥಗಳ ನಡುವೆ ವೈಶಮ್ಯಗಳು ಆರಂಭವಾದಂತೆ ತೋರುತ್ತದೆ. ಉತ್ತರದಿಂದ ವಲಸೆ ಬಂದ ವಡಗಲೈ ಪಂಥ, ತೆಂಗಲೈಪಂಥದೊಂದಿಗೆ ಅಸ್ತಿತ್ವದ ಹೋರಾಟ ಆರಂಭಿಸಿತು. ಇವರು ವೇದಾಂತ ದೇಶಿಕರ ಅನುಯಾಯಿಗಳಾಗಿದ್ದರು ವಡಗಲೈ ಪಂಥವು ಪೀಠವಿಲ್ಲದ ಊರ್ಧ್ವಪುಂಡ್ರನಾಮ

ಧರಿಸಿದರೆ, ತೆಂಗಲೆಯವರು ಪೀಠವಿರುವ ಊರ್ಧ್ವಪುಂಡ್ರ ನಾಮ ಧರಿಸುವರು. ಮೇಲುಕೋಟೆ ದೇವಾಲಯದ ಮೂರ್ತಿ ಮತ್ತು ಕಂಬಗಳಲ್ಲಿರುವ ತೆಂಗಲೆನಾಮದ ಕೆತ್ತನೆಯಲ್ಲಾಗಿರುವ ವಿರೂಪಗಳು, ಅವರ ಆಂತರಿಕ ಆಚಾರಗಳ ವ್ಯತ್ಯಾಸಗಳು, ಅವರ ವೈಶಮ್ಯವನ್ನು ತಿಳಿಸುತ್ತವೆ. ಇಲ್ಲಿನ ಯೋಗಾನರಸಿಂಹಸ್ವಾಮಿ ಬೆಟ್ಟದ ದೇವಾಲಯದ ಬ್ರಾಹ್ಮಣರನ್ನು ಪರಕಾಲಸ್ವಾಮಿಗಳು ವಡಗಲೈ ಪಂಥಕ್ಕೆ ಮತಾಂತರಿಸಿದರು ಎಂಬ ಜನಶೃತಿಯಿದೆ.

ದೇವಾಲಯದಲ್ಲಿ ನಡೆಯುವ ವೇದಗೋಷ್ಠಿಗಳಲ್ಲಿ ತೆಂಗಲೆಯವರು ಹೆಚ್ಚಿನ ಮರ್ಯಾದೆ ಹೊಂದುವರು. ಮೊದಲು ವೇದ ಪಾರಾಯಣದಲ್ಲಿ ವಡಗಲೈಪಂಥದವರಿಗೆ ಸ್ಥಾನವಿರಲಿಲ್ಲ. ಸರದಿಯಂತೆ ನಂತರ ವಡಗಲೈ ಪಂಥದವರು ವೇದ ಪಾರಾಯಣ ಮಾಡುವರು. ಒಮ್ಮೆಗೆ ಸಾಮೂಹಿಕ ಪಾರಾಯಣವಿರುವುದಿಲ್ಲ. ಎರಡೂ ಪಂಥಗಳ ನಡುವೆ ವೈವಾಹಿಕ ಸಂಬಂಧ ನಿಷಿದ್ಧವಿತ್ತು. ಹಾಗೆಯೇ ಇವರಿಬ್ಬರ ನಡುವೆ ಸಹಬೋಜನವಿರಲಿಲ್ಲ. ವಡಗಲೈ ಪಂಥದ ಆಚಾರಗಳು ಕಠಿಣವಾಗಿದ್ದು ಜಪ, ಹೋಮಗಳು ಹೆಚ್ಚು ಆಚರಣೆಯಲ್ಲಿವೆ. ಇಲ್ಲಿನ ನಾರಾಯಣಸ್ವಾಮಿ ದೇವಾಲಯದಲ್ಲಿ ನಡೆಯುವ ಕೃಷ್ಣ ಜಯಂತಿಯಂದು ತೆಂಗಲೆಯವರು ಮಾತ್ರ ಪಾಲ್ಗೊಳ್ಳುವರು. ವಡಗಲೈಪಂಥದವರು ನಡೆಸುವ ದೇವಾಲಯದ ಉತ್ಸವಗಳಲ್ಲಿ ತೆಂಗಲೆಪಂಥದವರು ಪಾಲ್ಗೊಳ್ಳುವುದಿಲ್ಲ. ವೇದಪಾರಾಯಣ ಮತ್ತು ಪ್ರಸಾದ ವಿನಿಯೋಗದಲ್ಲಿ ಇಬ್ಬರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿದ್ದರೂ ಇಬ್ಬರ ನಡುವೆ ಆಂತರಿಕ ಭಿನ್ನಾಭಿಪ್ರಾಯಗಳು ಜೀವಂತವಾಗಿದ್ದು. ಅದು ಮುಂದುವರೆಯುತ್ತಿದೆ. ಮೇಲುಕೋಟೆಯ ಯೋಗಾನರಸಿಂಹಸ್ವಾಮಿ ದೇವಾಲಯದ ಪ್ರಧಾನ ಮೂರ್ತಿಗೆ ಧರಿಸುವ ಊರ್ಧ್ವಪುಂಡ್ರ ನಾಮವನ್ನು ಧರಿಸುವ ವಿಚಾರದಲ್ಲಿ ಎರಡೂ ಪಂಥಗಳ ನಡುವೆ ಉಂಟಾದ ಭಿನ್ನಾಭಿಪ್ರಾಯ 1962ರಲ್ಲಿ ಕೋರ್ಟ್ ಮೆಟ್ಟಿಲೇರಿತ್ತು. ತೀರ್ಮಾನದಂತೆ ಆಗ ಧರಿಸುತ್ತಿದ್ದ ಪೀಠವಿಲ್ಲದ ವಡಗಲೈನಾಮವನ್ನೇ ಮುಂದುವರೆಸುವಂತೆ ತಳಿಸಲಾಗಿತ್ತು. ಇತ್ತೀಚಿನ ದಿನಗಳಲ್ಲಿ ಇಬ್ಬರ ನಡುವೆ ಮತ್ತೆ ಭಿನ್ನಾಭಿಪ್ರಾಯ ತಲೆದೋರಿದ್ದು, ಅದು ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದ್ದು, ತೆಂಗಲೆಪಂಥದವರು ಪೀಠವಿರುವ ಊರ್ಧ್ವಪುಂಡ್ರನಾಮ ಧರಿಸುವಂತೆ ಕೇಳಲಾಗಿದೆ. ಕೋರ್ಟ್ ಮಧ್ಯಂತರ ಆದೇಶನೀಡಿ ಎರಡೂ ನಾಮಗಳ ಬದಲಾಗಿ ಕೆಂಪುಬಣ್ಣದ ಒಂದೇ ತಿಲಕವನ್ನಿಡುವಂತೆ ತಿಳಿಸಿದೆ.

ಶ್ರೀ ವೈಷ್ಣವ ಸಮುದಾಯವು ಹದಿನೆಂಟು ಸ್ವಗೋತ್ರ ಗುಂಪುಗಳನ್ನು ಹೊಂದಿದ್ದವು. ಅವು ಈ ಕೆಳಗಿನಂತಿವೆ.

1. ಹೆಬ್ಬಾರ್- ಇವರು ದಕ್ಷಿಣ ಭಾರತದ ಶ್ರೀರಂಗ, ಕಾಂಜೀವರಂ ಹಾಗೂ ಕುಂಭಕೋಣ, ಕೋವಿಲ್, ತಿರುಪತಿಗಳಿಂದ ವಲಸೆ ಬಂದವರು. ಇವರು

ಎ) ಕದಂಬ – ತುಮಕೂರು ಜಿಲ್ಲೆ

ಬಿ) ಶ್ರೀರಂಗಪಟ್ಟಣ – ಮಂಡ್ಯ ಜಿಲ್ಲೆ

ಸಿ) ಬೇಲೂರು – ಹಾಸನಜಿಲ್ಲೆ

ಡಿ) ಗ್ರಾಮ – ಹಾಸನ ಜಿಲ್ಲೆ

ಇ) ಮಾಲೂರು – ಬೆಂಗಳೂರು ಜಿಲ್ಲೆ

ಈ ಮೇಲಿನ ಗ್ರಾಮಗಳಲ್ಲಿ ವಿಂಗಡಿಸಲ್ಪಟ್ಟರು. ಇವರ ನಡುವೆ ಅಂತರ ವಿವಾಹ ಹಾಗೂ ಸಹಭೋಜನ ಪದ್ಧತಿ ಇತ್ತು. ತಮಿಳು ಭಾಷೆ ಮಾತನಾಡುವರು.

2) ಮಂಡ್ಯತ್ತಾರ್ – ಈ ಪಂಗಡವು ಆಂಧ್ರಪ್ರದೇಶದ ತಿರುಪತಿ ಬಳಿಯ ಮಂಡಯಂ ಹಳ್ಳಿಯಿಂದ ವಲಸೆ ಬಂದವರು. ಮೇಲುಕೋಟೆ ಮತ್ತು ಮಂಡ್ಯದಲ್ಲಿ ನೆಲೆಸಿದರು.

3) ಹೆಮ್ಮಿಗೇಯರ್ – ಇವರು ವೈದಿಕರಾಗಿದ್ದು ವಡಗಲೈ ಪಂಥದವರು ಮೈಸೂರು ಜಿಲ್ಲೆಯ ತಿರುಮಕೂಡು ನರಸೀಪುರದ ಹೆಮ್ಮಿಗೆಯ ಬಳಿ ನೆಲೆಸಿದ್ದರು. ಇವರು ತಮಿಳು ಮಾತನಾಡುವರು.

4) ಮೆಟ್ಟಾ – ಕುಂಟೇಯರ್ – ವಡಗಲೈ ಪಂಥದವರಾಗಿದ್ದು, ಪರಕಾಲಮಠದ ಅನುಯಾಯಿಗಳಾಗಿದ್ದರು. ಮೈಸೂರು ಸಂಸ್ಥಾನದೆಲ್ಲೆಡೆ ಜೀವಿಸುತ್ತಿದ್ದರು – ತೆಲಗು ಮತ್ತು ತಮಿಳು ಭಾಷೆಗಳನ್ನು ಮಾತನಾಡುತ್ತಿದ್ದರು.

5) ಮರುದುದಾರ್ – ವಡಗಲೈ ಪಂಥದವರು ಹಾಗೂ 20ನೇ ಶತಮಾನದ ಆರಂಭದ ಹೊತ್ತಿಗೆ ರಾಜ್ಯದಲ್ಲಿ ಕೇವಲ 40 ಕುಟುಂಬಗಳು ಮಾತ್ರ ವಾಸಿಸುತ್ತಿದ್ದವು. ತಮಿಳು ಭಾಷೆಯಾಡುತ್ತಿದ್ದರು.

6) ಸೋಮೋಸಂದನ್ – ಇವರು ಶ್ರೀರಂಗಂನಿಂದ ವಲಸೆ ಬಂದವರು. ವೈದಿಕರಾಗಿದ್ದು ಮೈಸೂರು ಜಿಲ್ಲೆಯಲ್ಲಿ ವಾಸವಾಗಿದ್ದರು.

7) ಕಲ್ಲು–ಕುಂತೇಯರ್ – ಇದು ಬೆಂಗಳೂರು ಜಿಲ್ಲೆಯ ಹೊಸಕೋಟೆ ತಾಲ್ಲೋಕಿನ ಬಳಿಯ ಗ್ರಾಮ. ಇಲ್ಲಿ ಶ್ರೀನಿವಾಸ ಪಂಥದವರು ಜೋಡಿ ಹಳ್ಳಿ ವ್ಯವಸ್ಥೆ ಹೊಂದಿದ್ದರು.

8) ಪ್ರತೀವಾದಿ–ಭಯಂಕರಾತ್ತಾರ್ – ಈ ಪಂಗಡವು ತೆಂಗಲೈ ಮತ್ತು ವಡುಗಲೈ ಸಂಪ್ರದಾಯಗಳೆರಡಕ್ಕೂ ಬದ್ಧವಾಗಿತ್ತು. ಶ್ರೀರಂಗಂನಿಂದ ವಲಸೆ ಬಂದು ಕೋಲಾರ ಜಿಲ್ಲೆಯಲ್ಲಿ ನೆಲೆಸಿದರು. ತಮಿಳು ಭಾಷೆ ಮಾತನಾಡುವರು.

9) ನಲ್ಲನ ಚಕ್ರವರ್ತಿ – ವಡಗಲೈ ಪಂಥದ ಇವರು ಕಾಂಜೀವರಂನಿಂದ ಬಂದವರು. ರಾಜ್ಯದುದ್ದಕ್ಕೂ ಹರಡಿದ್ದ ಇವರು ವೈದಿಕರಾಗಿದ್ದು ತಮಿಳು ಭಾಷೆ ಮಾತಾಡುತ್ತಿದ್ದರು.

10) ಯೆಂಬರ್ – ಇವರು ಶ್ರೀರಂಗನ ತೆಂಗಲೆಯವರಾಗಿದ್ದು, ತಮಿಳು ಭಾಷೆ ಮಾತನಾಡುತ್ತಿದ್ದರು.

11) ಭಟ್ಟಾರಾಚಾರ್ – ಇವರು ತೆಂಗಲೆಯವರಾಗಿದ್ದು, ಕೋಲೂರು ಜಿಲ್ಲೆಯಲ್ಲಿ ನೆಲೆಸಿದ್ದರು. ತಮಿಳು ಭಾಷೆ ಮಾತನಾಡುತ್ತಿದ್ದ ಇವರು ವೈದಿಕರಾಗಿದ್ದರು.

12) ತಿರುಮಾಲಿಯಾರ್ – ಇವರು ಕಾಂಜೀವರಂನಿಂದ ಬಂದ ಕೋಟಿ ಕನ್ಯಾದಾನ ತಾತಾಚಾರ್ಯರ ವಂಶಸ್ಥರಾಗಿದ್ದರು. ಇವರು ವಡಗಲೈ ಪಂಥದವರಾಗಿದ್ದು, ವೈದಿಕರಾಗಿದ್ದರು. ರಾಜ್ಯದೆಲ್ಲೆಡೆ ನೆಲೆಸಿದ್ದ ಇವರು ತಮಿಳು ಭಾಷೆ ಆಡುತ್ತಿದ್ದರು.

13) ವೈಖನಾಸಲ್–ಇವರೆಲ್ಲರೂ ಶ್ರೀನಿವಾಸ ತತ್ವದ ದೇವಾಲಯಗಳಲ್ಲಿ ಅರ್ಚರಕಾಗಿದ್ದರು. ಇವರ ಸ್ಥಾನಮಾನವು ಸ್ಮಾರ್ಥರಲ್ಲಿದ್ದ ಶಿವ–ನಂಬಿಕೆಗಳಿಗೆ ಹೊಂದುವ ಹಾಗಿತ್ತು. ಮೊದಲು ತಿಳಿಸಿದ ಪಂಗಡಗಳ ಸದಸ್ಯರು ಇವರೊಂದಿಗೆ ಯಾವುದೇ ಸಾಮಾಜಿಕ ಸಂಬಂಧ ಹೊಂದಿರಲಿಲ್ಲ. ಇವರು ತೆಲಗುಭಾಷೆ ಮಾತನಾಡುವರು.

14) ಪಂಚರತ್ರಲ್ – ಇವರೂ ಸಹ ಶ್ರೀನಿವಾಸ ತತ್ವಾಧಾರಿತ ದೇವಾಲಯಗಳ ಅರ್ಚಕರಾಗಿದ್ದರು. ಇವರು ಅರ್ಚಕರಲ್ಲಿ ತೆಂಕಲೈ ಹಾಗೂ ವಡಗಲೈಗಳಿಬ್ಬರೂ ಆಗಿದ್ದರು. ಇವರು ತೆಲುಗು ಮತ್ತು ತಮಿಳು ಭಾಷೆ ಆಡುತ್ತಿದ್ದರು.

15) ಚೋಲಿ ಮತ್ತು ಮುಂಚೋಲಿ – ಇವರನ್ನು ಈ ರೀತಿ ಕರೆಯಲು ಅವರು ತಮ್ಮ ನೆತ್ತಿಯ ಮೇಲೆ ಒಂದು ಜುಟ್ಟನ್ನು ಬಿಡುತ್ತಿದ್ದುದೇ ಕಾರಣವಾಗಿತ್ತು. ಇವರು

ನಂದೀದುರ್ಗ ಹಾಗೂ ಅಷ್ಟಗ್ರಾಮ ವಿಭಾಗಗಳಲ್ಲಿ ಕಾಣಸಿಗುತ್ತಿದ್ದರು. ಇವರು ತೆಂಗಲೆ ಮತ್ತು ವಡಗಲೈ ಎರಡೂ ಪಂಥಗಳಿಗೆ ಸೇರಿದ್ದು ತಮಿಳು ಭಾಷೆ ಬಲ್ಲವರಾಗಿದ್ದರು.

16) ಕಿಲ್ಕತೊರ್ – ಈ ಪದವು ದ್ವಿಗುಣ ಅರ್ಥವನ್ನು ಹೊಂದಿದೆ. ಇದರ ಅರ್ಥ ಕೆಳಸೀಮೆಗೆ ಸೇರಿದವರು ಹಾಗೂ ಪರ್ವತಗಳ ಕೆಳಪ್ರದೇಶದಲ್ಲಿ ಬರುವ ಸೀಮೆ ಎಂದಾಗುತ್ತದೆ. ಮೈಸೂರಿನ ಶ್ರೀನಿವಾಸ ಪಂಥದವರಲ್ಲೆರೂ ಪರ್ವತಗಳ ಕೆಳಸೀಮೆಯಿಂದ ವಲಸೆ ಬಂದವರಾಗಿದ್ದು, ಅದರಲ್ಲಿ ಈ ವರ್ಗ ಮಾತ್ರ ಸಂಪ್ರದಾಯಿಕ ಹೆಸರನ್ನು ಮುಂದುವರೆಸಿಕೊಂಡು ಹೋಯಿತು.

ಕ್ರಿ.ಶ. ಹನ್ನೆರಡನೆಯ ಶತಮಾನದ ನಂತರ ಮೇಲುಕೋಟೆಯಲ್ಲಿ ಕೇವಲ ಕೆಲವೇ ಗುಂಪುಗಳು ವಾಸಿಸುತ್ತಿದ್ದರು. ಅವುಗಳಲ್ಲಿ ಹೆಬ್ಬಾರ್, ಮಂಡ್ಯತ್ತರ್, ಹೆಮ್ಮಿಗೆಯರ್, ತಿರುಮಲೈಯಾರ್, ವೈಖನಾಸಲ್, ಪಂಚಾರಾತ್ರಾಲ್, ಕಿಲ್ಕತ್ತೂರ್, ಪ್ರತೀವಾದಿ–ಭಯಂಕರಾತ್ತಾರ್ ವೈಷ್ಣವ ಪಂಗಡಗಳು ಹೆಸರಿಸಲರ್ಹವಾಗಿದೆ. ವೈಷ್ಣವ ಪಂಗಡಗಳು ಒಂದು ಸಂಘಟಿತ ಅಸ್ತಿತ್ವವನ್ನು ಹೋಲುವಂತಿತ್ತು. ಗುರುಗಳನ್ನು ಆಚಾರ್ಯಪುರಷರೆಂದು ಕರೆಯುತ್ತಿದ್ದರು. ಜಾತಿ ನಿರ್ಬಂಧಗಳನ್ನು ಮೀರಿದರೆ ಶಿಕ್ಷಿಸಲಾಗುತ್ತಿತ್ತು ಹಾಗೂ ಜಾತಿ ಉಚ್ಚಾಟನೆ ಮಾಡಲಾಗುತ್ತಿತ್ತು.

ಗಮನಾರ್ಹ ಅಂಶವೆಂದರೆ ವೈಖನಾಸಲ್ ಪಂಗಡಕ್ಕೆ ಸೇರಿದ 'ಭಟ್ಟರು' ಎಂದು ಕರೆಯಲ್ಪಡುವ ಅರ್ಚಕರು ದೇವಾಲಯದಲ್ಲಿ ವಿಭಿನ್ನತೆ ಹೊಂದಿದ್ದಾರೆ. ಈ ಪಂಗಡದವರು ವೈಷ್ಣವ ಸಮುದಾಯದಲ್ಲಿ ಜಾತಿನಿರ್ಬಂಧಗಳಿಗೆ ಗುರಿಯಾಗಿದ್ದಾರೆ. ಪೂಜಾ ಕೈಂಕರ್ಯ ಮಾಡುವ ಅರ್ಚಕ ವೃತ್ತಿಯು ಭಟ್ಟರಿಗೆ ಸೇರಿದ್ದು. ನಿಯಮನಪ್ಪಡಿಯಲ್ಲಿ ಉಲ್ಲೇಖಿಸಿರುವಂತೆ ಇವರು ರಾಮಾನುಜರಿಂದ ನಿಯಮಿಸಲ್ಪಟ್ಟವರು. ದೇವಾಲಯದ ಆದಾಯದಲ್ಲಿ ನೇರ ಪಾಲುದಾರರಾಗಿದ್ದಾರೆ. ಭಟ್ಟರು ಕೊಡುವ ತೀರ್ಥವನ್ನು ಬಿಟ್ಟು ಇನ್ನುಳಿದ ಯಾವುದೇ ಪ್ರಸಾದವನ್ನು ಉಳಿದ ಬ್ರಾಹ್ಮಣ ಪಂಗಡಗಳು ಸ್ವೀಕರಿಸುವುದಿಲ್ಲ. ಇವರೊಂದಿಗೆ ಸಹಭೋಜನ ಮಾಡುವುದಿಲ್ಲ. ಜೊತೆಗೆ ವೈವಾಹಿಕ ಸಂಬಂಧ ಮಾಡುವಂತಿಲ್ಲ. ಈ ಅರ್ಚಕರು ಪ್ರಸಾದವನ್ನು ನೈವೇದ್ಯ ಮಾಡುವಾಗ ಅದನ್ನು ಸ್ಪರ್ಶಿಸುವ ಹಾಗೂ ಇಲ್ಲ. ಇದು ಶಾಸ್ತ್ರದಲ್ಲಿ ಉಲ್ಲೇಖವಾಗಿದೆ ಎಂಬ ನಂಬಿಕೆ ಇದೆ. ದೇವರನ್ನು ಹಣಕ್ಕೆ ಮಾರುವ ಕಾರ್ಯ ಇವರು ಮಾಡುವುದರಿಂದ ಇವರನ್ನು ನಿರ್ಬಂಧಿಸಲಾಗಿದೆ ಎಂದು ಹೇಳಲಾಗುತ್ತದೆ. ಜನಶೃತಿಯಿರುವಂತೆ 'ಭಟ್ಟರು' ಎಂದು ಕರೆಯಲ್ಪಡುವ ಈ ಅರ್ಚಕವರ್ಗ ಪಂಚಮವರ್ಗದಿಂದ ವೈಷ್ಣವ ಪಂಥಕ್ಕೆ ಬಂದವರಾಗಿದ್ದಾರೆ. ಗಮನಾರ್ಹ ಅಂಶವೆಂದರೆ

ರಾಮಾನುಜರ ಕೆಲವು ಉದಾರವಾದದ ನಿಲುವುಗಳೇ ನಂತರ ಬ್ರಾಹ್ಮಣೀಯ ಧೋರಣೆಗಳಿಂದ ಮಾನ್ಯತೆ ಪಡೆಯಲಿಲ್ಲ. ಈ ರೀತಿಯ ಧಾರ್ಮಿಕ ಒಪ್ಪಂದಗಳ ಹಿಂದೆ ತಮಗಿರುವ ಸಾಮಾಜಿಕ ಮೇಲುಗೈಯನ್ನು ಉಳಿಸಿಕೊಳ್ಳಬೇಕೆನ್ನುವ ಬ್ರಾಹ್ಮಣರ ಹಂಬಲವು ಕೆಲಸ ಮಾಡಿರುವುದಕ್ಕೆ ಇದು ಸ್ಪಷ್ಟ ಉದಾಹರಣೆಯಾಗಿದೆ.

ಇಲ್ಲಿನ ಶ್ರೀ ವೈಷ್ಣವ ಬ್ರಾಹ್ಮಣರು ಇತರೆ ವಿಭಾಗದ ಬ್ರಾಹ್ಮಣರಿಗಿಂತ ಪ್ರತ್ಯೇಕವಾಗಿ ಉಳಿಯುತ್ತಾರೆ. ಅದನ್ನು ನಾವು ಅವರ ಆಹಾರ ಪದ್ಧತಿ ಮತ್ತು ಮಡಿವಂತಿಕೆಯ ಆಚರಣೆಗಳಲ್ಲಿ ನೋಡಬಹುದು. ದೇವಾಲಯದಲ್ಲಿ ತಯಾರಾಗುವ ಆಹಾರವನ್ನು ಈ ವರ್ಗವೇ ತಯಾರಿಸಬೇಕಾಗಿದ್ದು, ಮುದ್ರಾಧಾರಣೆಯಾದವರು ಮಾತ್ರ ತಯಾರಿಸಬೇಕು. ಪಾಕಶಾಲೆಗೆ ಇತರ ಜಾತಿಯ ಜನರ ಪ್ರವೇಶವಿಲ್ಲ. ಈರುಳ್ಳಿ, ಬೆಳ್ಳುಳ್ಳಿ, ಟಮೋಟೋ, ಸೊಪ್ಪುಗಳನ್ನು ಬಳಸುವುದಿಲ್ಲ. ಇತರೆ ಜಾತಿಯವರೊಂದಿಗೆ ಸಹಭೋಜನವನ್ನು ಮಾಡುವುದಿಲ್ಲ. ಆಹಾರದ ವಿಷಯದಲ್ಲಿ ಇತರ ಜಾತಿಗಳೊಂದಿಗೆ ಕಟ್ಟುನಿಟ್ಟಾದ ಅಂತರ ಎದ್ದುಕಾಣುತ್ತದೆ. ದೇವಾಲಯದಲ್ಲಿ ಪ್ರಸಾದವಿನಿಯೋಗವು ಬ್ರಾಹ್ಮಣವರ್ಗಕ್ಕೆ ಮುಗಿದ ನಂತರವೇ ಇತರೆ ವರ್ಗದ ಜನರಿಗೆ ಆಗಬೇಕು. ಮೇಲುಕೋಟೆ ದೇವಾಲಯಗಳಲ್ಲಿ ಕೆಲಸ ಮಾಡುವ ಬ್ರಾಹ್ಮಣರು ಕೆಲವು ವಿಧಿನಿಯಮಗಳನ್ನು ಪಾಲಿಸಬೇಕು. ಮೊದಲಿಗೆ ಆತ ಮುದ್ರಾಧಾರಣೆ ಮಾಡಿಸಿಕೊಂಡಿರಬೇಕು. ಶ್ರೀ ವೈಷ್ಣವರ ಗುರುತಾದ 'ಊರ್ಧ್ವಪುಂಡ್ರ' ನಾಮವನ್ನು ಧರಿಸಿರಬೇಕು, ಮದುವೆಗೆ ಮುಂಚೆ ಪಂಚೆಯನ್ನು, ನಂತರ ಕಚ್ಚೆಯನ್ನು ಉಡಬೇಕು. ನಿತ್ಯವೂ ಸ್ನಾನ, ಸಂಧ್ಯಾವಂದನೆಗಳನ್ನು ಮಾಡಬೇಕು. ಸಂಪ್ರದಾಯದಂತೆ 'ಜುಟ್ಟು' ಬಿಟ್ಟಿರಬೆಕು. ಮುಖ್ಯವಾಗಿ ಅರ್ಚಕನು ಆಚಾರ್ಯಪುರುಷನಾಗಿದ್ದು, ಆಗಮಶಾಸ್ತ್ರದ ಅರಿವಿರಬೇಕು. ಮೇಲುಕೋಟೆಯ ವೈಷ್ಣವರಿಗೆ ವೇದಗಳ ಜೊತೆಗೆ ತಮಿಳು ದ್ರಾವಿಡ ಪ್ರಬಂಧಗಳ ಪಂಚಯವಿರಲೇಬೇಕು. ಮೇಲಿನ ಹಲವು ನಿಯಮ ಪಾಲನೆಯೊಂದಿಗೆ ದೇವಾಲಯದೊಂದಿಗೆ ಸಂಬಂಧ ಇವರಿಗೆ ಹೆಚ್ಚಿನ ಗೌರವ ತಂದುಕೊಡುತ್ತಿದ್ದವು.

ಮೇಲುಕೋಟೆಯ ದೇವಾಲಯದಲ್ಲಿ ಪ್ರಮುಖವಾಗಿರಬೇಕಾದ ಅರ್ಹತೆಗಳೆಂದರೆ, ವೇದ ವೇದಾಂಗಗಳಲ್ಲಿ ಶುಕ್ಲಯಜುರ್ವೇದದ ಅಧ್ಯಾಯ ಗೊತ್ತಿರಲೇಬೇಕು. ಕಾತ್ಯಾಯನ ಗೋತ್ರದವರಾಗಿರಬೇಕು. ಜೋತಿಷ್ಯ, ಛಂದಸ್ಸಿ ಅಧ್ಯಯನ ಮಾಡಿರಬೇಕು. ಸಂಸ್ಕೃತ ಮತ್ತು ತಮಿಳುಭಾಷೆ ಗೊತ್ತಿರಬೇಕು. ಬ್ರಾಹ್ಮಣರ ಆರು ಕರ್ಮಗಳನ್ನು ಮಾಡಬೇಕು. ಅಷ್ಟೋತ್ತರ ತಿಳಿದಿದ್ದು, ಆಗಮಗಳ ಅರಿವಿರಲೇಬೇಕು.

ಮೇಲುಕೋಟೆ ದೇವಾಲಯಗಳ ಪುರೋಹಿತರನ್ನು ವೈಷ್ಣವರೆಂದೇ ಸಂಭೋಧಿಸಲಾಗುತ್ತಿತ್ತು. ಮೇಲುಕೋಟೆ ಬ್ರಾಹ್ಮಣರನ್ನು ಮೂರು ಪಂಗಡಗಳಾಗಿ

ವಿಂಗಡಿಸಬಹುದು. ಅತಿ ಮಾನವ ಬ್ರಾಹ್ಮಣರು, ಪುರೋಹಿತ ಭೋದಕ ಬ್ರಾಹ್ಮಣರು, ದೇವಾಲಯ ಸಮುಚ್ಛಯದಲ್ಲಿ ಆಡಳಿತಾತ್ಮಕ ಹಾಗೂ ಕೆಳಸೇವೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದವರು. ಆದಾಗ್ಯೂ ದೇವಾಲಯ ಸಮುಚ್ಚಯದಲ್ಲಿ ಯಾವುದೇ ಶ್ರೇಣಿಯ ಕೆಲಸವನ್ನು ನಿರ್ವಹಿಸುತ್ತಿದ್ದರೂ ಸಮಾಜದಲ್ಲಿ ಅವರಿಗೆ ಉನ್ನತವಾದ ಸ್ಥಾನಮಾನವು ಆಭಾಧಿತವಾಗುತ್ತಿತ್ತು. ಬ್ರಾಹ್ಮಣರ ಕೆಲವು ಸಂಸ್ಕಾರಗಳು ಇಲ್ಲಿ ಆಚರಿಸಲ್ಪಡುತ್ತಿದ್ದವು. ವಿಷ್ಣುಪುರಾಣದಲ್ಲಿ ವಿವರಿಸಲಾಗಿರುವ ಸಾಮಾಜಿಕ ವಿಧಿಗಳು ರೂಢಿ ಆಚರಣೆಗಳು ಹಾಗೂ ಆದರ್ಶಗಳು ಮೇಲುಕೋಟೆ ಸಾಮಾಜಿಕ ರಚನೆಯ ಮೇಲೆ ಪ್ರಭಾವ ಬೀರಿದ್ದವು. ಸೀಮಂತ, ಚೌತಕರ್ಮ, ನಾಮಕರಣ, ಚೂಡಾಕರ್ಮ, ಉಪನಯನಗಳು ಪ್ರಮುಖ ಸಂಸ್ಕಾರಗಳು, ಕೆಲವು ಸಂಸ್ಕಾರವನ್ನು ವಿವರಿಸುವ ಶಿಲ್ಪಕಲಾ ಪ್ರತಿನಿಧಿತ್ವವೂ ಕೂಡ ದೊರಕಿದೆ ಉಪನಯನ ಸಂಸ್ಕಾರವು ವೇದಗಳ ಕಾಲದಿಂದಲೂ ಅಸ್ತಿತ್ವದಲ್ಲಿದೆ. ಈ ಸಂಸ್ಕಾರವನ್ನು ಬಲರಾಮ, ಕೃಷ್ಣ ಹಾಗೂ ಸಾಗರರು ಕೈಗೊಂಡಿದ್ದನ್ನು ವಿಷ್ಣುಪುರಾಣವು ಉಲ್ಲೇಖಿಸುತ್ತದೆ. ಈ ಸಂಸ್ಕಾರದಿಂದ ಹುಡುಗನು ಬ್ರಹ್ಮಚರ್ಯಕ್ಕೆ ತನ್ನ ಪ್ರವೇಶ ಮಾಡುತ್ತಿದ್ದನು ಹಾಗೂ ಇದು ವ್ಯಕ್ತಿಯ ಎರಡನೇ ಜನನವನ್ನು ಪ್ರತಿಪಾದಿಸುತ್ತದೆ. ಈ ಆಚರಣೆಯು ವೇದಗಳು, ಶಾಸ್ತ್ರ, ಪುರಾಣ, ಮಹಾಭಾರತ ಹಾಗೂ ರಾಮಾಯಣಗಳನ್ನು ಅಧ್ಯಯನ ಮಾಡಲು ಸಾಂಕೇತಿಕ ರಹದಾರಿಯಾಗಿ ಪರಿಣಮಿಸಿತ್ತು. ಆದರೆ ಇನ್ನಿತರ ಸಂಸ್ಕಾರಗಳ ವಿಷಯಗಳಲ್ಲಿ ಪುರಾಣಗಳು ಹಾಗೂ ಶಾಸ್ತ್ರಗಳು ಬ್ರಾಹ್ಮಣರಿಗೆ ಬೇಕಾದ ಮಾರ್ಗದರ್ಶನವನ್ನು ನೀಡುತ್ತಿದ್ದವು. ಸಂಕ್ಷಿಪ್ತವಾಗಿ ಹೇಳುವುದಾದರೆ ಸೋಮನಾಥಪುರದ ಬ್ರಾಹ್ಮಣರ ಜೀವನವು ಸಾಂಪ್ರದಾಯಿಕತೆ ಮತ್ತು ಮಡಿವಂತಿಕೆಗಳ ಸೊಗಡಿನ ಆಸು ಪಾಸಿನಲ್ಲೇ ರಚಿತವಾಗಿತ್ತು. ಈ ಪ್ರವೃತ್ತಿಯ ಜೀವಂತ ಸಾಕ್ಷಿ ದೇವಾಲಯ ಕ್ರಿಯಾವಿಧಿಗಳು ಹಾಗೂ ಆಚರಣೆಗಳೇ ಸಾಕ್ಷಿ.

ಮೇಲುಕೋಟೆಯಲ್ಲಿ ಸ್ಮಾರ್ಥ ಬ್ರಾಹ್ಮಣರೂ ಕೂಡ ಇದ್ದು, ದೇವಾಲಯದಲ್ಲಿ ಉದ್ಯೋಗ ಪಡೆದಿದ್ದರು. ಸ್ಮಾರ್ಥ ಎಂಬ ಪದವು ಸಾಂಪ್ರದಾಯಿಕ ನೀತಿ ನಿಯಮಾವಳಿಗಳನ್ನೊಳಗೊಂಡ ಸ್ಮೃತಿಯಿಂದ ತೆಗೆದುಕೊಳ್ಳಲಾಗಿದೆ. ಇವರು ಶಿವನಿಗೆ ಹೆಚ್ಚು ಆಧ್ಯತೆಯನ್ನು ನೀಡುತ್ತಿದ್ದರು. ಇವರು ನಾರಾಯಣಸ್ವಾಮಿ ದೇವಾಲಯದಲ್ಲಿ ಪಂಚಾಂಗಶ್ರವಣ ಮಾಡುವರು. ಯುಗಾದಿ ಸಂಕ್ರಾಂತಿಗಳಲ್ಲಿ ಯುಗಾದಿಫಲ, ಸಂಕ್ರಾಂತಿಫಲವನ್ನು ಪಠನಮಾಡುವರು, ಆ ದಿವಸದ ತಿಥಿ, ನಕ್ಷತ್ರಗಳನ್ನು ಹೇಳುವರು. ಎಂಟನೇ ಶತಮಾನದ ಪ್ರಖ್ಯಾತ ಅದ್ವೈತ ತತ್ವ ಪ್ರತಿಪಾದಕರಾದ ಶಂಕರಾಚಾರ್ಯರ ಅನುಯಾಯಿಗಳಾಗಿದ್ದರು. ಪ್ರಾಯಶಃ ಮೇಲುಕೋಟೆಯ ಸ್ಮಾರ್ಥ ಬ್ರಾಹ್ಮಣರು ಶೃಂಗೇರಿ ಮಠಕ್ಕೆ ವಿಧೇಯತೆಯನ್ನು ತೋರಿದ್ದರು. ಆದರೆ ನಂತರದ ದಿನಗಳಲ್ಲಿ ಮಠದಿಂದ

ಹೊರಬಂದು ಪ್ರತ್ಯೇಕವಾಗಿಯೇ ಉಳಿದರು. ಶ್ರೀ ವೈಷ್ಣವರೇ ಪ್ರಬಲವಾಗಿರುವ ಮೇಲುಕೋಟೆಯಲ್ಲಿ ಈ ವರ್ಗ ನಿರ್ಲಕ್ಷಕ್ಕೊಳಗಾಗಿದೆ.

ಇಲ್ಲಿನ ಒಂದು ವಿಶಿಷ್ಟ ಸಂಪ್ರದಾಯವೆಂದರೆ 'ಶಿಷ್ಯ ಮಕ್ಕಳ' ಆಚರಣೆ ಮೇಲುಕೋಟೆ ಸುತ್ತಮುತ್ತಲಿನ ಜನರು ಬ್ರಾಹ್ಮಣರನ್ನು ತಮ್ಮ ಗುರುಗಳಾಗಿ ಸ್ವೀಕರಿಸಿದ್ದರು. ಅವರ ನಿರ್ದೇಶನದಂತೆ ನಡೆಯುತ್ತಿದ್ದರು. ಇಲ್ಲಿನ ಪ್ರಮುಖ ಬ್ರಾಹ್ಮಣರು ಗ್ರಾಮಗಳನ್ನು ತಮ್ಮಲ್ಲಿಯೇ ಹಂಚಿಕೊಂಡು ವರ್ಷಕ್ಕೊಂದಾವರ್ತಿ ಆ ಗ್ರಾಮಗಳಿಗೆ ತೆರಳಿ ಅಲ್ಲಿ ಧರ್ಮ ಪ್ರಸಾರ ಮತ್ತು ದೇವರ ಮಹಿಮೆಗಳನ್ನು ವರ್ಣಿಸುತ್ತಿದ್ದರು. ಇದರ ಪ್ರಭಾವಕ್ಕೊಳಗಾದ ಸಾಮಾನ್ಯ ಜನರು ತಮ್ಮ ಗುರುಗಳಿಗೆ ಉದಾರವಾಗಿ ದಾನ ಮಾಡುತ್ತಿದ್ದರು. ಈ ಸಂಸ್ಕೃತಿ ಇಂದಿಗೂ ಜೀವಂತವಿರುವುದು ಕಂಡುಬರುತ್ತದೆ. ಆ ಗ್ರಾಮದ ಜನರು ತಮ್ಮ ಎಲ್ಲ ನೋವು ನಲಿವುಗಳಿಗೆ ತಮ್ಮ ಗುರುಗಳನ್ನೇ ಆಶ್ರಯಿಸಿದ್ದರು. ಅವರನ್ನು ಗೌರವಿಸುತ್ತಿದ್ದು, ಅವರ ನಿರ್ದೇಶನದಂತೆ ನಡೆಯುತ್ತಿದ್ದರು.

ಹೀಗೆ ಮೇಲುಕೋಟೆ ದೇವಾಲಯಗಳಲ್ಲಿ ಶ್ರೀ ವೈಷ್ಣವ ಬ್ರಾಹ್ಮಣರು ಅತ್ಯಂತ ಪ್ರಧಾನ ಪಾತ್ರ ವಹಿಸಿದ್ದರು. ವರ್ಣವ್ಯವಸ್ಥೆಯ ಪಾಲನೆಯು ಆಚರಣೆಗಳ ಮೂಲಕ ವ್ಯಕ್ತವಾಗುತ್ತಿದ್ದವು. ದೇವಾಲಯದ ದೈವ ಕೈಂಕರ್ಯಗಳು ಗೌಪ್ಯವಾಗಿ ಕೆಲವು ಬಾರಿ ನಡೆಯುತ್ತಿದ್ದವು. ಜನರಾಡದ ಸಂಸ್ಕೃತ ಭಾಷೆಯ ಬಳಕೆ ಹೆಚ್ಚಾಗಿತ್ತು. ಬ್ರಾಹ್ಮಣರನ್ನು ಬಿಟ್ಟು ಇನ್ನುಳಿದ ಯಾವುದೇ ಜಾತಿಯ ಜನರಿಗೆ ಗರ್ಭಗೃಹ ಪ್ರವೇಶವಿಲ್ಲ. ದೇವಾಲಯದ ಹಬ್ಬ ಉತ್ಸವಗಳು ಇವರ ಮುಂದಾಳತ್ವದಲ್ಲಿಯೇ ನಡೆಯಬೇಕು. ದೇವಾಲಯದ ಇವರ ಹುದ್ದೆಗಳು ವಂಶಪರಂಪರೆಯಾಗಿ ದಕ್ಕುತ್ತಿದ್ದು, ಇಂದಿಗೂ ಅದೇ ಮಾದರಿ ಮುಂದುವರಿದಿದೆ. ಈ ಅಂಶಗಳು ವರ್ಣವ್ಯವಸ್ಥೆಯಲ್ಲಿ ಉನ್ನತಶ್ರೇಣಿಯಲ್ಲಿದ್ದ ಬ್ರಾಹ್ಮಣರು ದೇವಾಲಯದಲ್ಲಿಯೂ ಅದೇ ಸ್ಥಾನ ಉಳಿಸಿಕೊಂಡಿದ್ದರು ಎಂಬುದು ಸ್ಪಷ್ಟವಾಗುತ್ತದೆ.

ದಾನವಾಗಿ ಬರುತ್ತಿದ್ದ ಗ್ರಾಮಗಳ ಸಕಲ ಸ್ವಾಮ್ಯದ ಜೊತೆಗೆ ಶಿಷ್ಯಪರಂಪರೆಯೂ ಬ್ರಾಹ್ಮಣರಿಗೆ ಲಭ್ಯವಾಗುತ್ತಿತ್ತು. ಇದನ್ನು ಶಾಸನಗಳು ಉಲ್ಲೇಖಿಸಿದೆ. ಕ್ರಿ.ಶ. 1458ರ ಒಂದು ಶಾಸನವು 'ಶಿಷ್ಯ ಪ್ರಶಿಷ್ಯ ಪರಂಪರೆ' ಎಂದು ಉಲ್ಲೇಖಿಸಿದೆ.[44]

ಮೇಲುಕೋಟೆ ದೇವಾಲಯಗಳಲ್ಲಿ ಕೆಲವು ಶ್ರೀ ವೈಷ್ಣವರಿದ್ದು, ಅವರು ಬ್ರಾಹ್ಮಣರಾಗಿರದೆ, ದೇವಾಲಯದೊಂದಿಗೆ ಸಂಬಂಧ ಹೊಂದಿದ್ದರು. ಇವರು ರಾಮಾನುಜರ ಪ್ರಭಾವದಿಂದ ಇತರ ಜಾತಿಗಳಿಂದ ಬಂದವರಾಗಿದ್ದು. ಶ್ರೀ ವೈಷ್ಣವರಾಗಿದ್ದಾರೆ. ಕಂಚಿ ದೇವಾಲಯದಲ್ಲಿ ನಂಬಿ ಮತ್ತು ದಾಸರು ಎಂಬ ಗುಂಪು ಸೇವೆ ಸಲ್ಲಿಸುತ್ತಿದ್ದವು.[45] ಅವರೇ ನಂತರ ಶಾತ್ತಾದ ಶ್ರೀ ವೈಷ್ಣವರೆಂದು ಕರೆಯಲ್ಪಟ್ಟರು. ಇವರು ಪವಿತ್ರ ಜನಿವಾರವನ್ನು

ಧರಿಸುವಂತಿಲ್ಲ. ವೇದ ವೇದಾಂತ ಅಧ್ಯಯನದ ಅರ್ಹತೆ ಪಡೆದಿದ್ದರೂ ಅದರ ಫಲವನ್ನು ನಿರಾಕರಿಸಲ್ಪಟ್ಟಿದ್ದರು. ದ್ರಾವಿಡ ವೇದಗಳನ್ನು ಓದಲು ವ್ಯಕ್ತಿ ಪವಿತ್ರ ಜನಿವಾರ ಧರಿಸಬೇಕು. ಮೇಲುಕೋಟೆಯಲ್ಲಿ ಇವರನ್ನು 'ಬೇತಮಂಗಳದ ಶಾತ್ತಾದವರು' ಎಂದು ಕರೆಯುತ್ತಿದ್ದರು. ಇವರು ಬ್ರಾಹ್ಮಣರಂತೆ ತಿಲಕವನ್ನಿಡುತ್ತಿರಲಿಲ್ಲ.[46] ಶಾತ್ತಾದವರು ತಮ್ಮ ಪ್ರತಿಭೆಯಿಂದ ಗುರುತಿಸಲ್ಪಟ್ಟಿದ್ದರು. ಅವರು ಜ್ಯೋತಿಷ್ಯ, ಔಷಧ, ಸಂಗೀತ, ನೃತ್ಯ ಮತ್ತು ಅಲಂಕಾರಕ ಕಲೆಯಲ್ಲಿ ನಿಪುಣತೆ ಪಡೆದಿದ್ದರು. ಅವರು ಭಗವಂತನ ಭಜನೆ ಮತ್ತು ಕಾಲಕ್ಷೇಪ ಮಾಡುತ್ತಿದ್ದರು. ನೃತ್ಯ ಮತ್ತು ಅಭಿನಯಗಳನ್ನು ಮಾಡುತ್ತಿದ್ದರು.

ಮೇಲುಕೋಟೆಯಲ್ಲಿ 3ನೇ ಬಲ್ಲಾಳನ ಕಾಲದ ಒಂದು ಶಾಸನ ಲಕ್ಷ್ಮಣದಾಸನಿಗೆ ನೀಡಿದ ಭೂಮಿಯ ದಾನವನ್ನು ಉಲ್ಲೇಖಿಸಿದೆ. ಇದು ಹೂವುಗಳನ್ನು ನಾರಾಯಣ ಸ್ವಾಮಿದೇವರಿಗೆ ನೀಡಲು ನೀಡಿರುವುದು ಸ್ವಷ್ಟವಾಗುತ್ತದೆ. ತೊಂಡನೂರಿನ ಒಂದು ಶಾಸನ ತಿರುವರಂಗದಾಸನ ಕುರಿತು ಮಾಹಿತಿ ನೀಡಿದೆ.[47] ಇದಲ್ಲದೆ ಇನ್ನೂ ಎರಡು ಶಾಸನಗಳು ಹೇಳುವಂತೆ ಕೆಲವು ಭೂಮಿಯನ್ನು ನರಸಿಂಹ ದೇವರಿಗೆ ರಾಜನಿಂದ ತಿರುವರಂಗದಾಸ ಪಡೆದಿದ್ದಾನೆ.[48] ಇನ್ನೊಂದು ದಾಖಲೆ 1196 ಕ್ರಿ.ಶ. ಲಕ್ಷ್ಮಿನಾರಾಯಣ ದೇವಾಲಯದ ಶ್ರೀ ವೈಷ್ಣವ ಉತ್ತಮನಂಬಿ ಎಂಬ ಹೆಸರನ್ನು ಹೊಂದಿದೆ.[49] ಮತ್ತೊಂದು ಶಾಸನ 1223 ಕ್ರಿ.ಶ. ಕಾಲದ್ದಾಗಿದ್ದು, ಕುಲಶೇಖರದಾಸನು ಲಕ್ಷ್ಮಿನಾರಾಯಣ ದೇವಾಲಯದ ಮಹಾಜನರಿಂದ ಭೂಮಿ ಪಡೆದಿದ್ದಾರೆ. ಇವು ಶ್ರೀ ವೈಷ್ಣವ ಸಮಾಜದಲ್ಲಿ ಇವರು ಉನ್ನತ ಸ್ಥಾನದಲ್ಲಿದ್ದರು ಎಂಬುದನ್ನು ಸ್ವಷ್ಟಪಡಿಸುತ್ತವೆ.

ದೇವಾಲಯದ ಅಗತ್ಯಗಳಾಗಿದ್ದ ಕುಂಕುಮ ತಯಾರಿಕೆ, ನಾಮತಯಾರಿಕೆಯನ್ನು ಗೃಹ ಕೈಗಾರಿಕೆಯಾಗಿ ನಂಬಿದ್ದರು. ಮಾರುತಿ ಮಂಟಪಗಳ ಅಲಂಕಾರ, ದೇವರ ಉತ್ಸವ ವಾಹನಗಳ ತಯಾರಿಕೆ, ದೇವರ ಚಿತ್ರಬಿಡುಸುವಿಕೆಯಲ್ಲಿ ಪರಿಣತಿಪಡೆದಿದ್ದರು. ರಾಮಾನುಜರಿಂದ ಮೇಲುಕೋಟೆ ದೇವಾಲಯಗಳಲ್ಲಿ ವೃತ್ತಿ ಪಡೆದರು. ಆಚಾರ್ಯರ ಸಿದ್ಧಾಂತದಲ್ಲಿ ನಂಬಿಕೆ ಹೊಂದಿದ್ದರು. ದೇವಾಲಯ ರಕ್ಷಣೆ ಮತ್ತು ಅದರ ಆಸ್ತಿ ರಕ್ಷಣೆಯ ಜವಾಬ್ದಾರಿ ಹೊಂದಿದ್ದರು. ಹೂಮಾಲೆಗಳ ತಯಾರಿಕೆಯಲ್ಲಿ ಪರಿಣತಿ ಪಡೆದಿದ್ದು ಅದನ್ನು ದೇವರಿಗೆ ಅರ್ಪಿಸುವ ಕಾರ್ಯ ಇವರದ್ದಾಗಿತ್ತು. ದೇವರ ಉತ್ಸವಗಳ ಪಾಲ್ಗೊಂಡು ಅಲಂಕರಿಸುವಲ್ಲಿ ಆಸಕ್ತಿ ಹೊಂದಿದ್ದರು. ಮಹಿಳೆಯರು ಸಹ ದೇವಾಲಯದ ಆವರಣ ಸ್ವಚ್ಛ ಮಾಡುವಲ್ಲಿ ತೊಡಗಿಸಿಕೊಳ್ಳುತ್ತಿದ್ದರು. ರಂಗೋಲಿ ಮತ್ತು ಚಿತ್ರ ಬಿಡುವ ಕಾರ್ಯವು ಮಹಿಳೆಯರದಾಗಿತ್ತು. ಶಾತ್ತಾದವರು ಬಲಿಜ ಮತ್ತು ಕೋಮಾಟಿ (ತಿಥಿ) ಗಳಲ್ಲಿ ಪೂಜಾರಿಗಳಾಗಿ ಕಾರ್ಯಮಾಡುತ್ತಿದ್ದರು. ಮೇಲುಕೋಟೆಯ ಹಲವು ಹನುಮಂತ ದೇವಾಲಯಗಳ ಪೂಜಾರಿಗಳ ಸ್ಥಾನ ಪಡೆದಿದ್ದರು, ಇಂದಿಗೂ ಇದು ಮುಂದುವರೆದಿದೆ.

ದೇವಾಲಯದ ದ್ವಾರಗಳಲ್ಲಿ ರಾತ್ರಿವೇಳೆ ಕಾಯುವ ಮತ್ತು ಅಭಿನಯ ಕಲೆಯನ್ನು ಕಲಿತು ಪದರ್ಶಿಸುತ್ತಿದ್ದರು. ಅದಲ್ಲದೆ ವ್ಯಾಪಾರ ಮತ್ತು ಕೃಷಿಯಲ್ಲಿಯೂ ತೊಡಗಿಸಿಕೊಂಡಿದ್ದರು.

ಇಲ್ಲಿ ಗಮನಾರ್ಹ ಅಂಶವೆಂದರೆ, ಬ್ರಾಹ್ಮಣ ಮತ್ತು ಬ್ರಾಹ್ಮಣೇತರರ ನಡುವೆ ಈ ಶ್ರೇಣಿಯ ಬೆಳವಣಿಗೆಯು ಸಮಸ್ಯೆಯನ್ನು ತಂದೊಡ್ಡಿತು. ಶಾತ್ತಾದಾರರು ಅಗ್ನಿಪುರಾಣದಂತೆ ಬ್ರಾಹ್ಮಣರೆಂದು ಅಂಗೀಕರಿಸಲ್ಪಟ್ಟರು.[50] ಆದರೆ ಅವರು ಪವಿತ್ರ ಜನಿವಾರ ಹಾಗೂ ವೇದಾಧ್ಯಯನವನ್ನು ಬಹಳ ದಿನಗಳವರೆಗೆ ತಿರಸ್ಕರಿಸಲ್ಪಟ್ಟಿದ್ದರು.[51] ನಂತರ ದೇವಾಲಯದಲ್ಲಿ ಬ್ರಾಹ್ಮಣೇತರರಿಗಿಂತ ಉನ್ನತ ಹಂತವನ್ನು ಸ್ವೀಕರಿಸಿದರು. ಈ ಬೆಳವಣಿಗೆಗಳು ಪ್ರಗತಿಯಲ್ಲಿರುವಾಗ ಬ್ರಾಹ್ಮಣರ ಹಳೆಯ ಹವ್ಯಾಸಗಳು ಪುನರುಜ್ಜೀವನಗೊಂಡು, ಮತ್ತೆ ಬ್ರಾಹ್ಮಣೀಯತೆ ಪ್ರಾಬಲ್ಯವಾಯಿತು. ಆದರೆ ರಾಮಾನುಜರು ಶಾತ್ತಾದವರನ್ನು ಪ್ರೀತಿ ಆಧಾರಗಳಿಂದ ಸ್ವೀಕರಿಸಿದ್ದರು. ಇಂದು ಮೇಲುಕೋಟೆ ದೇವಾಲಯದಲ್ಲಿ ಮೇಲಿನ ಹಲವು ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದರು.

ಶಾತ್ತಾದವರು ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿದ್ದಾರೆ. ಮಹತ್ವದ ದಿನಗಳಲ್ಲಿ ಭಕ್ತಾಧಿಗಳಂತೆ ಬಂದು ತೆರಳುತ್ತಾರೆ. ಇವರು ಮಾಡುತ್ತಿದ್ದ ಕೆಲಸಗಳು ಇನ್ನಿತರ ಜಾತಿಗಳಿಗೆ ಹಂಚಲ್ಪಟ್ಟಿವೆ. ಈ ವರ್ಗದ ಪಾಲ್ಗೊಳ್ಳುವಿಕೆಯ ಸಂಖ್ಯೆ ಕಡಿಮೆಯಾದಂತೆ ನೃತ್ಯ, ಚಿತ್ರಕಲೆ, ಅಲಂಕರಣ, ಉತ್ಸವಗಳಲ್ಲಿದ್ದ ವೈಭವಗಳು ಕಡಿಮೆಯಾದಂತೆ ತೋರುತ್ತದೆ.

ಮೇಲುಕೋಟೆ ಶಾಸನಗಳಲ್ಲಿ ಉಲ್ಲೇಖಿಸಿರುವಂತೆ ಕೆಲವು ಇತರ ಜಾತಿಯ ಹೆಸರುಗಳು ಕಂಡುಬರುತ್ತವೆ. ಇವು ಇತರ ಜಾತಿಗಳಿಗೆ ಸೇರುವ ಸಾಧ್ಯತೆಗಳಿವೆ. 1368 ಕ್ರಿ.ಶ.ದ ಒಂದು ಶಾಸನದಂತೆ ಕಮ್ಮಾರ ರಾಮೋಜ ಎಂಬ ಹೆಸರು ಉಲ್ಲೇಖಗೊಂಡಿದೆ. ಇದು ಬಹುಷಃ ಚಿನ್ನದ ಕೆಲಸಗಾರನ ಹೆಸರಾಗಿದೆ.[52] ಇನ್ನೊಂದು ಶಾಸನವು ಲಕ್ಷಿಪತಿಸೆಟ್ಟಿ, ತಿಬ್ಬಸೆಟ್ಟಿಯವರ ಹೆಸರನ್ನು ದಾಖಲಿಸಿದೆ.[53] ಇವರು ದೇವಾಲಯಕ್ಕೆ ಸೇರಿದ ಒಂದು ಕೆರೆಯನ್ನು ದುರಸ್ತಿ ಮಾಡಿಸಿದ್ದಾರೆ. ಸೆಟ್ಟಿ ಸೂಚಿಸುವಂತೆ ಬಹುಶಃ ಇವರು ವರ್ತಕ ವರ್ಗಕ್ಕೆ ಸೇರಿದವರಾಗಿದ್ದಾರೆ.

ಮೇಲುಕೋಟೆಯಲ್ಲಿ ಇನ್ನಿತರ ಬ್ರಾಹ್ಮಣೇತರ ಜಾತಿಗಳ ಪಾಲ್ಗೊಳ್ಳುವಿಕೆಯ ಕುರಿತು ಯಾವುದೇ ಶಾಸನಾಧಾರಗಳು ಸಿಗುವುದಿಲ್ಲ. ದೇವಾಲಯದ ಕೈಪಿಡಿ ಹಾಗೂ ರೂಢಿಯಲ್ಲಿರುವ ಸಂಪ್ರದಾಯಗಳೇ ಇಲ್ಲಿ ಪ್ರಬಲ ಆಧಾರಗಳಾಗಿವೆ. ಆಗಮಗಳಲ್ಲಿ ಉಲ್ಲೇಖಿತವಾಗಿರುವಂತೆ ಆಲಯಾಶ್ರಿತ ಗ್ರಾಮವಾದ ಮೇಲುಕೋಟೆಯಲ್ಲಿ ವಾಸಿಸುವ ಎಲ್ಲಾ ಜಾತಿಗಳು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಂಬಂಧ ಹೊಂದಿವೆ. ಶ್ರೇಣೀಕೃತ ವ್ಯವಸ್ಥೆಯಲ್ಲಿ ಕೊನೆಯವರಾಗಿದ್ದ ಇವರು ದೇವಾಲಯದಲ್ಲಿಯೂ ಅದೇ ರೀತಿಯ ಶ್ರೇಣಿಗೆ

ಹೊಂದಿಸಲ್ಪಟ್ಟಿದ್ದರು. ಶೂದ್ರರು ಸಾಮಾನ್ಯವಾಗಿ ಹಿಂದೂ ಸಮಾಜದಲ್ಲಿ ನಾಲ್ಕನೆಯ ಜಾತಿ ಎಂದು ಪರಿಗಣಿತವಾಗಿದ್ದರು. ಮೇಲುಕೋಟೆಯಲ್ಲಿಯೂ ಈ ಅಂಶವು ಸ್ಪಷ್ಟವಾಗುತ್ತದೆ. ಇವತ್ತಿಗೂ ಮೇಲುಕೋಟೆ ದೇವಾಲಯಗಳಲ್ಲಿ ವಿವಿಧ ಜಾತಿಯ ಜನರು ದೈಹಿಕ ಸೇವೆಯನ್ನು ದೇವಾಲಯಕ್ಕೆ ಮಾಡುತ್ತಿದ್ದಾರೆ. ಇದು ಕೇವಲ ಸಂಭವನೀಯವಲ್ಲದೆ ಇದೇ ಪರಿಸ್ಥಿತಿಯು ಹಿಂದಿನಿಂದಲೂ ನಡೆದುಬಂದಿರುತ್ತದೆ.

ಮೇಲುಕೋಟೆಯಲ್ಲಿ ಮತ್ತೊಂದು ಸಾಮಾಜಿಕ ಗುಂಪಾದ ವೈಶ್ಯರು ನೆಲೆಸಿದ್ದರು. ವೈಶ್ಯರಲ್ಲಿ ಹಿಂದೂ ಸಮಾಜದಲ್ಲಿ ತೃತೀಯ ಜಾತಿಯೆಂದು ಪರಿಗಣಿಸಲಾಗಿತ್ತು. ಇಲ್ಲಿ ಅವರು ಶೆಟ್ಟಿಗಳು ಅಥವಾ ವರ್ತಕರಾಗಿದ್ದರು. ಈ ಜಾತಿಯ ಬಗ್ಗೆ ದೇವಾಲಯದ ಶಿಲ್ಪಗಳಲ್ಲಾಗಲೀ ಅಥವಾ ಶಾಸನಗಳಲ್ಲಿ ಹೆಚ್ಚಿನ ಸುಳಿವು ದೊರೆತಿಲ್ಲ. ಈ ಬಗೆಯ ಅನುಪಸ್ಥಿತಿಯ ಕಾರಣವು ಮೇಲುಕೋಟೆಯು ಹೆಚ್ಚಾಗಿ ಬ್ರಾಹ್ಮಣರಿಂದ ಕೂಡಿದ ಸ್ಥಳವಾಗಿತ್ತು. ಆದರೂ ಪರೋಕ್ಷವಾಗಿ ದೇವಾಲಯ ಸಮುಚ್ಚಯದಲ್ಲಿ ವ್ಯಾಪಾರೀ ವೈಶಿಷ್ಟತೆಗಳು ಪ್ರಬಲವಾಗಿ ಕಂಡುಬರುತ್ತಿದ್ದವು. ಏಕೆಂದರೆ ಮೇಲುಕೋಟೆಯಲ್ಲಿ ಕೃಷಿಯೇತರ ಉತ್ಪನ್ನಗಳಿಗೆ ಬಹಳಷ್ಟು ಪ್ರಮಾಣದ ಬೇಡಿಕೆ ಇತ್ತು. ಮೇಲುಕೋಟೆಯಲ್ಲಿ ಈ ಕೃಷಿಯೇತರ ಉತ್ಪನ್ನಗಳನ್ನು ಉತ್ಪಾದಿಸದಿದ್ದರಿಂದ ಇವುಗಳನ್ನು ಸ್ಥಳೀಯ ವರ್ತಕರು ಆಮದು ಮಾಡಿಕೊಂಡಿರಬೇಕು. ಶೆಟ್ಟಿಗಳು ಮೇಲುಕೋಟೆ ದೇವಾಲಯ ಸಮುಚ್ಚಯದ ಭಾಗವಾಗಿದ್ದರು ಎಂಬುದು ಸಂಭವನೀಯವಾಗಿದೆ.

ಕೆಲವು ಶೆಟ್ಟರು ನೇಕಾರವೃತ್ತಿಯನ್ನು ಮಾಡುತ್ತಿದ್ದು, ದೇವರಿಗೆ ಅಗತ್ಯವಾದ ರೇಷ್ಮೆ ಮತ್ತು ಹತ್ತಿಬಟ್ಟೆಯ ಅಗತ್ಯತೆಯನ್ನು ಪೂರೈಸುವ ಮೂಲಕ ಪರೋಕ್ಷವಾಗಿ ದೇವಾಲಯದೊಂದಿಗೆ ಸಂಬಂಧ ಹೊಂದಿದ್ದರು. ಮಹಿಳೆಯರು ದೇವಾಲಯದ ಅಗತ್ಯವಾಗಿದ್ದು ಊಟದ ಎಲೆಯನ್ನು ಹೆಣೆಯುತ್ತಿದ್ದರು. ಅದನ್ನು ಅವರು ದೇವರಸೇವೆಯೆಂದು ಭಾವಿಸಿದ್ದರು. ಇವು ಉದ್ಯಮವಾಗಿ ಬೆಳೆದಿದ್ದು ಇಂದಿಗೂ ಜೀವಂತವಾಗಿವೆ. ನೇಕಾರ ವರ್ಗವನ್ನು ದೇವಾಲಯ ಪ್ರವೇಶದಿಂದ ನಿರ್ಬಂಧಿಸಿದ್ದ ಅಂಶ ತಿಳಿದುಬರುತ್ತದೆ. ಏಕೆಂದರೆ ಶೀತಪ್ರದೇಶವಾಗಿದ್ದ ಮೇಲುಕೋಟೆಯಲ್ಲಿ ಭೂಮಟ್ಟಕ್ಕಿಂತ ಕೆಳಗೆ ನಿಂತು ಬಟ್ಟೆನೇಯುವ ತಾಂತ್ರಿಕತೆ ಇತ್ತು. ಆಗ ದೇಹವನ್ನು ಶೀತದಿಂದ ರಕ್ಷಿಸಲು ಈ ವರ್ಗ ಮದ್ಯಪಾನಮಾಡುತ್ತಿದ್ದ ಕಾರಣ ದೇವಾಲಯ ಪ್ರವೇಶ ನಿಷಿದ್ಧವಾಗಿತ್ತು ಎನ್ನಲಾಗಿದೆ. ಇಂದು ಈ ರೂಢಿಯು ಜಾರಿಯಲ್ಲಿಲ್ಲ.

ರಾಮಾನುಜರ ಪ್ರಭಾವದಿಂದ ದೇವಾಲಯಕ್ಕೆ ಹೊಂದಿಸಲ್ಪಟ್ಟ ವಿವಿಧ ಜಾತಿಗಳು ನಂತರವೂ ಅದೇ ಸ್ಥಿತಿಯನ್ನು ಉಳಿಸಿಕೊಂಡಿವೆ. ಇಲ್ಲಿ ವಾಸಿಸುತ್ತಿದ್ದ ಪ್ರಮುಖ ಶೂದ್ರ

ಜಾತಿಗಳೆಂದರೆ, ನೇಕಾರರು (ಶೆಟ್ಟರು) ಅಗಸರು, ಮಡಿವಾಳರು, ಗಾಣಿಗರು, ಒಕ್ಕಲಿಗರು, ಕ್ಷೌರಿಕರು (ನಯನ ಕ್ಷತ್ರಿಯರು), ಪಂಚಮರು, ಕಮ್ಮಾರರು, ಕುರುಬರು, ಇವರು ಸೇವಕ ಹುದ್ದೆಗಳನ್ನು ಹೊಂದಿದ್ದರೂ, ಸೇವಾಮನೋಭಾವ ಹಾಗೂ ದೇವರ ಮೇಲಿನ ಭಕ್ತಿ ಎದ್ದುಕಾಣುತ್ತದೆ.

ರೂಢಿಯಲ್ಲಿರುವಂತೆ ಮೇಲುಕೋಟೆ ಪ್ರಧಾನ ದೇವಾಲಯಗಳಾದ ನಾರಾಯಣಸ್ವಾಮಿ ಮತ್ತು ಯೋಗಾನರಸಿಂಹಸ್ವಾಮಿ ದೇವಾಲಯಗಳಲ್ಲಿ ಇವರ ಕೆಲಸಗಳು ಮುಂದಿನಂತಿವೆ. ದೇವಾಲಯದ ನೌಕರರನ್ನು 6 ತರಗತಿಗಳಾಗಿ ವಿಭಾಗಿಸಿದ್ದು ಅದರಲ್ಲಿ 3, 4, 5, 6 ನೇ ತರಗತಿಗಳಲ್ಲಿ ಶೂದ್ರ ವರ್ಗದ ನೌಕರರು ಕಂಡುಬರುತ್ತಾರೆ. ಅಂಗಲೀಕ ಎಂದು ಕರೆಯಲ್ಪಡುವ ಕಾವಲುಗಾರ ಹುದ್ದೆ ಮಹತ್ವ ಪಡೆದಿದೆ. ಸನ್ನಿಧಿಯಲ್ಲಿ, ಉಗ್ರಾಣದಲ್ಲಿ, ಗೋಪುರದಲ್ಲಿ ಪ್ರಮುಖ ಬಾಗಿಲುಗಳಲ್ಲಿ, ಪ್ರತ್ಯೇಕ ಕಾವಲುಗಾರರಿರುತ್ತಾರೆ. ದೀಪಹಚ್ಚುವ ಮತ್ತು ದೀವಟಿಗಳನ್ನು ಹಿಡಿಯುವ ಕೆಲಸ ಗಾಣಿಗ ಜಾತಿಯವರದಾಗಿದೆ. ದೇವಾಲಯದ ರಕ್ಷಣೆಯ ಕೆಲಸ ಹವಾಲ್‌ದಾರ್ ಶಿಪಾಯಿಗಳದ್ದಾಗಿದ್ದು ಕೆಳವರ್ಗದ ಎಲ್ಲಾ ಪಂಗಡಗಳು ಈ ಹುದ್ದೆಯಲ್ಲಿದ್ದರು. ದೇವರ ವಾಹನ, ಛತ್ರಿ, ರಥ, ಮುಂತಾದ ಕೆಲಸಗಳಿಗೆ ಬಂಡಿಕಾರರು (ಒಕ್ಕಲಿಗರು) ನೇಮಕವಾಗಿದ್ದರು. ಮೊದಲು ಈ ಕೆಲಸಗಳು ಶಾತ್ತಾದ ಶ್ರೀ ವೈಷ್ಣವರಾಗಿದ್ದು ಅವರ ಪಾತ್ರ ಕಡಿಮೆಯಾದರಂತೆ ಬಂಡಿಕಾರರಿಗೆ ವರ್ಗಾವಣೆಯಾಗಿವೆ. ದೇವರಿಗೆ ಚಪ್ಪರ, ತೇರುಕಟ್ಟುವ, ಛತ್ರಿಹಿಡಿಯುವ, ಉತ್ಸವದಲ್ಲಿ ದೇವರನ್ನು ಹೊರುವ ಜವಾಬ್ದಾರಿ ಇವರದಾಗಿದೆ. ಅಲ್ಲದೆ ಊರಿನ ಬ್ರಾಹ್ಮಣ ಕುಟುಂಬಗಳಲ್ಲಿ ಶುಭಕಾರ್ಯಗಳಲ್ಲಿ ಅವರ ಮನೆ ಮುಂದೆ ಚಪ್ಪರ ಮತ್ತು ಕುರ್ಚಿ ಕಟ್ಟುವ ಕೆಲಸಗಳನ್ನು ಮಾಡಬೇಕು. ಐದನೇ ತರಗತಿಯ ನೌಕರಿಯಲ್ಲಿ ಜವಾನ ಹುದ್ದೆಯು ಅಗಸರು ನೇಮಕವಾಗಿದ್ದು ಊಳಿಗದವರು ಎಂದು ಕರೆಯಲ್ಪಡುವರು. ದೇವಾಲಯದ ಬಟ್ಟೆ ಮಡಿಮಾಡುವ ಕೆಲಸ ದೋಬಿಯದಾಗಿದೆ. ಉತ್ಸವಗಳಲ್ಲಿ ಇಲಾಲ್ (ಪಂಜು) ಹತ್ತಿಸುವ ಕುಳ್ಳಾಲಿಯು ಅಗಸ ಜಾತಿಗೆ ಸೇರಿದವನಾಗಿದ್ದನು. ದೇವಾಲಯದ ತೋಟಗಳಲ್ಲಿ ಆಳುಗಳಾಗಿ ಕೆಲಸ ಮಾಡುತ್ತಿದ್ದ ವರ್ಗವು ಶೂದ್ರ ಜಾತಿಯದೇ ಆಗಿತ್ತು. ರಂಗಮಂಪಟ ಗುಡಿಸುವ ಸಾರಿಸುವ ಶುಚಿಯಾಗಿಡಲು ದೇವದಾಸಿಗಳನ್ನು ನೇಮಿಸಲಾಗಿತ್ತು. ದೇವಾಲಯದ ಒಳಗೆ ಹೊರಗೆ ಗುಡಿಸುವ ಕೆಲಸ ಝಾಡಮಾಲಿಗಳದ್ದಾಗಿತ್ತು. ಉಗ್ರಾಣದ ದಿನಸಿ ಶುಚಿಮಾಡುವ ಹಾಗೂ ಉತ್ಸವಗಳಿಗೆ ಬೇಕಾದ ಅಗತ್ಯ ಸಾಮಾನು ಒರಗಿಸುವ ಕೆಲಸ ಕಂಬಳಗಿತ್ತಿಯದ್ದಾಗಿತ್ತು. ಆರನೇಯ ತರಗತಿಯ ನೌಕರರು ನಯನಕ್ಷತ್ರಿಯರಾಗಿದ್ದರು (ಗಾವುಂಡರು) ದೇವಾಲಯದಲ್ಲಿ ಸೇವಾ ವೇಳೆಗಳಲ್ಲಿ ಓಲಗ ಮುಂತಾದ ವಾದ್ಯಗಳನ್ನು ಆಲಯದ ಅಧಿಕಾರಿಗಳು ನಿಯಮಿಸಿದಂತೆ ನುಡಿಸಬೇಕು. ಹೀಗೆ ದೈಹಿಕವಾಗಿ ಶ್ರಮದಾಯಕ ಹಾಗೂ

ಕೆಳದರ್ಜೆಯ ಹುದ್ದೆಗಳು ಶೂದ್ರವರ್ಗಕ್ಕೆ ಸೀಮಿತವಾಗಿದ್ದವು. ಇಲ್ಲಿ ನೆಲೆಸಿದ್ದ ಗಾಣಿಗಜಾತಿಯ ಜನರು ದೇವಾಲಯದ ಪ್ರಮುಖ ಅಗತ್ಯವಾದ ಎಣ್ಣೆಯನ್ನು ತೆಗೆದು ಒದಗಿಸುತ್ತಿತ್ತು.

ಮೇಲುಕೋಟೆಯ ಸಾಮಾಜಿಕ ಜೀವನವನ್ನು ಸ್ಪಷ್ಟವಾಗಿ ನಿರ್ಧರಿಸುವುದು ಕಷ್ಟವಾದರೂ, ದೇವಾಲಯವನ್ನೇ ನಂಬಿ ಬದುಕುತ್ತಿದ್ದ ಇಲ್ಲಿನ ಜನರ ಜೀವನ ಜಾತಿಯ ಆಧಾರದ ಮೇಲೆಯೇ ನಿರ್ಧರಿತವಾಗುತ್ತಿತ್ತು. ಇದಕ್ಕೆ ಸಂಬಂಧಿಸಿದಂತೆ ಕೆಲವು ಸಾಮಾನ್ಯ ಆಲೋಚನೆಗಳನ್ನು ಮಾಡಬಹುದು. ಮೇಲುಕೋಟೆ ನಾರಾಯಣಸ್ವಾಮಿ ದೇವಾಲಯದ ಕೈಪಿಡಿಯು ದೇವಾಲಯದ ಸಿಬ್ಬಂದಿಗಳ ಕುರಿತಾದ ವೇತನವನ್ನು ಪಟ್ಟಿಮಾಡಿದೆ. ಇದು ಹಲವು ವರ್ಗಗಳ ಮಾಹಿತಿ ನೀಡುತ್ತದೆ. ಸಿಬ್ಬಂದಿಗಳ ವೇತನವು ಅವರ ದರ್ಜೆ, ಪ್ರತಿಷ್ಠೆ ಮತ್ತು ಜವಾಬ್ದಾರಿಗಳಿಗೆ ಹೊಂದಿಕೆಯಾಗುವಂತಿದೆ. ಉದಾಹರಣೆಗೆ, ಆಲಯದ ಪೇಷ್ಕಾರನು ಮಾಸಿಕ 65 ರೂ. ಪಡೆಯುತ್ತಿದ್ದನು. ಅರ್ಚಕನು 12 ರೂ. ಸಂಬಳ ಪಡೆಯುತ್ತಿದ್ದನು. ಒಬ್ಬ ಕಾವಲುಗಾರ 4 ರೂ. ಹಾಗೂ ಝಾಡಮಾಲಿಯು 3 ರೂ. 12 ಆಣೆ ಪಡೆಯುತ್ತಿದ್ದರು.[54]

ಜೀವನ ಮಟ್ಟದ ದೃಷ್ಟಿಯಿಂದ ನೋಡುವುದಾದರೆ ಕಾವಲುಗಾರ ಮತ್ತು ಝಾಡಮಾಲಿಯು ಪೇಷ್ಕಾರ ಮತ್ತು ಅರ್ಚಕನಿಗಿಂತ ಕೆಳಗಿನ ಸ್ಥಾನದಲ್ಲಿದ್ದನು. ಆದರೆ ಉಳಿದಂತೆ ವೇತನದಲ್ಲಿ ಹೆಚ್ಚಿನ ವ್ಯತ್ಯಾಸಗಳಿರಲಿಲ್ಲ. ಮೇಲುಕೋಟೆಯ ನಾರಾಯಣಸ್ವಾಮಿ ದೇವಾಲಯದಿಂದ ಕೊಡುವ ಉಚಿತ ಸ್ಥಳವಾಸದ ಅಕ್ಕಿ ಮತ್ತು ಭಟಮಾನ್ಯಗಳು ಬ್ರಾಹ್ಮಣವರ್ಗಕ್ಕೆ ಬಿಟ್ಟು ಇನ್ನುಳಿದ ಯಾವ ಜಾತಿಯ ನೌಕರರಿಗೆ ಹಾಗೂ ಇತರ ಜಾತಿಯ ಸ್ಥಳವಾಸಿಗಳಿಗೆ ಇಲ್ಲ. ದೇವಾಲಯದಲ್ಲಿ ನಿತ್ಯಕಟ್ಲೆಯ ಮತ್ತು ಹೆಚ್ಚು ಕಟ್ಲೆ ಉತ್ಸವಗಳಲ್ಲಿ ಆಗುವ ಪ್ರಸಾದ ವಿನಿಯೋಗದ ಸಿಂಹಪಾಲು ಬ್ರಾಹ್ಮಣವರ್ಗಕ್ಕೆ ಸೀಮಿತವಾಗಿದ್ದು, ಕೆಳವರ್ಗದ ನೌಕರರಿಗೆ ಅಲ್ಪಪಾಲು ಮಾತ್ರ ಲಭ್ಯವಾಗುತ್ತದೆ.

ದೇವಾಲಯದಲ್ಲಿ ನೌಕರಿ ಪಡೆದಿರುವ ಕೆಲವು ಶೂದ್ರವರ್ಗಗಳಿಗೆ ಸಿಗುವ ಗೌರವಗಳು ಮುಂದಿನಂತಿವೆ. ಕೆಲವು ಉತ್ಸವಗಳಲ್ಲಿ ನಿಗಧಿತ ಜಾತಿಯ ಪ್ರಾಮುಖ್ಯತೆಗಳನ್ನು ನೋಡಬಹುದು. ಬ್ರಹ್ಮೋತ್ಸವದ ಸಂದರ್ಭದಲ್ಲಿ ಪಾಂಚರಾತ್ರ ಆಗಮೋಕ್ತ ಕ್ರಮದಿಂದ ದೇವತೆಗಳ ಆಹ್ವಾನ ನಡೆಯುವಾಗ ಬೇರಿತಾಡನ ಮಾಡುವ ಕೆಲಸ ದೇವದಾಸಿ ಪುತ್ರನಿಗೆ ಸೇರಿದೆ. ದಾಸೀಪುತ್ರರ ಶಂಕ, ತಾಳ, ಮದ್ದಳೆಗಳನ್ನು ನಾರಾಯಣಸ್ವಾಮಿ ದೇವಾಲಯದಲ್ಲಿ ವರ್ಷಕ್ಕೊಮ್ಮೆ ಪೂಜೆ ಮಾಡುವರು. ಬೇರಿತಾಡನದ ದಿನ ವಾದ್ಯಗಾರರಿಗೆ ಮೂಲೆಮರ್ಯಾದೆ ನಡೆಯುತ್ತದೆ. ವಸಂತೋತ್ಸವದಲ್ಲಿ ಕಾವಲುಗಾರನಿಗೆ ಮರ್ಯಾದೆ ಮಾಡುವರು. ರಥೋತ್ಸವ ಮತ್ತು ತೆಪ್ಪೋತ್ಸವದ ದಿನ ಬಂಡಿಕಾರರಿಗೆ ಮಾಲೆಮಾರ್ಯಾದೆಯಿದೆ. ಪವಿತ್ರೋತ್ಸವದಲ್ಲಿ

ಕಾವಲುಗಾರ ಮತ್ತು ಬಂಡಿಕಾರರಿಗೆ ಮಾಲೆ ಮರ್ಯಾದೆ ಇದೆ. ನವರಾತ್ರಿಯ ದಿನಗಳಲ್ಲಿಯೂ ಶುದ್ರ ಜಾತಿಯ ವರ್ಗಗಳಿಗೆ ಮರ್ಯಾದೆ ನಡೆಯುತ್ತದೆ. ತಿರುಪಾಡಿಪುದು ಆದ ನಂತರದ ದಿನ ದೇವದಾಸಿಯರ ತಳಿಗೆ ಆರಾಧನೆ ನಡೆಯುತ್ತದೆ. ಮೇಲಿನ ಉದಾಹರಣೆಗಳಲ್ಲದೆಯೇ ಇನ್ನು ಹಲವು, ನೈಮಿತ್ತಿಕ ಕೈಂಕರ್ಯಗಳಲ್ಲಿ ಈ ವರ್ಗಗಳ ಪಾಲ್ಗೊಳ್ಳುವಿಕೆ ಇರುತ್ತದೆ.

ಮೇಲುಕೋಟೆ ದೇವಾಲಯಗಳಲ್ಲಿರುವ ಕೆಲವು ಹಳೆಯ ರೂಢಿಯಂತೆ ಅದರಲ್ಲಿ ಅವರ್ಣೀಯರೆಂದು ಕರೆಯುವ ಹರಿಜನರೂ ಸಹ ಸೇರಿರುತ್ತಾರೆ. ಇವತ್ತಿಗೂ ದೇವಾಲಯದ ಕೆಲವು ಉತ್ಸವಗಳಲ್ಲಿ ವರ್ಷದಲ್ಲಿ ಮೂರು ದಿವಸ ಪಾಲ್ಗೊಳ್ಳುವ ಸಂಪ್ರದಾಯವಿದೆ. ಅಸ್ಪೃಶ್ಯರ ಮತ್ತು ಅಂತ್ಯಜರ ಕುರಿತು ಇಲ್ಲಿ ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ. ಆದರೂ ದೇವಾಲಯ ಅವರ ಸೇವೆಯನ್ನು ನಿರೀಕ್ಷಿಸುತ್ತಿತ್ತು. ಬಹುತೇಕ ಈ ವರ್ಗವು ದೇವಾಲಯದ ಆಚರಣೆಗಳಿಂದ ನಿರ್ಲಕ್ಷಿಸಲ್ಪಟ್ಟಿತ್ತು. ಅವರನ್ನು ಚಂಡಾಳರೆಂದೇ ಕರೆಯುತ್ತಿದ್ದರು. ಇಲ್ಲಿನ ಮೇಲ್ವರ್ಗದ ಸೇವಕರಾಗಿ ಮತ್ತು ಚರಂಡಿಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದು ಇಂದಿಗೂ ಅದೇ ಸ್ಥಿತಿ ಮುಂದುವರಿದಿದೆ. ಊರಿನ ಹೊರಭಾಗದಲ್ಲಿಯೇ ವಾಸಿಸುತ್ತಿದ್ದಾರೆ. ಸಮಾಜದಲ್ಲಿ ಕೆಳಸ್ತರದಲ್ಲಿನ ಗೌರವ ಹೊಂದಿದ್ದರು. ಇವರನ್ನು ಯವುದೇ ಧಾರ್ಮಿಕ ಕಾರ್ಯಗಳಿಗೆ ಕರೆಯುತ್ತಿರಲಿಲ್ಲ. ಮೇಲ್ವರ್ಗವಾದ ಬ್ರಾಹ್ಮಣರು ಅಸ್ಪೃಶ್ಯರಿಂದ ನಿರ್ದಿಷ್ಟ ಅಂತದಲ್ಲಿ ನಿಲ್ಲುವರು. ಝಾಡಮಾಲಿಗಳಾಗಿ ಊರನ್ನು ಗುಡಿಸುವ ಕೆಲಸಕ್ಕೆ ನೇಮಕವಾಗಿದ್ದರು. ವೈಷ್ಣವೀಯ ಒಲವುಗಳ ಪ್ರಭಾವದಿಂದ ಅಸ್ಪೃಶ್ಯರ ಬಗೆಗಿದ್ದ ಬ್ರಾಹ್ಮಣವಾದಿ ಮನೋಭಾವವು ಇಲ್ಲಿ ಸಡಿಲಗೊಂಡಂತೆ ತೋರುವುದಿಲ್ಲ.

ಮೇಲುಕೋಟೆಯ ಪ್ರದೇಶದಲ್ಲಿ ಸಾಮಾನ್ಯವಾಗಿ ಕಂಡುಬರುವ ಅಂಶಗಳೆಂದರೆ, ಒಕ್ಕಲಿಗ, ಅಜಾಮರು, ಕುಂಬಾರ, ಕುರುಬರು ಇತರ ಹರಿಜನರೂ ಸೇರಿದಂತೆ 'ಊರ್ದ್ವಪುಂಡ್ರ' ಎಂಬ ಬ್ರಾಹ್ಮಣರು ಧರಿಸುವ ನಾಮವನ್ನು ಧರಿಸುವುದು. ಜೊತೆಗೆ ತಮ್ಮನ್ನು ತಾವೇ ಶ್ರೀ ವೈಷ್ಣವರೆಂದು ಕರೆದುಕೊಳ್ಳುವರು. ಮೇಲುಕೋಟೆ ನಾರಾಯಣ ದೇವರನ್ನು ತಮ್ಮ ಮನೆದೇವರೆಂದು ಪೂಜಿಸುತ್ತಾರೆ. ಈ ರೀತಿಯ ಪ್ರಭಾವವನ್ನು ಇಲ್ಲಿನ ಹಲವು ರೂಢಿಗಳಲ್ಲಿ ಕಾಣಬಹುದು. ತಮ್ಮ ಮಕ್ಕಳ ಹೆಸರಿನೊಂದಿಗೆ ಗುರುತಿಸಿಕೊಳ್ಳುತ್ತಾರೆ. ಇಲ್ಲಿ ಸಾಮಾನ್ಯವಾಗಿ ಕಂಡುಬರುವಂತೆ ವಿವಿಧ ಜಾತಿಗೆ ಸೇರಿದ ಜನರು ತಮ್ಮ ಹೆಸರನ್ನು ತಿರುನಾರಾಯಣ, ಚೆಲುವಯ್ಯ, ಚೆಲ್ವಪಿಳ್ಳೆ ಎಂದು ಇಟ್ಟುಕೊಳ್ಳುವರು. 15ನೇ ಶತಮಾನಕ್ಕೆ ಸೇರುವ ಒಂದು ಶಾಸನವು ಈ ಸ್ಥಳದ ದೇವರ ಹೆಸರನ್ನು ಇಟ್ಟುಕೊಳ್ಳುವ ಸಂಪ್ರದಾಯ ಕುರಿತು ಮಾಹಿತಿ ಹೊಂದಿದೆ. ಪಾಂಡವಪುರ ತಾಲ್ಲೂಕಿನ ಒಂದು ಗ್ರಾಮದ ಅಗ್ರಹಾರದಲ್ಲಿ ವೃತ್ತಿಯನ್ನು ಪಡೆದುಕೊಳ್ಳುವವರ ಹೆಸರುಳ್ಳ ಪಟ್ಟಿಯಿರುವ ಒಂದು ಶಾಸನವಿದೆ. ಆಸಕ್ತಿಯ ಹೆಸರುಗಳೆಂದರೆ ಚೆಲ್ಲಪಿಳ್ಳೆ, ಕೃಷ್ಣಭಟ್ಟ, ತಿರುವಣ್ಣಯ್ಯ.[55] ಇವು ಮೇಲುಕೋಟೆಯ

ನಾರಾಯಣಸ್ವಾಮಿಯ ವಿವಿಧ ಹೆಸರುಗಳಾಗಿವೆ. ಬ್ರಾಹ್ಮಣೇತರ ವರ್ಗಗಳ ಹೆಸರನ್ನು ಈ ಪ್ರದೇಶದ ಹಲವು ಶಾಸನಗಳಲ್ಲಿ ನೋಡಬಹುದು. 1686ರ ಶ್ರೀರಂಗಪಟ್ಟಣದ ಒಂದು ಶಾಸನದಲ್ಲಿ ಚೆಲುವವ್ವೆ ಎಂಬ ಹೆಸರಿದೆ. ಇವಳು ದೇವರಾಜ ಒಡೆಯರ ಸೇವಕಿಯಾಗಿದ್ದಳು ಎಂದು ಉಲ್ಲೇಖಗೊಂಡಿದೆ. ಈ ಪ್ರದೇಶದ ನಂತರದ ಶಾಸನಗಳು ಹೇರಳವಾಗಿ ಈ ಹೆಸರುಗಳನ್ನು ಹೊಂದಿದೆ.

ವಿವಿಧ ಜಾತಿಗಳ ಪಾಲ್ಗೊಳ್ಳುವ ಕುರಿತ ರೂಢಿಗಳು ಮತ್ತು ವಿವಿಧ ಜನಸಮುದಾಯದ ಜನರೊಂದಿಗಿನ ಸಂದರ್ಶನದಿಂದ ಸ್ಪಷ್ಟವಾಗುವುದೇನೆಂದರೆ, ಮೇಲುಕೋಟೆ ದೇವಾಲಯಗಳು ವರ್ಣಾಶ್ರಮ ನಿಯಮಗಳನ್ನು ಪಾಲಿಸಿದವು. ಸಾಂಪ್ರದಾಯಿಕತೆ ಮತ್ತು ಮಡಿವಂತಿಕೆಗಳೆ ಪ್ರಬಲ ಕೇಂದ್ರವಾಗಿದ್ದವು. ವೈದಿಕ ಆಚರಣೆಗಳು ಇಲ್ಲಿನ ದೇವಾಲಯದಲ್ಲಿ ಶಾಶ್ವತವಾಗಿ ಆಶ್ರಯಪಡೆದವು. ಶೂದ್ರರ ಸಂಗದಿಂದ ಬ್ರಾಹ್ಮಣರಿಗೆ ಮೈಲಿಗೆಯಾಗುತ್ತದೆಯೆಂದು ತಿಳಿಯಲಾಗಿತ್ತು. ಈ ಬ್ರಾಹ್ಮಣೀಯ ನಿಲುವುಗಳು ಇತರ ಜಾತಿಗಳಿಂದ ಮೌಲ್ಯವೆಂಬಂತೆ ಒಪ್ಪಿತವಾಗಿದ್ದವು.

ದೇವಾಲಯದ ಕೆಲಸ ಪುಣ್ಯದ, ಮೋಕ್ಷ ಲಭಿಸುವ ಕೆಲಸ ಎನ್ನುವ ಧಾರ್ಮಿಕ ಸಂದೇಶವನ್ನು ಸಾರಲಾಗಿತ್ತು. ಜನತೆ ದೇವಾಲಯಗಳನ್ನು ಶಾಸನಬದ್ಧ ಮತ್ತು ವಿಶ್ವಾಸಾರ್ಹ ಎಂಬುದಾಗಿ ನಂಬಿ ಗೌರವ, ವಿಧೇಯತೆ ತೋರಿಸುತ್ತಿದ್ದರು. ದೇವಾಲಯವನ್ನು ಅಗೌರವಿಸಿದರೆ ಸಾಮಾಜಿಕ ನಿರ್ಬಂಧಗಳಿಗೆ ಗುರಿಯಾಗುತ್ತಿದ್ದರು. ಈ ಕಾರಣದಿಂದ ದೇವಾಲಯ ಹರಸುವ ಮತ್ತು ಶಪಿಸುವ ಕೇಂದ್ರಗಳಾದವು. ಧರ್ಮಶಾಸ್ತ್ರಗಳ ಬೆಂಬಲದೊಂದಿಗೆ ಜಾತಿಪದ್ಧತಿಯು ಸಮರ್ಥನೆ ಮಾಡುವ ಪ್ರಯತ್ನಗಳು ದೇವಾಲಯದಲ್ಲಿ ಹೆಚ್ಚಾಗಿದ್ದವು. ಅಸಮಾನತೆಯ ಅಂಶಗಳು ಆಚರಣೆಗಳಲ್ಲಿ, ನಡವಳಿಕೆಗಳಲ್ಲಿ ದಿನನಿತ್ಯ ವ್ಯಕ್ತವಾಗುತ್ತಿದ್ದು, ಅದರ ವಿರುದ್ಧ ಸಂಘಟಿತವಾದ ಸಮಾನತೆಯನ್ನು ಪ್ರತಿಪಾದಿಸುವ ಯಾವೊಂದು ಹೋರಾಟಗಳೂ ಮೇಲುಕೋಟೆಯ ದೇವಾಲಯಗಳ ಚರಿತ್ರೆಯಲಿಲ್ಲ.

ಮೇಲಿನ ಮಾಹಿತಿಗಳಿಂದ ಉದಿತವಾಗುವ ಅಂಶಗಳು

ದೇವಾಲಯಗಳು ಜಾತಿ ಕಟ್ಟಳೆಯ ಉನ್ನತ ನ್ಯಾಯಾಲಯಗಳಾಗಿದ್ದು, ಜಾತಿಯ ಆಧಾರದ ಮೇಲೆ ವಿವಿಧ ಜನವರ್ಗದವರು ಹಕ್ಕನ್ನು ಅನುಭವಿಸಬೇಕಾಗಿತ್ತು. ಈ ಅಂಶ ಮೇಲಿನ ವಿವರಣಗಳಿಂದ ಸ್ಪಷ್ಟವಾಗುತ್ತದೆ. 12ನೇ ಶತಮಾನದಲ್ಲಿ ರಾಮಾನುಜರು ಶ್ರೀ ವೈಷ್ಣವ ಧರ್ಮದ ಉದಾರ ಸ್ವರೂಪವನ್ನು ಹರಡಿದರು. ನಂತರ ಸಂಪ್ರದಾಯಿಕ ಸಾಮಾಜಿಕ ಸ್ತರೀಕರಣವನ್ನು, ವರ್ಣಧರ್ಮಗಳನ್ನು ರಕ್ಷಿಸಲು ದೇವಾಲಯಗಳು ಕೇಂದ್ರವಾದವು. ವಾಸ್ತವವಾಗಿ ಅದು ಜಾತಿವ್ಯವಸ್ಥೆಯ ಬಲವರ್ಧನೆಗೆ ಸಹಕಾರಿಯಾಯಿತು. ಹೊಯ್ಸಳರು,

ವಿಜಯನಗರದ ಅರಸರು ಮತ್ತು ಮೈಸೂರಿನ ಒಡೆಯರು ನೀಡಿದ ನಿರಂತರ ರಾಜಾಶ್ರಯದಿಂದ, ಆರ್ಥಿಕವಾಗಿ ಬಲವಾದ ಮೇಲುಕೋಟೆಯ ದೇವಾಲಯಗಳು ಹೆಚ್ಚಿನ ಮಾನ್ಯತೆ ನೀಡಿದ್ದು ಬ್ರಾಹ್ಮಣವರ್ಗಕ್ಕೆ. ಬ್ರಾಹ್ಮಣರು ದೇವಾಲಯದಲ್ಲಿ ಅಧಿಕಾರ ಮೂಲಗಳನ್ನು ನಿಯಂತ್ರಿಸುತ್ತಾ ಲಭ್ಯ ಸಂಪತ್ತಿನ ಬಹುದೊಡ್ಡ ಪಾಲನ್ನು ಪಡೆಯುತ್ತಿದ್ದರು. ದೇವಾಲಯದಲ್ಲಿ ಕೆಲಸಮಾಡುವ ಇವರು ಧಾರ್ಮಿಕವಾಗಿ ಮತ್ತು ಸಾಮಾಜಿಕವಾಗಿ ಹೆಚ್ಚಿನ ಸ್ಥಾನಮಾನಪಡೆದಿದ್ದರು. ದೇವಾಲಯ ಸ್ಥಾಪನೆಯ ಮೂಲಕ ಬಹುಸಂಖ್ಯಾತ ಅನುತ್ಪಾದಕ ಉದ್ಯೋಗಸ್ಥ ವರ್ಗವೊಂದರ ಉಗಮವಾಗಿ, ಶ್ರಮರಹಿತವಾದ ಅನುಭೋಗದಲ್ಲಿ ತೊಡಗಿತು. ಆಚಾರ್ಯರಿಂದಲೇ ದೇವಾಲಯದ ಆಡಳಿತದ ಹಕ್ಕುಪಡೆದ ಈ ವರ್ಗ ತಮ್ಮ ಅಸ್ತಿತ್ವವನ್ನು ಬಲಪಡಿಸುವಲ್ಲಿ ಯಶಸ್ವಿಯಾಯಿತು. ದೇವಾಲಯದ ಆಡಳಿತದ ಅಧಿಕಾರ ಹೊಂದಿದ್ದ ಮಹಾಜನರು. ಆಚಾರ್ಯರು, ಸ್ಥಾನಿಕರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿತ್ತು. ಆಡಳಿತದಲ್ಲಿ ರಾಜರಾಗಲಿ ಅಧಿಕಾರಿಗಳಾಗಲಿ ಅನಗತ್ಯ ಪ್ರವೇಶ ಮಾಡಲಿಲ್ಲ. ಇದು ಸಂಕೀರ್ಣ ಸ್ಥಿತಿಗಳು ಬಲವಾಗಲು ಪೂರಕವಾಯಿತು.

ಶಾಸನಗಳು, ದೇವಾಲಯದ ವಾಸ್ತುಶಿಲ್ಪಗಳು ಇಲ್ಲಿ ರಾಜಾಶ್ರಯದ ಸಿಂಹಪಾಲನ್ನು ಬ್ರಾಹ್ಮಣಧರ್ಮವು ಪಡೆದಿತ್ತು ಎಂಬುದನ್ನು ಸೂಚಿಸುತ್ತವೆ. ರಾಜಕೀಯ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಈ ಹಲವು ಸೇವೆಗಳನ್ನು ನಿಯಂತ್ರಿಸುತ್ತಿದ್ದ ಬ್ರಾಹ್ಮಣರು ಸಾಮಾಜಿಕ ಅಸಮಾನತೆಗೆ ಕಾರಣರಾಗಿದ್ದರು. ಅದು ದೇವಾಲಯಗಳಲ್ಲಿ ವಿವಿಧ ವಸ್ತು. ಸೇವೆಗಳ ವ್ಯತ್ಯಸ್ತ ಹಂಚಿಕೆಗಳಿಂದ ವ್ಯಕ್ತವಾಗುತ್ತಿತ್ತು. ಸ್ಥಾನಮಾನದಲ್ಲಿ ವ್ಯತ್ಯಾಸಗಳಿಗೆ ಕೆಲವು ವಿಭಿನ್ನ ಕರ್ತವ್ಯಗಳ ನಿರ್ವಹಣೆ ಕಾರಣವಾಗಿತ್ತು. ಬ್ರಾಹ್ಮಣರಿಗೆ ಸೇವೆ ಮಾಡಿದರೆ ಅವರಿಗೆ ಕಾಣಿಕೆಯನ್ನರ್ಪಿಸಿದರೆ ಪುಣ್ಯ ಬರುತ್ತದೆ ಎಂಬ ನಂಬಿಕೆ ಜನರಲ್ಲಿತ್ತು. ಅವರೊಂದಿಗಿನ ಸಹಯೋಗದಿಂದ ಹೆಚ್ಚಿನ ಮರ್ಯಾದೆ, ಗೌರವ ಬರುತ್ತಿತ್ತು. ಇವು ಪ್ರಸ್ತುತ ಕಾಲಾವಧಿಯಲ್ಲಿ ಎತ್ತಿಹಿಡಿದ ಧಾರ್ಮಿಕ ಆದರ್ಶಗಳಾಗಿದ್ದವು. ಅವರ ಬುದ್ಧಿವಾದವನ್ನು ಕೇಳುವುದರಿಂದ ಮೋಕ್ಷವನ್ನು ಪಡೆಯಬಹುದು ಎಂಬ ನಂಬಿಕೆ ಇಲ್ಲಿನ ಜನರಲ್ಲಿ ಪ್ರಬಲವಾಗಿತ್ತು. ದೇವಾಲಯದ ವರಮಾನ, ಸರಕು, ಸೇವೆಗಳ ಸಿಂಹಪಾಲು ಪಡೆಯುತ್ತಿದ್ದ ಬ್ರಾಹ್ಮಣ ವರ್ಗದ ವ್ಯವಸ್ಥೆಯನ್ನು ಜನರು ಶಾಸನಬದ್ಧವಾದವು ಎಂದು ಒಪ್ಪಿಕೊಂಡಿದ್ದರು. ಬ್ರಾಹ್ಮಣನಿಗೆ ನಿಷ್ಠೆ ಭಕ್ತಿ ತೋರಿಸಬೇಕು ಎಂಬ ಭಾವನೆ ಜನರ ಮನಸ್ಸಿನಲ್ಲಿ ಬೇರೂರಿದ್ದಿತು.

ಗಮನಾರ್ಹ ಅಂಶವೆಂದರೆ ಮತಸ್ಥಾಪಕ ಮತ್ತು ಆಚರಣೆಗಳ ಚಾರಿತ್ರಿಕತೆಯನ್ನು ಹುಡುಕಿ ಹೇಳುವುದು ಈ ವರ್ಗಕ್ಕೆ ಅಗತ್ಯವಾಗಿತ್ತು. ಆಚಾರ್ಯರ ಆಗಮನವನ್ನು ಮೇಲುಕೋಟೆಯಲ್ಲಿ ಪುರಾವೆಯಲ್ಲಿದೆ ನಂಬಲಾಗಿದೆ. ಇಲ್ಲಿ ಸಾಂಪ್ರದಾಯಿಕ ನಂಬಿಕೆ ಹಾಗೂ ಆಚರಣೆಗಳು ಗುರುಪರಂಪರೆಯೊಂದರ ಮೂಲಕ ಸಂವಹನವಾಗುವುದಕ್ಕೆ ಮಹತ್ವ

ಕೊಡಲಾಗಿದೆ. ತಮ್ಮ ದೈವದ ಮಾನವ ಅವತಾರಗಳ ಐತಿಹಾಸಿಕತೆಯನ್ನು ಸಿದ್ಧಪಡಿಸಿ ತೋರಿಸಬೇಕೆನ್ನುವ ಅಭಿಲಾಷೆ ಎದ್ದುಕಾಣುತ್ತದೆ. ಈ ಪ್ರಕ್ರಿಯೆಗಳು ಜಾಗೃತವಾದುದ್ದು ದೇವಾಲಯಗಳಲ್ಲಿ. ಇವು ಅವರ ಪ್ರಾಬಲ್ಯವನ್ನು ಮತ್ತಷ್ಟು ಬಲಪಡಿಸಿದವು. ಬ್ರಾಹ್ಮಣರು ವರ್ಷಕ್ಕೊಮ್ಮೆ 'ಶಿಷ್ಯಮಕ್ಕಳ' ಸಂಪ್ರದಾಯದ ಹೆಸರಿನಲ್ಲಿ ಗ್ರಾಮಗಳಿಗ ತೆರಳಿ ಪುರಾಣ ಪ್ರವಚನದ ಜೊತೆಗೆ ವರ್ಣವ್ಯವಸ್ಥೆಯ ಪಾಲನೆ ಮತ್ತು ತಮ್ಮ ಶ್ರೇಷ್ಠತೆಯನ್ನು ಪ್ರತಿಪಾದಿಸುತ್ತಿದ್ದರು.

ವೈಷ್ಣವರಲ್ಲಿಯೇ ತೆಂಗಲೈ ಮತ್ತು ವಡಗಲೈ ಎಂಬ ಎರಡು ಪಂಥಗಳು, 18 ಸ್ವಗೋತ್ರದ ಗುಂಪುಗಳು ಇದ್ದು ದೇವಾಲಯದ ಆಚರಣೆಗಳೂ ಸೇರಿದಂತೆ ವಿವಾಹ ಮತ್ತು ಸಹಪಂಕ್ತಿ ಭೋಜನವಿರಲಿಲ್ಲ. ಇದು ಸಾಮಾಜಿಕ ಸಂಪರ್ಕಕ್ಕೆ ತಡೆಯಾಗಿದ್ದವು. ಆದರೂ ಸಹಯೋಗದಲ್ಲಿ ಬದುಕುತ್ತಿದ್ದು, ಅವುಗಳ ಸಂಗಡ ಖಚಿತವಾದ ದೂರವನ್ನು ಕಾಪಾಡಿಕೊಂಡಿದ್ದವು. ಈ ಹೊಂದಾಣಿಕೆಗಳು ಕೇವಲ ನಂಬಿಕೆಗಳಿಗೆ, ವಿಚಾರಗಳಿಗೆ ಸೀಮಿತವಾಗಿರದೆ, ಸಾಮಾಜಿಕ ಆರ್ಥಿಕ ವಾಸ್ತವಗಳ ನೆಲೆಯಲ್ಲಿಯೂ ಹೊಂದಾಣಿಕೆ, ಸಹಯೋಗ ಮತ್ತು ದೂರೀಕರಣಗಳು ಅನಿವಾರ್ಯವಾಗಿದ್ದವು. ಶೂದ್ರ ಜಾತಿಗಳಿಂದ ಮತಾಂತರಗೊಂಡ ಶಾತ್ತಾದ ಶ್ರೀವೈಷ್ಣವರಿಗೆ ಈ ಪಂಥವು ಅಧಿಕೃತತೆಯನ್ನು ನೀಡಿದರು ವೇದಾಧ್ಯಯನಗಳ ಫಲ ನಿರಾಕರಿಸಲ್ಪಟ್ಟರು. ಆಚಾರ್ಯರ ಪ್ರೀತಿ ಪಾತ್ರರಾಗಿ ಉನ್ನತ ಸ್ಥಾನಪಡೆದ ಇವರು, ಬ್ರಾಹ್ಮಣರ ಹಳೆಯ ಹವ್ಯಾಸಗಳ ಪುನರುಜ್ಜೀವನದಿಂದ ದೇವಾಲಯದಲ್ಲಿ ತಮ್ಮ ಪ್ರಾಬಲ್ಯ ಕಳೆದುಕೊಂಡರು.

ಮೇಲುಕೋಟೆಯ ದೇವಾಲಯಗಳಲ್ಲಿ ಇಲ್ಲಿದ್ದ ಹಲವು ಶೂದ್ರ ಜಾತಿಗಳು ಉದ್ಯೋಗಪಡೆದು ಜೀವನೋಪಾಯ ಕಂಡುಕೊಂಡವು. ಪಂಚಮರಿಗೆ ವರ್ಷಕ್ಕೊಮ್ಮೆ ದೇವಾಲಯ ಪ್ರವೇಶ ನೀಡಲಾಯಿತು. ಗುರುತರ ಅಂಶವೆಂದರೆ ಬ್ರಾಹ್ಮಣಿಸಂ ಸ್ಥಳೀಯ ಪಂಗಡಗಳ ಸಂಗಡ ರಾಜಿಮಾಡಿಕೊಳ್ಳುವುದು ಅನಿವಾರ್ಯವಾಯಿತು. ಈ ಮಾತು ಧಾರ್ಮಿಕ ಪಠ್ಯಗಳು, ದೇವಾಲಯಗಳಲ್ಲಿ ವ್ಯಕ್ತವಾಗುತ್ತದೆ. ದೇವಾಲಯದಲ್ಲಿ ಇವರು ಹೊಂದಿದ್ದ ವೃತ್ತಿಗಳು ಅದನ್ನು ದೃಢಪಡಿಸುತ್ತವೆ. ಮೊದಲಿಗೆ ದೈಹಿಕವಾಗಿ ಶ್ರಮದಾಯಕವಾದ ಕೆಲಸಗಳಿಗೆ ಮಾತ್ರ ಕೆಳವರ್ಗಗಳು ನೇಮಕವಾಗಿದ್ದವು. ಧಾರ್ಮಿಕ ನೆಲೆಯಲ್ಲಿ ಸೇವೆಯ ಮಹತ್ವವನ್ನು ಬಲವಾಗಿ ಪ್ರತಿಪಾದಿಸಲಾಯಿತು. ದೇವಾಲಯದ ಆರ್ಥಿಕ ಲಾಭಗಳಲ್ಲಿ ತಾರತಮ್ಯ, ಮಂಡಿವಂತಿಕೆಗಳ ಆಚರಣೆಗಳು ಒಪ್ಪಿತವಾದ ಮೌಲ್ಯಗಳಾಗಿದ್ದವು. ಪಂಚಮವರ್ಗ ದೇವಾಲಯದ ಉತ್ಸವಗಳಿಂದ ನಿರ್ಲಕ್ಷಿಸಲ್ಪಟ್ಟಿತ್ತು ದೇವಾಲಯದ ಅಗತ್ಯತೆಗಳ ಪೂರೈಕೆಗಳಿಗೆ ವಿವಿಧ ವರ್ಗಗಳನ್ನು ಆಹ್ವಾನಿಸಲಾಯಿತು. ಮತ್ತೊಂದು ದೃಷ್ಟಿಯಲ್ಲಿ ಕೆಳಜಾತಿಗಳು ಜೀವನೋಪಾಯಕ್ಕೆ ದೇವಾಲಯಗಳು

ಕಾರಣವಾದವು. ದೇವಾಲಯದ ಉದ್ಯೋಗಸ್ಥರಲ್ಲಿ ಶೂದ್ರಜಾತಿಗೆ ಸೇರಿದ್ದ ಕೆಳವರ್ಗಗಳು ಕಡಿಮೆ ವೇತನ ಪಡೆಯುತ್ತಿದ್ದವು. ಅಲ್ಲದೆ ಬ್ರಾಹ್ಮಣರಿಗೆ ದೇವಾಲಯದಿಂದ ಸಿಗುವ ಸ್ಥಳವಾಸದ ಅಕ್ಕಿ ಮತ್ತು ಭಟಮಾನ್ಯಗಳು ಸಿಗುತ್ತಿರಲಿಲ್ಲ. ಅಸ್ಪೃಶ್ಯರ ಬಗ್ಗೆ ಬ್ರಾಹ್ಮಣೀಯ ನಿಲುವುಗಳು ಸಡಿಲಗೊಳ್ಳಲಿಲ್ಲ. ಇತರ ವರ್ಗಗಳು ದೇವಾಲಯಗಳಿಂದ ಪ್ರಭಾವಿತವಾದಂತೆ, ಈ ಸಮುದಾಯಗಳ ಮೇಲಿನ ಧಾರ್ಮಿಕ ಮತ್ತು ರಾಜಕೀಯ ನಿಯಂತ್ರಣಗಳು ಬಲವಾದವು. ಮೊದಲು ಈ ಪ್ರದೇಶದಲ್ಲಿ ಪ್ರಾರಂಭವಾಗಿ, ವ್ಯಾಪಾಕವಾಗಿ ಇತರ ಪ್ರದೇಶಗಳಿಗೂ ವ್ಯಾಪಿಸಿರುವ ಅಂಶ ಸ್ಪಷ್ಟವಾಗುತ್ತದೆ. ಸ್ಥಳೀಯಜನರು ಜನಪ್ರಿಯವಾದ ಪುರಾಣಧಾರಿತ ಧರ್ಮಕ್ಕೆ ಮನ್ನಣೆ ನೀಡಿದ್ದವು. ಹಲವು ಜಾತಿಗಳ ಸಮೂಹವನ್ನೇ ಸಾಮಾಜಿಕ ಮತ್ತು ಧಾರ್ಮಿಕ ಶ್ರೇಣೀಕರಣದಲ್ಲಿ ಅಳವಡಿಸುವ ಕುರುಹುಗಳು ಸಿಗುತ್ತದೆ. ಜಾತಿಗಳು ದೈವದ ಮೇಲಿನ ಸಂಪೂರ್ಣ ಅವಲಂಬನೆಗೆ ಹಾಗೂ ಅದರ ಮೂಲಕವೇ ಬಿಡುಗಡೆ ಪಡೆಯುವ ಪ್ರಕ್ರಿಯೆಗೆ ಹೆಚ್ಚು ಒತ್ತು ನೀಡಿದವು. ದೇವಾಲಯಗಳು ದೈವಕೇಂದ್ರಿತವಾಗಿದ್ದವೇ ವಿನಾ ಮನುಷ್ಯಕೇಂದ್ರಿತವಾಗಿರಲಿಲ್ಲ.

ಸ್ತ್ರೀಯರು ಮತ್ತು ದೇವಾಲಯ

ಸ್ತ್ರೀಯರ ಸ್ಥಾನ ಮತ್ತು ಘನತೆಗಳು ಉತ್ತಮ ಸಾಂಸ್ಕೃತಿಕ ಬೆಳವಣಿಗೆಯನ್ನು ತೀರ್ಮಾನಿಸುವ ಅನುಕ್ರಮಣಿಕೆಗಳಾಗಿವೆ. ರಾಜಕೀಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಮಹಿಳೆಯರು ಹೆಚ್ಚು ಹೆಚ್ಚು ಪಾಲ್ಗೊಳ್ಳುವಿಕೆಯು ಆರೋಗ್ಯಾತ್ಮಕ ಸಮಾಜವೆನಿಸುತ್ತದೆ[56]. ಮಹಿಳೆಯರಿಗೆ ನೀತಿ ನಿಯಮಗಳನ್ನು ರೂಪಿಸುತ್ತಿದ್ದ ದೇವಾಲಯಗಳೊಂದಿಗೆ ಮಧ್ಯಯುಗದಲ್ಲಿ ಬಹಳ ಹತ್ತಿರವಾದ ಸಂಬಂಧ ಹೊಂದಿದ್ದರು. ಧಾರ್ಮಿಕ ಪ್ರಭುತ್ವಕ್ಕೆ ಸಿಕ್ಕಿ ತ್ತತ್ತರಿಸಿದವರಲ್ಲಿ ಸ್ತ್ರೀಯರು ಪ್ರಮುಖರು. ಆದರೂ ದೇವಾಲಯಗಳು ಧಾರ್ಮಿಕ ಪ್ರತೀಕಗಳಂತಿದ್ದು, ಸ್ತ್ರೀಯರಿಗೂ ಹಲವು ಅವಕಾಶಗಳನ್ನು ನೀಡಿತ್ತು. ಭಾರತೀಯ ಸಮಾಜ ಪುರುಷ ಪ್ರಧಾನವಾದುದು ಎಂಬ ವಾದವಿದ್ದರೂ, ಧರ್ಮಕಾರ್ಯಗಳಲ್ಲಿ ಸ್ತ್ರೀಯರು ಹೆಚ್ಚಿನ ಆಸಕ್ತಿ ವಹಿಸಿರುವುದು ದೇವಾಲಯಗಳಿಂದ ವ್ಯಕ್ತವಾಗುತ್ತದೆ. ದೇವಾಲಯಗಳಲ್ಲಿ ಸ್ತ್ರೀಯರ ಸ್ಥಾನಮಾನಗಳು ಅವರ ಸಾಮಾಜಿಕ ಸ್ಥಿತಿಯನ್ನು ನಿರ್ಧರಿಸುತ್ತವೆ. ಮಹಿಳೆಯರ ಸ್ಥಿತಿಯ ಶೋಚನೀಯತೆ ದೇವಾಲಯಗಳಲ್ಲಿ ವ್ಯಕ್ತವಾಗುತ್ತದೆ.

ಮೇಲುಕೋಟೆಯ ದೇವಾಲಯಗಳಿಗೆ ಸಂಬಂಧಿಸಿದಂತೆ ಮಹಿಳೆಯರ ಪಾತ್ರವನ್ನು ತಿಳಿಯಲು ಸಂಪ್ರದಾಯವು ಪ್ರಬಲ ಆಧಾರಗಳಾಗಿವೆ. ಇಲ್ಲಿನ ಶಾಸನಗಳು ಸ್ತ್ರೀಯರ ಪಾತ್ರದ ಕುರಿತು ಬೆಳಕು ಚೆಲ್ಲುವುದಿಲ್ಲ. ಕೆಲವುಕಡೆ ರಾಜರ, ಮಂತ್ರಿಗಳು ಹಾಗೂ ಅಧಿಕಾರಿಗಳ ಮಡದಿಯರಾಗಿ ಗುರುತಿಸಿಕೊಂಡಿದ್ದಾರೆ. ಕೆಲವೇ ದಾನಶಾಸನಗಳಲ್ಲಿ ಅವರ ಹೆಸರು

ಉಲ್ಲೇಖವಾಗುತ್ತದೆ. ಆದರೆ ಕೆಳವರ್ಗದ ಮಹಿಳೆಯರ ಪಾತ್ರಗಳ ಕುರಿತು ಶಾಸನಗಳು ಮೌನವಹಿಸಿವೆ. ಹೀಗೆ ಶಾಸನಗಳು ಮೇಲ್ವರ್ಗದ ರಾಣಿಯರ ಮತ್ತು ಅಧಿಕಾರಿಗಳ ಮಡದಿಯರ ಕುರಿತು ಮಾತ್ರ ಹೊಗಳಿಕೆಯ ಮಾತನಾಡುತ್ತವೆ. ದೇವಾಲಯಗಳಲ್ಲಿರುವ ಶಿಲ್ಪಕಲಾಕೃತಿಗಳು ಸಮಕಾಲೀನ ಸ್ತ್ರೀಯರ ಸ್ಥಿತಿಯ ಮೇಲೆ ಮಹತ್ವದ ಬೆಳಕು ಚೆಲ್ಲುತ್ತದೆ. ಉಳಿದಂತೆ ಜನಶೃತಿಯನ್ನು ಸ್ತ್ರೀಯರ ಪಾತ್ರವನ್ನು ನಿರ್ಧರಿಸಲು ಬಳಸಲಾಗಿದೆ.

ಸಾಮಾಜಿಕ ಮತ್ತು ಧಾರ್ಮಿಕ ಜೀವನದ ಹಾದಿಯಲ್ಲಿ ಸ್ತ್ರೀಯರ ಸ್ಥಾನವು ಬೆಳವಣಿಗೆಯಾದುದು, ಮತ್ತೊಂದು ಗುರುತರವಾದ ಶ್ರೀ ವೈಷ್ಣವ ಧರ್ಮ ಕೊಡುಗೆಯಾಗಿದೆ. ಸಾಂಪ್ರದಾಯಿಕ ನಂಬಿಕೆಯ ಸಮಾಜದಲ್ಲಿ ಸಾಮಾಜಿಕ ಸ್ಥಾನ, ಹಕ್ಕು ಮತ್ತು ಅವಕಾಶಗಳನ್ನು ಆಧುನಿಕ ಚಿಂತನೆಯಂತೆ ಪಡೆದಿರದಿದ್ದರೂ, ಧಾರ್ಮಿಕವಾಗಿ ಅವರ ಪಾತ್ರ ಗಮನಾರ್ಹವಾದುದು. ಮೇಲುಕೋಟೆಯಲ್ಲಿ ಲಕ್ಷ್ಮಿದೇವಿಯನ್ನು ಪ್ರಧಾನವಾಗಿಸುವ, ಶ್ರೀ ಸಂಪ್ರದಾಯ ಆಚರಿಸಲ್ಪಡುತ್ತದೆ. ಕ್ರಿ.ಶ. 500ರ ಸುಮಾರಿಗೆ ಬೆಳಕಿಗೆ ಬಂದ ಭಕ್ತಿಪರಂಪರೆಯಿಂದ ವೈದಿಕ ಕರ್ಮಮಾರ್ಗ ಕ್ರಮೇಣ ಹಿಂದೆಸರಿಯಲ್ಪಟ್ಟಿತು. ರಾಮಾನುಜರ ತತ್ವಗಳಿಂದ ದಕ್ಷಿಣ ಭಾರತದಲ್ಲಿ ವಿಸ್ತಾರವಾಯಿತು. ಇದು ಮೇಲುಕೋಟೆಯಲ್ಲಿ ಆಚರಣೆಗೆ ಬಂದು, ಶ್ರೀ ಸಂಪ್ರದಾಯ ಎಂದು ಕರೆಯಲ್ಪಟ್ಟಿತು. ಭಕ್ತಿ ಧರ್ಮವು ಮಹಿಳೆಯರ ಧಾರ್ಮಿಕ ಅಗತ್ಯತೆಗಳಿಗೆ ವಿಫುಲವಾದ ಅವಕಾಶಗಳನ್ನು ನೀಡಿದೆ. ಶ್ರೀ ಸಂಪ್ರದಾಯವು ಮಹಿಳೆಯರು ಧಾರ್ಮಿಕ ಹಕ್ಕುಗಳನ್ನು ಹೊಂದುವಲ್ಲಿ ಯಾವುದೇ ನಿಷೇಧ ಹೇರುವುದಿಲ್ಲ. ಅದು ಎತ್ತಿಹಿಡಿಯುವುದೇನೆಂದರೆ ಗಂಡ ಮತ್ತು ಹೆಂಡತಿಯು ಆಧ್ಯಾತ್ಮಿಕ ಜೀವನದಲ್ಲಿ ಸಾಮಾನರು ಎಂಬುದು ಶ್ರೀ ವೈಷ್ಣವ ಧರ್ಮವು ಗೃಹಸ್ಥಾಶ್ರಮವನ್ನು ಒತ್ತಿ ಹೇಳುತ್ತದೆ. ಮಠಾಧಿಪತಿಯೂ ಕೂಡ ಗೃಹಸ್ಥನಾಗಬಹುದು ಎನ್ನುತ್ತದೆ.

ಶ್ರೀ ವೈಷ್ಣವ ಧರ್ಮದ ಪ್ರಸಿದ್ಧ ಆರಾಧಕಳಾದ ಶ್ರೀ ಆಂಡಾಳ್ ಹೀಗೆ ಹಾಡುಗಳು "ಓ ದೇವರೇ, ನೀನು ಸೃಷ್ಟಿಕರ್ತ, ಸಂತ ದಯವಿಟ್ಟು ದಯಾಪರ ಮತ್ತು ಧರ್ಮಶೀಲನಾಗಿರು, ನಾವು ಯಾವಾಗಲೂ ನಿನ್ನ ಆಶೀರ್ವಾದಕ್ಕಾಗಿ ಪ್ರಾರ್ಥಿಸುತ್ತೇವೆ. ನನ್ನನ್ನು ಅಧೀನಳನ್ನಾಗಿ ಮಾಡು ನಮ್ಮ ಪಾಪವನ್ನು ತೊಡೆದುಹಾಕಲು ನಿನ್ನನ್ನು ಪ್ರಾರ್ಥಿಸುತ್ತೇನೆ[57]. ಆಂಡಾಳರ (ಶ್ರೀ ಗೋದಾವರಿ) ಆರಾಧಕರು ದೇವರಲ್ಲಿ ನಂಬಿಕೆಯನ್ನು ವೃದ್ಧಿಸಲು 'ಗೋಡಗೋಷ್ಟಿ' ಎಂಬ ಸಂಘವನ್ನು ಸ್ತ್ರೀಯರು ಮೇಲುಕೋಟೆಯಲ್ಲಿ ಹೊಂದಿದ್ದಾರೆ. ಈಕೆ ಬ್ರಹ್ಮಜ್ಞಾನವನ್ನು ಹೊಂದಿದ್ದು, ದೇವರನ್ನು ಉತ್ಕಟವಾದ ಭಕ್ತಿಯಿಂದ ಆರಾಧಿಸುತ್ತಿದ್ದಳು. ಆದ್ದರಿಂದ ಶ್ರೀ ವೈಷ್ಣವ ಸ್ತ್ರೀಯರು ವಿಶೇಷವಾಗಿ ಮೇಲುಕೋಟೆಯ ದೇವಾಲಯಗಳಲ್ಲಿ ಈಕೆಯ ರಚನೆಗಳನ್ನು ಹಾಡುತ್ತಾರೆ.

ಆಂಡಾಳ್ ಸರಳತೆಯು ಶ್ರೇಷ್ಠತೆಯ ಭಕ್ತಿಸಂಪನ್ನತೆಯ ಚಿಹ್ನೆಯಾಗಿದ್ದಾಳೆ. ಈಕೆಯು ಚಳಿಗಾಲದಲ್ಲಿ ವ್ರತ ಕೈಗೊಳ್ಳುತ್ತಿದ್ದಳು. ಬೆಳಗಿನ ಚಳಿಯಲ್ಲಿ ತಣ್ಣೀರುಸ್ನಾನಮಾಡಿ, ರಸ್ತೆಗಳಲ್ಲಿ ದೇವರನಾಮಗಳನ್ನು ಹಾಡುತ್ತಾ, ಅವಳ ಸ್ನೇಹಿತರನ್ನು ಜೊತೆಗೂಡಿಸಿಕೊಂಡು ದೇವಾಲಯಕ್ಕೆ ಬರುತ್ತಿದ್ದಳು. ಇದು ಸಂಪ್ರದಾಯವಾಗಿ ಬಂದಿದ್ದು, ಶ್ರೀ ವೈಷ್ಣವ ಆಂಡಾಳ್ ಉಪಾಸನೆಯನ್ನು ಇಂದಿಗೂ ಮೇಲುಕೋಟೆಯಲ್ಲಿ ನೋಡಬಹುದು. ಸ್ತ್ರೀಯರು ಆಂಡಾಳ್ ರಚನೆಯಾದ 'ತಿರುಪ್ಪಾವಿ'ಯನ್ನು ಕಲಿತು ಮಧುರವಾಗಿ ಹಾಡುವರು. ಶ್ರೀ ವೈಷ್ಣವ ಸ್ತ್ರೀಯರು ನಂಬಿರುವಂತೆ ಯಾರೂ ತಿರುಪ್ಪಾವಿಯನ್ನು ಮಾಘಮಾಸದಲ್ಲಿ ಹಾಡುವರೋ ಅಂತವರಿಗೆ ಒಳ್ಳೆಯ ಗಂಡ ಸಿಗುತ್ತಾನೆ. ಶ್ರೀ ವೈಷ್ಣವರು ಧರಿಸುವ ಊರ್ಧ್ವಪುಂಡ್ರ ನಾಮ ನಾರಾಯಣ ಪಾದದ ಮತ್ತು ಕೆಂಪುಚೂರ್ಣವು ದೇವತೆ ಲಕ್ಷ್ಮೀಯ ಗುರುತಾಗಿದ್ದು ಇದನ್ನು ಮಧ್ಯಭಾಗದಲ್ಲಿ ಧರಿಸುವರು. ಸ್ತ್ರೀಯರೂ ಸಹ ಅದೇ ರೀತಿಯ ನಾಮವನ್ನು ಧರಿಸುವರು. ಅದನ್ನು ತಿರುಮಗ್ ಕೂಡಲ್ ಮತ್ತು ಕುಂಕುಮ ತಿಲಕ ಎನ್ನುವರು. ಮೇಲುಕೋಟೆಯಲ್ಲಿರುವ ಅರಳಿವೃಕ್ಷವನ್ನು ಜ್ಞಾನಾಶ್ವತ್ಥಕಟ್ಟೆ ಎಂದು ಕರೆಯುವರಲ್ಲದೆ ಆಂಡಾಳ್‌ರ ಪಂಥದಿಂದ ಪ್ರಚಲಿತವಾದ ಅಶ್ವತ್ಥವೃಕ್ಷವನ್ನು ಸುತ್ತುವ ಪದ್ಧತಿ ಆಚರಣೆಯಲ್ಲಿದೆ. ವಧು ಮದುವೆಯ ದಿವಸ ಇಂದಿಗೂ ಅರಳಿವೃಕ್ಷ ಸುತ್ತುವುದನ್ನು ಇಂದಿಗೂ ನೋಡಬಹುದು. ಇದು ವಿಶೇಷವಾಗಿ ತೆಂಕಲೆ ವೈಷ್ಣವರಲ್ಲಿ ರೂಢಿಯಲ್ಲಿದೆ.

ಹಬ್ಬಗಳು ಸಂಸ್ಕೃತಿ ಮತ್ತು ಧಾರ್ಮಿಕ ಚಟುವಟಿಕೆಗಳ ಒಂದು ಭಾಗ. ಸಾಮಾನ್ಯ ನುಡಿಯಂತೆ 'ಮಹಿಳೆಯರಿಲ್ಲದ ಮನೆಯಲ್ಲಿ ಯಾವ ಹಬ್ಬವೂ ಇಲ್ಲ'. ಮಹಿಳೆಯರು ಹಬ್ಬಗಳನ್ನು ಆಚರಿಸುವಿಕೆಯಲ್ಲಿ ಮಹತ್ವದ ಪಾತ್ರ ವಹಿಸುವರು. ಹಬ್ಬಗಳು ಶಾಂತಿ, ಸಂತೋಷ, ಉತ್ಸಾಹಗಳನ್ನು ಸೂಚಿಸುತ್ತವೆ. ಎಲ್ಲ ಹಬ್ಬಗಳನ್ನು ದೇವರನಾಮದೊಂದಿಗೆ ಪ್ರಕೃತಿಯ ಸಂಪತ್ತಿನ ನಾಮದೊಂದಿಗೆ ಆಚರಿಸುತ್ತೇವೆ. ಮಹಿಳೆಯರು ಧಾರ್ಮಿಕ ಪರಿಸರವನ್ನು ಮನೆಯಲ್ಲಿಯೇ ಸೃಷ್ಟಿಸುವರು. ಇವು ಶಾಂತಿಯುತ ಮತ್ತು ಮೌಲ್ಯಯುತ ಸಾಮಾಜಿಕ ಜೀವನಕ್ಕೆ ಅಗತ್ಯವಾಗಿದೆ. ಮೇಲುಕೋಟೆಯ ಮಹಿಳೆಯರ ಧಾರ್ಮಿಕ ಆಚರಣೆಗಳು ಭಕ್ತಿ ಅಥವಾ ಆರಾಧನೆಗಳು ಸಹಯೋಗವನ್ನು ಹೊಂದಿವೆ. ದರ್ಶನ ಧರ್ಮವು ಶ್ರೀ ವೈಷ್ಣವರ ಆಚರಣೆಗಳ ವಿಷಯವಸ್ತುವಾಗಿದ್ದು, ದರ್ಶನ ಧರ್ಮದಲ್ಲಿ ಮಹಿಳೆಯರು ಪ್ರಮುಖ ಪಾತ್ರ ನಿರ್ವಹಿಸುವರು[58].

ಆಂಡಾಳ್ ಕುರೇಶರ ಪತ್ನಿಯಾಗಿದ್ದು ರಾಮಾನುಜರ ಶಿಷ್ಯೆಯಾಗಿದ್ದು ಪುರುಷರ ಜೊತೆ ಬಹಿರಂಗ ಚರ್ಚೆಗಳಲ್ಲಿ ಪಾಲ್ಗೊಂಡಿದ್ದಳು.[59] ಸ್ತ್ರೀಯರು ಸಾರ್ವಜನಿಕವಾಗಿ ಯಾವುದೇ ಧಾರ್ಮಿಕ ವಿಚಾರಗಳ ಕುರಿತು ಚರ್ಚೆಯಲ್ಲಿ ಭಾಗವಹಿಸುವ ಅವಕಾಶ ಇರಲಿಲ್ಲ. ಆದರೆ ಇದು ಶ್ರೀ ವೈಷ್ಣವ ಆಚರಣೆಗಳಲ್ಲಿ ನಿವಾರಿಸಲ್ಪಟ್ಟಿತ್ತು.

ರಾಮಾನುಜರ ದೃಷ್ಟಿ ಮತ್ತು ದಾರಿಯನ್ನು ಸ್ವೀಕರಿಸಿದ ಬ್ರಾಹ್ಮಣೇತರ ಜಾತಿ ವರ್ಗಗಳಿಂದ ಶ್ರೀ ವೈಷ್ಣವ ಪಂಥ ಸ್ವೀಕರಿಸಿದವರಲ್ಲಿ ಶಾತ್ತಾದ ಶ್ರೀ ವೈಷ್ಣವರು ಪ್ರಮುಖರು. ಸ್ತ್ರೀಯರು ಶಾತ್ತಾದ ಪಂಗಡದಲ್ಲಿ ತಮ್ಮ ಪ್ರತಿಭೆಯಿಂದ ಗುರುತಿಸಲ್ಪಟ್ಟಿದ್ದಾರೆ. ಅವರು ಔಷಧ, ಸಂಗೀತ, ನೃತ್ಯ ಮತ್ತು ಅಲಂಕಾರಿಕ ಕಲೆಯಲ್ಲಿ ನಿಪುಣತೆ ಪಡೆದಿದ್ದರು. ಚಿತ್ರಕಲೆಯಲ್ಲಿ ವಿಶೇಷ ಪರಿಣಿತಿ ಪಡೆದಿದ್ದರು. ಇವನ್ನು ದೇವಾಲಯಗಳಲ್ಲಿ ಸೇವೆಯ ರೂಪದಲ್ಲಿ ಸಮರ್ಪಿಸುತ್ತಿದ್ದರು. ಭಗವಂತನ ಭಕ್ತಿಯಲ್ಲಿ ಮುಳುಗುತ್ತಿದ್ದರು. ದೇವರ ಹಾಡುಗಳನ್ನು ಹಾಡುತ್ತಿದ್ದುದಲ್ಲದೆ, ಭಜನೆ ಮತ್ತು ಕಾಲಕ್ಷೇಪಗಳಲ್ಲಿಯೂ ತೊಡಗಿಸಿಕೊಂಡಿದ್ದರು. ನೃತ್ಯದ ಜೊತೆಗೆ ಅಭಿನಯ ಕಲೆಯನ್ನು ರೂಢಿಸಿಕೊಂಡರು. ಸ್ತ್ರೀಯರು ದೇವಾಲಯದ ಆವರಣವನ್ನು ಸ್ವಚ್ಛ ಮತ್ತು ಸುಂದರವಾಗಿಸಲು ತಮ್ಮನ್ನು ತೊಡಗಿಸಿಕೊಂಡಿದ್ದರು. ದೇವಾಲಯದ ಆವರಣದಲ್ಲಿ ಚಿತ್ರ ಬಿಡಿಸುವ, ಉತ್ಸವ ಹಾದು ಹೋಗುವ ಬೀದಿಗಳಲ್ಲಿ ರಂಗೋಲಿ ಬಿಡಿಸುವ ಪದ್ಧತಿಯಿದ್ದು, ಇಂದಿಗೂ ಜೀವಂತವಾಗಿದೆ. ಹೂಮಾಲೆಗಳನ್ನು ತಯಾರಿಸುವ, ದೇವರ ಉತ್ಸವಗಳಲ್ಲಿ ದೀಪಾರಾಧನೆ, ಹೂವಿನ ಬುಟ್ಟಿಗಳ ತಯಾರಿಕೆ, ತಾಳೆ ಎಲೆಗಳ ಪೆಟ್ಟಿಗೆ ಮತ್ತು ಪವಿತ್ರ ತಟ್ಟೆಗಳ ತಯಾರಿಕೆ, ಅರಿಶಿಣ, ಕುಂಕುಮಗಳನ್ನು ತಯಾರಿಸುವ ಕಲೆಯನ್ನು ರೂಢಿಸಿಕೊಂಡಿದ್ದರು.

ಸ್ತ್ರೀಯರೂ ಸಹ ಮೇಲುಕೋಟೆಯ ದೇವಾಲಯಗಳಿಗೆ ಉದಾರವಾಗಿ ದಾನ ನೀಡಿರುವ ಅಂಶಗಳು ಶಾಸನಗಳಿಂದ ತಿಳಿದುಬರುತ್ತವೆ. ವಿಜಯನಗರ ಆಳ್ವಿಕೆಯ ಕಾಲದ ನಾಗಮಂಗಲದ ಮಹಾಪ್ರಧಾನ ತಿಮ್ಮಣ್ಣ ದಣ್ಣಾಯಕನ ಪತ್ನಿ ರಂಗನಾಯಕಮ್ಮಳು ಮೇಲುಕೋಟೆ ದೇವಾಲಯಕ್ಕೆ ರಾಮಾನುಜಕೂಟವೆಂಬ ಅನ್ನಸತ್ರವನ್ನು ಕಟ್ಟಿಸಿ, ನಿತ್ಯ ತದೀಯಾರಾಧನೆ ನಡೆಸುವಂತೆ ಶಾಸನ ಬರೆಸಿದಳು. ದೇವಾಲಯದ ಸುತ್ತ ಕೈಸಾಲೆ ನಿರ್ಮಿಸಿದಳಲ್ಲದೆ, ಶ್ರೀ ವೈಷ್ಣವ ಬ್ರಾಹ್ಮಣರ ತದೀಯಾರಾಧನೆಗೆ ಮೇಲುಕೋಟೆಯ ಸುತ್ತಲಿನ ಕೆಲವು ಭೂಮಿಯನ್ನು ದಾನಮಾಡಿದ್ದಾಳೆ.[60]

ಕ್ರಿ.ಶ. 1469 ವಿಜಯನಗರದ ವಿರೂಪಾಕ್ಷನ ಆಳ್ವಿಕೆಯ ಕಾಲದ ತಿಮ್ಮಣ್ಣ ದಣ್ಣಾಯಕನ ಜೊತೆ ಸೇರಿ ಮೇಲುಕೋಟೆ ನಾರಾಯಣ ಭಕ್ತೆಯಾದ ನಾಚ್ಚಿಯಾರಮ್ಮರು, ನಮ್ಮಾಳ್ವಾರ್ ಮತ್ತು ನಾರಾಯಣ ದೇವರ ಕೈಂಕರ್ಯ ಮಾಡಲು 13 ಗೃಹಗಳನ್ನು ನಿರ್ಮಿಸಿ, 12ನ್ನು ಶ್ರೋತ್ರಿ ಬ್ರಾಹ್ಮಣರಿಗೂ, 1 ಗೃಹವನ್ನು ಕೈಂಕರ್ಯ ಪರರಾದ ಐವತ್ತಿಬ್ಬರಿಗೂ ದಾನ ಮಾಡಿದಳು.[61] ಕ್ರಿ.ಶ. 1521ರಲ್ಲಿ ವಾಬಾಜಮ್ಮಳು ತಿರುನಾರಾಯಣ ದೇವರಿಗೆ ತಿರುನಂದನವನ ಸೇವೆ ಮಾಡಿಸಿದಳು.[62] ಬೆಳಗೊಳದ ಅಕ್ಕಚ್ಚಿ ಮತ್ತು ಪೆರುಂದೇವಿ ಎಂಬ ಅಕ್ಕತಂಗಿಯರು ತಿರುನಾರಾಯಣ ದೇವರಿಗೆ ನಿವೇದನೆ ಮತ್ತು ತಿರುಮಾಲೆ ಕೈಂಕರ್ಯಕ್ಕೆ ಕೆಲವು ಭೂಮಿ ಸಮರ್ಪಿಸಿದ್ದಾರೆ.[63] ಚಾಮರಾಜ ಒಡೆಯರ ಧರ್ಮಪತ್ನಿ

ಮುದ್ದುರಾಜಮ್ಮಣ್ಣಿಯವರು ಶಿಥಿಲವಾಗಿದ್ದ ಮೇಲುಕೋಟೆಯ ಕಲ್ಯಾಣಿ ಪುಷ್ಕರಿಣಿಗೆ ಸೋಪಾನ ನಿರ್ಮಿಸಿ ಸುತ್ತಲೂ ಮಂಟಪ ನಿರ್ಮಿಸಿದರು.[64] ಗೋವಿಂದಯ್ಯನ ಹೆಂಡತಿ ಹೊನ್ನಮ್ಮ ಹಾಗೂ ಅಪ್ಪಾಜಮ್ಮನ ಸೊಸೆ ಅಮ್ಮಣ್ಣಮ್ಮ ಕೆಲವು ದಾನಗಳನ್ನು ನೀಡಿದ್ದಾರೆ.[65] ಅಮೃತಮ್ಮ ಎಂಬ ನಾರಾಯಣನ ಭಕ್ತೆಯು ದೇವರ ಕೈಂಕರ್ಯಕ್ಕೆ ಮಂಟಪವನ್ನು ನಿರ್ಮಿಸಿದ್ದಾಳೆ.[66]

ತಿರುಮಲಾಚಾರ್ಯರ ಧರ್ಮಪತ್ನಿಯರಾದ ನಾಚಾಗಮ್ಮ ಮತ್ತು ತಿರುವೆಂಗಡಮ್ಮನವರು ಬೆಟ್ಟದ ಯೋಗಾನರಸಿಂಹಸ್ವಾಮಿ ದೇವಾಲಯಕ್ಕೆ ಬೆಳ್ಳಿಯ ಬಟ್ಟಲನ್ನು ದಾನಮಾಡಿದ್ದಾಳೆ.[67] ಮೇಲುಕೋಟೆ ಕಲ್ಯಾಣಿ ಕೆಂಪಮ್ಮನ ಮಗಳು ಪುಟ್ಟಸಿಂಗಮ್ಮ ಹಾಗೂ ಪುಟ್ಟನರಸಮ್ಮರು ಯೋಗಾನರಸಿಂಹ ದೇವಾಲಯಕ್ಕೆ ಕೆಲವು ದಾನಮಾಡಿದ್ದಾರೆ.[68] ಯಳವಂದೂರಿನ ರಾಣಿಯಾದ ದೇವರಾಜಮ್ಮನವರು ಕಲ್ಯಾಣಿಯಲ್ಲಿ ದೇವರ ಕೈಂಕರ್ಯಕ್ಕೆ ಮಂಟಪ ನಿರ್ಮಿಸಿದಳು.[69] ಮೇಲುಕೋಟೆ ಶ್ರೀ ಯೋಗಾನರಸಿಂಹ ಸ್ವಾಮಿ ದೇವರಿಗೆ ಮೈಸೂರು ಸಂಸ್ಥಾನದ ಕೃಷ್ಣರಾಜ ಒಡೆಯರ ಧರ್ಮಪತ್ನಿ ಲಿಂಗರಾಜಮ್ಮಣ್ಣಿಯವರು ಸ್ವರ್ಣಕಿರೀಟವನ್ನು ಮಾಡಿಸಿದ್ದಾರೆ.[70] ಚೆಲುವ ಅರಸನ ಇಬ್ಬರು ಹೆಣ್ಣುಮಕ್ಕಳು ಮೇಲುಕೋಟೆಯಲ್ಲಿ ಎರಡು ಕೊಳಗಳನ್ನು ಕಟ್ಟಿಸಿದ್ದು, ಅವನ್ನು ಅಕ್ಕ–ತಂಗಿ ಕೊಳ ಎಂದು ಕರೆಯುವರು.

ಮೇಲುಕೋಟೆ ಚೆಲುವರಾಯಸ್ವಾಮಿ ದೇವಾಲಯದಲ್ಲಿ ಕೆಲವು ದೈಹಿಕ ಕೆಲಸಗಳಿಗೂ ಸ್ತ್ರೀಯರನ್ನು ನೇಮಿಸಲಾಗಿತ್ತು. ಧಾನ್ಯಗಳನ್ನು ಶುದ್ಧಗೊಳಿಸಲು 'ಕಂಬಳಗಿತ್ತಿ' ಎಂಬ ಹೆಸರಿನಿಂದ ನೇಮಿಸಲಾಗಿತ್ತು. ದೇವಾಲಯದ ಒಳಭಾಗ ಮತ್ತು ಹೊರ ಆವರಣಗಳನ್ನು ಗುಡಿಸಲು ಝಾಡಮಾಲಿಗಳಾಗಿ ಸ್ತ್ರೀಯರನ್ನು ನೇಮಿಸಲಾಗಿತ್ತು[71]. ಉತ್ಸವಗಳು ಹಾದುಹೋಗುವ ಬೀದಿಗಳಲ್ಲಿ ನಡೆಮುಡಿ ಹಾಸುವವರೂ ಸಹ ಸ್ತ್ರೀಯರೇ ಆಗಿದ್ದರು, ಗಮನಾರ್ಹ ಅಂಶವೆಂದರೆ ಇವರೆಲ್ಲರೂ ಕೆಳವರ್ಗಗಳಿಗೆ ಸೇರಿದ ಮಹಿಳೆಯರಾಗಿದ್ದರು.

ದೇವಾಲಯವು ಹಲವು ನೃತ್ಯಮಾಡುವ, ಸಂಗೀತ ಹಾಡುವ ಮತ್ತು ದೈಹಿಕ ಕೆಲಸಕ್ಕೆ ಮಹಿಳೆಯರನ್ನು ನೇಮಿಸಿಕೊಳ್ಳುತ್ತಿತ್ತು. ಇವು ದೇವಾಲಯ ಆರಾಧನೆಗೆ ಅತ್ಯಗತ್ಯವಾದ ಭಾಗವಾಗಿದ್ದವು. ದೇವಾಲಯಗಳಿಗೆ ಮೇಲಿನ ಉದ್ದೇಶಗಳಿಗೆ ಸ್ತ್ರೀಯರನ್ನು ನೇಮಿಸುವುದು ಸಾಮಾನ್ಯ ಲಕ್ಷಣವಾಗಿತ್ತು. ದೇವಾಲಯದ ಉತ್ಸವಗಳು ದೇವರನ್ನು ಒಲಿಸಿಕೊಳ್ಳುವ ಮತ್ತು ತೃಪ್ತಿಪಡಿಸುವ ಉದ್ದೇಶವಾಗಿತ್ತು. ಇದರ ಜೊತೆಗೆ ಹೂವುಗಳನ್ನು ಒದಗಿಸುವುದು, ಹಣ್ಣು, ಸುಗಂಧ ದ್ರವ್ಯಗಳು, ಹಾಗೂ ದೀಪಗಳನ್ನು ನೀಡುವುದರ ಮೂಲಕವೂ ದೇವರನ್ನು

ಸಂತೋಷಪಡಿಸಲಾಗುತ್ತಿತ್ತು. ನೃತ್ಯ ಮತ್ತು ಸಂಗೀತಗಳೂ ಉತ್ಸವಗಳಲ್ಲಿ ಪ್ರಮುಖ ಭಾಗವಾದವು ಮತ್ತು ದೇವರ ಅನುಗ್ರಹವನ್ನು ಬಯಸಿ ಪ್ರದರ್ಶಿಸುತ್ತಿದ್ದರು. ಇದು ದೇವರಿಗೆ ಮನರಂಜನೆಯಾಗಿಯೂ ನೀಡಲಾಗುತ್ತಿತ್ತು. ಅಲ್ಲದೆ ಅದೇ ಸಮಯದಲ್ಲಿ ಭಕ್ತಾಧಿಗಳಿಗೂ ಮನರಂಜನೆ ಹಾಗೂ ಶಿಕ್ಷಣವನ್ನು ಕೊಡುತ್ತಿತ್ತು. ಈ ಆಚರಣೆಗಳಿಂದ ದೇವಾಲಯಗಳು ಕಲೆಯ ಅಭಿವ್ಯಕ್ತಿಗೆ ಕೇಂದ್ರ ಸ್ಥಳಗಳಾದವು. ಅಲ್ಲದೆ ದೇವಾಲಯದ ಬೆಳವಣಿಗೆ ಮತ್ತು ಅಭಿವೃದ್ಧಿಗಳಿಗೆ ಪೂರಕವಾದವು. ದೇವಾಲಯದ ನೃತ್ಯಗಾರ್ತಿಯರು ಕಲೆಯ ಮೇಲ್ವಿಚಾರಕರಾದರು. ನೃತ್ಯ ಮತ್ತು ಸಂಗೀತಗಳ ಆರಣೆಯು ಅತ್ಯಗತ್ಯವಾದ ಬೇರ್ಪಡಿಸಲಾಗದ ಭಾಗವಾದವು.

ದಕ್ಷಿಣ ಭಾರತದ ಬಹುತೇಕ ಎಲ್ಲಾ ದೇವಾಲಯಗಳು ನಾಟ್ಯಮಂಟಪವನ್ನು ಹೊಂದಿವೆ. ಇದು ಸಾಮಾನ್ಯವಾಗಿ ಗರ್ಭಗೃಹದ ಮುಂಭಾಗದಲ್ಲಿ ಹೊಂದಿಸಲಾಗಿರುತ್ತದೆ. ಮೇಲುಕೋಟೆಯ ಮುಖ್ಯ ದೇವಾಲಯ ನಾರಾಯಣಸ್ವಾಮಿ ದೇವಾಲಯದಲ್ಲಿ ವಿಜಯನಗರದ ಅರಸು ಮಲ್ಲಿಕಾರ್ಜುನನ ಕಾಲದಲ್ಲಿ ನಾಗಮಂಗಲದ ಮಹಾಪ್ರಧಾನ ತಿಮ್ಮಣ್ಣ ದಣ್ಣಾಯಕನ ಪತ್ನಿ ರಂಗಾಂಬಿಕೆಯು ಈ ದೇವಾಲಯಕ್ಕೆ ರಂಗಮಂಟಪವನ್ನು ನಿರ್ಮಿಸಿದಳು. ಇದು ಕ್ರಿ.ಶ. 1458ರ ತಾಮ್ರಶಾಸನದಲ್ಲಿ ಉಲ್ಲೇಖವಾಗಿದೆ.[72] ಅಲಂಕೃತವಾದ ಇಲ್ಲಿನ ಸ್ತಂಭಗಳಿಂದ ದೃಢಪಡುವ ಅಂಶವೆಂದರೆ ಸ್ತ್ರೀಯರು ಸಂಗೀತದ ಉಪಕರಣಗಳಲ್ಲಿಯೂ ಸಹ ಪರಿಣತಿಪಡೆದಿದ್ದರು. ತಮಟೆ ಭಾರಿಸುತ್ತಿರುವ ಸ್ತ್ರೀ, ಕೋಲಾಟ ಆಡುತ್ತಿರುವ ಸ್ತ್ರೀಯರು, ಮದ್ದಲೆ ಬಾರಿಸುವ ಸ್ತ್ರೀ, ನಾದಸ್ವರವನ್ನು ನುಡಿಸುತ್ತಿರುವ ಸ್ತ್ರೀಯ ದೃಶ್ಯಗಳು ಸಂಗೀತ ಉಪಕರಣಗಳಲ್ಲಿ ಅವರಿಗೂ ಪರಿಣತಿಯ ಮೇಲೆ ಬೆಳಕು ಚೆಲ್ಲುತ್ತದೆ.

ಮನರಂಜನೆಗಳಾದ, ನಾಟಕ, ನೃತ್ಯ, ಸಂಗೀತ, ಹಾಡುಗಾರಿಕೆಗಳು ದೇವಾಲಯದ ಭಾಗಗಳಾದವು ಮತ್ತು ಅವು ಸಾಮಾನ್ಯವಾಗಿ ಧಾರ್ಮಿಕ ವಿಷಯಗಳನ್ನು (ಅಂಶಗಳನ್ನು) ವರ್ಣಿಸುತ್ತಿದ್ದು, ಜನರ ಸಾಂಸ್ಕೃತಿಕ ಜೀವನದಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದ್ದವು. ಹೀಗೆ ದೇವಾಲಯಗಳಲ್ಲಿ ಸ್ತ್ರೀಯರು ಪ್ರಾಧಾನ್ಯತೆ ಪಡೆದು ಧಾರ್ಮಿಕ ಜೀವನದಲ್ಲಿ ತಮ್ಮನ್ನು ಈ ಮೂಲಕ ಗುರುತಿಸಿಕೊಂಡರು. ದೇವಾಲಯ ಮತ್ತು ಸ್ತ್ರೀಯರ ನಡುವೆ ಹತ್ತಿರದ ಸಂಬಂಧಗಳು ಏರ್ಪಡುವಂತಾಯಿತು. ಇವರ ಆಧ್ಯಾತ್ಮಿಕ ಅವಕಾಶಗಳು ದೇವಾಲಯದ ಉನ್ನತ ಅಧಿಕಾರದ ಮೂಲಗಳಿಂದ ಗೌರವವನ್ನು ತಂದುಕೊಟ್ಟವು.

ಮೇಲುಕೋಟೆ ದೇವಾಲಯದ ಸ್ತಂಭಗಳು ಮತ್ತು ಹೊರಗೋಡೆಗಳಲ್ಲಿರುವ ಶಿಲ್ಪಕಲೆಯು ಸ್ತ್ರೀಯರ ದೇವಾಲಯದೊಂದಿಗಿನ ಸಂಬಂಧಗಳ ಮೇಲೆ ಬೆಳಕು ಚೆಲ್ಲುತ್ತವೆ. ಆರತಿಯನ್ನು ಹಿಡಿದಿರುವ ಸ್ತ್ರೀ, ದೇವರಿಗೆ ಚಾಮರ ಬೀಸುತ್ತಿರುವ ಸ್ತ್ರೀ, ಉತ್ಸವದಲ್ಲಿ ಕನ್ನಡಿ

ಹಿಡಿದಿರುವ ಸ್ತ್ರೀ, (ದರ್ಪಣ ಸುಂದರಿಯರು), ಲಕ್ಷ್ಮಿದೇವಿ ಗುಡಿಯ ಮುಂದೆ ದ್ವಾರಪಾಲಿಕೆಯರಾಗಿ ದ್ವಾರದ ಎರಡೂ ಬದಿಯಲ್ಲಿ ನಿಂತಿರುವ ಸ್ತ್ರೀಯರು. ಹೀಗೆ ಹಲವು ಶಿಲ್ಪಗಳು ದೇವಾಲಯದೊಂದಿಗೆ ಸ್ತ್ರೀಯರು ಹೊಂದಿದ್ದ ಹತ್ತಿರದ ಸಂಬಂಧವನ್ನು ತಿಳಿಸುತ್ತವೆ. ಕನ್ನಡಿ ಹಿಡಿದು ಕೇಶಾಲಂಕಾರ ಮಾಡಿಕೊಳ್ಳುತ್ತಿರುವ ಸ್ತ್ರೀ, ಹೋಲಿ ಆಚರಿಸುತ್ತಿರುವ ಸ್ತ್ರೀಯ ಶಿಲ್ಪಗಳು, ಮಗುವನ್ನು ಸಂತೈಸುತ್ತಿರುವ ಸ್ತ್ರೀ, ಇವು ಅವಳ ಸಾಮಾಜಿಕ ಸ್ಥಾನಗಳ ಮೇಲೆ ಬೆಳಕು ಚೆಲ್ಲುತ್ತವೆ. ಸ್ತ್ರೀಯರ ಸಾಮಾಜಿಕ ಜೀವನವು ಧಾರ್ಮಿಕ ತತ್ವಗಳೊಂದಿಗೆ ಸಂಬಂಧ ಹೊಂದಿವೆ. ಧಾರ್ಮಿಕ ಅವಕಾಶಗಳು ಮದುವೆ ವೈರಾಗ್ಯವಿಲ್ಲದ ಅಂಶಗಳು ಧರ್ಮದ ತಾರ್ಕಿಕ ಸಲಹೆಗಳಾಗಿವೆ. ಧರ್ಮದ ಹಾದಿಯಲ್ಲಿ ಮಹಿಳೆಯರು ತೊಡಕಲ್ಲ, ಧಾರ್ಮಿಕ ಸಮಾರಂಭಗಳಲ್ಲಿ ಅವಳ ಪಾಲ್ಗೊಳ್ಳುವಿಕೆ ಮತ್ತು ಸಹಕಾರಗಳು ಅಗತ್ಯವಾಗಿರುತ್ತದೆ.

ದೇವದಾಸಿಯರು

ದೇವದಾಸಿ ಪದ್ಧತಿಯು ಮಧ್ಯಯುಗದ ಆರಂಭದಲ್ಲಿ ಆಚರಣೆಗೆ ಬಂದ ಕರ್ನಾಟಕದ ಕೆಲವು ವಿಶಿಷ್ಟ ಅನಿಷ್ಟ ಪದ್ಧತಿಗಳಲ್ಲಿ ಒಂದು. ಈ ಸಂಪ್ರದಾಯದಿಂದ ಸಮಾಜದಲ್ಲಿ ಹೊಸ ವರ್ಗವೊಂದು ಹುಟ್ಟಿಕೊಳ್ಳುವಂತಾಯಿತು. ಆ ವರ್ಗದವರನ್ನು ದೇವದಾಸಿಯರು, ಬಸವಿಯರು ಹಾಗೂ ಸೂಳೆಯರು ಎನ್ನುವ ಹೆಸರಿನಿಂದ ಕರೆಯಲಾಯಿತು.[73] ದೇವದಾಸಿಯರು ರಂಗಭೋಗದ ಉಪಕರಣಗಳಾಗಿದ್ದರು.[74] ರಾಜಪ್ರಭುತ್ವ, ಧಾರ್ಮಿಕ ಪ್ರಭುತ್ವ, ಪುರುಷ ಪ್ರಭುತ್ವಗಳು ತಮ್ಮ ಸ್ವಾರ್ಥ ಮತ್ತು ಲಾಸ್ಯ ಜೀವನಕ್ಕೆ ಬಳಸಿಕೊಂಡವು. ದೇವಾಲಯಗಳು ಇವರನ್ನು ಶೋಷಿಸಿದ್ದಲ್ಲದೆ, ಶೋಷಣೆಯನ್ನು ಶಾಸನಬದ್ಧಗೊಳಿಸಿದವು. ಇದು ಸ್ತ್ರೀಯರನ್ನು ಸಮಾಜ ಕಂಡ ಕರಾಳ ಮುಖವಾಗಿದೆ. ದೇವಾಲಯಗಳು ಇವುಗಳ ಕೇಂದ್ರವಾಗಿದ್ದು ವಾತಾವರಣವನ್ನು ಕಲುಷಿತಗೊಳಿಸಿದ್ದವು. ದೇವದಾಸಿಯರನ್ನು ಭಗವಂತನ ದಾಸಿಯರು, ದೇವರ ಸೇವೆಗೆ ಮೀಸಲಾದವರು ಎಂದು ನಂಬಲಾಗಿತ್ತು. "ದೇವರಪೂಜೆಯ ಸಂದರ್ಭದಲ್ಲಿ ಸಂಗೀತಕ್ಕಾಗಿ ಸ್ತ್ರೀಯರನ್ನು ನೇಮಿಸಿಕೊಳ್ಳಬೇಕೆಂದು ಹಲವು ಪುರಾಣಗಳು ಹೇಳುತ್ತವೆ. ಈ ಸ್ತ್ರೀಯರು ಸಾಮಾನ್ಯವಾಗಿ ವೇಶ್ಯೆಯರು, ಇವರನ್ನು ದೇವಸ್ಥಾನಗಳಿಗಾಗಿ ಕೊಂಡುಕೊಳ್ಳಬೇಕೆಂದು ಕೆಲವು ಪುರಾಣಗಳು ಸೂಚಿಸುವುದು ವಿಷಾದನೀಯ.[75] ಹೆಚ್ಚಿನ ಸಂಖ್ಯೆಯ ದೇವದಾಸಿಯರನ್ನು ನೇಮಕಮಾಡಿಕೊಳ್ಳುವುದು ದೇವಾಲಯಗಳಿಗೆ ಪ್ರತಿಷ್ಠೆಯಾಗಿತ್ತು.[76]

ದೇವಾಲಯಗಳಿಗೆ ಹೆಣ್ಣನ್ನು ಬಿಡುವ ಸಂಪ್ರದಾಯ ಕರ್ನಾಟಕದಲ್ಲಿ ಯಾವಾಗ ಆರಂಭಗೊಂಡಿತು ಎನ್ನುವುದರ ಸ್ಪಷ್ಟ ಚಿತ್ರಣ ಸಿಗುವುದಿಲ್ಲ. ಕ್ರಿ.ಶ. 778–779ರ ಪಟ್ಟದ ಕಲ್ಲು

ಶಾಸನದಲ್ಲಿ ದೇಗುಲದಸೂಳೆ ಎನ್ನುವ ಉಲ್ಲೇಖವಿದೆ.[77] ಬಡಕುಟುಂಬಗಳಿಗೆ ಸೇರಿದ ಹೆಣ್ಣುಮಕ್ಕಳನ್ನು ತಂದೆತಾಯಿಗಳೇ ದೇವಾಲಯಕ್ಕೆ ಬಿಟ್ಟು ಹಣ ಪಡೆಯುತ್ತಿದ್ದರು. ಇವರನ್ನು ಯಾರೂ ಮದುವೆಯಾಗುವಂತಿರಲಿಲ್ಲ. ಕುಟುಂಬ ವ್ಯವಸ್ಥೆಯಲ್ಲಿ ಶೋಷಣೆದೊಳಗಾಗುತ್ತಿದ್ದ ಮಹಿಳೆ ಈಗ ಸಾರ್ವಜನಿಕವಾಗಿ ಶೋಷಣೆಗೊಳಗಾಗಬೇಕಾಯಿತು. ಇದೊಂದು ಪುಣ್ಯಕಾರ್ಯ ಎಂಬ ನಂಬಿಕೆ ಸಮಾಜದಲ್ಲಿ ಬಲವಾಗಿ ಬೇರೂರಿತ್ತು. ಇವರು ಅಂಗಭೋಗ ಮತ್ತು ರಂಗಭೋಗ ಎರಡೂ ಸೇವೆಗಳನ್ನು ಆಲಯದಲ್ಲಿ ಸಲ್ಲಿಸಬೇಕಿತ್ತು. ನಿತ್ಯಸೇವೆಗಳ ಜೊತೆಗೆ ವಾರ್ಷಿಕ ಉತ್ಸವಗಳ ಸಂದರ್ಭದಲ್ಲಿ ಸಂಗೀತ, ನೃತ್ಯಸೇವೆ ಸಲ್ಲಿಸಬೇಕಿತ್ತು.

ಮೇಲುಕೋಟೆ ದೇವಾಲಯಗಳಲ್ಲಿ ದೇವದಾಸಿ ಪದ್ಧತಿ ಇದ್ದುದಕ್ಕೆ ಸ್ಪಷ್ಟ ಆಧಾರಗಳು ಸಿಗುತ್ತವೆ. ಆದರೆ ಇಲ್ಲಿನ ಯಾವೊಂದು ಶಾಸನಗಳು ದೇವದಾಸಿ ಅಥವಾ ಸೂಳೆ ಎಂಬ ಪದವನ್ನು ಉಲ್ಲೇಖಿಸಿಲ್ಲ. ದೇವಾಲಯದ ಕೈಪಿಡಿಯಲ್ಲಿ ದೇವದಾಸಿಯರಿಗಿದ್ದ ಅವಕಾಶಗಳ ಉಲ್ಲೇಖ ಮತ್ತು ಮೌಖಿಕ ಆಕರಗಳು ದೇವದಾಸಿಯರ ಕುರಿತು ತಿಳಿಸುವ ಪ್ರಬಲ ಆಕರಗಳಾಗಿವೆ. ದೇವಾಲಯದ ಸ್ತಂಭಗಳು ಮತ್ತು ಹೊರಗೋಡೆಗಳಲ್ಲಿರುವ ಶಿಲ್ಪಗಳೂ ದೇವದಾಸಿಯರ ಕುರಿತು ಮಾಹಿತಿ ಒದಗಿಸುತ್ತವೆ. ದೇವಾಲಯಗಳ ಗೋಡೆಗಳ ಮೇಲೆ ನಾಟ್ಯಭಂಗಿಯ ದೃಶ್ಯಗಳು ಶಿಲ್ಪಕಲೆಗೆ ದೇವಾಲಯದ ಸ್ತ್ರೀಯರು ಸ್ಫೂರ್ತಿಯಾದರು.[78] ವಿಜಯನಗರದ ಅರಸರ ಆಡಳಿತಕ್ಕೆ ಮೇಲುಕೋಟೆ ಒಳಪಟ್ಟ ನಂತರ ಈ ಪದ್ಧತಿಯು ಪ್ರಬಲವಾದಂತೆ ತೋರುತ್ತದೆ. ವಿಜಯನಗರದ ಅರಸರು ದೇವಾಲಯಕ್ಕೆ ನೀಡಿದ ಉದಾರವಾದ ದಾನಗಳು ಮತ್ತು ಭಕ್ತಾಧಿಗಳ ಸಂಖ್ಯೆ ಹೆಚ್ಚಾದಂತೆ ಆರ್ಥಿಕವಾಗಿ ದೇವಾಲಯಗಳು ಸಬಲವಾದವು. ಹೆಚ್ಚಿನ ಸಂಖ್ಯೆಯ ದೇವದಾಸಿಯರನ್ನು ದೇವಾಲಯಕ್ಕೆ ನೇಮಿಸಿಕೊಳ್ಳಲಾರಂಭಿಸಿದರು. ವೈದಿಕ ಪುರಾಣಗಳ ಆದರ್ಶವನ್ನೇ ಪಾಲಿಸುತ್ತಿದ್ದ ದೇವಾಲಯ, ವೈದಿಕ ಪುರಾಣಗಳು ತಿಳಿಸುವಂತೆ ದೇವದಾಸಿಯರನ್ನು ಕೊಂಡುಕೊಳ್ಳುತ್ತಿದ್ದವು.[79] ಒಟ್ಟು ಸಂಖ್ಯೆಯ ದೇವದಾಸಿಯರಲ್ಲಿ ಕೆಲವೇ ಸಂಖ್ಯೆಯ ದೇವದಾಸಿಯರು ದೇವಾಲಯದಲ್ಲಿ ಸೇವೆಸಲ್ಲಿಸುತ್ತಿದ್ದರು. ಅದಕ್ಕೆ ಸಂಬಳದ ರೂಪದಲ್ಲಿ ಹಣವನ್ನು ಪಡೆಯುತ್ತಿದ್ದರು. ಆದರೆ ಭೂಮಿಯ ರೂಪದಲ್ಲಿ ನೀಡಿರುವ ಸಂಭಾವನೆಯ ಯಾವುದೇ ದಾಖಲೆಗಳಿಲ್ಲ. ರಾಜಪ್ರಭುತ್ವವು ಸೂಳೆಗಾರಿಕೆಯನ್ನು ಒಂದು ವೃತ್ತಿಯನ್ನಾಗಿ ಪರಿವರ್ತಿಸಿದ ನಂತರ ಮೇಲುಕೋಟೆಯಲ್ಲಿ ದೇವದಾಸಿಯರ ಸಂಖ್ಯೆ ಹೆಚ್ಚಾಯಿತು. ಇದು ವಿಜಯನಗರದ ಅರಸರ ಕಾಲದಲ್ಲಿ ಆದ ಬದಲಾವಣೆಯಾಗಿದೆ. ಇವರು ವಾಸಿಸಲು ಮೇಲುಕೋಟೆಯಲ್ಲಿ ಪ್ರತ್ಯೇಕವಾದ ಕೇರಿಯನ್ನು ಸೀಮಿತಗೊಳಿಸಲಾಗಿತ್ತು. ಈಗಲೂ ಈ ಕೇರಿಯಲ್ಲಿ ಅವರ ವಂಶಸ್ಥರೇ ವಾಸವಾಗಿದ್ದಾರೆ. ಈ ಕೇರಿಯು ದೇವಾಲಯಕ್ಕೆ ಹತ್ತಿರದಲ್ಲೇ ಇದೆ. ಈ ಹುದ್ದೆಯು ಕಾನೂನುಬದ್ಧ ಮತ್ತು ಗೌರವಾನ್ವಿತ ಎಂದು ಪರಿಗಣಿತವಾದರೂ,

ಸಮಾಜದಲ್ಲಿ ಅವರಿಗೆ ಉನ್ನತ ಸ್ಥಾನ ಲಭಿಸಲಿಲ್ಲ. ಕೆಲವು ದೇವದಾಸಿಯರು ಹಿಂದೂ ಉನ್ನತ ವರ್ಗಗಳೊಂದಿಗೆ ಶಾಶ್ವತ ಒಪ್ಪಂದ ಮಾಡಿಕೊಂಡು, ತಮ್ಮ ಕೊನೆಯುಸಿರಿನವರೆಗೂ ಅವರಿಗೆ ನಿಷ್ಠೆಯನ್ನು ತೋರಿಸುತ್ತಿದ್ದುದು ಸ್ಪಷ್ಟವಾಗುತ್ತದೆ. ಇಲ್ಲಿನ ದೇವದಾಸಿಯರು ಕೆಳಜಾತಿಯ ಜನರ ಜೊತೆ ಸಂಪರ್ಕ ಹೊಂದಿರದೆ ತಮ್ಮ ಸಂಪರ್ಕವನ್ನು ಬ್ರಾಹ್ಮಣವರ್ಗ ಮತ್ತು ಇತರ ಉನ್ನತ ಜಾತಿಗಳೊಂದಿಗೆ ಮಾತ್ರ ಹೊಂದಿದ್ದರು. ಆರ್ಥಿಕ ದೃಷ್ಟಿಯಿಂದ ನೋಡುವುದಾದರೆ, ಹೆಚ್ಚಿನ ಸಂಪಾದನೆ ಹೊಂದಿದ್ದ ಈ ವರ್ಗಗಳನ್ನು ಆಶ್ರಯಿಸುವ ಅನಿವಾರ್ಯತೆ ದೇವದಾಸಿಯರಿಗಿತ್ತು. ದೇವಾಲಯಗಳಿಗೆ ಬಿಟ್ಟ ಹೆಂಗಸರನ್ನು ಮದುವೆಯಾಗಬಾರದು ಎಂಬ ನಂಬಿಕೆಯಿತ್ತು. ಕೆಲವು ಮೂಢನಂಬಿಕೆಗಳಿಂದ ದೇವದಾಸಿಯರು ಈ ವೃತ್ತಿಗೆ ಬಲಂತವಾಗಿ ತಳ್ಳಲ್ಪಡುತ್ತಿದ್ದರು. ದೇವದಾಸಿಯೊಬ್ಬಳು ನಾಲ್ಕು ಹೆಣ್ಣು ಮಕ್ಕಳನ್ನು ಹೊಂದಿದ್ದರೆ ಆಕೆ ಒಬ್ಬ ಮಗಳನ್ನು ದೇವಾಲಯಕ್ಕೆ ಅರ್ಪಿಸಿ ಉಳಿದವರನ್ನು ಅದೇ ಜಾತಿಯ ಹುಡುಗ ಅಥವಾ ಇತರ ಜಾತಿಯ ಹುಡುಗನೊಂದಿಗೆ ಮದುವೆ ಮಾಡಬಹುದು. ಮದುವೆಯಾದ ಹುಡುಗಿಯರು ಹೆಚ್ಚಿನ ಒಲವನ್ನು ತೋರದಿದ್ದರೆ ಆಗ ಆಕೆ ತನ್ನ ಮನೆಯಲ್ಲಿಯೇ ವೇಶ್ಯಾವೃತ್ತಿಯಲ್ಲಿ ತೊಡಗಬಹುದು. ಈಕೆ ದೇವಾಲಯಕ್ಕೆ ಸಮರ್ಪಿತವಾದ ನಂತರ ದೇವದಾಸಿಯಾಗುವಳು. ಒಮ್ಮೆ ದೇವದಾಸಿಯಾಗಿ ಸಮರ್ಪಿತವಾದ ನಂತರ ಈಕೆ ದೇವರ ಯುವತಿಯಾಗುವಳು. ಹೀಗೆ ಈಕೆ ಮದುವೆಯಾಗದೆ ಸ್ವಾತಂತ್ರ್ಯ ಮತ್ತು ಸಂಕೀರ್ಣವಾದ ಜೀವನ ನಡೆಸಿದರೆ ಈ ಜಗತ್ತಿನಲ್ಲಿ ಮತ್ತು ಮುಂದಿನ ಜನ್ಮದಲ್ಲಿಯೂ ಶಿಕ್ಷೆಗೆ ಒಳಗಾಗುವುದಿಲ್ಲ ಎಂಬ ನಂಬಿಕೆಯಿತ್ತು. ಈಕೆ ವೇಶ್ಯಾವೃತ್ತಿಯ ಮೂಲಕ ತನ್ನ ಹಿಂದಿನ ಜನ್ಮದ ಕರ್ಮವನ್ನು ತೊಳೆಯಬಹುದು, ಮದುವೆಯಾದ ಮಹಿಳೆಯರು ಮದುವೆಯಾದ ಗಂಡನಿಗೆ ಮಾತ್ರ ನಿಷ್ಠೆಯಿಂದಿರಬಹುದು ಎಂಬ ಬಲವಾದ ನಂಬಿಕೆ ಇತ್ತು.[80]

ಮೇಲುಕೋಟೆಯ ಪ್ರಧಾನ ದೇವಾಲಯವಾದ ನಾರಾಯಣಸ್ವಾಮಿ ದೇವಾಲಯದಲ್ಲಿ ದೇವದಾಸಿಯರು ನಿರ್ವಹಿಸುತ್ತಿದ್ದ ಪ್ರಮುಖ ಕರ್ತವ್ಯಗಳೆಂದರೆ ಅರ್ಚಕರ ಜೊತೆಗೂಡಿ ಮತ್ತು ನೌಕರರ ಜೊತೆಗೂಡಿ ಉತ್ಸವಗಳನ್ನು ವ್ಯವಸ್ಥೆಗೊಳಿಸುವುದು. ಸುಂಗಂಧ ದ್ರವ್ಯವಿರುವ ನೀರಿನಿಂದ ಮೂರ್ತಿಯನ್ನು ಶುಚಿಗೊಳಿಸುವುದು, ಉತ್ಸವದಲ್ಲಿ ಮೂರ್ತಿಗೆ ಚಾಮರ ಬೀಸುವುದು, ಬೆಳ್ಳಿಕೊಡೆಗಳನ್ನು ಹಿಡಿಯುವುದು, ಆಲಯದ ಸ್ತಂಭಗಳು ಮತ್ತು ಪ್ರಭಾವಳಿಗಳ ಬಳಿ ನಿಲ್ಲುವುದು, ಹಾಡುವುದು ಮತ್ತು ನೃತ್ಯ ಮಾಡುವ ಕೆಲಸದಲ್ಲಿ ತಲ್ಲೀನರಾಗಿದ್ದರು. ದೇವರ ಉತ್ಸವದ ಸಂದರ್ಭದಲ್ಲಿ ಸಾಮಾನ್ಯವಾಗಿ ದೇವದಾಸಿಯರ ಹಾಜರಾತಿ ಇರುತ್ತಿತ್ತು. ತಿರುಪ್ಪಾಡಿಪುರಂ ಕೈಂಕರ್ಯ ನಾರಾಯಣಸ್ವಾಮಿಗೆ ಆದ ನಂತರದ ದಿನ 'ದೇವದಾಸಿತಳಿಗೆ' ಆಗುತ್ತದೆ.[81] ಅಂದು ತಳಿಗೆ ನಿವೇದನ, ಆರತಿ,

ಶಾತ್ತುಮೊರೆ, ತೀರ್ಥವಿನಿಯೋಗ ಸಹ ಆಗುತ್ತದೆ. ದೇವದಾಸಿಯರು ಮಂಗಳ ಹೇಳಿದ ನಂತರ ಪರಿಚಾರಕರು ಅವರಿಗೆ ಮಾಲೆ ಮರ್ಯಾದೆ ನಡೆಸುತ್ತಾರೆ. ಅಮ್ಮನವರ ವರ್ದಂತಿ ಕೈಂಕರ್ಯದ ದಿನ ಭರತನಾಟ್ಯ ಮತ್ತು ಸಂಗೀತ ಕಾರ್ಯಕ್ರಮಗಳು ದೇವದಾಸಿಯರಿಂದ ನಡೆಯುತ್ತವೆ. ಇಂದು ದೇವದಾಸಿಯರು ಮರೆಯಾಗಿರುವ ಕಾರಣ ಸಾಂಕೇತಿಕವಾಗಿ ನಾಟ್ಯ ಮತ್ತು ಸಂಗೀತ ಪ್ರವೀಣರು ಈ ಕಾರ್ಯಕ್ರಮವನ್ನು ನಡೆಸುವರು, ಶಯನೋತ್ಸವದಲ್ಲಿಯೂ ವಿಶೇಷವಾಗಿ ಇವರು ನಾಟ್ಯ ಮಾಡುವ ಪದ್ಧತಿ ಇತ್ತು. ಶಂಖ, ತಾಳ, ಮದ್ದಳೆ ಇನ್ನಿತರ ಸಂಗೀತ ಉಪಕರಣಗಳನ್ನು ನುಡಿಸುತ್ತಿದ್ದರು. ವೈರಮುಡಿ ಉತ್ಸವದಲ್ಲಿ ದೇವದಾಸಿ ಪುತ್ರರು ತಂದ ವಾದ್ಯಗಳನ್ನು ಪರಿಚಾರ್ಕನು ಚಿನ್ನದಬಾಗಿಲ ಬಳಿ ಇರಿಸಿ ಆರಾಧನೆ, ನಿವೇದನೆ ಮಾಡುವರು, ದಾಸಿಪುತ್ರನಿಗೆ ಪ್ರೋಕ್ಷಣೆಯಿಂದ ಯಜ್ಞೋಪವೀತ ಹಾಕಿ ಗಂಧ, ಹೂವುಗಳನ್ನು ಕೊಡುವರು, ದಾಸಿಪುತ್ರನಿಗೆ ಮಂತ್ರೋಪದೇಶವಾದ ನಂತರ ಭೇರಿಯನ್ನು ಈತ ನುಡಿಸಬೇಕು. ನಂತರ ಉಳಿದ ವಾದ್ಯಗಳೂ ಒಮ್ಮೆ ನುಡಿಸಲ್ಪಡುತ್ತವೆ ಇದನ್ನು 'ಭೇರಿತಾಡನ' ಮಹೂರ್ತ ಎಂದು ಕರೆಯುವರು.[82] ವೈರಮುಡಿ ಉತ್ಸವದ ಚತುಸ್ಥಾನರ್ಚನೆಯಲ್ಲಿ ನಿವೇದನವಾದ ತಾಂಬೂಲ ವಿನಿಯೋಗದಲ್ಲಿ ದಾಸೀಪುತ್ರರಿಗೂ ಒಂದು ಪಾಲು ಸಿಗುತ್ತದೆ.[83] ಶಂಖತಾಳ, ಮದ್ದಳೆ ಮತ್ತು ತಾಳಗಳನ್ನು ಇಂದಿಗೂ ದೇವದಾಸಿಪುತ್ರರೇ ನುಡಿಸುತ್ತಾರೆ. ಇಲ್ಲಿ ಸ್ಪಷ್ಟವಾಗುವ ಮಹತ್ವದ ಅಂಶವೆಂದರೆ ದೇವದಾಸಿಯರ ಪುತ್ರರೂ ಸಹ ದೇವಾಲಯದ ಸೇವೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಸ್ತ್ರೀಯರಿಂದ ಆಗದ ಕೆಲವು ಕಠಿಣ ಕೆಲಸಗಳನ್ನು ದಾಸೀಪುತ್ರರು ಮಾಡುತ್ತಿದ್ದರು. ಭಾರವಾದ ವಾದ್ಯಗಳನ್ನು ಹೊರಲು ಮತ್ತು ಉತ್ಸವವನ್ನು ಹೊರಲು ಇವರು ನೇಮಕವಾಗಿದ್ದರು. ಮಹತ್ವದ ಅಂಶವೆಂದರೆ ದೇವಾಲಯದಲ್ಲಿ ದಿನನಿತ್ಯ ಜರುಗುವ ಗುಂಭಾರತಿ ಕೈಂಕರ್ಯ ದೇವದಾಸಿಯರದೇ ಆಗಿತ್ತು. ಈ ಎಲ್ಲ ಕೆಲಸಗಳಿಗೆ ದೇವದಾಸಿಯರು ದೇವಾಲಯದ ನಿಧಿಯಿಂದ ವೇತನವನ್ನು ಪಡೆಯುತ್ತಿದ್ದರು. ಉತ್ಸವಗಳ ಕಾಲದಲ್ಲಿ ಇವರಿಗೆ ಮರ್ಯಾದೆಗಳೂ ಸಿಗುತ್ತಿದ್ದವು. ಇದು ಈ ಪದ್ಧತಿಯನ್ನು ಇನ್ನಷ್ಟು ಜನಪ್ರಿಯಗೊಳಿಸುವ ಹಾಗೂ ಮುಂದುವರಿಸಿಕೊಂಡು ಹೋಗುವ ಉದ್ದೇಶವನ್ನು ಹೊಂದಿತ್ತು. ದೇವ ಸೇವಕಿಯರು ಎಂಬ ದೇವರು ಮತ್ತು ಧರ್ಮದ ಹೆಸರಿನಲ್ಲಿ ಶೋಷಣೆ ನಡೆಸುವ ಉದ್ದೇಶಗಳೂ ಇಲ್ಲದಿಲ್ಲ.

ದೇವದಾಸಿಯರು ಮೇಲುಕೋಟೆಯಲ್ಲಿ ಆರ್ಥಿಕವಾಗಿ ಪ್ರಬಲವಾಗಿದ್ದರು. ದೇವಾಲಯದಲ್ಲಿ ಪ್ರಧಾನ ಪಾತ್ರ ವಹಿಸುತ್ತಿದ್ದು. ಸೌಂದರ್ಯವತಿಯರಾಗಿದ್ದರು. ಉದಾರವಾಗಿ ದೇವಾಲಯಗಳಿಗೆ ತಮ್ಮ ಶಕ್ತಿಯಾನುಸಾರ ದಾನಗಳನ್ನು ನೀಡುತ್ತಿದ್ದರು. ಜನಶೃತಿಯಿರುವಂತೆ ಪುಟ್ಟನಾರಸೀ ಎಂಬ ದೇವದಾಸಿಯು ಭಕ್ತಾಧಿಗಳ ಅನುಕೂಲಕ್ಕೆ

ಕೊಳವನ್ನು ಮತ್ತು ಮಂಟಪವನ್ನು ನಿರ್ಮಿಸಿದ್ದಾಳೆ. ಅದನ್ನು ಪುಟ್ಟನಾರಸಿಕೊಳ ಎಂದೇ ಕರೆಯುವರು. ದೇವರನ್ನು ಅಲಂಕರಿಸಲು ಚಿನ್ನದ ಆಭರಣಗಳನ್ನು ದಾನನೀಡಿರುವರು. ದೇವದಾಸಿಯರು ಮುತ್ತು, ರತ್ನ, ಚಿನ್ನಗಳಿಂದ ಮಾಡಿದ ಆಭರಣಗಳನ್ನು ಧರಿಸುತ್ತಿದ್ದರು. ಬ್ರಾಹ್ಮಣರ ಮನೆಗಳಲ್ಲಿಯೂ ಸಹ ಸೇವಕಿಯರಾಗಿ ಕೆಲಸ ಮಾಡುತ್ತಿದ್ದರು. ಮೇಲುಕೋಟೆಯ ದೇವದಾಸಿಯರು ತಮ್ಮ ವರ್ಗಕ್ಕೆ ಒಬ್ಬ ಬ್ರಾಹ್ಮಣ ಗುರುಗಳನ್ನು ಹೊಂದಿದ್ದರು. ಇವರ ನಿರ್ದೇಶನದಂತೆಯೇ ನಡೆಯುತ್ತಿದ್ದರು. ಕೆಲವು ವರ್ಷಗಳ ಹಿಂದೆ 'ಅಪ್ರಮಯ್ಯಂಗಾರ್' ಎಂಬುವವರು ದೇವದಾಸಿಯರ ಗುರುಗಳಾಗಿದ್ದುದು ತಿಳಿದುಬರುತ್ತದೆ.[84] 20ನೇ ಶತಮಾನದ ಅಂತ್ಯದ ವೇಳೆಗೆ ದೇವದಾಸಿಯರು ದೇವಾಲಯಗಳಿಂದ ತಮ್ಮ ಸಂಬಂಧವನ್ನು ಕಡಿದುಕೊಂಡರು. ಸಾಂಕೇತಿಕವಾಗಿ ಅವರ ಪುತ್ರರು ಮಾತ್ರ ಕೆಲವು ಸೇವೆಗಳನ್ನು ಮಾಡುತ್ತಿದ್ದಾರೆ. ದೇವದಾಸಿ ವರ್ಗ ಮಾಡುತ್ತಿದ್ದ ಕೆಲಸಗಳನ್ನು ಇನ್ನಿತರ ಕೆಳವರ್ಗದ ಜಾತಿಗಳ ಜನರಿಗೆ ಹಂಚಲಾಗಿದೆ.

ಮೇಲಿನ ಮಾಹಿತಿಗಳಿಂದ ಉದಿತವಾಗುವ ಅಂಶಗಳು

ಪ್ರಾಚೀನ ಕಾಲದಲ್ಲಿ ಭಾರತೀಯ ಸ್ತ್ರೀಯರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳು ಉತ್ತಮವಾಗಿದ್ದವು. ವೇದಕಾಲದಲ್ಲಿ ಸ್ತ್ರೀಯರಿಗೆ ಪುರುಷರ ಸರಿಸಮಾನವಾದ ಸ್ಥಾನವಿರುತ್ತಿತ್ತು ಎಂಬುದನ್ನು ಸಾಹಿತ್ಯ ಮತ್ತು ಚಾರಿತ್ರಿಕ ಸಂಶೋಧನೆಗಳು ದೃಢಪಡಿಸುತ್ತವೆ. ಕಾಲಾನಂತರ ಮನುಷ್ಯ ಕುಲದ ಒಂದಂಗವಾದ ಸ್ತ್ರೀಗೆ ಧಾರ್ಮಿಕ ಅವಕಾಶಗಳು ನಿರಾಕರಿಸಲ್ಪಟ್ಟಿತ್ತು. ವೈದಿಕ ಧರ್ಮದಲ್ಲಿ ಹೆಣ್ಣು ಮಾಯೆ, ಮುಕ್ತಿಗೆ ಅನರ್ಹಳು, ಆಧ್ಯಾತ್ಮಕ್ಕೆ ಬಾಧಕ ಎಂದು ತೀರ್ಮಾನಿಸಿ ಉಪನಯನವನ್ನು ನಿರಾಕರಿಸಲಾಯಿತು. ಇದು ಈ ದೇಶವನ್ನು ಅದೋಗತಿಗೆ ತಳ್ಳಿತು. ಬಾಲ್ಯವಿಹಾಹ, ಬಹುಪತ್ನಿತ್ವ, ಸತಿಪದ್ಧತಿ, ದೇವದಾಸಿ ಪದ್ಧತಿಗಳಂಥ ಅನಿಷ್ಟ ಪದ್ಧತಿಗಳೇ ಇದಕ್ಕೆ ಜ್ವಲಂತ ಸಾಕ್ಷಿಗಳಾಗಿವೆ. ವೈದಿಕ ಕರ್ಮ ಮಾರ್ಗ ಕ್ರಮೇಣವಾಗಿ ಹಿಂದೆ ಸರಿಯಲ್ಪಟ್ಟು ಭಕ್ತಿ ಪರಂಪರೆಯು ಲಿಂಗ ಅಸಮಾನತೆಯನ್ನು ಹೋಗಲಾಡಿಸಲು ಪ್ರಯತ್ನಿಸಿತು. ರಾಮಾನುಜರ ತತ್ವಗಳಿಂದ ಈ ಪಂಥ ದಕ್ಷಿಣ ಭಾರತದಲ್ಲಿ ವಿಸ್ತಾರವಾಯಿತು. 'ಶ್ರೀ ಸಂಪ್ರದಾಯ' ಎಂಬ ಹೆಸರಿನೊಂದಿಗೆ ಮೇಲುಕೋಟೆಯಲ್ಲಿ ಆಚರಣೆಗೆ ಬಂದು ಸ್ತ್ರೀಯರ ಧಾರ್ಮಿಕ ಸ್ಥಿತಿಯಲ್ಲಿ ಕೆಲವು ಬದಲಾವಣೆಗಳಾದವು. ಇದು ದೇವಾಲಯಗಳಲ್ಲಿ ವ್ಯಕ್ತವಾದವು.

ದೇವಾಲಯಕ್ಕೆ ಸ್ತ್ರೀಯರ ಪ್ರವೇಶದಲ್ಲಿ ಉಂಟಾದ ಮೃದುಧೋರಣೆ, ಸ್ಥಳೀಯ ಭಾಷೆಯಲ್ಲಿ ದೇವರ ಆರಾಧನೆಗೆ ಅವಕಾಶ, ಸಂಗೀತ ಮತ್ತು ನೃತ್ಯಗಳ ಅವಕಾಶ, ಸ್ತ್ರೀಯರಿಗೆ ಕೆಲವು ದೈಹಿಕ ಸೇವೆಗಳ ಅವಕಾಶಗಳು, ದೇವಾಲಯಕ್ಕೆ ಸ್ತ್ರೀಯರ ದಾನಗಳು,

ಇನ್ನೂ ಮುಂತಾದ ಅಂಶಗಳು ಅಲ್ಪಮಟ್ಟಿಗೆ ಸ್ತ್ರೀಯರ ಸ್ಥಾನವನ್ನು ಸುಧಾರಿಸಿದಂತೆ ಕಂಡರೂ ಬಹುಸಂಖ್ಯಾತ ಸ್ತ್ರೀಯರ ಪಾಲಿಗೆ ದೇವಾಲಯವು ಅವರ ಪಾತ್ರವನ್ನು ನಿರ್ದೇಶಿಸುವಂತಹ ಒಂದು ಸಾಮಾಜಿಕ ನಿಯಂತ್ರಣ ಸಂಸ್ಥೆಯಾಗಿ ಕಾರ್ಯನಿರ್ವಹಿಸಿತೇ ಹೊರತು, ಮತ್ಯಾವ ರೀತಿಯಲ್ಲೂ ಅವರ ಬದುಕಿನ ಮೇಲೆ ಪರಿಣಾಮ ಬೀರಲಿಲ್ಲ. ಸ್ತ್ರೀಯರಿಗೆ ನೀಡಿದ್ದ ಹಲವು ಹಕ್ಕುಗಳನ್ನು ಸಂಸಾರ ಎಂಬ ಚೌಕಟ್ಟಿನ ಒಳಗೆ ಮಾತ್ರ ಅನುಭವಿಸಬೇಕು ಎಂಬ ನಿರ್ಬಂಧವಿತ್ತು. ಮಹಿಳೆಯರು ದೇವಾಲಯದ ಪ್ರದೇಶದಲ್ಲಿ ಹಲವಾರು ನಿರ್ಬಂಧಗಳನ್ನು ಅನುಭವಿಸಬೇಕಿತ್ತು. ಸ್ತ್ರೀಯರಿಗೆ ಮುಟ್ಟು-ಮಡಿ ಅನ್ನುವ ನಿರ್ಬಂಧಗಳನ್ನು ಪರಿಗಣಿಸಲಾಗುತ್ತಿದೆ. ಸ್ತ್ರೀಗೆ ನೀಡಿರುವ ಹಕ್ಕುಗಳು ಕೆಲವು ಹೇರಿರುವ ನಿರ್ಬಂಧಗಳು ನೂರಾರು. ಇದು ಸ್ತ್ರೀಯರನ್ನು ಕುರಿತಂತೆ ಧರ್ಮ ತಳೆದಿರುವ ನಿಲುವಿಗೆ ಸಾಕ್ಷಿ. "ಎಲ್ಲಿ ನಾರಿಯರು ಪೂಜಿಸಲ್ಪಡುವರೋ ಅಲ್ಲಿ ದೇವರಿರುತ್ತಾನೆ" ಎಂಬ ವಾಕ್ಯದ ಹಿನ್ನೆಲೆಯಲ್ಲಿಯೇ 'ಮಹಿಳೆಯರು ಸ್ವಾತಂತ್ರ್ಯಕ್ಕೆ ಅರ್ಹರಲ್ಲ' ಎಂಬ ಘೋಷಣೆಯೂ ಇದೆ. ಈ ಘೋಷಣೆಯ ಪ್ರತಿ ಧ್ವನಿಯೇ ಮಹಿಳೆ ದೇವಸ್ಥಾನದ ಪ್ರದೇಶದಲ್ಲಿ ಹಲವಾರು ನಿರ್ಬಂಧಗಳನ್ನು ಅನುಭವಿಸುವುದನ್ನು ಕಾಣುತ್ತಿದ್ದೇವೆ.

ಗಮನಾರ್ಹ ಅಂಶವೆಂದರೆ ದೇವಾಲಯಗಳಲ್ಲಿ ಕೆಳವರ್ಗಗಳ ಸ್ತ್ರೀಯರ ಸ್ಥಾನಮಾನಗಳು ಬದಲಾಯಿಸಲಿಲ್ಲ. ಈ ಕುರಿತು ಶಾಸನಗಳು ಎಲ್ಲಿಯೂ ಮಾಹಿತಿ ನೀಡುವುದಿಲ್ಲ. ರಾಜ್ಯದ ರಾಜರ ಮತ್ತು ಅಧಿಕಾರಿಗಳ ಮಡದಿಯರನ್ನು ಮಾತ್ರ ಶಾಸನಗಳು ವೈಭವೀಕರಿಸಿವೆ. ಅಂಗಭೋಗ ಮತ್ತು ರಂಗಭೋಗದ ಹೆಸರಿನಲ್ಲಿ ಸ್ತ್ರೀಯರು ಮನರಂಜನೆಯ ಮಾಧ್ಯಮವಾಗಿ ಮತ್ತು ದೈಹಿಕ ಕೆಲಸಗಳಿಗೆ ಮಾತ್ರ ದೇವಾಲಯದಲ್ಲಿ ಸೀಮಿತವಾಗಿದ್ದರು ದೇವಸೇವಕಿಯರ ಹೆಸರಿನಲ್ಲಿದ್ದ ದೇವದಾಸಿಗಳು ಬಹುಪಾಲು ಕೆಳವರ್ಗಗಳಿಂದ ನೇಮಕವಾಗುತ್ತಿದ್ದರು ದೇವದಾಸಿ ಎಂಬ ಅನಿಷ್ಟಪದ್ಧತಿಯು ಭಕ್ತಿಪಂಥದ ಪ್ರಭಾವದಿಂದ ಅಲುಗಾಡಲೇ ಇಲ್ಲ. ಧಾರ್ಮಿಕ ಪ್ರಭುತ್ವವು ಇವರನ್ನು ತಮ್ಮ ಲಾಸ್ಯ ಜೀವನಕ್ಕೆ ಬಳಸಿಕೊಂಡರು. ಲೈಂಗಿಕ ಶೋಷಣೆಯೂ ಸೇರಿದಂತೆ ಪ್ರಭುತ್ವದ ಬಯಕೆಗಳನ್ನು ಇವರು ಪೂರೈಸುವುದು ಅಪರಾಧದಲ್ಲ, ಅದನ್ನು ಮುಂದುವರೆಸಿಕೊಂಡು ಹೋಗಬೇಕೆಂಬ ಧೋರಣೆ ಇಲ್ಲಿ ಮನೆಮಾಡಿತ್ತು. ವೇಶ್ಯೆಯರು ಎಂಬ ಹಣೆಪಟ್ಟಿಯೊಂದಿಗೆ ಸಮಾನದಲ್ಲಿ ಗೌರವದ ಸ್ಥಾನವನ್ನು ಕಳೆದುಕೊಂಡರು. ದೇವದಾಸಿಯರ ಸಂಗೀತ, ನೃತ್ಯಗಳು ದೇವರ ಪ್ರೀತ್ಯಾರ್ಥವಾಗಿ ಎಂಬ ವಿವರಣೆಯನ್ನು ಪುರಾಣಗಳು ನೀಡಿವೆ. ಆದರೆ ನಿಜಾರ್ಥದಲ್ಲಿ ಸಂಗೀತ ಮತ್ತು ನೃತ್ಯ ದೇವಾಲಯಗಳಲ್ಲಿ ಮಹಿಳೆಯರ ಶೋಷಣೆಯ ಸಾಧನಗಳಾಗಿದ್ದವು. ಕೆಳವರ್ಗದ ಸ್ತ್ರೀಯರು ದೇವಾಲಯದ ಆವರಣಗಳನ್ನು ಸ್ವಚ್ಚಗೊಳಿಸುವ, ಕೆಲಸಕ್ಕೆ ಮಾತ್ರ ಸೀಮಿತವಾಗಿದ್ದರು.

ಸಮಾಜದಲ್ಲಿ ಸ್ತ್ರೀಯರ ಸ್ಥಿತಿಯಲ್ಲಿ ಬದಲಾವಣೆ ತರುವಲ್ಲಿ ದೇವಾಲಯಗಳು ಉಂಟುಮಾಡಿದ ಪ್ರಭಾವ ಕಡಿಮೆ. ಏಕೆಂದರೆ ಪುರುಷ ಪ್ರಧಾನ ಕುಟುಂಬ ವ್ಯವಸ್ಥೆ, ಬಾಲ್ಯವಿವಾಹಗಳು, ಬಹುಪತ್ನಿತ್ವ, ದೇವದಾಸಿ ಪದ್ಧತಿಗಳು ಜೀವಂತವಾಗಿದ್ದುದು ಅದಕ್ಕೆ ಸಾಕ್ಷಿಯಾಗಿದೆ. ಶ್ರೀ ವೈಷ್ಣವ ಸ್ತ್ರೀಯರು ಗಂಡ ಸತ್ತಾಗ ತಲೆಬೋಳಿಸಿಕೊಳ್ಳುವ ಮತ್ತು ಕೆಂಪು ಸೀರೆ ಉಡುವ ಸಂಪ್ರದಾಯವು ಇಂದಿಗೂ ಜೀವಂತವಾಗಿದೆ. ಗಂಡಸತ್ತನಂತರ ವಿಧವೆಯಾದ ಹೆಣ್ಣು, ಯಾವುದೇ ಶುಭ ಸಮಾರಂಭಗಳಿಗೆ ಹೋಗುವ, ಕುಂಕುಮ ತಿಲಕವನ್ನಿಡುವ ಅವಕಾಶದಿಂದ ವಂಚಿತಳಾಗುತ್ತಾಳೆ. ಸಮಾಜದಲ್ಲಿ ಹಲವು ನಿರ್ಬಂಧಗಳಿಗೆ ಗುರಿಯಾಗಿದ್ದಾಳೆ. ಇದು ಇಂದಿಗೂ ಮುಂದುವರಿದಿರುವುದನ್ನು ನೋಡುತ್ತೇವೆ. ಅಸಮಾನತೆಯ ಆಚರಣೆಯು ದೇವಾಲಯದಲ್ಲಿ ಗಾಢವಾಗಿದ್ದುದನ್ನು ಮೇಲಿನ ಅಂಶಗಳು ಸೃಷ್ಟಿಪಡಿಸುತ್ತವೆ.

ಅಂತಿಮವಾಗಿ 'ಶ್ರೀ ಸಂಪ್ರದಾಯವು' ಮೇಲುಕೋಟೆ ದೇವಾಲಯದಲ್ಲಿ ಸ್ತ್ರೀಯರಿಗೆ ಹಲವು ಧಾರ್ಮಿಕ ಅವಕಾಶಗಳನ್ನು ನೀಡಿದವು. ಸ್ತ್ರೀಯರ ಸೇವಾಮನೋಭಾವದಿಂದ ದೇವಾಲಯದ ಹಲವು ಕೈಂಕರ್ಯಗಳು ಸುಲಲಿತವಾದವು. ವೇದಾಧ್ಯಯನ ಮತ್ತು ಹಲವು ಉನ್ನತ ದೈವ ಕೈಂಕರ್ಯಗಳಲ್ಲಿ ಪಾಲ್ಗೊಂಡ ಹಾಗೂ ದಾನ ನೀಡಿದ ಉದಾಹರಣೆಗಳು ಇವೆಯಾದರೂ ಈ ಮಹಿಳೆಯರು ಪ್ರತಿಷ್ಠಿತ ವರ್ಗಗಳಿಗೆ ಸೇರಿದವರಾಗಿದ್ದರು. ಕೆಲವು ಧಾರ್ಮಿಕ ಅವಕಾಶಗಳು ಸಮಾಧಾನ ತಂದರೂ ಹಾಸುಹೊಕ್ಕಾಗಿರುವ ಲಿಂಗ ಪೂರ್ವಗ್ರಹಗಳು ಮರೆಯಾಗಲಿಲ್ಲ. ಸ್ತ್ರೀ ಸಹಧರ್ಮಕಾರಿಣಿಯೆಂಬ ಸಂಪ್ರದಾಯವು ಮುಂದುವರೆಯುತ್ತಿದೆ. ಮಹಿಳೆಯು ಸಂಸ್ಕೃತಿಯು ತಡೆಯಿಲ್ಲದ ಮುಂದುವರೆಯಲು ಅಗತ್ಯವಾಗಿ ಕಾರಣಳಾಗಿದ್ದಾಳೆ. "ಸ್ತ್ರೀ ನಮ್ಮ ಸಂಸ್ಕೃತಿಯ ರೂವಾರಿ, ನಮ್ಮ ಉನ್ನತ ಸಂಸ್ಕೃತಿ ರಕ್ಷಣೆ ಹೊತ್ತವಳು.[85] ಹೀಗೆ ಮೇಲುಕೋಟೆ ದೇವಾಲಯಗಳು ಸ್ತ್ರೀಯರ ಕುರಿತು ಅಂದಿನ ಸಮಕಾಲೀನ ಸಾಮಾಜಿಕ ವ್ಯವಸ್ಥೆಯ ಬಹುತೇಕ ನೀತಿ ನಿಯಮಗಳನ್ನು ಅಳವಡಿಸಿಕೊಂಡಿತ್ತು.

ದಲಿತರು ಮತ್ತು ದೇವಾಲಯಗಳು

ಆಚಾರ್ಯ ರಾಮಾನುಜರ ವೈಷ್ಣವೀಯ ಒಲವುಗಳ ಪ್ರಭಾವದಿಂದ ದಲಿತರ ಬಗೆಗಿದ್ದ ಬ್ರಾಹ್ಮಣವಾದಿ ಮನೋಭಾವವು ಸಡಿಲಗೊಂಡಿತು ಎಂದು ಹೇಳಲಾಗುತ್ತದೆ. ವೈಷ್ಣವ ಪಂಥವು ಶೂದ್ರರಿಗೆ ಧಾರ್ಮಿಕ ಅವಕಾಶಗಳನ್ನು ಗಳಿಸಿಕೊಟ್ಟ ಒಂದು ಮತ. ನಾರಾಯಣನಲ್ಲಿ ಭಕ್ತಿ ಇರಿಸಿ ಶೂದ್ರರು ಮುಕ್ತಿ ಪಡೆಯಬಹುದು ಎಂದು ವೈಷ್ಣವ ಗ್ರಂಥಗಳು ತಪ್ಪದೆ ಒತ್ತಿ ಹೇಳುತ್ತವೆ. ವಿಷ್ಣುವಿನ ಭಕ್ತರಾದ ಶೂದ್ರರನ್ನು ಅಗೌರವದಿಂದ ಕಾಣುವವರು

ಕೋಟಿ ವರ್ಷಗಳ ಕಾಲ ನರಕಕ್ಕೆ ದೂಡಲ್ಪಡುತ್ತಾರೆಂದು ಭಾಗವತ ಹೇಳುತ್ತದೆ.[86] ಪ್ರಾಚೀನ ಸಾಂಪ್ರದಾಯಿಕ ವ್ಯವಸ್ಥೆಗೆ ಭಿನ್ನವಾಗಿ ಈ ಪಂಥವು ಅಸ್ಪೃಶ್ಯರನ್ನೂ ದೂರವಿಡದೆ ಅವರಿಗೆ ದೇವರನ್ನು ತಿಳಿಯುವುದು ಮತ್ತು ಮೋಕ್ಷ ಪಡೆಯುವುದು ಸಾಧ್ಯವೆಂದು ಪ್ರತಿಪಾದಿಸಿತು. ಭಕ್ತಿ ಪಂಥದ ಸಂತರನ್ನು ಅನುಸರಿಸಿದ ಆಚಾರ್ಯರು ಪ್ರಪತ್ತಿಯನ್ನು ಒತ್ತಿಹೇಳಿದರು. ಭಕ್ತಿ ಮತ್ತು ಪ್ರಪತ್ತಿಗಳ ಪ್ರಭಾವದಿಂದ ಈ ಪಂಥವು ಪರಿಣಾಮಕಾರಿಯಾಗಿ ಬೆಳವಣಿಗೆಯಾಗಿ, ಯಾವುದೇ ಬೇಧವಿಲ್ಲದೆ ಎಲ್ಲರಿಗೂ ತೆರೆದುಕೊಂಡಿತು.[87] ಸಾಮಾಜಿಕ ಧಾರ್ಮಿಕ ಆಂದೋಲನಗಳನ್ನು ಅವರ ಸಾಮಾಜಿಕ ಆರ್ಥಿಕ ಪರಿಸ್ಥಿತಿಯ ಮಾತುಗಳಲ್ಲಿ ಅರ್ಥಮಾಡಿಕೊಳ್ಳುವ ಮತ್ತು ವಿವರಿಸುವ ಅಗತ್ಯವಿದೆ.[88] ಹಾಗೆ ನೋಡಿದರೆ ಹಲವು ಪಂಥಗಳು, ದೇವತೆಗಳು ಮತ್ತು ವಿಚಾರಗಳನ್ನು ಅಳವಡಿಸಿಕೊಂಡಿರುವ ಬಣ್ಣದ ಹಾಸು. ಸಾಮಾಜಿಕ ಆರ್ಥಿಕ ವಾಸ್ತವಗಳ ನೆಲೆಯಲ್ಲಿ ಹೊಂದಾಣಿಕೆ, ಸಹಯೋಗ ಮತ್ತು ದೂರೀಕರಣಗಳು ಅನಿವಾರ್ಯವಾಗುತ್ತವೆ. ಈ ರೀತಿಯ ಧಾರ್ಮಿಕ ಒಪ್ಪಂದಗಳ ಹಿಂದೆ ತಮಗಿರುವ ಸಾಮಾಜಿಕ ಮೇಲುಗೈಯನ್ನು ಉಳಿಸಿಕೊಳ್ಳಬೇಕೆನ್ನುವ ಹಂಬಲವು ಕೆಲಸ ಮಾಡಿತ್ತು. ಇದು ಕೆಳಜಾತಿಯೊಂದಿಗೆ ರಾಜಿಮಾಡಿಕೊಳ್ಳುವ ಅನಿವಾರ್ಯತೆಗೊಳಗಾಯಿತು. ಇದು ಧಾರ್ಮಿಕ ಪಠ್ಯಗಳು ಮತ್ತು ದೇವಾಲಯಗಳಲ್ಲಿ ವ್ಯಕ್ತವಾಗುತ್ತದೆ. ಶ್ರೇಣೀಕೃತ ಸಮಾಜವನ್ನು ಉಳಿಸಿಕೊಳ್ಳಲು ಮೇಲ್ವರ್ಗಗಳು ವೈಷ್ಣವ ಪಂಥದ ಮೂಲಕ ಮಾಡಿದ ಧಾರ್ಮಿಕ ಆಚರಣೆಗಳ ಅರಿವಿನಿಂದ ಇದು ಸ್ಪಷ್ಟವಾಗುತ್ತದೆ.

ಮಧ್ಯಕಾಲೀನ ಭಾರತದ ಭಕ್ತಿಚಳುವಳಿಯ ಕೇಂದ್ರ ದೇವಾಲಯವಾಯಿತು. ಏಕೆಂದರೆ ಅಲ್ಲಿ ಮನುಷ್ಯ ಇತರ ಮನುಷ್ಯರೊಡನೆ ಬೆರೆಯುವ, ತನ್ನ ಅನುಭವ ನಂಬಿಕೆಗಳನ್ನು ಹೊಸತುಗೊಳಿಸಿಕೊಳ್ಳುವ ಅಥವಾ ದೃಢಪಡಿಸಿಕೊಳ್ಳುವ, ತನ್ಮೂಲಕ ಬೆಳೆಸಿಕೊಳ್ಳುವ ಅವಕಾಶ ದೊರಕುತ್ತಿತ್ತು. ಹನ್ನೆರಡನೆಯ ಶತಮಾನದ ಹೊತ್ತಿಗೆ ಕರ್ನಾಟಕದ ದೇವಾಲಯಗಳು ರಾಜರಿಂದ, ಮಂತ್ರಿ ವರ್ತಕರಿಂದ ದೊರೆತ ಅಪಾರ ದತ್ತಿಗಳನ್ನು ಹೊಂದಿ, ಜಟಿಲ ರಿಚುಯಲ್‌ಗಳನ್ನು ಬೆಳೆಸಿಕೊಂಡು ಸಾಮಾಜಿಕವಾಗಿ ಪ್ರತಿಷ್ಠಿತ ಸ್ಥಾನವನ್ನು ಪಡೆದಿದ್ದಿತು. ರಾಜನಿಗೆ ದೇವಾಲಯದ ಬ್ರಾಹ್ಮಣನ ಬೆಂಬಲ ಅಗತ್ಯವಾಗಿತ್ತು. ಡಿ.ಡಿ.ಕೊಶಾಂಬಿ ತಮ್ಮ ಒಂದು ಕೃತಿಯಲ್ಲಿ ಪ್ರಭುತ್ವ ಮತ್ತು ಭಕ್ತಿ ಚಳುವಳಿಗಳ ಪರಸ್ಪರ ಸಂಬಂಧವನ್ನು ಕುರಿತು ವಿಚಾರ ಮಾಡಿದ್ದಾರೆ.[89] ರಾಜನ ಅಧಿಕಾರ ಭದ್ರವಾಗಬೇಕಾದರೆ, ಕೃಷಿಕನು ಜಮೀನ್ದಾರನಿಗೆ, ಜಮೀನ್ದಾರನು ಪಾಳೇಗಾರನಿಗೆ, ಪಾಳೇಗಾರನು ಸಾಮಂತನಿಗೆ, ಸಾಮಂತನು ರಾಜ ಅಥವಾ ಚಕ್ರವರ್ತಿಗೆ ನಿಷ್ಠೆಯಿಂದ ಸಂಬಂಧಿತವಾಗಿರಬೇಕು. ಆಗಮಾತ್ರ ರಾಜನ ಅಪ್ಪಣೆ ಮೇಲಿನಿಂದ ಕೆಳಗಿನವರೆಗೆ ಸಂಚರಿಸಿ ಕೆಲಸ ಮಾಡುತ್ತದೆ. ಈ ಬಗೆಯ ಸಮಾಜವು ಸ್ಥಿರವಾಗಬೇಕಾದರೆ ಭಕ್ತಿಯನ್ನು ಪ್ರತಿಪಾದಿಸುವ ಮತದ ಅಗತ್ಯವಿರುತ್ತದೆ.

ಭಕ್ತಿಪ್ರಧಾನ ಮತವು ಅನುಯಾಯಿಗಳಿಂದ ನಿಷ್ಠೆಯನ್ನು ನಿರೀಕ್ಷಿಸುವುದೇ ಹೊರತು ಪ್ರಶ್ನೆಯನ್ನಲ್ಲ; ಸವಾಲನ್ನಂತೂ ಖಂಡಿತ ಅಲ್ಲ. ಕೋಸಾಂಬಿ ಪ್ರಕಾರ, ಅರಮನೆ ದೇವಾಲಯ, ರಾಜದೈವ ಎರಡೂ ಅಭಿನ್ನಗಳು ಪ್ರಭುತ್ವ ಬ್ರಾಹ್ಮಣ್ಯಗಳು ಒಟ್ಟಿಗೆ ಲಾಭದಾಯಕವಾಗಿ ಸೌಹಾರ್ದದಿಂದ ಬದುಕಬಲ್ಲವು. ವರ್ಣ ಅಥವಾ ಜಾತಿ ವ್ಯವಸ್ಥೆಯಲ್ಲಿ ದೇವಾಲಯವನ್ನು ಕೇಂದ್ರವಾಗಿಟ್ಟುಕೊಂಡು ಉಳಿದ ಜಾತಿಗಳ ಸ್ಥಾನವನ್ನು ನಿರ್ಣಯಮಾಡಲು ದೇವಾಲಯವನ್ನು ಬಳಸಿಕೊಂಡರು.[90]

ತಾತ್ವಿಕ ನೆಲೆಯಲ್ಲಿ ಗುರುತಿಸಲ್ಪಡುವ ಮೇಲಿನ ನಿಲುವುಗಳು ಮೇಲುಕೋಟೆಯ ದೇವಾಲಯಗಳ ಅಧ್ಯಯನದಿಂದ ನಿರೂಪಿತವಾಗುತ್ತವೆ. ಧಾರ್ಮಿಕವಾಗಿ ನಿರ್ಲಕ್ಷಿಸಲ್ಪಟ್ಟಿದ್ದ ದಲಿತರು ಇಲ್ಲಿನ ದೇವಾಲಯಗಳಿಂದ ಪ್ರಭಾವಿತರಾದರು. ಒಂದು ವಿಭಿನ್ನವಾದ ಆಲೋಚನಾ ನೆಲೆಯಲ್ಲಿ ವಿಶ್ಲೇಷಿಸುವ ಮೂಲಕ ದಲಿತರ ಪಾತ್ರ ಮತ್ತು ಅವರ ಸಂವೇದನೆಗಳನ್ನು ಅರಿಯಬಹುದು. ಸಹಜವಾಗಿಯೇ ದಲಿತರ ಬಗೆಗೆ ಮೇಲುಕೋಟೆಯ ಶಾಸನಗಳು ಮೌನತಾಳಿವೆ. ಮೇಲುಕೋಟೆಯಲ್ಲಿ ದಲಿತರನ್ನು 'ಪಂಚಮ'ರೆಂದು ಕರೆಯಲಾಗಿದ್ದು, ಧಾರ್ಮಿಕವಾಗಿ ಕೆಲವು ಅವಕಾಶ ಪಡೆದರೂ ಧಾರ್ಮಿಕ ಪ್ರಭುತ್ವದಿಂದ ದಲಿತರು ತಪ್ಪಿಸಿಕೊಳ್ಳಲಾಗಲಿಲ್ಲ. ಜನಶೃತಿ ಮತ್ತು ಆಚರಣೆಗಳೇ ದಲಿತರ ಕುರಿತು ತಿಳಿಸುವ ಆಧಾರಗಳಾಗಿವೆ.

ದೇವಾಲಯದಲ್ಲಿ ದಲಿತರ ಪಾತ್ರ

ಹಿಂದೂ ಸಮಾಜಕ್ಕೆ ಅಂಟಿದ ಅಳಿಸಲಾಗದ ಕಳಂಕವಾದ ಅಸ್ಪೃಶ್ಯತೆಯು ಅತ್ಯಂತ ಪ್ರಾಚೀನವಾದುದು. ಅಸ್ಪೃಶ್ಯರು ದೇವಾಲಯದ ಎಷ್ಟೆಷ್ಟೊ ಅಂತರದಲ್ಲಿ ನಿಲ್ಲಬೇಕಾಗಿತ್ತು. ದೇವಾಲಯದ ಬೀದಿಗೆ ಹೋಗಲು ಕೂಡ ಅವರಿಗೆ ಸ್ವಾತಂತ್ರ್ಯ ಇರಲಿಲ್ಲ. ಮೊದಲಿಗೆ ಆಚಾರ್ಯ ರಾಮಾನುಜರು ಮೇಲುಕೋಟೆಯ ನಾರಾಯಣಸ್ವಾಮಿ ದೇವಾಲಯದ ಬಲಿಪೀಠದವರೆಗೆ ಬಂದು ಆರಾಧಿಸಲು ಅನುಮತಿ ಕೊಟ್ಟರು. ವೈರಮುಡಿ ಬ್ರಹ್ಮೋತ್ಸವದಲ್ಲಿ ಇಲ್ಲಿನ ಕಲ್ಯಾಣಿತೀರ್ಥದಲ್ಲಿ ಸ್ನಾನ ಮಾಡಲು ಸಹ ಅನುಮತಿಸಿದರು.[91] ದಲಿತರಿಗೆ ದೇವಾಲಯ ಪ್ರವೇಶವು ವರ್ಷಕ್ಕೆ ಒಂದು ದಿನಕ್ಕೆ ಸೀಮಿತವಾಗಿತ್ತು. ಅಂದಿನಿಂದ ಅಂತ್ಯಜರು ದೇವರಿಗೆ ಅಕ್ಕಿ, ಎಣ್ಣೆಗಳನ್ನು ದೇವರಿಗೆ ಸಮರ್ಪಿಸುವ ಸಂಪ್ರದಾಯ ಮುಂದುವರಿಯಿತು. ಅಂದು ದೇವಾಲಯದಲ್ಲಿ ದಲಿತರು ಮಣೆಸೇವೆ ಆಚರಿಸುವರು. ಬ್ರಹ್ಮೋತ್ಸವದ ಮೂರುದಿವಸಗಳು ದಲಿತರ ಪಾತ್ರವಿದ್ದು ರಥೋತ್ಸವದಂದು, ರಥವನ್ನು ಎಳೆಯುವ ಕಾರ್ಯ ದಲಿತರದು. ಅದಕ್ಕೆ ಮುಂಚೆ ರಥಕ್ಕೆ ಕೋಣನ ಮಾಂಸವನ್ನು ನೈವೇದ್ಯಮಾಡುವ ಸಂಪ್ರದಾಯವಿದ್ದು, ಇಂದು ಅದು ಮರೆಯಾಗಿದೆ. ಇಂದು ರಥಚಲಿಸುವ ಮುನ್ನ ರಕ್ತವನ್ನು

ಮಾತ್ರ ಸವರುವ ಸಂಪ್ರದಾಯವಿದೆ. ಸಾಂಕೇತಿಕವೆಂಬಂತೆ ಕೋಣನ ತಲೆಯನ್ನು ರಥದ ಮುಂಭಾಗದಲ್ಲಿ ಕೆತ್ತಲ್ಪಟ್ಟಿದೆ.

ಕೋಣನನ್ನು ಬಲಿಕೊಟ್ಟರೆ ಮಾನವರು ಬಲಿಯಾಗುವುದಿಲ್ಲ ಎಂಬ ನಂಬಿಕೆ ದಲಿತರಲ್ಲಿದೆ. ಹೀಗೆ ಶಿಷ್ಟೇತರ ಆಚರಣೆಯಾದ ಬಲಿಪದ್ಧತಿಯು ಕಾಲಕ್ರಮೇಣ ಮರೆಯಾಗಿ, ವೈದಿಕ ಸಂಪ್ರದಾಯವೇ ಪ್ರಧಾನವಾದಸ್ಥಾನ ಪಡೆದಿದೆ. ರಥಕ್ಕೆ ಮಾವಿನ ತೋರಣ ಸೇರಿದಂತೆ ಅಲಂಕರಿಸುವ ಕೆಲಸ ದಲಿತರದಾಗಿದೆ. ಅಂದು ದಲಿತ ಸಮುದಾಯದ ಸಾಮೂಹಿಕ ಪಾಲ್ಗೊಳ್ಳುವಿಕೆಯನ್ನು ಕಾಣಬಹುದು. ಅಸ್ಪೃಶ್ಯರಲ್ಲಿರುವ ಎಡಗೈ ಮತ್ತು ಬಲಗೈ ಎಂಬ ಎರಡೂ ವರ್ಗದವರು ಅಂದು ಪಾಲ್ಗೊಳ್ಳುವರು, ರಥೋತ್ಸವದ ದಿನ ರಾತ್ರಿ ನಾರಾಯಣಸ್ವಾಮಿಯನ್ನು ಚಿನ್ನದ ಪಲ್ಲಕ್ಕಿಯಲ್ಲಿಟ್ಟು ಉತ್ಸವದಲ್ಲಿ ಪಾಲ್ಗೊಳ್ಳುವರು. ಈ ಮೂರು ದಿವಸಗಳ ನಂತರ ಬ್ರಾಹ್ಮಣ ಅರ್ಚಕರು ದೇವಾಲಯದ ಸುತ್ತ-ಮುತ್ತ ಗ್ರಾಮದ ಪ್ರಮುಖ ಬೀದಿಗಳಲ್ಲಿ ಗೋಮೂತ್ರವಿರುವ ದ್ರವದಿಂದ ಸಂಪ್ರೋಕ್ಷಣೆ ಮಾಡುವರು. ವಿಜಯದಶಮಿಯ ದಿನದಂದು ಹಲವರಿಗೆ ನಡೆಯುವ ಮಾಲೆ ಮರಿಯಾದೆಗಳು ಎಡಗೈ ಮತ್ತು ಬಲಗೈನವರಿಗೂ ಸಲ್ಲುತ್ತದೆ. ಮೇಲುಕೋಟೆಯ ಪ್ರಮುಖ ಉತ್ಸವಗಳಲ್ಲೊಂದಾದ ಅಂಗಮಣೆ ಉತ್ಸವದಲ್ಲಿ 'ತಿರುಕ್ಕುಲದವರು' ಪಾಲ್ಗೊಳ್ಳುವರು. ಈ ಉತ್ಸವದಲ್ಲಿ ವಿಷ್ಣುವಿನ ಒಂದು ಪೌರಾಣಿಕ ಸನ್ನಿವೇಶದ ಅಭಿನಯಕ್ಕೆ ಬೇಕಾದ ಜೀವಂತ ಮೊಲವನ್ನು ಹಿಡಿದು ತರುವ ಜವಾಬ್ದಾರಿ ಇವರದಾಗಿದೆ.

ಮೇಲುಕೋಟೆಯ ಸುತ್ತಲಿನ ಅವರ್ಣೀಯರು ತಮ್ಮನ್ನು ತಾವು ಶ್ರೀ ವೈಷ್ಣವರೆಂದು ಕರೆದುಕೊಳ್ಳುವರು. ಬ್ರಾಹ್ಮಣರು ಧರಿಸುವ ಊರ್ಧ್ವಪುಂಡ್ರ ನಾಮವನ್ನು ಸಹ ಧರಿಸುವರು. ಇವರನ್ನು ಹರಿಒಕ್ಕಲಿನವರು ಎಂದು ಸಹ ಕರೆಯಲಾಗುತ್ತದೆ. ಆಚಾರ್ಯ ರಾಮಾನುಜರ ಪ್ರಭಾವದಿಂದ ವೈಷ್ಣವ ಅನುಯಾಯಿಗಳಾದ ದಲಿತರು ನಾರಾಯಣಸ್ವಾಮಿಯನ್ನು ತಮ್ಮ ಮನೆ ದೇವರಾಗಿ ಸ್ವೀಕರಿಸಿದ್ದಾರೆ. ಈ ರೀತಿಯ ಪ್ರಭಾವವನ್ನು ಇಲ್ಲಿನ ಹಲವು ರೂಢಿಗಳಲ್ಲಿ ಕಾಣಬಹುದು. ತಮ್ಮ ಮಕ್ಕಳ ಹೆಸರನ್ನು ದೇವರ ಹೆಸರಿನೊಂದಿಗೆ ಆರಂಭಿಸುವರು. ಉದಾ: ಚೆಲುವಯ್ಯ, ನರಸಿಂಹಯ್ಯ, ಚೆಲುವಮ್ಮ, ಚೆಲುವರಾಜ ಇವೆಲ್ಲವು ನಾರಾಯಣನಿಗೆ ಸಂಬಂಧಿಸಿದ ಹೆಸರಾಗಿದೆ. ಶನಿವಾರವನ್ನು ಚೆಲುವರಾಯನನ್ನು ಆರಾಧಿಸಲು ನಿಗಧಿಗೊಳಿಸಲಾಗಿದ್ದು, ಅಂದು ಶುಚಿಯಾದ ಶುಭ್ರವಸ್ತ್ರ ಧರಿಸಿ ಮಡಿಯಾಗುವರು. ಕೆಲವರು ದೇವರ ಹೆಸರನ್ನು ಪಠಿಸುತ್ತಾ ಭಿಕ್ಷಾಟನೆಯನ್ನು ಮಾಡಿ ದೇವರಿಗೆ ಸ್ವಲ್ಪ ಅರ್ಪಿಸಿ ಉಳಿದುದ್ದನ್ನು ತಾವು ಆಹಾರವಾಗಿ ಉಪಯೋಗಿಸುವರು. ಬ್ರಾಹ್ಮಣ ವರ್ಗದ ಸಾಂಪ್ರದಾಯಿಕ ಆಚರಣೆಗಳನ್ನು ಅನುಕರಿಸುವ ಪ್ರಯತ್ನ ಇಂತಹಾ ರೂಢಿಗಳಲ್ಲಿ ವ್ಯಕ್ತವಾಗುತ್ತದೆ.

ಮೇಲುಕೋಟೆಯ ನಾರಾಯಣಸ್ವಾಮಿಯಲ್ಲಿ ಅಗಾದ ಭಕ್ತಿ ಹೊಂದಿರುವ ಅವರ್ಣೀಯರು ತಮ್ಮ ಶಕ್ತಿಯಾನುಸಾರ ದೇವಾಲಯಕ್ಕೆ ದಾನಗಳನ್ನು ಕೊಟ್ಟಿರುವುದನ್ನು ನೋಡಬಹುದು. ಚಿಕ್ಕಯ್ಯನು ಮೇಲುಕೋಟೆಯಲ್ಲಿ ಒಂದು ಕೊಳವನ್ನು ಕಟ್ಟಿಸಿದನು. ಉತ್ಸವಗಳಲ್ಲಿ ದಲಿತರು ತಮ್ಮ ತನ್ಮಯತೆಯನ್ನು ಜಾನಪದರೀತಿಗಳು ಲಾವಣಿಗಳನ್ನು ಹಾಡುವ ಮೂಲಕ ವ್ಯಕ್ತಪಡಿಸುವರು. ಮೇಲುಕೋಟೆ ನಾರಾಯಣ ದೇವರಿಗೆ ದಲಿತ ಭಕ್ತಾಧಿಗಳ ಸಂಖ್ಯೆಯೇ ಅಧಿಕವಾಗಿದ್ದು, ಅವನನ್ನು 'ಹೊಲೆಯರ ಚೆಲುವ' ಎಂದೇ ಕರೆಯಲಾಗುತ್ತದೆ.

ಗಮನಾರ್ಹ ಅಂಶವೆಂದರೆ ತಾತ್ವಿಕ ನೆಲೆಯಲ್ಲಿ ದಲಿತರ ಧಾರ್ಮಿಕ ಸ್ಥಿತಿಯನ್ನು ವಿಶ್ಲೇಷಿಸುವ ಅಗತ್ಯವಿದೆ. ಇದು ದಲಿತರ ಸಾಮಾಜಿಕ ಸ್ಥಾನಮಾನಗಳನ್ನು ಸಹ ಬಿಂಬಿಸುತ್ತವೆ. ಆಚಾರ್ಯ ರಾಮಾನುಜರು ನೀಡಿದ ಒಂದು ದಿನದ ದೇವಾಲಯ ಪ್ರವೇಶ ಹಾಗೂ ದೇವಾಲಯದಿಂದ ಸಿಕ್ಕ ಅಲ್ಪ ಮನ್ನಣೆಗಳು, ಬ್ರಾಹ್ಮಣೀಯ ಸಾಮಾಜಿಕ ಶ್ರೇಣಿಗೆ ಸೈದ್ಧಾಂತಿಕ ಸಮರ್ಥನೆಗಳಂತಿದ್ದವು. ಇನ್ನಿತರ ಕ್ಷೇತ್ರಗಳಲ್ಲಿ ಸಮಾನತೆಯನ್ನು ನಿರಾಕರಿಸಲ್ಪಟ್ಟಿದ್ದ ದಲಿತರಿಗೆ ಧಾರ್ಮಿಕ ಸಮಾನತೆಯನ್ನು ದೊರಕಿಸಿಕೊಡುವ ಆಶ್ವಾಸನೆ ನೀಡುತ್ತಾ, ಅಸ್ತಿತ್ವದಲ್ಲಿದ್ದ ಸಾಮಾಜಿಕ ವ್ಯವಸ್ಥೆಯೊಡನೆ ಸಂಧಾನ ಮಾಡಿಕೊಳ್ಳಲು ಕೆಳಸ್ತರದವರನ್ನು ದೇವಾಲಯದ ಮೂಲಕ ಪ್ರೇರೇಪಿಸಿತು. ದಲಿತರ ಸಾಮಾಜಿಕ ಸ್ಥಿತಿಯಲ್ಲಿ ಯಾವುದೇ ಬದಲಾವಣೆಯನ್ನು ತರುವುದರಲ್ಲಿ ಧಾರ್ಮಿಕ ಅವಕಾಶಗಳು ವಿಫಲವಾದವು. ಶುದ್ಧ-ಅಶುದ್ಧ, ನಿರ್ಮಲ-ಮಲಿನ ಭಾವನೆಗಳು ಜಾತಿಯ ಹಿನ್ನೆಲೆಯಿಂದ ರೂಢಿಯಲ್ಲಿತ್ತು. ಯಾರನ್ನು ರಾಮಾನುಜರು ತಿರುಕ್ಕುಲತ್ತಾರ್ ಎಂದು ಗುರುತಿಸಿದರೋ ಅವರು ಜಾತಿಯಿಂದ ಬಹಿಷ್ಕರಿಸಲ್ಪಟ್ಟ ವರ್ಗಕ್ಕೆ ಸೇರಿದವರಾಗಿದ್ದು, ಅವರ ಅಸಫಲತೆ ಮತ್ತು ಸಮಾಜದಲ್ಲಿ ಈ ವರ್ಗದ ಸದಸ್ಯರ ಸಂಖ್ಯೆ ಹೆಚ್ಚಾಗಿತ್ತು. ದೇವಾಲಯ ನಿರ್ಮಾಣದಲ್ಲಿ ಸಹಕಾರ ನೀಡಿದ ಅನುಕಂಪ ದೇವಾಲಯ ಪ್ರವೇಶಕ್ಕೆ ಅವಕಾಶ ನೀಡಿತು. ಅದು ವರ್ಷದಲ್ಲಿ ಒಂದು ದಿನಕ್ಕೆ ಸೀಮಿತವಾಗಿದ್ದು, ಅದು ಆಲಯದ ನವರಂಗದ ದ್ವಾರದವರೆಗೆ ಮಾತ್ರ ನಿಗಧಿಯಾಗಿತ್ತು. ಉಳಿದ ದಿನಗಳಲ್ಲಿ ದೇವಾಲಯದೊಂದಿಗೆ ಯಾವುದೇ ಸಂಬಂಧವಿರುತ್ತಿರಲಿಲ್ಲ. ದೇವಾಲಯದಲ್ಲಿ ಯಾವುದೇ ಗುರುತರ ಉದ್ಯೋಗಾವಕಾಶ ಇವರಿಗಿರಲಿಲ್ಲ. ಮೇಲುಕೋಟೆಯಲ್ಲಿ ಒಳಕೋಟೆ ಮತ್ತು ಹೊರ ಕೋಟೆ ಎಂಬ ಎರಡು ಕೋಟೆಗಳಿದ್ದು ಎರಡನೇ ಕೋಟೆಯ ಹೊರಗೆ ಈಶಾನ್ಯ ಭಾಗದಲ್ಲಿ ಅಸ್ಪೃಶ್ಯರು ವಾಸಿಸುತ್ತಿದ್ದರು. ಇಂದಿಗೂ ಅದೇ ಪರಿಸ್ಥಿತಿ ಮುಂದುವರಿದಿದೆ. ಅವರನ್ನು ಹೊಲೆಯರೆಂದೇ ಕರೆಯುತ್ತಿದ್ದು ನಾಗರೀಕ ಸಮಾಜದ ಚೌಕಟ್ಟಿನಿಂದ ಹೊರಗಿದ್ದಾರೆ. ಗ್ರಾಮದ ಚರಂಡಿಗಳು ಹಾಗೂ ಗ್ರಾಮದ ಬೀದಿಗಳನ್ನು ಶುಚಿಗೊಳಿಸುವ ಕಾರ್ಯ ಇವರದಾಗಿದೆ. ಇತರ ಜಾತಿಗಳೊಂದಿಗೆ ಇವರಿಗೆ

ಸಹಭೋಜನ ಇರಲಿಲ್ಲ. ವಿದ್ಯಾರ್ಜನೆಯ ಅವಕಾಶವಿರಲಿಲ್ಲ. ಮೇಲ್ವರ್ಗದವರೊಂದಿಗೆ ನಿಕಟ ಸಹಯೋಗವಿರಲಿಲ್ಲ. ಸತ್ತದನಗಳನ್ನು ಹೊತ್ತು ಸಾಗಿಸುವ ಜವಾಬ್ದಾರಿ ಇವರದಾಗಿತ್ತು. ಹೀಗೆ ಸಮಕಾಲೀನ ಜಾತಿ ವೈಪರೀತ್ಯಗಳು ಮೇಲುಕೋಟೆಯಲ್ಲೂ ಆಚರಿಸಲ್ಪಡುತ್ತಿದ್ದವು. ಉಚ್ಚವರ್ಣದ ಕುಟುಂಬಗಳಲ್ಲಿ ಮನೆಗೆಲಸದವರಾಗಿಯೂ ಅಸ್ಪೃಶ್ಯರು ದುಡಿಯುತ್ತಿದ್ದರು. ದೇವಾಲಯಗಳು ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳ ಮೂಲಕ ದಲಿತರನ್ನು ಅಧೀನದಲ್ಲಿಟ್ಟುಕೊಂಡವು. ಈ ವರ್ಗದ ಜನರು ಮೇಲ್ವರ್ಗವನ್ನು ಹೆಚ್ಚೆಚ್ಚು ಅವಲಂಬಿಸುವಂತೆ ಮಾಡಿದವು. ಧಾರ್ಮಿಕ ಅವಕಾಶಗಳು ದಲಿತರ ಸಾಮಾಜಿಕ ಸ್ಥಿತಿಯನ್ನು ಸುಧಾರಿಸಲಿಲ್ಲ. ಬದಲಿಗೆ ಮತ್ತಷ್ಟು ಸಂಕೀರ್ಣಗೊಳಿಸಿದವು. ಇದು ಕೇವಲ ಈ ಪ್ರದೇಶಕ್ಕೆ ಸೀಮಿತವಾಗಿರದೆ ಅಂದಿನ ಸಮಾಜದ ಸಾಮಾನ್ಯಸ್ಥಿತಿಯಾಗಿತ್ತು.

ಮೇಲ್ವರ್ಗದಿಂದಷ್ಟೇ ದೂರೀಕರಿಸಲ್ಪಟ್ಟಿರದ ಅವರ್ಣೀಯರು ಇನ್ನಿತರ ಶೂದ್ರ ವರ್ಗಗಳಿಂದಲೂ ಅದೇ ಪರಿಸ್ಥಿತಿಯನ್ನು ಹೆದರಿಸುತ್ತಿದ್ದರು. ಇವರೊಂದಿಗೆ ಸಹಭೋಜನವಾಗಲೀ, ವೈವಾಹಿಕ ಸಂಬಂಧವಾಗಲೀ ಇರಲಿಲ್ಲ. ಶೂದ್ರ ಜಾತಿಯ ವರ್ಗಗಳು ಮೇಲುಕೋಟೆ ದೇವಾಲಯದಲ್ಲಿ ಉದ್ಯೋಗ ಪಡೆದಿದ್ದು, ಧಾರ್ಮಿಕ ನೆಲೆಯಲ್ಲಿ ತೃಪ್ತಿಪಟ್ಟುಕೊಂಡಿವೆ. ನಾಲ್ಕನೇ ಸ್ತರದ ವರ್ಗಗಳು ಆರಾಧಿಸುವ ಗ್ರಾಮದೇವತೆಗಳ ಆರಾಧನೆಯಲ್ಲಿ ಅವರ್ಣೀಯರು ಪಾಲ್ಗೊಂದರೂ ಸಹ ಅಸಮಾನತೆಯ ಅಂಶ ಎದ್ದು ಕಾಣುತ್ತದೆ. ಗ್ರಾಮದೇವತೆಗಳ ಗುಡಿಗೂ ಸಹ ಅಸ್ಪೃಶ್ಯರ ಪ್ರವೇಶ ನಿಷಿದ್ಧವಾಗಿದೆ. ಗ್ರಾಮದೇವತೆ ಮಾರಿಹಬ್ಬದಲ್ಲಿ ಗುಡಿಯ ಹೊರಭಾಗಕ್ಕೆ ಮಾತ್ರ ಬಣ್ಣ ಸವರುವ ಕೆಲಸ ಅಸ್ಪೃಶ್ಯರದು. ಗುಡಿಯ ಒಳಗೆ ಬಣ್ಣ ಸವರಲು ಅವಕಾಶನೀಡಿದೆ ಗುಡಿ ಪ್ರವೇಶವಾದಂತೆ ಎಂಬ ನಂಬಿಕೆ ಇದೆ. ದೈಹಿಕವಾಗಿ ಕಠಿಣ ಕೆಲಸಗಳು ಇವರಿಗೆ ನೀಡಲ್ಪಟ್ಟಿದೆ. ಹಬ್ಬದ ಮುನ್ನ ಊರಿನಲ್ಲಿ ಸಾರುವವರು ಇವರೆ. ಹಬ್ಬದ ದಿನ ದೇವತೆಗೆ ಬಲಿ ಕೊಡುವ ಕಾರ್ಯದ ಜೊತೆಗೆ, ಬಲಿಕೊಟ್ಟ ವ್ಯಕ್ತಿಯ ಮನೆವರೆಗೆ ಬಲಿಯಾದ ಕುರಿ, ಮೇಕೆಗಳನ್ನು ಹೆಗಲ ಮೇಲೆ ಹೊತ್ತು ಸಾಗಿಸಬೇಕು. ಎರಡು ಮೈಲಿ ವ್ಯಾಪ್ತಿಯ ಈ ಗ್ರಾಮದ ಯಾವುದೇ ಭಾಗಕ್ಕಾದರೂ ಹೊತ್ತೊಯ್ಯಬೇಕು. ಹಬ್ಬಗಳ ದಿನ ತಮಟೆ ಬಡಿಯುವರು, ಭಕ್ತಾಧಿಗಳು ತಂದ ಪ್ರಸಾದದ ಒಂದು ಭಾಗ ಸ್ವೀಕರಿಸುವರು. ಎಡಗೈ ಮತ್ತು ಬಲಗೈನವರು ವರ್ಷಕ್ಕೊಂದಾವರ್ತಿ ಸರದಿಯಂತೆ ಪ್ರಸಾದ ಸ್ವೀಕರಿಸುವ ಹಕ್ಕು ಪಡೆಯುವರು. ಮೇಲ್ವರ್ಗದ ಜಾತಿಗಳು ಅಸ್ಪೃಶ್ಯರ ಮನೆಗಳಲ್ಲಿ ಊಟಮಾಡಿದರೆ ದಂಡವಿಧಿಸಲಾಗುತ್ತದೆ.[92] ಮೇಲುಕೋಟೆಯ ಸುತ್ತಲಿನ ಗ್ರಾಮಗಳ ಅಸ್ಪೃಶ್ಯರು ದೇವಾಲಯದ ಜಮೀನುಗಳಲ್ಲಿ ಕೂಲಿಕಾರ್ಮಿಕರಾಗಿ ದುಡಿಯುತ್ತಿದ್ದರು. ಶ್ಯಾನುಭೋಗ, ಪಟೇಲರಿಗೆ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು.

ಇವರನ್ನು ಕುಳುವಾಡಿಗಳು ಎನ್ನುತ್ತಿದ್ದರು. ತಮ್ಮ ಸಾಂಪ್ರದಾಯಿಕ ಕಸುಬಾದ ಚಪ್ಪಲಿಹೊಲಿಯುವುದನ್ನೇ ಜೀವನ ನಡೆಸಲು ನಂಬಿಕೊಂಡಿದ್ದರು.

ಮೇಲುಕೋಟೆ ದೇವಾಲಯಗಳ ಸ್ಥಾಪನೆಯೊಂದಿಗೆ ದಲಿತರ ಸ್ಥಾನಮಾನಗಳು ಬದಲಾವಣೆಗೊಂಡರೂ ಮೂಲಭೂತ ಪರಿಸ್ಥಿತಿಯಲ್ಲಿ ಬದಲಾವಣೆಯಾಗಲಿಲ್ಲ. ವರ್ಣವ್ಯವಸ್ಥೆಯ ಮೂಲಭೂತ ಆಶಯಗಳನ್ನು ಸುಭದ್ರಗೊಳಿಸಲು ದೇವಾಲಯಗಳು ಪಾತ್ರವಹಿಸಿದರು. ದಲಿತರ ಧಾರ್ಮಿಕ ವಿಚಾರದ ಕುರಿತ ಯಾವುದೇ ಇಲ್ಲಿನ ಶಾಸನಗಳು ವಿವರನೀಡುವುದಿಲ್ಲ. ರಾಮಾನುಜರ ಆಲೋಚನೆಯಲ್ಲಿ ಆಧ್ಯಾತ್ಮಿಕವಾಗಿ ಎಲ್ಲರನ್ನು ಸಂಘಟಿಸುವ ಮನೋ ಪ್ರವೃತ್ತಿ ಶ್ಲಾಘನಾರ್ಹವಾದುದು. ಆಚಾರ್ಯರು ದಲಿತರನ್ನು 'ತಿರುಕ್ಕುಲತ್ತಾರ್' ಎಂದು ಸಂಭೋದಿಸಿ, ಅವರ ಘನತೆಯನ್ನು ಸಮಾಜದಲ್ಲಿ ದೇವಾಲಯದ ಮೂಲಕ ಮೇಲೆತ್ತಲು ಶ್ರಮಿಸಿದರು. ಅಸ್ಪೃಶ್ಯರಿಗೆ ಸಮಾನತೆ ತರಲು ವೈಷ್ಣವ ಪಂಥವು ಆರಂಭದಲ್ಲಿ ಮೈಗೂಡಿಸಿಕೊಂಡಿದ್ದರೂ, ಕಾಲಕ್ರಮೇಣ ಆ ಮನೋಭಾವವು ಕಮರಿಹೋಯಿತು.

ದಲಿತರ ಪ್ರಗತಿ ಆಯಿತೆ ?

ಅಸ್ಪೃಶ್ಯತೆಯ ಸಂಪೂರ್ಣ ನಿವಾರಣೆಯು ಆಧುನಿಕ ಕಾಲದಲ್ಲಿ ಹಲವು ಸುಧಾರಕರ, ಪ್ರಜ್ಞಾವಂತರ, ಸರ್ಕಾರಗಳ ಅಖಿಲಭಾರತ ವ್ಯಾಪ್ತಿಯ ನಿರಂತರ ಪ್ರಯತ್ನಗಳಿಂದಲೂ ಅಸಾಧ್ಯವಾಗಿರುವಾಗ, ಎಂಟುನೂರು ವರ್ಷಗಳ ಹಿಂದೆ ಕೆಲವು ವ್ಯಕ್ತಿಗಳ ಸ್ವಲ್ಪಕಾಲದ ಒಂದು ಸೀಮಿತ ಪ್ರದೇಶದ ಪ್ರಯತ್ನಗಳಿಂದ ಅದು ಸಾಧ್ಯವಾಯಿತೆಂಬುದನ್ನು ಊಹಿಸಲೂ ಸಾಧ್ಯವಿಲ್ಲ. ಅಸ್ಪೃಶ್ಯತೆ ಹಿಂದೂ ಧರ್ಮದಲ್ಲಿ ಆಳವಾಗಿ ಬೇರೂರಿರುವ ಭಾವನೆ. ಅದನ್ನು ತೆಗೆದುಹಾಕಲು ಬಸವ ಮತ್ತು ಇತರರು ಪ್ರಾಮಾಣಿಕವಾಗಿ ಯತ್ನಿಸಿದರೂ, ಅದು ಉಳಿದುಕೊಂಡೇ ಬಂದಿದೆ. ಅಸ್ಪೃಶ್ಯರ ಏಳಿಗೆ ವೈಷ್ಣವಮತದ ಗುರಿ ಆಗಿರಲಿಲ್ಲ ಮತ್ತು ಅಂತಹ ಗುರಿಯನ್ನು ಇಟ್ಟುಕೊಂಡಿದ್ದರೂ, ಪ್ರಭುತ್ವದ ಬೆಂಬಲವಿಲ್ಲದೆ ಅದು ಸಪಲವಾಗುತ್ತಿರಲಿಲ್ಲ. ದೇವಾಲಯದ ಪ್ರವೇಶದ ನಂತರವೂ ಅಸ್ಪೃಶ್ಯರು ತಮ್ಮ ವೃತ್ತಿಗಳಲ್ಲೇ ಮುಂದುವರಿಯಬೇಕಾದುದರಿಂದ, ಆ ವೃತ್ತಿ ಅವರನ್ನು ಅದೇ ಜಾತಿಯಲ್ಲಿ, ಜಾತಿ ಶ್ರೇಣಿಯ ಅದೇ ಕ್ರಮದಲ್ಲಿ ಉಳಿಯುವಂತೆ ಮಾಡಿತು. ಸ್ಪೃಶ್ಯರು ಸಾಮಾಜಿಕವಾಗಿ ಸಮಾನತೆಯಿಂದ ನಡೆಯುವ ಪ್ರಯತ್ನ ವಾಸ್ತವವಾಗಿ ನಡೆದವೆ ಎಂಬುದರ ಬಗ್ಗೆ ಮಾಹಿತಿ ಸಾಲದು. ಭಾವುಕತೆಗೆ ಒಳಗಾಗದೆ ಮನುಷ್ಯನ ಸ್ವಭಾವವನ್ನು ಅರಿತು ಊಹಿಸುವುದಾದರೆ, ದಲಿತರ ಸ್ಥಿತಿಯಲ್ಲಿ ಅಲ್ಪಬದಲಾವಣೆಗಳೂ ಆಗಲಿಲ್ಲ. ದಲಿತರಿಗೆ ಸವರ್ಣೀಯರ ಮಧ್ಯೆ ಬದುಕಲು ಅವಕಾಶವನ್ನು ರಾಮಾನುಜರಾಗಲಿ ಇತರ ಭಕ್ತರಾಗಲಿ ಕೊಡುವ ಸ್ಥಿತಿಯಲ್ಲಿರಲಿಲ್ಲ. ಈ

ಎಲ್ಲಾ ಮಿತಿಗಳ ಹಿನ್ನೆಲೆಯಲ್ಲಿ ನೋಡಿದಾಗ ದಲಿತರ ವಿಚಾರದಲ್ಲಿ ಹನ್ನೆರಡನೆಯ ಶತಮಾನದಲ್ಲಿ ದೇವಾಲಯ ಪ್ರವೇಶದ ಅವಕಾಶವೊಂದೇ (ಒಂದು ದಿನ ಮಾತ್ರ) ದಲಿತರ ಸ್ಥಾನಮಾನಗಳಲ್ಲಿ ಬದಲಾವಣೆ ತರಲು ಸಾಧ್ಯವಾಗಲಿಲ್ಲ. ಆದರೂ ಅಂದಿನ ಚೌಕಟ್ಟಿನಲ್ಲಿ ರಾಮಾನುಜರು ತೋರಿದ ಮನೋಭಾವ ಗಮನಾರ್ಹವಾದುದು.

ಮಠಗಳು

ದೇವಾಲಯದ ನಿರ್ಮಾಣಕ್ಕೆ ಯಾರೇ ಕಾರಣರಾದರೂ, ನಂತರ ಅದು ಇಡಿ ಸ್ಥಳದ ಮತ್ತು ಸಮುದಾಯದ ಸ್ವತ್ತಾಗುತ್ತಿತ್ತು. ಸಾರ್ವಜನಿಕರು ದೇವರ ಸೇವೆಗೆ ಸಮಾವೇಶಗೊಳ್ಳುವ ಕೇಂದ್ರಸ್ಥಳವಾಗಿತ್ತು. ಭಕ್ತರು ಯಾತ್ರಿಕರು ಸೇರುತ್ತಿದ್ದ ದೇವಾಲಯದ ನಿರ್ವಹಣೆಯ ಜವಾಬ್ದಾರಿಯೂ ಹೆಚ್ಚುತ್ತಿತ್ತು. ಕಾಲಕಾಲಕ್ಕೆ ದೇವರ ಪೂಜೆ, ಯಾತ್ರಿಕರ ಮತ್ತು ಭಕ್ತರ ಉಟೋಪಚಾರದ ವ್ಯವಸ್ಥೆ, ದೇವರ ಆರಾಧನೆಯಲ್ಲಿ ತೊಡಗುತ್ತಿದ್ದ ಋಷಿಗಳು ಹೀಗೆ ದೇವಾಲಯಗಳ ಕಾರ್ಯವ್ಯಾಪ್ತಿ ವಿಸ್ತಾರವಾಗಿ ಮಠಗಳು ಸೇರ್ಪಡೆಯಾದವು. ದೇವಾಲಯದ ಅಂಗವಾಗಿ ಮಠಗಳು ಕಾಣಿಸಿಕೊಳ್ಳಲಾರಂಭಿಸಿದ್ದು ಕ್ರಿ.ಶ. ಆರು ಮತ್ತು ಏಳನೇ ಶತಮಾನಗಳಿಂದೀಚೆಗೆ.[93] ಮಠಗಳು ದೇವಾಲಯವನ್ನು ನಿಯಂತ್ರಿಸುವ ಶಕ್ತಿಯಾಗಿದ್ದವು. ದೇವಾಲಯಗಳು ಸ್ವಾಯತ್ತ ಸಂಸ್ಥೆಯಾಗಲು ಮಠಗಳೇ ಕಾರಣವಾದವು. "ಪ್ರತಿಯೊಂದು ದೇವಾಲಯಕ್ಕೆ 'ಮೂಲಸ್ಥಾನ'ವೆಂದು ಹೆಸರಿದ್ದು ಅದಕ್ಕೊಳಪಟ್ಟ ಇತರ ದೇವಾಲಯಗಳೂ ಇರುತ್ತಿದ್ದವು. ಅಂತಹ ದೇವಸ್ಥಾನಕ್ಕೆ ಮಠವೂ, ಆ ಮಠಕ್ಕೆ ಅಧೀನವಾಗಿದ್ದ ಇತರ ಪ್ರತಿಬದ್ಧ ಮಠಗಳೂ ಇರುತ್ತಿದ್ದವು" ಎಂಬುದು ಕಪಟರಾಳ ಕೃಷ್ಣರಾಯರ ಅಭಿಪ್ರಾಯ.[94] ಹೀಗೆ ದೇವಾಲಯ ಮತ್ತು ಮದಗಳ ಸಂಬಂಧವು ಪ್ರಾಚೀನ ಕರ್ನಾಟಕದಲ್ಲಿ ಅಭಿನ್ನವಾಗಿ ಮುಂದುವರೆದಿತ್ತು.

ಮೇಲುಕೋಟೆಯ ದೇವಾಲಯದ ಇತಿಹಾಸದಲ್ಲಿಯೂ ಮಠಗಳು ಮಹತ್ವದ ಪಾತ್ರ ವಹಿಸಿವೆ. ಶ್ರೀ ವೈಷ್ಣವ ಮತವು ಕ್ರಿ.ಶ. 15ನೇ ಶತಮಾನದ ಮಧ್ಯಭಾಗದಿಂದ ಹೊಸ ಹುರುಪನ್ನು ಪಡೆಯಿತು. ನಂತರ ಹಲವು ವೈಷ್ಣವ ಗುರುಗಳು ಮತ್ತು ಆಚಾರ್ಯಪುರುಷರು ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಪ್ರಭಾವಯುತ ವ್ಯಕ್ತಿಗಳಾಗಿ ಪ್ರಾಮುಖ್ಯತೆ ಪಡೆದರು. ಇವರು ಧಾರ್ಮಿಕ ಮಠಗಳೊಂದಿಗೆ ಗುರುತಿಸಿಕೊಂಡರು ಈ ಮಠಗಳು ಪ್ರತ್ಯೇಕವಾಗಿ ಶ್ರೀ ಭಾಷ್ಯಶಾಲೆಗಳನ್ನು ಅಥವಾ ಪ್ರಬಂಧಿಕಶಾಲೆಗಳನ್ನು ಪ್ರಸಾರ ಮಾಡಲು ಆರಂಭಿಸಿದವು. ಇದರಿಂದ ಶ್ರೀ ವೈಷ್ಣವರಲ್ಲಿ ನಿಶ್ಚಿತವಾಗಿ ಎರಡು ವಿಭಾಗಗಳು ಆರಂಭವಾದವು. ಯಾರು ಶ್ರೀಭಾಷ್ಯ ಸಂಪ್ರದಾಯಬದ್ಧರೋ ಅವರು 'ವಡಗಲೈ' ಎಂದು ಹಾಗೂ ಯಾರು ಪ್ರಬಂಧಿಕಶಾಲೆಗಳಿಗೆ ಸೇರಿದ್ದರೊ ಅವರು 'ತೆಂಗಲೈ' ಗುಂಪಿನವರು ಎಂದು ಕರೆಯಲ್ಪಟ್ಟರು.

ಶ್ರೀ ವೈಷ್ಣವ ಪಂಥದ ಮಠಗಳ ಲಕ್ಷಣಗಳು

ಈ ಮಠಗಳ ಪ್ರಾಥಮಿಕ ಕರ್ತವ್ಯವು ಪಂಥದ ತತ್ವಗಳನ್ನು ಪಾಲಿಸುವುದು ಮತ್ತು ಪಂಥಕ್ಕೆ ಬದ್ಧವಾಗಿದ್ದವರ ನಡುವೆ ವಿಸ್ತಾರವಾಗಿ ಅದನ್ನು ಪ್ರಸಾರ ಮಾಡುವುದಾಗಿತ್ತು. ಈ ಮಠಗಳು ಕಲಿಕೆಯ ಕೇಂದ್ರಗಳಾಗಿಯೂ ಕೆಲಸ ನಿರ್ವಹಿಸಿದವು. ಈ ಮಠಗಳ ಗುರುಗಳು ತಮ್ಮ ಧರ್ಮದ ಸಾರಾಂಶದ ಗ್ರಂಥಗಳನ್ನಷ್ಟೇ ಬೋಧಿಸದೆ, ಐಹಿಕ (ಲೌಕಿಕ) ಸಾಹಿತ್ಯವನ್ನು ಬೋಧಿಸಿದರು. ಮಠಗಳ ಆಡಳಿತವು ಅರಸತ್ವದ ತತ್ವಗಳಿಂದ ಆಧಾರವಾಗಿತ್ತು. ಮಠದ ನಾಯಕನು ಸಂಸ್ಥೆಯ ಉನ್ನತ ಅಧಿಕಾರ ಮೂಲವಾಗಿದ್ದನು. ಇವರು ತಮ್ಮ ಮುಂದಿನ ಉತ್ತರಾಧಿಕಾರಿಯನ್ನು ನೇಮಿಸುವ (ಹೆಸರಿಸಲು) ಅಧಿಕಾರವನ್ನು ಹೊಂದಿದ್ದರು. ಮಠವು ಸಂಪೂರ್ಣವಾಗಿ ಇವರ ನಿಯಂತ್ರಣದಲ್ಲಿತ್ತು. ಅನುಯಾಯಿಗಳ ಧಾರ್ಮಿಕ ಚಟುವಟಿಕೆಗಳ ನಿರ್ವಹಣೆಯ ಅಂತಿಮ ಅಧಿಕಾರ ಇವರದಾಗಿತ್ತು. ಇವರು ಮಠಕ್ಕೆ ಸದಸ್ಯರನ್ನು ಸೇರಿಸಿಕೊಳ್ಳುವ ಅಧಿಕಾರವನ್ನು ಹೊಂದಿದ್ದರು ಅವರ ಅನುಯಾಯಿಗಳಲ್ಲಿ ಹೊಸ ಶಿಷ್ಯರನ್ನು ಸ್ವೀಕರಿಸುವ ಮತ್ತು ದೋಷಯುಕ್ತ ಶಿಷ್ಯರನ್ನು ಉಚ್ಚಾಟಿಸುವ ಅಧಿಕಾರವೂ ಇವರದೇ ಆಗಿತ್ತು.

ಮೇಲುಕೋಟೆಯ ದೇವಾಲಯಕ್ಕೆ ಹೊಂದಿಕೊಂಡಂತೆ ಅಥವಾ ಸಮೀಪದಲ್ಲಿಯೇ ಇದ್ದ ಮಠಗಳು ದೇವಾಲಯದ ಆಡಳಿತದಲ್ಲಿ ಪ್ರಮುಖ ಪಾತ್ರ ವಹಿಸಿದ್ದವು. ಇಲ್ಲಿನ ಅತ್ಯಂತ ಪ್ರಾಚೀನ ಮಠ ಯತಿರಾಜಮಠವಾಗಿದ್ದು, ರಾಮಾನುಜರಿಂದ ಸ್ಥಾಪಿತವಾಯಿತು. ಈ ಮಠದ ಮುಖ್ಯಸ್ಥರು ದೇವಾಲಯದ ನಿರ್ವಹಣೆಗಾಗಿ ಮುದ್ರೆಗಳನ್ನು ಹೊಂದಿದ್ದರು. ದೇವಾಲಯದ ನಿತ್ಯ ಆರಾಧನೆಗಳ ವಿವರದ ದಾಖಲೆಗಳಿಗೆ ರಾಮಾನುಜಮುದ್ರೆಯು ಉಪಯೋಗಿಸಲ್ಪಡುತ್ತಿತ್ತು. ಇದು ಈ ಮಠದ ಮುಖ್ಯಸ್ಥರ ಬಳಿ ಇದ್ದು, ಅವರ ನಂತರದ ಪೀಠಸ್ಥರಿಗೆ ಮುದ್ರೆ ವರ್ಗಾವಣೆಯಾಗುತ್ತಿತ್ತು.[95] ದೇಶಾಂತ್ರಿ ಮುದ್ರೆಯು ಈ ಮಠದ ಯತಿಗಳ ಬಳಿ ಇದ್ದು ನಂತರ 'ಜೀಯರ್' ಎಂಬ ಹೆಸರಿನಿಂದ ಕರೆಯಲ್ಪಟ್ಟಿತು. ದೇವಾಲಯದ ಕಾರ್ಯಚಟುವಟಿಕೆಗಳ ದಾಖಲೆಗಳನ್ನು ಮಾಡಲು ಬಳಸಲ್ಪಡುತ್ತಿತ್ತು. ಇದು ಯತಿರಾಜಮಠದಲ್ಲಿದ್ದು, ಈ ಮುದ್ರೆಯನ್ನು ದೇವಗಿರಿಯ ರಾಜ ಅಚ್ಯುತರಾಯ 16ನೇ ಶತಮಾನದ ಅಂತ್ಯದಲ್ಲಿ ಮುಖ್ಯ ದೇವಾಲಯಕ್ಕೆ ಇದನ್ನು ವರ್ಗಾಯಿಸಿದನು.[96] ವೇದಾಂತಿ ರಾಮಾನುಜ ಜೀಯರ್ ಯತಿರಾಜಮಠದ ಮುಖ್ಯಸ್ಥರೂ ಹಾಗೂ ದೇವಾಲಯದ ಸಂಪತ್ತಿನ ಮೇಲ್ವಿಚಾರಕರಾಗಿ ಮತ್ತು ಬಾಕಿ ವಸೂಲಿಗಾಗಿ ನೇಮಕವಾಗಿದ್ದರು. ಇವರು ದೇವಾಲಯದ ಉಗ್ರಾಣಕ್ಕೆ ಮತ್ತು ಲೆಕ್ಕಪತ್ರಗಳಿಗೆ 'ವೇದಾಂತಿ ರಾಮಾನುಜ ಜೀಯರ್ ಮುದ್ರೆ'ಯನ್ನು ಬಳಸುತ್ತಿದ್ದರು.[97] 18ನೇ ಶತಮಾನದ ನಂತರ ಇಲ್ಲಿ ಮಠ ಮುದ್ರೆಯನ್ನು ಉಪಯೋಗಿಸುವ ಪದ್ಧತಿಯು ಜಾರಿಯಲ್ಲಿತ್ತು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ

ಪರಕಾಲಮಠದ ಯತಿಗಳು ರಾಜರಿಗೆ ಉಪದೇಶಕರಾಗಿದ್ದು ನಂತರ ದೇವಾಲಯದ ಆಡಳಿತದಲ್ಲಿ ಹೆಚ್ಚಿನ ಪಾಲು ಪಡೆದರು. 20ನೇ ಶತಮಾನದ ಮುಜರಾಯಿ ಕೈಪಿಡಿಯು ಎರಡು ಮುದ್ರೆಗಳನ್ನು ಉಲ್ಲೇಖಿಸಿದೆ. 1) ಸ್ಥಳಮುದ್ರೆ 2) ಮಠಮುದ್ರೆ, ಸ್ಥಳ ಮುದ್ರೆಯು ಇದು ಯತಿರಾಜಮಠದ ವೇದಾಂತಿ ರಾಮಾನುಜ ಜೀಯರ್‌ರ ಮುದ್ರೆಯಾಗಿದ್ದು, ಮಠಮುದ್ರೆಯು ಪರಕಾಲಮಠದ ಮುದ್ರೆಯಾಗಿದೆ. ಮೇಲಿನ ಮಾಹಿತಿಗಳಿಂದ ಸ್ಪಷ್ಟವಾಗುವ ಅಂಶವೆಂದರೆ ಮೇಲುಕೋಟೆಯ ದೇವಾಲಯಗಳ ಆಡಳಿತದಲ್ಲಿ ಮಠಗಳು ನೇರ ಸಂಬಂಧ ಹೊಂದಿದ್ದು, ರಾಜಪ್ರಭುತ್ವವೂ ಅದಕ್ಕೆ ಮನ್ನಣೆ ನೀಡಿದ್ದುದು. ದೇವಾಲಯದ ಎಲ್ಲಾ ಧಾರ್ಮಿಕ ಚಟುವಟಿಕೆಗಳು ಮಠದ ಮುಖ್ಯಸ್ಥರಿಂದಲೇ ನಿರ್ವಹಿಸಲ್ಪಡುತ್ತಿದ್ದುದು ಶಾಸನಗಳ ಅಧ್ಯಯನದಿಂದ ಸ್ಪಷ್ಟವಾಗುತ್ತದೆ.

ತಿರುನಾರಾಯಣಪುರದ ಶ್ರೀ ವೈಷ್ಣವರು ತಿರುನಾರಾಯಣ ದೇವರ ಸಮಾರಾಧನೆಗೆ ಭೂಮಿ ಧಾನಮಾಡಿದ್ದು, ಅದರ ಮೇಲ್ವಿಚಾರಣೆಯನ್ನು ಯತಿರಾಜಮಠದ ಮುಖ್ಯಸ್ಥರಾದ ರಾಮಾನುಜ ಜೀಯರ್ ವಹಿಸಿದರು.[98]

ಕ್ರಿ.ಶ. 1457ರಲ್ಲಿ ರಾಜ ಮಲ್ಲಿಕಾರ್ಜುನನ ಕಾಲದಲ್ಲಿ ನಾಗಮಂಗಲದ ತಿಮ್ಮಣ್ಣದಣ್ಣಾಯಕನು ದೇವಾಲಯಕ್ಕೆ ಮತ್ತು ರಾಮಾನುಜಕೂಟಗಳ ನಿರ್ವಹಣೆಗೆ ಭೂಮಿ ದಾನಮಾಡಿದ್ದು, ಅದರ ಮೇಲ್ವಿಚಾರಣೆ ಅಧಿಕಾರವನ್ನು ಯತಿರಾಜಮಠದ ರಾಮಾನುಜಜೀಯರ್‌ಗೆ ನೀಡಿದ್ದನು.[99] ಮೇಲಿನ ಉದಾಹರಣೆಯಲ್ಲದೆ ಇನ್ನೂ ಹಲವು ದಾನಶಾಸನಗಳು ಮಠದ ಮುಖ್ಯಸ್ಥನ ಸಮ್ಮುಖದಲ್ಲೇ ನೀಡಲ್ಪಟ್ಟಿದ್ದು, ದೇವಾಲಯ ಮತ್ತು ಮಠಗಳ ಆಸ್ತಿ ಒಂದೇ ಆಗಿದ್ದ ಅಂಶ ತಿಳಿದು ಬರುತ್ತದೆ. ಯತಿರಾಜಮಠ ಮತ್ತು ನಾರಾಯಣಸ್ವಾಮಿದೇವಾಲಯವು ಒಂದೇ ಆಗಿದ್ದು ರಾಜರು ಕೊಡುವ ಗ್ರಾಮಭೂಮಿಗಳು ಮಠದ ಸನ್ಯಾಸಿಯ ಅಧಿಕಾರಕ್ಕೆ ಸೇರಿದ್ದು, ಧಾನ್ಯದ ಪ್ರತಿಫಲ ಇವರಿಗೇ ಬರುತ್ತಿತ್ತು. ಇವರಿಗೆ ಸಹಾಯಕರಾಗಿ ಹಾಗೂ ರೈತರಿಂದ ಧಾನ್ಯ ಸಂಗ್ರಹ ಹಾಗೂ ಸಾಗುವಳಿ ಮಾಡಿಸಲು 'ಸ್ಥಾನದಯ್ಯ' ಎಂಬ ನಾಲ್ಕು ಜನ ಅಧಿಕಾರಿಗಳು ನೇಮಕವಾಗಿದ್ದರು.[100] ದೇವಾಲಯದ ನಿಯಂತ್ರಕರಾಗಿ ಮತ್ತು ಸಂಪತ್ತಿನ ನಿರ್ವಾಹಕರಾಗಿದ್ದ ಮಠದ ಸನ್ಯಾಸಿ ಸ್ಥಾನಕ್ಕೆ ಆಗಾಗ್ಗೆ ಕಚ್ಚಾಟಗಳು ನಡೆದಿವೆ. ಸನ್ಯಾಸಿಗಳ ಸಹಾಯಕರೇ ರಾಮಾನುಜ ಜೀಯರ್ ಅನ್ನು ಹಳ್ಳಕ್ಕೆ ತಳ್ಳಿ ಸಾಯಿಸಿದರು. ನಂತರ ನಾಲ್ಕು ಸ್ಥಾನದಯ್ಯರು ಯತಿರಾಜಮಠ ಮತ್ತು ದೇವಾಲಯದ ಭೂಮಿಯನ್ನು ಅನುಭವಿಸುತ್ತಿದ್ದಾಗ, ಮೈಸೂರು ಅರಸು ರಾಜಒಡೆಯರು ಅವರ ನಿರಂಕುಶಾಧಿಕಾರಕ್ಕೆ ತಡೆಮಾಡಿ ಭೂಮಿಗ್ರಾಮಗಳನ್ನು ಅರಮನೆಯ ಮೇಲ್ವಿಚಾರಣೆಗೆ ಒಪ್ಪಿಸಿದರು. ಕ್ರಿ.ಶ. 1822ರಲ್ಲಿ ಶಿಂಗರಯ್ಯಂಗಾರ್ಯಸ್ವಾಮಿಗಳು ಯತಿರಾಜಮಠದ

ಯತಿಗಳಾಗಿದ್ದಾಗ ಕುಪ್ಪಯ್ಯನೆಂಬುವವನು ಮಠದ ಮುಖ್ಯಸ್ಥನಾಗಲು ಹೋರಾಟ ಮಾಡಿ ವಿಫಲವಾದನು.[101]

ಹೀಗೆ ಮಠಗಳು ದೇವಾಲಯದ ರಾಜಕೀಯ ಧಾರ್ಮಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದವು. 15ನೇ ಶತಮಾನದ ನಂತರ ಮಠಗಳು ಮತ್ತಷ್ಟು ಪ್ರಬಲವಾದವು. ಏನೇ ಆದರೂ ಮಠಗಳು ಅವರದೇ ಐತಿಹಾಸಿಕ ದಾಖಲೆಗಳನ್ನು ಮಾಡುತ್ತಿದ್ದವು. ಅದರಿಂದ ಹಲವು ಅಂಶಗಳನ್ನು ನಾವು ಪಡೆಯಬಹುದಾಗಿದ್ದು ಇಲ್ಲಿ ಅವುಗಳನ್ನು ಉಲ್ಲೇಖಿಸಲಾಗಿದೆ.

ಮೇಲುಕೋಟೆಯ ಪ್ರಮುಖ ಮಠಗಳು

ಮೇಲುಕೋಟೆಯ ಬಹುತೇಕ ಮಠಗಳು ಇಲ್ಲಿ ತಮ್ಮ ಶಾಖೆಗಳನ್ನು ಮಾತ್ರ ಹೊಂದಿವೆ. ಯತಿರಾಜಮಠ ಮಾತ್ರ ಮೇಲುಕೋಟೆಯಲ್ಲಿಯೇ ಸ್ಥಾಪಿತವಾದ ಮಠವಾಗಿದೆ. ಉಳಿದಂತೆ ಇತರ ಮಠಗಳು ನಂತರದ ದಿನಗಳಲ್ಲಿ ಉಗಮವಾದವು ಮತ್ತು ಇವು ಭಕ್ತಾಧಿಗಳ ಆಶ್ರಯ ವ್ಯವಸ್ಥೆಯ ಸೇವೆಯನ್ನು ಮಾಡುತ್ತಿವೆ. ಇಂದಿಗೂ ಇಲ್ಲಿನ ದೇವಾಲಯಗಳೊಂದಿಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ತಮ್ಮ ಸಂಬಂಧವನ್ನು ಉಳಿಸಿಕೊಂಡಿವೆ. ಮೇಲುಕೋಟೆಯಲ್ಲಿದ್ದ ಪ್ರಮುಖ ಮಠಗಳು ಈ ಕೆಳಗಿನಂತಿವೆ.

1. ಶ್ರೀ ಯದುಗಿರಿ ಯತಿರಾಜಮಠ

ಯತಿರಾಜ ಮಠವು ತೆಂಗಲೈ ಪಂಥಕ್ಕೆ ಸೇರಿದುದಾಗಿದೆ. ಕ್ರಿ.ಶ. 12ನೇ ಶತಮಾನದ ರಾಮಾನುಜರ ಕಾಲದಿಂದ ಮೇಲುಕೋಟೆಯಲ್ಲಿರುವ ಒಂದೇ ಮಠ. ಇದು ಆಚಾರ್ಯರಿಂದಲೇ ಆರಂಭಿತವಾಗಿ ದೇವರ ಸೇವೆಗಾಗಿ ಮತ್ತು ತಿರುನಾರಾಯಣ ದೇವಾಲಯದ ನಿಯಂತ್ರಣಕ್ಕಾಗಿ ಸ್ಥಾಪಿತವಾಯಿತು.[102] ಶಾಸನಗಳ ದಾಖಲೆಯಲ್ಲಿರುವಂತೆ ಈ ಮಠವು ಗುರುಪರಂರೆಯನ್ನು ಹೊಂದಿದೆ. ಈ ಮಠದ ಮುಖ್ಯಸ್ಥರ ಹೆಸರಿನೊಂದಿಗೆ 'ಜೀಯರ್' ಎಂಬ ನಾಮವು ಸೇರ್ಪಡೆಯಾಗುತ್ತಿತ್ತು. ಈ ಮಠದ ಮುಖ್ಯಸ್ಥರು ಮೇಲುಕೋಟೆಯ ದತ್ತಾತ್ರೇಯ ಪೀಠದಲ್ಲಿಯೇ ತಮ್ಮ ಸನ್ಯಾಸವನ್ನು ಸ್ವೀಕರಿಸಿದ್ದರು. ಈ ಮಠದ ಇತಿಹಾಸದಲ್ಲಿ ಕಾಲದಿಂದ ಕಾಲಕ್ಕೆ ಆಗಾಗ್ಗೆ ಮಠದ ಜೀಯರ್‌ಗಳ ಕುರಿತು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಶ್ರೀ ತಿರುನಾಯಣ ಜೀಯರ್ ರಾಮಾನುಜರ ನಂತರ ಮಠದ ಮುಖ್ಯಸ್ಥರಾದರು.[103] 16ನೇ ಶತಮಾನದ ಮೇಲುಕೋಟೆಯ ಶಾಸನದಂತೆ 'ವೇದಾಂತಿ ರಾಮಾನುಜ ಜೀಯರ್' ಮಠದ 17ನೇ ಮುಖ್ಯಸ್ತರಾದರು.[104] ಇವರು ತಮ್ಮನ್ನು ಶ್ರೀರಂಗಂನ ಕಾಂಗಡ್ಯೆ ಅಣ್ಣ ಎಂದು ಕರೆದುಕೊಂಡಿದ್ದಾರೆ. ಮೇಲುಕೋಟೆ

ದೇವಾಲಯಗಳಿಗೆ ನೀಡಿರುವ ದಾನಗಳು ಈ ಮಠದ ಮುಖ್ಯಸ್ಥರ ಮೇಲ್ವಿಚಾರಣೆಯಲ್ಲಿಯೇ ನೀಡಲ್ಪಟ್ಟಿರುವುದು ಇದರ ಪ್ರಾಮುಖ್ಯತೆಯನ್ನು ತಿಳಿಸುತ್ತದೆ. ರಾಮಾನುಜರು ಈ ಮಠವನ್ನು ತಮ್ಮ ಗುರುಗಳಿಂದ ಆಜ್ಞಾಪಿತವಾದಂತೆ ಮತ್ತು ಸಾಮರಸ್ಯದ ದೃಷ್ಟಿಯಿಂದ ಆರಂಭಿಸಿದರು.

2. ಅಹೋಬಲಮಠ (ಅಡಿವಾನ್ ಶಠಗೋಪ ಜೀಯರ್ ಮಠ)

ಈ ಮಠವು ವಡಗಲೈಪಂಥದ ಪ್ರಭಾವಶಾಲಿ ಮಠಗಳಲ್ಲಿ ಒಂದಾಗಿದೆ. ಈ ಮಠವು ಶ್ರೀ ವೈಷ್ಣವಧರ್ಮದ ಪ್ರಚಾರಕ್ಕೆ ಮಹತ್ವದ ಪಾತ್ರ ನಿರ್ವಹಿಸಿತು. ಈ ಮಠವು ಅಡಿವಾನ್ ಶಠಗೋಪ ಜೀಯರ್ (ಕ್ರಿ.ಶ. 1437–1516) ರಿಂದ ಸ್ಥಾಪಿತವಾಯಿತು. ಇವರು ಮೇಲುಕೋಟೆಯಲ್ಲಿ ಜನಿಸಿದರು. ನಂಬಿಕೆಯಂತೆ ಅಹೋಬಲ ಮಠದ ನರಸಿಂಹದೇವರ ಬಳಿ ಇವರು ಸನ್ಯಾಸ ಆಶ್ರಮಕ್ಕೆ ದೀಕ್ಷೆಯನ್ನು ಸ್ವೀಕರಿಸಿದರು. ಶಠಗೋಪಜೀಯರ್ ವಿಜಯನಗರ ಆಸ್ಥಾನದಲ್ಲಿ ಗೌರವಾನ್ವಿತ ಸ್ಥಾನವನ್ನು ಪಡೆದಿದ್ದರು. ಇವರು ಆಂದ್ರಪ್ರದೇಶದಲ್ಲಿ ಶ್ರೀ ವೈಷ್ಣವ ಧರ್ಮವನ್ನು ನಿಶ್ಚಿತವಾಗಿ ಪ್ರಸಾರ ಮಾಡಿದರು. ಕ್ರಿ.ಶ. 1516ರಲ್ಲಿ ಇವರು ಮೇಲುಕೋಟೆಯಲ್ಲಿ ಸಾವನ್ನಪ್ಪಿದರು. ಇವರ ನಂತರ ನಾರಾಯಣಜೀಯರ್ ಮತ್ತು ನಂತರ ಪರಾಂಕುಶ ಜೀಯರ್ ಉತ್ತರಾಧಿಕಾರಿಗಳಾದರು.[105] ಮೇಲುಕೋಟೆ ದೇವಾಲಯದ ದಾನದ ಕೆಲವು ಶಾಸನಗಳಲ್ಲಿ ಈ ಮಠದ ಉಲ್ಲೇಖವಾಗಿವೆ. ಈ ಮಠದ ಪುರೋಹಿತರಿಗೆ ಶಠಗೋಪ ಜೀಯರ್ ಎಂಬ ಹೆಸರನ್ನು ಸೇರಿಸುವುದು ಸಂಪ್ರದಾಯವಾಗಿದೆ. ಇಲ್ಲಿನ ಕಲ್ಯಾಣಿ ಕೊಳವು 17ನೇ ಶತಮಾನದಲ್ಲಿ ಜೀರ್ಣೋದ್ಧಾರಗೊಂಡಿತು.[106] ಆದರೆ 1702 ಕ್ಕೆ ಮುಂಚಿನ ಮಠದ ಶಾಖೆಯನ್ನು ಗುರುತಿಸುವುದು ಸಾಧ್ಯವಿಲ್ಲ. ಏನೇ ಆದರೂ ಈ ಮಠದ ಸ್ವಾಮಿಗಳು ಮೈಸೂರಿನ ಅರಸರ ಆಸ್ಥಾನದಲ್ಲಿ ಉನ್ನತ ಗೌರವವನ್ನು ಪಡೆಯುತ್ತಿದ್ದರು.

3. ಪರಕಾಲಮಠ

14ನೇ ಶತಮಾನದಲ್ಲಿ ಬ್ರಹ್ಮತಂತ್ರ ಸ್ವತಂತ್ರ್ಯ ಸ್ವಾಮಿಯು ವಡಗಲೈ ಪಂಥದ ಬ್ರಹ್ಮತಂತ್ರ ಸ್ವತಂತ್ರ್ಯ ಮಠವನ್ನು ಆರಂಭಿಸಿದರು. ಅದು ನಂತರ ಪರಕಾಲಮಠವೆಂಬ ಹೆಸರಿನಿಂದ ಪ್ರಸಿದ್ಧಿಯಾಯಿತು. ಈ ಮಠವು ಮೊದಲು ತಿರುಪತಿಯಲ್ಲಿ ಮಠದ ಮುಖ್ಯಸ್ಥರಾದ ಯತೀಂದ್ರ ಸ್ವಾಮಿಗಳು 1809ರಲ್ಲಿ ಮೈಸೂರು ಪ್ರಾಂತ್ಯಕ್ಕೆ ಬಂದಾಗ ಕೃಷ್ಣರಾಜ ಒಡೆಯರ ಅಜ್ಜಿಯಾದ ಲಕ್ಷ್ಮಮ್ಮಣ್ಣಿಯು ಇವರನ್ನು ಮೈಸೂರು ಕೋಟೆಯ ವರಹಸ್ವಾಮಿ ದೇವಾಲಯಕ್ಕೆ ಆಹ್ವಾನಿಸಲ್ಪಟ್ಟರು. ಇವರ ನಂತರ ಗಂಟಾವತಾರ ಪರಕಾಲಸ್ವಾಮಿಗಳು ಉತ್ತರಾಧಿಕಾರಿಗಳಾದರು. 1811ರಲ್ಲಿ ಕೃಷ್ಣರಾಜ ಒಡೆಯರು ಇವರನ್ನು ಮೈಸೂರಿಗೆ ಆಹ್ವಾನಿಸಿದರು. ಮತ್ತು ರಾಜಗುರುಗಳಾಗಿ ಸ್ವೀಕರಿಸಿದರು. ಈ ಮಠದ ಕುರಿತು

ತಿಳಿಯಲು ಮೈಸೂರಿನಲ್ಲಿ 1811ಕ್ಕೆ ಮೊದಲ ಮತ್ತು ನಂತರದ ಯಾವೊಂದು ಶಾಸನವೂ ಲಭ್ಯವಿಲ್ಲ. ಎಲ್ಲಾ ರಾಜಗುರುಗಳು ಪರಕಾಲಸ್ವಾಮಿಗಳೆಂದು ಗುರುತಿಸಲ್ಪಟ್ಟಿದ್ದು, ಮಠದ ಹೆಸರಲ್ಲಿ ಗುರುತಿಸಲ್ಪಟ್ಟಿಲ್ಲ. ಈ ಮಠದ ಮುಖ್ಯಸ್ಥರು ಮೈಸೂರು ಆಡಳಿತದ ಉನ್ನತ ಸಲಹೆಗಾರರಾಗಿದ್ದರು. ಈ ಮಠವು ಮೈಸೂರಿನ ಒಳಗೆ ಮತ್ತು ಸುತ್ತಲಿನ ಶ್ರೀ ವೈಷ್ಣವ ಪಂಥದ ಮುಖ್ಯ ಕೇಂದ್ರವಾಗಿ ಕೆಲಸ ಮಾಡಿತು. ಇದು ಮೇಲುಕೋಟೆ ದೇವಾಲಯದಲ್ಲಿ ವಿಶೇಷ ಗೌರವವನ್ನು ಪಡೆಯುತ್ತಿತ್ತು. ಮಠವು ಮೇಲುಕೋಟೆಯ ಕಲ್ಯಾಣಿಯ ಬಳಿ ತನ್ನ ಶಾಖೆಯನ್ನು ಹೊಂದಿದೆ.

4. ವಾನಮಾಮಲೈ ಜೀಯರ್ ಮಠ

ತೆಂಗಲೆಯ ಶ್ರೀ ವೈಷ್ಣವರ ಈ ಮಠವು ಗೌರವಾನ್ವಿತ ಪರಂಪರೆಯನ್ನು ಹೊಂದಿದೆ ಮಾನವಾಳ ಮಹಾಮುನಿಗಳ ಆಪ್ತ ಶಿಷ್ಯರಾಗಿದ್ದ ವಾನಮಾಮಲೈ ಜೀಯರ್‌ರವರು ಇದನ್ನು ಆರಂಭಿಸಿದರು. ನಂಬಲಾಗಿರುವಂತೆ ಈ ಮಠದ ಕೇಂದ್ರ ಶಾಖೆಯು ತಿರುಪತಿಯಲ್ಲಿತ್ತು. ಮೇಲುಕೋಟೆಯಲ್ಲಿ ಈ ಮಠದ ಶಾಕೆಯು ಇದೆ.

5. ಅಲಗಿಯ ಮನವಾಳ ಜೀಯರ್ ಮಠ

ಇದು ತೆಂಗಲೈ ಪಂಥದ ಮಠವಾಗಿದ್ದು, ಅಲಗಿಯ ಮನವಾಳ ಜೀಯರ್ (ಕ್ರಿ.ಶ. 1420–1468)ರ ನಂತರ ಈ ಮಠಕ್ಕೆ ಈ ಹೆಸರು ಬಂತು. ಇವರು ಪಟ್ಟರ್‌ಪಿರನ್ ಜೀಯರ್ ರವರ ಶಿಷ್ಯರಾಗಿದ್ದರು. ಇವರು ಈ ಮಠದ ಪ್ರಸಿದ್ಧ ಜೀಯರ್ ಆಗಿದ್ದು, ಅಷ್ಟದಿಗ್ಗಜರಲ್ಲಿ ಒಬ್ಬರಾಗಿದ್ದರು. (ಕ್ರಿ.ಶ. 1370–1443) ಇವರು ಕಂಚಿಯಲ್ಲಿ ನೆಲೆಯಾಗಿದ್ದರು. ಈ ಮಠವು ಕಂಚಿಯಲ್ಲಿ ಧಾರ್ಮಿಕ ಮತ್ತು ತತ್ವಶಾಸ್ತ್ರಗಳ ಅಧ್ಯಯನ ಕೇಂದ್ರವಾಗಿ ಮುಂದುವರೆಯುತ್ತಿದೆ. ಇದು ಸಹ ಮೇಲುಕೋಟೆಯಲ್ಲಿ ತನ್ನ ಶಾಖೆಯನ್ನು ಹೊಂದಿದೆ. ಈ ಮಠದ ಮುಖ್ಯಸ್ಥರ ಆಧ್ಯಾತ್ಮಿಕ ಪರಂಪರೆ ಮತ್ತು ಹಲವು ಉಪಶಾಖೆಗಳು ಇವತ್ತಿಗೂ ಮುಂದುವರೆಯುತ್ತಿವೆ. ದಕ್ಷಿಣ ಭಾರತದಲ್ಲಿ ಹೆಚ್ಚು ಶಾಲೆ ಹೊಂದಿರುವ ಈ ಮಠವು ಹೆಚ್ಚಿನ ವಿಭಾಗಗಳಲ್ಲಿ ಧಾರ್ಮಿಕ ನಾಯಕತ್ವವನ್ನು ಅನುಭವಿಸುತ್ತಿವೆ.

ಹೀಗೆ ಮಠಗಳು ಮೇಲುಕೋಟೆ ದೇವಾಲಯದ ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ವಿಭಾಗಗಳಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸಿದ್ದವು. ಶ್ರೀ ವೈಷ್ಣವ ಧರ್ಮ ಪ್ರಸಾರದ ಮೂಲಕ ರಾಮಾನುಜರ ತತ್ವ ಸಿದ್ಧಾಂತಗಳನ್ನು ಜೀವಂತವಾಗಿಡುವ ಕೆಲಸದಲ್ಲಿ ತಲ್ಲೀನವಾಗಿದ್ದವು. ಆದರೆ 20ನೇ ಶತಮಾನದ ಮಧ್ಯಭಾಗದಿಂದ ಮಠಗಳು ತಮ್ಮ ಪ್ರಭಾವವನ್ನು ಕಳೆದುಕೊಳ್ಳಲಾರಂಭಿಸಿದವು. ಆದರೂ ಅಲ್ಪಮಟ್ಟಿನ ಪ್ರಾಮುಖ್ಯತೆಯನ್ನು ಇಂದಿಗೂ ಉಳಿಸಿಕೊಂಡಿವೆ.

ದೇವಾಲಯಗಳ ಸಾಮಾಜಿಕ ವಾಸ್ತವತೆ

ಒಂದು ನಿರ್ದಿಷ್ಟ ಪ್ರದೇಶದ ಚರಿತ್ರೆಯ ರಚನೆಗೆ ಅಲ್ಲಿ ನಿರ್ಮಾಣಗೊಂಡಿರುವ ಸ್ಮಾರಕಗಳು ಮಹತ್ವದ ದಾಖಲೆಗಳಾಗಿವೆ. ಸ್ಮಾರಕಗಳನ್ನು ಕುರಿತಾದ ಅಧ್ಯಯನಗಳು ಸಾಕಷ್ಟು ಆಗಿದ್ದರೂ ಅವು ಪ್ರಭುತ್ವದ ಸ್ಮಾರಕಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಿವೆ. ಸಮಾಜದಲ್ಲಿ ಮೇಲ್ವರ್ಗ ಮತ್ತು ಕೆಳವರ್ಗ ಎಂಬ ವಿಂಗಡಣೆ ಮಾಡಿರುವಂತೆ ಪ್ರಭುತ್ವದ ಸ್ಮಾರಕಗಳು ಮತ್ತು ಪ್ರಜೆಗಳ ಸ್ಮಾರಕಗಳು ಎಂದು ವಿಂಗಡಣೆ ಮಾಡಿರುವ ಅಂಶ ಎದ್ದುಕಾಣುತ್ತದೆ. ಪ್ರಭುತ್ವದ ಸ್ಮಾರಕಗಳ ಸಾಲಿಗೆ ಬರುವ ದೇವಾಲಯಗಳು ಅರಮನೆಗಳು, ಕೋಟೆ–ಕೊತ್ತಲುಗಳ ಕುರಿತು ಅಧ್ಯಯನ ಆಗಿದ್ದು, ಅಪಾರ ಸಂಖ್ಯೆಯ ಶಾಸನಗಳು ಮತ್ತು ಸಾಹಿತ್ಯ ಕೃತಿಗಳ ಲಭ್ಯತೆಯಿಂದ ಅರಸ ಕೇಂದ್ರಿತ ಚರಿತ್ರೆಯು ಮತ್ತಷ್ಟು ಬಲವಾಯಿತು. ಸ್ಮಾರಕಗಳನ್ನು ಕಟ್ಟಿಸಿದವರ ಹಿನ್ನೆಲೆಯಿಂದ ನೋಡಲಾಯಿತೇ ಹೊರತು ಕಟ್ಟಿದವರ ಹಿನ್ನೆಲೆಯಿಂದಲ್ಲ. ಅದರ ಹಿಂದಿನ ದುಡಿದ ಸಾವಿರಾರು ಕೂಲಿ ಕೆಲಸಗಾರರು ಚರಿತ್ರೆಯ ಪ್ರವೇಶ ಪ್ರವೇಶ ಪಡೆಯಲೇ ಇಲ್ಲ. ಇವರ ಸಹಕಾರದಿಂದ ಧಾರ್ಮಿಕ ಪ್ರಭುತ್ವಗಳು ಪ್ರಚಾರವನ್ನು ಗಿಟ್ಟಿಸಿಕೊಂಡಿದ್ದವು. ಆದರೆ ಗಮನಾರ್ಹ ಅಂಶವೆಂದರೆ ಪ್ರಜೆಗಳ ಸ್ಮಾರಕಗಳಾದ ಗ್ರಾಮದೇವತೆಗಳ ಗುಡಿಗಳು, ಮನೆಗಳು ಅವುಗಳಿಗೆ ಸಂಬಂಧಿಸಿದ ನಂಬಿಕೆ, ಆಚರಣೆಗಳು ಅಲಕ್ಷಕ್ಕೆ ಒಳಗಾದವು. ಹೀಗೆ ಸ್ಮಾರಕಗಳ ನಿರ್ಮಾಣಗಳಲ್ಲಿ ಅಸಮಾನತೆ ನಂತರ ಆಚರಣೆಗಳಲ್ಲಿ ಮತ್ತು ನಂಬಿಕೆಗಳಲ್ಲಿ ವಿಭಿನ್ನತೆಗಳು ಅಂದಿನ ಸಮಾಜದ ವಾಸ್ತವ ಸ್ಥಿತಿಯನ್ನು ಅರಿಯಲು ಅನುಕೂಲವಾಗಿವೆ.[107]

ಪ್ರಭುತ್ವದ ಸ್ಮಾರಕಗಳ ಪ್ರತೀಕಗಳಂತಿದ್ದ ದೇವಾಲಯಗಳ ಸಂಕೀರ್ಣವನ್ನು ಹೊಂದಿರುವ ಮೇಲುಕೋಟೆಯಲ್ಲಿ ಮೇಲೆ ನೀಡಿರುವ ಚಾರಿತ್ರಿಕ ವಿವರಣೆಯ ನೆಲೆಗೆ ಪೂರಕವಾದ ಅಂಶಗಳು ಕಂಡು ಬರುತ್ತವೆ. ಪ್ರಭುತ್ವದ ಮತ್ತು ಪ್ರಜೆಗಳ ಸ್ಮಾರಕಗಳಲ್ಲಿರುವ ಹಲವಾರು ಅಸಮಾನತೆಯ ಮುಖಗಳು ದೇವಾಲಯಗಳ ನಿರ್ಮಾಣದ ವಾಸ್ತವ ಸತ್ಯವನ್ನು ಹೊರಹಾಕುತ್ತವೆ. ನಿರ್ಲಕ್ಷಕ್ಕೊಳಗಾದ ಸಾಮಾನ್ಯವರ್ಗದ ಸ್ಥಾನಮಾನಗಳನ್ನು ಸ್ಮಾರಕಗಳು ಸಾಬೀತುಪಡಿಸುತ್ತವೆ. ದೇವಾಲಯಗಳನ್ನೇ ಇಲ್ಲಿ ಪ್ರಮುಖ ಸ್ಮಾರಕವಾಗಿ ತೆಗೆದುಕೊಳ್ಳಲಾಗಿದ್ದು, ಪ್ರಭುತ್ವದ ಮತ್ತು ಪ್ರಜೆಗಳ ಸ್ಮಾರಕಗಳು ಎಂದು ಎರಡು ಹಂತಗಳಲ್ಲಿ ವಿವರಿಸಲಾಗಿದೆ.

ಪ್ರಭುತ್ವದ ಸ್ಮಾರಕಗಳು

ಹೊಯ್ಸಳರ ಕಾಲದಿಂದ ಮೈಸೂರು ಒಡೆಯರ ಕಾಲದವರೆಗೂ ನಿರಂತರ ರಾಜಾಶ್ರಯ ಪಡೆದಿದ್ದ ಮೇಲುಕೋಟೆಯಲ್ಲಿ ರಾಜಪ್ರಭುತ್ವವನ್ನು ಸಂಕೇತಿಸುವ

ಕಟ್ಟಡಗಳೆಂದರೆ ದೇವಾಲಯಗಳು. ಹೊಯ್ಸಳರು, ವಿಜಯನಗರದ ಅರಸರು ಮತ್ತು ಮೈಸೂರು ಒಡೆಯರಲ್ಲದೆ ಅವರ ಸಾಮಂತರು, ಅಧಿಕಾರಿಗಳು ದೇವಾಲಯಗಳ ನಿರ್ಮಾಣ ಮತ್ತು ನಿರ್ವಹಣೆಗೆ ಸಹಕಾರಿಯಾಗಿದ್ದರು. ಇವು ಅರಸಕೇಂದ್ರಿತ ಚರಿತ್ರ ನಿರ್ಮಾಣಕ್ಕೆ ಅವಶ್ಯಕ ಪೂರಕ ಸಾಮಾಗ್ರಿ ಒದಗಿಸಿದವು. ರಾಜಪ್ರಭುತ್ವ ಅಂದಿನ ಧಾರ್ಮಿಕ ಪ್ರಭುತ್ವದೊಂದಿಗೆ ಬೆರೆತಿತ್ತು ಎನ್ನುವುದು ಗಮನಾರ್ಹ ಅಂಶ. ಕಲೆ ಮತ್ತು ವಾಸ್ತುಶಿಲ್ಪಗಳು ಪರಿಪೂರ್ಣತೆಯ ಹಾದಿಯಲ್ಲಿದ್ದು ಹೆಚ್ಚಿನ ಮನ್ನಣೆ ಪಡೆದಿದ್ದುದಕ್ಕೆ ದೇವಾಲಯಗಳೇ ಆಧಾರವಾಗಿವೆ. ಪ್ರತಿಯೊಂದು ಅರಸು ಮನೆತನವು ತನ್ನದೇ ವಿಶಿಷ್ಟ ವಾಸ್ತುಶಿಲ್ಪ ಶೈಲಿಯನ್ನು ಅಳನಡಿಸಿಕೊಂಡಿದ್ದವು. ಮೇಲುಕೋಟೆಯ ಪ್ರಮುಖ ದೇವಾಲಯಗಳಾದ, ತಿರುನಾರಾಯಣ, ಯೋಗಾನರಸಿಂಹ, ವೆಂಕಟರಮಣ ಹಾಗೂ ಸುತ್ತಲಿನ ಗುಡಿಗಳು ಮತ್ತು ಮಂಟಪಗಳ ವಾಸ್ತು ರಚನೆಗಳು ಆಕರ್ಷಕವಾಗಿದ್ದು ಶಿಲ್ಪಗಳ ಕಲಾ ನೈಪುಣ್ಯತೆಯನ್ನು ವ್ಯಕ್ತಪಡಿಸುತ್ತದೆ. ವಿಜಯನಗರದ ಅರಸರ ಕಾಲದಲ್ಲಿ ನಾರಾಯಣಸ್ವಾಮಿ ದೇವಾಲಯದ ಉತ್ತರ ಭಾಗಕ್ಕೆ ನಿರ್ಮಾಣಗೊಂಡ ರಂಗಮಂಟಪದ ಸ್ಥಂಭಗಳ ಮೂರ್ತಿಶಿಲ್ಪಗಳು ಸುಂದರವಾಗಿ ಮೂಡಿ ಬಂದಿದ್ದು, ಇದು ಮೂರ್ತಿಶಿಲ್ಪದ ಅಚ್ಚರಿಯಾಗಿದೆ. ಈ ಅವಧಿಯಲ್ಲಿ ನಿರ್ಮಾಣಗೊಂಡ ಹಲವು ಸ್ಮಾರಕಗಳು ವಿಜಯನಗರದ ವಿಶಿಷ್ಟ ವಾಸ್ತುಶಿಲ್ಪಶೈಲಿಯ ಸಾಕ್ಷಿಗಳು ಇಲ್ಲಿವೆ. ಇಲ್ಲಿನ ಶಾಸನಗಳು ತಿಳಿಸುವಂತೆ ಅರಲ್ಲದೆ ಅಧಿಕಾರಿವರ್ಗದವರು ದೇವಾಲಯಗಳಿಗೆ ಸಹಾಯ ಮಾಡಿದರು. ರಾಜಪ್ರಭುತ್ವವು ಕೇವಲ ದೇವಾಲಯಗಳ ನಿರ್ಮಾಣಕ್ಕಷ್ಟೇ ಹೆಚ್ಚಿನ ಮಹತ್ವ ನೀಡಿರುವುದು ಇದರಿಂದ ಸ್ಪಷ್ಟವಾಗುತ್ತದೆ. ವಾಸ್ತುಶಿಲ್ಪವು ಧಾರ್ಮಿಕ ಘಟ್ಟವನ್ನು ತಲುಪಿ ದೇವರಿಗೆ ದೇವಾಲಯ ನಿರ್ಮಿಸಿದರೆ, ಮೂರ್ತಿಶಿಲ್ಪವು ಆ ದೇವರ ಕಲ್ಪನೆಗೆ ಸಾಂಕೇತಿಕ ಆಕಾರವನ್ನು ಕೊಡಲು ಪ್ರಯತ್ನಿಸಿತು.[108] ಇದರಿಂದ ವಾಸ್ತು ಮತ್ತು ಮೂರ್ತಿಶಿಲ್ಪವು ಸಂಪೂರ್ಣವಾಗಿ ಧಾರ್ಮಿಕ ತಳಹದಿಯಲ್ಲಿ[109] ಬೆಳೆಯುವಂತಾಯಿತು. ಅಲೌಕಿಕ ಚಿಂತನೆಗಳನ್ನು ಪ್ರಚುರಪಡಿಸುವ ಅನೇಕ ಸಿದ್ಧಾಂತಗಳು ಹುಟ್ಟಿಕೊಂಡು ದೇವಾಲಯ ನಿರ್ಮಾಣಕ್ಕೆ ದೇವಕಾರ್ಯ ಎಂಬ ಹೆಸರನ್ನು ಇಟ್ಟವು.[110] ಈ ರೀತಿಯಾಗಿ ದೇವಾಲಯಗಳು ರಾಜ ಮತ್ತು ಅಧಿಕಾರವರ್ಗವಿರುವ ರಾಜಪ್ರಭುತ್ವ ಹಾಗೂ ಧರ್ಮ ಮತ್ತು ಪುರೋಹಿತಶಾಹಿ ವ್ಯವಸ್ಥೆಯ ಧಾರ್ಮಿಕ ಪ್ರಭುತ್ವದ ತಳಹದಿಯ ಮೇಲೆ ನಿರ್ಮಾಣಗೊಂಡವು. ಬ್ರಾಹ್ಮಣರಿಗೆ ಮತ್ತು ದೇವಾಲಯಗಳಿಗೆ ಭೂದಾನಗಳು ಹೆಚ್ಚಿದಂತೆ ಇವು ಮತ್ತಷ್ಟು ಪ್ರಬಲಗೊಂಡವು. ಧಾರ್ಮಿಕ ಸ್ಮಾಕರಗಳು ಕೇವಲ ಒಂದು ಗುಂಪಿನ ಪ್ರಯತ್ನದ ಫಲವಾಗಿ ನಿರ್ಮಾಣವಾದವು.[111]

ದೇವಾಲಯಗಳು ಪ್ರತಿನಿಧಿಸುತ್ತಿದ್ದುದು ಕೇವಲ ರಾಜರು ಮತ್ತು ಪುರೋಹಿತಶಾಹಿವರ್ಗವನ್ನು. ದೇವಾಲಯಗಳು ರಾಜಪ್ರಭುತ್ವದ ಅನಿವಾರ್ಯತೆಗಳಾಗಿದ್ದು,

ಆದರೆ ಪ್ರಜೆಗಳ ಪಾಲಿಗೆ ಶೋಷಣೆಯ ಕೇಂದ್ರಗಳೇ ಆದವು. ಪ್ರಜೆಗಳ ಶ್ರಮವನ್ನು ಬಳಸಿಕೊಂಡು ರಾಜಪ್ರಭುತ್ವ ಮತ್ತು ಧಾರ್ಮಿಕಪ್ರಭುತ್ವಗಳು ತಮ್ಮ ವೈಭವದ ಜೀವನವನ್ನು ಚಿತ್ರಿಸಲು ಸ್ಮಾರಕಗಳನ್ನು ಮಾಧ್ಯಮವಾಗಿ ಬಳಸಿದರು. ಪ್ರಭುತ್ವದ ವೈಯಕ್ತಿಕ ಹಿತಾಸಕ್ತಿ ಇಲ್ಲಿ ಗಮನಾರ್ಹವಾದುದು. ಹೆಚ್ಚು ಜನರನ್ನು ಆಕರ್ಷಿಸುತ್ತಿದ್ದ ದೇವಾಲಯಗಳ ನಿರ್ಮಾಣವು ರಾಜಪ್ರಭುತ್ವಕ್ಕೆ ಜನಬೆಂಬಲದ ಅಸ್ತ್ರವಾಯಿತು. ಧಾರ್ಮಿಕ ಪ್ರಭುತ್ವವು ಇದನ್ನೇ ಸಮರ್ಥಿಸುತ್ತಿತ್ತು. ರಾಜಪ್ರಭುತ್ವ ಮತ್ತು ಧಾರ್ಮಿಕ ಪ್ರಭುತ್ವಗಳೆರಡೂ ಒಟ್ಟೊಟ್ಟಿಗೆ ಸಾಗಿರುವುದು ಹಾಗೂ ಒಂದು ಇನ್ನೊಂದನ್ನು ಅವಲಂಬಿಸಿಕೊಂಡಿದ್ದು ಇಲ್ಲಿ ಲಭ್ಯವಿರುವ ದೇವಾಲಯ ಸಂಬಂಧಿ ಶಾಸನಗಳಿಂದ ದೃಢಪಡುತ್ತದೆ.

ಮೇಲುಕೋಟೆ ದೇವಾಲಯಗಳ ಕುರಿತು ಶಾಸನಗಳಲ್ಲಿ ಮತ್ತು ಸಾಹಿತ್ಯ ಕೃತಿಗಳಲ್ಲಿ ಮಾಹಿತಿ ಸಿಗುತ್ತವೆ. ಆದರೆ ಈ ಮಾಹಿತಿಗಳು ಒಬ್ಬ ರಾಜನ ಮತ್ತು ಧರ್ಮದ ವಿಷಯಗಳನ್ನು ಪ್ರತಿನಿಧಿಸುತ್ತವೆಯೇ ಹೊರತು ಪ್ರಜೆಗಳ ಸಂಸ್ಕೃತಿಯನ್ನಲ್ಲ. ಮೇಲುಕೋಟೆ ದೇವಾಲಯಕ್ಕೆ ಸಂಬಂಧಿಸಿದ ನೂರಕ್ಕೂ ಹೆಚ್ಚಿನ ಶಾಸನಗಳಿದ್ದು, ಯಾವೊಂದು ಸಹ ಸ್ಮಾರಕ ನಿರ್ಮಾಣ ಮಾಡಿದ ಕುಶಲಕರ್ಮಿಗಳು, ಕಾರ್ಮಿಕರ, ಆಳುಗಳ ಉಲ್ಲೇಖಮಾಡಿಲ್ಲ. ದುಡಿಯುವ ವರ್ಗಗಳ ಕುರಿತು ಶಾಸನಗಳು ಮೌನವಹಿಸಿವೆ. ಶಾಸನಗಳು ದೇವಾಲಯದ ವೈಭವದ ಮುಖವನ್ನು ಮಾತ್ರ ಪರಿಚಯಿಸಿವೆ. ಹೀಗೆ ದೇವಾಲಯಗಳು ಸರ್ವಾಲಂಕೃತಗೊಂಡು, ಆರ್ಥಿಕವಾಗಿ ಸಬಲಗೊಂಡು ವೈಭವದಿಂದ ಮುಂದುವರೆಯುತ್ತಿದ್ದವು.

ಪ್ರಜೆಗಳ ಸ್ಮಾರಕಗಳು

ಪ್ರಭುತ್ವದ ಸ್ಮಾರಕಗಳು ಅರಸಕೇಂದ್ರಿತ ಚರಿತ್ರೆ ನಿರ್ಮಾಣಕ್ಕೆ ಸಹಕಾರಿ, ಆದರೆ ಪ್ರಜೆಗಳ ಚರಿತ್ರೆ ನಿರ್ಮಾಣಕ್ಕಲ್ಲ. ಜನಸಾಮಾನ್ಯರ ಜೀವನ, ಬದುಕು-ಬವಣೆ, ಜೀವನ ವಿಧಾನ ಕುರಿತು ವಿವರಣೆ ನೀಡುವುದು ಅವರ ಸ್ಮಾರಕಗಳು. ಆದರೆ ಜನಸಾಮಾನ್ಯರಂತೆ ಅವರ ಸ್ಮಾರಕಗಳೂ ನಿರ್ಲಕ್ಷ್ಯಕ್ಕೆ ಒಳಗಾಗಿವೆ. ಪ್ರಜೆಗಳ ಸ್ಮಾರಕಗಳಲ್ಲಿ ಮುಖ್ಯವಾದವೆಂದರೆ ಗ್ರಾಮದೇವತೆಗಳ ಗುಡಿಗಳು, ವೀರಗಲ್ಲುಗಳು, ಮಾಸ್ತಿಕಲ್ಲುಗಳು, ಜನಪದರ ಮನೆಗಳು ಮುಂತಾದವು.

ಮೇಲುಕೋಟೆಯ ಶಿಷ್ಟದೇವತೆಗಳ ದೇವಾಲಯಗಳಿಗೆ ಗ್ರಾಮದೇವೆಗಳ ಗುಡಿಯನ್ನು ಹೋಲಿಸಿದರೆ ಇವುಗಳ ನಡುವಿನ ವ್ಯತ್ಯಾಸ ಮತ್ತು ವೈರುಧ್ಯಗಳು ಅರ್ಥವಾಗುತ್ತವೆ. ಗ್ರಾಮದೇವತೆಗಳು ಶಿಷ್ಟದೇವತೆಗಳಿಗಾಗಿ ಪರಿವರ್ತನೆಗೊಂಡ ನಂತರ ಗುಡಿಯಲ್ಲಿ ಹಲವು ಬದಲಾವಣೆಗಳು ನಡೆದಿದ್ದರೂ, ಮೇಲುಕೋಟೆ ಗ್ರಾಮದೇವತೆಗಳ ಗುಡಿಗಳ ಮೇಲೆ

ಇಂತಹಾ ಪ್ರಭಾವಗಳು ಕಡಿಮೆ. ಮೇಲುಕೋಟೆಯಲ್ಲಿ ಮಾರಮ್ಮ, ಕಾಳಮ್ಮ, ಬನ್ನಂತಮ್ಮ ಮತ್ತು ಹೊರಗಕಲ್ಲಮ್ಮ ಎಂಬ ನಾಲ್ಕು ಗ್ರಾಮದೇವತೆಯ ಆರಾಧನೆಯಿದೆ. ಇವುಗಳಲ್ಲಿ ಪ್ರಧಾನ ಗ್ರಾಮದೇವತೆ ಬಿಸಿಲುಮಾರಮ್ಮ. ಹೆಸರೇ ಉಲ್ಲೇಖಿಸುವಂತೆ ಈ ಗುಡಿಯು ಯಾವುದೇ ಮೇಲ್ಛಾವಣಿಯಿಲ್ಲದೆ ಬಿಸಿಲಿನಲ್ಲಿಯೇ ಇದೆ. ಯಾವುದೇ ಮೂರ್ತಿರೂಪವಿಲ್ಲದ ಪುಟ್ಟಕಲ್ಲನ್ನೇ ಮಾರಮ್ಮ ಎನ್ನಲಾಗುತ್ತದೆ. ಇತ್ತೀಚೆಗಷ್ಟೇ ಈ ಕಲ್ಲಿನ ಸುತ್ತ 10 ಅಡಿ ಎತ್ತರದ ಗೋಡೆಯನ್ನು ಸುತ್ತಲೂ ನಿರ್ಮಿಸಲಾಗಿದೆ. ಭೂಮಟ್ಟದಿಂದ ಐದು ಅಡಿ ಕೆಳಭಾಗದಲ್ಲಿ ಗುಡಿಯಿದ್ದು ಕಟ್ಟೆಯಮೇಲೆ ದೈವದ ಕಲ್ಲನ್ನು ಇಡಲಾಗಿದೆ. ನಿರಲಂಕೃತವಾದ ಒಂದು ಕಂಬವನ್ನು ನೆಡಲಾಗಿದೆ. ಜನಶೃತಿಯಿರುವಂತೆ ಮಾರಮ್ಮನ ಗುಡಿಯು ಇಂದಿನ ಸ್ಥಿತಿಯಲ್ಲಿ ಹಿಂದಿರದೆ ಇನ್ನೂ ದುಸ್ಥಿತಿಯಲ್ಲಿತ್ತು. ಮೇಲುಕೋಟೆಯ ಶಿಷ್ಟ ದೇವತೆಯರೊಂದಿಗೆ ಪೌರಾಣಿಕ ಸಂಬಂಧ ಹೊಂದಿದ್ದರೂ ಕಟ್ಟಡದ ರಚನೆಯಲ್ಲಿ ಯಾವುದೇ ಬದಲಾವಣೆಗಳಾಗಿಲ್ಲ.

ಒಮ್ಮೆ ಮೇಲುಕೋಟೆಯ ಜನಪದರು ಈ ಗುಡಿಗೆ ದೇವಾಲಯ ನಿರ್ಮಿಸಲು ಹೋದಾಗ, ಪೂಜಾರಿಯ ಮೇಲೆ ದೇವರು ಮೈದುಂಬಿ ಬಂದು ಪ್ರತಿರೋಧ ವ್ಯಕ್ತಪಡಿಸಿತು. ಕಾರಣಕ ಕೇಳಿದಾಗ "ನಾನು ಬಿಸಿಲಲ್ಲಿ ಒಣಗಬೇಕು, ಮಳೆಯಲ್ಲಿ ನೆನೆಯಬೇಕು, ನನ್ನ ಭಕ್ತರನ್ನು ಸದಾ ನೋಡಬೇಕು ಹಾಗೂ ಮೇಲುಕೋಟೆ ಚೆಲುವನಾರಾಯಣನ ಉತ್ಸವವನ್ನು ನೋಡಬೇಕು" ಎಂದು ತಿಳಿಸಿತಂತೆ. ಆದ್ದರಿಂದ ದೇವತೆಗೆ ಗೋಡೆ ಮಾತ್ರ ಇದ್ದು ಮೇಲ್ಛಾವಣಿಯಿಲ್ಲ. ನಿರಾಶ್ರಿತರಾಗಿದ್ದ ತನ್ನ ಭಕ್ತರ ಕಷ್ಟ ಕಾರ್ಪಾಣ್ಯದ ಬದುಕನ್ನು ನಿತ್ಯವೂ ಗಮನಿಸುವ ಗ್ರಾಮದೇವತೆಗಳು ತಾನೂ ಬಿಸಿಲಲ್ಲಿ ಒಣಗಬೇಕು, ಚಳಿ ಮತ್ತು ಮಳೆಯಲ್ಲಿರಬೇಕು ಎಂಬ ನಿಲುವಿಗೆ ಅಂಟಿಕೊಂಡಿದೆ. ಈ ಸುಪ್ತಪ್ರಜ್ಞೆಯು ಮೈದುಂಬಿದ ಪೂಜಾರಿಯಲ್ಲಿ ಜಾಗೃತವಾಗಿರುವುದನ್ನು ನೋಡಬಹುದು. ಇದು ಜನಸಾಮಾನ್ಯರ ವ್ಯಾಖ್ಯಾನವಾಗಿದೆ.

ಮೇಲುಕೋಟೆಯಲ್ಲಿ ಆಚರಣೆಗೆ ಒಳಪಡುವ ಮತ್ತೊಂದು ಗ್ರಾಮದೇವತೆ ಕಾಳಮ್ಮ, ಹುತ್ತವಿರುವ ಈ ಗುಡಿಗೆ ಮಣ್ಣುಗೋಡೆಯ ಗುಡಿ ಇತ್ತೀಚಿನವರೆಗೂ ಇತ್ತು. ಈಗ ಆಧುನಿಕಗಾರೆಯಿಂದ ಸ್ವಲ್ಪ ದೊಡ್ಡ ದೇವಾಲಯ ನಿರ್ಮಿಸಲಾಗಿದೆ. ಕಾಳಿವಿಗ್ರಹ ಗರ್ಭಗುಡಿಯಲ್ಲಿದ್ದು, ಇದು ಪುರಾತನ ವಿಗ್ರಹವಾಗಿದೆ. ಈ ಗುಡಿಯ ದ್ವಾರಗಳು ಕಿರಿದಾಗಿದ್ದು ದೇವತೆ ದರ್ಶನ ಪಡೆಯಲು ಬರುವವರು ತಲೆಬಾಗಿ ಗುಡಿಯನ್ನು ಪ್ರವೇಶಿಸಬೇಕು ಎನ್ನುವುದು ಜನಪದರ ವ್ಯಾಖ್ಯಾನ. ಗಮನಾರ್ಹ ಅಂಶವೆಂದರೆ ಶಿಷ್ಟದೇವತೆಗಳ ದೇವಾಲಯಗಳ ಪ್ರಭಾವದಿಂದ ಇದರ ರಚನಾ ಶೈಲಿಯಲ್ಲಿ ಬದಲಾವಣೆಗಳಾಗಿವೆ. ಈ ಗುಡಿಗೆ ಪ್ರದಕ್ಷಿಣೆ ಪಥ ಗೋಪುರ, (ಶಿಖರ) ಕಳಸಗಳನ್ನು

ನಿರ್ಮಿಸಲಾಗಿದೆ. ನಿರಲಂಕೃತವಾದ ಸ್ಥಂಭ ಮತ್ತು ಗೋಡೆಗಳು ಹಾಗೂ ಆಕರ್ಷಿತವಾಗಿರದ ಮತ್ತು ಸಮತಟ್ಟಾಗಿರದ ಗೋಡೆಗಳಿಂದ ದೇವತೆಯನ್ನು ರಕ್ಷಿಸಲಾಗಿದೆ. ಪುರಾತನವಾದ ಮೂರ್ತಿಯುಳ್ಳ ಗುಡಿಯಾಗಿದ್ದರೂ ಯಾವೊಂದು ಶಾಸನದಲ್ಲಿಯೂ ಈ ಗುಡಿಯ ಉಲ್ಲೇಖ ಸಿಗುವುದಿಲ್ಲ. ಜನಪದರು ಆಳುವ ವರ್ಗದ ಆಶ್ರಯವಿಲ್ಲದೇ ಶ್ರಮದಾನದಿಂದಲೇ ಈ ಗುಡಿಯನ್ನು ನಿರ್ಮಿಸಿದ್ದಾರೆಂದು ತಿಳಿದುಬರುತ್ತದೆ. ತಮ್ಮ ಶಕ್ತಿಯನುಸಾರ ಕಟ್ಟಿಗೆಗಳಿಂದ ಕಲ್ಲು ಮತ್ತು ಮಣ್ಣುಗಳಿಂದ ಈ ದೇವಾಲಯ ನಿರ್ಮಾಣಗೊಂಡು ಹಲವು ಬಾರಿ ಶಿಥಿಲಗೊಂಡ ಅಂಶ ತಿಳಿದುಬರುತ್ತದೆ. ಈ ಗ್ರಾಮದೇವತೆಯ ಮುಖವಾಡಗಳು ಉಡುಪು, ಆಯುಧ, ಆಭರಣಗಳು ಮುಂತಾದವು ದೇವಿಯ ಭಕ್ತರು ಸ್ವಯಂ ಶ್ರಮದಿಂದ ತಯಾರಿಸಿ ಕೊಡುತ್ತಿದ್ದರು.

ಮತ್ತೊಂದು ಪ್ರಮುಖ ಗ್ರಾಮದೇವತೆಯಾದ ಹೊಗರಕಲ್ಲಮ್ಮನ ಗುಡಿಯು ಮೇಲುಕೋಟೆಯ ಪೂರ್ವದ ಗಿರಿಶ್ರೇಣಿಯ ಒಂದು ಕಲ್ಲಿನ ಗುಹೆಯಲ್ಲಿ ಸ್ಥಾಪಿತವಾಗಿದೆ. ಇದು ಪ್ರಾಗೈತಿಹಾಸಿಕ ನೆಲೆಯೆಂದು ಗುರುತಿಸಲ್ಪಟ್ಟಿದೆ. ಶಿಷ್ಟದೇವತೆಯಾದ ನಾರಾಯಣಸ್ವಾಮಿಯೊಂದಿಗೆ ಪೌರಾಣಿಕ ಸಂಬಂಧವನ್ನು ಹೊಂದಿದೆ. ಚೆಲುವರಾಯಸ್ವಾಮಿ ಉತ್ಸವ ಮೂರ್ತಿಯನ್ನು ರಾಮಾನುಜರು ಮೇಲುಕೋಟೆಗೆ ತಂದಾಗ ಮೂರ್ತಿಯನ್ನು ಪ್ರೀತಿಸುತ್ತಿದ್ದ ಸುಲ್ತಾನನ ಮಗಳು ಅವರ ಹಿಂದೆಯೇ ಬಂದಳು. ಆಕೆಯ ಪ್ರೀತಿಗೆ ಮರುಳಾದ ದೇವರು ತನ್ನ ಪಾದದಲ್ಲಿ ಐಕ್ಯಮಾಡಿಕೊಂಡನು. ಆಕೆಗೆ ಊರ ಹೊರಗೆ ಗ್ರಾಮದೇವತೆಯ ಸ್ಥಾನ ನೀಡಿ ಮೂರು ಗ್ರಾಮದ ಜನರು ಈಕೆಯನ್ನು ಆರಾಧಿಸುವಂತೆ ಮಾಡಿದನು ಎಂಬ ಐತಿಹ್ಯವಿದೆ. ಈಕೆಯನ್ನು 'ಬೀಬಿ ನಾಚಿಯಾರ್' ಎಂದೂ ಸಹ ಕರೆಯುವರು. ಎತ್ತರದಲ್ಲಿರುವ ಈ ಗುಡಿಗೆ ಸಾಗಲು ಜನಪದರೇ ಶ್ರಮದಿಂದ ನಿರ್ಮಿಸಿದ ಅವ್ಯವಸ್ಥಿತವಾದ ಮೆಟ್ಟಿಲುಗಳು ಪ್ರಕೃತಿ ಸಹಜವಾದ ಗುಹೆಯಲ್ಲಿ ದೇವತೆಯ ಆಶ್ರಯವಾಗಿಸಿರುವಿಕೆ, ನಿಲ್ಲುವುದಕ್ಕೆ ಸಾಧ್ಯವಿಲ್ಲದ ಕಿರಿದಾದ ಗುಹೆ ಹೀಗೆ ಜನಪದರ ದೈವ ಆಶ್ರಯವನ್ನು ಪಡೆದಿದೆ. ಮೇಲುಕೋಟೆಯ ಮತ್ತೊಂದು ಗ್ರಾಮದೇವತೆ ಬನ್ನಂತಮ್ಮ ಇದು ಊರ ಹೊರಭಾಗದಲ್ಲಿ ನೆಲೆಸಿದ್ದು ಯಾವುದೇ ಗೋಡೆಯಿಲ್ಲದೆ ತೆರೆದ ಸ್ಥಿತಿಯಲ್ಲಿದೆ. ಆರಾಧನೆಯ ಸಂದರ್ಭದಲ್ಲಿ ಗುಡಿಸಲನ್ನು ಹಾಕಿ ದೈವವನ್ನು ಆರಾಧಿಸುತ್ತಾರೆ.

ಹೀಗೆ ಪ್ರಭುತ್ವದ ಸ್ಮಾರಕಗಳು ವಿಪುಲವಾದ ದಾನಗಳನ್ನು ಪಡೆದು ವೈಭವದ ಲಕ್ಷಣಗಳನ್ನು ಪಡೆದಿದ್ದರೆ, ಪ್ರಜೆಗಳ ಸ್ಮಾರಕಗಳು ಈ ಯಾವ ಅನುಕೂಲಗಳನ್ನು ಪಡೆಯಲಿಲ್ಲ. ಪ್ರಭುತ್ವದ ಸ್ಮಾರಕ ನಿರ್ಮಿಸಲು ಸಾಮಾನ್ಯರನ್ನು ಧಾರ್ಮಿಕ ಪ್ರಭುತ್ವದ ತೆಕ್ಕೆಯಲ್ಲಿ ಬಳಸಲಾಯಿತು. ಧರ್ಮದ ಹೆಸರಿನಲ್ಲಿ ಪ್ರಭುತ್ವದ ಅವಶ್ಯಕತೆಯನ್ನು ಈಡೇರಿಸಿಕೊಳ್ಳುವ ಪರೋಕ್ಷ ಪ್ರಯತ್ನ ನಡೆಯಿತು. ನಿರ್ಲಕ್ಷಿತವರ್ಗದ ಸ್ಮಾರಕಗಳು ರಾಜರ

ಪೋಷಣೆಯನ್ನು ಪಡೆಯಲಿಲ್ಲ. ಅರಸಕೇಂದ್ರಿತ ಚರಿತ್ರೆಯಲ್ಲಿ ಸಾಮಾನ್ಯ ವರ್ಗವು ಸ್ಥಾನ ಪಡೆಯುವಲ್ಲಿ ನಂತರವೂ ವಿಫಲವಾಯಿತು.

ದೇವಾಲಯಗಳು–ವಿದ್ಯಾಕೇಂದ್ರಗಳು

ವಿದ್ಯೆಯ ವಿಷಯದಲ್ಲಿ ಪ್ರಾಚೀನ ಭಾರತವು ಹೆಚ್ಚಿನ ಗೌರವವನ್ನು ಹೊಂದಿತ್ತು. ವಿದ್ಯೆಗಿಂತ ಶ್ರೇಷ್ಠವಾದುದು ಮತ್ತೊಂದಿಲ್ಲ ಸರ್ವದ್ರವ್ಯಗಳಲ್ಲಿ ವಿದ್ಯೆಯೇ ನಿಜವಾದ ಧನ, ಏಕೆಂದರೆ ಅದನ್ನು ಯಾರೂ ಅಪಹರಿಸಲಾರರು. ಅದು ಅನರ್ಘ್ಯವಾದುದು ಮತ್ತು ಅಕ್ಷಯವಾದುದು. ವಿದ್ಯಾಹೀನನಾದವನು ಒಂದು ಪಶುವಿಗೆ ಸಮಾನ. ಮನುಷ್ಯನು ತನ್ನ ಬದುಕಿನಲ್ಲಿ ಮಹತ್ವವಾದುದನ್ನು ಸಾಧಿಸಲು ನೆರವಾಗುವುದೇ ವಿದ್ಯೆ ಎಂಬ ಗಾಢವಾದ ನಂಬಿಕೆಯನ್ನು ವಿದ್ಯೆಯ ಕುರಿತು ಹೊಂದಲಾಗಿದೆ. ಕ್ರಿ.ಪೂ. 3ನೇ ಶತಮಾನದಲ್ಲಿ ಬೌದ್ಧವಿಹಾರಗಳು ಕ್ರಮೇಣ ವಿದ್ಯಾಕೇಂದ್ರಗಳಾಗಿ ಪರಿಣಮಿಸಿದವು. ಅವುಗಳಿಂದ ಪ್ರೇರಣೆ ಹೊಂದಿ ಹಿಂದೂಗಳು ತಮ್ಮ ವಿದ್ಯಾಸಂಸ್ಥೆ ಸ್ಥಾಪಿಸಿರಬಹುದು ಎಂದು ಅಲ್ಟೇಕರ್ ಅಭಿಪ್ರಾಯಪಡುತ್ತಾರೆ.[112] ಇವರೇ ಹೇಳುವಂತೆ ಹಿಂದೂಗಳಲ್ಲಿ ವ್ಯವಸ್ಥಿತ ವಿದ್ಯಾಕೇಂದ್ರಗಳು ಕ್ರಿ.ಶ. ಒಂಭತ್ತನೇ ಶತಮಾನದ ಆದಿಯವರೆಗೆ ಕಾಣಿಸಿಕೊಳ್ಳುವುದಿಲ್ಲ. ಚಿದಾನಂದಮೂರ್ತಿಯವರ ಅಭಿಪ್ರಾಯದಂತೆ ಕರ್ನಾಟಕದಲ್ಲಿ ವ್ಯವಸ್ಥಿತ ವಿದ್ಯಾಸಂಸ್ಥೆಯೆಂದರೆ ದೇವಸ್ಥಾನ.[113] 'ಜನತೆಯ ಉತ್ತಮ ನಡತೆಗೆ ಮಾರ್ಗದರ್ಶನ ಮಾಡಿ, ಅವರ ಸಂಸ್ಕೃತಿಯನ್ನು ಉಳಿಸಿ, ಬೆಳೆಸಿ, ಬದುಕನ್ನು ಸಾರ್ಥಕಗೊಳಿಸುವ ಕಾರ್ಯವನ್ನು ದೇವಾಲಯಗಳು ಮಾಡುತ್ತಿದ್ದವು' ಎಂಬ ಬಾ.ರಾ.ಗೋಪಾಲ್ ಅವರ ಅಭಿಪ್ರಾಯವು ಇಲ್ಲಿ ಸಮರ್ಥನೀಯವಾಗಿದೆ.[114]

ವೇದ ಕಾಲೀನ ಭಾರತದಲ್ಲಿ ಋಷ್ಯಾಶ್ರಮಗಳು ವಿದ್ಯಾಭ್ಯಾಸ ಸ್ಥಾನಗಳಾಗಿದ್ದಂತೆ, ಅದೇ ಜಾಡಿನಲ್ಲಿ ಬೆಳೆದ ದೇವಾಲಯಗಳು ವಿದ್ಯಾಕೇಂದ್ರಗಳಾಗಿ ಕೆಲಸ ಮಾಡಿವೆ. ದೇವಾಲಯಗಳಲ್ಲದೆಯೇ ಮಠಗಳು, ಅಗ್ರಹಾರ, ಬ್ರಾಹ್ಮಪುರಿಗಳೂ ವಿದ್ಯಾ ಪ್ರಸಾರ ಕಾರ್ಯ ನಿರ್ವಹಿಸುತ್ತಿದ್ದವು. ಶೈಕ್ಷಣಿಕ ಕೇಂದ್ರಗಳಾಗಿ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲಾಗುತ್ತಿದ್ದುದಲ್ಲದೆ ಪುರಾಣಪ್ರವಚನಗಳ ಮೂಲಕ ಸಾರ್ವಜನಿಕರಿಗೂ ಶಿಕ್ಷಣ ನೀಡುತ್ತಿದ್ದವು. ದೇವಾಲಯದ ಜವಾಬ್ದಾರಿಯನ್ನು ವಹಿಸಿಕೊಂಡಿದ್ದ ಧಾರ್ಮಿಕ ಗುರುವು ವಿದ್ಯಾಭ್ಯಾಸದ ಜವಾಬ್ದಾರಿಯನ್ನು ಒಪ್ಪಿಕೊಂಡಿದ್ದನು. ವಿದ್ಯಾಭ್ಯಾಸದ ಕ್ರಮ, ಬೋಧನೆ, ವಿಷಯಗಳು, ಪರೀಕ್ಷೆ ಇತ್ಯಾದಿಗಳ ನಿರ್ವಹಣೆಯ ಜವಾಬ್ದಾರಿಯೂ ಇವರದೇ ಆಗಿತ್ತು. ದೇವಾಲಯಕ್ಕೆ ದೊರೆತಷ್ಟೇ ಪ್ರಾಮುಖ್ಯತೆಯು ಮಠಗಳಿಗೂ ದೊರೆತಿದೆ. ದೇವರು, ಧರ್ಮ, ವಿದ್ಯೆ ಮೂರು ಪರಸ್ಪರ ಹೆಣೆದುಕೊಂಡಿದ್ದವು. ಧರ್ಮವನ್ನು ಉಳಿಸಲು ಬೆಳೆಸಲು, ವೇದ ವೇದಾಂಗ ಪುರಾಣ ಇತ್ಯಾದಿ ಶಾಸ್ತ್ರಗಳನ್ನು ಉಳಿಸಲು ವಿದ್ಯಾಭ್ಯಾಸ ಅವಶ್ಯಕ ಎಂಬ ನಂಬಿಕೆಯಿತ್ತು.

ಮೇಲುಕೋಟೆಯು ವಿದ್ಯಾಕೇಂದ್ರವಾಗಿ ಪ್ರಾಚೀನ ಶಿಕ್ಷಕಣ ಕೇಂದ್ರಗಳಾಗಿದ್ದ ಶ್ರೀರಂಗಂ, ತಿರುಪತಿ, ಕಾಂಚೀಪುರಂ, ಇನ್ನಿತರ ಸ್ಥಳಗಳಿಗೆ ಹೋಲಿಕೆಯಲ್ಲಿ ಹಿಂದೆಬಿದ್ದಿರಲಿಲ್ಲ. ಈ ಸ್ಥಳವು ಹಲವು ಶ್ರೇಷ್ಟ ವಿದ್ವಾಂಸರಿಗೆ ಜನ್ಮನೀಡಿದ್ದು, ಇವರು ಜ್ಞಾನ ಕ್ಷೇತ್ರಕ್ಕೆ ಅತ್ಯುತ್ತಮವಾದ ಕೊಡುಗೆಯನ್ನು ನೀಡಿದ್ದಾರೆ. ಮೇಧಾತಿಥಿ ಮತ್ತು ಪ್ರಹ್ಲಾದರು ದತ್ತಾತ್ರೆಯನಿಂದ ಜ್ಞಾನೋಪದೇಶಪಡೆದು, ವೇದಗಳು ಮತ್ತು ವೇದಾಂಗಗಳಲ್ಲಿ ಉನ್ನತ ಜ್ಞಾನ ಪಡೆದ ಕಾರಣ ಈ ಸ್ಥಳಕ್ಕೆ ವೇದಾದ್ರಿ ಎಂಬ ಹೆಸರು ಬಂತು ಎಂಬ ಐತಿಹ್ಯವಿದೆ. ನಾರದ, ವ್ಯಾಸ, ಬೃಗು ಮತ್ತು ಶಾಂಡಿಲ್ಯರು ಈ ಸ್ಥಳದಲ್ಲಿ ಜ್ಞಾನ ಪಡೆದುದರಿಂದ ಇದನ್ನು 'ಜ್ಞಾನಮಂಟಪ' ಎಂದೂ ಕರೆಯಲಾಗಿದ್ದು ಇದು ಶಾಸನಗಳಲ್ಲಿಯೂ ಉಲ್ಲೇಖವಾಗಿದೆ. ಮೇಲುಕೋಟೆಯ ಜೀಯರ್‌ಗುಡಿಯ ಎಡಭಾಗದ ಕೈಸಾಲೆಯ ಕಲ್ಲಿನಮೇಲೆ ಕನ್ನಡ ಲಿಪಿಯಲ್ಲಿರುವ ಮಲ್ಲಿಕಾರ್ಜುನನ ಕ್ರಿ.ಶ.1458ರ ಶಾಸನವು ತಿಮ್ಮಣ್ಣ ದಣ್ಣಾಯಕನ ಹೆಂಡತಿ ರಂಗಾಂಬಿಕೆಯು ಮೇಲುಕೋಟೆಯ ನಾರಾಯಣಸ್ವಾಮಿ ದೇವಾಲಯಕ್ಕೆ ಆಭರಣಗಳು ಹಾಗೂ ಭೂಮಿಯನ್ನು ದಾನಮಾಡಿರುವ ವಿಚಾರಗಳನ್ನು ಉಲ್ಲೇಖಿಸುತ್ತವೆ ಈ ಶಾಸನವು ಮೇಲುಕೋಟೆಯನ್ನು ವೈಕುಂಠವರ್ಧನ ಕ್ಷೇತ್ರ, ಭೂಲೋಕ ವೈಕುಂಠ, ಜ್ಞಾನಮಂಟಪ, ಯಾದವಗಿರಿ, ತಿರುನಾರಾಯಣಪುರ ಎಂಬ ಹಲವು ಹೆಸರುಗಳಿಂದ ಉಲ್ಲೇಖಿಸಿದೆ ಮೇಲುಕೋಟೆಯ ಕುರಿತ ನಾರದೀಯ ಪುರಣದಲ್ಲಿ ಈ ಕುರಿತು ವಿಷದವಾಗಿ ವಿವರಿಸಲಾಗಿದೆ ಮೌಖಿಕವಾಗಿಯೂ ಈ ವಿಷಯವು ಈ ಸ್ಥಳದಲ್ಲಿ ಕೇಳಿಬರುತ್ತವೆ. ರಾಮಾನುಜರ ಆಗಮನವು ಸಾಂಪ್ರದಾಯಿಕ ವಿದ್ಯೆಯ ಬೆಳವಣಿಗೆಗೆ ಮತ್ತಷ್ಟು ಉತ್ತೇಜವನ್ನು ನೀಡಿತು.

ಮೇಲುಕೋಟೆಯ ದೇವಾಲಯಗಳು ಕಲಿಕೆಯ ಮತ್ತು ಶಿಕ್ಷಣದ ಕೇಂದ್ರಗಳಾಗಿ ಕೆಲಸ ನಿರ್ವಹಿಸಿದ್ದುದಕ್ಕೆ ಹಲವು ದಾಖಲೆಗಳು ಲಭ್ಯವಾಗುತ್ತವೆ. ಇದರ ಜೊತೆಗೆ ಹಲವು ಮಠಗಳು ಸಂಬಂಧ ಹೊಂದಿದ್ದು ಅವು ವಿದ್ಯಾಲಯಗಳಾಗಿ ಕೆಲಸ ನಿರ್ವಹಿಸಿವೆ. ವಿದ್ಯಾಭ್ಯಾಸಕ್ಕಾಗಿ ದೇವಾಲಯಗಳಿಗೆ ಬಿಟ್ಟುಕೊಟ್ಟಿರುವ ದಾನದತ್ತಿಗಳ ವಿವರ ಶಾಸನಗಳಲ್ಲಿ ಲಭ್ಯವಾಗಿಲ್ಲ. ಆದರೆ ಈ ಸ್ಥಳದ ಉನ್ನತ ಅಧ್ಯಯನದ ಫಲವಾಗಿ ಹೊರಹೊಮ್ಮಿದ ಹಲವು ಸಾರ್ಥಕ ನಾಮಗಳ ಸರಮಾಲೆಯ ಮೂಲಕ ಹಲವು ವ್ಯಕ್ತಿಗಳ ಹೆಸರು ಶಾಸನಗಳಲ್ಲಿ ಉಲ್ಲೇಖವಾಗಿದೆ. ರಾಮಾನುಜಾಚಾರ್ಯರ ಕಾಲದಲ್ಲಿ ಸ್ಥಾಪನೆಯಾದ ಯತಿರಾಜಮಠವು ವಿದ್ಯಾರ್ಜನೆಯಲ್ಲಿ ಹೊಂದಿದ್ದ ಸಂಬಂಧವನ್ನು ಮೇಲುಕೋಟೆಯ ಶಾಸನಗಳು

ಉಲ್ಲೇಖಿಸುತ್ತವೆ. ಇಂದಿಗೂ ಮಠವು ಧಾರ್ಮಿಕ ಮತ್ತು ತತ್ವಶಾಸ್ತ್ರಗಳ ಅಧ್ಯಯನವನ್ನು ಮುಂದುವರೆಸಿದೆ.

ಮೇಲುಕೋಟೆಯ ನಾರಾಯಣಸ್ವಾಮಿ ದೇವಾಲಯದಲ್ಲಿ ಕಾರ್ಯನಿರ್ವಹಿಸುವ 'ಐವತ್ತಿಬ್ಬರು' ಜನಗಳು ಆಗಾಗ್ಗೆ ವೇದಗಳ ಪಠವನ್ನು ಸ್ಥಾಪಿಸುವರು ಮತ್ತು ರಾಮಾನುಜರ ಮತವನ್ನು ಅಭಿವೃದ್ಧಿಪಡಿಸುವವರು ಎನ್ನಲಾಗಿದೆ.

ಒಮ್ಮೆ ವೇದಾಂತವಿದ್ವತ್ಪ್ರಸಿದ್ದರಾಗಿದ್ದ ನಂಜೀಯರ್ (ಮಾಧವಸ್ವಾಮಿ) ಎಂಬುವರು ಕಾವೇರಿ ತೀರಕ್ಕೆ ಬಂದಾಗ ಪರಾಶರಭಟ್ಟರು ಮೇಲುಕೋಟೆಗೆ ಬಂದು ನೆಲೆಸಿ ನಂಜೀಯರನ್ನು ವಾದದಲ್ಲಿ ಸೋಲಿಸಿದರು. ನಂತರ ಮೇಲುಕೋಟೆ ತಿರುನಾರಾಯಣ ದೇವಾಲಯದಲ್ಲಿ ವಿದ್ವತ್ಸಭೆಯನ್ನು ಕರೆದು ಶ್ರೀ ಭಾಷ್ಯವಿಚಾರವಾಗಿ ಉಪನ್ಯಾಸ ಮಾಡಿದರು. ಈ ಭಟ್ಟರಿಗೆ ಕೆಲವು ಗ್ರಾಮ ಭೂಮಿಗಳನ್ನು ಧರ್ಮ ಮಾಡಿರುವುದು ಶಾಸನಗಳಿಂದ ತಿಳಿದು ಬರುತ್ತದೆ. ಇದು ಕ್ರಿ.ಶ.1155ರಲ್ಲಿ ಸಂಭವಿಸಿತು ಎಂದು ದೃಢಪಡುತ್ತದೆ.[115] ಕ್ರಿ.ಶ. 1320–25ರಲ್ಲಿ ವೇದಾಂತ ವಿದ್ವತ್ಪ್ರಸಿದ್ಧರಾದ 'ವೇದಾಂಶದೇಶಿಕರು' ಮೇಲುಕೋಟೆಗೆ ಬಂದು, ತಿರುನಾರಾಯಣದೇವಾಲಯದಲ್ಲಿ ಧಾರ್ಮಿಕ ವಿಷಯಗಳನ್ನು ಕುರಿತಂತೆ ಸ್ಥಳೀಯ ವಿದ್ವಾಂಸರೊಂದಿಗೆ ಚರ್ಚೆ ನಡೆಸಿದರು.[116] ಮೇಲುಕೋಟೆಯ ಜನನಾಚಾರ್ಯ ಎಂಬುವರು 'ಆಚಾರ್ಯ ಹೃದಯ' ಗ್ರಂಥವನ್ನು ಅರ್ಥಗರ್ಭಿತವಾಗಿ ತಿಳಿಸುವರೆಂದು ವೈಷ್ಣವ ಆಚಾರ್ಯರಾದ ಮಣವಾಳಮಾಮುನಿಗಳು (ಕ್ರಿ.ಶ. 1270–1444) ಮೇಲುಕೋಟೆಗೆ ಬಂದು ಇವರೊಂದಿಗೆ ಚರ್ಚೆ ನಡೆಸಿ ದೇವಾಲಯದಲ್ಲಿ ಕಾಲಕ್ಷೇಪವನ್ನು ಮಾಡಿದರು.[117] ಆನಂದಾಳ್ವಾರ್ (ಕ್ರಿ.ಶ. 1054–1154)ರು. ಶ್ರೇಷ್ಠ ವಿದ್ವಾಂಸರಾಗಿದ್ದು, ವಿಷ್ಣುವರ್ಧನನು ಇವರ ಪಾಂಡಿತ್ಯವನ್ನು ಗುರುತಿಸಿ 18 ಗ್ರಾಮಗಳನ್ನು ದಾನವಾಗಿ ನೀಡಿದ್ದಾನೆ.[118] ತಿರುಮಲೈ ಅಯ್ಯಂಗಾರ್ (ಕ್ರಿ.ಶ. 1645–1706) ಇವರು ಪ್ರಸಿದ್ಧ ವಿದ್ವಾಂಸರಾಗಿದ್ದು, ಸಂಸ್ಕೃತ ಮತ್ತು ಪ್ರಾಕೃತಗಳಲ್ಲಿ ಪ್ರವೀಣರಾಗಿದ್ದರು. ಇವರು ಮಧುರೆಯ ನಾಯಕನ ಹೆಂಡತಿಯಾದ ಮಂಗಮ್ಮಳ ಮಂತ್ರಿಯಾಗಿಯೂ ಸೇವೆ ಮಾಡಿದರು. ಮೈಸೂರು ಅರಸು ಚಿಕ್ಕದೇವರಾಜರ ಮಂತ್ರಿಯಾಗಿಯೂ ಕೆಲಸ ಮಾಡಿದರು.[119]

ಮೇಲುಕೋಟೆಯ ವಿಶಿಷ್ಟ ಬೋಧನಾ ಸಂಪ್ರದಾಯವೆಂದರೆ ಶಿಷ್ಯ ಪರಂಪರೆಯ ಕಲಿಕಾ ಪದ್ದತಿ. ಯತಿರಾಜಮಠದ ಮುಖ್ಯಸ್ಥರಿಗೆ ನಿಗಧಿಪಡಿಸಿದ ಗ್ರಾಮಗಳ ಸಂಪೂರ್ಣ ಜವಾಬ್ದಾರಿ ಇವರದಾಗಿತ್ತು. ಅಲ್ಲದೆ ಈ ಸ್ಥಳದ ಹಲವು ಆಚಾರ್ಯಪುರುಷರು ಕೆಲವು ಗ್ರಾಮಗಳ ಗುರುವಿನ ಸ್ಥಾನವನ್ನು ಅಲಂಕರಿಸಿದ್ದರು. ಮಠದ ಗುರುಗಳು ಆಶ್ರಿತರಾದ ವಿದ್ಯಾರ್ಥಿಗಳಿಗೆ ಬೋಧನೆ ಮಾಡಿ ಧರ್ಮಶಾಸ್ತ್ರಗಳ ಅರಿವನ್ನು ನೀಡುತ್ತಿದ್ದರು. ಮಠಗಳಲ್ಲಿ

ವಿದ್ಯಾಭ್ಯಾಸ ಮಾಡಿದ ವ್ಯಕ್ತಿಗೆ ದೇವಾಲಯದಲ್ಲಿ ಹೆಚ್ಚಿನ ಗೌರವ ಲಭ್ಯವಾಗುತ್ತಿತ್ತು. ಮಠಗಳು ವಿದ್ಯಾರ್ಥಿಗಳಿಗೆ ವಸತಿ ಮತ್ತು ಆಹಾರ ಸೌಲಭ್ಯಗಳನ್ನು ಒದಗಿಸುತ್ತಿದ್ದವು. ಮಠಗಳು ದೇವಾಲಯದ ಸೇವಾಕರ್ತರನ್ನು ಒದಗಿಸುವ ಕೇಂದ್ರಗಳಾಗಿ ಕಂಡುಬರುತ್ತವೆ. ಜೊತೆಗೆ ಶ್ರೀ ವೈಷ್ಣವಪಂಥವನ್ನು ಬಲಪಡಿಸಲು ಹೆಚ್ಚಿನ ಒಲವನ್ನು ಹೊಂದಿದ್ದವು. ಕೇವಲ ಮಠಗಳಲ್ಲಿಯೇ ಅಲ್ಲದೆ ಶಿಷ್ಯ ಪರಂಪರೆ ಪದ್ಧತಿಯಲ್ಲಿ ಗ್ರಾಮಗಳ ಗುರುವಿನ ಸ್ಥಾನ ಪಡೆದಿದ್ದ ಆಚಾರ್ಯಪುರುಷರು. ಅನಕ್ಷರಸ್ಥ ಜನರಿಗೆ ಧರ್ಮ ಪ್ರಸಂಗಗಳು, ಪುರಾಣಗಳು, ಕಥೆಗಳ ಮೂಲಕ ಧಾರ್ಮಿಕ ಶ್ರದ್ಧೆಯನ್ನು ಮೂಡಿಸುತ್ತಿದ್ದರು. ಅದಕ್ಕೆ ಬದಲಾಗಿ ಆ ಗುರುಗಳ ಕುಟುಂಬದ ಜೀವನ ನಿರ್ವಹಣೆಗಾಗಿ ಗ್ರಾಮದ ಜನರು ಧವಸ ಧಾನ್ಯಗಳನ್ನು ನೀಡುವ ಪರಿಪಾಠವಿದೆ. ಮಠದ ವಿದ್ಯಾರ್ಥಿಗಳು ಸಾಂಪ್ರದಾಯಿಕ ಕಲಿಕಾ ವಿಧಾನವಾದ ಕಂಠಪಾಠದ ಮೂಲಕ ವಿದ್ಯಾಭ್ಯಾಸ ಮಾಡುತ್ತಿದ್ದರು. ಮೇಲುಕೋಟೆಯಲ್ಲಿ ಗಣನೀಯ ಸಂಖ್ಯೆಯಲ್ಲಿ ದೊರೆತಿರುವ ಪ್ರಾಚೀನ ಓಲೆಗರಿಗಳಿಂದ ಬರವಣಿಗೆಯು 15ನೇ ಶತಮಾನದಿಂದಿಚೆಗೆ ಹೆಚ್ಚು ಬಳಕೆಯಲ್ಲಿರುವುದು ಕಂಡುಬರುತ್ತದೆ. ಕಲಿಕಾ ಭಾಷೆಯಾಗಿ ಸಂಸ್ಕೃತ ಮತ್ತು ತಮಿಳು ಹೆಚ್ಚು ಉಪಯೋಗಿಸಲ್ಪಡುತ್ತಿದ್ದವು. ಅಗ್ರಹಾರಗಳೂ ಸಹ ಮೇಲುಕೋಟೆಯಲ್ಲಿ ಶೈಕ್ಷಣಿಕ ಕೇಂದ್ರಗಳಾಗಿ ಗುರುತರ ಕಾಣಿಕೆಯನ್ನು ನೀಡಿವೆ. ಆದರೆ ರಾಜರು ಶಿಕ್ಷಣದ ಉದ್ದೇಶಕ್ಕೆಂದೇ ನೀಡಿದ ದಾನಗಳನ್ನು ಒಳಗೊಂಡ ಶಾಸನ ಇಲ್ಲಿ ಲಭ್ಯವಾಗಿಲ್ಲ. ಆದರೆ ಮಠ ಮತ್ತು ದೇವಾಲಯಗಳ ಇತರ ಉದ್ದೇಶಗಳಿಗೆ ನೀಡಿದ ದಾನಗಳಿಂದ ಶಿಕ್ಷಣದ ಆರ್ಥಿಕ ಅಗತ್ಯತೆಗಳು ಪೂರ್ಣವಾಗುತ್ತಿದ್ದವು. ದೇವಾಲಯಕ್ಕೆ ಹೊಂದಿಕೊಂಡತಿದ್ದ ಮಠಗಳು ಪ್ರಾಚೀನ ಗುರುಕುಲಪದ್ಧತಿಯ ಮುಂದುವರಿದ ಭಾಗಗಳಾಗಿದ್ದವು. ವೈದಿಕ ಹಿನ್ನೆಲೆಯ ಸಂಪ್ರದಾಯಿಕ ಶಿಕ್ಷಣ ಪದ್ಧತಿಯು ಈ ಸ್ಥಳದಲ್ಲಿ ಆಚರಣೆಯಲ್ಲಿತ್ತು.

ಮೈಸೂರು ರಾಜ ಕಂಠೀರವ ನಾರಸರಾಜ ಒಡೆಯರ ಕಾಲದ ಒಂದು ತಾಮ್ರ ಶಾಸನವು ವಿವಿಧ ವಿಷಯಗಳಲ್ಲಿ ಪಾರಂಗತರಾದ ವ್ಯಕ್ತಿಗಳ ಪಟ್ಟಿಯನ್ನು ನೀಡುತ್ತದೆ. ಕೌಷ್ಠಿಕಗೋತ್ರದ ವೇದಾಂತಾರ್ಯನು ಋಗ್ವೇದವೆಂಬ ಸಮುದ್ರವನ್ನು ದಾಟಿದವನು. ರಾಮಾನಾಚಾರ್ಯನಿಗೆ ಗ್ರಹಗಳ ಸ್ಥಿತಿಯು ತಿಳಿದಿತ್ತು. ಅಲ್ಲದೆ ಖಗೋಳ ವಿಜ್ಞಾನದ ಲಕ್ಷಣಗಳನ್ನು ಅರಿತಿದ್ದನು. ಕೃಷಿಸಾರಿಯು ಗಂಧರ್ವವೇದದಲ್ಲಿ ಪ್ರವೀಣನಾಗಿದ್ದನು. ಇದು ಮೈಣಿಕ–ಶ್ರೇಣಿ–ಚೂಡಾರತ್ನ ಎಂದು ವರ್ಣಿಸಲ್ಪಟ್ಟಿದೆ. ವೆಂಕಟಾರ್ಯನು ವ್ಯಾಕರಣದಲ್ಲಿ ಪ್ರವೀಣನಾಗಿದ್ದನು. ರಘುಪತಿಯು ಕ್ರಮದ (Krama) ಕಂಠಪಾಠದಲ್ಲಿ ಸ್ಪರ್ಧಿಯಾಗಿದ್ದನು. ನರಸಿಂಹನು ಬುದ್ಧಿವಂತಿಕೆಯ ನುಡಿಗಳನ್ನು ಆಡಲು ಪಾರಂಗತನಾಗಿದ್ದನು.[120] ಇದೇ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿರುವಂತೆ ಶ್ರೀ ವೈಷ್ಣವ ವಿದ್ವಾಂಸರನ್ನು ಮೇಲುಕೋಟೆಯಲ್ಲಿ

ನೆಲೆನಿಲ್ಲಲು ಆಹ್ವಾನಿಸಿ, ಅವರಿಗೆ ಕಲ್ಯಾಣಿಯ ಸುತ್ತ ಮುತ್ತಲೂ ಮನೆಗಳನ್ನು ನಿರ್ಮಿಸಿ ಸಕಲ ಸೌಲಭ್ಯಗಳನ್ನು ಒದಗಿಸಲಾಯಿತು.

ಗಮನಾರ್ಹ ಅಂಶವೆಂದರೆ ಮೇಲುಕೋಟೆಯ ತಿರುನಾರಾಯಣ ದೇವಾಲಯದಲ್ಲಿ 20 ರಿಂದ 25 ದಿನಗಳ ಕಾಲ ನಡೆಯುವ ಅಧ್ಯಯನೋತ್ಸವವು ಜನರನ್ನು ಒಂದೆಡೆ ಸೇರಿಸಿ ಒಟ್ಟಿಗೆ ಕಲಿಯಲು ಅವಕಾಶ ಮಾಡಿಕೊಟ್ಟಿತ್ತು. ಇಲ್ಲಿ ವಿಶೇಷವಾಗಿ ನಾಲಾಯಿರ ದಿವ್ಯ ಪ್ರಬಂಧವು ಪಠಣೆಯಾಗುತ್ತದೆ. ಜೊತೆಗೆ ಹಲವು ಸಂಸ್ಕೃತ ಧಾರ್ಮಿಕ ಶ್ಲೋಕಗಳು ಹೇಳಲ್ಪಡುತ್ತವೆ. ಹಲವು ಜನರು ಈ ಉತ್ಸವದಲ್ಲಿ ಪಾಲ್ಗೊಳ್ಳುವ ಕಾರಣದಿಂದ ಪ್ರಾಚೀನ ಕಾಲದಲ್ಲಿ ಸಾರ್ವಜನಿಕ ಚರ್ಚೆಯ ಸ್ಥಳವಾಗಿ ಕಲಿಕೆಗೆ ಮತ್ತು ಚರ್ಚೆಗಳಿಗೆ ಅವಕಾಶ ಕಲ್ಪಿಸಿತ್ತು. ಕ್ರಿ.ಶ. 1585ರ ಶಾಸನವು ಅಧ್ಯಯನೋತ್ಸವವನ್ನು ಉಲ್ಲೇಖಿಸುತ್ತದೆ.[121] ನಾಲಾಯಿರ ದಿವ್ಯ ಪ್ರಬಂಧದ ಪಠಣವು ಈ ಉತ್ಸವದ ಕಾಲದಲ್ಲಿ ತಮಿಳು ಧಾರ್ಮಿಕ ಗೀತೆಗಳ ಜ್ಞಾನವನ್ನು ಪ್ರಚಾರಮಾಡುವ ಉದ್ದೇಶವನ್ನು ಹೊಂದಿತ್ತು. ಇದರ ಪ್ರಭಾವ ಜನರ ಮೇಲೆ ಉಂಟಾಯಿತು. ಇದಕ್ಕೆ ಸಮಾನವಾದ ಇನ್ನಿತರ ಹಲವು ಚಟುವಟಿಕೆಗಳು ದೇವಾಲಯದಲ್ಲಿ ಏರ್ಪಡುತ್ತಿತ್ತು. ಇವು ಧಾರ್ಮಿಕ ಜ್ಞಾನವನ್ನು ಪ್ರಚಾರಮಾಡುವ ಉದ್ದೇಶಗಳನ್ನು ಹೊಂದಿತ್ತು. ಒಂದು ಶಾಸನವು ಕೌಶಿಕಪುರಾಣ ಮತ್ತು ಯತಿರಾಜಸ್ತುತಿಗಳನ್ನು ಅಧ್ಯಯನ ಮಾಡಲು ವ್ಯವಸ್ಥೆ ಮಾಡಲಾಗಿದ್ದ ವಿಷಯವನ್ನು ಪ್ರಸ್ತಾಪಿಸುತ್ತಾರೆ.[122]

ವೇದ ವೇದಾಂತ ಬೋಧಿನಿ ಸಂಸ್ಕೃತ ಮಹಾಪಾಠಶಾಲೆ

ಕ್ರಿ.ಶ. 1848ರಲ್ಲಿ ವಿದ್ಯಾಭ್ಯಾಸದ ಸೌಕರ್ಯದ ದೃಷ್ಟಿಯಿಂದ ಮೈಸೂರು ಮಹಾರಾಜರಾದ ಮುಮ್ಮಡಿ ಕೃಷ್ಣರಾಜ ಒಡೆಯರ ಪಂಡಿತರ ಆಸರೆಗಾಗಿ ಮೇಲುಕೋಟೆ ಚೆಲುವ ನಾರಾಯಣನ ದೇವಾಲಯಕ್ಕೆ ಹೊಂದಿಕೊಂಡಂತೆ ಒಂದು ಸಂಸ್ಕೃತ ಮಹಾಪಾಠಶಾಲೆಯನ್ನು ಆರಂಭಿಸಿದರು. 'ಅಭಿನವಕೃಷ್ಣ ಮನೋರಂಜನೀ' ಎಂಬುದು ಈ ಶಾಲೆಯ ಮೊದಲ ಹೆಸರು. ಅಭಿನವಕೃಷ್ಣ ಮುಮ್ಮಡಿ ಕೃಷ್ಣರಾಜರ ಬಿರುದಾಗಿತ್ತು. ಅಂದಿನಿಂದ ಇಲ್ಲಿಯವರೆಗೂ ಈ ಪಾಠಶಾಲೆಯು ದೇವಾಲಯದ ಆಶ್ರಯದಿಂದ ನಿರಂತರವಾಗಿ ವಿದ್ಯಾದಾನ ಮಾಡುತ್ತಾ ಮುಂದುವರೆದಿದೆ. ಇಲ್ಲಿ ಮುಖ್ಯವಾಗಿ ವೇದ, ವೇದಾಂತ, ವ್ಯಾಕರಣ, ತರ್ಕ, ಅಲಂಕಾರ, ಸಾಂಖ್ಯ, ಯೋಗ, ಆಗಮಶಾಸ್ತ್ರಗಳಲ್ಲಿ ತಲಸ್ಪರ್ಶಿಯಾದ ಅಧ್ಯಯನವು ನಡೆಯುತ್ತಾ ಬಂದಿದೆ. ಇಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳು ಪಂಡಿತರತ್ನಂ, ಸಾಹಿತ್ಯರತ್ನಂ, ತರ್ಕತರ್ನಂ, ಕವಿರತ್ನಂ, ಮೊದಲಾದ ಬಿರುದುಗಳನ್ನು ಪಡೆದಿದ್ದಾರೆ.[123] ಇಲ್ಲಿ ದೇವಾಲಯದ ಆಗಮೋಕ್ತ ಕಾರ್ಯಗಳು ಹಾಗೂ ಪಾರಾಯಣಾದಿಗಳಿಗೆ ಪೂರಕ ವಿದ್ಯಾಭ್ಯಾಸ ನೀಡಲಾಗುತ್ತಿತ್ತು. ದೂರದೂರದ

ವಿದ್ಯಾರ್ಥಿಗಳು ಇಲ್ಲಿ ಬಂದು ವಾಸಮಾಡಿ ಅಧ್ಯಯನವನ್ನು ನಡೆಸುತ್ತಿದ್ದರು. ಇಂಥಹಾ ಕಲಿಕೆಯನ್ನು ನಿಯಂತ್ರಿಸುವ ಕೆಲಸ ದೇವಾಲಯದ್ದೇ ಆಗಿರುತ್ತಿತ್ತು. ದೇವಾಲಯದ ವಿಶೇಷ ಉತ್ಸವದ ಸಂದರ್ಭದಲ್ಲಿ ಈ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಒಳಪಡಿಸಲಾಗುತ್ತಿತ್ತು. ಉತ್ತೀರ್ಣರಾದವರಿಗೆ ಸೂಕ್ತ ಸಂಭಾವನೆ ಪುರಸ್ಕಾರಗಳನ್ನು ನೀಡಲಾಗುತ್ತಿತ್ತು.

ಮೇಲಿನ ಪಾಠಶಾಲೆಯಲ್ಲದೆ ಯತಿರಾಜಮಠದ ಮುಖ್ಯಸ್ಥರಾಗಿದ್ದ ಕೋಪೆ ವೆಂಕಟಾಚಾರ್ಯಸ್ವಾಮಿಗಳು 'ಉಭಯವೇದಾಂತ' ಪಾಠಶಾಲೆಯನ್ನು ಸ್ಥಾಪಿಸಿದರು. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಆಹಾರಾದಿ ಸೌಕರ್ಯಗಳು ದೇವಾಲಯದಲ್ಲಿ ಆಗುವಂತೆ ಏರ್ಪಡಿಸಿದ್ದರು.

ಶ್ರೀ ಮಠದಲ್ಲಿ ಉಭಯವೇದಾಂತ ಕಾಲಕ್ಷೇಪಾದಿಗಳಿಗೆ ವ್ಯವಸ್ಥೆ ಮಾಡಿದರು.[124] ಇಂದಿಗೂ ಮೇಲುಕೋಟೆಯಲ್ಲಿ ಸಾಂಪ್ರದಾಯಿಕ ಕಲಿಕೆಯ ಪದ್ಧತಿಯು ಮುಂದುವರೆಯುತ್ತಿದೆ.

ಮೇಲುಕೋಟೆ ದೇವಾಲಯಗಳಲ್ಲಿದ್ದ ಅಧ್ಯಯನ ಪದ್ಧತಿಗಳು ಹಾಗೂ ವಿಷಯಗಳ ಆಧಾರದಿಂದ ಸ್ಪಷ್ಟವಾಗುವ ಅಂಶಗಳೆಂದರೆ, ಶಿಕ್ಷಣವು ವೈದಿಕ ಹಿನ್ನೆಲೆಯಿಂದಷ್ಟೇ ವ್ಯಾಖ್ಯಾನಗೊಂಡಿತ್ತು. ಶಿಕ್ಷಣವನ್ನು ಸೀಮಿತಾರ್ಥದಲ್ಲಿ ಮಾತ್ರ ಪರಿಭಾವಿಸಲಾಗಿತ್ತು. ಶಿಕ್ಷಣವು ಸೀಮಿತ ವರ್ಗಕ್ಕೆ ಮಾತ್ರ ದಕ್ಕುತ್ತಿತ್ತು. ಶಿಕ್ಷಣವು ಎಲ್ಲ ಜನವರ್ಗಗಳ ಸೊತ್ತು ಎಂಬ ಭಾವನೆ ಇರಲಿಲ್ಲ. ಶಿಕ್ಷಣವು ಬ್ರಾಹ್ಮಣರ ವೃತ್ತಿಯಾಗಿದ್ದು, ಅಧ್ಯಯನ ಮತ್ತು ಅಧ್ಯಾಪನ ಮಾಡುವುದು ಬ್ರಾಹ್ಮಣರ ಸ್ವತ್ತು ಎಂಬ ನಂಬಿಕೆ ಬಲವಾಗಿ ಬೇರೂರಿತ್ತು. ಸಾರ್ವಜನಿಕವಾಗಿ ಶಿಕ್ಷಣ ಪದ್ಧತಿಯ ಕುರಿತು ಎಲ್ಲಿಯೂ ದಾಖಲೆಗಳಿಲ್ಲ ಬ್ರಾಹ್ಮಣರು ಧಾರ್ಮಿಕ ಆಚರಣೆಗಳನ್ನು ನಡೆಸುವುದರಿಂದ ಶಿಕ್ಷಣ ಅವರಿಗೆ ಮಾತ್ರ ಅನಿವಾರ್ಯ ಎನ್ನುವ ನಂಬಿಕೆಯಿತ್ತು. ಅಧ್ಯಾಪನ ಎನ್ನುವುದು ಬ್ರಾಹ್ಮಣರ ಒಂದು ಧಾರ್ಮಿಕ ಕರ್ತವ್ಯವಾಗಿತ್ತು. ಬ್ರಾಹ್ಮಣರಿಗೆ ಸಿಗುತ್ತಿದ್ದ ಭೂದಾನಗಳಿಗೆ ಅವರ ವಿದ್ಯಾವಂತರಾಗಿರುವುದೇ ಕಾರಣವಾಗಿತ್ತು. ಸಹಜವಾಗಿಯೇ ಶಿಕ್ಷಣವು ರಾಜಪ್ರಭುತ್ವ ಮತ್ತು ಧಾರ್ಮಿಕ ಪ್ರಭುತ್ವಗಳಿಂದ ನಿಯಂತ್ರಿತವಾಗುತ್ತಿತ್ತು. ಗಮನಾರ್ಹ ಅಂಶವೆಂದರೆ ಮಹಿಳೆಯರ ಶಿಕ್ಷಣದ ಬಗ್ಗೆ ಶಾಸನ ಮತ್ತು ಸಾಹಿತ್ಯ ಕೃತಿಗಳಲ್ಲಿ ಹೆಚ್ಚಿನ ಮಾಹಿತಿಗಳು ಸಿಗುವುದಿಲ್ಲ. ಕೆಲವು ಮಹಿಳೆಯರು ಶಿಕ್ಷಣವನ್ನು ಹೊಂದಿದ್ದರೂ ಅದು ಹೆಚ್ಚಾಗಿ ಸಂಗೀತ, ನೃತ್ಯಗಳಿಗೆ ಸೀಮಿತವಾಗಿತ್ತು.

ಸಾಂಪ್ರದಾಯಿಕ ಕಟ್ಟುಕಟ್ಟಳೆಗಳಿಂದಾಗಿ ಮಹಿಳೆಯರು ಶಿಕ್ಷಣದಿಂದ ವಂಚಿತರಾಗಬೇಕಾಯಿತು. ಈ ಎಲ್ಲಾ ವೈರುದ್ಯಗಳ ನಡೆವೆಯೂ ಮೇಲುಕೋಟೆ

ದೇವಾಲಯಗಳು ಶೈಕ್ಷಣಿಕ ಕೇಂದ್ರವಾಗಿ ಜ್ಞಾನ ಜಗತ್ತಿಗೆ ತನ್ನದೆ ಆದ ಗುರುತರ ಕಾಣಿಕೆಯನ್ನು ನೀಡಿವೆ.

ರಾಮಾನುಜಕೂಟಗಳು (ಅನ್ನಸತ್ರಗಳು)

ಶ್ರೀ ವೈಷ್ಣವ ದೇವಾಲಯಗಳು ಹಾಗೂ ಮಠಗಳಿಗೆ ಹೊಂದಿಕೊಂಡಂತೆ ರಾಮಾನುಜಕೂಟಗಳಿರುತ್ತಿದ್ದವು. ಶ್ರೀ ವೈಷ್ಣವರು ತಂಗಲು ಹಾಗೂ ಅವರಿಗೆ ಆಹಾರ ಒದಗಿಸಲು ನಿರ್ಮಾಣಗೊಂಡಂಥಾ ಮನೆಗಳಿವು. ಶ್ರೀ ವೈಷ್ಣವ ಭಕ್ತರಿಗಾಗಿ ತೆರೆಯಲಾದ ಪ್ರಸಾದನಿಲಯಗಳನ್ನು ಸತ್ರಗಳೆಂತಲೂ ಕರೆಯಲಾಗಿದೆ. ಅದಕ್ಕಾಗಿ ವಿಶೇಷ ದತ್ತಿಗಳನ್ನು ಬಿಡುವುದು ರಾಮಾನುಜರ ಭಕ್ತರಾದ ಶ್ರೀ ವೈಷ್ಣವರಿಗೆ ಉಚಿತ ಅಶನಕ್ಕಾಗಿ ರಾಮಾನುಜರ ಹೆಸರಿನಲ್ಲಿ ರಾಮಾನುಜಕೂಟಗಳನ್ನು ಏರ್ಪಡಿಸುವುದು ಇತ್ಯಾದಿಯನ್ನು ತಮ್ಮ ಗುರುಗಳಿಗೆ ಭಕ್ತಿಪೂರ್ವಕವಾಗಿ ಸಲ್ಲಿಸುವ ಸೇವೆಯೆಂದೇ ಭಾವಿಸಲಾಗಿತ್ತು. ಕೆಲವೊಮ್ಮೆ ಇಂಥಾ ರಾಮಾನುಜಕೂಟಗಳು ಶ್ರೀ ವೈಷ್ಣವ ಭಕ್ತರು ತಮ್ಮ ಪ್ರಮುಖ ಧಾರ್ಮಿಕ ಸಂಗತಿಗಳನ್ನು ಚರ್ಚಿಸಲು ಅವಕಾಶ ಕಲ್ಪಿಸುವ ಎಡೆಗಳಾಗಿರುತ್ತಿದ್ದವು.

ಶ್ರವಣಬೆಳಗೊಳ ಸ್ಥಳಪುರಾಣದ ಪ್ರಕಾರ ಹೊಯ್ಸಳ ರಾಜಧಾನಿಗಳಲ್ಲೊಂದಾಗಿದ್ದ ತೊಂಡನೂರಿನಲ್ಲಿ ವಿಷ್ಣುವರ್ಧನನು ಕೆರೆಯನ್ನು ಕಟ್ಟಿಸುವುದರೊಡನೆ ರಾಮಾನುಜಕೂಟವನ್ನು ಸ್ಥಾಪಿಸಿದ. ಕರ್ನಾಟಕದ ಮಟ್ಟಿಗೆ ಇದು ಮೊದಲನೇ ರಾಮಾನುಜಕೂಟವಾಗಿದೆ. ಕ್ರಿ.ಶ. 1256 ನವೆಂಬರ್ 30ರಂದು ಮೇಲುಕೋಟೆಯ ಯತಿರಾಜಮಠದ ಕೇತಿಯಪ್ಪಸೆಟ್ಟಿಯು ರಾಮಾನುಜರ ಗುಡಿಯಲ್ಲಿ ರಾಮಾನುಜಕೂಟ ನಡೆಸಿಕೊಂಡು ಬರಲು ಎರಡು ಗ್ರಾಮಗಳನ್ನೂ ಸ್ವಲ್ಪ ಭೂಮಿಯನ್ನು ದಾನಮಾಡಿದ.[125] ಇವೆರಡೂ ಆಚಾರ್ಯರ ಪ್ರೇರಣೆಯಿಂದ ಹೊಯ್ಸಳರ ಅವಧಿಯಲ್ಲಿ ಅಸ್ತಿತ್ವಕ್ಕೆ ಬಂದ ರಾಮಾನುಜಕೂಟಗಳಾಗಿವೆ.

ಶಾಸನ ಹಾಗೂ ಸ್ಥಳಪುರಾಣದಲ್ಲಿ ರಾಮಾನುಕೂಟವನ್ನು ರಾಮಾನುಜಕೂಟ, ರಾಮಾಂಜಕೂಟ, ರಾಮಾಜಿಕೂಟ, ಛತ್ರ, ಸತ್ರ ಇತ್ಯಾದಿಯಾಗಿ ಗುರುತಿಸಿದೆ. ಇವು 15 ಮತ್ತು 16ನೇ ಶತಮಾನಗಳಲ್ಲಿ ವ್ಯಾಪಕವಾಗಿ ಪ್ರಸ್ತಾಪಗೊಳ್ಳುತ್ತವೆ. ಆಚಾರ್ಯರ ಪ್ರಭಾವದಿಂದಾಗಿ ಕಾಲಕಾಲಕ್ಕೆ ಇಲ್ಲಿ ರಾಮಾನುಜಕೂಟಗಳು ಅಸ್ತಿತ್ವಕಂಡವೆಂಬುದು ವಾಸ್ತವ. ವಿಜಯನಗರದ ಅವಧಿಯಲ್ಲಿ ಶ್ರೀ ವೈಷ್ಣವ ಪಂಥದ ಚಟುವಟಿಕೆಗಳು ಇಲ್ಲಿ ಅಧಿಕಗೊಂಡವು. 16ನೇ ಶತಮಾನದ ವೇಳೆಗೆ ಮೇಲುಕೋಟೆಯಲ್ಲಿ ಹಲವು ದೇವಾಲಯಗಳು, ಮಂಟಪಗಳು, ಕೊಳಗಳು, ಮಹಾದ್ವಾರಗಳು ನಿರ್ಮಾಣಗೊಂಡಂತೆ ರಾಮಾನುಜಕೂಟಗಳೂ ಅಸ್ತಿತ್ವಕ್ಕೆ ಬಂದವು.

ಸಮಕಾಲೀನ ಶಾಸನಗಳು ಮತ್ತು ರಾಮಾನುಜಕೂಟಗಳ ಸ್ವರೂಪಗಳಿಂದ ಕೆಲವು ಸಾಮಾನ್ಯ ಲಕ್ಷಣಗಳನ್ನು ಗುರುತಿಸಬಹುದು. ವೈಷ್ಣವ ದೇವಾಲಯಗಳನ್ನು ಕಟ್ಟಿಸುವ ಸಂದರ್ಭದಲ್ಲಿ ದಾನಿಗಳು ರಾಮಾನುಜಕೂಟವನ್ನು ಲಕ್ಷಿಸುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ. ರಾಮಾನುಜಕೂಟಗಳ ಸ್ಥಾನ, ಅದರ ಒಳವ್ಯವಸ್ಥೆ, ಒಲೆಗಳು, ಮಸಿಯಿಡಿದ ಭಾವಣಿ, ಹೊಗೆಗೂಡು, ಜಾಲಂದ್ರ ಇತ್ಯಾದಿ. ಆಧಾರಗಳನ್ನುನುಮಸರಿಸಿ ಹೇಳುವುದಾದರೆ, ಸರಳ ಮಂಟಪಗಳಂತೆ ತೋರುವ ಈ ಕೂಟಗಳು, ಯಾವುದೇ ಅಲಂಕಾರಗಳನ್ನು ಪಡೆಯದ 'ಪವಿತ್ರ' ಪ್ರಸಾದ ತಾಣಗಳಾಗಿರುತ್ತಿದ್ದವು. ಇಲ್ಲಿ ಆಹಾರವನ್ನು ಸಿದ್ಧಪಡಿಸುವವರನ್ನು 'ಸ್ವಯಂ ಪಾಕಿಗಳು' ಅಂದರೆ ವಿಶೇಷ ಅಥವಾ ಶುದ್ಧವಾದ ಅಡುಗೆ ಮಾಡುವವರೆಂದು ಶಾಸನಗಳು ಉಲ್ಲೇಖಿಸಿವೆ.[126] ಕ್ರಿ.ಶ. 1458ರ ಶಾಸನವು ಅಡಿಗೆ ಮಾಡುವವರನ್ನು 'ಬಾಣಸಿಗ' ಎಂದು ಉಲ್ಲೇಖಿಸಿದೆ.[127] ಸಿದ್ಧಪಡಿಸಲಾಗುತ್ತಿದ್ದ ಆಹಾರವನ್ನು ಶ್ರೀ ವೈಷ್ಣವರಿಗೆ 'ನೈವೇದ್ಯ'ವೆಂತಲೂ ಇತರರಿಗೆ 'ಪ್ರಸಾದ'ವೆಂತಲೂ ವಿತರಿಸಲಾಗುತ್ತಿತ್ತು.[128] ಅನ್ನಸಂತರ್ಪಣೆಗಾಗಿ ಭೂದತ್ತಿ, ಗ್ರಾಮದತ್ತಿಗಳೇ ಅಲ್ಲದೆ ಹಣ ಮತ್ತು ಬಂಗಾರಗಳನ್ನು ದಾನವಾಗಿ ನೀಡಲಾಗುತ್ತಿತ್ತು. ವೈಷ್ಣವ ಆಚಾರ್ಯರು ದೇವಾಲಯಗಳಿಗೆ ಹೊಂದಿಕೊಂಡತಿದ್ದ ರಾಮಾನುಜಕೂಟಗಳಲ್ಲಿಯೇ ವಾಸ್ತವ್ಯ ಮಾಡುತ್ತಿದ್ದರೆಂದು ವ್ಯಕ್ತಪಡುತ್ತದೆ. ಇವು ಹೊರಗಿನಿಂದ ಆಗಮಿಸುತ್ತಿದ್ದ ಯಾತ್ರಾರ್ಥಿ ಅಥವಾ ಸಂಚಾರಿ ಶ್ರೀವೈಷ್ಣವರಿಗೆ ನೈವೇದ್ಯವನ್ನು ಒದಗಿಸುವ ಭೋಜನಾಲಯಗಳಾಗಿದ್ದವು. ರಾಮಾನುಜಕೂಟಗಳ ನಿರ್ವಹಣೆಯ ದೇವಾಲಯಗಳಿಗೆ ಸೇರಿತ್ತು. ಅದಕ್ಕೆ ಬೇಕಾದ ಸಿಬ್ಬಂದಿಗಳ ನೇಮಕವು ಅದಕ್ಕೆ ಸೇರಿತ್ತು. ಆದರೆ ಗಮನಾರ್ಹ ಅಂಶವೆಂದರೆ ಇವು ಇತರೆಡೆಗಳಲ್ಲಿರುವ ಅನ್ನಸತ್ರಗಳಂತಿರದೆ, ಶ್ರೀವೈಷ್ಣವರಿಗೆ ಮಾತ್ರ ಸೀಮಿತಗೊಂಡಿದ್ದುದು ವಿಶೇಷ.

ವಿಜಯನಗರದ ಇಮ್ಮಡಿ ಪ್ರೌಢದೇವರಾಯನ ಮಹಾಪ್ರಧಾನನೂ ನಾಗಮಂಗಲದ ಮಹಾಪ್ರಭುವಾಗಿದ್ದ ತಿಮ್ಮಣ್ಣ ದಂಡನಾಯಕನ ಧರ್ಮಪತ್ನಿ ರಂಗಮ್ಮಳು (ರಂಗಾಂಬಿಕೆ) ಕ್ರಿ.ಶ. 1458ರಲ್ಲಿ ಮೇಲುಕೋಟೆಯ ಕಾಲುವಳಿಗಳಾದ ಬಲ್ಲೇನಹಳ್ಳಿ ಮತ್ತು ಯಲವದಹಳ್ಳಿ ಗಳಿಗೆ ಸೇರಿದ ಎಲ್ಲಾ ಹೊಲ, ಗದ್ದೆ, ತೋಟ, ಸುಂಕಗಳಿಂದ ಬರುವ ಆದಾಯ, ದ್ರವ್ಯರೂಪದಲ್ಲಿ ಬರುವ ಆದಾಯವನ್ನು 24 ಜನ ಶ್ರೀ ವೈಷ್ಣವರ ಭೋಜನಕ್ಕಾಗಿ ಸ್ಥಾಪಿಸಲಾದ ರಾಮಾನುಜಕೂಟಕ್ಕೆ ದಾನಮಾಡಿದಳು.[129] ಈಕೆ ನೀಡಿದ ಗ್ರಾಮಗಳಿಂದ ಬರುತ್ತಿದ್ದ 80 ವರಹಗಳ ಆದಾಯವು ರಾಮಾನುಕೂಟವನ್ನು ನಡೆಸಿಕೊಂಡು ಹೋಗಲು ಸಾಕಾಗಲಿಲ್ಲ. ಅದರಿಂದ 40 ವರಹಗಳ ಆದಾಯ ತರುವ ಇನ್ನಷ್ಟು ಭೂಮಿಯನ್ನು 800 ವರಗಳಿಗೆ ಕೊಂಡು ವ್ಯವಸ್ಥೆ ಮಾಡಿದಳು. ಈ ಶಾಸನವು 'ರಾಮಾನುಜಕೂಟ ಕಟ್ಟಳೆ'ಯನ್ನು ಹೊಂದಿದೆ. ಈ ದಾನದ ಪ್ರತಿಗ್ರಹಿಯಾಗಿದ್ದ ರಾಮಾನುಜ ಜೀಯರ್ ಎಂಬ ಅಧಿಕಾರಿಯು

ಮಠದಲ್ಲಿಯೇ ಇದ್ದುಕೊಂಡು ರಾಮಾನುಜಕೂಟದ ಆಡಳಿತವನ್ನು ನೋಡಿಕೊಳ್ಳಲು, ಮಠದಲ್ಲಿ ಸ್ಥಾಪಿಸಲಾಗಿದ್ದ ಲಕ್ಷ್ಮೀದೇವಿಗೆ ನೈವೇದ್ಯ ಒದಗಿಸಲು, ಅಡಿಗೆಯವರು, ಪರಿಚಾರಕರಿಗೆ ನೀಡುವ ಸಂಬಳ ಇತ್ಯಾದಿ ವೆಚ್ಚಗಳ ನಂತರವೂ ಉಳಿಯಬಹುದಾದ ಹಣವನ್ನು ಮಠದ ಜೀರ್ಣೋದ್ದಾರ, ಸ್ವಚ್ಛತೆ ಹಾಗೂ ಸುಣ್ಣ ಬಣ್ಣಗಳಿಗಾಗಿ ಬಳಸಲು ಕಟ್ಟಳೆ ವಿಧಿಸಲಾಯಿತು. ಮೇಲುಕೋಟೆಯಲ್ಲಿ ರಾಮಾನುಜಕೂಟದ ವ್ಯವಸ್ಥೆಗೆ ದೊರೆತಿದ್ದ ಭಕ್ತಿಪೂರ್ವಕ ಆದ್ಯತೆಯು ಇದರಿಂದ ಮನದಟ್ಟಾಗುತ್ತದೆ.

ನಮ್ಮಾಳ್ವಾರ್ ದೇವಾಲಯದಲ್ಲಿರುವ ವಿಜಯನಗರದ ಕೃಷ್ಣದೇವರಾಯನ ಕಾಲದ ಆಚಿರಾಜ ಜೌಬಳರಾಜನ ಮಗ ವೆಂಕಟಾದ್ರಿಯ 1526–27ರ ದಾನ ಶಾಸನದಂತೆ, ಇಲ್ಲಿನ ರಾಮಾನುಜ ಕೂಟಕ್ಕೆ ಜೌಬಳಪುರವೆಂಬ ಗ್ರಾಮವನ್ನು ದಾನ ಮಾಡಿದ ಪ್ರಸ್ತಾಪವಿದೆ.[130] ನಾರಾಯಣಸ್ವಾಮಿ ದೇವಾಲಯದಲ್ಲಿ ಸದಾಶಿವರಾಯನ ಶಾಸನ (ಕ್ರಿ.ಶ. 1530) ರಾಮಾನುಕೂಟವನ್ನು ಪ್ರಸ್ತಾಪಿಸಿದೆ.[131] ವೇಲುಗೋಡು ಮೆನತನಕ್ಕೆ ಸೇರಿದ ವಸಂತರಾಯನು ಮೊದಲಿಗೆ ಎರಡು ಗ್ರಾಮಗಳನ್ನು ಕ್ರಯಕ್ಕೆ ಪಡೆದಿದ್ದು ದೇವಾಲಯಕ್ಕೆ ನೀಡಿದ್ದ. ಅದು ಊರ್ಜಿತವಾಗದ ಕಾರಣ, ಅದೇ ಮನೆತನದ ರಾಯಪನಾಯಕನು ದೇವಾಲಯದ ಐವತ್ತಿಬ್ಬರೊಡನೆ ಒಪ್ಪಂದ ಮಾಡಿಕೊಂಡು ಮೂಲದಾನ ನವೀಕರಿಸಿದನು. ವಸಂತರಾಯನ ಪ್ರತಿನಿಧಿಯಾದ ಅನಂತಯ್ಯನಿಗೆ ಪ್ರಸಾದದಲ್ಲಿ ನೀಡಲಾಗುತ್ತಿದ್ದ ಪಾಲನ್ನು ಈಗ ಆತನ ಮೊಮ್ಮಗ ಆಳ್ವಾರು ಸಿಂಗಯ್ಯನಿಗೆ ಕೊಡುವುದೆಂದು ನಿರ್ಧರಿಸಲಾಗುತ್ತದೆ ಈ ಆಳ್ವಾರು ಸಿಂಗಯ್ಯನು ಬಹುಶಃ ರಾಮಾನುಜಕೂಟದ ಧರ್ಮಕರ್ತನಾಗಿ ನೇಮಕಗೊಳ್ಳುತ್ತಾನೆ. 1545ರ ಸದಾಶಿವರಾಯನ ಕಾಲದಲ್ಲಿ ಶ್ರೀರಂಗಪಟ್ಟಣದ ಮಹಾಮಂಡಳೇಶ್ವರ ನಾರಾಯಣದೇವ ಹಲವು ಗ್ರಾಮಗಳನ್ನು ದೇವಾಲಯಕ್ಕೆ ದಾನಮಾಡಿ, ಅದರಲ್ಲಿ ಒಂದು ಭಾಗವನ್ನು ಅವನೇ ಸ್ಥಾಪಿಸಿದ ರಾಮಾನುಜಕೂಟಕ್ಕೆ ಕೊಡುವಂತೆ ಶಾಸನದಲ್ಲಿ ಆದೇಶಿಸಲಾಗಿದೆ.[132] ನಾರಾಯಣಸ್ವಾಮಿ ದೇವಾಲಯದಲ್ಲಿರುವ ಸದಾಶಿವರಾಯನ ಕಾಲದ (ಕ್ರಿ.ಶ. 1564) ಒಂದು ತಾಮ್ರ ಶಾಸನವು ರಾಮಾನುಜಕೂಟಕ್ಕೆ ದ್ರವ್ಯ ಸಹಾಯ ಮಾಡಿದ ಅಂಶವನ್ನು ಹೇಳಿದೆ.[133] ಮಹಾಮಂಡಳೇಶ್ವರ ಕೊಂಡರಾಜದೇವನು ಚನ್ನಪಟ್ಟಣ ಸ್ಥಳಕ್ಕೆ ಸೇರಿದ ಹೊಂಗನೂರು ಮತ್ತು ಅದರ ಉಪಗ್ರಾಮಗಳು, ಗೂಳೂರು ಸ್ಥಳಕ್ಕೆ ಸೇರಿದ ಹೊನ್ನುಡಿಕೆ ಗ್ರಾಮ ಮತ್ತು ಅದರ ಉಪಗ್ರಾಮಗಳನ್ನು ದೇವಾಲಯಕ್ಕೆ ದಾನ ಮಾಡಿದ ಅಂಶ ಈ ಶಾಸನದಲ್ಲಿದೆ ಇದರಲ್ಲಿ ರಾಮಾನುಜಕೂಟಕ್ಕೆ ವೆಚ್ಚಮಾಡಬೇಕಾದ ಧನಸಹಾಯದ ಭಾಗ ಸಹ ಸೇರಿಸಲಾಗಿದೆ.

ಕೃಷ್ಣದೇವರಾಯನ ಕಾಲದ ಇನ್ನೊಂದು ಶಾಸನವು ನಾರಾಯಣಸ್ವಾಮಿ ದೇವಾಲಯದಲ್ಲಿ ಒಡೆದು ಭಿನ್ನವಾಗಿದ್ದು, ಇದರಲ್ಲಿ ರಾಮಾನುಜಕೂಟದ ಪ್ರಸ್ತಾಪವಿದೆ.[134]

ಇದನ್ನು ನಡೆಸಿಕೊಂಡು ಹೋಗಲು ಬಹುಶಃ ದೇವಾಲಯದ ಭೂಮಿಯನ್ನು ಮಾರಿದಾಗ ಶ್ರೀ ಭಂಡಾರದವರು ರಾಮಾನುಜಯ್ಯಂಗಾರ್ಯರಿಗೆ ಬರೆಯಿಸಿದ ಕ್ರಯಪತ್ರವಿರುವಂತಿದೆ. ಆ ಉದ್ದೇಶಕ್ಕಾಗಿ ಈ ಅಯ್ಯಂಗಾರ್ಯರ ಹೆಸರಿನಲ್ಲಿ ಬಹುಶಃ ಭೂಮಿಯನ್ನು ಕ್ರಯವಾಗಿ ಕೊಟ್ಟು, ದೇವಾಲಯದಲ್ಲಿ ರಾಮಾನುಜಕೂಟದ ವೆಚ್ಚಕ್ಕಾಗಿ ಅದನ್ನು ದಾನವಾಗಿ ಪಡೆದು ಶ್ರೀ ವೈಷ್ಣವರ ಆರೋಗಣೆಗೆ ಭಂಡಾರದಿಂದ ಎರಡು ಕುಳ ಅಕ್ಕಿ ನೀಡಿದುದನ್ನು ಶಾಸನ ನಿರೂಪಿಸುತ್ತದೆ. ವಿದ್ವಾಂಸರು ಭಾವಿಸುವಂತೆ ಇಲ್ಲಿಯ ರಾಮಾನುಜಯ್ಯಂಗಾರ್ಯರು ಕಂಚಿ, ತಿರುಪತಿ ಮತ್ತು ಶ್ರೀರಂಗನ ಹಲವಾರು ಶಾಸನಗಳಲ್ಲಿ ಕಾಣಿಸಿಕೊಳ್ಳುವ ಕಂದಾಡೈ/ಕಂದಾಡೆ ರಾಮಾನುಜೈಯ್ಯಂಗಾರ್ಯರೇ ಆಗಿದ್ದಿರಬೇಕು. ಏಕೆಂದರೆ ಈಗಾಗಲೇ ಗಮನಿಸಿದಂತೆ, ಅಲ್ಲಿಯ ರಾಮಾನುಕೂಟಗಳ ಮೇಲುಸ್ತುವಾರಿಯನ್ನು ಕೈಗೊಂಡವರು ಇದೇ ಕಂದಾಂಡೆ ರಾಮಾನುಜಯ್ಯಂಗಾರ್.[135] 16ನೇ ಶತಮಾನದ ಅಂತ್ಯದ ವೇಳೆಗೆ ಸುಮಾರು 7 ರಾಮಾನುಜಕೂಟಗಳು ಮೇಲುಕೋಟೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದವು.

ಜಾನಪದ ಸಂಪ್ರದಾಯಗಳು – ದೈವಸಂಬಂಧ

ಜಾನಪದವು ಒಂದು ಅಂತರ್‌ಶಿಸ್ತೀಯ ಅಧ್ಯಯನವಾಗಿದೆ. ಜೀವಂತ ಜನಾಂಗಗಳ ಹಾಗೂ ಸಂಸ್ಥೆಗಳ ಪದ್ಧತಿಗಳು, ಸಂಪ್ರದಾಯಗಳು, ಆಚರಣೆಗಳೊಂದಿಗೆ ಕಲೆ, ಸಾಹಿತ್ಯ, ಗಾದೆ, ಒಗಟು, ನಂಬಿಕೆ, ಆಟಗಳು ಇತ್ಯಾದಿಗಳನ್ನು ಕುರಿತು ಅಧ್ಯಯನ ಮಾಡುವ ಶಿಸ್ತು ಇದಾಗಿದೆ. ಅಲೆನ್ ದಂಡೆಸ್ ಹೇಳುವಂತೆ 'ಜನಪದ' ಎಂದರೆ ಯಾವುದೇ ಗುಂಪಾಗಬಹುದು. ಭಾಷೆ, ವೃತ್ತಿ, ಧರ್ಮ, ವಯಸ್ಸು, ಸಾಂಸ್ಕೃತಿಕ ವರ್ಗ ಇವುಗಳಲ್ಲಿ ಯಾವುದಾದರೊಂದು ಜಾನಪದವಾಗುತ್ತದೆ. ಇದರಿಂದಾಗಿ ಗ್ರಾಮೀಣರು ಮಾತ್ರ ಜಾನಪದರು ಎಂಬ ಕಲ್ಪನೆಗೆ ಬದಲಾಗಿ ಆದಿವಾಸಿಗಳು, ಗ್ರಾಮವಾಸಿಗಳು, ನಗರವಾಸಿಗಳು – ಎಲ್ಲರೂ ಜನಪದ ಎಂಬ ವಿಚಾರ ರೂಪುಗೊಂಡಿದೆ. ಜಾನಪದ ಗತಕಾಲದ ಸೃಷ್ಟಿಯಾಗಿ ಪಳೆಯುಳಿಕೆಯಾಗಿ ಮಾತ್ರ ಇರದೆ, ಸಮಕಾಲೀನ ಪರಿಸರದಲ್ಲಿಯೇ ಸೃಷ್ಟಿಯಾಗುವುದು ಮಾತ್ರವಲ್ಲದೆ ಭವಿಷ್ಯತ್ ಕಾಲದಲ್ಲಿಯೂ ನಿರಂತರವಾಗಿ ಸೃಷ್ಟಿಯಾಗುತ್ತದೆ ಎಂಬ ಅಭಿಪ್ರಾಯವೂ ರೂಪುಗೊಂಡಿತು. ಜಾನಪದ ಬಹುಮಟ್ಟಿಗೆ ಮೌಖಿಕವಾದರೂ ಕೆಲವು ಸಲ ಬರವಣಿಗೆಯ ರೂಪದಲ್ಲಿಯೂ ಪ್ರಕಟವಾಗುತ್ತದೆ ಎಂಬ ಹೊಸ ವಿಚಾರಗಳು ಇಂದು ಚಾಲ್ತಿಗೆ ಬಂದಿವೆ.[136] ಜಾನಪದವು ಗ್ರಂಥಸ್ಥ ಮೂಲದಿಂದ ಬಂದುದಲ್ಲ, ಅದು ಪರಂಪರಾಗತವಾಗಿ ಮೌಖಿಕ ಪರಂಪರೆಯಲ್ಲಿ ಉಳಿದು ಬಂದಿರುವ ಸಮಗ್ರಜ್ಞಾನವೆಂದು ಕರೆಯಬಹುದು. ಮೇಲುಕೋಟೆಯ ದೈವಸಂಬಂಧಿ ಜಾನಪದ ಸಂಪ್ರದಾಯಗಳು ವಿಶಿಷ್ಟವಾಗಿವೆ.

ಜನಸಮುದಾಯದ ಜೀವನವನ್ನು ರೂಪಿಸುವಲ್ಲಿ, ಸಂಸ್ಕೃತಿಯನ್ನು ಕಟ್ಟುವಲ್ಲಿ ಸಂಪ್ರದಾಯಗಳು ಮಹತ್ವದವುಗಳಾಗಿವೆ. ಸಂಪ್ರದಾಯವೊಂದರ ಹಿಂದೆ ನಂಬಿಕೆ ಬಲವಾಗಿರುತ್ತದೆ. ಅಂದರೆ ನಂಬಿಕೆ ಸಂಪ್ರದಾಯವನ್ನು ಚಾಲನೆಗೊಳಿಸುತ್ತದೆ - ಸಂಪ್ರದಾಯ ನಂಬಿಕೆಯನ್ನು ಜೀವಂತವಾಗಿರಿಸುತ್ತದೆ. ನಂಬಿಕೆ, ಸಂಪ್ರದಾಯ ಮತ್ತು ಆಚರಣೆಗಳ ನಡುವೆ ಅಂತರ್ ಸಂಬಂಧವೊಂದಿರುತ್ತದೆ. ನಂಬಿಕೆಯೊಂದು ಐತಿಹ್ಯ, ಪುರಾಣ, ಧರ್ಮಗಳೊಂದಿಗೆ ಸಂಬಂಧವನ್ನು ಪಡೆದುಕೊಂಡು ಸಮುದಾಯದ ಶ್ರದ್ಧೆಯೊಂದಿಗೆ ಸಮರ್ಥನೆಯನ್ನು ಪಡೆದುಕೊಂಡಾಗ ಸಂಪ್ರದಾಯವಾಗುತ್ತದೆ. ಇಂತಹ ಸಂಪ್ರದಾಯಗಳ ಪ್ರಯೋಗಿಕ ಅಥವಾ ಕ್ರಿಯಾರೂಪಗಳೇ ಆಚರಣೆಗಳು. ಹೀಗಾಗಿ ನಂಬಿಕೆಗಿಂತ ಸಂಪ್ರದಾಯ, ಆಚರಣೆಗಳಿಗೆ ಹೆಚ್ಚಿನ ವ್ಯಾಪ್ತಿ ಇದೆ.[137]

ದೈವಸಂಬಂಧ ಸಂಪ್ರದಾಯಗಳು

ಜನಪದರ ಬದುಕಿನಲ್ಲಿ 'ದೈವ'ಕ್ಕೆ ಬಹುದೊಡ್ಡ ಸ್ಥಾನವಿದೆ. ತಮ್ಮ ಬದುಕಿನ ಬಹುಮುಖ್ಯ ಸಂದರ್ಭಗಳಲ್ಲದೆ, ಪ್ರತಿದಿನದ ಕೆಲಸ ಕಾರ್ಯಗಳಲ್ಲೂ ದೈವದ ಕೃಪೆ ಬಯಸುತ್ತಾರೆ. ಅದಕ್ಕೆ ವಿಶೇಷ ಆಚರಣೆ, ಪೂಜಾವಿಧಿ, ಇತ್ಯಾದಿಗಳಿಂದ ತಮ್ಮ ಕೃತಜ್ಞತೆ ಸಲ್ಲಿಸುತ್ತಾರೆ. ಪ್ರಕೃತಿಯಲ್ಲಿನ ಸಮಸ್ತ ವಸ್ತುಗಳೂ ಅವರಿಗೆ ಪೂಜ್ಯನೀಯವೆ, ಭೂಮಿ-ಭೂತಾಯಿಯಾಗುತ್ತದೆ, ಮರ-ವೃಕ್ಷ ದೇವತೆಯಾಗುತ್ತದೆ, ಸೂರ್ಯ-ಸೂರ್ಯದೇವನಾಗುತ್ತಾನೆ. ಚಂದ್ರ-ಚಂದ್ರದೇವನಾಗುತ್ತಾನೆ, ಮಳೆ-ವರುಣದೇವರಾದರೆ, ಗಾಳಿ-ವಾಯುದೇವರಾಗುತ್ತಾರೆ, ಹರಿಯುವ ಹೊಳೆ ಜಲದೇವತೆಯಾಗುತ್ತದೆ. ತಮ್ಮ ಬದುಕಿಗೆ ಆಧಾರದ ಈ ನಿಸರ್ಗ ದೇವತೆಗಳಿಗೆ ಸದಾ ಕೃತಜ್ಞರಾಗಿರುವರಲ್ಲದೆ, ತಾವು ನಂಬಿಕೊಂಡು ಬಂದ ದೈವಗಳ ಬಗೆಗೂ ಅತಿಯಾದ ಪ್ರೀತಿ-ನಂಬಿಕೆ ವ್ಯಕ್ತಪಡಿಸುತ್ತಾರೆ.

ಜನಪದರು ಶಿಷ್ಟರಂತೆ ಯಾವೊಂದು ದೈವಕ್ಕೆ ಮಾತ್ರ ನಿಷ್ಠರಾಗಿ ಉಳಿಯುವರಲ್ಲ. ಮನೆದೇವರು, ಊರದೇವರು, ಒಕ್ಕಲದೇವರು ಇವುಗಳಲ್ಲದೆ ವಾರದ ದಿನಗಳಲ್ಲಿ ಸೋಮವಾರ ಶಿವನನ್ನು, ಮಂಗಳವಾರ ಲಕ್ಷ್ಮಿದೇವಿಯನ್ನು, ಗುರುವಾರ ರಾಘವೇಂದ್ರಸ್ವಾಮಿಯನ್ನು, ಶುಕ್ರವಾರ ಶಕ್ತಿದೇವತೆಗಳನ್ನು, ಶನಿವಾರ ತಿರುಪತಿ ತಿಮ್ಮಪ್ಪನನ್ನು ಪೂಜಿಸುತ್ತಾರೆ. ಹರಕೆ ಹೊರುತ್ತಾರೆ. ಅದಕ್ಕಾಗಿ ನಡೆದುಕೊಳ್ಳುತ್ತಾರೆ. ತನ್ನ ಬದುಕಿಗೆ ಕಲ್ಯಾಣಕಾರಿಯೆಂದು ಬಸವಣ್ಣನನ್ನು, ಭಯ ನಿವಾರಕನೆಂದು ಹನುಮಂತನನ್ನು, ರೋಗರುಜಿನಗಳ ನಿವಾರಣೆಗೆ ಮಾರಮ್ಮ, ಚೌಡಮ್ಮ, ದುರ್ಗಿ ಇತ್ಯಾದಿಯರನ್ನು ಅವರು ಒಪ್ಪುತ್ತಾರೆ, ಆರಾಧಿಸುತ್ತಾರೆ, ಅಪ್ಪಿಕೊಳ್ಳುತ್ತಾರೆ. ಒಮ್ಮೊಮ್ಮೆ ತಾವು ಸರಿಯಾಗಿ ನಡೆದುಕೊಂಡರೂ, ತಮ್ಮ ಬದುಕಿನಲ್ಲಿ ಅಪರಿಮಿತ ಕಷ್ಟ-ನಷ್ಟಗಳು ಉಂಟಾದರೆ ತಾವು

ನಂಬಿದ ದೈವವನ್ನೇ ಬೈಯ್ಯುವ, ಪ್ರಶ್ನಿಸುವ ಮನೋಧರ್ಮವನ್ನು ಸಹ ಇವರು ಪ್ರಕಟವಾಗಿಸುತ್ತಾರೆ. ಮೇಲುಕೋಟೆಯ ಜನಪದರಲ್ಲೂ ಈ ಎಲ್ಲಾ ಅಂಶಗಳನ್ನು ಗುರುತಿಸಬಹುದು. ಮನೆದೈವ, ಗ್ರಾಮದೈವಗಳಾದ ಚೆಲುವನಾರಾಯಣ, ಯೋಗಾನರಸಿಂಹ, ಗಣಪತಿ, ಲಕ್ಷ್ಮಿನಾರಾಯಣ ಇತ್ಯಾದಿಗಳಲ್ಲದೆ ದೂರದ ಊರಿನ ಧರ್ಮಸ್ಥಳದ ಮಂಜುನಾಥ, ಶ್ರೀರಂಗಪಟ್ಟಣದ ರಂಗಸ್ವಾಮಿ, ನಂಜನಗೂಡಿನ ಶ್ರೀಕಂಠೇಶ್ವರ, ಹೊರನಾಡಿನ ಅನ್ನಪೂರ್ಣೇಶ್ವರಿ ಇತ್ಯಾದಿ ದೈವಗಳಿಗೂ ಭಕ್ತರಾಗಿ, ಆರಾಧಿಸುತ್ತಾರೆ, ಹರಕೆ ಹೊರುತ್ತಾರೆ. ವಿಶೇಷ ಉತ್ಸವ – ಹಬ್ಬ ಹರಿದಿನಗಳಲ್ಲಿ ಅಲ್ಲಿಗೆ ಭೇಟಿ ನೀಡಿದರ್ಶನ ಮಾಡಿ, ಪುನೀತರಾದವೆಂದು ಭಾವಿಸುತ್ತಾರೆ.

ಹೀಗಾಗಿ ವಾಡಿಕೆ, ಪದ್ಧತಿ, ಆಚಾರ, ಸಂಸ್ಕಾರ, ವಿಧಿ, ಕುಲಾಚಾರ ಮುಂತಾಗಿ ಸಂದರ್ಭಕ್ಕೆ ಅನುಸಾರವಾಗಿ ದೈವಸಂಬಂಧ ಸಂಪ್ರದಾಯಗಳನ್ನು ರೂಪಿಸಿಕೊಳ್ಳುವುದರ ಜೊತೆಗೆ ವೈಯಕ್ತಿಕ ನೆಲೆಯಲ್ಲಿ ಆರಂಭಗೊಂಡ ಸಂಪ್ರದಾಯಗಳನ್ನು, ಅವುಗಳಲ್ಲಿ ಮೂಡಿದ ಆದರ–ಗೌರವಗಳ ಕಾರಣದಿಂದ ತನ್ನ ಮಡಿಲಿಗೆ ಸೇರಿಕೊಂಡಿದೆ. ಅಲ್ಲದೆ ಕೆಲವು ಸಂಪ್ರದಾಯಗಳು ಒಂದು ಮತದ, ದೇವರ ಅಥವಾ ಧರ್ಮದ ಪ್ರಚಾರಕ್ಕಾಗಿ ಕೆಲವೇ ವ್ಯಕ್ತಿಗಳ ನೇತೃತ್ವದಲ್ಲಿ ಹುಟ್ಟಿಕೊಂಡು ನಂತರ ಇಡೀ ಸಮಾಜವನ್ನು ಆವರಿಸಿಕೊಳ್ಳುವುದನ್ನು ಕಾಣಬಹುದು.

ಕೆಲವು ದೈವ ಸಂಪ್ರದಾಯಗಳು ಹೊರನೋಟಕ್ಕೆ ಮೂಢನಂಬಿಕೆ, ವ್ಯರ್ಥ ಎಂದು ಕಂಡುಬಂದರೂ, ಸೂಕ್ಷ್ಮವಾಗಿ ವಿಶ್ಲೇಷಿಸಿದಾಗ ಅವುಗಳಲ್ಲೊಂದು ತತ್ವ ಅಡಕವಾಗಿರುವುದನ್ನು ಕಾಣಬಹುದು. ಕೆಲವು ಆಚರಣೆಗಳು ಉಂಟಾದ ಕಾಲಸಂದರ್ಭದ ಉದ್ದೇಶಕ್ಕಿಂತ ಬೇರೆಯಾಗಿ ಬಳಕೆಯಾಗುತ್ತಿರುವುದನ್ನು ಗಮನಿಸಬಹುದಾಗಿದೆ. ಇವೆಲ್ಲವುಗಳು ಏನಿದ್ದರೂ, ಹೇಗಿದ್ದರೂ ಜನಪದರು ದೈವಸಂಬಂಧವಾದ ಆಚರಣೆಗಳನ್ನು ಅದೇ ಭಯ–ಭಕ್ತಿಯಿಂದ ಆಚರಿಸುತ್ತಾರೆ–ನಡೆಯುತ್ತಾರೆ. ಓದಿದ ವಿದ್ಯಾವಂತ ವರ್ಗ – ಪಟ್ಟಣದ ನಾಗರೀಕತೆಯ ಮೋಡಿಗೆ ಸಿಕ್ಕ ಜನರು ಈ ಆಚರಣೆಗಳಲ್ಲಿ ಅಪನಂಬಿಕೆ ವ್ಯಕ್ತಪಡಿಸಿದರೂ ಭಯದಿಂದಲೋ, ಮತ್ತ್ಯಾವ ಕಾರಣದಿಂದಲೇ, ಇವುಗಳನ್ನು ಮುಂದುವರೆಸುತ್ತಾರೆ.

ಮೇಲುಕೋಟೆ ಪಟ್ಟಣ ಮತ್ತು ಅದಕ್ಕೆ ಸಂಬಂಧಿಸಿದ ಸುತ್ತ–ಮುತ್ತಲಿನ ಹಲವು ಗ್ರಾಮಗಳಲ್ಲಿ ಹಲವಾರು ವೈವಿಧ್ಯಮಯವಾದ ದೈವಸಂಬಂಧ ಸಂಪ್ರದಾಯಗಳಿವೆ. ಅವುಗಳೆಂದರೆ,

1. ದಾಸಯ್ಯ-ಜೋಗಯ್ಯರನ್ನು ಬಿಡುವುದು.

2. ಶ್ರಾವಣ ಶನಿವಾರ ಆಚರಣೆ

3. ಕಾರ್ತಿಕ ಸೋಮವಾರ ಆಚರಣೆ

4. ಹರಿಸೇವೆ-ಮಣೆಸೇವೆ

5. ಶನಿಮಹಾತ್ಮನ ಕಥೆ ಓದಿಸುವುದು.

6. ಮಾರಮ್ಮನ ಹಬ್ಬ ಆಚರಿಸುವುದು.

7. ನಾಗರಚೌತಿ-ಪಂಚಮಿ ಆಚರಣೆ

8. ಬಾಯಿಬೀಗ ಆಚರಣೆ

9. ಪರಮಾಡುವುದು

10. ಕಣದ ಹಬ್ಬ

ಇನ್ನೂ ಇತ್ಯಾದಿ. ಇವುಗಳನ್ನು ಸ್ಥೂಲವಾಗಿ ನೋಡಬಹುದಾಗಿದೆ.

1. ದಾಸಯ್ಯ-ಜೋಗಯ್ಯರನ್ನು ಬಿಡುವುದು

ಜನಪದರು ತಮ್ಮ ಮನೆಗಳಲ್ಲಿ ನಡೆಯುವ ಶುಭಕಾರ್ಯಗಳಿಗೆ ಅಂದರೆ ಹುಟ್ಟಿನ ಸೂತಕ, ನಾಮಕರಣ, ಮೈನೆರೆಯುವ ಸೂತಕ ತೆಗೆಯುವುದು, ಇತ್ಯಾದಿಗಳಲ್ಲಿ ಮತ್ತು ಅಶುಭ ಕಾರ್ಯಗಳ ಸೂತಕ ಕಳೆದುಕೊಳ್ಳುವ ಸಂದರ್ಭದಲ್ಲಿ ಮೇಲ್ಜಾತಿಯ ಅಯ್ನೋರು, ಜೋಯಿಸರನ್ನು ಹೆಚ್ಚು ಅವಲಂಬಿಸದೆ ತಮ್ಮಗಳ ಪೈಕಿಯೇ ಒಬ್ಬರನ್ನು ಈ ಕಾರ್ಯಗಳನ್ನು ನೆರವೇರಿಸಲು ಬಿಟ್ಟಿರುತ್ತಾರೆ. ವೈಷ್ಣವ ಸಂಪ್ರದಾಯಸ್ಥರಲ್ಲಿ ಈ ತರಹದವರನ್ನು 'ದಾಸಯ್ಯ'ಗಳೆಂದು ಕರೆದರೆ, ಶೈವ ಸಂಪ್ರದಾಯವರನ್ನು ಈ ತರಹದವರನ್ನು 'ಜೋಗಯ್ಯ'ಗಳು ಎಂದು ಕರೆಯುತ್ತಾರೆ. ಬ್ರಾಹ್ಮಣರಲ್ಲಿ ಜೋಯಿಸರು, ಲಿಂಗಾಯಿತರಲ್ಲಿ ಜಂಗಮರು ನೆರವೇರಿಸುವ ಕಾರ್ಯಗಳನ್ನು ಶೂದ್ರರಲ್ಲಿ ಇವರುಗಳು ನೆರವೇರಿಸುತ್ತಾರೆ. ಇವರುಗಳು ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ಶ್ರೀ ಮಠವೊಂದರಲ್ಲಿ ದೀಕ್ಷೆ ಪಡೆದು, ವಂಶಪಾರಂಪರ್ಯವಾಗಿ ತಮ್ಮ ಸ್ವಾಮಿಗೆ ನಿಷ್ಠಾವಂತರೆಂದೆ ನಡೆದುಕೊಳ್ಳುವ ಇವರನ್ನು ದೇವರ ಪ್ರತಿನಿಧಿಯಂತೆ, ಗುರುವಿನಂತೆ ಆಯಾ ಒಕ್ಕಲಿನವರು ಗೌರವಿಸಿ ಪೂಜಿಸುತ್ತಾರೆ.

ಎ) ದಾಸಯ್ಯ

ಬ್ರಾಹ್ಮಣ, ಲಿಂಗಾಯಿತರನ್ನು ಬಿಟ್ಟರೆ ಬಹುತೇಕ ಉಳಿದ ಜಾತಿಗಳಲ್ಲಿ 'ದಾಸಯ್ಯ'ನನ್ನು ಬಿಡುವ ಪರಂಪರೆ ಇದೆ. ವಿಶೇಷವಾಗಿ ತಿರುಪತಿ ತಿಮ್ಮಪ್ಪ, ಮೇಲುಕೋಟೆ ಚೆಲುವನಾರಾಯಣ, ಬಿಳಿಗಿರಿ ರಂಗಯ್ಯ–ಈ ದೇವರ ಒಕ್ಕಲಿನವರು ಹೆಚ್ಚಾಗಿ 'ದಾಸಯ್ಯ'ಗಳನ್ನು ಬಿಡುತ್ತಾರೆ. ಮೇಲುಕೋಟೆಯ ಜನಪದರಲ್ಲಿ ಎಲ್ಲಾ ಮನೆಯವರು 'ದಾಸಯ್ಯ'ರನ್ನು ಬಿಡುವ ಸಂಪ್ರದಾಯವಿಲ್ಲ. ಮೊದಲಿನಿಂದಲೂ ಯಾವೊಂದು ಮನೆಗಳಲ್ಲಿ ದಾಸಯ್ಯ ಬಿಟ್ಟಿರುವ ಸಂಪ್ರದಾಯವಿದೆಯೋ ಆ ಮನೆಯವರು ಮಾತ್ರ ಈ ಪರಂಪರೆಯನ್ನು ಮುಂದುವರಿಸುತ್ತಾರೆ. ಅವರ ಕುಟುಂಬದ ಪ್ರೌಢ ಯುವಕನನ್ನು ಆರಿಸಿ, ತಮ್ಮ ಗುರುಗಳ ಬಳಿ ಅವನಿಗೆ 'ದಾಸದೀಕ್ಷೆ'ಯನ್ನು ಕೊಡಿಸಿ, ಭುಜಗಳಿಗೆ ವೈಷ್ಣವ ಲಾಂಛನಗಳಾದ ಶಂಖ–ಚಕ್ರಗಳ ಮುದ್ರೆಗಳನ್ನು ಒತ್ತುತ್ತಾರೆ. ಇದಾದ ನಂತರ ಆತ ಮನೆದೇವರ ಪೂಜೆ ಸಲ್ಲಿಸಿ, ನಾಲ್ಕಾರು ಮನೆಗಳಲ್ಲಿ ಉಪಾದಾನದ ಮುಖಾಂತರ ಧಾನ್ಯ ಭಿಕ್ಷೆ ಸಂಗ್ರಹಿಸುತ್ತಾನೆ. ಅದರಲ್ಲಿ ಅಡುಗೆ ಮಾಡಿ ಅದನ್ನು ಊಟಕ್ಕೆ ಬಡಿಸುತ್ತಾರೆ. ಈ ಊಟಕ್ಕೆ ಊರಿನಲ್ಲಿನ ಇತರೆ ದಾಸಯ್ಯಗಳೂ ಸೇರುತ್ತಾರೆ.

ತಮ್ಮ ಗುರುವಿನಿಂದ ದೀಕ್ಷೆ ಪಡೆಯುವ ಮುನ್ನ ಮನೆಯನ್ನು ಗುಡಿಸಿ, ಸಾರಿಸಿ, ಸ್ವಚ್ಛಗೊಳಿಸಿ ಮಿಂದು ಮಡಿಯುಡುತ್ತಾರೆ. ದೀಕ್ಷೆ ಪಡೆದು ಮನಗೆ ಬಂದಾದ ಮೇಲೆ ಕಲ್ಯಾಣಿ ಕೊಳಕ್ಕೆ ಹೋಗಿ ಮೀಸಲು ನೀರು ತಂದು ಪೂಜಿಸಿ ಮನೆಗೆ ಪ್ರೋಕ್ಷಿಸುತ್ತಾರೆ.

ಇವೆಲ್ಲವುಗಳು ಮುಗಿದ ಮೇಲೆ ತಮ್ಮ ಮುಖ್ಯ ದೈವ ತಿರುಪತಿ ತಿಮ್ಮಪ್ಪನ ದರ್ಶನ, ಪೂಜೆಗೆ ತಿರುಪತಿಗೆ ಹೋಗುತ್ತಾರೆ. ಅಲ್ಲಿ ಪೂಜಿಸಿ, ಹರಕೆ ಸಲ್ಲಿಸಿ, ಮುಡಿ ಒಪ್ಪಿಸಿ, ತಾವು ಧರಿಸುವ ನಾಮ, ಕುಂಕುಮ ಇತ್ಯಾದಿಗಳನ್ನು ತರುತ್ತಾರೆ. ಅದಲ್ಲದೆ ಮನೆಗಳಲ್ಲಿ ಪೂಜಿಸಲು ಆಂಜನೇಯ, ತಿಮ್ಮಪ್ಪ, ವರದರಾಜ, ಗೋಪಾಲ ವಿಗ್ರಹಗಳ ಜೊತೆಗೆ ಜಾಗಟೆ, ಗಂಟೆ, ಆರತಿ ತಟ್ಟೆ, ಬೋನಾಸಿ, ಶಂಖ, ಬಾನಕಿ–ಇತ್ಯಾದಿಗಳನ್ನು ತಂದುಇಟ್ಟುಕೊಳ್ಳುತ್ತಾರೆ. ಮುಂದಿನ ಪೂಜಾ ಕಾರ್ಯಗಳಲ್ಲಿ ಇವುಗಳನ್ನು ಬಳಸುತ್ತಾರೆ.

ವೇಷಭೂಷಣಗಳು : ದಾಸಯ್ಯನದು ಸರಳ, ಸಾಂಪ್ರದಾಯಿಕ ವೇಷ. ಬಿಳಿ ಜುಬ್ಬ, ಬಿಳಿಪಂಚೆ ಕೆಲವು ಸಂದರ್ಭಗಳಲ್ಲಿ ಕಚ್ಚೆ ಪಂಚೆ ಧರಿಸುತ್ತಾರೆ. ತಲೆಕೆ ಕಾವಿ ಪೇಟ, ನಡುವಿಗೆ ಕಾವಿ ಚೌಕ ಕಟ್ಟಿರುತ್ತಾರೆ. ಕೊರಳಿಗೆ ಮಣಿ, ಹವಳಗಳ ಸರ, ಹಣೆಯಲ್ಲಿ ಮೂರು ನಾಮ ಧರಿಸುತ್ತಾರೆ. ಕಾವಿ ಪೇಟವೇ ಬೇಕೆಂತೇನಿಲ್ಲ. ಬೇರ ಬಣ್ಣದ ಕೆಲವು ವೇಳೆ ಸಾದಾ ಬಿಳಿಬಣ್ಣದ ಟವೆಲ್ಲನ್ನೇ ಪೇಟದಂತೆ ಕಟ್ಟಿಕೊಳ್ಳುತ್ತಾರೆ. ಕಾಲಿಗೆ ಚಪ್ಪಲಿ ಧರಿಸುವುದಿಲ್ಲ. ಎಡಗೈನಲ್ಲಿ ಜಾಗಟೆ, ಬಲಗೈನಲ್ಲಿ ಶಂಖ, ಎಡ ಕೊರಳಿನಲ್ಲಿ ಬಾಂಕಿ–ಬಲ ಹೆಗಲಿನಲ್ಲಿ

ಪೂಜಾ ಸಾಮಾನುಗಳುಳ್ಳ ಚೀಲ (ವಿಶೇಷ ಪೂಜೆ ನಡೆಸುವ ಸಂದರ್ಭದಲ್ಲಿ) ಇರುತ್ತದೆ. ಈ ವಸ್ತುಗಳು ವಂಶಪಾರಂಪರ್ಯವಾಗಿ ಮರಿದಾಸಯ್ಯನಿಗೆ ಸಿಗುತ್ತವೆ. ಇಲ್ಲದಿದ್ದರೆ ತಿರುಪತಿಗೆ ಹೋದಾಗ ಕೊಂಡು ತಂದಿಟ್ಟುಕೊಳ್ಳುತ್ತಾರೆ.

ಇವರು ಮೂಲತಃ ಭಿಕ್ಷುಕರಲ್ಲ, ವ್ಯವಸಾಯಗಾರರು. ದುಡಿಮೆ ಮಾಡುವವರಾಗಿದ್ದು, ಪ್ರತಿ ಶನಿವಾರಗಳಂದು ಮತ್ತು ಶ್ರಾವಣ ಮಾಸಗಳಲ್ಲಿ ಉಪಾದಾನ ಮಾಡುವುದು, ಪೂಜೆಗಳನ್ನು ನಡೆಸುವುದು ಈ ಕಾರ್ಯಗಳನ್ನು ಮಾಡುತ್ತಾರೆ. ಇವರುಗಳಿಗೆ 'ಶನಿವಾರ' ಬಹಳ ಮುಖ್ಯವಾದ ಮತ್ತು ಪವಿತ್ರವಾದ ದಿನ. ತಮ್ಮ ಒಕ್ಕಲಿನವರ ಮನೆಗಳ ಹುಟ್ಟು, ಸೂತಕ, ಮದುವೆ, ಗೃಹಪ್ರವೇಶ, ಇತ್ಯಾದಿಗಳ ಸಂದರ್ಭಗಳಲ್ಲಿ ಇವರದು ಬಹಳ ಪ್ರಮುಖವಾದ ಪಾತ್ರ, ಇವುಗಳಲ್ಲದೆ ಬೇರೆ ಬೇರೆ ಹಬ್ಬ-ಹರಿದಿನಗಳಲ್ಲಿ ಬೇರೆಯವರು ಮನೆಗಳು ಪೂಜೆ ಇತ್ಯಾದಿಗಳನ್ನು ಏರ್ಪಡಿಸಿದ್ದರೆ, ಮಹಾಲಯ ಅಮಾವಾಸ್ಯೆ ಅಥವಾ ಪಿತೃಪಕ್ಷ ಇತ್ಯಾದಿಗಳಲ್ಲಿ ಎಡೆ ಇಟ್ಟು ಪೂಜೆ ಸಲ್ಲಿಸುವ ಸಂದರ್ಭದಲ್ಲಿ ಇವರ ಹಾಜರಾತಿ ಬಹಳ ಮುಖ್ಯವಾಗಿರುತ್ತದೆ. ಅಂದು ಪೂಜೆ ಸಲ್ಲಿಸಿದ ಮೇಲೆ ಅಲ್ಲಿಯೇ ಊಟ ಮುಗಿಸಿ, ತಮ್ಮ ಬೋನಾಸಿಗೆ ತುಂಬಿಸಿದ ಊಟವನ್ನು ತೆಗೆದುಕೊಂಡು ತಮ್ಮ ಮನೆಗೆ ಹೋಗುತ್ತಾರೆ. ಈ ರೀತಿ ಬೇರೆ ಬೇರೆ ಮನೆಗಳಿಂದ ತಂದ ಊಟವನ್ನು ಇತರರೊಂದಿಗೆ ಹಂಚಿ ಊಟ ಮಾಡುತ್ತಾರೆ. ಕೆಲವು ಸಂದರ್ಭಗಳಲ್ಲಿ ತಮ್ಮ ಅಕ್ಕಪಕ್ಕದ ಮನೆಗಳವರಿಗೆ ಹಂಚಿಬಿಡುತ್ತಾರೆ. ಈ ಬಗೆಯ ಊಟಗಳೆಲ್ಲವೂ ಹೆಚ್ಚಾಗಿ ಮಾಂಸದಡುಗೆಯ ಊಟವೇ ಆಗಿರುತ್ತವೆ.

ಹಬ್ಬ-ಹರಿದಿನ, ಪೂಜೆ-ಪುನಸ್ಕಾರ ಇತ್ಯಾದಿ ಸಂದರ್ಭಗಳಲ್ಲಿ ದಾಸಯ್ಯನಿಗೆ ವಿಶೇಷ ಗೌರವ-ಉಪಾಚಾರ ದೊರೆತರೂ, ಇನ್ನು ಮಿಕ್ಕ ದಿನಗಳಲ್ಲಿ ಇದೇ ರೀತಿಯ ಉಪಚಾರ ದೊರೆಯುತ್ತದೆ ಎಂದು ಭಾವಿಸುವಂತಿಲ್ಲ. ಅವನ ಬಗೆಗೆ ಹಲವು ಉಪೇಕ್ಷೆಯ, ವ್ಯಂಗ್ಯದ ಮಾತು-ಗಾದೆಗಳಿಗೂ ಬರವಿಲ್ಲ. 'ಆಸಾದಿಗ್ಯಾಕೆ ಆರಂಭ-ದಾಸಯ್ಯನಿಗ್ಯಾಕೆ ದನಕರ' ಎಂಬ ಮಾತು, 'ಎರಡು ಕಣಕಾಯ್ದು ದಾಸಯ್ಯ ಕೆಟ್ಟ', ಎಂಬ ಗಾದೆ, 'ದಂಡಿಗಂಜಲಿಲ್ಲ ದಾಳಿಗಂಜಲಿಲ್ಲ, ದಾಸಯ್ಯ ನಿನ್ನ ಜಾಗಟೆಗಂಜ್ತೀನಾ' ಎಂಬ ಉಪೇಕ್ಷೆಯ ಮಾತುಗಳು ಈ ಅಂಶಗಳನ್ನು ಸ್ಪಷ್ಟಪಡಿಸುತ್ತವೆ. ಬಹುತೇಕ ದಾಸಯ್ಯಗಳು ಆರ್ಥಿಕವಾಗಿ ದುರ್ಬಲರು. 'ದಾಸಯ್ಯನ ಮನೆಗೆ ದಾಸಪ್ಪ ಹೋದ್ರೆ ನಂದಾಸಪ್ಪ, ನಿಂದೊದಿಸಪ್ಪ' ಎಂದ ಗಾದೆ ಮಾತು ಇದನ್ನು ಚೆನ್ನಾಗಿ ವಿವರಿಸುತ್ತದೆ.

ಬಿ) ಜೋಗಯ್ಯ

ಶೈವ ಶೂದ್ರ ಜನಪದರ ಗುರುಗಳಾಗಿ ಕಾರ್ಯನಿರ್ವಹಿಸುವ ಜೋಗಯ್ಯರು, ವೈಷ್ಣವ ಪರಂಪರೆಯಲ್ಲಿ ದಾಸಯ್ಯಗಳು ನಿರ್ವಹಿಸುವ ಎಲ್ಲಾ ಕಾರ್ಯಗಳನ್ನು ತಮ್ಮ

ಒಕ್ಕಲಿನವರ ಮನೆಗಳಲ್ಲಿ ನಿರ್ವಹಿಸುತ್ತಾರೆ. ವೇಷಭೂಷಣಗಳಲ್ಲಿ ಪೂರ್ಣವಾಗಿ ದಾಸಯ್ಯರಿಗಿಂತ ಭಿನ್ನರಾಗಿರುತ್ತಾರೆ. ಬಿಳಿ ಜುಬ್ಬ, ಬಿಳಿಪಂಚೆ, ಕೊರಳಿಗೆ ರುದ್ರಾಕ್ಷಿ ಮಾಲೆ ಧರಿಸಿರುವ ಇವರು ಚಿಕ್ಕದಾದ ಪ್ರಾಣಿಯ ಕೊಂಬಿನ ರೂಪದ ವಾದ್ಯವೊಂದನ್ನು ನುಡಿಸಲು ಬಳಸುತ್ತಾರೆ. ಭಾನುವಾರ, ಸೋಮವಾರ ಇವರಿಗೆ ಮುಖ್ಯವಾದ ದಿನಗಳಾಗಿದ್ದು, ಪೂಜೆ, ಎಡೆ ಇತ್ಯಾದಿಗಳಿಗೆ ಮಾಂಸಾಹಾರದ ಅಡುಗೆ ಬಡಿಸುವುದಕ್ಕಿಂತ ಹೆಚ್ಚು ಶಾಖಾಹಾರದ ಅಡುಗೆ ಬಡಿಸುತ್ತಾರೆ. ಕೆಲವು ವಿಶೇಷ ಸಂದರ್ಭಗಳಲ್ಲಿ ಅಂದರೆ ನಾಮಕರಣ, ಶ್ರಾದ್ಧ ಇತ್ಯಾದಿಗಳಲ್ಲಿ ಜನರು ದಾಸಯ್ಯ–ಜೋಗಯ್ಯ ಇಬ್ಬರನ್ನು ಆಹ್ವಾನಿಸಿ, ಅವರಿಂದ ಪೂಜಾ ಕೈಂಕರ್ಯಗಳನ್ನು ನಡೆಸಿ ಇವರಿಗೆ ಗೌರವ ತೋರಿಸುತ್ತಾರೆ. ಇವರುಗಳೂ ಪೂರ್ಣವಾಗಿ ಜೀವನೋಪಾಯಕ್ಕೆ 'ಜೋಗಯ್ಯ' ವೃತ್ತಿಯನ್ನೇ ಅವಲಂಬಿಸದೆ, ವ್ಯವಸಾಯದ ಕೆಲಸ ಮತ್ತು ಇನ್ನಿತರ ಕೆಲಸ ಕಾರ್ಯಗಳನ್ನು ಮಾಡುತ್ತಾರೆ. ಇವರು ಸಸ್ಯಾಹಾರಿಗಳೂ ಹೌದು–ಮಾಂಸಾಹಾರಿಗಳೂ ಹೌದು.

ಮೇಲುಕೋಟೆ ಪ್ರಸಿದ್ಧ ವೈಷ್ಣವ ಕ್ಷೇತ್ರವಾಗಿರುವುದರಿಂದ ಇಲ್ಲಿ ವಿಷ್ಣು ಅನುಯಾಯಿಗಳ ಸಂಖ್ಯೆ ಹೆಚ್ಚು. ಈ ಕಾರಣದಿಂದ ದಾಸಯ್ಯಗಳ ಸಂಖ್ಯೆಯೂ ಸಾಕಷ್ಟಿದೆ. ಜೋಗಯ್ಯಗಳ ಸಂಖ್ಯೆ ತೀರಾ ಕಡಿಮೆ. ಸ್ಥಳೀಯ ದಾಸಯ್ಯರು ಶನಿವಾರಗಳು ಮತ್ತು ಶ್ರಾವಣ ಶನಿವಾರಗಳಂದು ಉಪಾದಾನ, ಪೂಜೆ ಇತ್ಯಾದಿಗಳನ್ನು ನೆರವೇರಿಸುತ್ತಾರೆ. ಮೇಲುಕೋಟೆ ಸುತ್ತಮುತ್ತಲಿನ ಗ್ರಾಮಗಳಲ್ಲಿನ ದಾಸಯ್ಯಗಳು ಪ್ರತಿ ಶನಿವಾರಗಳಂದು, ವಿಶೇಷ ಹಬ್ಬ–ಹರಿದಿನ ಉತ್ಸವಗಳಂದು ಮತ್ತು ಶ್ರಾವಣ ಮಾಸದಲ್ಲಿ–ಮೇಲುಕೋಟೆಗೆ ಬಂದು ಭಿಕ್ಷೆ ಬೇಡುತ್ತಾರೆ. ಮುಖ್ಯ ದೇವಾಲಯವಾದ ಚೆಲುವನಾರಾಯಣ ಆಲಯದ ಪ್ರವೇಶದ್ವಾರದ ಇಬ್ಬಾಗಗಳಲ್ಲಿ, ಬೆಟ್ಟದ ಮೇಲಿನ ಯೋಗಾನರಸಿಂಹಸ್ವಾಮಿಯ ದೇವಾಲಯಕ್ಕೆ ಹೋಗುವ ಬೆಟ್ಟದ ಮೇಲಿನ ಮೆಟ್ಟಿಲುಗಳ ಎರಡು ಬದಿಗಳಲ್ಲಿ ಮತ್ತು ಕಲ್ಯಾಣಿ ಕೊಳದ ದಡಗಳಲ್ಲಿ ಇವರು ಹೆಚಿದ್ದು, ಭಕ್ತರಿಂದ ಕಾಣಿಕೆ ಕೇಳಿ ಪಡೆಯುತ್ತಾರೆ. ಕೊಳದ ಬಳಿ ಇರುವ ದಾಸಯ್ಯಗಳು ಭಕ್ತರುಗಳು ಹರಕೆ ಹೊತ್ತು ಬಂದು ಕೊಳಕ್ಕೆ ಪೂಜೆ ಸಲ್ಲಿಸುವ ಕಾರ್ಯ ಮಾಡುತ್ತಿದ್ದರೆ ಅದಕ್ಕೆ ಶಂಖ, ಜಾಗಟೆ, ಬಾನಕಿಯ ಶಬ್ದ ಮಾಡಿ, ಪೂಜೆಯಲ್ಲಿ ಸಹಕರಿಸುತ್ತಾರೆ. ಹಾಗೆಯೇ ಹರಕೆ ಮತ್ತು ತಲೆಮುಡಿಕೊಟ್ಟು ಸ್ನಾನ ಮಾಡಿದ ಭಕ್ತರಿಗೆ ಹಣೆಯ ಮೇಲೆ ಬಿಳಿ ಮತ್ತು ಕೆಂಪು ಬಣ್ಣ ಹಂಚಿ ಹಣ ಪಡೆಯುತ್ತಾರೆ. ಈ ರೀತಿಯ ಬೇರೆ ಊರಿನಿಂದ ಬರುವ ದಾಸಯ್ಯಗಳು ಬಹುತೇಕ ವರ್ಷದ ಎಲ್ಲಾ ದಿನಗಳಲ್ಲೂ ಮೇಲುಕೋಟೆಗೆ ಬಂದು ಭಿಕ್ಷೆ, ದಾನ ಸ್ವೀಕರಿಸಿ ಜೀವನ ಹೊರೆಯುತ್ತಾರೆ. ಬಹುತೇಕ ಇವರಿಗೆ ಇದೇ ಜೀವನೋಪಾಯವಾಗಿದೆ. ಮೇಲುಕೋಟೆಯಲ್ಲಿಯೇ ಮನೆಗಳು ಮತ್ತು ಬೇರೆಡೆ ನಡೆಯುವ ಆಚರಣೆಗಳಿಗೆ ಇವರನ್ನು ಹೆಚ್ಚು ಆಹ್ವಾನಿಸದೆ ಹಾಲಿ

ಮೇಲುಕೋಟೆಯಲ್ಲಿನ ದಾಸಯ್ಯಗಳನ್ನು ಕರೆಸಿ ಈ ಆಚರಣೆಗಳನ್ನು ನಡೆಸುತ್ತಾರೆ. ಜೋಗಯ್ಯಗಳಂತೂ ಯಾವ ಊರಿನಿಂದಲೂ ಬರುವುದಿಲ್ಲ. ಮೇಲುಕೋಟೆಯಲ್ಲಿಯೇ ತೀರಾ ಅಪರೂಪವೆನ್ನುವಂತೆ ಬೆರಳೆಣಿಕೆಯಷ್ಟು ಮಂದಿ ಮಾತ್ರ ಇದ್ದಾರೆ.

2. ಶ್ರಾವಣ ಶನಿವಾರದ ಆಚರಣೆ

ವೈಷ್ಣವ ಪಂಥದ ಅನುಯಾಯಿಗಳಿಗೆ ಶ್ರಾವಣ ಮಾಸ ಅತ್ಯಂತ ಮಹತ್ವಪೂರ್ಣವಾದುದು. ವರ್ಷಕ್ಕೊಮ್ಮೆ ಬರುವ ಈ ಮಾಸದಲ್ಲಿ 4–5 ಶನಿವಾರಗಳು ಬರುತ್ತವೆ. ಈ ಶನಿವಾರಗಳಂದು ದಾಸಪಂಥದವರು ಮನೆಯನ್ನು ಶುಭ್ರಗೊಳಿಸಿ, ಮಡಿಮಾಡಿದ ವಸ್ತ್ರಗಳನ್ನು ಸ್ನಾನ ಮಾಡಿ ಧರಿಸುವರು. ಗಂಡುಮಕ್ಕಳು ಹಣೆಗೆ ಎರಡು ಬಿಳಿ ನಡುವೆ ಕೆಂಪು ನಾಮ ಧರಿಸುವರು. ಹೆಣ್ಣು ಮಕ್ಕಳು ಒಂದು ಕೆಂಪು ನಾಮವನ್ನು ಧರಿಸುವರು. ಕಂಚು ಅಥವಾ ಹಿತ್ತಾಲೆ, ಇತ್ತೀಚೆಗೆ ಸ್ಟೀಲ್ ಲೋಹದ ಚೆಂಬನ್ನು ತೊಳೆದು ಅದಕ್ಕೆ ಮೂರು ನಾಮ ಹಚ್ಚಿ ಅದರಲ್ಲಿ ಹತ್ತಾರು ಮನೆಗಳಿಗೆ ಹೋಗಿ ಉಪಾದಾನ ಬೇಡುವರು. ಅಲ್ಲಿ ದೊರೆತ ಆಹಾರ ಪದಾರ್ಥಗಳಿಂದ ಅಂದು ಸಂಜೆ ಅಡುಗೆ ಮಾಡಿ ಊಟ ಮಾಡುವರು. ಈ ಭಿಕ್ಷಾಟನೆಗೆ ಯಾವ ಸಂಕೋಚ ನಾಚಿಕೆಯನ್ನು ಅಂದು ಪಡುವುದಿಲ್ಲ. ಅದೊಂದು ಪವಿತ್ರವಾದ ಕಾರ್ಯವೆಂದು ಬಗೆದು ಅದನ್ನು ಆಚರಿಸುವರು. ಭಿಕ್ಷೆ ಬೇಡುವ ಸಂದರ್ಭದಲ್ಲಿ ಅಂಗಡಿ ಮುಂಗಟ್ಟುಗಳವರು ಹಣ, ಗಂಧದಕಡ್ಡಿ, ಕರ್ಪೂರ, ಬಾಳೆಹಣ್ಣು ಇತ್ಯಾದಿಗಳನ್ನು ನೀಡಿದರೆ, ಮನೆಗಳಲ್ಲಿ ಅವರು ಅಕ್ಕಿ, ರಾಗಿಯ ಹಿಟ್ಟು ಇನ್ನಿತರೆ ಆಹಾರ ಪದಾರ್ಥಗಳನ್ನು ನೀಡುವರು. ಈ ದಿನದಂದು ಬಹುತೇಕವಾಗಿ ಹಿರಿಯರು, ವಯಸ್ಕರು, ಮಕ್ಕಳು ಎಂಬ ಭೇದ ಭಾವವಿಲ್ಲದೆ ಈ ಕಾರ್ಯ ನಡೆಸುವರು. ಈ ಮಾಸದಲ್ಲಿ ಮಾಂಸಾಹಾರ ಬಹುತೇಕ ನಿಷಿದ್ಧವಾಗಿದೆ. ಮಾಂಸಾಹಾರಿಗಳು ಕಟ್ಟುನಿಟ್ಟಾಗಿ ಶಾಖಾಹಾರವನ್ನೇ ಸೇವಿಸುವರು. ಕೆಲವೊಂದು ಮನೆಗಳಲ್ಲಿ ಶನಿವಾರಗಳಂದು ಪೂಜೆಯನ್ನು ಏರ್ಪಡಿಸಿ ಅಂದು ಮಾಂಸಾಹಾರದ ಅಡುಗೆಯನ್ನು ಎಡಗೈಲಿ ಅರ್ಪಿಸುವರು. ಇದು ತುಂಬಾ ವಿರಳವಾಗಿ ಆಚರಣೆಯಲ್ಲಿದೆ. ಈ ಶ್ರಾವಣ ಶನಿವಾರಗಳಂದೇ ಮಣೆಸೇವೆ–ಹರಿಸೇವೆಗಳನ್ನು ಸಲ್ಲಿಸುವರು.

3. ಕಾರ್ತಿಕ ಸೋಮವಾರ ಆಚರಣೆ

ಶೈವ ಪರಂಪರೆಯ ಜನಪದರು, ಜೋಗಯ್ಯರನ್ನು ಗುರುಗಳಾಗಿ ಹೊಂದಿರುವವರು ಕಾರ್ತಿಕ ಮಾಸದಲ್ಲಿ ಬರುವ ಸೋಮವಾರಗಳಂದು ವಿಶೇಷ ಪೂಜೆ–ಭಕ್ತಿ ಸಲ್ಲಿಸುವರು. ಅಂದು ಮನೆಯನ್ನು ಗುಡಿಸಿ, ಸಾರಿಸಿ ಸ್ವಚ್ಛಗೊಳಿಸಿ, ಸ್ನಾನ ಮಾಡಿ ಮಡಿವಸ್ತ್ರ ಧರಿಸುವರು. ಹಣೆಗೆ ಅಡ್ಡಪಟ್ಟೆಯ ರೀತಿ ವಿಭೂತಿ ಹಚ್ಚಿಕೊಳ್ಳುವರು. ವೈಷ್ಣವರಂತೆ ಮನೆ ಮನೆಗಳಿಗೆ

ಹೋಗಿ ಭಿಕ್ಷೆ/ಉಪಾದಾನ ಬೇಡುವ ಆಚರಣೆ ಇವರಲಿಲ್ಲ. ಮಾಂಸಾಹಾರಿಗಳಾಗಿದ್ದರೂ ಈ ಮಾಸದಲ್ಲಿ ಇವರಿಗೆ ಮಾಂಸಾಹಾರ ನಿಷಿದ್ಧ. ಈ ದಿನಗಳಂದು ವಿಶೇಷವಾಗಿ ಧರ್ಮಸ್ಥಳ, ನಂಜನಗೂಡು, ಮಹದೇಶ್ವರಬೆಟ್ಟ ಇತ್ಯಾದಿ ಶೈವ ಪುಣ್ಯಸ್ಥಳಗಳಿಗೆ ಭೇಟಿ ಮಾಡಿ ಪೂಜೆ ಸಲ್ಲಿಸಿ ಬರುವರು. ಮಧ್ಯಾಹ್ನ-ರಾತ್ರಿ ಪೂಜೆಯಾಗುವವರೆಗೆ ಬಹುತೇಕ ಹೆಂಗಸರು ಉಪವಾಸವಿದ್ದು, ನಂತರ ಊಟಮಾಡುತ್ತಾರೆ. ಮೇಲುಕೋಟೆಯಲ್ಲಿ ಮಗ್ಗದಶೆಟ್ಟರಲ್ಲಿ ವಿಶೇಷವಾಗಿ ಈ ಆಚರಣೆ ಇದೆ. ಈ ಹಬ್ಬದಂದು ಸಿಹಿ ಊಟದ ಅಡುಗೆ ಮಾಡುವರು.

4. ಮಣೆಸೇವೆ

ಈ ಆಚರಣೆ ವಿಶೇಷವಾಗಿ ವೈಷ್ಣವ ಧರ್ಮೀಯರಲ್ಲಿ ಕಾಣಬರುತ್ತದೆ. ಮೇಲುಕೊಟೆಯಲ್ಲಿ ಈ ಆಚರಣೆಗಳು ಮೇಲಿಂದ ಮೇಲೆ ನಡೆಯುತ್ತಿರುತ್ತವೆ. ಹರಕೆ ಹೊತ್ತ ಜನಪದರು ಚೆಲುವನಾರಾಯಣ ದೇವಾಲಯದ ಮುಂದೆ ಮತ್ತು ಅಕ್ಕಪಕ್ಕದ ಬದಿಗಳಲ್ಲಿ ಈ ಸಂಪ್ರದಾಯ ನಡೆಸುತ್ತಾರೆ. ಆ ದಿವಸದಂದು ಮಡಿಯಿಂದ ಮನೆಯಲ್ಲಿ ವಿಶೇಷ ಪೂಜೆ ಸಲ್ಲಿಸುತ್ತಾರೆ. ಆ ನಂತರ ದೇವಸ್ಥಾನದ ಹತ್ತಿರ ಬರುತ್ತಾರೆ. ಈ ಕಾರ್ಯಕ್ಕೆ ಮೊದಲೇ ದಾಸಯ್ಯರಿಗೆ ಹೇಳಿಕೊಂಡಿರುತ್ತಾರೆ. ಮುಖ್ಯ ದಾಸಯ್ಯನೊಂದಿಗೆ 4–5 ಇತರೆ ದಾಸಯ್ಯಗಳೂ ಅಲ್ಲಿಗೆ ಬರುತ್ತಾರೆ. ಮಡಿಯಾದ ಬಿಳಿ ಬಟ್ಟೆಯನ್ನು ನೆಲದ ಮೇಲೆ ಹಾಸುತ್ತಾರೆ. ಅದರ ಮಧ್ಯೆ ಭಾಗ ಮತ್ತು ನಾಲ್ಕು ಮೂಲೆಗಳಲ್ಲಿ ತೆಂಗಿನಕಾಯಿ, ಬಾಳೆಹಣ್ಣು, ಪುರಿ, ಬೆಲ್ಲ ಇತ್ಯಾದಿಗಳನ್ನು ಹಾಕಿ ಸಿದ್ದಪಡಿಸಿದ ತಿಂಡಿಯನ್ನು ಗುಡ್ಡೆ ಹಾಕಿರುತ್ತಾರೆ. ದಾಸಯ್ಯಗಳು ಅದರ ಸುತ್ತ ನೆರೆಯುತ್ತಾರೆ. ಮುಖ್ಯ ದಾಸಯ್ಯನ ಮೇಲೆ ದೇವರು ಆವಾಹನೆಯಾದ ರೀತಿ ಹೂಂಕರಿಸುತ್ತಾ, ತೂಗುತ್ತಾ, ಕಪ್ಪೆಯಂತೆ ಅದರ ಸುತ್ತ ಕುಪ್ಪಳಿಸಲು ಪ್ರಾರಂಭಿಸುತ್ತಾನೆ. ಉಳಿದ ದಾಸಯ್ಯಗಳು ಆತ ಪ್ರಸಾದ ತಿನ್ನದಂತೆ ತಡೆಯಲು ಪ್ರಾರಂಭಿಸುತ್ತಾರೆ. ಈ ರೀತಿಯ ಆಟ ಸುಮಾರು ಹೊತ್ತಿನವರೆಗೆ ನಡೆಯುತ್ತದೆ. ಸುತ್ತ ಪ್ರೇಕ್ಷಕರಂತೆ ನಿಂತ ಜನರು ವಿಶೇಷ ಚಪ್ಪಾಳೆ, ಉತ್ತೇಜನ ಮಾತುಗಳಿಂದ ಪ್ರೋತ್ಸಾಹಿಸುತ್ತಾರೆ. ಕೊನೆಗೆ ಬೇರೆ ದಾಸಯ್ಯಗಳ ಅಡ್ಡಿಪಡಿಸುವಿಕೆಯನ್ನು ನಿವಾರಿಸಿ, ಮುಖ್ಯ ದಾಸಯ್ಯನು, ಹಾಕಿರುವ ಮಧ್ಯೆ ಗುಡ್ಡದ ಮೇಲೆ ಮುಖ ಹಾಕಿ ತಿನ್ನುತ್ತಾನೆ. ಆತ ತಿಂದ ನಂತರ ಉಳಿದ ನೈವೇದ್ಯವನ್ನು ಪ್ರಸಾದವೆಂಬಂತೆ ಇತರ ದಾಸಯ್ಯಗಳು ತಿನ್ನುತ್ತಾರೆ. ಆನಂತರ ಅಲ್ಲಿ ನೆರೆದಿರುವವರೆಗೆ ಪ್ರಸಾದ ವಿತರಣೆಯಾಗುತ್ತದೆ.

ಮೊದಲ್ಲೆಲ್ಲಾ ದಾಸಯ್ಯಗಳು ಬಟ್ಟೆಯ ಮೇಲಿನ ಪ್ರಸಾದಕ್ಕೆ ಅಂಗಾತ ಮಲಗಿ ಬಾಯಿ ಹಾಕಿ ತಿನ್ನುತ್ತಿದ್ದರು. ಅವರು ತಿಂದು ಉಳಿದ ಭಾಗವನ್ನು ಪ್ರಸಾದವೆಂಬಂತೆ ಭಕ್ತರು ಸ್ವೀಕರಿಸುತ್ತಿದ್ದರು. ಮೇಲುಕೋಟೆಯಲ್ಲಿ ಈಗ ಈ ಪದ್ಧತಿ ಬದಲಾಗಿದೆ. ಕಾಲ ಬದಲಾದಂತೆ

ಸ್ವಚ್ಛತೆಯ ಅರಿವು ಅವರಿಗೆ ಬಂದಿದೆ. ಅಂಗಾತ ಮಲಗಿ ಬಾಯಲ್ಲಿ ತಿನ್ನುವ ಬದಲು ಕೈಯಲ್ಲಿ ತೆಗೆದುಕೊಂಡು ತಿನ್ನುತ್ತಾರೆ. ಉಳಿದ ಭಾಗವನ್ನು ಇತರೆ ಭಕ್ತರು ಸೇವಿಸುತ್ತಾರೆ.

ಈ ರೀತಿ 'ಮಣೆಸೇವೆ' ಆದ ನಂತರ ದಾಸಯ್ಯಗಳಿಗೆ ಊಟ ನೀಡಿ, ಎಲೆ ಅಡಿಕೆ ಕೊಟ್ಟು, ದಕ್ಷಿಣೆ ನೀಡುತ್ತಾರೆ. ಇದನ್ನು ಆಚರಿಸಿದ ಮನೆಯವರು ದೈವವನ್ನು ಪೂಜಿಸಿ, ತೃಪ್ತಿಪಡಿಸಿದೆವು ಎಂಬ ಧನ್ಯತಾಭಾವವನ್ನು ಹೊಂದುತ್ತಾರೆ. ಚೆಲುವನಾರಾಯಣಸ್ವಾಮಿ ರಥೋತ್ಸವದಂದು ಮೇಲುಕೋಟೆಯಲ್ಲಿ ಈ ಆಚರಣೆ ಹೆಚ್ಚು.

ಹರಿಸೇವೆ

'ಹರಿಸೇವೆ'ಯೂ ಸಹ ವೈಷ್ಣವ ಪಂಥದ ಅನುಯಾಯಿಗಳು ಕೂಡಿ ಆಚರಿಸುವ ಆಚರಣೆಯಾಗಿದೆ. ಸೋಮವಾರ, ಗುರುವಾರಗಳನ್ನು ಹೊರತುಪಡಿಸಿ, ವಿಶೇಷವಾಗಿ ತಿರುಪತಿ ತಿಮ್ಮಪ್ಪನ ವಾರವಾದ ಶನಿವಾರದಂದೇ 'ಹರಿಸೇವೆ'ಯ ಆಚರಣೆಯನ್ನು ಹೆಚ್ಚು ಮಾಡುತ್ತಾರೆ. ವಾರದ ಬೇರೆ ದಿನಗಳಲ್ಲಿ ಇದನ್ನು ಆಚರಿಸಿದರೂ ಶನಿವಾರಕ್ಕೆ ವಿಶೇಷವಾದ ಮಹತ್ವವಿದೆ. ಮೊದಲೇ ತಿಮ್ಮಪ್ಪನಿಗೋ, ಚೆಲುವನಾರಾಯಣನಿಗೋ, ನರಸಿಂಹನಿಗೋ ಅರಕೆ ಹೊತ್ತಿದ್ದ ಭಕ್ತರು, ಆ ದಿನದಂದು ಮನೆಯನ್ನು ಗುಡಿಸಿ, ಸಾರಿಸಿ ಸ್ವಚ್ಛಗೊಳಿಸಿ, ತಾವು ಮಿಂದು ಮಡಿಯುಟ್ಟು, ಈ ಸೇವೆಗೆ ಅಗತ್ಯವಾದ ಧವಸಧಾನ್ಯ, ಪಾತ್ರೆ ಪಗಡ, ಕುರಿ-ಕೋಳಿಗಳನ್ನು ತೆಗೆದುಕೊಂಡು ತಮ್ಮ ನೆಂಟರಿಷ್ಟರು, ಬಂಧು-ಬಳಗದೊಂದಿಗೆ ದೇವಾಲಯಕ್ಕೆ ಆಗಮಿಸುತ್ತಾರೆ. ಅಲ್ಲಿ ಶಾಸ್ತ್ರೋಕ್ತ ಪೂಜೆ ಸಲ್ಲಿಸಿ, ದೇವಾಲಯದ ಹೊರಗೆ, ಸ್ವಲ್ಪ ದೂರದಲ್ಲಿ ಅಡಿಗೆ ಮಾಡಲು ಒಲೆ ಸಿದ್ದಪಡಿಸಿ, ಕುರಿ ಮೇಕೆ ಕೊಯ್ದು ಅಡುಗೆ ಸಿದ್ಧಪಡಿಸುತ್ತಾರೆ. 'ಮಾಂಸದಡುಗೆ' ಈ ಆಚರಣೆಯ ವಿಶೇಷತೆ, ಮುದ್ದೆ, ಅನ್ನ, ಮಾಂಸದ ಸಾರು, ಇತ್ಯಾದಿಗಳನ್ನು ಸಿದ್ಧಪಡಿಸಿ, ಎಡೆ ಇಕ್ಕಿ, ದಾಸಯ್ಯನನ್ನು ಕರೆದು ಪೂಜಿಸುತ್ತಾರೆ. ಮೊದಲು ಈ ದಾಸಯ್ಯರಿಗೆ ಉಣಬಡಿಸಿ, ಅವರನ್ನು ತೃಪ್ತಿ ಪಡಿಸಿದ ನಂತರ ನೆಂಟರಿಷ್ಟರು – ಬಂಧುಬಳಗದವರಿಗೆ ಊಟ ಹಾಕಿ ಆನಂತರ ತಾವು ಊಟ ಮಾಡುತ್ತಾರೆ. ಮಾಡಿದ ಅಡುಗೆಯೆಲ್ಲವನ್ನು ಅಲ್ಲಿಯೇ ಮುಗಿಸಿ, ಮಿಕ್ಕಿದ್ದರೆ ಭಿಕ್ಷುಕರಿಗೆ ನೀಡಿ, ಪಾತ್ರೆ-ಪಡಗ ತೊಳೆದು ಸಂಜೆ ವೇಳೆಗೆ ಮನೆಗೆ ಹೊಡುತ್ತಾರೆ. ಮಾಡಿದ ಅಡುಗೆಯನ್ನು ಉಳಿಸಬಾರದು, ಮನೆಗೆ ತೆಗೆದುಕೊಂಡು ಹೋಗಬಾರದು ಎಂಬ ನಂಬಿಕೆ ಇವರಲ್ಲಿದೆ. ಆರ್ಥಿಕವಾಗಿ ಸಬಲರಾಗಿರುವವರು ಕುರಿ, ಮೇಕೆಗಳನ್ನು ತಂದು ಕಡಿದು ಅಡುಗೆ ಮಾಡಿ ಪೂಜಿಸಿದರೆ, ಸಾಧಾರಣವಾಗಿರುವವರು ಕೋಳಿಗಳನ್ನು ತಂದು ಕುಯ್ದು, ಅಡುಗೆ ಮಾಡಿ ಪೂಜೆ ಸಲ್ಲಿಸುತ್ತಾರೆ. ಇದು ಶುಭಕರ, ದೈವವನ್ನು ತೃಪ್ತಿಪಡಿಸಿದೆವು. ತಮಗೆ, ತಮ್ಮ ಕುಟುಂಬಕ್ಕೆ ಮುಂದೆ ಒಳ್ಳೆಯದಾಗುತ್ತದೆ ಎಂಬ ಪ್ರಬಲ ನಂಬಿಕೆ ಅವರಲ್ಲಿದೆ.

5. ಶನಿಮಹಾತ್ಮನ ಕತೆ ಓದಿಸುವುದು

ಜನಪದರನ್ನು ಅತಿ ಹೆಚ್ಚು ಭಯ-ಭಕ್ತಿಗೆ ಒಳಪಡಿಸುವ ದೇವರು ಈ ಶನಿದೇವರು. ಅದರ ಕ್ರೂರದೃಷ್ಟಿಗೆ, ಕೋಪಕ್ಕೆ ಒಳಗಾಗಲು ಜನಪದರು ಅಂಜುತ್ತಾರೆ. ಅದನು ಸಂತೃಪ್ತಪಡಿಸಲು ಅದನ್ನು ಪೂಜಿಸುವುದು, ಆ ದೇವರ ಕಥೆ ಓದಿಸುವುದು, ಇತ್ಯಾದಿಗಳನ್ನು ಮಾಡುತ್ತಾರೆ. ಶನಿದೇವರನ್ನು ಮನೆದೇವರನ್ನಾಗಿ ಇಟ್ಟುಕೊಂಡು ಪೂಜೆ ಸಲ್ಲಿಸುವವರ ಸಂಖ್ಯೆ ತೀರಾ ಕಡಿಮೆ, ಇಲ್ಲವೆಂದೇ ಹೇಳಬೇಕು. ಆದರೆ ಈ ಕಥೆ ಹೇಳಲಿಕ್ಕೆ, ಈ ಆಚರಣೆ ನಡೆಸಿಕೊಡಲಿಕ್ಕೆ ಒಂದು ಗುರುಗಳ ತಂಡವಿರುತ್ತದೆ. ಅದನ್ನು ಆಹ್ವಾನಿಸಿ ರಾತ್ರಿಯೆಲ್ಲಾ ಈ ಕಥೆ ಹೇಳಿಸಿ, ತಾವು ಕೇಳಿ ಧನ್ಯರಾಗುತ್ತಾರೆ.

ಮೇಲುಕೋಟೆಯಲ್ಲಿ ಬ್ರಾಹ್ಮಣರನ್ನು ಹೊರುತಪಡಿಸಿ ಬಹುತೇಕ ಎಲ್ಲಾ ಜಾತಿ-ಜನಾಂಗದವರೂ ಈ ದೈವವನ್ನು ಪೂಜಿಸುತ್ತಾರೆ. ಪಟ್ಟಣದಲ್ಲಿ ಬಹಳ ದೊಡ್ಡದಾದ 'ಶನೇಶ್ವರಸ್ವಾಮಿ' ದೇವಸ್ಥಾನವೂ ಇದ್ದು, ಪ್ರತಿದಿನ ಅಲ್ಲಿ ಪೂಜೆ ನಡೆಯುತ್ತದೆ. ಹರಕೆ ಹೊತ್ತ ಜನಪದ ಭಕ್ತರು, ಕಥೆ ಓದಿಸುವ ದಿನದಂದು ಮಡಿ ಮಾಡಿಕೊಂಡು ಶುದ್ದರಾಗಿ ನೆಂಟರಿಷ್ಟರು – ಬಂಧು ಬಳಗದವರಿಗೆ ಹೇಳಿಕೊಂಡಿರುತ್ತಾರೆ. ಅಂದು ಸಂಜೆ ಬರುವ ಭಾಗವತರು ಶನೇಶ್ವರನ ಭಾವಚಿತ್ರಕ್ಕೆ ಹೂವಿನಹಾರ ಹಾಕಿ, ಪೂಜೆ ಸಲ್ಲಿಸಿ ಮಂಗಳವಾದ್ಯಗಳೊಂದಿಗೆ ಕಥನವನ್ನು ಪ್ರಾರಂಭಿಸುತ್ತಾರೆ. ಈ ಕಥನ ಬಹುತೇಕ ರಾತ್ರಿಯೆಲ್ಲಾ ನಡೆಯುತ್ತದೆ. ಶನಿಯ ಕ್ರೂರದೃಷ್ಟಿಗೆ ಬಿದ್ದ ವಿಕ್ರಮರಾಜ, ಅವನು ಪಟ್ಟ ಕಷ್ಟ ಕಾರ್ಪಣ್ಯಗಳು, ನಂತರ ಅವನ ಕೃಪಾಕಟಾಕ್ಷದಿಂದ, ಕಷ್ಟ ಪರಂಪರೆಯಿಂದ ಪಾರಾಗುವುದು-ಇತ್ಯಾದಿಗಳನ್ನು ಕಥಾನಕದಲ್ಲಿ ವರ್ಣಿಸಿ, ಇಲ್ಲಿ ನೆರೆದಿರುವ ಭಕ್ತರೆಲ್ಲರಿಗೂ ಶನಿಯ ಕೃಪೆ ಇರಲಿ ಎಂದು ಹಾರೈಸುತ್ತಾರೆ. ಕಥೆಯ ಉದ್ದಕ್ಕೂ ನಡು-ನಡುವೆ ಶನಿ ದೇವರ ಚಿತ್ರಕ್ಕೆ ಪೂಜೆ, ಎಳ್ಳುಬತ್ತಿಯ ಆರತಿ ಮಾಡುತ್ತಾರೆ. ಕಥಾನಕ ಪೂರ್ಣವಾಗುವವರೆಗೂ ನಿದ್ರಿಸಬಾರದೆಂಬ ಎಚ್ಚರಿಕೆ ಎಲ್ಲರಲ್ಲಿಯೂ ಇರುತ್ತದೆ. ಆ ಕಾರಣದಿಂದ ಯಾರೂ ನಿದ್ರಿಸುವುದಿಲ್ಲ, ತೂಕಡಿಸುವುದಿಲ್ಲ. ಕಥೆಯ ಕೊನೆಗೆ ಎಳ್ಳು-ಬೆಲ್ಲದ ಚಿಕಳಿಯನ್ನು, ಕಡಲೆಪುರಿ ಬಾಳೆಹಣ್ಣುಗಳನ್ನು ನೆರೆದಿದ್ದ ಭಕ್ತರಿಗೆಲ್ಲಾ ವಿತರಿಸುವರು.

ಹೀಗೆ, ಕಥೆ ಓದಿಸುವುದರಿಂದ ತಮ್ಮ ಕಷ್ಟಗಳು ಪರಿಹಾರವಾಗುವುವು ಎಂಬ ದೃಢನಂಬಿಕೆ ಅವರದು. ಪ್ರತಿವರ್ಷ ಈ ಆಚರಣೆಯನ್ನು ಕೆಲವರು ಸಂಪ್ರದಾಯದಂತೆ ಮುಂದುವರಿಸಿಕೊಂಡು ಬರುತ್ತಾರೆ. ಬೇರೆಲ್ಲಾ ಆಚರಣೆಗಳಿಗಿಂತ ಇದಕ್ಕೆ ಸುಮಾರು ಹಣ ಖರ್ಚಾಗುವುದರಿಂದ, ಸ್ವಲ್ಪ ಸ್ಥಿತಿವಂತರು ಮಾತ್ರ ಇದನ್ನು ನಡೆಸುತ್ತಾರೆ. ಆರ್ಥಿಕ ಚೈತನ್ಯವಿಲ್ಲದ ಬಡವರು, ಶ್ರೀಮಂತರ ಮನೆಗಳಲ್ಲಿ ನಡೆಯುವ ಈ ಆಚರಣೆಗಳಲ್ಲಿ

ಭಾಗವಹಿಸಿ ಧನ್ಯತಾಭಾವ ಹೊಂದುತ್ತಾರೆ. ಈ ದೇವರ ಬಗ್ಗೆ 'ಮನೇದೇವ್ರ ಮಾಡ್ದೆ ಹೋದ್ರೂ ಶನಿದೇವ್ರು ಮಾಡ್ದೆ ಇದ್ರೆ ಆಗಲ್ಲ', 'ರಾಮೇಶ್ವರಕ್ಕೂ ಹೋದರೂ ಶನೇಶ್ವರ ಬಿಡಲ್ಲ', 'ಸಾಯೋಗಂಟಾ ಶನಿಕಾಟ ಆದ್ರೆ ಬಾಳಾಟ ಮಾಡೋದು ಯಾವಾಗ'... ಎಂಬಿತ್ಯಾದಿ ಗಾದೆಗಳು ಬಳಕೆಯಲ್ಲಿವೆ.

6. ಮಾರಮ್ಮನ ಹಬ್ಬದ ಆಚರಣೆ

ಮೇಲುಕೋಟೆಯಲ್ಲಿನ 'ಬಿಸಿಲು ಮಾರಮ್ಮ' ಅಲ್ಲಿನ ಜನಪದರ ಮೆಚ್ಚಿನ ಗ್ರಾಮ ದೇವತೆಯಾಗಿದೆ. ವರ್ಷಕ್ಕೊಮ್ಮೆ ಈ ದೇವತೆಯ ಪೂಜೆ-ಉತ್ಸವಗಳು ನಡೆಯುತ್ತವೆ. ಬೇರೆ ಬೇರೆ ಹಬ್ಬ-ಹರಿದಿನಗಳಲ್ಲಿಯೂ ಜನಪದ ಭಕ್ತರು ಈ ದೇವಾಲಯಕ್ಕೆ ಹೋಗಿ ಪೂಜೆ ಸಲ್ಲಿಸಿ ಬರುತ್ತಾರೆ. ಜಾತಿ-ಮತ ಭೇದವಿಲ್ಲದೆ ಬಹುತೇಕ ಬ್ರಾಹ್ಮಣರನ್ನು ಹೊರತುಪಡಿಸಿ ಮಿಕ್ಕೆಲ್ಲಾ ಜಾತಿ-ಜನಾಂಗದವರು ಮಾರಮ್ಮನಿಗೆ ಪೂಜೆ ಸಲ್ಲಿಸಿ ಅದಕ್ಕೆ ನಡೆದುಕೊಳ್ಳುತ್ತಾರೆ. ಈ ದೇವತೆಗೆ ತಂಬಿಟ್ಟಿನ ಆರತಿ ಹೆಚ್ಚು ಸಲ್ಲಿಸುತ್ತಾರೆ. ವರ್ಷಕ್ಕೊಮ್ಮೆ ಮಾರಮ್ಮನ ಹಬ್ಬ ನಡೆದರೂ, ಮನೆಗಳಲ್ಲಿ ಮಕ್ಕಳಿಗೆ ಧಡಾರ, ಅಮ್ಮ, ಇತ್ಯಾದಿ ಕಾಯಿಲೆಗಳು ಕಾಣಿಸಿಕೊಂಡರೆ, ಮಾರಮ್ಮನಿಗೆ ಹರಸಿಕೊಂಡು, ವಾಸಿಯಾದ ಮೇಲೆ ಮಗುವನ್ನು ದೇವಾಲಯಕ್ಕೆ ಕರೆದುಕೊಂಡು ಹೋಗಿ, ಪೂಜೆ ಸಲ್ಲಿಸಿ, ಮೊಸರನ್ನದ ನೈವೇದ್ಯ ಮಾಡಿ, ಅಲ್ಲಿರುವವರಿಗೆ ಹಂಚಿ ಮನೆಗೆ ಬರುತ್ತಾರೆ.

ವರ್ಷಕ್ಕೊಮ್ಮೆ ನಡೆಯುವ 'ಮಾರಮ್ಮನ ಹಬ್ಬ'ದಲ್ಲಿ ಗುಡಿಗೆ ಸುಣ್ಣಬಣ್ಣ ಹೊಡೆಸಿ, ಬಣ್ಣದ ಕಾಗದ, ಹೂಗಳಿಂದ ಸಿಂಗರಿಸುತ್ತಾರೆ. ಜನಪದ ಭಕ್ತರು ಮಡಿಯಿಂದ ತಂಬಿಟ್ಟು ಇತ್ಯಾದಿಗಳನ್ನು ಮಾಡಿಕೊಂಡು ಬಂದು ತಟ್ಟೆಯಲ್ಲಿ ಬೇವಿನಸೊಪ್ಪು, ತಂಬಿಟ್ಟು ಅದರ ಮೇಲೆ ಹಚ್ಚಿದ ದೀಪವಿಟ್ಟುಕೊಂಡು ಬಂದ ದೇವರಿಗೆ ಪೂಜೆ ಸಲ್ಲಿಸುತ್ತಾರೆ. ಬೇವಿನಸೊಪ್ಪನ್ನು ದೇವಸ್ಥಾನದ ಹತ್ತಿರವೇ ಹಾಕಿ, ತಂಬಿಟ್ಟನ್ನು ಮಾತ್ರ ಮನೆಗೆ ತೆಗೆದುಕೊಂಡು ಹೋಗುತ್ತಾರೆ. ಮಾರಮ್ಮನಿಗೆ ಕುರಿ-ಮೇಕೆಗಳನ್ನು, ಕೋಳಿಗಳನ್ನು ಸಹ ಬಲಿಕೊಡುತ್ತಾರೆ. ಮಾಂಸದ ಅಡುಗೆಯನ್ನು ಮಾತ್ರ ಮನೆಯಲ್ಲಿ ಮಾಡಿಕೊಳ್ಳುತ್ತಾರೆ.

ಗ್ರಾಮಕ್ಕೆ ಬರುವ ಎಲ್ಲಾ ಕಷ್ಟ ಕಾರ್ಪಣ್ಯಗಳನ್ನೂ, ರೋಗ-ರುಜಿನಗಳನ್ನೂ ಈಕೆ ವಾಸಿ ಮಾಡುತ್ತಾಳೆ, ತಮ್ಮನ್ನು ಕಾಪಾಡುತ್ತಾಳೆ, ಮಳೆ-ಬೆಳೆ ಚೆನ್ನಾಗಿ ಆಗುವಂತೆ ನೋಡಿಕೊಳ್ಳುತ್ತಾಳೆ ಎಂಬ ನಂಬಿಕೆ ಇವರಲ್ಲಿದೆ. ಬರ ಬಂದರೆ, ರೋಗರುಜಿನಗಳು ಕಂಡರೆ ಮಾರಮ್ಮ ಕೋಪಿಸಿಕೊಂಡಿದ್ದಾಳೆಂದು ಭಾವಿಸಿ ವಿಶೇಷಪೂಜೆ, ಹರಕೆ, ಬಲಿ ಸಲ್ಲಿಸಿ ಅವಳನ್ನು ತೃಪ್ತಿ ಪಡಿಸುವ ಕಾರ್ಯ ಮಾಡುತ್ತಾರೆ. ಗ್ರಾಮದೇವತೆಯಾದ ಈಕೆಗೆ ಬಡವ-ಬಲ್ಲಿದ; ಮೇಲು-ಕೀಳು ಇತ್ಯಾದಿ ಭೇದ-ಭಾವವಿಲ್ಲದೆ ಎಲ್ಲರೂ ಸಮಾನ ಗೌರವ-

ಭಕ್ತಿಯಿಂದ ನಡೆದುಕೊಳ್ಳುತ್ತಾರೆ. ಬ್ರಾಹ್ಮಣವರ್ಗ ಈ ಶೂದ್ರ ದೇವತೆಯ ಬಗೆಗೆ ಅಂತಹ ಪ್ರೀತ್ಯಾದರಗಳನ್ನು-ಗೌರವಗಳನ್ನು ವ್ಯಕ್ತಪಡಿಸುವುದಿಲ್ಲ. ಇವರ ಆಚರಣೆಗಳ ಬಗೆಗೆ ಕೆಲವು ಬಾರಿ ಕುಹುಕ ಮತ್ತು ನಿರಾಸಕ್ತಿಯನ್ನು ವ್ಯಕ್ತಪಡಿಸುತ್ತಾರೆ.

7. ನಾಗರಚೌತಿ-ಪಂಚಮಿ ಆಚರಣೆ

ಅರಳೀಮರ, ಬೇವಿನಮರಗಳನ್ನು ಪೂಜಿಸುವುದರೊಂದಿಗೆ ನಾಗರಕಲ್ಲುಗಳನ್ನು ಪ್ರತಿಷ್ಠಾಪಿಸಿ, ಪೂಜಿಸುವ ಸಂಪ್ರದಾಯ ಜನಪದರಲ್ಲಿ ಮೊದಲಿನಿಂದಲೂ ಬೆಳೆದು ಬಂದ ಆಚರಣೆಯಾಗಿದೆ. ನಾಗರಹಾವನ್ನು 'ನಾಗರಾಜ', 'ನಾಗದೇವತೆ' ಎಂದು ಕರೆದು, ಭಾವಿಸಿ ಅದನ್ನು ಪೂಜಿಸುತ್ತಾರೆ. ನಾಗರಚೌತಿಯಂದು ಹರಕೆಹೊತ್ತು ಮಹಿಳೆಯರು ಸ್ನಾನ ಮಾಡಿ, ಮಡಿಯುಟ್ಟು ಹಾಲು, ಮೊಸರು, ಬೆಣ್ಣೆ, ತುಪ್ಪ, ಹೂ-ಹಣ್ಣುಗಳನ್ನು ತೆಗೆದುಕೊಂಡು ತಮ್ಮ ಸಮೀಪದ ಹುತ್ತಗಳ ಬಳಿ ತೆರಳುತ್ತಾರೆ. ಹುತ್ತಕ್ಕೆ ಅರಿಶಿಣ-ಕುಂಕುಮ ಹಚ್ಚಿ, ಹುತ್ತದ ಬಾಯೊಳಗೆ ಹಾಲು-ತುಪ್ಪ ಸುರಿಯುತ್ತಾರೆ. ಇದು ನಾಗದೇವತೆಗೆ ಸಿಗುತ್ತದೆ ಎಂಬ ನಂಬಿಕೆ ಅವರದು. ಆನಂತರ ಹುತ್ತಕ್ಕೆ ಪೂಜಿಸಿ ತನಿ ಎರೆದು ಮನೆಗೆ ಮರಳುತ್ತಾರೆ. ಮನೆಯಲ್ಲಿ ಅನ್ನ, ಸಾಂಬಾರು, ಪಲ್ಯ, ಪಾಯಸ ಮಾಡಿದ್ದು ಪೂಜೆ ಸಲ್ಲಿಸಿದ ನಂತರ ಅದನ್ನು ಊಟ ಮಾಡುತ್ತಾರೆ.

ಹಾಗೆಯೇ ಚರ್ಮಕಾಯಿಲೆಯವರು, ಮಕ್ಕಳಿಲ್ಲದವರು ವಿಶೇಷ ಹರಕೆ ಹೊತ್ತು ಹುತ್ತದ ಮಣ್ಣನ್ನು ದೇಹದ ಕಾಯಿಲೆ ಭಾಗಕ್ಕೆ ಲೇಪಿಸಿಕೊಳ್ಳುವ, ಕಲ್ಲು, ಬೆಳ್ಳಿ, ಚಿನ್ನ ಇತ್ಯಾದಿ ಲೋಹಗಳಲ್ಲಿ ನಾಗರಹಾವಿನ ಆಕೃತಿ ಕೆತ್ತಿಸಿಕೊಡುವ ಆಚರಣೆಯನ್ನು ನಡೆಸುತ್ತಾರೆ. 'ತನಿಎರೆಯುವ' ಆಚರಣೆಗಳು ನಾಗರಚೌತಿ ಹಾಗೂ ಷಷ್ಠಿ ಹಬ್ಬಗಳಂದು ನಡೆಯುತ್ತವೆ.

8. ಬಾಯಿಬೀಗ ಆಚರಣೆ

ಪ್ರತೀ ವರ್ಷ ಜರುಗುವ ವೈರಮುಡಿ ಉತ್ಸವದಲ್ಲಿ ಈ ಆಚರಣೆ ವಿಶೇಷವಾಗಿ ಕಂಡುಬರುತ್ತದೆ. ಕಿವುಡ, ಮೂಕರು ಮತ್ತು ಬೇರೆ ತರಹದ ಆರೋಗ್ಯ, ಆರ್ಥಿಕ, ಮಾನಸಿಕ ಸಮಸ್ಯೆಗಳನ್ನು ಎದುರಿಸುತ್ತಿರುವವರು ಈ ಹರಕೆ ಹೊರುತ್ತಾರೆ. ಉತ್ಸವದಂದು ತೆಳುವಾದ ಬೆಳ್ಳಿಯ ದಾರದಿಂದ ನಾಲಗೆಯ ಸಮೇತ ಎರಡು ತುದಿಗಳನ್ನು ಬಂಧಿಸಲಾಗುವುದು. ಈ ಆಚರಣೆ ರಾತ್ರಿಯೆಲ್ಲಾ ಇರುತ್ತದೆ, ಇದರಲ್ಲಿ ಹೆಚ್ಚಾಗಿ ಮಕ್ಕಳು ಮತ್ತು ಹೆಂಗಸರು ಭಾಗವಹಿಸುತ್ತಾರೆ. ಈ ರೂಪದಲ್ಲಿಯೇ ಪೂಜೆ ಪುನಸ್ಕಾರ ಇತ್ಯಾದಿಗಳನ್ನು ನೆರವೇರಿಸುತ್ತಾರೆ. ಇದು ಮುಗಿದ ಮೇಲೆ ಜೋಪಾನವಾಗಿ ಆ ಬೆಳ್ಳಿಯ ದಾರವನ್ನು ತೆಗೆದು

ತೊಳೆದು ದೇವಸ್ಥಾನದ ಹುಂಡಿಗೆ ಹಾಕುತ್ತಾರೆ. ಹೊರಗಿನಿಂದ ಬರುವ ಭಕ್ತರೇ ಈ ಆಚರಣೆಯನ್ನು ಹೆಚ್ಚು ಕೈಗೊಳ್ಳುತ್ತಾರೆ.

9. ಪರ ಮಾಡುವುದು

'ಪರ' – ಸಾಮೂಹಿಕ ಭೋಜನದ ಆಚರಣೆ. ಎಲ್ಲರಿಗೂ ಉಣಲು ಇಕ್ಕಿದರೆ, ಹಂಚಿಕೊಂಡು ಉಂಡರೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆಯಿಂದ ಈ ಆಚರಣೆ ಜನಪದರಲ್ಲಿ ಬೆಳೆದು ಬಂದಿದೆ. ವೈಷ್ಣವ ಮತಾನುಯಾಯಿಗಳು, ವರ್ಷದ ಕೆಲವು ದಿನಗಳಲ್ಲಿ ವಿಶೇಷವಾಗಿ ಬೇಸಿಗೆಯ ದಿನಗಳಲ್ಲಿ ಈ ಆಚರಣೆ ನಡೆಯುತ್ತದೆ. ಹರಕೆ ಹೊತ್ತ ಒಂದೇ ಮನೆಯವರು ಮಾಂಸದಡುಗೆಯನ್ನು ಸಿದ್ಧಪಡಿಸಿ ಬಂಧು–ಬಳಗ ಮತ್ತು ಊರಿನವರೆಗೆ ಊಟ ಬಡಿಸುತ್ತಾರೆ. ಮಾಂಸಾಹಾರಿಗಳಲ್ಲದವರು ಸಸ್ಯಾಹಾರದ ಊಟವನ್ನು ಸಿದ್ಧಪಡಿಸಿ ಬಡಿಸುತ್ತಾರೆ. ಕೆಲವು ಸಂದರ್ಭಗಳಲ್ಲಿ ಊರಿನ ಮನೆ–ಮನೆಗಳಿಂದ ಅಕ್ಕಿ, ರಾಗಿಹಿಟ್ಟು, ಕಾಳು–ಕಡ್ಡಿ, ಹಣ ಇತ್ಯಾದಿಗಳನ್ನು ಸಂಗ್ರಹಿಸಿ, ಒಂದೇ ಕಡೆ ಅಡುಗೆ ಮಾಡಿ ದೇವರಿಗೆ ಪೂಜೆ ಸಲ್ಲಿಸಿ ಸಾಮೂಹಿಕ ಭೋಜನ ನಡೆಸುತ್ತಾರೆ. ಹೀಗೆ ಪರ ಮಾಡುವುದರಿಂದ ತಮ್ಮ ಮನೆಗಳಿಗೆ, ಊರಿಗೆ ಒಳ್ಳೆಯದಾಗುತ್ತದೆ ಎಂಬ ದೃಢನಂಬಿಕೆ ಇವರಲ್ಲಿದೆ.

10. ಕಣದ ಹಬ್ಬ

ಮೇಲುಕೋಟೆಯಲ್ಲಿನ ಬಹುತೇಕ ಒಕ್ಕಲಿಗ ಮನೆಗಳವರ ಮತ್ತು ವ್ಯವಸಾಯವನ್ನು ಪ್ರಧಾನವಾಗಿ ಅವಲಂಬಿಸಿದ ಮನೆಗಳವರು ಈ ಹಬ್ಬವನ್ನು ವಿಶೇಷವಾಗಿ ಆಚರಿಸುತ್ತಾರೆ. ಸಂಕ್ರಾಂತಿ ಮತ್ತು ಯುಗಾದಿ ಹಬ್ಬಗಳ ನಡುವೆ ಈ ಹಬ್ಬ ಆಚರಿಸುತ್ತಾರೆ. ಒಕ್ಕಣೆ ಕಾರ್ಯಮುಗಿದು ಹೋಗಿರುತ್ತದೆ. ಒಂದು ಶುಭ ದಿವಸ ಸ್ನಾನ–ಮಡಿ ಮಾಡಿ ಅಡುಗೆ ಮಾಡಲು ಬೇಕಾದ ಪದಾರ್ಥಗಳನ್ನು –ಪಾತ್ರೆಗಳನ್ನು ತೆಗೆದುಕೊಂಡು ಜಮೀನಿನ ಹತ್ತಿರ ಹೋಗಿ, ಹೊಸ ಒಲೆ ಮಾಡಿ ಅದರ ಮೇಲೆ ಅಡುಗೆ ಮಾಡುತ್ತಾರೆ. ಇದರಲ್ಲಿ ಬಹುಪಾಲು ಜನರು ಮಾಂಸದ ಅಡುಗೆಯನ್ನು ಮಾಡುತ್ತಾರೆ. ಅಡುಗೆ ಸಿದ್ಧವಾದ ಮೇಲೆ 'ಭೂಮಿ ಪೂಜೆ' ಅಲ್ಲಿಗೆ ಬಂದ ನಾಲ್ಕಾರು ಜನರಿಗೆ ಊಟ ಬಡಿಸಿ ಸಂಜೆ ವೇಳೆಗೆ ಮನೆಗೆ ವಾಪಸ್ಸು ಬರುತ್ತಾರೆ. ಧವಸ–ಧಾನ್ಯಗಳನ್ನು ನೀಡಿದ ಭೂಮಿಗೆ ಕೃತಜ್ಞತೆ ಸಲ್ಲಿಸುವ ರೂಪದಲ್ಲಿ ಈ ಆಚರಣೆ ಮೇಲುಕೋಟೆಯಲ್ಲಿ ಚಾಲ್ತಿಯಲ್ಲಿದೆ. ಬೇರೆ ಕಡೆ ಇಂತಹದೇ ಆಚರಣೆಯನ್ನು 'ಮುನಿ ಮಾಡುವುದು' ಎಂಬ ಹೆಸರಿನಿಂದ ಕರೆಯುತ್ತಾರೆ.

ಇವಿಷ್ಟು ಆಚರಣೆಗಳಲ್ಲದೆ, ಮೇಲುಕೋಟೆಯಲ್ಲಿ ಸಂಕ್ರಾಂತಿ ಹಬ್ಬದಿಂದ ಪ್ರಾರಂಭವಾಗಿ ಯುಗಾದಿ ಹಬ್ಬ ಕಳೆದು ಬಿತ್ತನೆಕಾರ್ಯ ಕೈಗೊಳ್ಳುವವರೆಗಿನ ಅವಧಿಯಲ್ಲಿ

ಬರುವ ಸಂಕ್ರಾಂತಿ, ಶಿವರಾತ್ರಿ, ಯುಗಾದಿ, ಮಾರಮ್ಮನ ಹಬ್ಬ, ಇತ್ಯಾದಿ ಹಬ್ಬ ಹರಿದಿನಗಳನ್ನು ಅತ್ಯಂತ ಭಕ್ತಿ, ನಂಬಿಕೆ, ಉತ್ಸುಕತೆಯಿಂದ ಆಚರಿಸುತ್ತಾರೆ. ಬಹುತೇಕ ಮಾಂಸಾಹಾರಿಗಳಲ್ಲಿ ಈ ಹಬ್ಬಗಳು ನಡೆದ ಮಾರನೆಯ ದಿನ 'ಖಾರದ ಊಟ'ವೆಂಬ ಹೆಸರಿನಿಂದ ಮಾಂಸದಡುಗೆಯನ್ನು ಮಾಡುತ್ತಾರೆ. ಯುಗಾದಿಯ ಮಾರನೆಯ ದಿನವಂತೂ 'ವರ್ಷದ ತೊಡಕು' ಎಂಬ ಹೆಸರಿನಿಂದ ಹೆಚ್ಚು ಕುರಿ, ಕೋಳಿ ಕುಯ್ದು ಸಂಭ್ರಮದಿಂದ ಮಾಂಸದೂಟವನ್ನು ಮಾಡುತ್ತಾರೆ. ಭಕ್ತಿ, ನಂಬಿಕೆಗಳು, ಈ ಆಚರಣೆಗಳಲ್ಲಿ ಇತ್ತೀಚೆಗೆ ಕ್ಷೀಣಿಸುತ್ತಿವೆ, ಎಂದು ಭಾವಿಸಿದರೂ ಮಾಂಸದಡುಗೆಯ ಊಟಗಳಲ್ಲಿ ಪರಸ್ಪರ ಮೇಲಾಟ ಮತ್ತು ಇದನ್ನು ಪ್ರತಿಷ್ಠೆಯ ವಿಷಯವೆಂದು ಪರಿಗಣಿಸಿ ಹೆಚ್ಚು ಕುರಿ–ಕೋಳಿ ಕುಯ್ದು, ನೆಂಟರಿಷ್ಟರು, ಬಂಧು–ಬಳಗದವರನ್ನು ಕರೆದು ಹಬ್ಬವಾಚರಿಸುವ ಪರಿಯನ್ನು ಈಗ ಅಲ್ಲಿ ನೋಡಬಹುದಾಗಿದೆ. ಹೊರಗೆ ದುಡಿಯುವ ಗಂಡು–ಹೆಣ್ಣುಮಕ್ಕಳು, ಬಂದು–ಬಳಗದವರು ಹೆಚ್ಚಿನ ಸಂಖ್ಯೆಯಲ್ಲಿ ಈ ಹಬ್ಬಕ್ಕೆ ಬಂದು, ಮನೆ ತುಂಬಿ, ಗಿಜಿಗುಟ್ಟುತ್ತಿದ್ದು ಹೊಸ ಸಂಭ್ರಮದ ವಾತಾವರಣವು ಅಲ್ಲಿ ನಿರ್ಮಾಣವಾಗಿರುತ್ತದೆ. ಇದನ್ನು ನೋಡುವುದೇ ಒಂದು ಸಂತೋಷವೆನಿಸುತ್ತದೆ.

ಟಿಪ್ಪಣಿಗಳು

1. ಮೋಹನಕೃಷ್ಣ ರೈ. ಕೆ., ಪ್ರಭುತ್ವ ಮತ್ತು ಜನತೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004, ಪು.131
2. ಸುರೇಂದ್ರರಾವ್ ಬಿ. (ಸಂ.), ಕರ್ನಾಟಕ ಚರಿತ್ರೆ, ಸಂಪುಟ 2, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1997, ಪು. 225
3. ಮೋಹನಕೃಷ್ಣ ರೈ. ಕೆ., ಪೂರ್ವೋಕ್ತ, ಪು.7
4. ಸುರೇಂದ್ರರಾವ್ ಬಿ. (ಸಂ.), ಪೂರ್ವೋಕ್ತ, ಪು. 225
5. E.C.II, (1973) ಶ್ರೀರಂಗಪಟ್ಟಣ. 93
6. E.C.VI, ಪಾಂ. 152
7. ಅದೇ, ಪಾಂ. 152
8. ಅದೇ, ಪಾಂ. 130
9. ಅದೇ, ಪಾಂ. 128
10. ಸುರೇಂದ್ರರಾವ್ ಬಿ (ಸಂ.), ಕರ್ನಾಟಕ ಚರಿತ್ರೆ, ಸಂಪುಟ–3, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1997, ಪು. 334
11. Vasantha.R., The Narayanasvami Temple At Melkote, Mysore, 1983, P. 23
12. ಸುರೇಂದ್ರರಾವ್ ಬಿ. (ಸಂ.), ಕರ್ನಾಟಕ ಚರಿತ್ರೆ, ಸಂಪುಟ–3, ಪೂರ್ವೋಕ್ತ, ಪು. 335
13. ಗೋಪಾಲ್ ಬಾ.ರಾ., ಪ್ರಬುದ್ಧ ಕರ್ನಾಟಕ, ಅನಂತಶಾಯಿ ಪ್ರತಿಮೆ, ಸಂಪುಟ. 38, ಪು. 55
14. ಅಸೂರಿ ಸಂಪತ್ಕುಮಾರಾಚಾರ್ಯ ಮತ್ತು ಶ್ರೀನಿವಾಸಾಚಾರ್ಯರು, ಯಾದವಗಿರಿ ಜೀರ್ಣೋದ್ಧಾರ, ಮೇಲುಕೋಟೆ, 1956, ಪು. 18
15. E.C.VI, ಪಾಂಡವಪುರ. 129, 162, 132
16. ರಾಮಯ್ಯ ಬಿ., ಮೇಲುಕೋಟೆ ನಾರಾಯಣಸ್ವಾಮಿ ದೇವಾಲಯದ ಕೈಪಿಡಿ, ಮೈಸೂರು, 1937, ಪು. 15
17. ಸುರೇಂದ್ರರಾವ್ ಬಿ (ಸಂ.), ಕರ್ನಾಟಕ ಚರಿತ್ರೆ, ಸಂಪುಟ–2, ಪೂರ್ವೋಕ್ತ, ಪು. 225

18. ಸ್ವಾಮಿ ರಾಮಕೃಷ್ಣಾನಂದ, ಶ್ರೀ ರಾಮಾನುಜರ ಜೀವನ ಚರಿತ್ರೆ, ಮೈಸೂರು, 2006, ಪು. 80
19. ಅದೇ, ಪಾಂ. 131
20. Prabhakar P. Apte, Ravindranath.R. Karnik. (Ed.), Melkote through the ages, Melkote, 1992, P. 431
21. ಅಸೂರಿ ಸಂಪತ್ಕುಮಾರಾಚಾರ್ಯ ಮತ್ತು ಶ್ರೀನಿವಾಸಾಚಾರ್ಯರು, ಪೂರ್ವೋಕ್ತ, ಪು. 8
22. Prabhakar P. Apte, Ravindranath.R. Karnik. (Ed.), OP. cit., P. 130
23. ಜವರೇಗೌಡ ದೇ. (ಸಂ.), ಸಿರಿಯೊಡಲು, 63ನೇ ಕನ್ನಡ ಸಾಹಿತ್ಯ ಸಮ್ಮೇಳನ, ಮಂಡ್ಯ, ಪು. 272
24. Prabhakar P. Apte, Ravindranath.R. Karnik. (Ed.), OP. cit., P. 130
25. ಕಾಮರಾಜ ಕೃಷ್ಣದಾಸ, ಪ್ರಪನ್ನಾಮೃತಂ, ಬಾಂಬೆ, 1934, ಪು. 93
26. Thurshton.E., Caste and Tribes of Southern India, Madras, 1909, P. 297
27. Lakshamma.G., The Impact of Ramanuja's Teaching on life and condition in society, Delhi, 1990, P. 136.
28. Krishnamacharya, (Ed.), Ramanuja : Vedanta Sara, Madras, 1953, P. 517
29. E.C.VI, ಪಾಂಡವಪುರ. 162, 132, 128, 129
30. Lakshamma.G., Op. cit., P. 112
31. ಸ್ವಾಮಿ ಧರ್ಮತೀರ್ಥ. ಹಿಂದೂ ಸಾಮ್ರಾಜ್ಯಶಾಹಿಯ ಇತಿಹಾಸ, ಮೈಸೂರು, 1990, ಪು. 176, 177
32. ಮೋಹನ್‌ಕೃಷ್ಣ ರೈ.ಕೆ., ಪೂರ್ವೋಕ್ತ, ಪು. 134
33. ಉದಯ್‌ವಾರ್ ನಿಯಮನಪ್ಪಡಿ (ಯತಿರಾಜಮಠದ ಕಾಪಿ)
34. Shivanna.K.S., A Critique of Hoysala Polity, Mysore, 1988, P. 48
35. ರಾಮಯ್ಯ.ಬಿ., ದೇವಾಲಯದ ಕೈಪಿಡಿ, ಮೈಸೂರು, 1937, ಪು. 58, 59
36. E.C VI, ಪಾಂ. 153
37. ಅದೇ, ಪು. 163
38. ರಾಮಯ್ಯ.ಬಿ., ಪೂರ್ವೋಕ್ತ, ಪು. 362

39. ಅದೇ, ಪು. 415

40. E.C VI, ಪಾಂಡವಪುರ. 140

41. ಅದೇ, ಪಾಂ. 125

42. ರಾಮಯ್ಯ.ಬಿ., ಪೂರ್ವೋಕ್ತ, ಪು. 444

43. ಸುರೇಂದ್ರರಾವ್.ಬಿ (ಸಂ.), ಕರ್ನಾಟಕ ಚರಿತ್ರೆ, ಸಂಪುಟ. 2, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. 227

44. E.C VI, ಪಾಂಡವಪುರ. 179, 137

45. Raman.K.V., Sri Varadarajaswami Temple Kanchi, New Delhi, 1975, P. 133

46. Lakshamma.G., The Impact of Ramanuja's teaching on life and condition in society, Delhi, 1990, P. 137

47. E.C VI, ಪಾಂಡವಪುರ. 93

48. ಅದೇ, ಪಾಂ. 60, 63

49. ಅದೇ, ಪಾಂ. 71

50. Lakshamma.G., The Impact of Ramanuja's Teaching on life and condition in Society, Delhi, 1990, P. 135

51. Ramachandra, satvata vaishnavism, Bangalore, 1980, P. 24

52. E.C VI, ಪಾಂಡವಪುರ. 168

53. ಅದೇ, ಪಾಂ. 135

54. ರಾಮಯ್ಯ.ಬಿ., ಪೂರ್ವೋಕ್ತ, ಪು. 113, 115

55. E.C VI, ಪಾಂಡವಪುರ. 19

56. Gopal.R., Cultural study of Hoysala Inscription, Mysore, 2000, P. 164

57. Prabhakar P. Apte, Ravindranatha.R. Karnik (Ed.), Melkote through the ages, Melkote, 1992, P. 290

58. ibid., P. 289

59. Parthasarathi.R., Ramanujacharya, National Book Trust, India, 1969, P. 44, 57

60. E.C., VI, ಪಾಂಡವಪುರ, 144, 179

61. ಅದೇ, ಪಾಂ, 163

62. ಅದೇ, ಪಾಂ, 213

63. ಅದೇ, ಪಾಂ, 178

64. ಅಸೂರಿ ಸಂಪತ್ಕುಮಾರಾಚಾರ್ಯ ಮತ್ತು ಶ್ರೀನಿವಾಸಾಚಾರ್ಯರು, ಪೂರ್ವೋಕ್ತ, ಪು. 42

65. E.C., VI, ಪಾಂಡವಪುರ, 204, 206

66. ಅದೇ, ಪಾಂ, 187

67. ಅದೇ, ಪಾಂ, 173

68. ಅದೇ, ಪಾಂ, 174, 175

69. ಅದೇ, ಪಾಂ, 195

70. ಅದೇ, 207

71. ರಾಮಯ್ಯ.ಬಿ., ಪೂರ್ವೋಕ್ತ, ಪು. 114

72. E.C., VI, ಪಾಂಡವಪುರ, 179

73. ಮೋಹನ್‌ಕೃಷ್ಣ ರೈ.ಕೆ., ಪೂರ್ವೋಕ್ತ, ಪು. 134

74. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು, 1966, ಪು. 201

75. ಅದೇ, ಪು, 201

76. Saraswathi Nanaiah., The position of women During vijayanagara period, Mysore, 1992, P. 111

77. Altekar.A.S., The Rastrakutas and Their Times, Puna, 1967, P. 295

78. ಚಿದಾನಂದಮೂರ್ತಿ.ಎಂ., ಪೂರ್ವೋಕ್ತ, ಪು. 181

79. Kapila Vatsyaya. Dancing in Indian painting, Delhi, 1982, P. 169

80. ಮೇಲುಕೋಟೆಯ ತಾಯಾರ್ ಗುಡಿಯ ಅರ್ಚಕರಾದ ಸಂಪತ್ಕುಮಾರ್ ಅವರು ಸಂದರ್ಶನದಲ್ಲಿ ತಿಳಿಸಿದ ಅಂಶಗಳು

81. ರಾಮಯ್ಯ.ಬಿ., ಪೂರ್ವೋಕ್ತ, ಪು. 423

82. ಅದೇ, ಪು, 205

83. ಅದೇ, ಪು, 413

84. ಮೇಲುಕೋಟೆಯ ತಾಯಾರ್ ಗುಡಿಯ ಅರ್ಚಕರಾದ ಸಂಪತ್ಕುಮಾರ್ ಅವರು ಸಂದರ್ಶನದಲ್ಲಿ ತಿಳಿಸಿದ ಮಾಹಿತಿಗಳು

85. ಸಂಧ್ಯಾರೆಡ್ಡಿ.ಕೆ.ಆರ್., ಗೀತಶಣ್ಯೈ., ದೇವರು ಧರ್ಮದ ಚಿಂತೆ, ಬೆಂಗಳೂರು, 2008, ಪು. 142

86. ಶರ್ಮ.ಆರ್.ಎಸ್., ಪ್ರಾಚೀನ ಭಾರತದಲ್ಲಿ ಶೂದ್ರರು, ಬೆಂಗಳೂರು, 2006, ಪು. 167

87. Sheik Ali. B. (Ed.), The Hoysala Dynasty, University of Mysore, Mysore, 1972, P. 309

88. ಸುರೇಂದ್ರರಾವ್.ಬಿ (ಸಂ.), ಪೂರ್ವೋಕ್ತ, ಪು. 233

89. Kosambi D.D., Myth and Reality, Bombay, 1962, P. 31-32

90. ಚಿದಾನಂದಮೂರ್ತಿ.ಎಂ., ಮಧ್ಯಕಾಲೀನ ಕರ್ನಾಟಕ ಮತ್ತು ಅಸ್ಪೃಶ್ಯತೆ, ಬೆಂಗಳೂರು, 2011, ಪು. 147

91. ಪ್ರಪನ್ನಾಮೃತಂ ಪು. 93

92. ಒಕ್ಕಲಿಗ ಜನಾಂಗದ ಹಣಕಾಸಿನ ಲೆಕ್ಕ ಪುಸ್ತಕದಲ್ಲಿರುವ ಮಾಹಿತಿ

93. ಚಿದಾನಂದಮೂರ್ತಿ.ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು, 1979, ಪು. 208

94. ಕಪಟರಾಳ ಕೃಷ್ಣರಾಯ., ಕರ್ನಾಟಕ ಲಾಕುಳ ಶೈವರ ಇತಿಹಾಸ, ಧಾರವಾಡ, 1955, ಪು. 52

95. ಅಸೂರಿ ಸಂಪತ್ಕುಮಾರಾಚಾರ್ಯ ಮತ್ತು ಶ್ರೀನಿವಾಸಾಚಾರ್ಯರು., ಪೂರ್ವೋಕ್ತ, ಪು. 22, 23, 24

96. E.C., VI, ಪಾಂಡವಪುರ. 129, 130

97. Prabhakar p. Apte, Ravindranath R. Karnik. (Ed.), Melkote through the ages, Melkote, 1992, p. 247

98. E.C., VI, ಪಾಂಡವಪುರ. 164

99. ಅದೇ, ಪಾ. 153

100. ಅಸೂರಿ ಸಂಪತ್ಕುಮಾರಾಚಾರ್ಯ ಮತ್ತು ಶ್ರೀನಿವಾಸಾಚಾರ್ಯರು, ಪೂರ್ವೋಕ್ತ, ಪು. 37–38

101. ಅದೇ, ಪು. 38, 47

102. Prabhakar p. Apte, Ravindranath R. Karnik., (Ed.), Melkote through the ages, Melkote, 1992, p. 20

103. ಅಸೂರಿ ಸಂಪತ್ಕುಮಾರಾಚಾರ್ಯ ಮತ್ತು ಶ್ರೀನಿವಾಸಾಚಾರ್ಯರು, ಪೂರ್ವೋಕ್ತ, ಪು. 20

104. E.C., VI, ಶ್ರೀರಂಗಪಟ್ಟಣ. 115

105. E.C., VI, ಪಾಂಡವಪುರ. 135

106. M.A.R. Report, 1909

107. ಮೋಹನ್‌ಕೃಷ್ಣ ರೈ.ಕೆ., ಪೂರ್ವೋಕ್ತ, ಪು. 190

108. ತಿಪ್ಪೇರುದ್ರಸ್ವಾಮಿ.ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಮೈಸೂರು. 1968, ಪು. 624

109. ಅದೇ, ಪು. 625

110. ಚಿದಾನಂದಮೂರ್ತಿ.ಎಂ., ಪೂರ್ವೋಕ್ತ, ಪು. 174

111. ರಾಜಾರಾಮಹೆಗಡೆ (ಸಂ.), ಭಾರತೀಯ ಇತಿಹಾಸ, ಸಮಾಜ ಮತ್ತು ಸಂಸ್ಕೃತಿ, ಬೆಂಗಳೂರು, 2004, ಪು. 32

112. Altekar A.S., Education in Ancient India, Varanasi, 1957, P. 251

113. ಚಿದಾನಂದಮೂರ್ತಿ.ಎಂ., ಪೂರ್ವೋಕ್ತ, ಪು. 228

114. Gopal B.R., The chalukyas of Kalyana and Kalachuries, Dharwad, 1981, P. 420-421

115. ಯತಿರಾಜಮಠದ ಪುರಾತನ ಓಲೆ ಪುಸ್ತಕದ ಕಾಪಿ

116. ಅಸೂರಿ ಸಂಪತ್ಕುಮಾರಾಚಾರ್ಯ ಮತ್ತು ಶ್ರೀನಿವಾಸಾಚಾರ್ಯರು, ಪೂರ್ವೋಕ್ತ, ಪು. 25

117. ಅದೇ, ಪು. 27

118. Prabhakar P Apte, Ravindranath R. Karnik, (Ed.), Melkote Through the ages, Melkote, 1992, P. 318

119. ibid, P. 310

120. E.C., VI, ಪಾಂಡವಪುರ. 214

121. ಅದೇ, ಪಾಂ. 140

122. ಅದೇ, ಪಾಂ. 140

123. ಶೆಲ್ವನಾರಾಯಣ. ಎಸ್.ಎನ್. (ಸಂ.), ತಾಳಪತ್ರ ಗ್ರಂಥಗಳ ಕೈಪಿಡಿ ಹಾಗೂ ದಾಖಲೆಗಳ ಮಾಹಿತಿ, ಬೆಂಗಳೂರು, 2002, ಪು. 03

124. ಅಸೂರಿ ಸಂಪತ್ಕುಮಾರಾಚಾರ್ಯ ಮತ್ತು ಶ್ರೀನಿವಾಸಚಾರ್ಯರು, ಪೂರ್ವೋಕ್ತ, ಪು. 62

125. E.C., VI, ಪಾಂಡವಪುರ. 182

126. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ. 3 : ಹಂಪಿಶಾಸನಗಳು, 2000. ಕನ್ನಡ ವಿಶ್ವವಿದ್ಯಾಲಯ, ಹಂಪಿ, ಶಾ.ಸಂ. 186

127. E.C., VI, ಪಾಂಡವಪುರ. 179

128. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ. 3 : ಪೂರ್ವೋಕ್ತ, ಶಾ.ಸಂ. 83, 84

129. E.C., VI, ಪಾಂಡವಪುರ. 179

130. ಅದೇ, ಪಾಂ. 162

131. ಅದೇ, ಪಾಂ. 132

132. ಅದೇ, ಪಾಂ. 129

133. ಅದೇ, ಪಾಂ. 128

134. ಅದೇ, ಪಾಂ. 137

135. ಲಕ್ಷ್ಮಣ ತೆಲಗಾವಿ., ವಿಜಯನಗರದ ಕಾಲದ ರಾಮಾನುಜಕೂಟಗಳು, ಹಂಪಿ ವಿಶ್ವವಿದ್ಯಾಲಯ, ಪ್ರಸಾರಾಂಗ, 2009, ಪು. 25

136. ಜಾನಪದ ಕೈಪಿಡಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 1997, ಪು. 97

137. ನಾವಡ.ಎ.ವಿ., 'ಜಾನಪದ ಸಂಪ್ರದಾಯ ಜಾನಪದ ಕೈಪಿಡಿ', ಬೆಂಗಳೂರು, 1997, ಪು. 4

ಅಧ್ಯಾಯ – 5

ಮೇಲುಕೋಟೆಯ ದೇವಾಲಯಗಳ ಆರ್ಥಿಕತೆ

(ಶಾಸನಾಧಾರಗಳ ಹಿನ್ನೆಲೆಯಲ್ಲಿ)

ಆರ್ಥಿಕ ರಚನೆಯಲ್ಲಿ ದೇವಾಲಯ

ದೇವಾಲಯವು ಕೇವಲ ಒಂದು ಪೂಜಾಸ್ಥಾನವಾಗಲೀ, ಧಾರ್ಮಿಕ ಸಂಸ್ಥೆಯಾಗಲಿ ಆಗಿರದೆ. ಸಂಕೀರ್ಣವಾದ ಸಾಮಾಜಿಕ-ಆರ್ಥಿಕ ಸಂಸ್ಥೆಯಾಗಿತ್ತು. ಮಹಾಲಿಂಗಂ ರವರ ಪ್ರಕಾರ "ಸ್ಥಳೀಯ ಪ್ರದೇಶಗಳಲ್ಲಿ ಧಾರ್ಮಿಕ ಜೀವನದ ಕ್ರಿಯಾಶೀಲ ಕೇಂದ್ರವಾಗಿರುವುದರ ಜೊತೆಗೆ ದೇವಾಲಯವು ಒಂದು ಪ್ರಮುಖ ಸಾಮಾಜಿಕ ಸಂಸ್ಥೆಯಾಗಿ ರಾಜಕೀಯ ಸಾಮಾಜಿಕ, ಆರ್ಥಿಕ ಕ್ಷೇತ್ರಗಳಲ್ಲಿ ತನ್ನ ಪ್ರಮುಖ ಪಾತ್ರವನ್ನು ನಿರ್ವಹಿಸಿತು.[1] "ಭತರಖಂಡದ ಅನೇಕ ಊರುಗಳು, ಪಟ್ಟಣಗಳು ಬೆಳೆದಿರುವುದು ದೇವಾಲಯದ ಸುತ್ತ-ಮುತ್ತ".[2] ಆಯಾ ಬಡಾವಣೆಯಲ್ಲಿ ದೇವಾಲಯವು ಆರ್ಥಿಕ ಆಧಾರವಾಗಿ ಪರಿಣಮಿಸಿತ್ತು. ಉದಾರವಾದ ದಾನ, ದತ್ತಿ, ದೇಣಿಗೆಗಳನ್ನು ಪಡೆದು ಜಮೀನ್ದಾರನ ಸ್ಥಾನ ಪಡೆದಿತ್ತು. ಭಾರೀ ಸಂಪತ್ತಿನ ಸಂಗ್ರಹವಿತ್ತು. ಅನೇಕರಿಗೆ ಕೆಲಸಗಳನ್ನು ಒದಗಿಸುತ್ತಿತ್ತು. ಈ ಚಟುವಟಿಕೆಗಳಲ್ಲದೆ "ದೇವಾಲಯಗಳು ಸಾಲಕೊಡುವ, ವಸ್ತುಗಳನ್ನು ಖರೀದಿಸುವ ಹಾಗೂ ವ್ಯಾಪಾರ ವಾಣಿಜ್ಯ ನಡೆಸುವ ಕೇಂದ್ರಗಳೂ ಆಗಿರುತ್ತಿದ್ದವು.[3] ಇದರಿಂದಾಗಿ ದೇವಾಲಯಗಳ ಸುತ್ತ-ಮುತ್ತ ಪೇಟೆ-ಪಟ್ಟಣಗಳು ಅಸ್ತಿತ್ವಕ್ಕೆ ಬರುವಂತಾಯಿತು.[4] ದೇವಾಲಯಗ ದೈನಂದಿನ ಬೇಡಿಕೆಗಳನ್ನು ಈಡೇರಿಸಲು ಹಲವಾರು ಸಣ್ಣ ಕೈಗಾರಿಕೆಗಳು ಆರಂಭಗೊಂಡವು. ಈ ರೀತಿಯಾಗಿ ದೇವಾಲಯಗಳು ಆಧ್ಯಾತ್ಮಿಕ ಕೇಂದ್ರಗಳಾಗುವುದರ ಜೊತೆಗೆ ಸಂಪತ್ತಿನ ಕೇಂದ್ರಗಳಾಗಿಯೂ ಬೆಳೆದವು.[5] ಈ ಕಾರಣಗಳಿಂದಾಗಿಯೇ ದೇವಾಲಯಗಳು ರಾಜನ ಖಜಾನೆಯಾಗಿ, ಆಳುವ ವರ್ಗದ ಅಂತಸ್ತುಗಳ ಶ್ರೇಣಿಯ ಅಂಗಗಳಾಗಿ, ಆರ್ಥಿಕ ವ್ಯವಹಾರಗಳ ನಿಯಂತ್ರಕನಾಗಿ ದೇವಾಲಯಗಳು ಪ್ರಮುಖ ಪಾತ್ರವಹಿಸಿವೆ.[6]

ಮೇಲುಕೋಟೆಯ ದೇವಾಲಯಗಳು ಈ ನೆಲದ ಸಾಮಾನ್ಯ ಆರ್ಥಿಕ ಜೀವನದ ರಚನೆಯಲ್ಲಿ ಒಂದು ಸಂಸ್ಥೆಯಾಗಿ ವಹಿಸಿದ ಪಾತ್ರದ ಕುರಿತು ಸುಳಿವುಗಳನ್ನು ಒದಗಿಸುತ್ತದೆ. ದೇವಾಲಯಗಳು ಕೇವಲ ಒಂದು ಧಾರ್ಮಿಕ ಸಂಸ್ಥೆ ಮಾತ್ರವಲ್ಲದೆ ಅದು ಮುಖ್ಯ ಆರ್ಥಿಕ ಸಂಸ್ಥೆಯಾಗಿ ಅದರ ಪಾತ್ರ ನಿರ್ವಹಿಸಿದೆ. ಆರ್ಥಿಕ ಸಂಪನ್ಮೂಲಗಳನ್ನು ಸಂಗ್ರಹಿಸುವಲ್ಲಿ ಮತ್ತು ವಿತರಿಸುವಲ್ಲಿ ಧಾರ್ಮಿಕ ಸಿದ್ಧಾಂತಗಳು ಅತ್ಯಂತ ಪ್ರಮುಖ ಪಾತ್ರ ವಹಿಸಿದವು. ರಾಮಾನುಜರು ಪಾಂಚರಾತ್ರ ಆಗಮಗಳ ಆಧಾರಿತ ಪೂಜಾ ವಿಧಿ ವಿಧಾನಗಳನ್ನು

ದೇವಾಲಯದಲ್ಲಿ ಅಳವಡಿಸಲು ಯಶಸ್ವಿಯಾದರು. ಅತಿ ಸೂಕ್ಷ್ಮ ವಿಷ್ಣುವಿನ ಪೂಜಾವಿಧಿವಿಧಾನಗಳು. ಹಾಗೂ ಆದಾಯದ ಹೆಚ್ಚಳದಿಂದ ಆರ್ಥಿಕ ರಚನೆಯಲ್ಲಿ ಗುರುತರ ಬದಲಾವಣೆಯಾಯಿತು. ಹೊಯ್ಸಳರ ಕಾಲದಲ್ಲಿ ನಿರ್ಮಾಣವಾದ ನಾರಾಯಣಸ್ವಾಮಿ ದೇವಾಲಯವು ವಿಜಯನಗರದ ಅರಸರ ಕಾಲದಲ್ಲಿ ಒಂದು ಸಂಕೀರ್ಣವಾಗಿ ಬದಲಾಯಿತು. ಪರಿವಾರ ದೇವತೆಗಳಿಗೂ ಪ್ರತ್ಯೇಕ ಗರ್ಭಗುಡಿಗಳನ್ನು ನಿರ್ಮಿಸಲಾಯಿತು. ವಿಷ್ಣುವಿನ ವಿವಿಧ ಅವತಾರಗಳ ಹಲವು ದೇವಾಲಯಗಳು ಅಸ್ತಿತ್ವಕ್ಕೆ ಬಂದವು. ಇದರಿಂದಾಗಿ ಪುರೋಹಿತ ವರ್ಗಕ್ಕೆ ಹೆಚ್ಚು ಪ್ರಮಾಣದಲ್ಲಿ ಉದ್ಯೋಗವಕಾಶ ದೊರಕಿತು. ಅವರ ಆರ್ಥಿಕ ಸ್ಥಿತಿಯು ಉತ್ತಮಗೊಳ್ಳಲಾರಂಭಿಸಿತು. ಇದರಿಂದ ಮತ್ತಷ್ಟು ಪೂಜಾವಿಧಿವಿಧಾನಗಳು ಬೆಳೆದು ಭೂಮಿ, ದವಸಧಾನ್ಯ, ನಗದು ರೂಪದಲ್ಲಿ ಆದಾಯ ಹೆಚ್ಚಿತು. ಕಾಲಕ್ರಮೇಣ ಇಂತಹ ಧಾರ್ಮಿಕ ಸಂಸ್ಥೆಗಳು ಪುರೋಹಿತಶಾಹಿ ವರ್ಗಗಳ ಹಿಡಿತಕ್ಕೊಳಪಟ್ಟವು. ಅಂತಿಮವಾಗಿ ದೇವಾಲಯಗಳು ಮಠಾಧೀಶರ ಅಧಿಪತ್ಯಕ್ಕೊಳಗಾಗಿ ಮಠಾಧೀಶರು ಅಥವಾ ಸ್ಥಾನಿಕರು ದೇವಾಲಯದ ಚರ ಮತ್ತು ಸ್ಥಿರ ಆಸ್ತಿಗಳ ಮಾಲಿಕರಾದರು. ಈ ಬೆಳವಣಿಗೆಗಳು ಆರ್ಥಿಕ ಮತ್ತು ಸಾಮಾಜಿಕ ಜೀವನದಲ್ಲಿ ತೀವ್ರ ಬದಲಾವಣೆಯನ್ನುಂಟು ಮಾಡಿದವು. ಹೆಚ್ಚಿನ ಸಂಖ್ಯೆಯ ಜನಕ್ಕೆ ಉದ್ಯೋಗಗಳನ್ನು ಒದಗಿಸಿದವು. ಹತ್ತಿರ ಮತ್ತು ದೂರದಿಂದ ಬಂದ ಭಕ್ತಾಧಿಗಳಿಗೆ ಸೌಲಭ್ಯಗಳನ್ನು ಒದಗಿಸುತ್ತಿತ್ತು. ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ವಾಣಿಜ್ಯ ಮತ್ತು ಕೈಗಾರಿಕೆಗಳ ಬೆಳವಣಿಗೆಗೆ ಪುಷ್ಠಿನೀಡಿತ್ತು. ಹಬ್ಬ ಮತ್ತು ಉತ್ಸವಗಳ ನಡೆಸುವಿಕೆಯಿಂದ ವಾಣಿಜ್ಯ ಮತ್ತು ವ್ಯಾಪಾರಗಳಿಗೆ ದೇವಾಲಯದ ಸುತ್ತ ಅವಕಾಶ ಕಲ್ಪಿಸಿತ್ತು. ಇದರಿಂದಾಗಿ ಮೇಲುಕೋಟೆಯು ಒಂದು ಧಾರ್ಮಿಕ ಕೇಂದ್ರವಾಗಿದ್ದು "ದೇವಾಲಯ ನಗರೀಕರಣದ" ಅಂಶಗಳನ್ನು ಹೊಂದಿತ್ತೆಂದು ಕಂಡು ಬರುತ್ತದೆ. ಆಗಮಗಳಲ್ಲಿ ಉಲ್ಲೇಖವಾಗಿರುವಂತೆ ಮೇಲುಕೋಟೆಯು ಆಲಯಾಶ್ರಿತ ಗ್ರಾಮವಾಗಿದ್ದು, ದೇವಾಲಯ ನಿರ್ಮಾಣವಾದ ನಂತರವೇ ಊರು ನೆಲೆಯಾದುದ್ದು ಇದಕ್ಕೆ ಪೂರಕವಾಗಿದೆ.

ಕರ್ನಾಟಕಕ್ಕೆ ರಾಮಾನುಜರ ಆಗಮನವು ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಯನ್ನು ಅರ್ಥಮಾಡಿಕೊಳ್ಳಲು, ಅವರ ಕೆಲವು ಆಲೋಚನೆಗಳನ್ನು ತಿಳಿಯುವುದು ಅನಿವಾರ್ಯವಾಗಿದೆ. ಇವರ ವಿಶಿಷ್ಟಾದ್ವೈತವು ಶಂಕರರ ಅದ್ವೈತಕ್ಕಿಂತ ಭಿನ್ನವಾದುದು. ರಾಮಾನುಜರು ಭಕ್ತಿ ಮತ್ತು ಪ್ರಪತ್ತಿಗೆ ಹೆಚ್ಚು ಒತ್ತು ನೀಡಿದರು ಹಾಗೂ ಸಂಪೂರ್ಣ ಶರಣಾಗತಿಯನ್ನು ಬೋಧಿಸಿದರು. ಇದಕ್ಕೆ ಪೂರಕವಾಗಿ ರಾಮಾನುಜರು ಹೊಯ್ಸಳ ರಾಜ್ಯದಲ್ಲಿ ವಿಷ್ಣುವಿನ ವಿವಿಧ ದೇವಾಲಯ ನಿರ್ಮಾಣಕ್ಕೆ ಪ್ರೋತ್ಸಾಹ ನೀಡಿದರು. "ವಿಷ್ಣುವರ್ಧನನ್ನು ರಾಮಾನುಜರು ವೈಷ್ಣವ ಧರ್ಮಕ್ಕೆ ಮತಾಂತರಿಸುವ ಮೂಲಕ

ಹೊಯ್ಸಳ ನಾಡಿನಲ್ಲಿ ಸರಿಸಾಟಿಯಿಲ್ಲದ ದೇವಾಲಯ ಸಂಕೀರ್ಣಗಳ ಸ್ಥಾಪನೆಯ ಒಂದು ಶಕೆಯೇ ಆರಂಭವಾಯಿತು.[7] ರಾಮಾನುಜರು ಪಾಂಚರಾತ್ರ ಹಾಗೂ ವೈಖಾನಸ ಆಗಮಗಳ ಆಧಾರಿತ ಪೂಜಾ ವಿಧಿವಿಧಾನಗಳನ್ನು ಅಳವಡಿಸುವಲ್ಲಿ ಯಶಸ್ವಿಯಾದರು. ದೈನಿಕ ಮತ್ತು ನೈಮಿತ್ತಿಕ ಆಚರಣೆಗಳಿಂದ ದೇವಾಲಯಗಳು ಆರ್ಥಿಕ ಬೆಳವಣಿಗೆಯಲ್ಲಿ ಪಾತ್ರ ನಿರ್ವಹಿಸಿದವು. ಈ ನಿಟ್ಟಿನಲ್ಲಿ ರಾಮಾನುಜರ ಆಗಮನವು ಒಂದು ಮಹತ್ವದ ಮೈಲಿಗಲ್ಲಾಯಿತು. ನಂತರ ದೇವಾಲಯಗಳಿಗೆ ದೇವಾದಾಯ, ಬ್ರಹ್ಮದಾಯ ಮತ್ತು ಭೂಕಂದಾಯಗಳ ಆದಾಯದ ಹಂಚಿಕೆಯ ಪ್ರಮಾಣದಲ್ಲಿ ಹೆಚ್ಚಳವಾಯಿತು. 12 ಮತ್ತು 13ನೇ ಶತಮಾನದಲ್ಲಿ ದಾನಶಾಸನಗಳ ಸಂಖ್ಯೆಯು ತೀವ್ರಗತಿಯಲ್ಲಿ ಏರಿದುದಕ್ಕೆ ಒಂದು ಮುಖ್ಯವಾದ ಕಾರಣ ಹೊಯ್ಸಳ ಚಕ್ರವರ್ತಿಗಳ ಮೇಲೆ ರಾಮಾನುಜರ ಶ್ರೀ ವೈಷ್ಣವ ಧರ್ಮವು ಮಾಡಿದ ಪ್ರಭಾವ.[8] ರಾಮಾನುಜರ ಆಗಮನದ ನಂತರ ದೇವಾಲಯಗಳಿಗೆ ಸಿಕ್ಕ ಪ್ರೋತ್ಸಾಹ, ಅತಿ ಸೂಕ್ಷ್ಮ ವಿಷ್ಣುವಿನ ಪೂಜಾವಿಧಿವಿಧಾನಗಳು, ಭೂ ದಾನಗಳು, ಇವುಗಳ ಆಂತರಿಕ ಸಂಬಂಧಗಳು ದೇವಾಲಯಗಳನ್ನು ಆದಾಯ ಆಧಾರಿತ ಸಂಸ್ಥೆಯಾಗುವಂತೆ ಮಾಡಿದವು.

ಕೃಷಿ ವ್ಯವಸ್ಥೆ

ಮೇಲುಕೋಟೆ ದೇವಾಲಯ ಸಂಕೀರ್ಣಕ್ಕೆ ನೀಡಲ್ಪಟ್ಟ ದಾನಗಳಲ್ಲಿ ಭೂದಾನಗಳೇ ಹೆಚ್ಚಾಗಿದ್ದವು. ಇದು ಕೃಷಿಕ ಜಮೀನುಗಳು ಅದರ ನೇರ ಒಡೆತನಕ್ಕೆ ಒಳಪಡುವಂತಾಯಿತು. ಮೇಲುಕೋಟೆಯ ಶಾಸನದ ಸಾಕ್ಷಿಯಿಂದ ಹೊರಬರುವ ಕೃಷಿ ವ್ಯವಸ್ಥೆಯ ಚಿತ್ರಣವು ಗಮನಾರ್ಹವಾದುದು. ಈ ಸ್ಥಳದ ಸ್ವಲ್ಪವೇ ಆಧಾರವನ್ನು ಹೆಚ್ಚಿಸುವ ಉದ್ದೇಶದಿಂದ. ಪಕ್ಕದ ಮತ್ತೊಂದು ವೈಷ್ಣವ ಕೇಂದ್ರವಾಗಿದ್ದ ತೊಂಡನೂರಿನ ಶಾಸನಾಧಾರಗಳನ್ನು ಅಧ್ಯಯನ ಮಾಡಿ, ಇವುಗಳಿಂದ ಹೊರಬರುವ ಅಂಶಗಳನ್ನು ಉಪಯೋಗಿಸಲಾಗುವುದು. ಸಮಕಾಲೀನ ಇತಿಹಾಸಕಾಲಗಳಲ್ಲಾದ ಬದಲಾವಣೆಗಳಲ್ಲಿ ಈ ಎರಡೂ ಸ್ಥಳಗಳು ಹೆಚ್ಚಿನ ಸಾಮ್ಯತೆಯನ್ನು ಹೊಂದಿವೆ. ದಾಖಲಾಗದೇ ಉಳಿದ ಹಲವು ಅಂಶಗಳನ್ನು ಸಂದರ್ಶನದ ಮೂಲಕ ಸಂಗ್ರಹಿಸಲಾಗಿದೆ. ದೇವಾಲಯದ ಕೈಪಿಡಿಯು ಈ ಕುರಿತು ಮಹತ್ವದ ಅಂಶಗಳನ್ನು ಒದಗಿಸುತ್ತದೆ.

ಕೃಷಿಯು ಪ್ರಧಾನವಾದ ಕಸುಬಾಗಿತ್ತು. ಹಾಗೂ ದೇವಾಲಯ ಸಮುಚ್ಚಯದ ಎಲ್ಲ ಚಟುವಟಿಕೆಗಳಿಗೂ ಬೆಂಬಲದಾಯಕವಾಗಿತ್ತು. ಮೇಲುಕೋಟೆಯ ದೇವಾಲಯ ಸಂಕೀರ್ಣವು ಗಿರಿಶ್ರೇಣಿಯ ಮೇಲೆ ನೆಲೆಸಿದ್ದು, ಮಳೆಯಾಶ್ರಿತ ಬೇಸಾಯ ಪದ್ಧತಿಯು

ಪ್ರಮುಖವಾಗಿತ್ತು. ದೇವಾಲಯವು ಒಂದು ಅತಿ ಮುಖ್ಯ ಉದ್ಯೋಗದ ಸೃಷ್ಟಿಗೆ ಕಾರಣವಾಗಿತ್ತು. ಅದೇ ಕೃಷಿ ಕ್ಷೇತ್ರಗಳ ವಿಸ್ತರಣೆಯಾಗಿತ್ತು. ದೇವರಿಗೆ ಸೇರಿದ ಭೂಮಿಯನ್ನು ನೀರಾವರಿ ಭೂಮಿಯನ್ನಾಗಿ ಮಾಡುವ ಉದ್ದೇಶದಿಂದ ಕೆರೆಗಳನ್ನು ದುರಸ್ತಿ ಮಾಡುವ ಮೂಲಕ ಹೊಸ ಭೂಮಿಗಳನ್ನು ಕೃಷಿಗೆ ಒಳಪಡಿಸಿ ವಿಶಿಷ್ಟ ಕೊಡುಗೆ ನೀಡಿದೆ. ಹೀಗೆ ಈ ಪ್ರದೇಶದಲ್ಲಿ ಮಳೆಯಾಧಾರಿತ ಮತ್ತು ಕೆರೆ ನೀರಾವರಿಯ ಮೂಲಕ ಬೇಸಾಯ ಪ್ರಕ್ರಿಯೆ ನಡೆಯುತ್ತಿತ್ತು. ಶಾಸನಗಳಲ್ಲಿ ಉಲ್ಲೇಖವಾಗಿರುವಂತೆ ನಾವು 2 ಉದಾಹರಣೆಯನ್ನು ನೋಡಬಹುದು. ಕ್ರಿ.ಶ. 1519 ಕೃಷ್ಣದೇವರಾಯನಕಾಲದಲ್ಲಿ ಹೊಸಕೆರೆಯು ಹಾಳಾದಾಗ 300 ಗದ್ಯಾಣಗಳ ವೆಚ್ಚದಿಂದ ಕೆರೆಯ ತೂಬು ಮತ್ತು ಕೋಡಿಯು ಸೇರಿದಂತೆ ದುರಸ್ತಿ ಮಾಡಿಸಿದನು. ಇದಕ್ಕೆ ದೇವಾಲಯದಲ್ಲಿ ಈತನ ಹೆಸರಿನಲ್ಲಿ ಪ್ರಸಾದ ನಿವೇದನವಾಗುತ್ತಿತ್ತು.[9] ಮತ್ತೊಂದು ಶಾಸನದಂತೆ ಕ್ರಿ.ಶ. 1535ರ ಅಚ್ಯುತದೇವರಾಯನ ಕಾಲದಲ್ಲಿ ಹರಿಗಿಲ ಅಬ್ಬರಾಜನ ಮಗ ಪೆರಿರಾಜನು 150 ಗಾದ್ಯಾಣಗಳ ವೆಚ್ಚದಿಂದ ಕೃಷ್ಣದೇವ ಒಡೆಯರ ಕೆರೆ ಮತ್ತು ಹೊಸಕೆರೆಗಳನ್ನು ಜೀರ್ಣೋದ್ಧಾರ ಮಾಡಿಸಿದನು. ಇವನ ಹೆಸರಿನಲ್ಲಿ ದೇವರಿಗೆ ದಿನನಿತ್ಯ ಪ್ರಸಾದ ನಿವೇದನೆ ಮಾಡುವ ಕರಾರು ಮಾಡಲಾಗಿತ್ತು.[10] ಕೆರೆಗಳನ್ನು ದುರಸ್ತಿ ಮಾಡಿಸಿದ ಪೆರಿಯರಾಜರಿಗೆ ದಿನನಿತ್ಯ ದೇವರಿಗೆ ಸಲ್ಲುವ ತಳಿಗೆಯ ಒಂದು ಭಾಗದ ಪ್ರಸಾದವನ್ನು ಮೀಸಲಿಟ್ಟು ಮಾಡಿರುವ ನಿಯಮವನ್ನು ಶಾಸನವು ವಿವರಿಸಿದೆ. ಇಲ್ಲಿ ಗಮನಾರ್ಹ ಅಂಶವೆಂದರೆ ಧರ್ಮದ ಪ್ರಭಾವದಿಂದ ಒಡೆದ ಕೆರೆಯನ್ನು ದುರಸ್ತಿ ಮಾಡುವ ಮೂಲಕ ರೈತರಿಗೆ ಸಹಾಯಕವಾದುದು ಹಾಗೂ ದೇವಾಲಯವು ಅದಕ್ಕಾಗಿ ಕೃತಜ್ಞತೆಯನ್ನು ಸಲ್ಲಿಸಿ ಗೌರವ ನೀಡಿದ್ದು. ಹೊಯ್ಸಳರ ವೀರನರಸಿಂಹನು ಹೊಳೆಸುಂಕದಿಂದ ಬಂದ 64 ಗದ್ಯಾಣಗಳನ್ನು ಹರಹುಗ್ರಾಮದ ಕಾಲುವೆಯ ದುರಸ್ತಿಗಾಗಿ ತೊಂಡನೂರು ಅಗ್ರಹಾರದ ಮಹಾಜನರಿಗೆ ದಾನಮಾಡಿದನು.[11] ಮತ್ತೊಂದು ಶಾಸನವು ತಿಳಿಸುವಂತೆ, ರಾಮಾನುಜಕೂಟದ ನಿತ್ಯ ತದೀಯಾರಾಧನೆಗೆ ಬರುತ್ತಿದ್ದ 80 ವರಹ ಆದಾಯವು ಸಾಲದೆ 40 ವರಹ ಆದಾಯ ಬರುವ ಮತ್ತಷ್ಟು ಭೂಮಿಯನ್ನು ಉಳುಮೆಗೆ ಒಳಪಡಿಸಲಾಯಿತು.[12] ಇದು ಕೃಷಿ ಕ್ಷೇತ್ರದ ವಿಸ್ತರಣೆಯ ಉದ್ದೇಶದಿಂದ ಕೂಡಿತ್ತು.

ಮೇಲುಕೋಟೆಯ ದೇವಾಲಯಗಳು ಹೊಯ್ಸಳರು, ವಿಜಯನಗರದ ಅರಸರು ಮತ್ತು ಮೈಸೂರು ಒಡೆಯರಿಂದ ರಾಜಾಶ್ರಯ ಪಡೆದು, ಹೆಚ್ಚಿನ ಭೂದಾನಗಳನ್ನು ಪಡೆದವು. ಭೂ ಒಡೆತನ, ಅವುಗಳ ನಿಯಂತ್ರಣ, ಆದಾಯದ ಪ್ರಮಾಣ ಮತ್ತು ಹಂಚಿಕೆಯಲ್ಲಿ ಅಲ್ಪ ಬದಲಾವಣೆಗಳೊಂದಿಗೆ ಮುಂದುವರೆದುದು ಸ್ಪಷ್ಟವಾಗುತ್ತದೆ. ಹೊಯ್ಸಳ ದೊರೆಯಿಂದ ಇಲ್ಲಿ ದೇವಾಲಯ ಸ್ಥಾಪನೆಯ ನಂತರ ವಿಜಯನಗರದ ಅರಸರು ಮತ್ತು ಮೈಸೂರು ಒಡೆಯರು ವೈಷ್ಣವಮತಕ್ಕೆ ನೀಡಿದ ಅಮಿತ ಪ್ರೋತ್ಸಾಹದಿಂದ ಇಲ್ಲಿ ದೇವಾಲಯ ಸಂಕೀರ್ಣವೊಂದು

ತಲೆಯೆತ್ತಿತ್ತು. ನಂತರ ಬ್ರಾಹ್ಮಣ ವರ್ಗ ಇಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ವಲಸೆ ಬಂದರು. ಅಧಿಕಾರಶಾಹಿಯ ಸಮರ್ಥಕರು ಇಲ್ಲಿನ ಬ್ರಾಹ್ಮಣ ನೆಲೆಯೊಂದಿಗೆ ಹತ್ತಿರದ ಸಂಬಂಧ ಹೊಂದಿದ್ದರು. ವಿವಿಧ ಕಾಲಗಳಲ್ಲಿ ದೇವಾಲಯ ನಿರ್ಮಾಣ, ಭೂಮಿ ಮತ್ತು ಕಂದಾಯ ಹಂಚಿಕೆ ಮಾಡುತ್ತಿದ್ದರು. ಬ್ರಾಹ್ಮಣರು ಬ್ರಹ್ಮದಾಯ ಮತ್ತು ದೇವಾಲಯಗಳನ್ನು ನಿಯಂತ್ರಿಸಲಾರಂಭಿಸಿದರು. ಸರ್ವಮಾನ್ಯ (ತೆರಿಗೆ ರಹಿತ) ಭೂಮಿಗಳನ್ನು ಪಡೆದು ತೆರಿಗೆ ರಿಯಾಯಿತಿಯನ್ನು ಪಡೆದರು. ಬ್ರಾಹ್ಮಣ ಜಮೀನ್ದಾರಿವರ್ಗವೊಂದು ಇಲ್ಲಿ ನೆಲೆಯಾಯಿತು. ಇತರ ಸೌಲಭ್ಯಗಳೂ ಅದರೊಂದಿಗೆ ಸೇರಿಕೊಂಡವು. ದಾನದತ್ತಿಗಳಿಂದ ಇಲ್ಲಿನ ತಮಿಳು ಬ್ರಾಹ್ಮಣರು ಶ್ರೀಮಂತರಾದರು. ಇದಲ್ಲದೆ ಹಲವು ಶ್ರೀ ವೈಷ್ಣವ ಭಕ್ತಾಧಿಗಳಿಂದ ದಾನಗಳು ಹರಿದು ಬಂದವು ಗ್ರಾಮಗಳು ಮತ್ತು ಕಂದಾಯ ಹಾಗೂ ವಿವಿಧ ಮೂಲಗಳಿಂದ ಸಂಪತ್ತು ದೇವಾಲಯ ಮತ್ತು ಬ್ರಾಹ್ಮಣರಿಗೆ ಹಂಚಲ್ಪಟ್ಟವು. ಅದರ ಜೊತೆಗೆ ದೇವಾಲಯದ ಜೀತಗಾರ ವರ್ಗ ಅಸ್ತಿತ್ವಕ್ಕೆ ಬಂದಿತು. ಅವರು ಬ್ರಾಹ್ಮಣರ ಭೂಮಿಗಳನ್ನು ಬಳಸಲಾರಂಭಿಸಿದರು ಇದು ಕೃಷಿ ಭೂಮಿ ವಿಸ್ತರಣೆ ಹಾಗೂ ಸಮಾಜದ ಸ್ತರಗಳ ರಚನೆಗೆ ಕಾರಣವಾಯಿತು. ಕೃಷಿ ವ್ಯವಸ್ಥೆಯಲ್ಲಿ ಧಾರ್ಮಿಕ ಭೂ ಒಡೆತನವುಳ್ಳ ಮಧ್ಯವರ್ತಿಗಳು ವಿಪುಲ ಸಂಖ್ಯೆಯಲ್ಲಿ ಹುಟ್ಟಿಕೊಂಡರು. ಈ ಪ್ರದೇಶದ ಬ್ರಾಹ್ಮಣ ಜಮೀನ್ದಾರರನ್ನು 'ಮಹಾಜನರು' ಎಂದು ಕರೆಯುತ್ತಿದ್ದರು, ಅಲ್ಲದೆ ದೇವಾಲಯಕ್ಕೆ ಸೇರಿದ ಭೂಮಿಯನ್ನು ನಿಯಂತ್ರಿಸುತ್ತಿದ್ದರು. ಸಾಮುದಾಯಿಕ ಆರ್ಥಿಕ ವ್ಯವಸ್ಥೆಯು ಅಸ್ತಿತ್ವಕ್ಕೆ ಬಂದಿತು. ಬ್ರಾಹ್ಮಣ ಜಮೀನ್ದಾರರು ಜಮೀನನು ಸ್ವತಃ ಉಳುಮೆ ಮಾಡುತ್ತಿರಲಿಲ್ಲ. ಹಾಗೆಯೇ ತಮ್ಮ ಜಮೀನಿನ ಜೊತೆಗೆ ದೇವಾಲಯದ ಜಮೀನನ್ನು ಗುತ್ತಿಗೆ ನೀಡುವ ಹಕ್ಕು ಹೊಂದಿದ್ದರು. ಫಲಿತಾಂಶವಾಗಿ ಗೇಣಿದಾರ ವರ್ಗವು ಹುಟ್ಟಿತ್ತು ಮತ್ತು ದೇವಾಲಯದ ಸುತ್ತಲೂ ನೆಲೆಸಿತು. ಧರ್ಮಶಾಸ್ತ್ರಗಳಂತೆ ಬ್ರಾಹ್ಮಣರು ಕೆಳಜಾತಿಯ ವೃತ್ತಿಯನ್ನು ಮಾಡುವಂತಿರಲಿಲ್ಲ. ಮನುವಿನ ಪ್ರಕಾರ ಸಂದಿಗ್ಧ ಪರಿಸ್ಥಿತಿಯಲ್ಲಿ, ಬ್ರಾಹ್ಮಣರು ಕ್ಷತ್ರಿಯ ವೃತ್ತಿಯನ್ನು ಮಾಡಬಹುದು. ಆದರೆ ಆತನು ಈ ವೃತ್ತಿಗೆ ಅನರ್ಹನಾದರೆ ಅಥವಾ ಈ ವರ್ಣದ ವೃತ್ತಿಯನ್ನು ಮಾಡಲು ಕಷ್ಟವಾದರೆ ವೈಶ್ಯ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳಬಹುದು. ಒಂದು ವೇಳೆ ವೈಶ್ಯ ವೃತ್ತಿಯನ್ನು ಮಾಡುವುದು ಸಾಧ್ಯವಾಗದಿದ್ದರೆ, ಮನುವು ತಿಳಿಸಿರುವಂತೆ ಜಮೀನಿನ ಒಡೆಯನಾಗಿ ಮಾತ್ರ ಕೃಷಿಯಲ್ಲಿ ತೊಡಗಬಹುದು. ಆದರೆ ಈತನು ನೇಗಿಲನ್ನು ಮಾತ್ರ ಹಿಡಿಯುವಂತಿಲ್ಲ. ಧರ್ಮಶಾಸ್ತ್ರದ ಬರಹಗಾರರ ಈ ತಾತ್ವಿಕ ನಂಬಿಕೆಯ ಆಧಾರದ ಮೇಲೆ ನಾವು ಒಂದು ತೀರ್ಮಾನಕ್ಕೆ ಬರಬಹುದು. ಏನೆಂದರೆ ಇಲ್ಲಿನ ಮಹಾಜನರು (ಬ್ರಾಹ್ಮಣ ಜಮೀನ್ದಾರರು) ಕೇವಲ ಜಮೀನಿನ ಒಡೆಯರಾಗಿದ್ದರೇ ವಿನಃ ಜಮೀನನ್ನು ಉಳುಮೆ ಮಾಡುತ್ತಿರಲಿಲ್ಲ. ಸಹಜವಾಗಿಯೇ ಕೃಷಿ ಚಟುವಟಿಕೆಯಲ್ಲಿ ಇವರು ಪಾಲ್ಗೊಳ್ಳುತ್ತಿರಲಿಲ್ಲ

ಹಾಗೆಯೇ ಅವಶ್ಯವಾಗಿ ಅವರು ಕೃಷಿಕವರ್ಗದ ಮೇಲೆ ಅವಲಂಬಿತವಾಗಿದ್ದರು ಹಾಗೂ ಇತರ ಕರಕುಶಲ ವರ್ಗದ ಮೇಲೆಯೂ ಅವಲಂಬಿತವಾಗಿದ್ದರು.

ಅಗ್ರಹಾರಗಳು ಮತ್ತು ದೇವಾಲಯಗಳು ಭೂ ಒಡೆತನವನ್ನು ಹೊಂದಿದ್ದು, ಅಗ್ರಹಾರದ ಭೂಮಿಗಳನ್ನು ಇಲ್ಲಿನ ಬ್ರಾಹ್ಮಣ ಭೂ ಒಡೆಯರು ಅನುಭವಿಸುತ್ತಿದ್ದರು. ಶಾಸನಗಳು ದೃಢಪಡಿಸುವಂತೆ ಅವರು ಈ ಭೂಮಿಗೆ ಯಾವುದೇ ವಿಧವಾದ ತೆರಿಗೆಯನ್ನು ನೀಡುತ್ತಿರಲಿಲ್ಲ (ಸರ್ವಮಾನ್ಯ). ದೇವಾಲಯದ ರೂಪದಲ್ಲಿ ಸ್ಥಳೀಯ ದೇವತೆಗೆ ನೀಡುತ್ತಿದ್ದ ಭೂಮಿಗೂ ತೆರಿಗೆ ವಿನಾಯಿತಿ ಇತ್ತು. ಗಮನಾರ್ಹ ಅಂಶವೆಂದರೆ ಭೂಭಾಗಗಳನ್ನು ವೃತ್ತಿಗಳಾಗಿ ವಿಭಜಿಸಲಾಗುತ್ತಿತ್ತು. ಹೊಯ್ಸಳರ ಕಾಲದಿಂದ ಮೈಸೂರು ಒಡೆಯರ ಕಾಲದವರೆಗೂ ಇದೇ ರೀತಿಯ ವಿಭಾಗೀಕರಣ ಮುಂದುವರೆಯಿತು. ಇವುಗಳನ್ನು ಪ್ರತ್ಯೇಕವಾಗಿ ದೇವರು ಮತ್ತು ಬ್ರಾಹ್ಮಣರಿಗೆ ನೀಡಲಾಗುತ್ತಿತ್ತು. ಒಂದು ಕುತೂಹಲಕಾರಿಯಾದ ಅಂಶವೆಂದರೆ ದೇವಾಲಯಕ್ಕೆ ನೀಡುವ ಗೇಣಿಯನ್ನು ನಗದಿನ ರೂಪದಲ್ಲಿ ನೀಡಲಾಗುತ್ತಿತ್ತು.[13] ಯಾವುದೇ ವಸ್ತುವಿನ ಮೂಲಕ ಆದಾಯ ಬರುತ್ತಿರಲಿಲ್ಲ. ಅಗ್ರಹಾರಗಳಲ್ಲಿ ವಾಸವಾಗಿದ್ದ ಬ್ರಾಹ್ಮಣ ಜಮೀನ್ದಾರರು ಅವಶ್ಯಕತೆ ಬಂದಾಗ ಭೂಮಿಯನ್ನು ಮಾರುತ್ತಿದ್ದರು.[14] ಹೊರ ಪ್ರದೇಶದಿಂದ ವಲಸೆ ಬರುತ್ತಿದ್ದರಿಂದ ಇಲ್ಲಿನ ಭೂಮಿಗೆ ಹೆಚ್ಚಿನ ಒತ್ತಡವಿರುತ್ತಿದ್ದುದು ಕಂಡುಬರುತ್ತದೆ. ರಾಮಾನುಜಾಚಾರ್ಯರಿಂದ ಮೇಲುಕೋಟೆಯ ದೇವಾಲಯ ನಿರ್ವಹಣೆಯ ಜವಾಬ್ದಾರಿಯನ್ನು ಪಡೆದ ಐಂಬತ್ತಿರುವರ್ (ಐವತ್ತೆರಡು) ಹೆಚ್ಚಿನ ಭೂ ಒಡೆತನವನ್ನು ಹೊಂದಿದ್ದುದು ಶಾಸನಗಳಿಂದ ದೃಢಪಡುತ್ತದೆ.[15] ರಾಜರು ಮತ್ತು ಅಧಿಕಾರಿಗಳು ದೇವಾಲಯಕ್ಕೆ ನೀಡಿದ ಭೂದಾನಗಳ ಮೇಲ್ವಿಚಾರಣೆಯನ್ನು ಇಲ್ಲಿನ ದೇವಾಲಯವನ್ನು ನಿಯಂತ್ರಿಸುತ್ತಿದ್ದ ಯತಿರಾಜಮಠದ ಮುಖ್ಯಸ್ಥರಿಗೆ (ಜೀಯರ್) ನೀಡುತ್ತಿದ್ದರು. 'ಸಕಲಸ್ವಾಮ್ಯಗಳು' ಸಹ ಭೂಮಿಯ ಮೇಲೆ ಇವರಿಗಿರುತ್ತಿತ್ತು.[16] ವಿಜಯನಗರದ ಸದಾಶಿವರಾಯನಕಾಲದ ಒಂದು ಶಾಸನದಂತೆ ಮೇಲುಕೋಟೆ ದೇವಾಲಯಕ್ಕೆ ಸರ್ವಮಾನ್ಯವಾಗಿ ಸಿಂಧಘಟ್ಟ ಸ್ಥಳದಲ್ಲಿ ನೀಡಿದ ಗ್ರಾಮಗಳಿಗೆ ತಳವಾರರನ್ನು ನೇಮಿಸುವ ಹಕ್ಕನ್ನು ನೀಡಿತ್ತು.[17]

ಮೇಲುಕೋಟೆ ದೇವಾಲಯಗಳ ಭೂ ಹಕ್ಕುಗಳ ಬಗ್ಗೆ ಶಾಸನಗಳಲ್ಲಿ ದಾಖಲೆಗಳಿವೆ, ಅವುಗಳು ಆ ಪ್ರದೇಶದ ಹಕ್ಕುಗಳಾಗಿದ್ದವು. ಕರ್ನಾಟಕದ ವಿವಿಧ ಭಾಗಗಳಲ್ಲಿ ಅಸ್ತಿತ್ವದಲ್ಲಿದ್ದ ಪುರಾತನ ಪದ್ಧತಿಯಂತೆ ಇಲ್ಲಿಯೂ ಭೂಸ್ವಾಮ್ಯಗಳನ್ನು ನೀಡಲಾಗುತ್ತಿತ್ತು. ಅಂದರೆ ಇವು ಭೂಮಿಯಲ್ಲಿನ ಒಡೆತನದ ಬಗ್ಗೆ ಹೊಂದಿದ್ದ ಹಕ್ಕುಗಳಾಗಿದ್ದವು (ಮಣ್ಣಿನ ಮೇಲೆ ಹೊಂದಿದ್ದ ಹಕ್ಕು). ಮೇಲುಕೋಟೆಯಲ್ಲಿ ವೈಷ್ಣವ ಮತಕ್ಕೆ ಸೇರಿದ ಅಗ್ರಹಾರಗಳಲ್ಲಿ ಬ್ರಾಹ್ಮಣರು

ಭೂಮಾಲೀಕರಾಗಿ 'ಮಹಾಜನರು' ಎಂಬ ಪದವಿಯನ್ನು ಹೊಂದಿದ್ದರು. ಇವರು ತಮ್ಮ ಸ್ಥಾನಮಾನದ ಆಧಾರದ ಮೇಲೆ ಭೂಮಿಯಲ್ಲಿ ಪಾಲುಗಳನ್ನು ಪಡೆಯುತ್ತಿದ್ದರು. ಸರ್ವಮಾನ್ಯ ಎಂಬ ತೆರಿಗೆ ರಿಯಾಯಿತಿಯು ಹೊಯ್ಸಳರು, ವಿಜಯನಗರದ ಅರಸರು ಹಾಗೂ ಒಡೆಯರ ಕಾಲಕ್ಕೂ ಮುಂದುವರೆಯಿತು. ಬ್ರಾಹ್ಮಣ ಭೂಮಾಲೀಕರಿಗೆ ತೆರಿಗೆ ಸಂಗ್ರಹಿಸುವ ಹಕ್ಕನ್ನು ಕೊಡಲಾಗಿತ್ತು. ಹೊಯ್ಸಳರ ಕಾಲದ ಒಂದು ಶಾಸನದಂತೆ ವಿಳ್ಯದೆಲೆಯ ಮೇಲಿನ ತೆರಿಗೆಯ ಹಕ್ಕನ್ನು ಬ್ರಾಹ್ಮಣರಿಗೆ ನಿಡಿತ್ತು.[18] ಕೆಲವು ಸಲ ತೆರಿಗೆಯ ಆದಾಯದ ನಿರ್ದಿಷ್ಟ ಭಾಗವನ್ನು ನೀಡಲಾಗುತ್ತಿತ್ತು. ಗಮನಾರ್ಹ ಅಂಶವೆಂದರೆ ದೇವಾಲಯಕ್ಕೆ ಬರುತ್ತಿದ್ದ ಗ್ರಾಮಗಳ 'ಸಕಲಸ್ವಾಮ್ಯ'ಗಳನ್ನು ನೀಡಲಾಗುತ್ತಿತ್ತು. ವಿಜಯನಗರದ ಸದಾಶಿವರಾಯನ ಕಾಲದ ಒಂದು ಶಾಸನವು ಕೆಲವು ಸ್ವಾಮ್ಯಗಳನ್ನು ಉಲ್ಲೇಖಿಸುತ್ತದೆ. ಅವೆಂದರೆ ಗ್ರಾಮಕ್ಕೆ ಸೇರಿದ ಗದ್ದೆ ಬೆದ್ದಲು, ತೋಟ ತುಡಿಕೆ, ತಳಮನೆ, ಒಕ್ಕಲು ಮಕ್ಕಳು, ಸುಂಕ, ಸುವರ್ಣಾದಾಯ, ಕಾಡಾರಂಬ, ನೀರಾರಂಬ, ಮಗ್ಗಮನೆ, ವಣ್ಣ ಮುಂತಾದ ಸಕಲ ಸ್ವಾಮ್ಯವನ್ನು ಯತಿರಾಜಸ್ವಾಮಿಗಳಿಗೆ ನೀಡಲಾಯಿತು.[19]

ಕರ್ನಾಟಕದ ಇತರ ಭಾಗಗಳಲ್ಲಿದ್ದಂತೆ ಎಂಟು ರೀತಿಯ ಅಷ್ಟಭೋಗತೇಜ–ಸ್ವಾಮ್ಯ ಎಂದು ಕರೆಯಲಾದ ಎಂಟು ಹಕ್ಕುಗಳ ಬಗ್ಗೆ ಶಾಸನಗಳು ಮಾಹಿತಿ ನೀಡುತ್ತವೆ. ಇದು ಮಣ್ಣಿನ ಮೇಲೆ ಅವರು ಹೊಂದಿದ್ದ ಸಂಪೂರ್ಣ ಹಕ್ಕನ್ನು ತಿಳಿಸುತ್ತದೆ. ಆ ಎಂಟು ಹಕ್ಕುಗಳೆಂದರೆ 1) ನಿಧಿ 2) ನಿಕ್ಷೇಪ 3) ಜಾಲ 4) ಪಾಶಾಣ 5) ಅಕ್ಷಣ 6) ಅಗಾಮಿ 7) ಸಿದ್ಧ 8) ಸಾಧ್ಯ ಎಂಬ ಸ್ವಾಮ್ಯಗಳು ಅವರಿಗಿದ್ದವು.[20]

ನಗದಿನ ರೂಪದಲ್ಲಿ ಬರುತ್ತಿದ್ದ ಆದಾಯವು ಕೆಲವೊಮ್ಮೆ ಬದಲಾಗುತ್ತಿತ್ತು. ವಿಜಯನಗರದ ರಂಗರಾಜದೇವನ ಒಂದು ಶಾಸನವು ತಿಳಿಸುವಂತೆ ರೈತರು ಧಾನ್ಯದ ರೂಪದಲ್ಲಿ ಗೇಣಿಯನ್ನು ನೀಡುತ್ತಿದ್ದರು. ಆ ತೆರಿಗೆಯನ್ನು 'ಬಟಾಯಿ' ಎನ್ನುತ್ತಿದ್ದರು. ದೇವಾಲಯದ ಭೂಮಿಗಳು ಯತಿರಾಜಮಠದ ಅಧಿಕಾರಕ್ಕೆ ಸಂಪೂರ್ಣವಾಗಿ ಒಳಪಟ್ಟಾಗ, ರೈತರಿಂದ ಧಾನ್ಯವನ್ನು ಸ್ವೀಕರಿಸಲು, ಗ್ರಾಮದ ಭೂಮಿಯಲ್ಲಿ ಸಂಚಾರ ಮಾಡಿ ಸಾಗುವಳಿಯನ್ನು ನೋಡಿಕೊಳ್ಳಲು ನಾಲ್ಕು ಜನ ಅಧಿಕಾರಿಗಳನ್ನು ನೇಮಿಸಲಾಯಿತು. ಅವರನ್ನು 'ಸ್ಥಾನದಯ್ಯನವರು' ಎಂದು ಕರೆಯಲಾಗಿತ್ತು.[16] ಒಂದು ಶಾಸನದಂತೆ ಹೊಯ್ಸಳರ ಕಾಲದಲ್ಲಿ ಎತ್ತಿನ ಗಾಣಗಳ ಮೇಲೆ ತೆರಿಗೆಯ ಹಕ್ಕನ್ನು ಮಹಾಜನರಿಗೆ ನೀಡಿದೆ.[17] ಇನ್ನೊಂದು ಶಾಸನವು ಮಗ್ಗದ ಮೇಲಿನ ತೆರಿಗೆಯ ಆದಾಯದ ಹಕ್ಕನ್ನು ಭೂಮಿಯೊಂದಿಗೆ ನೀಡಿರುವುದನ್ನು ಉಲ್ಲೇಖಿಸಿದೆ.[18] ಬಲವರು, ಹೊರವರು, ಹೊಳೆಸುಂಕ,

ಸಂತೆ ಸುಂಕ, ಸ್ಥಳಸುಂಕ, ಅಡಕೆಯ ಸುಂಕ, ಅಡದೆರೆ ಮತ್ತು ರಾಯಸ್ತ ಎಂಬ ತೆರಿಗೆಯ ಹಕ್ಕುಗಳು ಶಾಸನಗಳಲ್ಲಿ ಉಲ್ಲೇಖವಾಗಿವೆ.[19]

ದೇವಾಲಯದ ಭೂಮಿಯನ್ನ ಸಾಗುವಳಿ ಮಾಡುತ್ತಿದ್ದವರನ್ನು 'ಒಕ್ಕುಲು ಮಕ್ಕಳು' ಎಂದು ಕರೆಯುತ್ತಿದ್ದರು. ಅವರನ್ನು ದೇವರ ಒಕ್ಕಲು ಎಂದು ಸಹ ಕರೆಯುತ್ತಿದ್ದರು. ಚಿಕ್ಕದೇವರಾಜ ಒಡೆಯರ ಕಾಲದ ಒಂದು ಶಾಸನವು (ಕ್ರಿ.ಶ. 1678) ಧಾರ್ಮಿಕ ಗ್ರಂಥಗಳಲ್ಲಿ ಪಾಂಡಿತ್ಯವನ್ನು ಗಳಿಸಿದ್ದ ಅಲಸಿಂಗರಯ್ಯಂಗಾರ್ ಎಂಬ ಗುರುಗಳು ಹೇಳಿದ ಮಹಾಭಾರತವನ್ನು ಕೇಳಿ ಅಷ್ಟಭೋಗತೇಜ–ಸ್ವಾಮ್ಯಗಳೊಂದಿಗೆ 2 ಗ್ರಾಮಗಳನ್ನು ದಾನಮಾಡಲಾಯಿತು. ಗುರುಗಳಿಗೆ ನೀಡಲಾದ ಭೂ ಕೊಡುಗೆಯ ಒಂದು ಅಪರೂಪದ ಉದಾಹರಣೆಯಾಗಿದೆ.[20] ತೆರಿಗೆಗಳ ಸಾಲಿನಲ್ಲಿ ಸಿದ್ದಾಯ ಎಂಬುದು ಶಾಸನದಲ್ಲಿ ಉಲ್ಲೇಖವಾಗಿದೆ. ಈ ಪದವು ಹೊಯ್ಸಳ ಪೂರ್ವ ಕಾಲದ ರಾಜವಂಶಗಳಿಗೆ ಸೇರಿದ ಶಾಸನಗಳಲ್ಲಿ ಉಲ್ಲೇಖವಾಗಿರುವ ಸಾಮಾನ್ಯ ಪದವಾಗಿದೆ. ಇಲ್ಲಿ ಬ್ರಾಹ್ಮಣ ಭೂಮಾಲೀಕರಿಂದ ಗುತ್ತಿಗೆಗೆ ಪಡೆದ ಒಕ್ಕಲುಗಳು ನೀಡಿದ 'ಸಿದ್ಧಾಯ' ಎಂದು ಅರ್ಥೈಸಬಹುದು.[21] ಬ್ರಾಹ್ಮಣ ಭೂಮಾಲೀಕರಿಂದ ಗೇಣಿದಾರರು ಗುತ್ತಿಗೆಯ ಆಧಾರದ ಮೇಲೆ ದೇವಾಲಯದ ಜಮೀನನ್ನು ಪಡೆಯುತ್ತಿದ್ದರು. ಬ್ರಾಹ್ಮಣ ಭೂಮಾಲೀಕರು ಹಾಗೂ ಒಕ್ಕಲು ಗೇಣಿದಾರರ ನಡುವೆ ವಾರ್ಷಿಕವಾಗಿ ಒಂದು ನಿರ್ದಿಷ್ಟ ಪ್ರಮಾಣದ ಮೊತ್ತವನ್ನು ಕೊಡುವುದಾಗಿ ಒಪ್ಪಂದಮಾಡಿಕೊಂಡಿದ್ದರು. ಬ್ರಾಹ್ಮಣ ಭೂ ಮಾಲೀಕರಿಗೆ ಒಂದು ನಿರ್ದಿಷ್ಟವಾದ ಉತ್ಪನ್ನದ ಪಾಲನ್ನು ನೀಡುವ ಭರವಸೆಯನ್ನು ನೀಡಲಾಗಿತ್ತು. ಒಕ್ಕಲಿನವರು ವಾರ್ಷಿಕವಾಗಿ ತಾವು ನೀಡಬೇಕಿದ್ದ ಆದಾಯದ ಅಂಶವನ್ನ ಅರಿತಿದ್ದರು. ಗಮನಾರ್ಹ ಅಂಶವೆಂದರೆ ಕ್ಷಾಮದ ಸಂದರ್ಭದಲ್ಲಿ ನಿಗಧಿತ ಆದಾಯವನ್ನು ಕಡಿಮೆಮಾಡಲಾಗುತ್ತಿತ್ತು. ವಿಜಯನಗರದ ಸದಾಶಿವದೇವರಾಯನ ಒಂದು ಶಾಸನವು ತಿಳಿಸುವಂತೆ (ಕ್ರಿ.ಶ. 1467) ನಿಗದಿಯಾಗಿದ್ದ 2000 ವರಹಗಳ ಉತ್ಪತ್ತಿಯಾಗುವ ಕಾವೇರಿತೀರದ ಗ್ರಾಮಗಳನ್ನು ದಾನ ನೀಡಿದಾಗ ಕ್ಷಾಮದ ಕಾರಾಣದಿಂದ 800 ವರಹಗಳನ್ನು ರಿಯಾಯಿತಿ ನೀಡಿದ್ದನು[22]. ಸಾಮಾನ್ಯವಾಗಿ ಉತ್ಪತ್ತಿಯಿಂದ ಬರುವ ಆದಾಯವನ್ನು ಒಂದು ಹಳ್ಳಿಗೆ ಸೇರಿಸಿ ವಿಧಿಸಲಾಗುತ್ತಿತ್ತು. ಹಳ್ಳಿಗಳನ್ನು ಮೇಲುಕೋಟೆ ದೇವಾಲಯ ಹಾಗೂ ಅಗ್ರಹಾರಗಳಿಗೆ ಸೇರಿಸಲಾಗಿತ್ತು.

ದೇವಸ್ಥಾನದ ಭೂಮಿಯನ್ನು ಉಳಲು ಒಕ್ಕಲಿಗರನ್ನು ನೇಮಿಸುವ ಜವಾಬ್ದಾರಿ ದೇವಸ್ಥಾನದ್ದೆ ಆಗಿತ್ತು. ಕ್ರಿ.ಶ. 1528ರ ಕೃಷ್ಣದೇವರಾಯ ಒಂದು ಶಾಸನದಂತೆ ಮೇಲುಕೋಟೆಯ ದೇವಸ್ಥಾನದ ಭೂಮಿಯನ್ನ ಉಳುತ್ತಿದ್ದ ಒಕ್ಕಲಿಗರನ್ನೇ ತೊಂಡನೂರಿನ

ದೇವಸ್ಥಾನಕ್ಕೆ ಸೇರದೇ ಇರುವ ಭೂಮಿಗಳನ್ನು ಉಳಲು ಬಲವಂತವಾಗಿ ಕರೆದೊಯ್ಯುತ್ತಿದ್ದ ಕಾರಣ ತೊಂಡನೂರಿನ ಆ ಭೂಮಿಗಳನ್ನು ದೇವಸ್ಥಾನಕ್ಕೆ ನೀಡಲಾಯಿತು. ಇದರಿಂದ ಆ ಎಲ್ಲ ಭೂಮಿಗಳ ಒಡೆತನ ದೇವಸ್ಥಾನಕ್ಕೆ ಸೇರಿದ್ದು ಅವುಗಳನ್ನು ಉಳಲು ಒಕ್ಕಲಿಗರನ್ನು ಸೂಕ್ತವಾಗಿ ನಿಯಮಿಸಿಕೊಳ್ಳುವ ಹೊಣೆ ಸಹ ದೇವಸ್ಥಾನದ್ದೇ ಎಂಬ ಅಂಶ ಸ್ಪಷ್ಟವಾಗುತ್ತದೆ. ಇದು ಒಕ್ಕಲುಗಳನ್ನು ಬಲವಂತದಿಂದ ಬೇರೆಡೆಗೆ ಕರೆದೊಯ್ಯುವ ಅಭ್ಯಾಸಕ್ಕೆ ಮುಕ್ತಾಯ ಹಾಕಿದಂತಾಯಿತು. ದಾನವಾಗಿ ಪಡೆದ ಗ್ರಾಮಗಳಲ್ಲಿದ್ದ ಒಕ್ಕಲು ಮಕ್ಕಳೂ ಸಹ ದಾನ ಪಡೆದವರ ನಿಯಂತ್ರಣಕ್ಕೆ ಒಳಪಡುತ್ತಿದ್ದರು. ದಾನ ಪಡೆದವರು ಪಡೆಯುವ ಸ್ವಾಮ್ಯಗಳಲ್ಲಿ ರೈತವರ್ಗದ ಸ್ವಾಮ್ಯವು ಮಹತ್ವದ್ದಾಗಿತ್ತು. ಬ್ರಾಹ್ಮಣ ಭೂ ಮಾಲೀಕರು ಶೂದ್ರ ಒಕ್ಕಲಿಗರನ್ನು ನಿಯಂತ್ರಿಸುವಂತಾಯಿತು. ಒಕ್ಕಲು ಮಕ್ಕಳಿಗೆ ಭೂಮಿಯ ಒಡೆತನವಿಲ್ಲದ್ದರಿಂದ ಒಡೆಯನ ನಿರ್ದೇಶನದಂತೆ ನಡೆಯಬೇಕಾಯಿತು.

ಕ್ರಿ.ಶ.1551ರ ವಿಜಯನಗರದ ಅರಸು ಸದಾಶಿವರಾಯನ ಕಾಲದ ಶಾಸನವು ಅಪ್ಪಯ್ಯಂಗಾರ್ ಮತ್ತು ಮಹಾಮಂಡಲೇಶ್ವರ ತಿಮ್ಮಯ್ಯದೇವ ಮಹಾಅರಸರು ನಗುವನಹಳ್ಳಿ ಗ್ರಾಮವನ್ನು ಮೇಲುಕೋಟೆ ನಾರಾಯಣಸ್ವಾಮಿಗೆ ದಾನ ನೀಡಿದ ಅಂಶವನ್ನು ಉಲ್ಲೇಖಿಸಿದೆ. ವೀರನಾಯಕನು ಈ ಗ್ರಾಮವನ್ನು ಆರಂಭದಲ್ಲಿ ಎಂಬಾರಯ್ಯರಿಗೆ ನೀಡಿದ್ದನು. ಆದರೆ ಇದು ಕೃಷ್ಣರಾಯನಿಂದ ಹಿಂಪಡೆಯಲಪಟ್ಟಿತು. ಅಪ್ಪಯ್ಯಂಗಾರರು ಸುವರ್ಣ ಗರುಡನನ್ನು ದೇವಾಲಯಕ್ಕೆ ದಾನ ಮಾಡಿದಾಗ ಈ ಗ್ರಾಮವನ್ನು ಪ್ರಸಾದ ವಿನಿಯೋಗ, ನಂದನವನದ ನಿರ್ವಹಣೆಗಳ ಜೊತೆಗೆ 50ವರಹಗಳನ್ನು ಕ್ಷಾಮಡಾಮರದ ಸಂದರ್ಭಕ್ಕೆ ಮೀಸಲಿಟ್ಟ ಅಂಶವನ್ನು ಉಲ್ಲೇಖಿಸಿದೆ.

20ನೇ ಶತಮಾನದ ಮೈಸೂರು ಒಡೆಯರ ಕಾಲದ ಕೆಲವು ಬದಲಾದ ಕೃಷಿ ಪದ್ಧತಿಗಳನ್ನು ಮೇಲುಕೋಟೆ ದೇವಾಲಯ ಕೈಪಿಡಿಯು ಬಹಿರಂಗಪಡಿಸುತ್ತದೆ. ದೇವಸ್ಥಾನದ ಇನಾಮು ಜಮೀನನ್ನು ನಿಗಧಿತ ಅವಧಿಗೆ ಸಾಗುವಳಿಗೆ ಕೊಡಲಾಗುತ್ತಿತ್ತು. ಸಾಮಾನ್ಯವಾಗಿ 5 ವರ್ಷಗಳಿಗೆ ಗುತ್ತಿಗೆ ನೀಡಲಾಗುತ್ತಿತ್ತು. ಇದನ್ನು 'ಪಂಚಸಾಲು ಗುತ್ತಿಗೆ' ಎಂದು ಕರೆಯುತ್ತಿದ್ದರು.[24] ಜಮೀನಿನ ಉತ್ಪತ್ತಿಯನ್ನು ಮೊದಲೇ ನಿರ್ಧರಿಸಲಾಗುತ್ತಿತ್ತು. ಕಂದಾಯದ ಭಾಗವನ್ನು ಇದರಿಂದ ಕಳೆಯಲಾಗುತ್ತಿತ್ತು. ಸಾಗುವಳಿ ವೆಚ್ಚ ಮತ್ತು ರೈತನ ಪಾಲನ್ನು ಉಲ್ಲೇಖಿಸಿಲ್ಲ. ಐದು ವರ್ಷದಲ್ಲಿ ಯಾವಾಗಲಾದರೂ ಉತ್ಪತ್ತಿಯ ಆದಾಯವನ್ನು ರೈತನು ಕೊಡಬಹುದಾಗಿತ್ತು. ಕೆಲವರಿಗೆ ಭೂಮಿಯನ್ನು ಖಾಯಂ ಸಾಗುವಳಿಗೆ ನೀಡಲಾಗುತ್ತಿತ್ತು. ಸಾಗುವಳಿ ಮಾಡಲು ಯಾರೊಬ್ಬರು ಮುಂದಾಗದಿದ್ದರೆ ಅದು ಬಂಜರಾಗಿ ಉಳಿಯುತ್ತಿತ್ತು. ಕೆಲವು ಜಮೀನನ್ನು 10 ವರ್ಷದ ಸಾಗುವಳಿಗಾಗಿ ನೀಡಲಾಗುತ್ತಿತ್ತು[25]. ಭೂಮಿಯ

ಫಲವತ್ತತೆಯು ಗುತ್ತಿಗೆಯ ಅವಧಿಯನ್ನು ನಿರ್ಧರಿಸುತ್ತಿತ್ತು. ಗುತ್ತಿಗೆಯ ಅವಧಿಯಲ್ಲಿ ಸಾಗುವಳಿದಾರನು ಒಪ್ಪಂದದಂತೆ ನಡೆಯದಿದ್ದರೆ ಅಥವಾ ನಿಗಧಿತ ಗೇಣಿಯನ್ನು ನೀಡದಿದ್ದರೆ ಸಾಗುವಳಿಯನ್ನು ಮತ್ತೊಬ್ಬರಿಗೆ ವಾರ್ಗಾಯಿಸುವ ಹಕ್ಕು ದೇವಾಲಯಕ್ಕಿತ್ತು. ಸಾಗುವಳಿದಾರರಲ್ಲಿ ಪೈಪೋಟಿ ಏರ್ಪಟ್ಟಿದ್ದರಿಂದ, ಸಾಗುವಳಿ ಹಕ್ಕನ್ನು ಕಳೆದುಕೊಳ್ಳುವ ಭಯ ಇತ್ತು. ಇದರಿಂದ ಬ್ರಾಹ್ಮಣ ಭೂಮಾಲೀಕರು ರೈತರಿಂದ ಹೆಚ್ಚಿನ ಗೌರವವನ್ನು ಹೊಂದಿದ್ದರು. ಕೆಲವು ಸಲ ದೇವಾಲಯದಿಂದ ಭೋಗ್ಯಕ್ಕೆ ಪಡೆದ ಜಮೀನಿನ ಉತ್ಪತ್ತಿಯ ಭಾಗವನ್ನು ದೇವಾಲಯಕ್ಕೆ ನೀಡದೆ ನಿಗಧಿತ ದೇವರ ಕೈಂಕರ್ಯ ಮಾಡುವ ಒಪ್ಪಂದ ಮಾಡಲಾಗುತ್ತಿತ್ತು.[26] ರೈತರು ಗುತ್ತಿಗೆ ಪಡೆದ ಅವಧಿಯಲ್ಲಿ ಪ್ರಾಕೃತಿಕ ವಿಕೋಪಗಳಿಂದ ಉತ್ಪನ್ನ ಕಡಿಮೆಯಾದರೂ ನಿಗಧಿತ ಆದಾಯವನ್ನು ಕೊಡಲೇಬೇಕಾಗಿತ್ತು. ದೇವಾಲಯದ ಜಮೀನಿನ ನಿರ್ವಹಣೆಯ ಸಂಪೂರ್ಣ ಹಕ್ಕನ್ನು ಬ್ರಾಹ್ಮಣರಿಗೆ ನೀಡಲಾಗಿತ್ತು. ಗಮನಾರ್ಹ ಅಂಶವೆಂದರೆ ಬ್ರಾಹ್ಮಣರು ತಾವು ಪಡೆದ ಭೂಮಿಯ ಭಾಗ ಅಸ್ತಿತ್ವವಿರುವ ಗ್ರಾಮಗಳಲ್ಲಿಯೇ ನೆಲೆಸುವ ಸಂಪ್ರದಾಯವಿತ್ತು. ರೈತರ ಎಲ್ಲಾ ಚಟುವಟಿಕೆಗಳು ಇವರಿಂದ ನಿರ್ದೇಶಿತವಾಗುತ್ತಿದ್ದವು. ಗ್ರಾಮದ ರೈತರು ಆ ಗ್ರಾಮದ ಭೂ ಒಡೆಯನ ಜಮೀನಿನಲ್ಲಿಯೇ ದುಡಿಯಬೇಕಿತ್ತು. ಇಂತಹ ಭೂಮಿಗಳಿಗೆ ಹೊಂದಿಸಲ್ಪಡದ ಜನರು ಅಲ್ಪ ಕೂಲಿಗಾಗಿ ದುಡಿಯಬೇಕಾಗಿತ್ತು. ರೈತರು ಬೆಳೆದ ಕೃಷಿ ಉತ್ಪನ್ನದ ಮೊದಲ ಭಾಗವನ್ನು ಬ್ರಾಹ್ಮಣಗುರುಗಳಿಗೆ ಕೊಡುವ ಸಂಪ್ರದಾಯವಿದ್ದು, ಇಂದಿಗೂ ಮುಂದುವರಿದಿದೆ. ಇದನ್ನು ರೈತರು ದೇವರಿಗೆ ಅರ್ಪಿಸುತ್ತಿದ್ದೇವೆ ಎಂಬ ನಂಬಿಕೆ ಹೊಂದಿದ್ದಾರೆ.

ಕೈಗಾರಿಕೆಗಳು

ಮೇಲುಕೋಟೆ ದೇವಾಲಯಗಳು ಭೂ ಕೊಡುಗೆ ಹಾಗೂ ಧನ ಸಹಾಯದಿಂದಾಗಿ ತಮ್ಮದೇ ಆದ ಐಹಿಕ ಪ್ರೋತ್ಸಾಹವನ್ನು ಹೊಂದಿದಲ್ಲದೆ, ದೇವಾಲಯಗಳಿಗೆ ಹೊಂದಿಕೊಂಡಂತಿದ್ದ ಬಹಳಷ್ಟು ಸಂಖ್ಯೆಯ ಬ್ರಾಹ್ಮಣರುಗಳಿಂದಾಗಿ ಕೃಷಿ ಹಾಗೂ ಕೃಷಿಯೇತರ ಉತ್ಪನ್ನಗಳಿಗೆ ಹೆಚ್ಚು ಬೇಡಿಕೆಯುಂಟಾಯಿತು. ಆರ್ಥಿಕ ವ್ಯವಸ್ಥೆಯಲ್ಲಿ ಭೂಮಿಯು ಪಡೆದಿರುವ ಪ್ರಾಧಾನ್ಯತೆಯನ್ನು ಕೈಗಾರಿಕೆಗಳು ಸಹ ಪಡೆದಿದ್ದವು. ರಾಮಾನುಜಾಚಾರ್ಯರ ಕಾಲದಿಂದಲೂ ಮೇಲುಕೋಟೆಯು ಒಂದು ದೇವಾಲಯ ನಗರವಾಗಿತ್ತು. ಇಲ್ಲಿನ ದೇವಾಲಯಗಳು ಇಲ್ಲಿ ವಾಸವಾಗಿರುವ ಜನರ ಅನುಕೂಲಕ್ಕಾಗಿ ಸಹಾಯಕ ಕೈಗಾರಿಕೆಗಳಿಗೆ ಪೂರಕವಾಗಿದ್ದವು. ದೇವಾಲಯದ ಅಸ್ತಿತ್ವವನ್ನು ಬಿಟ್ಟರೆ ಇದಕ್ಕೆ ಇನ್ನಾವುದೇ ಮುಖ್ಯ ಕಾರಣ ಇರಲಿಲ್ಲ. ಹೀಗೆ ನಗರವ್ಯವಸ್ಥೆಯು ದೇವಾಲಯದ ಸೇವೆಗೆ ಮತ್ತು ದೇವಾಲಯದ ಅಗತ್ಯತೆಗಳನ್ನು ಪೂರೈಸಲು ಸಿದ್ಧವಾಗಿರುತ್ತಿತ್ತು. ಇಲ್ಲಿ ವಿಶೇಷವಾಗಿ ಗೃಹಕೈಗಾರಿಕೆಗಳು ಪ್ರಾಧಾನ್ಯತೆ ಪಡೆದಿದ್ದುದು ಗಮನಾರ್ಹವಾಗಿದೆ.

ಮೇಲುಕೋಟೆಯಲ್ಲಿ ಕಂಡು ಬಂದಿರುವ ಪ್ರಮುಖ ಕೈಗಾರಿಕೆಗಳಲ್ಲಿ ಎಣ್ಣೆ ತಯಾರಿಕೆ ಮತ್ತು ವಿವಿಧ ಬಗೆಯ ಬಟ್ಟೆಗಳನ್ನು ನೇಯುವಿಕೆ ಇವು ಕೃಷಿ ಆಧಾರಿತ ಉದ್ಯಮಗಳನ್ನು ಸೂಚಿಸುತ್ತವೆ. ದೇವಾಲಯಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಬಳಸಲ್ಪಡುತ್ತಿದ್ದ ಪ್ರಮುಖ ವಸ್ತುವು ಎಣ್ಣೆಯಾಗಿತ್ತು. ಎಣ್ಣೆಯನ್ನು ದೀವಟಿಗೆ ಎಣ್ಣೆ ಎಂದು ಕರೆಯಲಾಗುತ್ತಿತ್ತು. ಈ ವೃತ್ತಿಯಲ್ಲಿ ನಿರತರಾದ ಜಾತಿಯನ್ನು ಗಾಣಿಗರು ಅಥವಾ ತೆಲ್ಲಿಗರು ಎಂದು ಕರೆಯುತ್ತಿದ್ದರು. ದೇವರ ನಂದಾದೀವಿಗೆಗೆ ಮತ್ತು ದೀಪಾರಾಧನೆಗಾಗಿ ಬಿಟ್ಟ ದಾನಗಳ ಉಲ್ಲೇಖ ಶಾಸನಗಳಿಂದ ತಿಳಿದುಬರುತ್ತದೆ. ಮೇಲುಕೋಟೆ ದೇವಾಲಯ ಸಂಕೀರ್ಣವು ಬಹಳ ಪ್ರಮಾಣದ ಎಣ್ಣೆಯನ್ನು ಅನುಭೋಗಿಸುವ ಸಾಮರ್ಥ್ಯವನ್ನು ಹೊಂದಿದ್ದರಿಂದ ಎಣ್ಣೆಗಿರಣಿಗಳು ವಾಸ್ತವವಾಗಿ ಅಸ್ತಿತ್ವದಲ್ಲಿದ್ದವು. ಎಣ್ಣೆ ಗಿರಣಿಗಳನ್ನು ನಡೆಸುತ್ತಿದ್ದವರು ಸರ್ಕಾರಕ್ಕೆ ಗಾಣದ ಸುಂಕ ಕೊಡುತ್ತಿದ್ದರು. ಶಾಸನಗಳು ಎತ್ತುಗಳಿಂದ ಎಳೆಯಲ್ಪಡುವ ಎಣ್ಣೆಗಾಣವನ್ನು ಉಲ್ಲೇಖಿಸುತ್ತವೆ.[27] ಎಣ್ಣೆಗಿರಣಿಗಳ ಮೇಲಿನ ತೆರಿಗೆಯ ಹಣವನ್ನು ದೀಪಾರಾಧನೆಗೆ ದಾನ ನೀಡಿದ ಅಂಶವನ್ನು ಹೊಯ್ಸಳರ ಕಾಲದ ಶಾಸನವು ಉಲ್ಲೇಖಿಸುತ್ತದೆ.[28] ಒಂದೆತ್ತಿನಿಂದ ಮತ್ತು ಎರಡೆತ್ತುಗಳಿಂದ ಎಳೆಯುವ ಗಾಣಗಳಿಗೆ ವಿಭಿನ್ನ ತೆರಿಗೆಗಳನ್ನು ವಿಧಿಸಲಾಗುತ್ತಿತ್ತು. ತೆರಿಗೆಯನ್ನು ಎಣ್ಣೆಯ ರೂಪದಲ್ಲಿಯೂ ನೀಡುತ್ತಿದ್ದರು. ಮೇಲುಕೋಟೆಯಲ್ಲಿ ಗಾಣಿಗರ ಒಂದು ಪಂಗಡವು ನಿರ್ದಿಷ್ಟ ಸ್ಥಳದಲ್ಲಿ ನೆಲೆನಿಂತಿತ್ತು. ಇದು ದೇವಾಲಯಕ್ಕೆ ಮಾತ್ರವಲ್ಲದೆ ಆ ನಗರ ಮತ್ತು ಗ್ರಾಮಗಳಿಗೂ ಎಣ್ಣೆಯನ್ನು ಪೂರೈಸುತ್ತಿತ್ತು.

ದೇವಾಲಯ ಆಧಾರಿತ ಮತ್ತೊಂದು ಮುಖ್ಯ ಉದ್ಯಮ ಬಟ್ಟೆ ತಯಾರಿಕೆ ಉದ್ಯಮ. ಮೇಲುಕೋಟೆಯಲ್ಲಿ ಕೈಮಗ್ಗದ ಉದ್ಯಮ ಪ್ರಚಲಿತದಲ್ಲಿತ್ತೆಂಬುದು ಶಾಸನಗಳಿಂದ ದೃಢಪಡುತ್ತದೆ. ಹತ್ತಿ ಮತ್ತು ರೇಷ್ಮೆ ಬಟ್ಟೆಯ ಗಿರಣಿ ಉದ್ಯಮ ಪ್ರಮುಖವಾಗಿತ್ತು. ಶಾಸನಗಳಲ್ಲಿ ಬಟ್ಟೆಯನ್ನು ಉತ್ಪಾದಿಸುವ ಮನೆಯನ್ನು 'ಮಗ್ಗದ ಮನೆ' ಎಂದು ಉಲ್ಲೇಖಿಸಲಾಗಿದೆ.[29] ಕ್ರಿ.ಶ. 1189ರ ಹೊಯ್ಸಳರ ಕಾಲದ ಒಂದು ಶಾಸನವು ಮಗ್ಗದ ಮೇಲೆ ತೆರಿಗೆ ವಿಧಿಸುತ್ತಿದ್ದ ಅಂಶವನ್ನು ತಿಳಿಸುತ್ತದೆ.[30] ಗಮನಾರ್ಹ ಅಂಶವೆಂದರೆ ದೇವಾಲಯಕ್ಕೆ ನೀಡಿದ ಗ್ರಾಮಗಳ ಸಕಲ ಸ್ವಾಮ್ಯಗಳಲ್ಲಿ ಮಗ್ಗದ ಮೇಲಿನ ತೆರಿಗೆಯೂ ಸೇರಿತ್ತು.[31] ಇಲ್ಲಿನ ದೇವಾಲಯಗಳ ಉತ್ಸವಕ್ಕೆ ಹೊಸ ವಸ್ತ್ರದ ಅಗತ್ಯವಿದ್ದುದನ್ನು ಶಾಸನಗಳು ಉಲ್ಲೇಖಿಸಿವೆ. ಮೇಲುಕೋಟೆಯ ನೇಕಾರರು ರೇಷ್ಮೆ ಬಟ್ಟೆಯನ್ನು ನೇಯುವಲ್ಲಿ ಹೆಚ್ಚಿನ ಆಸಕ್ತಿ ಹೊಂದಿದ್ದಂತೆ ತೋರುತ್ತದೆ. ಏಕೆಂದರೆ ಇದರ ಮೌಲ್ಯ ಹೆಚ್ಚಿದ್ದು ಆರ್ಥಿಕವಾಗಿ ಮತ್ತು ಕಲಾತ್ಮಕವಾಗಿ ಪೋಷಣೆಗೊಂಡಿತ್ತು. ನೇಕಾರಿಕೆಯು ಒಂದು ಪ್ರಮುಖ ಉದ್ಯಮವಾಗಿತ್ತು ಎಂಬುದಕ್ಕೆ ಸಾಕ್ಷಿಯಾಗಿ ಇಂದಿಗೂ ಮೇಲುಕೋಟೆಯ ಬೀದಿಗಳಲ್ಲಿ ನಡೆದು ಹೋದರೆ ಮನೆಗಳಿಂದ ನೇಯುತ್ತಿರುವ ಶಬ್ದ ಕೇಳಿಬರುತ್ತದೆ. ಸಾಂಪ್ರದಾಯಿಕ ಶ್ರೀ ವೈಷ್ಣವರು ಧರಿಸುವ

ಸೀರೆ ಮತ್ತು ಪಂಚೆಗಳಿಗೆ ಇಲ್ಲಿ ಎಲ್ಲಿಲ್ಲದ ಬೇಡಿಕೆಯಿತ್ತು. ವಿಶೇಷವೆಂದರೆ ಮೇಲುಕೋಟೆ ಶ್ರೇಷ್ಠವಾದ ಪಂಚೆಗಳ ತಯಾರಿಕೆಗೆ ಹೆಸರಾಗಿತ್ತು. ಇಂದಿಗೂ 'ಮೇಲುಕೋಟೆ ಪಂಚೆಗಳು' ಎಂಬ ಹೆಸರು ಪ್ರಚಲಿತದಲ್ಲಿದೆ. ಇಲ್ಲಿನ ನೇಕಾರರು ಇಂದಿಗೂ ತಮ್ಮ ವೃತ್ತಿಯನ್ನು ಆರಾಧನೆ ಮತ್ತು ಸಮರ್ಪಣಾಭಾವದಿಂದ ನೋಡುತ್ತಾರೆ. ಈ ಸಾಂಪ್ರದಾಯಿಕ ಗೃಹಕೈಗಾರಿಕೆಯು ಇಂದೂ ಜೀವಂತವಾಗಿದ್ದು, ಹಲವರಿಗೆ ಉದ್ಯೋಗ ಕಲ್ಪಿಸಿರುವುದಲ್ಲದೆ, ತಾಂತ್ರಿಕತೆಯ ಮತ್ತು ಆಧುನಿಕತೆಯ ಪ್ರಭಾವಗಳ ನಡುವೆಯೂ ತನ್ನ ಸಾಂಸ್ಕೃತಿಕ ಸಂಬಂಧವನ್ನು ಉಳಿಸಿಕೊಂಡಿದೆ.

ಗೃಹ ಕೈಗಾರಿಕೆಗಳ ಸಾಲಿನಲ್ಲಿ ದೇವಾಲಯದಿಂದ ಪ್ರೇರಣೆ ಪಡೆದಿದ್ದ ಮತ್ತೊಂದು ಕರಕುಶಲ ಉದ್ಯಮವೆಂದರೆ 'ಎಲೆಯ ತಟ್ಟೆಗಳ ತಯಾರಿಕೆ'. ಅನ್ನಛತ್ರಗಳಾದ ರಾಮಾನುಜಕೂಟಗಳಿಂದ ಹಾಗೂ ಭಕ್ತಾಧಿಗಳಿಂದ ಊಟದ ಎಲೆಗೆ ಇಲ್ಲಿ ಬೇಡಿಕೆಯಿರುತ್ತಿತ್ತು. ಇಲ್ಲಿನ ಕುಟುಂಬದ ಸಿಬ್ಬಂದಿಗಳು ಬಿಡುವಿನ ವೇಳೆಯಲ್ಲಿ ವಿಶೇಷವಾಗಿ ಮಹಿಳೆಯರು ಹೆಚ್ಚಾಗಿ ಊಟದ ಎಲೆಗಳನ್ನು ತಯಾರಿಸುತ್ತಿದ್ದರು. 2 ರೀತಿಯ ಎಲೆಗಳನ್ನು ಈ ಕಲೆಗೆ ಉಪಯೋಗಿಸುತ್ತಿದ್ದರು. ಅವೆಂದರೆ ಮುತ್ತುಗದ ಎಲೆ (ಪಾಲಿಸ) ಮತ್ತು ಹಲಸಿನ ಎಲೆ ಇದಕ್ಕೆ ಕಾರಣ ಮೇಲುಕೋಟೆ ಸುತ್ತಲಿನ ಪರಿಸರದಲ್ಲಿ ಮುತ್ತುಗ ಮತ್ತು ಹಲಸಿನ ಎಲೆಗಳು ಹೇರಳವಾಗಿ ದೊರೆಯುತ್ತಿದ್ದವು. ಎಲೆಗಳ ತಯಾರಿಕೆಯು ಒಂದು ಕಲೆಯಾಗಿತ್ತು. ಬ್ರಾಹ್ಮಣರು ಧರಿಸುವ ಜನಿವಾರಗಳ ತಯಾರಿಕೆಯು ಇಲ್ಲಿ ಮತ್ತೊಂದು ಗೃಹಕೈಗಾರಿಕೆಯಾಗಿತ್ತು. ಮೊದಲ ಮೂರು ವರ್ಣಗಳಲ್ಲಿ ಜನಿವಾರವು ಅಗತ್ಯವಾದ ಲಕ್ಷಣವಾಗಿದೆ. ಉಪಕರ್ಮದ ಸಮಯದಲ್ಲಿ ಇದು ಹೆಚ್ಚಿನ ಬೇಡಿಕೆಯನ್ನು ಹೊಂದಿತ್ತು. ಆಗ ತಮ್ಮ ಜನಿವಾರವನ್ನು ಬದಲಿಸುತ್ತಾರೆ. ವಿಶೇಷ ಸಮಾರಂಭಗಳಲ್ಲಿ ಇದಕ್ಕೆ ಹೆಚ್ಚಿನ ಬೇಡಿಕೆಯಿದ್ದು, ಶಾಸ್ತ್ರಗಳಲ್ಲಿ ಉಲ್ಲೇಖವಾಗಿರುವಂತೆ ಹಳೆಯದನ್ನು ತೆಗೆಯುವ ಮತ್ತು ಹೊಸ ಜನಿವಾರ ಧರಿಸುವುದು ರೂಢಿಯಲ್ಲಿದೆ. ಆದರೆ ಜನಿವಾರವನ್ನು ನಿಗಧಿಪಡಿಸಿದ ಕೆಲವು ಮನೆಯವರು ಮಾತ್ರ ತಯಾರಿಸಬೇಕಿತ್ತು.

ಮತ್ತೊಂದು ಮುಖ್ಯ ಗೃಹ ಕೈಗಾರಿಕೆಯೆಂದರೆ ಶ್ರೀ ವೈಷ್ಣವರು ವಿಭಿನ್ನವಾಗಿ ಧರಿಸುವ ತಿರುಮಣ್ ನಾಮದ ತಯಾರಿಕೆ. ಇದು ಜಾತಿಯ ಸೂಚ್ಯವಾಗಿ ಉಪಯೋಗಿಸಲ್ಪಡುತ್ತದೆ. ಸ್ತ್ರೀಯರು ಮತ್ತು ಪುರುಷರು ಈ ನಾಮವನ್ನು ಧರಿಸುವರು. ಮೇಲುಕೋಟೆಯಲ್ಲಿ ದೊರೆತ ತಿರುಮಣ್‌ನಿಂದ ರಾಮಾನುಜರು ಇಲ್ಲಿಗೆ ಬಂದರೆಂದು ಶಾಸನವೊಂದು ಉಲ್ಲೇಖಿಸಿದೆ.[32] ಅಂದರೆ ಈ ಉದ್ಯಮವು ಬಹಳ ಹಿಂದಿನಿಂದ ಬೆಳೆದು ಬಂದಿರಬೇಕು. ಆಚಾರ್ಯರಿಂದ ನಾಮ ತಯಾರಿಸುವ ತಿರುಮಣ್ ಅನ್ವೇಷಣೆಯಾದ

ನಂತರ ಇದಕ್ಕೆ ಬೇಡಿಕೆ ಉಂಟಾಯಿತು. ತಿರುಮಣ್ ದೊರೆಯುವ ಭೂಮಿಯನ್ನು ದೇವಾಲಯಕ್ಕೆ ದಾನ ನೀಡಲಾಗಿತ್ತು.[33] ಶ್ರೀ ವೈಷ್ಣವರು ದೇಹದ 12 ಭಾಗಗಳಲ್ಲಿ ಈ ನಾಮವನ್ನು ಧರಿಸುವರು. ಸಾಂಪ್ರದಾಯಿಕವಾದ ಈ ನಾಮವನ್ನು ಶ್ರೀ ವೈಷ್ಣವರು 'ಊರ್ಧ್ವಪುಂಡ್ರ' ಎಂದು ಕರೆಯುತ್ತಾರೆ. ಇಲ್ಲಿ ತಯಾರಾಗುತ್ತಿದ್ದ ತಿರುಮಣ್‌ಗೆ ಹೆಚ್ಚಿನ ಬೇಡಿಕೆಯಿದ್ದು, ದೂರದ ಪ್ರದೇಶಗಳಿಗೂ ಈ ತಿರುಮಣ್ ನಾಮವು ರವಾನೆಯಾಗುತ್ತಿತ್ತು. ಶಾತ್ತಾದ ಶ್ರೀ ವೈಷ್ಣವ ವರ್ಗವು ಈ ನಾಮದ ತಯಾರಿಕೆಯಲ್ಲಿ ತೊಡಗಿತ್ತು.

ಅಲ್ಲದೆ ದೇವಾಲಯಗಳ ದೈನಂದಿನ ಬೇಡಿಕೆಗಳನ್ನು ಈಡೇರಿಸುವುದಕ್ಕಾಗಿ ಇನ್ನೂ ಹಲವು ಸಣ್ಣ ಕೈಗಾರಿಕೆಗಳು ಅಸ್ತಿತ್ವದಲ್ಲಿದ್ದವು. ನೇರವಾದ ಉಲ್ಲೇಖಗಳು ದೊರೆಯದಿದ್ದರೂ ಅವರು ನಿರ್ಮಿಸಿರುವ ದೇವಾಲಯಗಳ ಮೂರ್ತಿ ಶಿಲ್ಪಗಳು ಕುಂಬಾರಿಕೆ, ಬಡಗಿಕೆ, ಅಕ್ಕಸಾಲಿಗೆ, ದರ್ಪಣಗಳ ತಯಾರಿಕೆಗಳು ಗೃಹ ಕೈಗಾರಿಕೆಗಳಾಗಿದ್ದ ಅಂಶವನ್ನು ದೃಢಪಡಿಸುತ್ತವೆ. ಅಲಂಕಾರ ಪ್ರಿಯ ದೈವವಾದ ವಿಷ್ಣುವಿಗೆ ಹೂಮಾಲೆಗಳನ್ನು ತಯಾರಿಸುವಿಕೆಯು ಇಲ್ಲಿ ಒಂದು ಕಲೆಯಾಗಿ ಬೆಳವಣಿಗೆಯಾಯಿತು. ಹೂವುಗಳ ಅಗತ್ಯತೆಯನ್ನು ಪೂರೈಸಲು ತೋಟಗಾರಿಕೆಯನ್ನು ಅಭಿವೃದ್ಧಿಪಡಿಸಿದ್ದ ಅಂಶ ಶಾನದಲ್ಲಿ ಉಲ್ಲೇಖವಾಗಿದೆ.[34] ವಿಜಯನಗರದ ಅರಸು ಸದಾಶಿವ ದೇವರಾಯನ ಕಾಲದ ಒಂದು ಶಾಸನವು, ದೇವಾಲಯಕ್ಕೆ ನೀಡಿದ ಸಕಲಸ್ವಾಮ್ಯವಿರುವ ಗ್ರಾಮಗಳಲ್ಲಿ ಹೂವಿನ ತೋಟವು ಸೇರಿರುವ ಅಂಶವನ್ನು ತಿಳಿಸುತ್ತದೆ. ಹೂವಿನ ತೋಟವನ್ನು ನಂದನವನವೆಂದು ಕರಯೆಲಾಗುತ್ತಿತ್ತು.[35] ದೇವಸ್ಥಾನಕ್ಕೆ ಹೂವು ಮತ್ತು ತುಳಸಿಗಳ ಪೂರೈಕೆಗಾಗಿ 35 ಎಕರೆ ಜಮೀನನ್ನು ದೇವಾಲಯದ ಸುತ್ತಲೂ ಅಭಿವೃದ್ಧಿಪಡಿಸಿದ ಅಂಶವನ್ನು ದೇವಾಲಯ ಕೈಪಿಡಿಯು ತಿಳಿಸುತ್ತದೆ.[36] ಸುಂದರವಾದ ಹೂಮಾಲೆಗಳನ್ನು ಸಮರ್ಪಿಸುತ್ತಿರುವ ಶಿಲ್ಪಗಳು ಇದೊಂದು ಉದ್ಯಮವಾಗಿದ್ದ ಅಂಶವನ್ನು ವ್ಯಕ್ತಪಡಿಸುತ್ತವೆ. ಅಲ್ಲದೆ ಅರಿಶಿಣ, ಕುಂಕುಮ ಹೂವಿನ ಬುಟ್ಟಿಗಳ ತಯಾರಿಕೆ, ಕೇಸರಿಪುಡಿ ಇನ್ನಿತರ ದೇವಾಲಯದ ಅಗತ್ಯತೆಗಳನ್ನು ಪೂರೈಸಲು ಗೃಹಕೈಗಾರಿಕೆಗಳನ್ನೇ ನಂಬಲಾಗಿತ್ತು.

ವ್ಯಾಪಾರ ಕೇಂದ್ರವಾಗಿ ಮೇಲುಕೋಟೆ

ಮೇಲುಕೋಟೆಯನ್ನು ನಿಜವಾಗಿಯೂ ಗ್ರಾಮವೆಂದು ಹೇಳಲಾಗುವುದಿಲ್ಲ. ಅದೊಂದು ಪುರ ಅಥವಾ ಪಟ್ಟಣವಾಗಿತ್ತು ಎಂದು ಹೇಳಲು ಸಾಧ್ಯವಿದೆ. ಇದರ ನಗರ ವೈಶಿಷ್ಟ್ಯಗಳು ಮೂರು ಅಂಶಗಳಿಂದ ತಿಳಿದುಬರುತ್ತದೆ. ದೇವಾಲಯಗಳ ಸಂಕೀರ್ಣದ ಅಸ್ತಿತ್ವ, ದೊಡ್ಡ ಸಂಖ್ಯೆಯಲ್ಲಿ ನೆಲೆಸಿದ್ದ ಕೃಷಿಯೇತರ ಜನಸಂಖ್ಯೆ ಹಾಗೂ ದೇವಾಲಯ

ಸಮುಚ್ಛಯಕ್ಕೆ ಬೇಕಾಗಿದ್ದ ವಿವಿಧ ಬಗೆಯ ಪದಾರ್ಥಗಳನ್ನು ಸ್ಥಳೀಯವಾಗಿ ಉತ್ಪಾದಿಸದೆ ಇದ್ದರಿಂದ ಉಂಟಾದ ಬೇಡಿಕೆಯಿಂದಾಗಿ ಮೇಲುಕೋಟೆ ಒಂದು ಪಟ್ಟಣವಾಗುವ ಸಂಭವವನ್ನು ಸೃಷ್ಟಿಸಿಕೊಂಡಿತು. ದೇವಾಲಯವು ಒಂದು ದೊಡ್ಡ ಗ್ರಾಹಕನಂತೆ ಈ ಪ್ರದೇಶದಲ್ಲಿ ಕೆಲಸಮಾಡುತ್ತಿತ್ತು. ದಿನನಿತ್ಯದ ಸೇವೆಗಳಿಗೆ ಮತ್ತು ವಿಶೇಷ ಸಂದರ್ಭಗಳಲ್ಲಿ ವಿವಿಧ ತರಹದ ಬೇಡಿಕೆಗಳು ಮತ್ತು ಸೇವೆಗಳ ಅಗತ್ಯತೆ ಉಂಟಾಗುತ್ತಿತ್ತು. ಆರಂಭದ ದಿನಗಳಲ್ಲಿ ದೇವಾಲಯದ ಅಗತ್ಯತೆಗಳು ಬಹುಶಃ ತುಂಬಾ ಕಡಿಮೆಯಿದ್ದವು. ಈ ಸ್ಥಿರತೆಯು ಕೊಡುಗೆಗಳಿಂದ ವೃದ್ಧಿಯಾಯಿತು. 14ನೇ ಶತಮಾನದ ನಂತರ ಹಬ್ಬಗಳು ಮತ್ತು ಆಚರಣೆಗಳು ಹೆಚ್ಚಾದವು. ಫಲಿತಾಂಶವಾಗಿ ದೇವಾಲಯಗಳ ನಾನಾ ವಿಧದ ಅವಶ್ಯಕತೆಗಳು ವೃದ್ಧಿಯಾಗಲಾರಂಭಿಸಿದವು.

ಶಾಸನವೊಂದು ಮೇಲುಕೋಟೆ ದೇವಾಲಯದ ಕೆಲವು ಕೃಷಿಕ ಉತ್ಪನ್ನದ ಅಗತ್ಯತೆಗಳ ಪಟ್ಟಿ ನೀಡುತ್ತದೆ. ಅಕ್ಕಿ, ಕಡಲೆ, ಬೇಳೆಕಾಳುಗಳು, ಅರಿಶಿಣ, ಮೆಣಸು, ಸಾಸಿವೆ, ಬೆಲ್ಲ, ಉಪ್ಪು, ಅಡಿಕೆ, ವಿಳ್ಯದೆಲೆ, ಕರ್ಪೂರ, ತೆಂಗಿನಕಾಯಿ, ಕುಂಕುಮ, ಹಣ್ಣುಗಳು, ಹಾಲು, ತುಪ್ಪ, ಬೆಣ್ಣೆ, ಮೊಸರು, ಎಣ್ಣೆ, ಜೇನು ಇತ್ಯಾದಿ.[37]

ದೇವಾಲಯವು ಅನುಭೋಗಿಸುತ್ತಿದ್ದ ಕೃಷಿಯೇತರ ಉತ್ಪನ್ನಗಳ ಉಲ್ಲೇಖವೂ ಶಾಸನಗಳಲ್ಲಿ ಲಭ್ಯವಾಗಿದೆ. ಮುತ್ತು, ಸುಗಂಧದ್ರವ್ಯಗಳು, ವಿವಿಧ ಬಗೆಯ ವಸ್ತ್ರಗಳು, ಮರದ ಸಾಮಾನುಗಳು, ಆಭರಣಗಳು, ಚಿನ್ನ, ಬೆಳ್ಳಿ, ಮತ್ತು ಹಿತ್ತಾಳೆ ಲೋಹದ ದೀಪಗಳು, ಅಲಂಕಾರಿಕ ವಸ್ತುಗಳು, ರೇಷ್ಮೆ ಸೀರೆಗಳು, ದೂಪ, ಶ್ರೀಗಂಧ ಇತ್ಯಾದಿಗಳು[38].

ಮೇಲುಕೋಟೆ ನಾರಾಯಣಸ್ವಾಮಿ ದೇವಾಲಯವು 2000 ವರಹಗಳನ್ನು ಕೃಷಿ ಉತ್ಪನ್ನಗಳ ಖರೀದಿಗಾಗಿ ವೆಚ್ಚ ಮಾಡಿದ ಅಂಶವನ್ನು ವಿಜಯನಗರದ ಕಾಲದ ಶಾಸನವು ಉಲ್ಲೇಖಿಸುತ್ತದೆ.[39] ದೇವಾಲಯ ಸಮುಚ್ಚಯದಲ್ಲಿ ದೇವರಿಗೆ ಪ್ರತಿನಿತ್ಯ ಅರ್ಪಿಸುತ್ತಿದ್ದ ನೈವೇದ್ಯಕ್ಕಾಗಿ ಅಕ್ಕಿಯನ್ನು ಹೆಚ್ಚಾಗಿ ಬಳಸಲಾಗುತ್ತಿತ್ತು. ಮತ್ತೊಂದು ಮುಖ್ಯ ಅನುಭೋಗಿ ಸರಕು ಎಣ್ಣೆಯಾಗಿದ್ದು, ದೇವಾಲಯವು ಹೆಚ್ಚಿನ ವೆಚ್ಚವನ್ನು ಮಾಡುತ್ತಿತ್ತು. ಮೇಲುಕೋಟೆ ಪ್ರದೇಶವು ಮಳೆ ಆಧಾರಿತ ಸಾಗುವಳಿ ಪ್ರದೇಶವಾಗಿದ್ದು, ದೇವಾಲಯದ ಆರಾಧನೆ, ಆಚರಣೆಗಳು ಹಾಗೂ ಹಲವು ಬಗೆಯ ವರ್ಗಗಳ ಜನಗಳ ಅನುಭೋಗಕ್ಕಾಗಿ ಅವಶ್ಯಕವಾಗಿದ್ದ ಎಲ್ಲಾ ಪದಾರ್ಥಗಳನ್ನು ಉತ್ಪಾದಿಸುತ್ತಿರಲಿಲ್ಲ. ಉದಾಹರಣೆಗೆ ಸಾಂಬಾರು ಪದಾರ್ಥಗಳು, ಅಡಿಕೆ, ಲೋಹದ ವಸ್ತುಗಳನ್ನು ಹೊರಭಾಗದಿಂದ ಆಮದು ಮಾಡಿಕೊಳ್ಳಬೇಕಾಗಿತ್ತು. ಕಡೆಯದಾಗಿ ಆರ್ಥಿಕ ದೃಷ್ಟಿಯಿಂದ ಈ ಪ್ರದೇಶದ ದೇವಾಲಯ

ಸಮುಚ್ಛಯವು ವರ್ತಕರಿಗೆ ತಮ್ಮ ವ್ಯಾಪಾರ ಹಾಗೂ ಇನ್ನಿತರ ಸೌಲಭ್ಯಗಳನ್ನು ಸ್ಥಾಪಿಸಿಕೊಳ್ಳಲು ಒಂದು ಉತ್ತೇಜನಕಾರಿ ಅಂಶವಾಗಿ ಕಂಡುಬಂದಿತು. ವಿಶೇಷ ಸಂದರ್ಭಗಳಲ್ಲಿ ನಿರ್ದಿಷ್ಟವಾಗಿ ವಿವಿಧ ಬಗೆಯ ಪದಾರ್ಥಗಳ ಬೆಲೆಯು ಸಾಮಾನ್ಯ ಸ್ಥಿತಿಗಿಂತ ಬಹಳಷ್ಟು ಹೆಚ್ಚಿರುತ್ತಿತ್ತು.

ಸಂತೆಗಳು ಮತ್ತು ಜಾತ್ರೆಗಳು

ಸಂತೆಗಳು ಮತ್ತು ಜಾತ್ರೆಗಳು ಪಟ್ಟಣಗಳ ಬೆಳವಣಿಗೆಗೆ ಕಾರಣವಾಯಿತು. ಮಾರುವವರು ಮತ್ತು ಕೊಳ್ಳುವವರು ಒಂದು ನಿರ್ದಿಷ್ಟವಾದ ಸ್ಥಳದಲ್ಲಿ ಗೊತ್ತಾದ ವೇಳೆಯಲ್ಲಿ ಸೇರುವುದಕ್ಕೆ ಸಂತೆ ಎನ್ನಬಹುದು. ಸಂತೆ ಒಂದು ಮುಖ್ಯ ವ್ಯಾಪಾರ ಕೇಂದ್ರವಾಗಿದ್ದು, ಆರ್ಥಿಕ ಪ್ರಗತಿ ಸಾಧಿಸುವಲ್ಲಿ ಅತ್ಯಂತ ಮಹತ್ತರ ಪಾತ್ರ ವಹಿಸಿದೆ. ದೇವಾಲಯದ ಅಸ್ತಿತ್ವವೇ ಸಂತೆಯ ಬೆಳವಣಿಗೆಗೆ ಕಾರಣವಾಗಿತ್ತು. ಸಂತೆಯನ್ನು ವರ್ತಕರು ನಾನಾ ಕಡೆಗಳಿಂದ ಬಂದು ಒಂದು ಸ್ಥಳದಲ್ಲಿ ಸೇರಿ ನಡೆಸುತ್ತಿದ್ದರು. ಕ್ರಿ.ಶ. 1528ರ ಕೃಷ್ಣದೇವರಾಯನ ಕಾಲದಲ್ಲಿ ಶಾಸನವೊಂದು ಮೇಲುಕೋಟೆಯಲ್ಲಿ ಸಂತೆಯನ್ನು ಆರಂಭಿಸಿದ ಅಂಶವನ್ನು ತಿಳಿಸುತ್ತದೆ.[40] ಸಂತೆಯಿಂದ ಬರುವ ಸುಂಕದ ಆದಾಯವನ್ನು ನಾರಾಯಣಸ್ವಾಮಿ ದೇವಾಲಯಕ್ಕೆ ವಹಿಸಿದ ಅಂಶವೂ ತಿಳಿದುಬರುತ್ತದೆ.[41] ವಿಜಯನಗರದ ಆಳ್ವಿಕೆಯ ಕಾಲಕ್ಕೆ ಮೇಲುಕೋಟೆಯು ಒಂದು ದೊಡ್ಡ ಊರಾಗಿ ಮತ್ತು ಪಟ್ಟಣವಾಗಿ ಬೆಳೆಯುತ್ತಿತ್ತು. ಸುಂಕವನ್ನು ನಗದಿನ ರೂಪದಿಂದ ವಸೂಲು ಮಾಡಲಾಗುತ್ತಿತ್ತು. ಸಂತೆ ನಡೆಯುವ ಸ್ಥಳವನ್ನು 'ಸಂತೆಮಾಳ' ಎಂದು ಕರೆಯುತ್ತಿದ್ದರು. ದಾಖಲೆಗಳ ಪ್ರಕಾರ ಪ್ರತಿ ಮಂಗಳವಾರ ಇಲ್ಲಿ ಸಂತೆ ನಡೆಯುತ್ತಿತ್ತು. ಸಂತೆಯು ಇಂದಿಗೂ ಇಲ್ಲಿ ನಡೆಯುವುದನ್ನು ನಾವು ಕಾಣಬಹುದು. ಮತ್ತೊಂದು ಮುಖ್ಯ ಆರ್ಥಿಕ ಬೆಳವಣಿಗೆಯೆಂದರೆ ಜಾತ್ರೆಗಳು. ಹಲವು ಭಾಗಗಳಿಂದ ಆಗಮಿಸುತ್ತಿದ್ದ ಭಕ್ತಾದಿಗಳು ಬೇಡಿಕೆಗಳ ಫಲವಾಗಿ ಜಾತ್ರೆಗಳು ಆರಂಭವಾದವು. ದೂರ–ದೂರದಿಂದ ವರ್ತಕರು ಆಕರ್ಷಿತರಾದರು ಸಾಮಾನ್ಯವಾಗಿ ಜಾತ್ರೆಯು ವರ್ಷಕ್ಕೊಮ್ಮೆ ನಡೆಯುತ್ತಿತ್ತು. ಮೇಲುಕೋಟೆಯಲ್ಲಿ ಚೆಲುವನಾರಾಯಣಸ್ವಾಮಿಗೆ ನಡೆಯುವ ವೈರಮುಡಿಜಾತ್ರೆಯು ಬಹಳ ಹಿಂದಿನಿಂದ ನಡೆದು ಬಂದಿರುವ ಜಾತ್ರೆಯಾಗಿದೆ. ಸುತ್ತಲಿನ ಕೃಷಿ ಉತ್ಪನ್ನಗಳಿಗೆ ಜಾತ್ರೆಯು ಒಂದು ಬೃಹತ್ ಗ್ರಾಹಕರರ ಗುಂಪನ್ನೇ ಒದಗಿಸುತ್ತಿತ್ತು. ಕೃಷಿಯೇತರ ಉತ್ಪನ್ನಗಳ ಹಾಗೂ ಕರಕುಶಲವಸ್ತುಗಳು, ಹಾಗೂ ಗೃಹಕೈಗಾರಿಕೆಯ ಉತ್ಪನ್ನಗಳಿಗೂ ಹೆಚ್ಚಿನ ಬೇಡಿಕೆ ಇರುತ್ತಿತ್ತು. ಜಾತ್ರೆಯ ಸುಂಕವೂ ದೇವಾಲಯದ ಆದಾಯದ ಭಾಗವೇ ಆಗಿತ್ತು. ವರ್ಷದ ವಿಶೇಷ ಉತ್ಸವಗಳಲ್ಲಿಯೂ ಜಾತ್ರೆಗಳು ಏರ್ಪಡುತ್ತಿದ್ದವು. ಒಟ್ಟಿನಲ್ಲಿ ಧಾರ್ಮಿಕ ಉದ್ದೇಶದಿಂದ ಏರ್ಪಟ್ಟ ಸಂತೆ ಮತ್ತು ಜಾತ್ರೆಗಳು ಸ್ಥಳದ ಆರ್ಥಿಕ ರಚನೆಯಲ್ಲಿ ಮಹತ್ವದ ಪಾತ್ರವಹಿಸಿದ್ದವು.

ದೇವಾಲಯದ ಸಿಬ್ಬಂದಿಗಳ ನೇಮಕ

ದೇವಾಲಯದ ಬಹುಮುಖ ಚಟುವಟಿಕೆಗೆ ಮತ್ತೊಂದು ಉದಾಹರಣೆ ಹಲವಾರು ಉದ್ದೇಶಗಳಿಗೆ ದೇವಾಲಯಗಳಲ್ಲಿ ಸಿಬ್ಬಂದಿಗಳ ನೇಮಕವಾಗಿದೆ. ಇಲ್ಲಿನ ದೇವಾಲಯಗಳು ದೊಡ್ಡ ಪ್ರಮಾಣದ ಉದ್ಯೋಗ ಸೃಷ್ಟಿಗಾರರಾಗಿ ಕಾರ್ಯ ನಿರ್ವಹಿಸುತ್ತಿದ್ದವು. ರಾಮಾನುಜಾಚಾರ್ಯರಿಂದ ನೇಮಕವಾದವರು ಎಂದು ನಂಬಲಾಗಿರುವ 'ಐಂಬತ್ತಿರುವರ್' ಎಂಬ 52 ಕೈಂಕರ್ಯ ನಿರ್ವಹಿಸುವ ಸಿಬ್ಬಂದಿಗಳ ಉಲ್ಲೇಖ ಹಲವು ಶಾಸನಗಳಲ್ಲಿ ಉಲ್ಲೇಖವಾಗಿದೆ. ದೇವಾಲಯದ ವೈದಿಕ ಸಂಬಂಧ ಕೈಂಕರ್ಯಗಳಿಗೆ ಮಾತ್ರ ಇವರು ಸೀಮಿತವಾಗಿದ್ದರು. ಅಗತ್ಯವಾಗಿದ್ದ ಇನ್ನಿತರ ಹಲವು ಉದ್ಯೋಗಗಳ ಹೆಸರು ಶಾಸನಗಳಲ್ಲಿ ಉಲ್ಲೇಖವಾಗಿಲ್ಲ. ವಿಜಯನಗರದ ಅರಸರು ಮತ್ತು ಮೈಸೂರು ಒಡೆಯರ ಕಾಲದಲಿ ಮೇಲುಕೋಟೆಯಲ್ಲಿ ನಿರ್ಮಾಣವಾದ ಹಲವು ಸಣ್ಣ ಗುಡಿಗಳು ಹಾಗೂ ಆದಾಯವು ಹೆಚ್ಚಾದಂತೆ ಹೆಚ್ಚಿನ ಸಿಬ್ಬಂದಿಗಳನ್ನು ನೇಮಿಸಿಕೊಳ್ಳಲಾರಂಭಿಸಿತ್ತು. ದಾನದಿಂದ ಬಂದ ಭೂಮಿಯ ಆದಾಯದಲ್ಲಿ ದೇವಾಲಯದ ನೌಕರರಿಗೆ ನೀಡುವ ಸಂಬಳದ ಭಾಗವನ್ನು ಒಂದು ಶಾಸನವು ಉಲ್ಲೇಖಿಸುತ್ತದೆ.[42]

ಮೇಲುಕೋಟೆ ದೇವಾಲಯ ಕೈಪಿಡಿಯು ತಿಳಿಸುವಂತೆ ಇಲ್ಲಿನ ಪ್ರಧಾನವಾದ ನಾರಾಯಣಸ್ವಾಮಿ ದೇವಾಲಯವು ಹಲವು ಉದ್ದೇಶಕ್ಕೆ 195 ನೌಕರರನ್ನು ನೇಮಿಸಿಕೊಂಡಿತ್ತು. ಯೋಗಾನರಸಿಂಹಸ್ವಾಮಿ ದೇವಾಲಯವು 33 ಸಿಬ್ಬಂದಿಗಳನ್ನು ನೇಮಕಮಾಡಿಕೊಂಡಿತ್ತು.[43] ದೇವಾಲಯವು ಪ್ರತ್ಯಕ್ಷವಾಗಿಯಲ್ಲದೆ ಪರೋಕ್ಷವಾಗಿಯೂ ಈ ಸ್ಥಳದಲ್ಲಿ ಉದ್ಯೋಗವನ್ನು ಸೃಷ್ಟಿಸಿತ್ತು. ಈ ವೃತ್ತಿ ಪಂಗಡಗಳ ಜನರ ವೇತನವನ್ನು ದೇವಾಲಯದಲ್ಲಿ ಅವರ ಸ್ಥಾನಮಾನ ಮತ್ತು ಹೊಣೆಗಾರಿಕೆಗೆ ಅನುಗುಣವಾಗಿ ನಿಗಧಿ ಪಡಿಸಲಾಗುತ್ತಿತ್ತು. ಎಲ್ಲಾ ನೌಕರರು ವೇತನವನ್ನು ನಗದಿನ ರೂಪದಲ್ಲಿಯೇ ಪಡೆಯುತ್ತಿದ್ದರು. ಹೀಗೆ ಸ್ಥಳದ ಆರ್ಥಿಕ ರಚನೆಯಲ್ಲಿ ದೇವಾಲಯಗಳು ವಹಿಸಿದ್ದ ಪಾತ್ರಕ್ಕೆ ಇದು ಮುಖ್ಯ ಉದಾಹರಣೆಯಾಗಿದೆ.

ಆರ್ಥಿಕ ಸಂಸ್ಥೆಯಾಗಿ ದೇವಾಲಯ

ದೇವಾಲಯವು ಆರ್ಥಿಕ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದ್ದುದನ್ನು ಶಾಸನಗಳು ತಿಳಿಸುತ್ತವೆ. ಸಮಾಜದ ಎಲ್ಲ ವರ್ಗದ ಸದಸ್ಯರಿಗೆ ಬಡ್ಡಿ ರೂಪದಲ್ಲಿ ಸಾಲವನ್ನು ನೀಡುತ್ತಿದ್ದವು. ತೊಂಡನೂರಿನ 12ನೇ ಶತಮಾನದ ಶಾಸನವು ದಾನವಾಗಿ ಬಂದ ಚಿನ್ನದಿಂದ ಬಂದ ಬಡ್ಡಿಯಿಂದ ಲಕ್ಷ್ಮಿನಾರಾಯಣ ಪೆರುಮಾಳ್ ಗುಡಿಯ ದೀಪಾರಾಧನೆ

ಮಾಡುವ ವಿಚಾರ ತಿಳಿಸುತ್ತದೆ.[44] ಮತ್ತೊಂದು ಶಾಸನವು ದಾನ ಬಂದ 20 ಗದ್ಯಾಣಗಳಿಂದ ಬರುವ ಬಡ್ಡಿಯ ಆದಾಯದಿಂದ ಅನ್ನದಾನ ಮಾಡುವ ಅಂಶ ತಿಳಿಸುತ್ತದೆ.[45] ಮತ್ತೊಂದು ಶಾಸನವು ಹೊಯ್ಸಳರ ಕಾಲದ್ದಾಗಿದ್ದು 6 ಫೋನ್‌ಗಳಿಂದ ಬರುವ ಬಡ್ಡಿಯ ಆದಾಯದಿಂದ ಶ್ರೀ ಜಯಂತಿ ಮತ್ತು ಇತರ ಉತ್ಸವಗಳು ನಡೆಯುವ ಅಂಶವನ್ನು ಉಲ್ಲೇಖಿಸುತ್ತದೆ.[46] ಹೊಯ್ಸಳರ ಕಾಲದಲ್ಲಿ ದೇವಾಲಯಗಳು ತಮ್ಮ ಅಸಲು ಮೊತ್ತವನ್ನು ಗದ್ಯಾಣ, ಪೋನ್ ಎಂಬ ಪದಗಳಿಂದ ಮತ್ತು ನೀಡಿದ ಸಾಲದಿಂದ ಬರುವ ಬಡ್ಡಿಯನ್ನು ಪಣ, ಪೊಲಿ ಎಂಬ ಹೆಸರುಗಳಿಂದ ಸೂಚಿಸಲಾಗುತ್ತಿತ್ತು. ವಿಜಯನಗರ ಮತ್ತು ಮೈಸೂರು ಒಡೆಯರ ಕಾಲದ ಶಾಸನಗಳಲ್ಲಿ ಈ ಮೂಲದ ಆದಾಯ ಉಲ್ಲೇಖವಾಗಿಲ್ಲ. ಆದರೂ ಸಾಲನೀಡುವ ಆಚರಣೆಯನ್ನು ದೇವಾಲಯಗಳು ಮುಂದುವರಿಸಿದುದನ್ನು ಅಲ್ಲಗಳೆಯುವಂತಿಲ್ಲ.

ನಾರಾಯಣಸ್ವಾಮಿ ದೇವಾಲಯ ಕೈಪಿಡಿಯು ಭಕ್ತಾಧಿಗಳು ದೇವಾಲಯದ ವಿವಿಧ ಕೈಂಕರ್ಯಕ್ಕೆ ಇಟ್ಟ ಮೊಬಲಗನ್ನು ಪಟ್ಟಿಮಾಡುತ್ತದೆ. ಸಾಲನೀಡಿದ ಹಣದಿಂದ ಬಂದ ಬಡ್ಡಿಯ ಆದಾಯದಿಂದ ಮಾಡಬೇಕಾದ ಕೈಂಕರ್ಯವನ್ನು ದಾಖಲಿಸಲಾಗಿದೆ. ಮೊಬಲಗನ್ನು ಶ್ರೀರಂಗಪಟ್ಟಣದ ಅಮಲ್ದಾರರ ಹೆಸರಿನಲ್ಲಿ ಇಡಲಾಗಿತ್ತು. ಸಾಲದ ಹಣಕ್ಕೆ ಬರುತ್ತಿದ್ದ ಬಡ್ಡಿಯ ದರವನ್ನು ನಿಗದಿಪಡಿಸಲಾಗಿತ್ತು. 1936ರಲ್ಲಿ 15,400 ರೂ.ಗಳು ಸಾಲವಾಗಿ ನೀಡಲಾಗಿದ್ದು ಅದಕ್ಕೆ 750 ರೂ.ಗಳು ಬಡ್ಡಿಯ ರೂಪದಲ್ಲಿ ಆದಾಯ ಬರುತ್ತಿತ್ತು.[47] ಹೀಗೆ 20ನೇ ಶತಮಾನದಲ್ಲಿಯೂ ದೇವಾಲಯವು ಬ್ಯಾಂಕಿನ ರೂಪದಲ್ಲಿ ಕಾರ್ಯನಿರ್ವಹಿಸುತ್ತಿತ್ತು. ದೇವಾಲಯಗಳಿಗೆ ಸಮಾಜದ ಪ್ರತಿ ವರ್ಗದಿಂದ ಸ್ಥಿರಭದ್ರತೆ ಮತ್ತು ಬಂಡವಾಳ ಹೂಡಿಕೆಯ ರೂಪದಲ್ಲಿ ಲಭ್ಯವಾಗುತ್ತಿತ್ತು. ನಿಗಧಿಪಡಿಸಿದ ಬಡ್ಡಿಯನ್ನು ದೇವಾಲಯದ ದಿನನಿತ್ಯದ ಕೈಂಕರ್ಯಕ್ಕೆ ಬಳಸಲಾಗುತ್ತಿತ್ತು. ಸಾಲ ಪಡೆದ ವ್ಯಕ್ತಿಯು ಬಡ್ಡಿ ನೀಡಲು ವಿಫಲನಾದರೆ ದೇವಾಲಯವು ಇಬ್ಬರು ವ್ಯಕ್ತಿಗಳನ್ನು ವಸೂಲಿಗೆ ಕಳುಹಿಸುತ್ತಿತ್ತು. ಪಾವತಿಸುವವರೆಗೆ ಇವರಿಬ್ಬರೂ ಅವನ ಮನೆಯಲ್ಲಿಯೇ ಇರುತ್ತಿದ್ದು, ಅವರಿಗೆ ಊಟೋಪಚಾರ ಅವನದೇ ಜವಾಬ್ದಾರಿಯಾಗಿತ್ತು. ಕೆಲವು ಸಲ ಬಡ್ಡಿ ನೀಡಲು ವಿಫಲನಾದರೆ ದಂಡ ಹಾಕಲಾಗುತ್ತಿತ್ತು. ಹೀಗೆ ದೇವಾಲಯದ ಹಣದ ವಸೂಲಿಗೆ ಹಲವು ಮಾರ್ಗಗಳನ್ನು ಅನುಸರಿಸುವ ಅಧಿಕಾರವನ್ನು ಹೊಂದಿತ್ತು.

ಈ ರೀತಿಯಾಗಿ ಆರ್ಥಿಕ ದೃಷ್ಟಿಕೋನದಿಂದ ನೋಡಿದಾಗ ಮೇಲುಕೋಟೆ ದೇವಾಲಯ ಸಂಕೀರ್ಣವು ಹೊಯ್ಸಳರ ಕಾಲದಿಂದ ಆರಂಭವಾಗಿ ಈ ಸ್ಥಳದ ಜನರ ಆರ್ಥಿಕ ಜನಜೀವನಕ್ಕೆ ಸಂಬಂಧಿಸಿದಂತೆ ಬಹಳ ಕುತೂಹಲಕಾರಿಯಾದ ಮಾಹಿತಿಗಳನ್ನು

ನೀಡುತ್ತದೆ. ದೇವಾಲಯ ಸಂಕೀರ್ಣದ ಉಗಮವು ಸ್ವತಃ ಆ ಪ್ರದೇಶದ ಆರ್ಥಿಕ ಇತಿಹಾಸದಲ್ಲಿ ಒಂದು ಮೈಲಿಗಲ್ಲಾಗಿದೆ. ಇದರಿಂದಾಗಿ ಅದು ಕೃಷಿ ವಿಸ್ತರಣೆ ಮತ್ತು ಸಂಪನ್ಮೂಲಗಳ ಚಲನಾತ್ಮಕತೆ ಹಾಗೂ ಹಂಚಿಕೆಗೆ ಹೆಚ್ಚಿನ ಪ್ರೋತ್ಸಾಹವು ದೊರೆಯಿತು.

ಅಂದಿನ ಸಮಕಾಲೀನ ಅರ್ಥದಲ್ಲಿ ದೇವಾಲಯಕ್ಕೆ ಹಣವನ್ನು ತೊಡಗಿಸುವುದು ಈಗ ಕೈಗಾರಿಕೆಗಳಿಗೆ ಹಣವನ್ನು ತೊಡಗಿಸುವಂತಿತ್ತು. ಹೊಯ್ಸಳರು ಮತ್ತು ವಿಜಯನಗರದ ಅರಸರು ಅವರ ಆಡಳಿತದಲ್ಲಿ ಸಣ್ಣ ಮತ್ತು ದೊಡ್ಡ ದೇವಾಲಯಗಳನ್ನು ನಿರ್ಮಿಸಲು ತಮ್ಮ ಹಣ ಶಕ್ತಿ ಹಾಗೂ ಸಮಯವನ್ನು ಗರಿಷ್ಟ ಪ್ರಮಾಣದಲ್ಲಿ ಉಪಯೋಗಿಸಿದರು. ಇದರ ಹಿಂದೆ ಧಾರ್ಮಿಕ ಉದ್ದೇಶಗಳು ಎದ್ದು ಕಾಣುತ್ತಿದ್ದರೂ ಈ ರೀತಿಯಾದ ದೇವಾಲಯಗಳ ನಿರ್ಮಾಣದಲ್ಲಿ ನಾವು ಆರ್ಥಿಕ ಪರಿಣಾಮಗಳನ್ನು ಅಲ್ಲಗೆಳೆಯಲು ಸಾಧ್ಯವಾಗುವುದಿಲ್ಲ. ಮೇಲುಕೋಟೆ ದೇವಾಲಯ ಸಮುಚ್ಛಯವನ್ನು ಈ ದೃಷ್ಟಿಕೋನದಿಂದ ಮಾಡಿದ ಅಧ್ಯಯನದಿಂದ ಕೆಲವು ನಿರ್ಧಾರಗಳನ್ನು ಮಾಡಬಹುದು.

ಮೊದಲನೆಯದಾಗಿ ದೇವಾಲಯದ ಸ್ಥಾಪನೆಯ ನಂತರ ಸ್ಥಳದ ಸುತ್ತಲಿನ ಕೃಷಿವ್ಯವಸ್ಥೆಯು ಬಹಳ ಪ್ರಾಮುಖ್ಯತೆಯನ್ನು ಹೊಂದಿತು. ಅದು ಎರಡು ರೀತಿಯ ಆರ್ಥಿಕ ವರ್ಗಗಳನ್ನು ಹೊಂದಿತ್ತು. 1) ಭೂ ಸ್ವಾಧೀನತೆಯನ್ನು ಹೊಂದಿದ್ದ ಬ್ರಾಹ್ಮಣ ಮಹಾಜನ ಭೂ ಮಾಲೀಕರು 2) ದೇವಾಲಯಗಳ ಭೂಮಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಗೇಣಿದಾರ ವರ್ಗ. ಆದ್ದರಿಂದ ಕೃಷಿ ವ್ಯವಸ್ಥೆಯಲ್ಲೇ ಒಂದು ಏಣಿ ಶ್ರೇಣಿಯು ಅಸ್ತಿತ್ವದಲ್ಲಿತ್ತು.

ಎರಡನೆಯದಾಗಿ ಈ ಪ್ರದೇಶದ ಬಹುಪಾಲು ಭೂಮಿಯು ಸಾಗುವಳಿಗೆ ಮಳೆಯನ್ನು ಆಶ್ರಯಿಸಿತ್ತು. ಜಮೀನನ್ನು ನೀರಾವರಿಗೆ ಒಳಪಡಿಸಲು ಕೆರೆಗಳನ್ನು ಆಶ್ರಯಿಸಲಾಯಿತು. ರಾಗಿ, ಭತ್ತ ಹಾಗೂ ತೋಟದ ಉತ್ಪನ್ನದಲ್ಲಿ ವಿಶೇಷ ಪರಿಣತಿಯನ್ನು ಹೊಂದುವ ಪ್ರಯತ್ನವನ್ನು ಮಾಡುತ್ತಿತ್ತು. ಕೆರೆಗಳನ್ನು ದುರಸ್ತಿಗೊಳಿಸುವ ಮೂಲಕ ನೀರಾವರಿ ಜಮೀನನ್ನು ವಿಸ್ತರಿಸುವ ಉದ್ದೇಶವಿತ್ತು.

ಮೂರನೆಯದಾಗಿ ದೇವಾಲಯ ಸಮುಚ್ಛಯವು ಅನೇಕ ಕೃಷಿಯೇತರ ಉತ್ಪನ್ನಗಳನ್ನು ಹಾಗೂ ಸಾಂಬಾರ ಪದಾರ್ಥಗಳನ್ನು ಉಪಯೋಗಿಸುತ್ತಿದ್ದರಿಂದ ಅದು ತನ್ನ ವಾಸದಲೆಯ ಸುತ್ತಲಿನ ಮಾರುಕಟ್ಟೆಗಳೊಂದಿಗೆ ಸಂಪರ್ಕವನ್ನು ಹೊಂದಿತ್ತು. ಈ ಅಂಶವು ಮೇಲುಕೋಟೆಗೆ ಒಂದು ಪಟ್ಟಣದ ವೈಶಿಷ್ಟ್ಯತೆಯನ್ನು ನೀಡಿತು. ನಾವು ಇದನ್ನು ದೇವಾಲಯ ಪಟ್ಟಣ ಎಂದು ಹೆಸರಿಸಬಹುದು. ಶಾಸನಗಳಿಂದ ತಿಳಿದು ಬಂದ ಪ್ರಕಾರವಾಗಿ

ಧಾರಣೆಪಟ್ಟಿ ಹಾಗೂ ಅನುಭೋಗ ಪಟ್ಟಿಯ ಮುಖಾಂತರ ದೇವಾಲಯದ ವ್ಯಾಪಾರೀ ವೈಶಿಷ್ಟ್ಯತೆಯು ಕಂಡುಬರುತ್ತದೆ.

ನಾಲ್ಕನೆಯದಾಗಿ ದೇವಾಲಯಗಳು ಸೃಷ್ಟಿಸಿದ ಕೃಷಿಯೇತರ ಉತ್ಪನ್ನಗಳ ಬೇಡಿಕೆಯಿಂದ ಕೃಷಿಯಂತೆಯೇ ಸಣ್ಣ ಕೈಗಾರಿಕೆಗಳೂ ಪ್ರಾಮುಖ್ಯತೆ ಪಡೆಯುವಂತಾಯಿತು. ಆರ್ಥಿಕ ರಚನೆಯಲ್ಲಿ ಇವು ಔದ್ಯೋಗಿಕವಾಗಿ ಹಾಗೂ ದೇವಾಲಯದ ಅಗತ್ಯತೆಗಳನ್ನು ಪೂರೈಸುವಲ್ಲಿ ಪ್ರಮುಖ ಕಾಣಿಕೆ ನೀಡಿತು.

ಐದನೆಯದಾಗಿ ಮೇಲುಕೋಟೆಯಲ್ಲಿ ಹಣದ ಆರ್ಥಿಕತೆಯು ಗಣನೀಯ ಪ್ರಭಾವವನ್ನು ಹೊಂದಿತ್ತು. ಏಕೆಂದರೆ ದೇವಾಲಯಗಳು ಹಾಗೂ ಬ್ರಾಹ್ಮಣ ಭೂ ಮಾಲೀಕರ ಎಲ್ಲಾ ಬಗೆಯಾದ ವ್ಯವಹಾರಗಳ ವೆಚ್ಚಗಳೆಲ್ಲವನ್ನು ಗದ್ಯಾಣ, ವರಹವೆಂಬ ನಾಣ್ಯಗಳ ಮೂಲಕ ಎಣಿಸಲಾಗುತ್ತಿತ್ತು. ಹಣದ ಚಲಾವಣೆಯು ಬಹುಶಃ ಆರ್ಥಿಕ ಜೀವನದ ಊಳಿಗಮಾನ್ಯ ರಚನೆಯ ಕಠಿಣತೆಯನ್ನು ದೂರಮಾಡಿತು.

ಕಡೆಯದಾಗಿ ಮೇಲುಕೋಟೆ ದೇವಾಲಯ ಸಂಕೀರ್ಣವು ಹಲವು ಉದ್ಯೋಗಗಳನ್ನು ಒದಗಿಸುತ್ತಿತ್ತು. ನಿಗಧಿತ ವೇತನವನ್ನು ನೀಡುತ್ತಿತ್ತು. ಅಲ್ಲದೆ ದೇವಾಲಯವು ಸಂಗೀತಗಾರರು, ಕುಶಲಕರ್ಮಿಗಳು, ಸಹಾಯಕರು, ಕ್ಷೌರಿಕರು, ಬಡಗಿಗಳು ಹಾಗು ಕಮ್ಮಾರರನ್ನು ನೇಮಕ ಮಾಡಿಕೊಂಡಿತ್ತು. ಇದರಿಂದ ತಿಳಿಯುವ ವಿಚಾರವೆಂದರೆ ಮೇಲುಕೋಟೆಯ ದೇವಾಲಯಗಳು ಆರ್ಥಿಕ ಜೀವನದ ಕೇಂದ್ರಗಳಾಗಿ ಕಾರ್ಯನಿರ್ವಹಿಸುವ ಮೂಲಕ ಕೃಷಿ ಹಾಗೂ ಕೃಷಿಯೇತರ ವೈಶಿಷ್ಟ್ಯತೆಗಳನ್ನು ಸಂಯೋಜಿಸಿತ್ತು.

ಮೇಲುಕೋಟೆ ದೇವಾಲಯಗಳ ಆದಾಯ ಮತ್ತು ವೆಚ್ಚಗಳು

12ನೇ ಶತಮಾನದಲ್ಲಿ ರಾಮಾನುಜರು ಶ್ರೀ ವೈಷ್ಣವ ಧರ್ಮದ ಉದಾರ ಸ್ವರೂಪವನ್ನು ಹರಡಿದರು. ಅದರಲ್ಲಿ ಭಕ್ತಿ, ದೇವಾಲಯ ನಿರ್ಮಾಣ ಮತ್ತು ದೇವಾಲಯ ಪೂಜೆಗಳಿಗೆ ಒತ್ತು ಇದ್ದಿತು. ಹೊಯ್ಸಳರು ನೀಡಿದ ರಾಜಾಶ್ರಯದಿಂದ ಅದು ಉನ್ನತಿಗೇರಿತು. ಶ್ರೀ ವೈಷ್ಣವ ಧರ್ಮಕ್ಕೆ ಸಿಕ್ಕ ಪ್ರೋತ್ಸಾಹದಿಂದ ಈ ಸ್ಥಳದಲ್ಲಿ ದೇವಾಲಯ ಸಂಕೀರ್ಣವೊಂದು ನಿರ್ಮಾಣಗೊಂಡಿತು. ದೇವಾಲಯದ ಸಿಬ್ಬಂದಿಗಳ ಜೀವನ, ದೇವರಿಗೆ ಸಲ್ಲಿಸುವ ಅಂಗಭೋಗ ರಂಗಭೋಗಗಳಿಗೆ, ನಿತ್ಯಕಟ್ಲೆಯ ಹಾಗೂ ವಿಶೇಷ ಪೂಜೆಗಳಿಗೆ ಸಂಪನ್ಮೂಲದ ಅಗತ್ಯವಿತ್ತು. ವಿಜಯನಗರದ ಅರಸರ ಕಾಲದಲ್ಲಿ ಸಿಕ್ಕ ಹೆಚ್ಚಿನ

ಪ್ರೋತ್ಸಾಹದಿಂದ ದೇವಾಲಯದಲ್ಲಿ ವಿಸ್ತರಿಸಿದ ಉತ್ಸವಗಳು ಮತ್ತು ವರ್ಷವಿಡೀ ಹಬ್ಬಗಳ ಆಚರಣೆಗಳು ಸೇರಿಸಲ್ಪಟ್ಟವು. ಇದರಿಂದ ಅವು ಹೆಚ್ಚು ಸಂಖ್ಯೆಯ ಜನರನ್ನು ಸಹ ಈ ಉದ್ದೇಶಕ್ಕಾಗಿ ನೇಮಿಸಿಕೊಳ್ಳುತ್ತಿದ್ದವು. ಇವುಗಳ ನಿರ್ವಹಣೆಗೆ ಸಂಪನ್ಮೂಲಗಳ ಅಗತ್ಯತೆ ಹೆಚ್ಚಾಯಿತು. ಮೇಲುಕೋಟೆ ದೇವಾಲಯಗಳು ಎರಡು ವಿಧದ ಆದಾಯದ ಮೇಲೆ ಅವಲಂಬಿತವಾಗಿದ್ದವು.

ಎ) ದೇವಾಲಯದ ಭೂಮಿಯಿಂದ ಬರುವ ಆದಾಯಗಳು

ಬಿ) ದೇವಾಲಯಕ್ಕೆ ಬರುವ ಭಕ್ತರ ಸ್ವಯಂಪ್ರೇರಿತ ಕೊಡುಗೆಗಳು.

1. ಭೂಮಿಯಿಂದ ಬರುತ್ತಿದ್ದ ಆದಾಯ (ದಾನದತ್ತಿಗಳು)

ಮೇಲುಕೋಟೆ ದೇವಾಲಯಗಳಿಗೆ ಸಂಬಂಧಿಸಿದಂತೆ ಭೂ ಆಸ್ತಿ ಮತ್ತು ಶಾಶ್ವತವಾದ ದತ್ತಿಗಳು ಹಲವು ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟಿವೆ. ದೇವಾಲಯಗಳ ಹೆಚ್ಚಿನ ಅಗತ್ಯತೆಗಳನ್ನು ಪೂರೈಸುತ್ತಿದ್ದ ಆದಾಯದ ಮೂಲ ಭೂಮಿಯಾಗಿತ್ತು. ದೇವಾಲಯಕ್ಕೆ ಭೂಮಿಯು ದಾನಗಳ ರೂಪದಲ್ಲಿ ಸಿಗುತ್ತಿತ್ತು. 12ನೇ ಶತಮಾನದ ನಂತರ ದಾನಶಾಸನಗಳ ಸಂಖ್ಯೆಯು ತೀವ್ರಗತಿಯಲ್ಲಿ ಏರಿದುದಕ್ಕೆ ಒಂದು ಮುಖ್ಯವಾದ ಕಾರಣ ರಾಮಾನುಜರ ಶ್ರೀ ವೈಷ್ಣವ ಧರ್ಮವು ಮಾಡಿದ ಪ್ರಭಾವವಾಗಿತ್ತು.[48] ಜೊತೆಗೆ ಈ ಧರ್ಮವು ದೇವಾಲಯ ಪೂಜೆ ಮತ್ತು ವಿವಿಧ ಆಚರಣೆಗಳಿಗೆ ಹೆಚ್ಚಿನ ಮಹತ್ವಕೊಟ್ಟಿತ್ತು. ದೇವರ ಸೇವೆಗಳು, ಹಬ್ಬ ಮತ್ತು ಉತ್ಸವಗಳು ದಿನನಿತ್ಯದ ಲಕ್ಷಣಗಳಾಗಿದ್ದು

ರಾಮಾನುಜರು ಬಲಗೊಳಿಸಿದ ದೇವಾಲಯ ಆಧಾರಿತ ಭಕ್ತಿ ಆಂದೋಲನ ಮತ್ತು ಅರ್ಚಾವತಾರ ಕಲ್ಪನೆಗಳು ಇದಕ್ಕೆ ಪೂರಕವಾಗಿದ್ದವು.[49]

ಅವು ಸಾಮಾನ್ಯವಾಗಿಯೇ ಶಾಶ್ವದ ಆದಾಯದ ದೊರಕುವಿಕೆಯನ್ನು ಹಂಬಲಿಸುತ್ತಿದ್ದವು. ಮತ್ತು ಸಾಮಾನ್ಯ ಜನರ ಕೊಡುಗೆಗಳನ್ನು ಬಯಸುತ್ತಿದ್ದವು. ಶಾಸನಗಳು ತಿಳಿಸುವಂತೆ ಗ್ರಾಮಗಳ ದಾನಗಳು, ಭೂದಾನಗಳು ಮತ್ತು ಹಲವು ಮೂಲಗಳಿಂದ ತೆರಿಗೆಯನ್ನು ಪಡೆಯುತ್ತಿದ್ದವು. ಇವು ದೇವಾಲಯದಿಂದ ನಿಯಂತ್ರಿತವಾಗುತ್ತಿದ್ದು, ಅವುಗಳಿಂದ ಬರುವ ಆದಾಯದಿಂದಲೇ ಬಹುಶಃ ಯಾವುದೇ ಆತಂಕವಿಲ್ಲದೆ ದೇವಾಲಯದ ಆಚರಣೆಗಳು ಮುಂದುವರೆಯುತ್ತಿದ್ದವು. ಹಿಂದೆ ಉಲ್ಲೇಖಿಸಿರುವ ಶಾಸನಗಳು ಈ ಅಂಶವನ್ನು ಬಲಗೊಳಿಸುತ್ತವೆ.

ದೇವಾಲಯದ ಕಟ್ಟಡವು ಆರಂಭದಿಂದಲೇ ಕಾಲಕಾಲಕ್ಕೆ ಭೂ ಆಸ್ತಿಗಳನ್ನು ಪಡೆದಿತ್ತು. ಆದರೆ ಆ ಕಾಲಕ್ಕೆ ಸೇರಿದ ಯಾವುದೇ ಶಾಸನಗಳು ಇಲ್ಲಿ ಲಭ್ಯವಾಗಿಲ್ಲ. ಮೇಲುಕೋಟೆಯ ನಾರಾಯಣಸ್ವಾಮಿ ದೇವಾಲಯಕ್ಕೆ ಸೇರಿದ ದಾಖಲಾದ ಭೂ ದಾನಗಳಲ್ಲಿ ಅತ್ಯಂತ ಹಳೆಯ ಶಾಸನವೆಂದರೆ ಹೊಯ್ಸಳರ ಮೂರನೇ ಬಲ್ಲಾಳನ ಕಾಲಕ್ಕೆ ಸೇರಿದ್ದಾಗಿದೆ.[50] ಈ ಕಾಲದಲ್ಲಿ ಸೇನಾಪತಿಯಾಗಿದ್ದ ಮಾದಪ್ಪ ದಣ್ಣಾಯಕನು ಮೇಲುಕೋಟೆಗೆ ಹತ್ತಿರವಿರುವ ಹೊನ್ನಯನಹಳ್ಳಿ, ಹೊಸಹಳ್ಳಿ, ಕದಲಗೆರೆ, ಗೌಡಗೆರೆ, ದೊಡ್ಡಿಘಟ್ಟ ಎಂಬ ಐದು ಗ್ರಾಮಗಳ ಅರ್ಧಭಾಗ ಆದಾಯವನ್ನು ನಾರಾಯಣ ದೇವರಿಗೆ ದಿನನಿತ್ಯದ ನೈವೇದ್ಯದ ಅಕ್ಕಿಯನ್ನು ಒದಗಿಸಲು ದಾನ ಮಾಡಿದನು. ಜೊತೆಗೆ ದೇವಾಲಯದ ಅಕ್ಕಪಕ್ಕದಲ್ಲಿ ಸ್ಥಾಪನೆಯಾದ ಸಣ್ಣ ಗುಡಿಗಳ ಪೂಜೆ ಮತ್ತು ಉತ್ಸವವನ್ನು ನಡೆಸಲು ಅನುವಾಯಿತು. ಇದು ದೇವಾಲಯಕ್ಕೆ ಹೆಚ್ಚಿನ ಸಂಪನ್ಮೂಲ ಒದಗಿಸುವ ದಾನವಾಗಿತ್ತು.

ಕ್ರಿ.ಶ. 1368ರಲ್ಲಿ ಮೇಲುಕೋಟೆಯ ನಮ್ಮಾಳ್ವಾರ್ ಗುಡಿಯ ಆರಾಧನೆ ಮತ್ತು ನೈವೇದ್ಯಕ್ಕಾಗಿ ಮೈಲನಹಳ್ಳಿ ಕೆರೆಯ ಕೆಳಗಿನ ಕುಂಬಾರಕಟ್ಟೆ ಅರಣ್ಯದ ಭೂಮಿಯನ್ನು ಮೇಲುಕೋಟೆಯ ಶ್ರೀ ವೈಷ್ಣವರು ದಾನ ಮಾಡಿದರು.[51] ನಾಗಮಂಗಲದಿಂದ ಈ ಪ್ರದೇಶವನ್ನು ಆಡಳಿತ ನಡೆಸುತ್ತಿದ್ದ ತಿಮ್ಮಣ್ಣ ದಣ್ಣಾಯಕನ ಕಾಲದಲ್ಲಿ ದೇವಾಲಯಗಳು ಹೆಚ್ಚು ಆಸ್ತಿಯನ್ನು ಗಳಿಸಿತು. ಈ ಅಧಿಕಾರಿಯ ಪರೋಪಕಾರೀ ಗುಣದಿಂದ ನಾರಾಯಣಸ್ವಾಮಿ ದೇವಾಲಯಕ್ಕೆ ಬಲ್ಲೇನಹಳ್ಳಿ ಮತ್ತು ಯಲವದಹಳ್ಳಿ ಎಂಬ 2 ಗ್ರಾಮಗಳ್ನು ನೀಡಿದನು.[52] ಈ ಗ್ರಾಮಗಳ ಸಕಲಸ್ವಾಮ್ಯಗಳು ದೇವಾಲಯಕ್ಕಿದ್ದು ಸರ್ವಮಾನ್ಯ (ತೆರಿಗೆ ರಿಯಾಯಿತಿ) ಭೂಮಿಗಳಾಗಿದ್ದವು. ಈ ಗ್ರಾಮಗಳ ಎಲ್ಲಾ ನೀರಾವರಿ ಭೂಮಿಗಳು, ಒಣಭೂಮಿ, ತೋಟಗಳು, ತರಕಾರಿ ತೋಟಗಳು, ಕೃಷಿಕರು (ಒಕ್ಕಲುಮಕ್ಕಳು), ಕಂದಾಯಗಳು, ಸುಂಕಗಳ ಆದಾಯ ದೇವಾಲಯದ್ದಾಗಿತ್ತು. ಈ ಆದಾಯವು ಸಾಲದ ಕಾರಣ, 40 ವರಹ ಆದಾಯದ ಭೂಮಿಯನ್ನು 400 ವರಹಗಳಿಂದ ಕೊಂಡು ದೇವಾಲಯಕ್ಕೆ ನೀಡಲಾಯಿತು. ತಿಮ್ಮಣ್ಣ ದಣ್ಣಾಯಕನು ಇನ್ನು ಕೆಲವು ಭೂಮಿಗಳನ್ನು ದೇವಾಲಯಕ್ಕೆ ದಾನ ನೀಡಿದನಲ್ಲದೆ, ಶ್ರೀ ವೈಷ್ಣವ ಬ್ರಾಹ್ಮಣರಿಗೆ ಒಂದು ಅಗ್ರಹಾರವನ್ನು ಸ್ಥಾಪಿಸಿದನು.[53] ಕ್ರಿ.ಶ. 1469ರಲ್ಲಿ 115 ವರಹ ಆದಾಯ ಬರುತ್ತಿದ್ದ ಕದಲಗೆರೆ ಎಂಬ ಗ್ರಾಮವನ್ನು ನಾರಾಯಣಸ್ವಾಮಿ ದೇವಾಲಯಕ್ಕೆ ದಾನ ಮಾಡಿದನು.[54] ನಳನಹಳ್ಳಿ ಎಂಬ ಒಂದು ಗ್ರಾಮದ ಪಾರಾಂಕುಶ ಸಮುದ್ರ ಎಂಬ ಕೆರೆಯ ಕೆಳಗಿನ ಭೂಮಿಯನ್ನು ಯಾವುದೇ ತೆರಿಗೆಯಿಲ್ಲದೆ ದಾನ ಮಾಡಿದನು.

ಗಮನಾರ್ಹವಾದ ಅಂಶವೆಂದರೆ ಈ ವೇಳೆಗೆ ಮೇಲುಕೋಟೆಯ ದೇವಾಲಯಗಳು ತಮ್ಮ ಧಾರ್ಮಿಕ ಕ್ರಿಯೆಗಳ ಆಚರಣೆಗಾಗಿ ತನ್ನದೇ ಆದ ಸಂಪತ್ತನ್ನು ಗಳಿಸುವಲ್ಲಿ ಸಮರ್ಥವಾಗಿತ್ತು ಮತ್ತು ಶ್ರೀಮಂತವಾಗಿತ್ತು. ಮೇಲೆ ನೀಡಿದ ಗ್ರಾಮಗಳ ಆದಾಯದಿಂದ ತಿರುಪತಿಯ ಬಳಿ ಇರುವ ತಿರುವಳಪಾಂಡಿಯ ರಾಮಾನುಜ ದೇವಾಲಯದ ಕೆಲವು ಸೇವೆಗಳಿಗಾಗಿ ಮತ್ತು ನಿರ್ವಹಣೆಗಾಗಿ ದಾನಮಾಡಲಾಗಿತ್ತು.[55]

ದಾನ ನೀಡಲ್ಪಟ್ಟಿದ್ದ ಗ್ರಾಮಗಳು ನಿಶ್ಚಿತವಾದ ವಿಶಿಷ್ಟ ಪ್ರಕಾರದ ಉದ್ದೇಶಗಳನ್ನು ಹೊಂದಿದ್ದವು. ಆ ಗ್ರಾಮಗಳ ಆದಾಯವು ಹೇಗೆ ವಿನಿಯೋಗವಾಗಬೇಕೆಂಬುದನ್ನು ತಿಳಿಸಲಾಗಿತ್ತು. ಸಂಜೆಯ ವೇಳೆ ನಾರಾಯಣ ದೇವರಿಗೆ ಮಾಡುತ್ತಿದ್ದ ನೈವೇದ್ಯವನ್ನು ಹೊರತುಪಡಿಸಿ ಎಲ್ಲಾ ಸೇವೆಗಳಿಗೂ ವಿನಿಯೋಗಿಸಲ್ಪಡುತ್ತಿದ್ದವು. ಪ್ರಸ್ತುತ ಗ್ರಾಮಗಳ ಆದಾಯದಿಂದ ಲಕ್ಷ್ಮಿದೇವಿ (ತಾಯಾರ) ದೇವಾಲಯಕ್ಕೆ ನೈವೇದ್ಯ ಮಾಡಲು ಕರಾರು ಮಾಡಲಾಗಿತ್ತು. ಕೆಲವು ಉತ್ಸವಗಳಲ್ಲಿ ಪ್ರಸಾದವನ್ನು ತಯಾರು ಮಾಡಿ ಹಂಚುವ ವ್ಯವಸ್ಥೆ ಮಾಡಲಾಗಿತ್ತು. ತಾಯಾರ್ ದೇವಾಲಯದಲ್ಲಿ ಶಯನೋತ್ಸವ ನಡೆಸಲು ಮತ್ತು ದೀಪರಾಧನೆಗಳ ನಿರ್ವಹಣೆ ಮಾಡಲಾಗಿತ್ತು. ಆಲಯದ ಮುಂದೆ ಉಚಿತ ಅನ್ನವಿತರಣೆಗೆ ಮಂಟಪ ಕಟ್ಟಲಾಯಿತು ಮತ್ತು ಅಡಿಗೆಯವರ ಮತ್ತು ಕೆಲವು ಸೇವಕರನ್ನು ನೇಮಿಸಲಾಯಿತು. ಜೊತೆಗೆ ಉಚಿತ ಅನ್ನದಾನದ 2 ಅನ್ನಛತ್ರ (ರಾಮಾನುಜಕೂಟ)ಗಳನ್ನು ತೆರೆಯಲಾಯಿತು. ಬಹುಶಃ ದೇವಾಲಯಕ್ಕೆ ಭೂರೂಪದ ಆಸ್ತಿಯು ಬರುವ ಮುಂಚೆ ದಿನನಿತ್ಯದ ಸೇವೆಯನ್ನು ಮಾಡಲು ಬೇಕಾದ ಆದಾಯವನ್ನು ಹೊಂದಿತ್ತು.

ಕ್ರಿ.ಶ. 1519 ಮತ್ತು 1582ರ ಮಧ್ಯೆ ಇಲ್ಲಿ ನಾರಾಯಣಸ್ವಾಮಿ ದೇವಾಲಯವು ವಿಜಯನಗರದ ಅಧಿಕಾರಿಗಳಿಂದ ಉದಾರವಾದ ದಾನಗಳನ್ನು ಪಡೆಯಿತು. ಈ ಅವಧಿಯಲ್ಲಿ ದಿನನಿತ್ಯದ ಆಚರಣೆಗಳು ಹಾಗೂ ಹೊಸ ಹಬ್ಬ ಮತ್ತು ಉತ್ಸವಗಳು ಸೇರ್ಪಡೆಯಾಗಿರುವುದನ್ನು ನೋಡಬಹುದು. ಕ್ರಿ.ಶ. 1528ರಲ್ಲಿ ಕಮ್ಮಯ್ಯನಾಯಕನಹಳ್ಳಿ ಮತ್ತು ಗೊಲ್ಲಚಟ್ಟರಹಳ್ಳಿ ಎಂಬ 100 ವರಹಗಳ ಆದಾಯ ಬರುತ್ತಿದ್ದ ಗ್ರಾಮಗಳು ಈ ದೇವಾಲಯಕ್ಕೆ ಸೇರ್ಪಡೆಯಾದವು.[56] ಅದರ ಜೊತೆಗೆ ಮೇಲುಕೋಟೆಯಲ್ಲಿ ಆರಂಭವಾದ ಒಂದು ಹೊಸ ಸಂತೆಯಿಂದ ವಾರ್ಷಿಕವಾಗಿ ಬರುವ 70 ವರಹಗಳನ್ನು ದೇವಾಲಯಕ್ಕೆ ನೀಡಿತ್ತು. ಸಮಾಜದ ಹಲವು ವಿಧದ ಇತರೆ ತೆರಿಗೆಗಳು ದೇವಾಲಯಕ್ಕೆ ನೀಡಿದ್ದ ಸಿಂಧಘಟ್ಟ ಎಂಬ ಗ್ರಾಮದ ವಿವಿಧ ಮೂಲಗಳಿಂದ ಆದಾಯ ಬರಲಾರಂಭಿಸಿತು. ಹೀಗೆ ವಾರ್ಷಿಕವಾಗಿ ದೇವಾಲಯಕ್ಕೆ 254 ವರಹಗಳ ಆದಾಯವು ಶಾಶ್ವತವಾಗಿ ಸೇರಿಸಲ್ಪಟ್ಟಿತು. ಕ್ರಿ.ಶ. 1544ರ

ವೇಳೆಗೆ ಈ ದೇವಾಲಯಕ್ಕೆ 10,000 ಕ್ಕೂ ಹೆಚ್ಚು ವರಹಗಳ ಆದಾಯವಿತ್ತು ಹಾಗೂ ಪ್ರತಿದಿನ 150 ಪಡಿ ಪ್ರಸಾದವು ನಿಯೋಗವಾಗುತ್ತಿತ್ತು.[57]

ಕ್ರಿ.ಶ. 1525 ಮತ್ತು 1526ರಲ್ಲಿ ಇನ್ನೂ ಕೆಲವು ಭೂಮಿ ಮತ್ತು ಅವುಬಲಪುರ ಎಂಬ ಗ್ರಾಮವು ನಾರಾಯಣ ದೇವಾಲಯಕ್ಕೆ ಸೇರಿಸಲ್ಪಟ್ಟವು.[58] ಕ್ರಿ.ಶ. 1534ರಲ್ಲಿ ಮತ್ತೊಂದು ಗ್ರಾಮ[59] ಮತ್ತು ಕೆಲವು ಗದ್ದೆಗಳು ಸೇರಿದವು.[60] ಅಲ್ಲದೆ ಈ ದೇವಾಲಯಕ್ಕೆ ಕ್ರಿ.ಶ. 1535ರಲ್ಲಿ ಎರಡು ಗ್ರಾಮಗಳು ಮತ್ತು ಸೆಟ್ಟಿಪುರ, ಕಾರುಮಾರನಹಳ್ಳಿ, ಮಲೆನಹಳ್ಳಿ ಮತ್ತು ನೀಲಮಂಗಲ ಹೊಲಿವಳ್ಳಿ ಎಂಬ ಸಣ್ಣಗ್ರಾಮಗಳು ಮೈಲನಹಳ್ಳಿಕೆರೆಯ ಕೆಲವು ಗದ್ದೆಗಳು ದಾನವಾಗಿ ಬಂದವು.[61] ಕ್ರಿ.ಶ. 1544ರಲ್ಲಿ ಬಲ್ಲಾಳಾಪುರ ಮತ್ತು ವರಹನ ಕಲ್ಲಹಳ್ಳಿ ಎಂಬ 2 ಗ್ರಾಮಗಳು ಸೇರಿದವು.[62] ಸಿಂಧಘಟ್ಟಗ್ರಾಮದ ಕೆಲವು ಹೆಜ್ಜಾದ ತೆರಿಗೆಗಳು 1544ರಲ್ಲಿ ಕೊಡಲ್ಪಟ್ಟವು.[63] ಕ್ರಿ.ಶ. 1551ರಲ್ಲಿ ನಘುವನಹಳ್ಳಿ,[64] ಕ್ರಿ.ಶ. 1564ರಲ್ಲಿ ಹೊಂಗನೂರು, ಸೆಣಬಿನಹಳ್ಳಿ, ಕೋಡಿಪುರ, ನೀಲಸಮುದ್ರ, ಓರಂಗನಪುರ, ಅಣ್ಣಪ್ಪನಹಳ್ಳಿ ಮತ್ತು ಅರೆಹಳ್ಳಿಗಳು[65], ಕ್ರಿ.ಶ. 1570ರಲ್ಲಿ ಮೈಲನಹಳ್ಳಿ,[66] ಕ್ರಿ.ಶ. 1581ರಲ್ಲಿ ಚಿನಕುರ್ಲಿ ಗ್ರಾಮಗಳು ಸೇರಿಸಲ್ಪಟ್ಟವು. ದೇವಾಲಯವು ಈ ಅವಧಿಯಲ್ಲಿ ಅನುಭವಿಸುತ್ತಿದ್ದ ಭೂ ಆಸ್ತಿಗಳ ಪರಿಣಾಮಕಾರಕ ಪಟ್ಟಿಯನ್ನು ನೀಡುತ್ತದೆ. ಹೈದರಾಲಿ ಮತ್ತು ಟಿಪ್ಪುಸುಲ್ತಾನರ ಕಾಲದಲ್ಲಿ ದೇವಾಲಯದ ಖಜಾನೆಗಳು ನಷ್ಟ ಅನುಭವಿಸಬೇಕಾಯಿತು. ಕಾರಣ ಕ್ರಿ.ಶ. 1792ರಲ್ಲಿ ಟಿಪ್ಪು ಬ್ರಿಟೀಷರ ವಿರುದ್ಧ ಸೋತಾಗ ಯುದ್ಧ ಪರಿಹಾರವನ್ನು ಕೊಡಬೇಕಾಗಿತ್ತು. ಈ ಸಂದರ್ಭದಲ್ಲಿ ಮೇಲುಕೋಟೆ ದೇವಾಲಯದ ಆದಾಯವು ಉಪಯೋಗಿಸಲ್ಪಟ್ಟಿತ್ತು.

ಹೀಗೆ 16ನೇ ಶತಮಾನದ ಅಂತ್ಯದ ವೇಳೆಗೆ ಯಾವುದೇ ಹಕ್ಕು ಮತ್ತು ಸವಲತ್ತುಗಳ ನಿರ್ಬಂಧವಿಲ್ಲದ 27 ಸರ್ವಮಾನ್ಯ ಗ್ರಾಮಗಳನ್ನು ದೇವಾಲಯ ಸಂಕೀರ್ಣವು ಹೊಂದಿತ್ತು. ಆದರೂ ದೇವಾಲಯದ ಖಜಾನೆಗೆ ವಾರ್ಷಿಕವಾಗಿ ಬರುತ್ತಿದ್ದ ನಿರ್ದಿಷ್ಟ ಆದಾಯವನ್ನು ಹೇಳುವುದು ಕಷ್ಟ. ಲಭ್ಯವಿರುವ ಶಾಸನಾಧಾರಗಳಿಂದಲೇ ಹೇಳುವುದಾದರೆ 10,000 ಕ್ಕೂ ಹೆಚ್ಚು ವರಹಗಳ ಆದಾಯವನ್ನು ಹೊಂದಿದ್ದು, ದಿನ ಒಂದಕ್ಕೆ 150 ಅಮೃತಪಡಿ ನಿವೇದನವು ನಡೆಯುತ್ತಿತ್ತು.[67]

ಮೈಸೂರು ಒಡೆಯರ ಕಾಲದಲ್ಲಿ ಕ್ರಿ.ಶ. 1850ರ ನಂತರ ದೇವಾಲಯದ ಗ್ರಾಮಭೂಮಿಗಳನ್ನು ಸರ್ಕಾರ ತಮ್ಮ ವಶಕ್ಕೆ ತೆಗೆದುಕೊಂಡು ನಾರಾಯಣಸ್ವಾಮಿ ದೇವಾಲಯಕ್ಕೆ 20.295 ರೂ.ಗಳು ಮತ್ತು ನರಸಿಂಹಸ್ವಾಮಿದೇವಾಲಯಕ್ಕೆ 1.925 ರೂಪಾಯಿಗಳನ್ನು ತಸ್ತೀಕಾಗಿ ನಿಗದಿಪಡಿಸಿತು. ಇನ್ನಿತರ ಸಣ್ಣ ದೇವಾಲಯಗಳು ಈ

ದೇವಾಲಯಗಳಿಂದಲೇ ನಿರ್ವಹಿಸಲ್ಪಡುತ್ತಿದ್ದವು.[68] ದೇವಾಲಯ ಕೈಪಿಡಿಯು ಉಲ್ಲೇಖಿಸುವಂತೆ ನಾರಾಯಣಸ್ವಾಮಿ ದೇವಾಲಯಕ್ಕೆ ಇನಾಂ ಜಮೀನು ಬಡ್ಡಿ ಸೇವಾರ್ಥಗಳಿಂದ 1.353 ರೂ.ಗಳ ಆದಾಯ ಮತ್ತು ನರಸಿಂಹಸ್ವಾಮಿ ದೇವಾಲಯಕ್ಕೆ 708 ರೂ.ಗಳ ಆದಾಯ ಬರುತ್ತಿತ್ತು.

ಕ್ರಿ.ಶ. 1990ರ ವೇಳೆಗೆ ಇಲ್ಲಿನ ನಾರಾಯಣಸ್ವಾಮಿ ಮತ್ತು ಯೋಗಾನರಸಿಂಹಸ್ವಾಮಿ ದೇವಾಲಯದ ವಾರ್ಷಿಕ ಆದಾಯಗಳು ಕ್ರಮೇಣ ವೃದ್ಧಿಯಾಯಿತು. 1990–91ರಲ್ಲಿ 2.68.244 ರೂ.ಗಳಿದ್ದು ಆದಾಯ 1993–94ರ ವೇಳೆಗೆ 8.57.105 ರೂ.ಗಳಿಗೆ ಹೆಚ್ಚಾಯಿತು. ದಾಖಲೆಯಂತೆ ಈ ಎರಡೂ ದೇವಾಲಯಗಳು 19.72.65 ರೂ.ಗಳನ್ನು ಡೆಪಾಸಿಟ್ ಹಣವಾಗಿ ಇಟ್ಟಿವೆ. ಇಲ್ಲಿನ ನಂಜೀಯರ್ ದೇವಾಲಯವು 5.44.483 ರೂ.ಗಳನ್ನು ಡೆಪಾಸಿಟ್ ಹಣವಾಗಿ ಹೊಂದಿತ್ತು.

2) ಭಕ್ತರ ಸ್ವಯಂ ಪ್ರೇರಿತ ಕೊಡುಗೆಗಳು

ಇಲ್ಲಿನ ದೇವರ ಭಕ್ತರೂ ಸಹ ಹಲವು ಉಡುಗೊರೆಗಳನ್ನು ನೀಡುತ್ತಿದ್ದರು. ಇದನ್ನು ಶಾಶ್ವತ ದಾಖಲೆಗಳಾದ ಶಾಸನಗಳಲ್ಲಿಯೂ ನೋಡಬಹುದು. ಇಂತಹಾ ದಾನಮಾಡುವ ಆಚರಣೆಯು ಇಂದು ನೆನ್ನೆಯದಲ್ಲದೆ ಅದು ಬಹಳ ಹಳೆಯ ಆಚರಣೆಯಾಗಿದೆ. ಕ್ರಿ.ಶ. 1544ರ ಒಂದು ಶಾಸನವು ಎಲ್ಲಾ ಹಣ ರೂಪದ ಕೊಡುಗೆಗಳು, ನಾಣ್ಯಗಳು, ಬಟ್ಟೆ ಮತ್ತು ಒಡವೆಗಳನ್ನು ಕಡ್ಡಾಯವಾಗಿ ಲೆಕ್ಕಹಾಕಿ ದೇವಾಲಯದ ಖಜಾನೆಗೆ ಕೊಡಬೇಕು ಎಂದು ಉಲ್ಲೇಖಿಸುತ್ತದೆ.[69] ಇದಕ್ಕೆ ಸಂಬಂಧಿಸಿದಂತೆ ಹಲವು ವಿಶೇಷ ಸಮಾರಂಭಗಳಲ್ಲಿ ಕೆಲವು ಸಣ್ಣ ಉಡುಗೊರೆಗಳನ್ನು ಜನರು ನೀಡಿರುವುದನ್ನು ನೋಡಬಹುದು. ಹಲವು ಶಾಸನಗಳು ಇಂತಹ ಉಡುಗೊರೆಗಳನ್ನು ಉಲ್ಲೇಖಿಸಿವೆ. ಶಾಸನಗಳು ಇದನ್ನು ಕಾಣಿಕೆಗಳು ಎಂದು ಉಲ್ಲೇಖಿಸುತ್ತವೆ. ಕಾಣಿಕೆಗಳನ್ನು ಸ್ವೀಕರಿಸಲು ವಿಶೇಷವಾಗಿ ದೇವಾಲಯದ ಆಡಳಿತ ಮಂಡಲಿಯಿಂದ ಕೆಲವು ಜನರನ್ನು ನೇಮಿಸಲಾಗುತ್ತಿತ್ತು. ದೇವಾಲಯ ಕೈಪಿಡಿಯಲ್ಲಿ ಉಲ್ಲೇಖವಾಗಿರುವಂತೆ ಜನರು ತಮ್ಮ ಸ್ವಂತ ಜಮೀನನ್ನು ದೇವಾಲಯಕ್ಕೆ ದಾನವಾಗಿ ನೀಡಿದ್ದು, ಅದರಿಂದ 550 ರೂ.ಗಳ ಆದಾಯ ಬರುತ್ತಿತ್ತು. 43 ಜನರು ನೀಡಿದ 16.500 ರೂ.ಗಳ ನಗದಿನಿಂದ ವಾರ್ಷಿಕವಾಗಿ 900 ರೂ.ಗಳು ಬಡ್ಡಿಯ ರೂಪದಲ್ಲಿ ಆದಾಯ ಬರುತ್ತಿತ್ತು. (1930ರಲ್ಲಿ) ಹೀಗೆ ದೇವಾಲಯಗಳು ಭಕ್ತಾಧಿಗಳಿಂದ ಹೆಚ್ಚಿನ ಆದಾಯವನ್ನು ಗಳಿಸುತ್ತಿದ್ದವು.

ದೇವಾಲಯದ ವೆಚ್ಚಗಳು

ದೇವಾಲಯದ ಆಸ್ತಿಗಳಿಂದ ಬರುತ್ತಿದ್ದ ಎಲ್ಲಾ ಆದಾಯವು ದೇವಾಲಯದಿಂದ ವಿವಿಧ ಉದ್ದೇಶಗಳಿಗೆ ಉಪಯೋಗವಾಗುತ್ತಿತ್ತು. ಅದು ದಾನಿಗಳು ನಿಯಮಿಸಿದಂತೆ ಉಪಯೋಗವಾಗುತ್ತಿತ್ತು. ಹೊಯ್ಸಳರ ಕಾಲದಲ್ಲಿ ದೇವಾಲಯದ ಮುಖ್ಯ ಮೂರ್ತಿ ಹಾಗೂ ಪರಿವಾರ ದೇವತೆಗಳಿಗೆ ದಿನನಿತ್ಯದ ಪೂಜೆಗಳ ನಿರ್ವಹಣೆ ಹಾಗೂ ನಾರಾಯಣ ದೇವರ ವಾರ್ಷಿಕ ಉತ್ಸವಗಳಿಗೆ ಖರ್ಚಾಗುತ್ತಿತ್ತು.

ವಿಜಯನಗರದ ಕಾಲದಲ್ಲಿ ಹಲವು ಹೊಸ ಸೇವೆಗಳು ಸೇರಿಸಲ್ಪಟ್ಟವು. ಅಂದು ಹಲವು ವಿಧದ ದೀಪಾರಾಧನೆ ಸೇವೆಗಳು, ಎಥೇಚ್ಛವಾದ ಹೂವುಗಳು, ಸುಗಂಧ ದ್ರವ್ಯಗಳು ಮತ್ತು ಸಾಂಬಾರು ಪದಾರ್ಥಗಳಿಗೆ ಹೆಚ್ಚು ವೆಚ್ಚವಾಗುತ್ತಿತ್ತು. ನಾರಾಯಣ ದೇವರಿಗೆ ದಿನದಲ್ಲಿ 6 ಬಾರಿ ಪ್ರಸಾದ ವಿನಿಯೋಗವಾಗುತ್ತಿತ್ತು. ವಿವಿಧ ರೀತಿಯ ತಿನಿಸುಗಳು ದೇವರಿಗೆ ವಿನಿಯೋಗವಾಗುತ್ತಿತ್ತು ಅಲ್ಲದೆ ನಾರಾಯಣಸ್ವಾಮಿ ದೇವಾಲಯದ ಸುತ್ತಲಿನ ಎಲ್ಲಾ ಗುಡಿಗಳಲ್ಲಿಯೂ ಪ್ರಸಾದ ವಿನಿಯೋಗವನ್ನು ವ್ಯವಸ್ಥೆ ಮಾಡಲಾಗಿತ್ತು. ಈ ಕಾಲದಲ್ಲಿ ದೇವಾಲಯಗಳು ಹಲವು ಸಂಖ್ಯೆಯಲ್ಲಿ ಉದಯವಾದವು. ಈ ಅವಧಿಯಲ್ಲಿ ಹೊಸ ಉತ್ಸವಗಳು ಮತ್ತು ಹಳೆ ಉತ್ಸವಗಳ ವಿಸ್ತರಣೆಯ ಆರಂಭವನ್ನು ಶಾಸನಗಳು ಸ್ಪಷ್ಟಪಡಿಸುತ್ತವೆ.[70] ಈ ವೆಚ್ಚವನ್ನು ದೇವಾಲಯದ ಖಜಾನೆಯಿಂದಲೇ ಭರಿಸಲಾಗುತ್ತಿತ್ತು.

ಶಾಸನಗಳು ಉಲ್ಲೇಖಿಸಿರುವಂತೆ ವೈಶಾಖದಲ್ಲಿ 10 ದಿನದ ಉತ್ಸವವು ನಡೆಯುತ್ತಿತ್ತು. (ಬ್ರಹೋತ್ಸವ) ಮತ್ತೊಂದು 10 ದಿನದ ಚಿಕ್ಕತಿರುನಾಳ್ ಮತ್ತು ತೆಪ್ಪದ ತಿರುನಾಳ್, ಒಂದು ತಿಂಗಳ ಚಳಿಗಾಲದ ಉತ್ಸವ (ಧನುರ್ಮಾಸೋತ್ಸವ),ಗಳು ನಡೆಯುತ್ತಿದ್ದವು. ಶ್ರೀ ವೈಷ್ಣವರ ಧಾರ್ಮಿಕ ಶ್ಲೋಕಗಳ ಪಠಣೆ ನಡೆಯುವ ಅಧ್ಯಯನೋತ್ಸವ, 10 ದಿನಗಳ ರಾಮಾನುಜರ ವಾರ್ಷಿಕ ಉತ್ಸವಗಳು ಇನ್ನಿತರ ಮುಖ್ಯ ಉತ್ಸವಗಳು, ನಡೆಯುತ್ತಿದ್ದವು.

ಈ ಹಲವು ಉತ್ಸವಗಳು ಮೆರವಣಿಗೆ ಹೊಂದುತ್ತವೆ ಮತ್ತು ದೇವಾಲಯದ ಹೊರಗೆ ಹಲವು ವಿವಿಧ ಮಂಟಪಗಳಲ್ಲಿ ದೇವರನ್ನು ಬಿಜಮಾಡಿಸಲಾಗುತ್ತಿತ್ತು. ಜೊತೆಗೆ ಪ್ರಸಾದವನ್ನು ಈ ಸಂದರ್ಭದಲ್ಲಿ ವಿತರಿಸಲಾಗುತ್ತಿತ್ತು. ದಾನದ ಭೂಮಿಯಿಂದ ಬರುವ ಆದಾಯದಿಂದ ರಾಮಾನುಜಕೂಟಗಳಲ್ಲಿ ಉಚಿತ ಅನ್ನಸಂತರ್ಪಣೆ ನಡೆಯುತ್ತಿತ್ತು.

1850ರ ನಂತರ ದೇವಾಲಯಗಳ ಭೂಮಿಯನ್ನು ಸರ್ಕಾರ ತನ್ನ ನಿಯಂತ್ರಣಕ್ಕೆ ತೆಗೆದುಕೊಂಡ ನಂತರ ಕೊಡುತ್ತಿದ್ದ 23.978 ರೂ.ಗಳನ್ನು ಹೇಗೆ ವೆಚ್ಚಮಾಡಬೇಕೆಂಬುದಲ್ಲಿ

ದೇವಾಲಯದ ಕೈಪಿಡಿಯಲ್ಲಿ ಉಲ್ಲೇಖಿಸಿದೆ. ನಾರಾಯಣಸ್ವಾಮಿ ದೇವಾಲಯದ ಸಿಬ್ಬಂದಿಗಾಗಿ ಸಾಲಿಯಾನ 6.021 ರೂ.ಗಳು, ಸುತ್ತಲ ಗುಡಿಗಳಿಗೆ 465 ರೂ.ಗಳು, ನಿತ್ಯಕಟ್ಲೆಗೆ 8.265 ರೂ.ಗಳು ಹೆಚ್ಚುಕಟ್ಲೆಗೆ 4.961 ರೂ.ಗಳು, ಯೋಗಾನರಸಿಂಹಸ್ವಾಮಿ ದೇವಾಲಯದ ಸಿಬ್ಬಂದಿಗಳಿಗೆ 657 ರೂ.ಗಳು, ನಿತ್ಯಕಟ್ಲೆಗೆ 792 ರೂ.ಗಳು ಮತ್ತು ಹೆಚ್ಚುಕಟ್ಲೆಗೆ 193 ರೂ.ಗಳು ಖರ್ಚಾಗುವಂತೆ ತಿಳಿಸಲಾಗಿತ್ತು.

1994-95ರಲ್ಲಿ ನಾರಾಯಣಸ್ವಾಮಿ ದೇವಾಲಯದ ಆದಾಯ 5.92.306 ರೂ.ಗಳಿದ್ದು ಅದರ ವೆಚ್ಚವು 8.19.987 ರೂ.ಗಳಾಗಿತ್ತು ಹಾಗೂ ಯೋಗಾನರಸಿಂಹಸ್ವಾಮಿ ದೇವಾಲಯದ ಆದಾಯ 4.26.07 ರೂ.ಗಳಾಗಿದ್ದು ವೆಚ್ಚವು 1.90.234 ರೂ.ಗಳಾಗಿತ್ತು. ನಾರಾಯಣಸ್ವಾಮಿ ದೇವಾಲಯದ ಹೆಚ್ಚುವರಿಯಾದ ವೆಚ್ಚವನ್ನು ಪ್ರತೀ ವರ್ಷವು ಸರ್ಕಾರದಿಂದ ಕೊಡಲಾಗುವ ಅನುದಾನಗಳಿಂದ ಉಳಿಸಲ್ಪಟ್ಟ ನಿಗಧಿತ ಹಣದಿಂದ ಭರಿಸಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಭಕ್ತಾದಿಗಳು ತಮ್ಮ ಶಕ್ತಾನುಸಾರ ಖರ್ಚಿನ ಜವಾಬ್ದಾರಿಯನ್ನು ಹೊರುತ್ತಾರೆ. ಆರು ತಿಂಗಳಿಗೊಮ್ಮೆ ಹುಂಡಿಯ ಹಣವನ್ನು ತೆಗೆಯುವ ಸಂಪ್ರದಾಯವಿದ್ದು ಈ ಮೂಲಕವೂ ವೆಚ್ಚವನ್ನು ಭರಿಸಲಾಗುತ್ತದೆ. ಇದು ದೇವಾಲಯದ ಆಡಳಿತಾಧಿಕಾರಿಯ ವಿವೇಚನೆಗೆ ಬಿಟ್ಟಿರುತ್ತದೆ.

ಈ ಎರಡೂ ದೇವಾಲಯದ ಸಿಬ್ಬಂದಿಗಳ ವೇತನ ವೆಚ್ಚವು 3 ಲಕ್ಷವನ್ನು ಮೀರಿತ್ತು. ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ದೇವಾಲಯದ ಪ್ರಸಿದ್ಧಿಯಿಂದ ಭಕ್ತಾಧಿಗಳ ಸಂಖ್ಯೆಯು ವೃದ್ಧಿಸುತ್ತಿದೆ. ದೇವಾಲಯದ ಅಗತ್ಯತೆಗೆ ತಕ್ಕ ಆದಾಯವನ್ನು ಪಡೆಯಲು ಆದಾಯದ ಹೊಸಮಾರ್ಗಗಳನ್ನು ಪರಿಶೋಧಿಸಲಾಗಿದೆ.

ಧಾರ್ಮಿಕ ದತ್ತಿ ಇಲಾಖೆಯ ಕಾರ್ಯನಿರ್ವಾಹಕ ಅಧಿಕಾರಿಯು ನೀಡಿರುವ ಮಾಹಿತಿಯಂತೆ, 2012-13ನೇ ಸಾಲಿನ ಆರ್ಥಿಕ ವರ್ಷದಲ್ಲಿ ನಾರಾಯಣಸ್ವಾಮಿ ದೇವಾಲಯ ಸಂಕೀರ್ಣದ ಆದಾಯವು 95,07,248 ರೂ. ಗಳಾಗಿದ್ದು, 82,56,186 ರೂ.ಗಳನ್ನು ದೇವಾಲಯದ ಕೈಂಕರ್ಯಗಳಿಗಾಗಿ ವೆಚ್ಚಮಾಡಲಾಗಿದೆ. ಈ ಸಾಲಿನಲ್ಲಿ 47,58,326 ರೂ.ಗಳು ಹುಂಡಿಯಿಂದ ಹಾಗೂ 47,48,921 ರೂ.ಗಳ ಆದಾಯವು ರಶೀದಿಯಿಂದ ಬಂದಿರುತ್ತದೆ. ವೈಭವದಿಂದ ನಡೆಯುವ ಪ್ರಸಿದ್ಧ ವೈರಮುಡಿ ಉತ್ಸವಕ್ಕೆ 26,66,270 ರೂ.ಗಳನ್ನು ವೆಚ್ಚಮಾಡಲಾಗಿದೆ. ದೇವಾಲಯದ ಸಿಬ್ಬಂದಿ ಬ್ರಾಹ್ಮಣ ನೌಕರರು ಹೊಂದಿದ್ದ, ಶಿಷ್ಯಪರಂಪರೆಯು ಇಂದಿಗೂ ಮುಂದುವರೆದಿದ್ದು, ಇದರಿಂದ ಬರುವ ಆದಾಯವು ದೇವಾಲಯದ ಆದಾಯಕ್ಕೆ ಸೇರುವುದಿಲ್ಲ. ಇತ್ತೀಚೆಗೆ ನಡೆದ ಸಮೀಕ್ಷೆಯಂತೆ

ಮೇಲುಕೋಟೆ ದೇವಾಲಯವು ಕರ್ನಾಟಕದಲ್ಲಿ ಅತಿಹೆಚ್ಚು ಆದಾಯಗಳಿಸುವ ದೇವಾಲಯಗಳಲ್ಲಿ ಐದನೇ ಸ್ಥಾನ ಪಡೆದಿದೆ.

ದಿನದಿಂದ ದಿನಕ್ಕೆ ಮೇಲುಕೋಟೆ ದೇವಾಲಯಕ್ಕೆ ಬರುವ ಭಕ್ತಾಧಿಗಳ ಸಂಖ್ಯೆಯು ಗಣನೀಯವಾಗಿ ಹೆಚ್ಚಾಗುತ್ತಿದೆ. ದೇವಾಲಯಕ್ಕೆ ಬರುವ ಆದಾಯದಲ್ಲಿಯೂ ಗುರುತರ ಬದಲಾವಣೆಯಾಗುತ್ತಿದ್ದು, ಒಂದು ಮಹತ್ವದ ಪ್ರವಾಸಿ ತಾಣವಾಗಿ ಗುರುತಿಸಲ್ಪಟ್ಟಿದೆ. ಆದರೆ ಇಲ್ಲಿಗೆ ಬರುವ ಜನರ ವಾಸ್ತವ್ಯಕ್ಕೆ ದೇವಾಲಯದಿಂದಾಗಲಿ, ಇಲಾಖೆಯಿಂದಾಗಲೀ ಯಾವುದೇ ವ್ಯವಸ್ಥೆ ಕಲ್ಪಿಸಲಾಗಿಲ್ಲ. ಇಲ್ಲಿರುವ ವಿವಿಧ ಮಠಗಳು, ಸಂಬಂಧಿಸಿದ ತಮ್ಮ ಜನರಿಗೆ ಮಾತ್ರ ವಾಸ್ತವ್ಯವನ್ನು ಒದಗಿಸುತ್ತಿದ್ದು, ಸಾಮಾನ್ಯ ಜನರಿಗೆ ಯಾವುದೇ ಸೌಲಭ್ಯಗಳು ಇರುವುದಿಲ್ಲ. ಇತ್ತೀಚಿಗೆ ಮೇಲುಕೋಟೆಯ ಅಭಿವೃದ್ಧಿಗಾಗಿ ಪ್ರಾಧಿಕಾರವೊಂದು ನೇಮಕಗೊಂಡಿದ್ದು, ದೇವಾಲಯಳು ಹಾಗೂ ಸಂಬಂಧಿಸಿದ ಸ್ಮಾರಕಗಳ ಶಿಥಿಲೀಕರಣ ಹಾಗೂ ಭಕ್ತಾಧಿಗಳಿಗೆ ಸೌಕರ್ಯಗಳನ್ನು ಒದಗಿಸುವಲ್ಲಿ ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಲಾಗಿದ್ದು ಅವು ಇನ್ನೂ ಕಾರ್ಯರೂಪಕ್ಕೆ ಬಂದಿರುವುದಿಲ್ಲ.

ಆಭರಣಗಳು ಮತ್ತು ಪಾತ್ರೆಗಳು

17ನೇ ಶತಮಾನದ ಅಂತ್ಯದ ವೇಳೆಗೆ ಇಲ್ಲಿನ ದೇವಾಲಯಗಳು ಮೈಸೂರು ಒಡೆಯರಿಂದ ಶ್ರೀಮಂತಗೊಂಡವು. ಈಗಾಗಲೇ ಹಿಂದಿನ ರಾಜರಿಂದ ಪಡೆದ ದಾನಗಳಿಂದ ದೇವಾಲಯವು ತನ್ನ ಖರ್ಚನ್ನು ಸಮರ್ಥವಾಗಿ ನಿಭಾಯಿಸುವಷ್ಟು ಸಂಪತ್ತನ್ನು ಹೊಂದಿತ್ತು. ಒಡೆಯರ ಕಾಲದಲ್ಲಿ ದಾನದ ಒಂದು ಹೊಸ ಪ್ರೌರುತ್ತ ಆರಂಭವಾಯಿತು. ರಾಜರು, ಅಧಿಕಾರಿಗಳು ಮತ್ತು ಜನರು ಹೆಚ್ಚಿನ ಬೆಲೆಬಾಳುವ ಚಿನ್ನದ ಮತ್ತು ಬೆಳ್ಳಿಯ ಆಭರಣಗಳು ಹಾಗೂ ವಿವಿಧ ಲೋಹದ ಪಾತ್ರೆಗಳನ್ನು ದಾನ ನೀಡಲಾರಂಭಿಸಿದರು. ದೇವರಿಗೆ ಅಲಂಕಾರ ಮಾಡುವ ಆಭರಣಗಳಷ್ಟೇ ಅಲ್ಲದೆ ಉತ್ಸವಗಳಲ್ಲಿ ದೇವರನ್ನು ಮೆರವಣಿಗೆ ಮಾಡಲು ಹಲವು ವಿಧದ ವಾಹನಗಳನ್ನು ದಾನ ಮಾಡಲಾಗಿದೆ. ಈ ಅವಧಿಯಲ್ಲಿ 2 ಶಾಸನಗಳು ಮಾತ್ರ ಭೂಮಿಗೆ ಸಂಬಂಧಿಸಿದ ಆಸ್ತಿಯನ್ನು ದಾನ ನೀಡಿರುವ ವಿಚಾರವನ್ನು ಉಲ್ಲೇಖ ಮಾಡುತ್ತವೆ. ಕ್ರಿ.ಶ. 1678ರ ಶಾಸನವು ಹೇಳುವಂತೆ 10 ದಿನಗಳ ಕಾಲ ನಡೆಯುವ ರಾಮಾನುಜರ ಉತ್ಸವದ ಪ್ರಸಾದದ ವೆಚ್ಚಕ್ಕೆ ಭೂಮಿಯನ್ನು ದಾನ ಮಾಡಲಾಗಿದೆ. ಇದೇ ವರ್ಷದ ಮತ್ತೊಂದು ಶಾಸನವು ಕೆಲವು ಭೂದಾನ ಮಾಡಿದ ಅಂಶವನ್ನು ಉಲ್ಲೇಖಿಸುತ್ತದೆ.

ಈ ಅವಧಿಯಲ್ಲಿ ಪ್ರಸಿದ್ಧ ಕಿರೀಟಗಳು ದೇವಾಲಯಕ್ಕೆ ಸೇರ್ಪಡೆಗೊಂಡವು. ಒಂದನೇ ರಾಜ ಒಡೆಯರ್ ಕೊಟ್ಟ 'ರಾಜಮುಡಿ' ಮತ್ತು ಮೂರನೇ ಕೃಷ್ಣರಾಜ ಒಡೆಯರ್

ನೀಡಿದ 'ಕೃಷ್ಣರಾಜಮುಡಿ'ಗಳು ಪ್ರಸಿದ್ಧ ಸುವರ್ಣ ಕಿರೀಟಗಳಾಗಿವೆ.[71] ಮುಸಲ್ಮಾನ ದೊರೆಯಾದ ಟಿಪ್ಪುಸುಲ್ತಾನನು ನಾರಾಯಣಸ್ವಾಮಿ ಮತ್ತು ಯೋಗಾನರಸಿಂಹಸ್ವಾಮಿ ದೇವರಿಗೆ ಚಿನ್ನ ಮತ್ತು ಬೆಳ್ಳಿಯ ಬಟ್ಟಲುಗಳು ಹಾಗೂ ಉದ್ದರಣೆಗಳನ್ನು ನೀಡಿದನು.[72] ಕ್ರಿ.ಶ. 1785ರಲ್ಲಿ ಟಿಪ್ಪು ನರಸಿಂಹಸ್ವಾಮಿ ಬೆಟ್ಟಕ್ಕೆ ಬೃಹತ್ ನಗಾರಿ ಮತ್ತು ಘಂಟೆಯನ್ನಷ್ಟೇ ಅಲ್ಲದೆ 12 ಆನೆಗಳನ್ನು ದಾನವಾಗಿ ನೀಡಿದ್ದನು.[73] ಇಂದಿಗೂ ಇವು ಪೂಜಾ ಕೈಂಕರ್ಯಗಳಿಗೆ ಉಪಯೋಗಿಸಲ್ಪಡುತ್ತಿವೆ. ಕ್ರಿ.ಶ. 1843ರಲ್ಲಿ ಕೃಷ್ಣರಾಜ ಒಡೆಯರ ಪತ್ನಿ ಲಿಂಗರಾಜಮ್ಮಣ್ಣಿಯು ನರಸಿಂಹದೇವರಿಗೆ ಸುವರ್ಣ ಕಿರೀಟವನ್ನು ದಾನ ಮಾಡಿದಳು.[74] ಒಂದನೇ ಕೃಷ್ಣರಾಜ ಒಡೆಯರು ಬೆಲೆಬಾಳುವ ಆಭರಣಗಳಾದ ನಾರಾಯಣ ದೇವರಿಗೆ ಚಿನ್ನದ ಕವಚ, ಚಿನ್ನದ ಪಾದುಕೆ, ಉತ್ಸವ ಮೂರ್ತಿಗೆ ಚಿನ್ನದ ಕೈಗಳು, ಚಿನ್ನದ ಸೊಂಟದ ಡಾಬುಗಳಲ್ಲದೆ ಬೆಳ್ಳಿಯ ತಟ್ಟೆ, ಆರತಿ ಬೆಳಗುವ ಸಾಧನ, ಬೆಳ್ಳಿಯ ಗುಂಬಾರತಿ, ಹಲವು ಬೆಳ್ಳಿಯ ಬಟ್ಟಲುಗಳು ಮತ್ತು ಲೋಟಗಳು, ಗರುಡನು ಸೇರಿದಂತೆ ಹಲವು ವಾಹನಗಳು ಹಾಗೂ ಪಲ್ಲಕ್ಕಿಗಳನ್ನು ದಾನ ನೀಡಿದ್ದಾರೆ.

ರಾಜರಿಂದ ಸ್ಫೂರ್ತಿಗೊಂಡ ಸಾಮಾನ್ಯ ಜನರೂ ಸಹ ತಮ್ಮ ಶಕ್ತ್ಯಾನುಸಾರ ದಾನ ಮಾಡಿದ್ದಾರೆ. ಮೇಲುಕೋಟೆಯ ಸ್ಥಳ ನಿವಾಸಿಗಳು ದೇವರಿಗೆ ಬೆಳ್ಳಿಯ ಗಜವಾಹನ ಮಾಡಿಸಿದ್ದಾರೆ. ಕನ್ನಯ್ಯ ಎಂಬುವವರು ಬೆಳ್ಳಿಯ ಹನುಮಂತ ವಾಹನವನ್ನು ನೀಡಿದ್ದಾರೆ. ಕಮಲಮ್ಮ ಎಂಬುವವರು ಬಂಗಾರದ ಸಿಂಹಾಸನ ಮಾಡಿಸಿದ್ದಾರೆ.[75] ಮೈಸೂರಿನ ವೆಂಕಟಕೃಷ್ಣಮ್ಮನವರು ಹಂಸವಾಹನವನ್ನು ಮಾಡಿಸಿದ್ದಾರೆ. ಶ್ರೀ ವಾನಮಾಮಲೆಸ್ವಾಮಿಗಳು ಚಿನ್ನದ ಪಲ್ಲಕ್ಕಿಯನ್ನು ಮಾಡಿಸಿದ್ದಾರೆ.[76] ಶ್ರೀರಂಗಪಟ್ಟಣದ ತಿರುಮಲೆ ಆನಂದನ್ ಎಂಬುವವರು ಬೆಳ್ಳಿಯ ಛತ್ರಿಯನ್ನು ದಾನ ಮಾಡಿದ್ದಾರೆ. ಪುಟ್ಟಸಿಂಗಮ್ಮ ಎಂಬ ಮಹಿಳೆಯು ದೇವಾಲಯಕ್ಕೆ ಕೆಲವು ಬೆಳ್ಳಿಯ ಪಾತ್ರೆ ದಾನ ನೀಡಿದ್ದಾಳೆ.[77] ಮೇಲಿನವರಲ್ಲದೆ ಬೆಳ್ಳಿತಣಿಗೆ, ಬೆಳ್ಳಿ ಕರಗದ ಗಿಂಡಿ, ಬೆಳ್ಳಿ ದೊಡ್ಡಗುಂಡು ತಟ್ಟೆ, ಬೆಳ್ಳಿ ಬಿಂದಿಗೆ, ಬೆಳ್ಳಿ ಕುಂಬಾರತಿ, ಬೆಳ್ಳಿ ಚೌಕಾಕಾರದ ತಟ್ಟೆ, ಮುಂತಾದವು ದಾನ ರೂಪದಲ್ಲಿ ಬಂದಿವೆ. ಹೀಗೆ ಆಳರಸರು ಮತ್ತು ಸಾಮಾನ್ಯ ಜನರು ದೇವಾಲಯಕ್ಕೆ ಹಲವು ವಿಧದ ಆಭರಣಗಳನ್ನು ನೀಡುವ ಸಂಪ್ರದಾಯ ಮುಂದುವರಿದಿದೆ.

ಕೃಷ್ಣರಾಜ ಒಡೆಯರ ಪತ್ನಿ ಮುದ್ದುಲಿಂಗಮ್ಮನವರು ಕೆಲವು ಚಿನ್ನದ ಪಾತ್ರೆಗಳನ್ನು ನೀಡಿದ್ದಾರೆ.[78] ಮೈಸೂರಿನ ದಳವಾಯಿಯು ಬೆಳ್ಳಿಯ ಕರ್ಪೂರದಾರತಿ ನೀಡಿದ್ದಾನೆ.[79]

ಟಿಪ್ಪು ಸುಲ್ತಾನನು ಮೇಲುಕೋಟೆಯ ನಮ್ಮಾಳ್ವಾರ್ ದೇವಾಲಯಕ್ಕೆ ಎರಡು ಬೆಳ್ಳಿ ಗುಂಡುಬಟ್ಟಲುಗಳನ್ನು ದಾನವಾಗಿ ನೀಡಿದ್ದಾನೆ.[80] ಈ ಗುಂಡುಬಟ್ಟಲುಗಳು ಇಂದು ಮುಖ್ಯ

ದೇವಾಲಯವಾದ ನಾರಾಯಣಸ್ವಾಮಿ ದೇವಾಲಯದಲ್ಲಿ ಉಪಯೋಗಿಸಲ್ಪಡುತ್ತಿವೆ. ಟಿಪ್ಪು ಕ್ರಿ.ಶ.1786 ರಲ್ಲಿ ಯೋಗಾನರಸಿಂಹಸ್ವಾಮಿ ದೇವಾಲಯಕ್ಕೆ ಬೃಹತ್ ನಗಾರಿಯನ್ನು ದಾನವಾಗಿ ನೀಡಿದ್ದಾನೆ.[81] ನಗಾರಿಯ ಮೇಲೆ ಪರ್ಷಿಯನ್ ಭಾಷೆಯಲ್ಲಿ ಈ ವಿಷಯವನ್ನು ಉಲ್ಲೇಖಿಸಲಾಗಿದೆ. ಇದು ಇಂದಿಗೂ ಭಾಷೆಯಲ್ಲಿ ಈ ವಿಷಯವನ್ನು ಉಲ್ಲೇಖಿಸಲಾಗಿದೆ. ಇದು ಇಂದಿಗೂ ಪೂಜಾ ಸಮಯದಲ್ಲಿ ಉಪಯೋಗಿಸಲ್ಪಡುತ್ತಿದ್ದು, ಇದರ ಶಬ್ದವು ಬಹಳ ದೂರದ ವರೆಗೂ ಕೇಳಲ್ಪಡುತ್ತದೆ.

ಇಷ್ಟೇ ಅಲ್ಲಿದೆ ಕ್ರಿ.ಶ.1785ರ ಶಾಸನವು ಉಲ್ಲೇಖಿಸಿರುವಂತೆ ಟಿಪ್ಪುಸುಲ್ತಾನನು ಎರಡು ಹೆಣ್ಣಾನೆ ಮತ್ತು ಹತ್ತು ಗಂಡಾನೆಗಳನ್ನು ಯೋಗಾನರಸಿಂಹ ಹಾಗೂ ನಾರಾಯಣಸ್ವಾಮಿ ದೇವಾಲಯಗಳಿಗೆ ಸಮರ್ಪಿಸಿದ್ದಾನೆ.[82] ನರಸಿಂಹ ದೇವಾಲಯದ ಕೆಳ ಬಂಡೆಯ ಮೇಲೆ ಕನ್ನಡದ ಲಿಪಿಯಲ್ಲಿರುವ ಈ ಶಾಸನವು, ಹುಜೂರ್‌ನಾಯಕ ಶ್ರೀರಂಗಪಟ್ಟಣದ ಶ್ರೀನಿವಾಸಾಚಾರಿ ಮತ್ತು ಮಿರಾಜೈನು ಇವರಿಗೆ ಒಪ್ಪಿಸಿದ ವಿಷಯವನ್ನು ಉಲ್ಲೇಖಿಸುತ್ತದೆ.

ಟಿಪ್ಪಣಿಗಳು

1. Mahalingam.T.V., South Indian polity, Madras, 1967, P. 372.
2. ಚಿದಾನಂದಮೂರ್ತಿ.ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು, 1979, ಪು. 396
3. Pandeya.B.K., Temple Economic under the cholas, Delhi, 1984, P. 163-176
4. ಸುರೇಂದ್ರರಾವ್ ಬಿ. (ಸಂ.), ಕರ್ನಾಟಕ ಚರಿತ್ರೆ, ಸಂಪುಟ.2, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1997, ಪು. 165–169
5. ತಿಪ್ಪೆರುದ್ರಸ್ವಾಮಿ.ಎಚ್., ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಮೈಸೂರು, 1968, ಪು. 200
6. ಮೋಹನ್‌ಕೃಷ್ಣ ರೈ. ಕೆ., ಪ್ರಭುತ್ವ ಮತ್ತು ಜನತೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004, ಪು. 133
7. Devarj D.V., History of the somanathapura Temple, Mysore, 1994, P. 37
8. ಸುರೇಂದ್ರರಾವ್ ಬಿ. (ಸಂ.), ಪೂರ್ವೋಕ್ತ, ಪು. 161
9. E.C.VI, ಪಾಂಡವಪುರ. 135
10. ಅದೇ, ಪಾಂ. 138
11. ಅದೇ, ಪಾಂ. 56
12. ಅದೇ, ಪಾಂ. 179
13. ಅದೇ, ಪಾಂ. 157, 128, 129, 134
14. ಅದೇ, ಪಾಂ. 67, 68, 137
15. ಅದೇ, ಪಾಂ. 128
16. ಅಸೂರಿ ಸಂಪತ್ಕುಮಾರಾಚಾರ್ಯ ಮತ್ತು ಶ್ರೀನಿವಾಸಚಾರ್ಯರು, ಯಾದವಗಿರಿ ಜೀರ್ಣೋದ್ಧಾರ, ಮೇಲುಕೋಟೆ, 1956. ಪು. 38
17. E.C.VI, ಪಾಂಡವಪುರ. 63
18. ಅದೇ, ಪಾಂ. 74
19. ಅದೇ, ಪಾಂ. 81, 134

20. ಅದೇ, ಪಾಂ. 149

21. E.C.VI, ಕೃಷ್ಣರಾಜಪೇಟೆ. 95

22. E.C.VI, ಪಾಂಡವಪುರ. 129

23. ಅದೇ, ಪಾಂ. 131

24. ರಾಮಯ್ಯಬಿ., ದೇವಾಲಯದ ಕೈಪಿಡಿ, ಮೈಸೂರು, 1937, ಪು. 392, 393

25. ಅದೇ, ಪು. 394

26. ಅದೇ, ಪು. 397

27. E.C.VI, ಪಾಂಡವಪುರ. 63

28. ಅದೇ, ಪಾಂ. 107

29. ಅದೇ, ಪಾಂ. 129

30. ಅದೇ, ಪಾಂ. 74

31. ಅದೇ, ಪಾಂ. 129

32. ಅದೇ, ಪಾಂ. 185

33. ಅದೇ, ಪಾಂ. 185

34. ಅದೇ, ಪಾಂ. 129

35. ಅದೇ, ಪಾಂ. 125, 121

36. ರಾಮಯ್ಯಬಿ., ಪೂರ್ವೋಕ್ತ, ಪು. 479

37. E.C VI, ಪಾಂಡವಪುರ. 158

38. ಅದೇ, ಪಾಂ. 128

39. ಅದೇ, ಪಾಂ. 129

40. ಅದೇ, ಪಾಂ. 134

41. ಅದೇ, ಪಾಂ. 134

42. ಅದೇ, ಪಾಂ. 128

43. ರಾಮಯ್ಯ.ಬಿ., ಪೂರ್ವೋಕ್ತ, ಪು. 444

44. E.C VI, ಪಾಂಡವಪುರ. 54

45. ಅದೇ, ಪಾಂ. 90

46. ಅದೇ, ಪಾಂ. 119

47. ರಾಮಯ್ಯ.ಬಿ., ಪೂರ್ವೋಕ್ತ, ಪು. 408

48. ಸುರೇಂದ್ರರಾವ್.ಬಿ. (ಸಂ)., ಪೂರ್ವೋಕ್ತ, ಪು. 161

49. ಅದೇ, ಪು. 225

50. E.C VI, ಪಾಂಡವಪುರ. 220

51. ಅದೇ, ಪಾಂ. 164

52. ಅದೇ, ಪಾಂ. 179

53. ಅದೇ, ಪಾಂ. 153

54. E.C VI, ಮೈಸೂರು. 101

55. E.C VI, ಶ್ರೀರಂಗಪಟ್ಟಣ. 115

56. E.C VI, ಪಾಂಡವಪುರ. 134

57. ಅಸೂರಿ ಸಂಪತ್ಕುಮಾರಾಚಾರ್ಯ ಮತ್ತು ಶ್ರೀನಿವಾಸಚಾರ್ಯರು, ಪೂರ್ವೋಕ್ತ, ಪು. 27

58. E.C VI, ಪಾಂಡವಪುರ. 137, 162

59. ಅದೇ, ಪಾಂ. 127

60. ಅದೇ, ಪಾಂ. 138

61. ಅದೇ, ಪಾಂ, 125

62. ಅದೇ, ಪಾಂ, 129

63. ಅದೇ, ಪಾಂ, 133

64. ಅದೇ, ಪಾಂ. 131

65. ಅದೇ, ಪಾಂ. 128

66. ಅದೇ, ಪಾಂ, 132

67. ಅಸೂರು ಸಂಪತ್ಕುಮಾರಾಚಾರ್ಯ ಮತ್ತು ಶ್ರೀನಿವಾಸಾಚಾರ್ಯರು, ಪೂರ್ವೋಕ್ತ, ಪು. 29

68. ರಾಮಯ್ಯಬಿ., ಪೂರ್ವೋಕ್ತ, ಪು. 106

69. E.C., VI, ಪಾಂಡವಪುರ, 130

70. ಅದೇ, ಪಾಂ. 128, 130, 138

71. ರಾಮಯ್ಯಬಿ., ಪೂರ್ವೋಕ್ತ, ಪು. 381

72. E.C., VI, ಪಾಂಡವಪುರ, 171

73. ಅದೇ, ಪಾಂ. 197, 202

74. ಅದೇ, ಪಾಂ. 207

75. ರಾಮಯ್ಯಬಿ., ಪೂರ್ವೋಕ್ತ, ಪು. 383

76. E.C., VI, ಪಾಂಡವಪುರ, 167

77. ಅದೇ, ಪಾಂ. 174

78. ಅದೇ, ಪಾಂ. 168

79. ಅದೇ, ಪಾಂ. 172

80. ಅದೇ, ಪಾಂ.171

81. ಅದೇ, ಪಾಂ.202

82. ಅದೇ, ಪಾಂ.197

ಅಧ್ಯಾಯ–6

ದೇವಾಲಯಗಳ ನಿರ್ವಹಣೆ ಮತ್ತು ಆಡಳಿತ ವರ್ಗ

ದೇವಾಲಯಗಳ ಬಹುಮುಖತೆ

ಸಾಮೂಹಿಕ ಪೂಜಾಕೇಂದ್ರಗಳಾದ ದೇವಾಲಯಗಳು ಸಮಾಜದ ಅಭಿನ್ನ ಅಂಗವಾಗಿ ರೂಪುಗೊಳ್ಳುತ್ತಾ ಬಂದವು. ನಿರ್ಮಾಣವಾದ ದೇವಾಲಯದೊಳಗಿನ ದೇವರಿಗೆ ಪೂಜೆ, ಪುನಸ್ಕಾರ, ಅದನ್ನು ಮಾಡುವವರು, ಅವರಿಗೆ ನೆರವಾಗುವವರು, ಇವರೆಲ್ಲರ ಜೀವನ ನಿರ್ವಹಣೆ. ಹೀಗೆ ದೇವಾಲಯಗಳ ಜವಾಬ್ದಾರಿ ಬೆಳೆಯುತ್ತಾ ಹೋಯಿತು. ದೇವಾಲಯಗಳ ನಿರ್ವಹಣೆ ಸಂಕೀರ್ಣವಾಯಿತು. ದೇವಾಲಯಗಳು ವಿದ್ಯಾಕೇಂದ್ರಗಳಾಗಿ ಮತ್ತು ಮಠಗಳಾಗಿಯೂ ಕಾರ್ಯನಿರ್ವಹಣೆಗೆ ತೊಡಗಿದ ನಂತರ ಅದರ ಜವಾಬ್ದಾರಿ ಮತ್ತಷ್ಟು ಹೆಚ್ಚಿತು. ಸಾಮೂಹಿಕ ಪೂಜಾ ಸ್ಥಳವಾಗಿ ಮಾತ್ರ ಉಗಮಗೊಂಡ ದೇವಾಲಯವು ಕ್ರಮೇಣ ಸಮಾಜದ ಕೇಂದ್ರವಾಯಿತು. ವಿದ್ಯಾಭ್ಯಾಸ, ಕಲೆ, ಧರ್ಮ ಇತ್ಯಾದಿ ಸಾಂಸ್ಕೃತಿಕ ಅಂಶಗಳ ಬೆಳವಣಿಗೆಯ ಮೂಲಸ್ಥಾನವಾಯಿತು. ದೇವಾಲಯಗಳು ಸ್ವತಃ ಸರ್ವತೋಮುಖವಾಗಿ ಬೆಳೆಯುತ್ತಾ, ಧಾರ್ಮಿಕವಾಗಿ, ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಜನತೆಯನ್ನೂ ಬೆಳೆಸಿದವು. ಆದ್ದರಿಂದಲೇ ದೇವಾಲಯಗಳು ದೇವ 'ಸ್ಥಾನ'ಗಳಾಗಿವೆ.

ಮೇಲುಕೋಟೆ ದೇವಾಲಯ ಸಂಕೀರ್ಣವು ಒಂದು ಸಂಸ್ಥೆಯಾಗಿ ಭೂದಾನಗಳು ಮತ್ತು ಇತರ ಮೂಲಗಳಿಂದ ಹೆಚ್ಚಿನ ಆದಾಯವನ್ನು ಅನುಭವಿಸುತ್ತಿತ್ತು. ವಿಸ್ತೃತವಾದ ಆಚರಣೆಗಳು ಮತ್ತು ಉತ್ಸವಗಳ ನಿರ್ವಹಣೆಗೆ ಒಂದು ಉತ್ತಮ ಆಡಳಿತ ವ್ಯವಸ್ಥೆಯ ಅಗತ್ಯತೆಯನ್ನು ಉಂಟುಮಾಡಿತು. ಸಾಮಾಜಿಕ ಸಂಸ್ಥೆಯಾಗಿ ದೇವಾಲಯಗಳು ನಿರ್ವಹಿಸಿದ ಪಾತ್ರವನ್ನು ಕುರಿತು ಈ ಅಧ್ಯಯನದ ಅಂಶಗಳು ಮಾಹಿತಿ ನೀಡುತ್ತದೆ. ಈ ಸ್ಥಳದ ಎಲ್ಲಾ ದೇವಾಲಯಗಳು. ಇಲ್ಲಿ ಪ್ರಧಾನ ದೇವಾಲಯವಾದ ನಾರಾಯಣಸ್ವಾಮಿ ದೇವಾಲಯದ ಆಡಳಿತ ನಿರ್ವಹಣೆಗೆ ಒಳಪಟ್ಟು, ಸಂಪೂರ್ಣವಾಗಿ ನಿಯಂತ್ರಿಸಲ್ಪಡುತ್ತಿದ್ದವು. ಆದರೆ ಈ ದೇವಾಲಯದ ಆಡಳಿತಕ್ಕೆ ಸಂಬಂಧಿಸಿದಂತೆ ಇತಿಹಾಸ ರಚನೆಯು ಕಷ್ಟ. ಏಕೆಂದರೆ ಕಾಲ–ಕಾಲಕ್ಕೆ ಪಡೆದ ದಾಖಲೆಗಳ ಕೊರತೆ. ಕೆಲವೇ ಶಾಸನಗಳು ಈ ಕುರಿತು ಮಾಹಿತಿ ನೀಡಿವೆ. ಬಹುಪಾಲು ಶಾಸನಗಳು ವಿಜಯನಗರದ ಕಾಲದವಾಗಿದ್ದು, ಕೆಲವೇ ಶಾಸನಗಳು ನಂತರದ ಕಾಲದ ಗುರುತಿನ ಶಾಸನಗಳಾಗಿವೆ. ಆದರೂ ದೇವಾಲಯದ ಕೈಪಿಡಿಗಳು ಈ ಉದ್ದೇಶಕ್ಕೆ ಉಪಯುಕ್ತವಾಗಿವೆ.

ಮೇಲುಕೋಟೆ ದೇವಾಲಯದ ಆಡಳಿತ ವರ್ಗಕ್ಕೆ ಸಂಬಂಧಿಸಿದಂತೆ ಶಾಸನಗಳು ಕೆಲವು ಮಾಹಿತಿಗಳನ್ನು ಒದಗಿಸುತ್ತವೆ. ಆದರೆ ವ್ಯಾಪಕವಾದ ವಿವರ ಒಳಗೊಂಡಿಲ್ಲ. ಆದರೆ ದೇವಾಲಯ ಕೈಪಿಡಿಯು ನಿರ್ದಿಷ್ಟವಾಗಿ ಈ ಕುರಿತು ಹೆಚ್ಚಿನ ಬೆಳಕನ್ನು ಚೆಲ್ಲುತ್ತದೆ. ಅವುಗಳಲ್ಲಿ 'ಉದಯವಾರ್ ನಿಯಮನಪ್ಪಡಿಯು' ಆರಂಭಿಕ ದಾಖಲೆಯಾಗಿದೆ. ಇದು ದೇವಾಲಯದ ಆಡಳಿತ ವರ್ಗದ ನೌಕರರ ಕುರಿತು ವಿವರವನ್ನು ಒಳಗೊಂಡಿದೆ. ಇದು ಎರಡು ವಿಭಾಗಗಳಲ್ಲಿದ್ದು ಎರಡೂ 18ನೇ ಶತಮಾನಕ್ಕೆ ಸೇರಿದವಾಗಿವೆ. ಇತ್ತೀಚೆಗೆ ಅಂದರೆ 1937ರಲ್ಲಿ ಬಿ.ರಾಮಯ್ಯರಿಂದ ತಯಾರಾದ "ನಾರಾಯಣಸ್ವಾಮಿ ದೇವಾಲಯದ ಕೈಪಿಡಿಯು" ದೇವಾಲಯದ ಸೇವಾಕರ್ತರ ಕುರಿತು ವಿಸ್ತಾರವಾದ ಮಾಹಿತಿಯನ್ನು ನೀಡುತ್ತದೆ. ಆದರೂ ಇಲ್ಲಿ ದಾಖಲಾಗಿರುವಂತೆ ದೇವಾಲಯಕ್ಕೆ ಸೇರಿದ ನೌಕರಿವರ್ಗ ಸಂದರ್ಭಕ್ಕೆ ತಕ್ಕಂತೆ ಕೆಲವು ಪಾತ್ರಗಳನ್ನು ವಿಸ್ತರಿಸಿಕೊಂಡಿರುವ ಅಂಶವನ್ನು ತಿಳಿಸುತ್ತದೆ. ದೇವಾಲಯಗಳ ನಿರ್ವಹಣೆ ಸಂಬಂಧಿಸಿದಂತೆ ಧಾರ್ಮಿಕ ಅಧಿಕಾರಿಗಳು ಮತ್ತು ವಿವಿಧ ವರ್ಗದ ನೌಕರರು ಎಂಬ ಶೀರ್ಷಿಕೆಯಡಿ ಅಧ್ಯಯನ ಮಾಡಬಹುದು.

ವೃತ್ತಿನಿರತ ಧಾರ್ಮಿಕ ಅಧಿಕಾರಿವರ್ಗ

ಅರ್ಚಕರು :– ಸ್ಥಳದ ನಾರಾಯಣಸ್ವಾಮಿ ದೇವಾಲಯ ಸಂಕೀರ್ಣವು 195 ವೃತ್ತಿನಿರತ ಸೇವಾಕರ್ತರನ್ನು ಹೊಂದಿದ್ದು ಅವರ ಜವಾಬ್ದಾರಿಗಳಿಗೆ ಹೊಂದಿಕೊಂಡಂತೆ 6 ತರಗತಿಗಳಾಗಿ ವಿಭಾಗಿಸಿದೆ. ಸಾಂಪ್ರದಾಯಿಕ ಚಟುವಟಿಕೆಗಳನ್ನು ನೋಡಿಕೊಳ್ಳುವ ಅರ್ಚಕರು 2ನೇ ತರಗತಿಗೆ ಸೇರಿದ್ದಾರೆ. ಈ ದೇವಾಲಯದ ಅರ್ಚಕರು ಭಟ್ಟರು ಎಂದು ಕರೆಯಲ್ಪಡುತ್ತಾರೆ. ಇವರು ಅಲ್ಪಸಂಖ್ಯೆಯ ಶ್ರೀ ವೈಷ್ಣವ ಗುಂಪಿಗೆ ಸೇರಿದವರು. ಈ ವರ್ಗವು ಶ್ರೀ ವೈಷ್ಣವ ದೇವಾಲಯಗಳಲ್ಲಿ ಸಾದೃಶ ವೃತ್ತಿಗಳನ್ನು ನಿರ್ವಹಿಸುತ್ತಾರೆ. ಪಾಂಚರಾತ್ರ ಆಗಮ ಪದ್ಧತಿಯಂತೆ ಆರಾಧನೆ ನಡೆಯುತ್ತದೆ.[1]

1937ರ ದೇವಾಲಯ ಕೈಪಿಡಿಯು ಮೂರು ಅರ್ಚಕರ ಕುರಿತು ವಿವರಣೆ ಕೊಡುತ್ತದೆ.

(1) **ನಾರಾಯಣಸ್ವಾಮಿ ಗುಡಿಯ ಅರ್ಚಕರು** :– ಇವರು ದೇವಾಲಯ ಸಂಕೀರ್ಣದ ಸಣ್ಣ ಗುಡಿಗಳಾದ ವಿಶ್ವಕ್ಸೇನ, ನಮ್ಮಾಳ್ವಾರ್, ತಿರುಮಂಗಿ ಆಳ್ವಾರ್, ಜಯವಿಜಯರು, ಪಿಳ್ಳೈಲೋಕಾಚಾರ್ಯ, ಬದರಿವೃಕ್ಷ ಮತ್ತು ಭಕ್ತವಿಗ್ರಹ ಸನ್ನಿಧಿಗಳ ಮೇಲ್ವಿಚಾರಣೆ ನೋಡಬೇಕು.

(2) **ಚೆಲುವರಾಯಸ್ವಾಮಿ ದೇವಾಲಯದ ಅರ್ಚಕರು** :- ಇವರು ಸ್ಥಳದ ನಿತ್ಯಹೋಮ, ಬೃಂದಾವನ, ಪರಮಪದನಾಥ, ಚಕ್ರತ್ತಾಳ್ವಾ, ತಿರುಕ್ಕಚ್ಚಿನಂಬಿ, ಉಗ್ರಾಣದ ಆಂಜನೇಯಗುಡಿಗಳ ಮೇಲ್ವಿಚಾರಣೆ ನಡೆಸಬೇಕು.

(3) **ತಾಯಾರ್ ದೇವಾಲಯದ ಅರ್ಚಕರು** :- ಇವರು ನಾಥಮುನಿ, ಆಳವಂದಾರ್ ಮತ್ತು ಗಜೇಂದ್ರವರ್ಧನ ಗುಡಿಗಳನ್ನು ನೋಡಿಕೊಳ್ಳಬೇಕು.

ಸ್ಥಳದ ಮತ್ತೊಂದು ಮುಖ್ಯ ದೇವಾಲಯವಾದ ಯೋಗಾನರಸಿಂಹ ದೇವಾಲಯದ ಅರ್ಚಕರು ಭಟ್ಟರ ವಂಶಕ್ಕೆ ಸೇರಿದ್ದು, ಇವರು ಪ್ರತ್ಯೇಕ ಸ್ಥಾನಮಾನಗಳನ್ನು ಹೊಂದಿದ್ದಾರೆ. ಮೇಲಿನ ಅರ್ಚಕರನ್ನು ದೇವಾಲಯದ ಪ್ರಧಾನ ಅರ್ಚಕರು ಎನ್ನಲಾಗುತ್ತದೆ.

ಮೇಲುಕೋಟೆಯ ಶಾಸನಗಳು ಅರ್ಚಕರ ಕುರಿತು ಏನನ್ನೂ ಉಲ್ಲೇಖಿಸುವುದಿಲ್ಲ. ನಿಯಮನಪ್ಪಡಿಯು ತಿಳಿಸುವಂತೆ, ರಾಮಾನುಜರು ಶ್ರೀರಂಗ ದೇವಾಲಯದ ಅರ್ಚಕರಾಗಿದ್ದ ಶ್ರೀ ರಂಗರಾಜ ಭಟ್ಟರನ್ನು ಆಹ್ವಾನಿಸಿ ಈ ದೇವಾಲಯದಲ್ಲಿ ಆರಾಧನೆಯ ವಿಧಿ ವಿಧಾನಗಳನ್ನು ರೂಪಿಸಿದರು. ಈ ಅರ್ಚಕರು ಜೌಪರಾಯನ ಗೋತ್ರ, ಕಾತ್ಯಾಯನ ಸೂತ್ರ, ಶುಕ್ಲ ಯಜುಸ್-ಶಕಕ್ಕೆ ಸೇರಿದವರಾಗಿದ್ದರು. ಇವರು ದೇವಾಲಯದ ಆದಾಯದ ಕೆಲವು ಭಾಗವನ್ನು ಪಡೆಯುತ್ತಿದ್ದರು. ಅರ್ಚಕರು ತಮ್ಮ ಮೂಲವನ್ನು ಶ್ರೀ ರಂಗರಾಜಭಟ್ಟರಿಂದ ಗುರಿತಿಸಿಕೊಳ್ಳುತ್ತಾರೆ. ಅವರು ಹೇಳುವಂತೆ ರಾಮಾನುಜರಿಂದ ಜೀರ್ಣೋದ್ಧಾರವಾದ ನಂತರ ರಾಮಾನುಜರಿಂದ ದೇವಾಲಯ ಪೂಜೆಯನ್ನು ನಡೆಸಲು ನೇಮಕವಾದರು. ಪೂಜೆಯನ್ನು ಮಾಡುವವ ಪೂಜಾರಿ, ಅರ್ಚನೆಯನ್ನು ಮಾಡುವವನು ಅರ್ಚಕ, ಪೂಜೆ ಮತ್ತು ಅರ್ಚನೆಗಳು ತಾರ್ಕಿಕವಾಗಿ ಬೇರೆ-ಬೇರೆಯಾದರೂ ತಾತ್ವಿಕವಾಗಿ ಬೇರೆಯಲ್ಲ. ಆದ್ದರಿಂದ ಪೂಜಾರಿ ಮತ್ತು ಅರ್ಚಕರು ಬೇರೆ-ಬೇರೆಯಲ್ಲ.

ದೇವತಾ ಸ್ಥಾನವು ಆಕರ್ಷಕವಾಗಿರಲು ಆರ್ಚಕನು ಮುಖ್ಯ ಕಾರಣ ಎಂಬುದು ಆಗಮದ ಅಭಿಪ್ರಾಯ. ಅರ್ಚಕನು ಸದಾಚಾರ ಸಂಪನ್ನನಾಗಿ, ಸುಶಿಕ್ಷಿತನಾಗಿ ನಿಗ್ರಹಾನುಗ್ರಹ ಸಾಮರ್ಥ್ಯ ಶಾಲಿಯಾಗಿರಬೇಕು. ಸ್ವಾರ್ಥದಿಂದ ದೂರವಾಗಿ ಲೋಕಕಲ್ಯಾಣದ ಸಂಕಲ್ಪ ಮತ್ತು ಶ್ರದ್ಧಾಭಕ್ತಿಗಳನ್ನು ಹೊಂದಿರಬೇಕು. ದೇವರ ಪ್ರತಿಮಾ ರೂಪವನ್ನು ಸಮೀಪದಿಂದ ಕಾಣುವ, ಕೈಯಾರೆ ಅಂಗಭೋಗ ಸೇವೆ ಮಾಡುವ, ತಮಗಾಗಿ ಪೂಜಿಸುವ ಅರ್ಚಕನು ತಮ್ಮ ಮತ್ತು ದೇವರ ನಡುವಿನ ಸೇತು ಎಂದೇ ಭಕ್ತರು ಭಾವಿಸಿದ್ದರು.

ಪರಿಚಾರಕರು

ಇವರು ಅರ್ಚಕರಿಗೆ ಸಹಾಯಕರಾಗಿದ್ದು, ಇವರೂ ಸಹ ಶ್ರೀ ವೈಷ್ಣವ ಬ್ರಾಹ್ಮಣರಾಗಿದ್ದಾರೆ. ಇವರೂ ಎರಡನೇ ವರ್ಗದ ನೌಕರರಾಗಿದ್ದಾರೆ. ಪ್ರಸ್ತುತ ಮೇಲುಕೋಟೆಯ ಪ್ರತಿಯೊಂದು ದೇವಾಲಯಗಳು ಒಂದೊಂದು ಸಹಾಯಕರನ್ನು ಹೊಂದಿದೆ. ಪರಿಚಾರಕರ ಪ್ರಧಾನ ಕರ್ತವ್ಯ ಪೂಜೆಯಲ್ಲಿ ಅರ್ಚಕರಿಗೆ ಸಹಾಯ ಮಾಡುವುದು. ದೇವಾಲಯದ ಆಚರಣೆಗೆ ಬೇಕಾದಂತಹ ನೀರನ್ನು ಒದಗಿಸುವುದು ಮತ್ತು ಆಭರಣಗಳನ್ನು ಶುಚಿಗೊಳಿಸುವುದು. ದೇವಾಲಯದ ನಿತ್ಯಾರಾಧನೆಗೆ ಬೇಕಾದಂತಹ ಎಲ್ಲಾ ಅಗತ್ಯ ವಸ್ತುಗಳನ್ನು ಸಂಗ್ರಹಿಸುವುದು. ನಿವೇದನವಾದ ನಂತರ ಭಕ್ತರಿಗೆ ಪ್ರಸಾದವನ್ನು ಹಂಚುವ ಜವಾಬ್ದಾರಿಗಳನ್ನು ಹೊಂದಿದ್ದಾರೆ.

ನಿಯಮನಪ್ಪಡಿಯು ಉಲ್ಲೇಖಿಸುವಂತೆ ವಶಿಷ್ಟಗೋತ್ರ, ಜೈಮಿನಿಸೂತ್ರ, ಸಾಮಶಖಕ್ಕೆ ಸೇರಿದ ಪರಿಚಾರಕರಾಗಿ ಅನಂತಭಟ್ಟರು ಮತ್ತು ತಿರುವನಂತಪುರದಾಸರನ್ನು ರಾಮಾನುಜರು ನೇಮಕ ಮಾಡಿದರು. ಅವರು ವಾಸ್ತವವಾಗಿ ಕುರೆಮರದೂರ್‌ಗೆ ಸೇರಿದವರಾಗಿದ್ದರು. ಅವರು ಶ್ರೀ ರಂಗರಾಜಭಟ್ಟರಿಗೆ ಸಹಾಯಕರಾಗಿದ್ದರು. ನಿಯಮನಪ್ಪಡಿಯು ತಿಳಿಸುವಂತೆ ಇವರು ಹಲವು ಕೆಲಸಗಳನ್ನು ಮಾಡಬೇಕಿತ್ತು. ಅದರಂತೆ ಅಭಿಷೇಕಕ್ಕೆ ನೀರನ್ನು ಒದಗಿಸುವುದು, ದೂಪ ಹಾಕುವುದು (ಸುಗಂದ ದ್ರವ್ಯಗಳು), ಹೋಮಕ್ಕೆ ಬೇಕಾದ ಅಗತ್ಯ ವಸ್ತುಗಳನ್ನು ಒದಗಿಸುವುದು. ಗರುಡಗಂಬದಲ್ಲಿ ಬಾವುಟ ಹಾರಿಸುವುದು, ಉತ್ಸವ ಮೂರ್ತಿಯು ಉತ್ಸವಕ್ಕೆ ಕೊಂಡೊಯ್ಯಲ್ಪಟ್ಟಾಗ ಅರ್ಚಕರಿಗೆ ಸಹಾಯ ಮಾಡುವುದು ಮತ್ತು ದೇವದಾಸಿಯರ ನೃತ್ಯ ಮತ್ತು ಸಂಗೀತವನ್ನು ಹಾಗೂ ಹಬ್ಬಗಳಲ್ಲಿ ದೇವಾಲಯದ ಅಲಂಕಾರವನ್ನು ನೋಡಿಕೊಳ್ಳುವ ಕಾರ್ಯ ಮಾಡಬೇಕಾಗಿತ್ತು.[2]

ನಿಯಮಾನಪ್ಪಡಿಯು ತಿಳಿಸುವಂತೆ ಸಮಾನ ಸೇವೆಗಳಿಗೆ ತಿರುವನಂತಪುರದಾಸರು ಮತ್ತು ತಿರುಕ್ಕುರಂಗುಡಿದಾಸರನ್ನು ನೇಮಿಸಿದರು. ಇಬ್ಬರೂ ವಶಿಷ್ಟಗೋತ್ರ, ಜೈಮಿನಿಸೂತ್ರ, ಸಾಮ-ಶಖ, ಮಾಲಾಕಾರದಾಸರು ಕೌಂಡಿಲ್ಯಗೋತ್ರ, ಬೋಧಾಯನ ಸೂತ್ರ ಯಜುಶ್‌ಶಖ ಮತ್ತು ಯತಿರಾಜದಾಸರು ಭಾರ್ಗವ ಗೋತ್ರ, ಜೈಮಿನಿಸೂತ್ರ, ಸಾಮಶಖ,[3] ಕುತೂಹಲವೆಂದರೆ ಕೆಲವು ಅರ್ಚಕರು, ಪರಿಚಾರಕರು ಮತ್ತು ಸ್ಥಾನಿಕರು ಈ ದೇವಾಲಯದಲ್ಲಿ ಮೇಲೆ ಉಲ್ಲೇಖಿಸಿರುವಂತೆ ಅದೇ ಗೋತ್ರ, ಸೂತ್ರ, ಶಖಗಳಿಗೆ ಸೇರಿದ್ದಾರೆ. ಇವರು ತಮ್ಮ ಹಕ್ಕನ್ನು ಇವುಗಳಿಂದ ಅನುಭವಿಸುವರು. ಪರಿಚಾರಕರು ಪ್ರಮುಖವಾಗಿ ವೈದಿಕ ಸಾಂಪ್ರದಾಯಿಕ ಆಚರಣೆಗಳಿಗೆ ಅಡ್ಡಿಯಾಗದಂತೆ ತಮ್ಮ ಕಾರ್ಯನಿರ್ವಹಿಸಬೇಕು.

ಶಾಸನಗಳು ಇವುಗಳ ಮೇಲೆ ಯಾವುದೇ ಬೆಳಕು ಚೆಲ್ಲುವುದಿಲ್ಲ. 'ವ್ಯಕ್ತಿಯು ನಾಮಾರ್ಚನೆಯನ್ನು ಮಾಡುವನು' ಎಂಬ ಒಂದೇ ಒಂದು ಉಲ್ಲೇಖ ಶಾಸನದಲ್ಲಿದೆ.[4]

ನಾರಾಯಣಸ್ವಾಮಿ ದೇವಾಲಯ ಆಡಳಿತಕ್ಕೆ ಒಳಪಟ್ಟ ಸ್ಥಳದ ಎಲ್ಲಾ ದೇವಾಲಯಗಳಲ್ಲಿಯೂ ಪರಿಚಾರಕರಿದ್ದು, ಚೆಲುವರಾಯಸ್ವಾಮಿಯ ಉತ್ಸವ ಆ ದೇವಾಲಯಕ್ಕೆ ಭೇಟಿನೀಡಿದಾಗ, ಪದ್ಧತಿಯಂತೆ ಜವಾಬ್ದಾರಿ ನಿರ್ವಹಿಸಬೇಕು. ಸನ್ನಿಧಿಗೆ ಬರಬೇಕಾದ ದಿನಸಿಗಳನ್ನು ಉಗ್ರಾಣದಿಂದ ಪಡೆದು ನೇವೇದ್ಯ ಮಾಡಬೇಕು. ಆಯಾ ದೇವಾಲಯದ ವಿಗ್ರಹಗಳು ಮತ್ತು ಪೂಜಾ ಸಾಮಾಗ್ರಿಗಳಿಗೆ ಇವರೇ ಜವಾಬ್ದಾರರಾಗಿದ್ದರು.

ಸ್ಥಾನಿಕರು

ಸ್ಥಾನಪತಿ, ಸ್ಥಾನ ಒಡೆಯ, ಸ್ಥಾನದಾಚಾರ್ಯ, ಸ್ಥಾನಿಕ ಇತ್ಯಾದಿ ಪಾರಿಭಾಷಿಕ ಶಬ್ದಗಳೆಲ್ಲವೂ ಒಂದೇ ಅರ್ಥದಲ್ಲಿ ಬಳಕೆಯಾಗಿದ್ದರೂ, ಒಂದೊಂದು ಸ್ಥಳದಲ್ಲಿ ಒಂದೊಂದು ರೂಪದಲ್ಲಿ ಬಳಕೆಯಲ್ಲಿದ್ದವು. ಸ್ಥಾನಪತಿಯು ಸ್ಥಾನವೆಂದು ಪರಿಗಣಿತವಾಗಿದ್ದ ನೆಲೆಯ ಅಥವಾ ಸ್ಥಳದ ಮುಖ್ಯಸ್ಥನಾಗಿರುತ್ತಿದ್ದನು. ಒಂದು ಸ್ಥಾನದಲ್ಲಿ ಒಬ್ಬನೇ ಸ್ಥಾನಪತಿ ಇರುತ್ತಿದ್ದುದು ಸಾಮಾನ್ಯವಾದರೂ, ಕೆಲವು ದೇವಾಲಯಗಳಲ್ಲಿ ಅದರಲ್ಲೂ ದೇವಾಲಯ ಸಮುಚ್ಚಯಗಳಲ್ಲಿ ಹಲವಾರು ಸ್ಥಾನಿಕರು ಇರುತ್ತಿದ್ದರು. ಡಾ.ಎಂ. ಚಿದಾನಂದಮೂರ್ತಿಯವರು 'ದೇವಸ್ಥಾನದ ಆಗು ಹೋಗುಗಳನ್ನು ನೋಡಿಕೊಳ್ಳುವ ಕರ್ತವ್ಯವನ್ನು ಹೊತ್ತಿರುವವರು ಸ್ಥಾನಿಕರು' ಎಂದು ಅಭಿಪ್ರಾಯ ಪಟ್ಟಿದ್ದಾರೆ.[5] ಶ್ರೀ ರಾಮಾನುಜರ ಶಿಷ್ಯರಲ್ಲೊಬ್ಬನಾದ ತಿರುವರಂಗದಾಸನು ತೊಣ್ಣೂರಿನ ಶ್ರೀ ಲಕ್ಷ್ಮಿನಾರಾಯಣ ದೇವಾಲಯವನ್ನು ಕಟ್ಟಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದು, ಆ ಆಲಯದ ಮತ್ತು ಯೋಗಾನರಸಿಂಹ ದೇವಾಲಯದ ಸ್ಥಾನಪತಿಯೂ ಆಗಿದ್ದನು.[6] ತೊಂಡನೂರಿನ ಶಾಸನಗಳು ಕೈಲಾಸಮುಡೈಯಾರ್ ದೇವಾಲಯದ ಸ್ಥಾನಪತಿಗಳ ಕುರಿತು ಉಲ್ಲೇಖಿಸುತ್ತವೆ.[7] ದೇವಾಲಯದ ಸ್ಥಾನಿಕ ಮತ್ತು ಅರ್ಚಕ ಇಬ್ಬರೂ ಬೇರೆ-ಬೇರೆಯಾಗಿರುತ್ತಿದ್ದರು. ದೇವಾಲಯದ ಧಾರ್ಮಿಕ ಸೇವೆ, ಆಡಳಿತಾತ್ಮಕ ಮತ್ತು ಆರ್ಥಿಕ ಜವಾಬ್ದಾರಿಯನ್ನು ಹೊಂದಿದ್ದ ಇವರು ವಂಶಪಾರಂಪರ್ಯವಾಗಿ ಅಥವಾ ಶಿಷ್ಯಪರಂಪರೆಯಾಗಿ ಮುಂದುವರಿದಿದೆ.

ಮೇಲುಕೋಟೆ ದೇವಾಲಯ ಕೈಪಿಡಿ ಮತ್ತು ನಿಯಮನಪ್ಪಡಿಗಳು ಸ್ಥಾನಿಕರ ಕುರಿತು ವಿವರ ನೀಡುತ್ತವೆ. ಕಾಲಘಟ್ಟಗಳಲ್ಲಿ ಸ್ಥಾನಿಕರ ಅಧಿಕಾರ ಮತ್ತು ಜವಾಬ್ದಾರಿಗಳು ಬದಲಾಗಿರುವುದನ್ನು ನೋಡಬಹುದು. ಸ್ಥಾನಿಕರು ಇಲ್ಲಿ ಧಾರ್ಮಿಕ ಸೇವೆಗಳಿಗೆ ಹೆಚ್ಚು

ತೊಡಗಿಸಿಕೊಂಡಿದ್ದರು. ಇವರನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿ ವಿಶೇಷ ಸ್ವಾಮ್ಯಗಳನ್ನು ಹಂಚಲಾಗಿತ್ತು. ನಾರಾಯಣಸ್ವಾಮಿ ದೇವಾಲಯದಲ್ಲಿ ದೇವರಿಗೆ ಕನ್ನಡಿ ಹಿಡಿಯುವ, ಕುಂಚ ಬೀಸುವ, ಮಡಿವಸ್ತ್ರ ಕೊಡುವ, ಚಾಮರ ಹಾಕುವ, ಕೈತೆರೆ ಹಿಡಿಯುವಂತಹ ಕೆಲಸಗಳನ್ನು ಮಾಡುತ್ತಿದ್ದರು. ನಾಲ್ಕು ಸ್ವಾಮ್ಯದವರು ಸೇರಿ ಮಾಡತಕ್ಕ ಕೆಲಸಗಳನ್ನು ಉಲ್ಲೇಖಿಸಲಾಗುತ್ತದೆ. ಉತ್ಸವದಲ್ಲಿ ಮತ್ತು ವಿಶೇಷ ದಿನಗಳಲ್ಲಿ ದೇವರ ಆಲಯಗಳ ರಕ್ಷಣೆಯ ಜವಾಬ್ದಾರಿ ಇವರದಾಗಿತ್ತು. ವೈರಮುಡಿ, ರಾಜಮುಡಿಗಳನ್ನು ನಿಗಧಿತ ಸ್ಥಳದಿಂದ ತರುವ, ಧರಿಸುವ ಮತ್ತು ಉತ್ಸವದ ನಂತರ ಅದೇ ಸ್ಥಳದಲ್ಲಿ ಸುರಕ್ಷಿತವಾಗಿ ತಲುಪಿಸುವ ಗುರುತರ ಜವಾಬ್ದಾರಿ ಇವರದಾಗಿದೆ.

ಕರ್ನಾಟಕದ ಇನ್ನಿತರ ದೇವಾಲಯಗಳಲ್ಲಿದ್ದಂತೆ ಸ್ಥಾನಪತಿಗೆ ಪ್ರಥಮಾಧಿಕಾರದ ಅವಕಾಶ ಇಲ್ಲವಾಗಿತ್ತು. ಯತಿರಾಜ ಮಠದ ಜೀಯರ್‌ಗಳು ಈ ಅಧಿಕಾರವನ್ನು ಹೊಂದಿದ್ದಂತೆ ಕಂಡುಬರುತ್ತದೆ. ದೇವಾಲಯದ ದಾನವನ್ನು ಸ್ವೀಕರಿಸುವ ಮತ್ತು ವ್ಯವಸ್ಥಿತವಾಗಿ ವಿನಿಯೋಗಿಸುವ ಆರ್ಥಿಕ ಜವಾಬ್ದಾರಿಯೂ ಜೀಯರ್‌ಗಳಿಗೆ ಸೇರಿತ್ತು. ಇದನ್ನು ಶಾಸನಗಳೂ ದೃಢಪಡಿಸುತ್ತವೆ. ಕಾಲಂತರಗಳಲ್ಲಿ ಸ್ಥಾನಿಕರು ಹೊಂದಿದ್ದ ದೇವಾಲಯದ ಆಡಳಿತದ ಪ್ರತ್ಯಕ್ಷ ಪರಮಾಧಿಕಾರವು ಮರೆಯಾದಂತೆ ತೋರುತ್ತದೆ. ದೇವಾಲಯದಲ್ಲಿ ಇವರಿಗೆ ಕೆಲವು ನಿಬಂಧನೆಗಳನ್ನು ವಿಧಿಸಲಾಗಿತ್ತು. ಮುಖ್ಯವಾಗಿ ಆರಾಧನಾಧಿ ಕಾರ್ಯಗಳಲ್ಲಿ ಪಾಲ್ಗೊಳ್ಳುವ ಸ್ಥಾನಿಕನು ಆಗಮಶಾಸ್ತ್ರದಲ್ಲಿ ನಿತ್ಯಾರಾಧನ ಪ್ರಕರಣ ಮಹೋತ್ಸವದ ಭಾಗವನ್ನ ತಿಳಿದಿರಬೇಕು.[8] ದೇವಾಲಯದ ಕೈಪಿಡಿಯಲ್ಲಿ ಉಲ್ಲೇಖವಾದಂತೆ ಸ್ಥಾನಿಕರು ಅಧಿಕಾರಿಗಳಿಂದ ನಿಯಂತ್ರಿತವಾಗುತ್ತಿದ್ದರು. ಹೀಗೆ ಸ್ಥಾನದ ಮುಖ್ಯಸ್ಥನಾಗಿ ಅಧಿಕಾರ ಹೊಂದಿದ್ದ ಸ್ಥಾನಿಕರು ಆಡಳಿತಾತ್ಮಕ ಜವಾಬ್ದಾರಿಗಳ ಜೊತೆಗೆ ಧಾರ್ಮಿಕ ಕೈಂಕರ್ಯಗಳನ್ನು ನಿರ್ವಹಿಸುತ್ತಿದ್ದರು.

ಅಧ್ಯಾಪಕರು

ದೇವಾಲಯಕ್ಕೆ ಹೊಂದಿಸಲ್ಪಟ್ಟ ಒಂದು ಶ್ರೀ ವೈಷ್ಣವ ವರ್ಗವಿದೆ ಅದನ್ನು ಈಯಲ್ ಶ್ರೀ ವೈಷ್ಣವರು ಎನ್ನುವರು. ಇವರ ಕೆಲಸವೆಂದರೆ ವೇದಗಳ ಪಠನೆ, ಇತಿಹಾಸ, ಭಗವದ್ಗೀತೆ, ಶ್ರೀ ಭಾಗವತ, ವಿಷ್ಣುಪುರಾಣ, ಯಾದವಗಿರಿ, ಮಹಾತ್ಮ್ಯೆ, ಆಳವಂದಾರ್ ಸ್ತೋತ್ರ, ಶ್ರೀ ಭಾಷ್ಯ, ಗದ್ಯತ್ರಯ, ಶ್ರೀ ಗಣರತ್ನಕೋಶ, ಸಂಗೀತ ರಾಮಾಯಣ, ಪಂಚಾಂಗ ಮತ್ತು ತಿರುವಾಯ್‌ಮೊಳಿ, ಇವು ದಿನನಿತ್ಯ ಮತ್ತು ವಿಶೇಷವಾಗಿ ಅಧ್ಯಯನೋತ್ಸ ಹಬ್ಬಗಳಲ್ಲಿ

ಇವರಿಂದ ಪಠಣೆಯಾಗುತ್ತವೆ. ಇವರು 4000 ನಾಲಾಯಿರ ದಿವ್ಯ ಪ್ರಬಂಧವನ್ನು ತಿಳಿದಿರಬೇಕು. ನೌಕರಿಗಳು ಉಳಿದರೆ ಮಾತ್ರ ಸ್ವಲ್ಪ ಕಮ್ಮಿ ತಿಳಿದವರಿಗೆ ಕೊಡಬಹುದು.

1937ರ ದೇವಾಲಯ ಕೈಪಿಡಿಯು ಉಲ್ಲೇಖಿಸುವಂತೆ 37 ಅಧ್ಯಾಪಕರು ನಾರಾಯಣಸ್ವಾಮಿ ದೇವಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದರು.[9] ನಿಯಮನಪ್ಪಡಿಯು ಉಲ್ಲೇಖಿಸುವಂತೆ ಈ ಸೇವಕರು ಅರ್ಚಕರ ಮತ್ತು ಸಂಬಂಧಿಸಿದ ಸ್ಥಾನಿಕರ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಕೆಲವು ಕೈಂಕರ್ಯಗಳನ್ನು ತೆಂಗಲೈ ಮತ್ತು ಒಡಗಲೈ ಗುಂಪಿನವರ ಮಧ್ಯೆ ಹಂಚಲಾಗಿತ್ತು. ಮೇಲುಕೋಟೆಯ ಎರಡು ಶಾಸನಗಳು ಅರಳುಪ್ಪಾಡು ತೀರ್ಥ ಮತ್ತು ಪ್ರಸಾದಗಳನ್ನು ಅರ್ಪಿಸುತ್ತಿದ್ದ ಸಮಕಾಲೀನ ಪ್ರಭಾವಶಾಲಿ ಶ್ರೀ ವೈಷ್ಣವನಾಗಿದ್ದ ತಿರುಮಲ ತಾತಾಚಾರ್ಯ ಮಾಡಿದ ದಾಖಲೆಗಳಾಗಿವೆ.[10] ಈ ಶಾಸನಗಳು ತಿಳಿಸುವಂತೆ ದೇವಾಲಯದಲ್ಲಿ ಮತ್ತು ಸಮಾಜದಲ್ಲಿ ಶ್ರೀ ವೈಷ್ಣವರು ಉನ್ನತ ಸ್ಥಾನವನ್ನು ಅನುಭವಿಸುತ್ತಿದ್ದರು.

ಅರೆಯರ್ :- ಹಲವು ಶ್ರೀ ವೈಷ್ಣವ ದೇವಾಲಯಗಳಲ್ಲಿರುವಂತೆ ಪ್ರಸ್ತುತ ಇಂದಿಗೂ ಇಲ್ಲಿರುವ ವಿಶೇಷವಾದ ವೃತ್ತಿನಿರತ ವರ್ಗವೆಂದರೆ ಅರೆಯರ್. ಇವರು ದೇವರ ಪದ್ಯಗಳ ಸಂಗೀತವನ್ನು ಉಚ್ಚರಿಸುವರು. ಇಲ್ಲಿನ ದೇವಾಲಯಗಳಲ್ಲಿ ನಿತ್ಯ ಸಾಯಂಕಾಲದಲ್ಲಿ ಇದು ಸಾಮಾನ್ಯ ದೃಶ್ಯವಾಗಿದೆ. ಇಲ್ಲಿ ವ್ಯಕ್ತಿಯು ಉದ್ದವಾದ ಶಂಕುವಿನಾಕಾರದ ಟೋಪಿ ಹಾಕಿಕೊಂಡು ದೇವಾಲಯದ ಮೂರ್ತಿಯ ತಮಿಳು ಪದ್ಯಗಳನ್ನು ಹೇಳುವರು. ಈ ಹಾಡುಗಾರರನ್ನು ಅರೆಯರ್ ಎನ್ನುವರು. ಇವರನ್ನು 'ವಿನ್ನಪ್ಪಮ್ ಸೆಯಮ್' ಎಂದೂ ಕರೆಯುವರು. ಇದರ ವಾಸ್ತವ ಅರ್ಥವೆಂದರೆ ಯಾರು ದೇವರಲ್ಲಿ ನಿವೇದನೆಯನ್ನು ಮಾಡುವರೋ ಅವರು. ನಿಯಮನಪ್ಪಡಿ ಉಲ್ಲೇಖಿಸುವಂತೆ ಮೊದಲ ಅರೆಯರ್ ರಾಮಾನುಜರಿಂದ ನೇಮಕವಾದರು. ಅವರ ಹೆಸರು ತಿರುನಾರಾಯಣ ಪೆರುಮಾಳ್, ವಧುಲಗೋತ್ರ, ಅಪಸ್ಥಂಭ ಗೋತ್ರ, ಯಜುಶ್ ಶಖ.

ಮೇಲುಕೋಟೆಯಲ್ಲಿ ತಿರುನಾರಾಯಣ ದೇವರಿಗೆ ವಿಶೇಷವಾಗಿ ರೂಪಿತವಾದ ಕೆಲವು ಗೀತೆಗಳನ್ನು ಇವರು ಹಾಡುವರು. ಈ ಗೀತೆಗಳ ರಚನೆಕಾರರು ತಿರುಕ್ಕೊಟ್ಟಿಯೂರ್ ನಂಬಿ. ಇವರನ್ನು ಮೇಲೆ ತಿಳಿಸಿರುವ ತಿರುನಾರಾಯಣ ಪೆರುಮಾಳ್ ಅರೆಯರ್‌ರ ತಾತ ಎಂದು ತೀರ್ಮಾನಿಸಲಾಗಿದೆ. ತಿರುಕ್ಕೊಟ್ಟಿಯೂರ್ ನಂಬಿಯವರ ಮೂರ್ತಿಯು ಪಟ್ಟಾಭಿರಾಮರ ಗುಡಿಯಲ್ಲಿ ಸ್ಥಾಪಿತವಾಗಿದೆ. ಇದು ಅರೆಯರ್ ಕುಟುಂಬ ವಂಶಸ್ಥರಿಂದಲೇ ನಿರ್ವಹಣೆಯಾಗುತ್ತಿದೆ.

ಮೇಲೆ ಉಲ್ಲೇಖಿಸಿರುವ ಎಲ್ಲಾ ಧಾರ್ಮಿಕ ಅಧಿಕಾರದ ವರ್ಗಗಳು ಎರಡನೇ ನೌಕರಿ ವರ್ಗಕ್ಕೆ ಸೇರಿದ್ದಾರೆ. ಎಲ್ಲರೂ ಶ್ರೀ ವೈಷ್ಣವ ಬ್ರಾಹ್ಮಣರಾಗಿದ್ದು, ನೇರವಾಗಿ ಧಾರ್ಮಿಕ ಸೇವೆಗಳ ಜೊತೆಗೆ ಸಂಬಂಧ ಹೊಂದಿದ್ದಾರೆ. ಇಷ್ಟೇ ಅಲ್ಲದೆ ಈ ವರ್ಗದಲ್ಲಿ ಪುರೋಹಿತರು. ಛತ್ರಿಹಿಡಿಯುವವರು. ಗುಂಭಾರ್ತಿಯವರು, ತುಳಸಿ ಕೆಲಸದವರು ಹೀಗೆ ಸುಮಾರು 13 ಜನರು ನಾರಾಯಣಸ್ವಾಮಿ ದೇವಾಲಯ ಸಂಕೀರ್ಣದಲ್ಲಿ ಕೆಲಸ ಮಾಡುವರು.

ಸೇವಾನಿರತ ಇನ್ನಿತರ ನೌಕರರು

ದೇವಾಲಯದ ಹಲವು ವಿವಿಧ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಹಲವು ಹುದ್ದೆಗಳಿದ್ದವು. ಹಲವು ಉದ್ದೇಶಗಳಿಗೆ ನೇಮಕಗೊಂಡಿದ್ದ ಜನರ ಪಟ್ಟಿಯೇ ಇಲ್ಲಿತ್ತು. ಮುಖ್ಯ ದೇವಾಲಯವಾದ ನಾರಾಯಣಸ್ವಾಮಿ ದೇವಾಲಯವು 195 ನೌಕರರನ್ನು ಹೊಂದಿದೆ. ಅವರನ್ನು ಆರು ತರಗತಿಗಳಾಗಿ ವಿಭಾಗಿಸಲ್ಪಟ್ಟಿದೆ. ಮೇಲೆ ತಿಳಿಸಿರುವ ಸಾಂಪ್ರದಾಯಿಕ ಚಟುವಟಿಕೆಯನ್ನು ನೋಡಿಕೊಳ್ಳುವರು ಎರಡನೆ ತರಗತಿಗೆ ಸೇರಿದ್ದಾರೆ. ಈ ವರ್ಗಕ್ಕೆ ಸೇರುವ ಮತ್ತೊಂದು ಮುಖ್ಯ ಹುದ್ದೆ ಬಾಣಸಿಗ ಹುದ್ದೆಯಾಗಿದೆ. ಇವರು ದಿನನಿತ್ಯದ ಮತ್ತು ವಿಶೇಷ ದಿನಗಳಂದು ಅನ್ನ ಮತ್ತು ಪ್ರಸಾದಗಳನ್ನು ತಯಾರಿಸುತ್ತಿದ್ದರು.

ನಂತರ ಮೂರನೇ ವರ್ಗದ ಉದ್ಯೋಗಸ್ಥರು ಬರುವರು. ಇಲ್ಲಿ ಕಾವಲುಗಾರರು, ದೀಪಹಿಡಿಯುವವರು, ಹಲವು ಜವಾಬ್ದಾರಿಗಳನ್ನು ಹೊಂದಿದ್ದಾರೆ. ಇವರು ದೇವಾಲಯದ ರಕ್ಷಣೆ ಮತ್ತು ಉತ್ಸವದ ಕಾಲದಲ್ಲಿ ಎಣ್ಣೆ ದೀಪಗಳನ್ನು ಹಿಡಿಯುವ, ದೀವಟಿಗೆ ಸಲಾಂ ಮಾಡುವ ಮಹತ್ವದ ಕೆಲಸ ಮಾಡುವರು. ಕಾವಲುಗಾರರು ಡೋಲು ಬಡಿಯುವ ಮೂಲಕ ಮತ್ತು ಕಬ್ಬಿಣದ ಸಲಾಕೆಯನ್ನು ಬಡಿಯುವ ಮೂಲಕ ಕಾಲವನ್ನು ಹೇಳುವರು. ಇವರು ಸಂಖ್ಯೆಯಲ್ಲಿ 26 ಜನರಿದ್ದಾರೆ.

ನಾಲ್ಕನೇ ವರ್ಗದ ನೌಕರರು ಉತ್ಸವದ ಕಾಲದಲ್ಲಿ ದೇವರ ವಾಹನವನ್ನು ಹೊರುವ, ಛತ್ರಿಹಿಡಿಯುವ, ರಥ ಎಳೆಯುವ ಜವಾಬ್ದಾರಿ ಹೊಂದಿದ್ದಾರೆ. ಅವರು ಸಂಖ್ಯೆಯಲ್ಲಿ ನಾಲ್ಕು ಜನರಿದ್ದಾರೆ. ಇವರ ಮುಖ್ಯಸ್ಥನು ವಿಶೇಷವಾದ ದಿನಗಳಲ್ಲಿ ವಾಹನಗಳನ್ನು ಹೊರಲು ಸಹಾಯಕರಾಗಿ ತಾತ್ಕಾಲಿಕವಾಗಿ ನೌಕರರನ್ನು (ದಿನಗೂಲಿ) ಸೇರಿಸಿಕೊಳ್ಳುವ ಶಕ್ತಿ ಇತ್ತು. ಇವರನ್ನು ಬಂಡಿಕಾರರು ಎಂದೂ ಕರೆಯುವರು.

ಐದನೆಯ ವರ್ಗವು ಗುಡಿಸುವವರು, ತೋಟದಿಂದ ಹೂವನ್ನು ಒದಗಿಸುವ ಮಾಲಿಗಳು, ಮಡಿವಾಳರು (ಬಟ್ಟೆ ಒಗೆಯುವವರು) ಸೇವಕರನ್ನು ಒಳಗೊಂಡಿತ್ತು. ಇವರು

ಸಂಖ್ಯೆಯಲ್ಲಿ 9 ಜನರಿದ್ದರು. 6ನೇ ವರ್ಗದಲ್ಲಿ ಸಂಗೀತ ನುಡಿಸುವ ವಾದ್ಯಗಾರರು ಸೇರಿದ್ದರು. ಅವರು ವಿವಿಧ ಸಂಗೀತ ವಾದ್ಯಗಳು ಮತ್ತು ಇತರ ವಿಭಿನ್ನ ಸಂಗೀತ ಉಪಕರಣಗಳನ್ನು ನುಡಿಸುತ್ತಿದ್ದರು. ಉದಾ:- ಭೇರಿ, ಚಿನ್ನಗಾಳೆ, ಹೋಲು, ನಗಾರಿ, ಕೊಂಬು ಇತ್ಯಾದಿಗಳನ್ನು ನುಡಿಸುತ್ತಿದ್ದರು. ಅವರು ಸಂಖ್ಯೆಯಲ್ಲಿ 12 ಜನರಿದ್ದರು. ನಿಯಮನಪ್ಪಡಿಯು ಈ ನೌಕರಿವರ್ಗಗಳನ್ನು ಗುರುತಿಸುವ ಮೂಲಕ ಮುಂದುವರೆಸುವ ಕೆಲಸ ಮಾಡಿದೆ.

ಕ್ರಿ.ಶ. 1545ರ ಒಂದು ಶಾಸನದಂತೆ ದೇವರಿಗೆ ವಿಶೇಷವಾದ ತಿನಿಸುಗಳನ್ನು ತಯಾರಿಸುವ ಅಡಿಗೆಯವನಿಗೆ ವಂತಿಕೆ (ಪರಿಹಾರ) ನೀಡುವ ಅಂಶವನ್ನು ಒಳಗೊಂಡಿದೆ.[11] 1535ರ ಮತ್ತೊಂದು ಶಾಸನವು ದೇವರಿಗೆ ಹೂಮಾಲೆ ಅರ್ಪಿಸಲು ಇರುವ ತೋಟ ನೋಡಿಕೊಳ್ಳುವ ವ್ಯಕ್ತಿಗೆ ಸಹಾಯಧನ ನೀಡಿರುವ ಅಂಶ ತಿಳಿದು ಬರುತ್ತದೆ.[12] ಈ ಸಂಸ್ಥೆಯು ಹೊಂದಿಕೆಯಾದ ಕೆಲವು ಬದಲಾವಣೆಗಳೊಂದಿಗೆ 1852ರ ನಂತರ ಆಚರಣೆಯಲ್ಲಿರುವಂತೆ ಒಟ್ಟು 195 ಜನರು ಕೆಲಸ ಮಾಡುತ್ತಿದ್ದಾರೆ.

ನಾರಾಯಣಸ್ವಾಮಿ ದೇವಾಲಯದಷ್ಟೇ ಪ್ರಾಚೀನತೆಯನ್ನು ಹೊಂದಿರುವ ಯೋಗಾನರಸಿಂಹಸ್ವಾಮಿ ದೇವಾಲಯವು ಸಹ ತನ್ನದೆ ಪ್ರತ್ಯೇಕವಾದ ಸೇವಾ ಸಿಬ್ಬಂದಿಯನ್ನು ಹೊಂದಿತ್ತು. ನಿಯಮನಪ್ಪಡಿಯು ಉಲ್ಲೇಖಿಸುವಂತೆ ಇಲ್ಲಿ 33 ಮಂದಿ ನೌಕರರಿದ್ದರು. ಆದರೂ ಇದರ ಆಡಳಿತ ನಿರ್ವಹಣೆ ನಾರಾಯಣಸ್ವಾಮಿ ದೇವಾಲಯದಿಂದಲೇ ಆಗುತ್ತದೆ. ಅಲ್ಲದೆ ಮೇಲುಕೋಟೆಯಲ್ಲಿರುವ ಸುಮಾರು 37 ಇತರ ಗುಡಿಗಳಿಗೆ ಸೇವಾಕರ್ತರನ್ನು ನೇಮಿಸುವ ಹಾಗೂ ಅಗತ್ಯವಾದ ಸಂಬಳ ಮತ್ತು ಧನಸಾಹಯವನ್ನು ನಾರಾಯಣಸ್ವಾಮಿ ದೇವಾಲಯದ ಆಡಳಿತ ಮಂಡಳಿಗೆ ನೀಡಲಾಗಿತ್ತು.

ಆಚರಣೆಯಿಂದ ತಿಳಿದುಬರುವ ಎರಡು ಮುಖ್ಯ ಅಂಶವೆಂದರೆ ಮೊದಲನೆಯದಾಗಿ ನೌಕರವರ್ಗದ ಹುದ್ದೆಗಳು ವಂಶಪಾರಂಪರ್ಯದ ಆಧಾರವಾಗಿದೆ ಇತ್ತೀಚಿನ ದಿನಗಳಲ್ಲಿ ಈ ಹಕ್ಕು ಚಾಲ್ತಿಯಲ್ಲಿಲ್ಲದಿದ್ದರೂ, ಈ ಕುಟುಂಬದ ಸದಸ್ಯರಿಗೆ ಪದ್ಧತಿಯಂತೆ ಆದ್ಯತೆ ನೀಡಲಾಗಿದೆ. ಎರಡನೆಯದಾಗಿ ನೌಕರರು ಸಂಭಾವನೆಯನ್ನು ಪ್ರಸಾದದ ರೂಪದಲ್ಲಿ ಮತ್ತು ಭೂಮಿಯ ರೂಪದಲ್ಲಿ ಪಡೆಯುತ್ತಿದ್ದರು. ಆದರೆ ಇಂದು ನೌಕರವರ್ಗಗಳು ಹಣದ ರೂಪದಲ್ಲಿ ಸಂಭಾವನೆಯನ್ನು ಪಡೆಯುತ್ತಿದ್ದಾರೆ. ಆದರೆ ಇಂದಿಗೂ ಬ್ರಾಹ್ಮಣ ಸ್ಥಳವಾಸಿಗಳು ಅಕ್ಕಿಯನ್ನು ನಿಗಧಿಯಂತೆ ಉಚಿತವಾಗಿ ರಾಜಮಾನ್ಯವಾಗಿ ಇಂದಿಗೂ, ಪಡೆಯುತ್ತಿದ್ದಾರೆ. ಹೀಗೆ ಈ ವೃತ್ತಿ ಪಂಗಡಗಳ ಜನರ ವೇತನವನ್ನು ಸಂಸ್ಥೆಯಲ್ಲಿನ ಅವರ ಸ್ಥಾನಮಾನ ಮತ್ತು

ಹೊಣೆಗಾರಿಕೆಗಳಿಗೆ ಅನುಗುಣವಾಗಿ ನಿಗಧಿ ಪಡಿಸಲಾಗುತ್ತಿತ್ತು. ಗಮನಾರ್ಹ ಅಂಶವೆಂದರೆ ಇವರು ದೇವಾಲಯವು ಒದಗಿಸಿದ ಅನುತ್ಪಾದಕ ವೃತ್ತಿಗಳಲ್ಲಿ ನಿರತರಾಗಿದ್ದರು. ಆದರೂ ಸಮಾಜದಲ್ಲಿ ವೃತ್ತಿನಿರತ ವರ್ಗಗಳಿಗೆ ಜೀವನೋಪಾಯದ ಕೇಂದ್ರಗಳಾಗಿ ಇಲ್ಲಿನ ದೇವಾಲಯಗಳು ಪಾತ್ರ ನಿರ್ವಹಿಸಿದವು.

ದೇವಾಲಯದ ಆಡಳಿತ

ಈಗಾಗಲೇ ದೃಢಪಡಿಸಿರುವಂತೆ ಮೇಲುಕೋಟೆಯ ನಾರಾಯಣಸ್ವಾಮಿ ದೇವಾಲಯವು ಆಚಾರ್ಯ ರಾಮಾನುಜರಿಂದ ಜೀರ್ಣೋದ್ಧಾರವಾಯಿತು. 12ನೇ ಶತಮಾನದಲ್ಲಿ ಅವರು ದೇವಾಲಯ ಆರಾಧನೆಯ ಕಾರ್ಯವಿಧಾನಗಳನ್ನು ನೇಮಿಸಿದರು ಮತ್ತು ಕೋಯಿಲ್ ಕೇಳ್ವಿ ನಾರಾಯಣ ಜೀಯರ್‌ರ ನಾಯಕತ್ವದಲ್ಲಿ ಅಗತ್ಯ ಸದಸ್ಯರನ್ನು ನೇಮಿಸಿದರು ಪ್ರಸಿದ್ಧ 52 (ಐವತ್ತಿಬ್ಬರು) ಜನರು ದೇವಾಲಯದ ಹಲವಾರು ವಿಭಾಗಗಳಲ್ಲಿ ಸೇವೆ ಮಾಡುತ್ತಿದ್ದರು. ಇದು ನಂತರದ ಹಲವಾರು ಶಾಸನಗಳಲ್ಲಿ ಪುನಃ ಪುನಃ ದಾಖಲಾಗಿದೆ. ಆದರೆ 18ನೇ ಶತಮಾನದ ವೇಳೆಗೆ ಈ 52 ಜನರ ಆಡಳಿತ ಸಂಘವು ಮರೆಯಾದಂತೆ ತೋರುತ್ತದೆ. ಬಹುಶಃ ಮರಾಠರ ದಾಳಿಯಿಂದ ಮತ್ತು ಟಿಪ್ಪುಸುಲ್ತಾನನ ಕಾಲದಲ್ಲಿ ಶ್ರೀ ವೈಷ್ಣವರು ಸಂಕಷ್ಟಕ್ಕೊಳಗಾದರು. ಇದರಿಂದ ಇಡೀ ವ್ಯವಸ್ಥೆಯೇ ಮುರಿದುಬಿದ್ದಿರಬಹುದು. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ವೇಳೆಗೆ ಹೊಸದೊಂದು ಆಡಳಿತ ವ್ಯವಸ್ಥೆಯ ಅವಶ್ಯಕತೆಯುಂಟಾಗಿ 52 ಜನರ ಆಡಳಿತ ವ್ಯವಸ್ಥೆಯು ಮರೆಯಾಗಿದೆ.

ಮುಜರಾಯಿ ಇಲಾಖೆಯಲ್ಲಿ ದಾಖಲಾಗಿರುವಂತೆ ಈ ಸ್ಥಳದ 33 ದೇವಾಲಯಗಳು ಇಲ್ಲಿನ ಮುಖ್ಯ ದೇವಾಲಯವಾದ ನಾರಯಣಸ್ವಾಮಿ ದೇವಾಲಯದಿಂದ ನಿಯಂತ್ರಿತವಾಗುತ್ತಿವೆ. ಇದೇ ಪರಿಸ್ಥಿತಿಯು ಆರಂಭದಿಂದಲೂ ಆಚರಣೆಯಲ್ಲಿದೆ. ಆದುದರಿಂದ ನಾರಾಯಣಸ್ವಾಮಿ ದೇವಾಲಯದ ಆಡಳಿತದ ಸಮಗ್ರ ಅಧ್ಯಯನ ಇಲ್ಲಿ ಅಗತ್ಯವಾಗಿದೆ. ಪ್ರಸ್ತುತ ದೇವಾಲಯದ ದಿನನಿತ್ಯದ ಚಟುವಟಿಕೆಗಳ ಆಡಳಿತದೊಂದಿಗೆ ಕೆಲವು ಅಧಿಕಾರಿಗಳು ಸಂಬಂಧ ಹೊಂದಿದ್ದಾರೆ. ಈಗ ಪೇಷ್ಕಾರ ಎಂಬ ಅಧಿಕಾರಿ ಇದ್ದಾನೆ. ಇವನು ದೇವಾಲಯಕ್ಕೆ ಸಂಬಂಧಿಸಿದ ಸಾಮಾನ್ಯ ಮೇಲ್ವಿಚಾರಕನಾಗಿದ್ದಾನೆ. ನಂತರ ಪಾರುಪತ್ತೆದಾರನು ಎರಡನೇ ಹಂತಕ್ಕೆ ಬರುತ್ತಾನೆ. ಇವನು ಪದ್ಧತಿಯಂತೆ ಮತ್ತು ನಿಯಮದಂತೆ ದಿನನಿತ್ಯದ ಆಚರಣೆಗಳು ಮತ್ತು ವಿಶೇಷ ಉತ್ಸವಗಳನ್ನು ದೇವಾಲಯದಲ್ಲಿ ನಡೆಯುವಂತೆ ನೋಡಿಕೊಳ್ಳುವನು. ಅದರ ಜೊತೆಗೆ ಉಗ್ರಾಣ ಸೇವಕರು ಮತ್ತು ಲೆಕ್ಕಗಾರರು ಇರುವವರು. ಮೇಲುಕೋಟೆ ದೇವಾಲಯಗಳ ಮುಜುರಾಯಿ ಮ್ಯಾನ್ಯುಯಲ್

ಇಲ್ಲಿನ ಮುಖ್ಯ ದೇವಾಲಯದ ಮತ್ತು ಹೊರಗಿನ ಆಲಯಗಳ ಕುರಿತು ಐತಿಹಾಸಿಕವಾಗಿ ಅತಿ ಸೂಕ್ಷ್ಮ ವಿವರಗಳ ಪಟ್ಟಿಯನ್ನು ಕೊಡುತ್ತದೆ. ಮ್ಯಾನ್ಯುಯಲ್‌ನಂತೆ ನೇರವಾಗಿ ಮುಖ್ಯ ಮೇಲ್ವಿಚಾರಣೆಯಲ್ಲಿ ತೊಡಗಿರುವವರು ಸಂಖ್ಯೆಯಲ್ಲಿ 33 ಜನರಿದ್ದಾರೆ. ದೇವಾಲಯದ ನೌಕರರನ್ನು 6 ತರಗತಿಗಳಾಗಿ ವಿಭಾಗಿಸಿದ್ದು ಆಡಳಿತ ವರ್ಗವು ಒಂದನೇ ತರಗತಿಗೆ ಸೇರಿದೆ. ಉನ್ನತ ಆಡಳಿತಗಾರನಾದ ಪೇಷ್ಕಾರನ ಕೈ ಕೆಳಗೆ 14 ಜನರು ವಿವಿಧ ಆಡಳಿತ ಚಟುವಟಿಕೆಯ ಜವಾಬ್ದಾರಿ ಹೊಂದಿದ್ದಾರೆ. ಹೆಡ್ (ಮುಖ್ಯ) ಗುಮಾಸ್ತರು ಮೂರನೇ ಹಂತದ ಅಧಿಕಾರಿಯಾಗಿದ್ದು, ದೇವಾಲಯದ ಆಯವ್ಯಯ ತಯಾರಿಸುವ ಮತ್ತು ಆಲಯದ ಜಮಾಖರ್ಚುಗಳ ಲೆಕ್ಕ ಇವನ ಜವಾಬ್ದಾರಿಯಾಗಿದೆ. ನಗದಿ ಗುಮಾಸ್ತನು ಮುಖ್ಯ ಗುಮಾಸ್ತನ ಲೆಕ್ಕದಂತೆ ಕಾರ್ಯಗತಗೊಳಿಸುವ ಜವಾಬ್ದಾರಿ ಹೊಂದಿದ್ದಾನೆ. ದಿನಸಿ ಗುಮಾಸ್ತನು ದಿನಸಿಯ ಲೆಕ್ಕಚಾರವಿಡುವ ಅಗತ್ಯವಿದ್ದಾಗ ದಿನಸಿ ಒದಗಿಸುವ ಮತ್ತು ಅದರ ರಕ್ಷಣೆ ಮಾಡುವ ಜವಾಬ್ದಾರಿ ಹೊಂದಿದ್ದಾನೆ. ಬೊಕ್ಕಸದ ಗುಮಾಸ್ತನು ದೇವಾಲಯದ ಮತ್ತು ಸಮಸ್ತ ಆಸ್ತಿಗಳಿಗೂ ಜವಾಬ್ದಾರನಾಗಿದ್ದು, ಲೆಕ್ಕ ಇಡುವ ಜವಾಬ್ದಾರಿ ಹೊಂದಿದ್ದಾನೆ. ಪಾರುಪತ್ತೆಗಾರರಿಗೆ ಬಿಡುವಗಣಿಯರು ಎಂಬ ಸಹಾಯಕರಿದ್ದರು. ಉಗ್ರಾಣದ ಕೆಲಸಗಾರರನ್ನು 'ಮಣೆಯ' ಎಂದು ಕರೆಯುತ್ತಿದ್ದರು. ಇವರಿಗೆ 'ಅದ್ದಿಕದವರು' ಎಂಬ ಸಹಾಯಕರಿರುತ್ತಿದ್ದರು. ದೇವಾಲಯದ 'ಖಜಾನೆ'ಯ ನಿರ್ವಹಣೆಯು 'ಸರಾಫ್' ಎಂಬ ನೌಕರನಿಗೆ ಸೇರಿತ್ತು ಮುಖ್ಯ ಗುಮಾಸ್ತನ ಅಪ್ಪಣೆಯಂತೆ ಹಣ ಬಟವಾಡೆ ಮಾಡಬೇಕು.

ನಿಯಮನಪ್ಪಡಿ ಮತ್ತು ಶಾಸನಗಳ ಅಂಶಗಳು

ನಿಯಮನಪ್ಪಡಿಯು ತಿಳಿಸುವಂತೆ ರಾಮಾನುಜರು ದೇಸಾಯಿ ತಿರುನಾರಾಯಣ ಜೀಯರ್‌ರನ್ನು ದೇವಾಲಯದ ನಿರ್ವಹಣೆಗಾರನಾಗಿ ನೇಮಿಸಿದರು. 'ಜೀಯರ್' ಪದದ ಅರ್ಥವು ಸನ್ಯಾಸಿಯಾಗಿದೆ. ಇವರು ದಾನಗಳ ಮೇಲ್ವಿಚಾರಣೆ ಹೊಂದಿದ್ದರು. ಜೊತೆಗೆ ರಾಮಾನುಜಮುದ್ರೆಯ ಜವಾಬ್ದಾರಿ ಇವರದೇ ಆಗಿತ್ತು. ಇದು ದೇವಾಲಯದ ಆಡಳಿತ ನಿರ್ವಹಣೆಗಾರರಾಗಿ ರಾಮಾನುಜರಿಂದಲೇ ಇವರು ನೇಮಕವಾದ ಅಂಶವನ್ನು ಬಲಪಡಿಸುತ್ತದೆ. ಇದು ತಿಳಿಸುವಂತೆ ಇವರು ಕುಂಬಕೋಣಂನಿಂದ ಬಂದವರು. ಮೇಲೆ ಉಲ್ಲೇಖಿಸಿದ ಉಗ್ರಾಣದ ಅಧಿಕಾರಿಯ ಸಹಾಯಕರಾಗಿ ಬಂದರು.

ಹಲವು ಶಾಸನಗಳು ದೇವಾಲಯದ ಉಗ್ರಾಣವನ್ನು (ಶ್ರೀ ಭಂಡಾರ) ಉಲ್ಲೇಖಿಸುತ್ತಿವೆ. ಎಲ್ಲಾ ತೆರಿಗೆ ರೂಪದ ಆದಾಯ ಮತ್ತು ಹಣ ಇಲ್ಲಿ ಜಮಾ ಆಗುತ್ತಿದ್ದವು.[13] ಶೆಲ್ವಪಿಳ್ಳೆ ದೇವರ ಶ್ರೀ ಭಂಡಾರದ ಲೆಕ್ಕಕ್ಕಾಗಿ ಅಧಿಕಾರದಲ್ಲಿದ್ದ 'ಸೇನಭೋವ

ರಾಮಾನುಜ' ಎಂಬ ಹೆಸರು 1519 ರಿಂದ 1582ರ ನಡುವೆ ಹಲವಾರು ಬಾರಿ ಉಲ್ಲೇಖವಾಗಿದೆ.[14] ಒಂದು ಶಾಸನದಂತೆ ವಾಸಸ್ಥಳ, ನೀರಾವರಿ ಮತ್ತು ಒಣಭೂಮಿಯನ್ನು ನಾಚಾರಮ್ಮಳು ಸೇನಭೋವ ರಾಮಾನುಜರಿಗೆ ಕೊಡುಗೆಯಗಿ ನೀಡಿದ್ದಾಳೆ.[15] ಮತ್ತೊಂದು ಶಾಸನದಂತೆ ನಂದ್ಯಾಲ ನಾರಾಯಣದೇವ ಮಹಾ ಅರಸು ಸೇನಭೋವ ರಾಮಾನುಜರಿಗೆ ಆಹಾರಕ್ಕಾಗಿ ಭೂಮಿದಾನ ಮಾಡಿದ್ದಾನೆ.[16] ಮತ್ತೊಂದು ಶಾಸನವು (1574) 'ರಾಮಾನುಜಯ್ಯ' ಎಂಬ ಒಬ್ಬ ಅಧಿಕಾರಿಯ ಹೆಸರನ್ನು ಉಲ್ಲೇಖಿಸಿದೆ.[17]

ದೇವಾಲಯದ ಆಡಳಿತದಲ್ಲಾದ ಬದಲಾವಣೆಗಳು

ಒಟ್ಟಾರೆಯಾಗಿ ದೇವಾಲಯದ ಆಡಳಿತ ನಿರ್ವಹಣೆಯು ಹಲವು ವ್ಯಕ್ತಿಗಳಿಂದ, ಮಂಡಲಿಯ ಮೂಲಕ ಅಥವಾ ಕೆಲವು ಕಾಲ ವೈಯಕ್ತಿಕ ವ್ಯಕ್ತಿಗಳಿಂದ ನಿರ್ವಹಣೆಯಾಗಿರುವ ಸಾಧ್ಯತೆಯಿದೆ. ವಿವಿಧ ಕಾಲದ ಶಾಸನಗಳು ನಮಗೆ ದಾಖಲೆ ನೀಡುವಂತೆ ದೇವಾಲಯದ ಆಡಳಿತದ ರೂಪುರೇಖೆಗಳು ಕಾಲದಿಂದ ಕಾಲಕ್ಕೆ ಬದಲಾಗಿವೆ. ಕೆಲವು ಅವಧಿಯಲ್ಲಿ ಖಚಿತವಾದ ಮಾಹಿತಿಗಳು ಲಭ್ಯವಾಗಿಲ್ಲ. ಆದರೂ ಇರುವ ದಾಖಲೆಯ ಅಂಶಗಳ ಆಧಾರದಿಂದ ವಿವರಿಸಲು ಪ್ರಯತ್ನಿಸಬಹುದಾಗಿದೆ. ನಿಶ್ಚಿತವಾಗಿ ನಂಬಲರ್ಹವಾದ ಶಾಸನಗಳ ದಾಖಲೆಗಳು ವಿಜಯನಗರದ ಕಾಲಕ್ಕೆ ಮಾತ್ರ ಸೀಮಿತವಾಗಿವೆ. ಆದುದರಿಂದ ಮೇಲುಕೋಟೆಯ ಹೊರಗಿನ ಶಾಸನಗಳ ಉಪಯೋಗವು ದೇವಾಲಯದ ಆಡಳಿತದ ಸಾಮಾನ್ಯ ಸರ್ವೇಕ್ಷಣೆಗೆ ಇಲ್ಲಿ ಅಗತ್ಯವಾಗಿದೆ.

ಹೊಯ್ಸಳರ ಕಾಲದಲ್ಲಿ ದೇವಾಲಯದ ಆಡಳಿತ

ಚೋಳರ ಕಾಲದಲ್ಲಿ, ದಕ್ಷಿಣ ಕರ್ನಾಟಕದ ದೇವಾಲಯಗಳಲ್ಲಿ ಪ್ರತ್ಯೇಕವಾದ ಆಡಳಿತ ಮಂಡಳಿಯು ರಚನೆಯಾಗಿತ್ತು ಮತ್ತು ಸಂಬಂಧಿಸಿದ ಗ್ರಾಮಸಭೆಯಿಂದ ನಿಯಂತ್ರಿತವಾಗುತ್ತಿತ್ತು. ಈ ಮಂಡಲಿಗಳು ಧಾರ್ಮಿಕ ಕ್ರಿಯೆಗಳು ಮತ್ತು ಭೂ ನಿರ್ವಹಣೆಗಳು ಹಾಗೂ ದೇವಾಲಯದ ಆಯವ್ಯಯ ಸೇರಿದಂತೆ ದೇವಾಲಯದ ಎಲ್ಲಾ ಚಟುವಟಿಕೆಯ ಆಡಳಿತವನ್ನು ನೋಡಿಕೊಳ್ಳುತ್ತಿದ್ದವು. ಈ ಲಕ್ಷಣಗಳನ್ನು ಬಹುಶಃ ಅಗ್ರಹಾರ ಗ್ರಾಮಗಳಲ್ಲಿ ನೋಡಬಹುದು. ಕೆಲವು ದೇವಾಲಯಗಳು ಸ್ಥಾನತ್ತಾರ್ ಎಂಬ ವ್ಯಕ್ತಿಗಳಿಂದ ನಿರ್ವಹಣೆಯಾಗುತ್ತಿತ್ತು. ಇದನ್ನು ಶಾಸನಗಳು ದೃಢಪಡಿಸಿವೆ. ಮೇಲುಕೋಟೆಯಲ್ಲಿ ಚೋಳರ ಕಾಲದ ಯಾವುದೇ ದೇವಾಲಯಗಳು ಲಭ್ಯವಾಗಿಲ್ಲ. ಮೇಲಿನ ದೇವಾಲಯದ ಆಡಳಿತಕ್ಕೆ ಸಂಬಂಧಿಸಿದ ಮಾಹಿತಿಗಳು ಈ ಸ್ಥಳದಲ್ಲಿ ಸಿಕ್ಕಿದ್ದು, ಮೇಲುಕೋಟೆ ದೇವಾಲಯಕ್ಕೂ ಪರಿಗಣಿಸಬಹುದಾಗಿದೆ.

ಮೇಲೆ ತಿಳಿಸಿರುವ ದೇವಾಲಯದ ಆಡಳಿತಕ್ಕೆ ಸಂಬಂಧಿಸಿದ ಹತ್ತಿರದ (ಹೋಲಿಕೆಯು) ಆಚರಣೆಗಳು ಹೊಯ್ಸಳರ ಕಾಲದಲ್ಲಿಯೂ ಮುಂದುವರಿದವು. ದೇವಾಲಯದ ಆಡಳಿತವು 'ಸ್ಥಾನಪತಿಗಳ' ನಿಯಂತ್ರಣದಲ್ಲಿದ್ದುದಕ್ಕೆ ಹಲವು ಉದಾಹರಣೆಗಳಿವೆ. ಕೆಲವು ಕಾಲಗಳಲ್ಲಿ ಇವರ ಪ್ರಭಾವವು ಮಹತ್ವವಾದುದು. ಕ್ರಿ.ಶ. 1206ರ ಎರಡನೇ ಬಲ್ಲಾಳನ ಕಾಲದ ಒಂದು ಶಾಸನದಂತೆ.[18] ತಲಕಾಡಿನ ರಾಜರಾಜೇಶ್ವರಿ ಮುಡೈಯಾರ್ ದೇವಾಲಯದ ಒಂದು ದಾನದ ದಾಖಲೆಯನ್ನು ದೇವಾಲಯದ ಸ್ಥಾನಪತಿಯು ಮಾಡಿದನು. ಕ್ರಿ.ಶ. 1256ರ ಮೂರನೇ ನರಸಿಂಹನ ಕಾಲದ ಒಂದು ಶಾಸನದಂತೆ.[19] ಪನ್ನಮಂಡೆ ಹೆಗ್ಗಡೆ ಎಂಬುವನು, ಬನ್ನೂರಿನ ಹನುಮಂತೇಶ್ವರ ದೇವಾಲಯಕ್ಕೆ ಲೋಹದ ದೀಪವನ್ನು ದಾನ ನೀಡಿದ ಅಂಶವನ್ನು ದಾಖಲೆ ಮಾಡುತ್ತದೆ. ಸ್ವಲ್ಪ ಹಣವು ಸ್ಥಾನಿಕನಿಂದ ದೀಪಗಳ ನಿರ್ವಹಣೆಗೆ ಜಮಾ ಆಗಿದ್ದುದು ತಿಳಿದು ಬರುತ್ತದೆ.

ದೇವಾಲಯದ ಆಡಳಿತಕ್ಕೆ ಸಂಬಂಧಿಸಿದಂತೆ ಬೆಳಕು ಚೆಲ್ಲುವ ಸರಿಯಾದ ದಾಖಲೆಗಳ ಕೊರತೆಯಿದ್ದರೂ, ಇಲ್ಲಿನ ದೇವಾಲಯದ ಆಡಳಿತವನ್ನು ತಿಳಿಯಲು ಸಶಕ್ತ ಆಧಾರಗಳು ಇಲ್ಲದೆಯಿಲ್ಲ. ಮೇಲಿನ ಅಂಶವು ಆಡಳಿತವನ್ನು ಅರಿಯಲು ಸಹಕಾರಿಯಾಗಿದೆ. ತೊಂಡನೂರಿನಲ್ಲಿರುವ ಹೊಯ್ಸಳರ ಕಾಲದ ಕೆಲವು ಶಾಸನಗಳು ಇದಕ್ಕೆ ಸಂಬಂಧಿಸಿದಂತೆ ಹತ್ತಿರದ ಶಾಸನಗಳಾಗಿವೆ. ಇಲ್ಲಿನ 12ನೇ ಶತಮಾನದ ಒಂದು ಶಾಸನದಂತೆ ದೇವಾಲಯದ ಆಡಳಿತವು ಸ್ಥಾನಪತಿಗಳ ಕೈಯಲ್ಲಿತ್ತು.[20] ಇದು ದಾಖಲಿಸುವಂತೆ ದೇವಾಲಯದ ಸ್ಥಾನಪತಿಗಳು ತೊಂಡನೂರಿನ ಶ್ರೀ ಕೈಲಾಸಮುಡೈಯಾರಗೆ ನಂದಾದೀಪವನ್ನು ನೀಡಿದ ಅಂಶ ತಿಳಿದುಬರುತ್ತದೆ. ಮಹಾದೇವಭಟ್ಟನ್, ಆಳ್ವಾರ್‌ಭಟ್ಟನ್, ತಾಳ್ವಿಕ್ಕುಯಿದ್ ಅನಿಭಟ್ಟನ್ ಮತ್ತು ಅಲುಡೈಯಾರ್‌ಭಟ್ಟರ್ ಎಂಬ ನಾಲ್ಕು ಹೆಸರನ್ನು ದಾಖಲಿಸಿದೆ. ಇದು ಸ್ಪಷ್ಟಪಡಿಸುವ ಅಂಶವೆಂದರೆ ಅಲ್ಲಿ ನಾಲ್ಕು ಜನ ಸ್ಥಾನಪತಿಗಳು ಇದ್ದುದು.

2ನೇ ಬಲ್ಲಾಳನ ಕಾಲದ ಒಂದು ಶಾಸನದಂತೆ,[21] ಕ್ರಿ.ಶ. 1175ರಲ್ಲಿ ಮಹಾಪ್ರಧಾನ ಮಾಚಯ್ಯನೊಡಗೂಡಿ ಹೆಗ್ಗಡೆ ಕೇಶಿಯಣ್ಣ ಮತ್ತು ಹೆಗ್ಗಡೆ ಕಾಮಣ್ಣ ತೊಂಡನೂರಿನ ಲಕ್ಷ್ಮಿನಾರಾಯಣ ದೇವರಿಗೆ ನೀಡಲಾಗಿದೆ. ಈ ದಾನವನ್ನು ತಿರುವರಂಗದಾಸರ ಕೈಗೆ ಕೊಡಲಾಗಿದೆ. ಕ್ರಿ.ಶ. 1162ರ ಒಂದು ಶಾಸನದಲ್ಲಿ ತಮ್ಮನ್ನು ತಾವೇ ರಾಮಾನುಜರ ಶಿಷ್ಯನೆಂದು ಕರೆದುಕೊಂಡಿದ್ದಾರೆ.[22] ಸಾಂಪ್ರದಾಯಿಕ ಅಂಶಗಳು ತಿರುವರಂಗದಾಸನನ್ನು ರಾಮಾನುಜರ ಶಿಷ್ಯನೆಂದು ವರ್ಣಿಸುತ್ತದೆ. ಈ ಸ್ಥಳದ ವಿಷ್ಣು ದೇವಾಲಯದಲ್ಲಿ ತಿರುವರಂಗದಾಸರ್‌ರು ಅಧಿಕಾರಿ ಅಥವಾ ಸ್ಥಾನಪತಿಯಾಗಿ ಒಬ್ಬ ಪ್ರಮುಖ

ಗಣ್ಯಪುರುಷನಾಗಿ ಗುರುತಿಸಿಕೊಂಡಿದ್ದರು. ಒಂದನೇ ನರಸಿಂಹ ಮತ್ತು ಎರಡನೇ ಬಲ್ಲಾಳನ ಕಾಲಕ್ಕೆ ಸೇರಿದ ಹಲವು ಶಾಸನಗಳಲ್ಲಿ ಇವರ ಹೆಸರು ಉಲ್ಲೇಖವಾಗಿದೆ.

ಮೂರನೇ ಬಲ್ಲಾಳನ ಕಾಲದ ಮೇಲುಕೋಟೆಯ ಒಂದು ಶಾಸನವು ಮೇಲಿನ ಅಂಶಗಳಿಗೆ ಸಾದೃಶ್ಯ (ಸರಿಹೋಲುವ)ವಾಗಿದೆ. ಇದು ಒಬ್ಬ ಲಕ್ಷಣದಾಸರ್ ಕುರಿತು ಉಲ್ಲೇಖ ಮಾಡುತ್ತದೆ.[23] ಈ ಶಾಸನದಂತೆ ಪೆರುಮಾಳು ದಣ್ಣಾಯಕನ ಮಕ್ಕಳಾದ ಮಾದಪ್ಪ ದಣ್ಣಾಯಕ ಮತ್ತು ಕೇತಪ್ಪ ದಣ್ಣಾಯಕರು ಮೇಲುಕೋಟೆಯ ತಿರುನಾರಾಯಣ ಪೆರುಮಾಳ ದೇವರಿಗೆ ಭತ್ತದ ಭೂಮಿಯನ್ನು ಲಕ್ಷ್ಮಣದಾಸನಿಗೆ ಕೊಡುಗೆಯಾಗಿ ನೀಡಿದರು. ಇದರಿಂದ ಸ್ಪಷ್ಟವಾಗುವ ಅಂಶವೆಂದರೆ ಬಹುಶಃ ಲಕ್ಷ್ಮಣದಾಸನು ಈ ದೇವಾಲಯದ ಆಡಳಿತದ ಮೇಲ್ವಿಚಾರಕನಾಗಿದ್ದನು.

ವಿಜಯನಗರದ ಅರಸರ ಕಾಲದಲ್ಲಿ ದೇವಾಲಯದ ಆಡಳಿತ–ಐವತ್ತಿಬ್ಬರು ಶ್ರೀ ವೈಷ್ಣವರು

ಐವತ್ತೆರಡು ಜನರ ಆಡಳಿತ ಮಂಡಲಿಯ ವಿಷಯವಾಗಿ ಕೆಲವು ಅಂಶಗಳನ್ನು ಯತಿರಾಜಮಠದ ದಾಖಲೆಗಳು ಮತ್ತು ಶಾಸನಗಳಿಂದ ಪಡೆಯಬಹುದು. ವಿವಿಧ ಶಾಸನಗಳು ಐವತ್ತೆರಡು ಜನರ ಕುರಿತು ವಿಭಿನ್ನವಾದ ಅಂಶಗಳ ವಿವರಗಳನ್ನು ನೀಡುತ್ತವೆ. ಒಂದು ಶಾಸನದಂತೆ 52 ಜನರು ರಾಮಾನುಜರ ನಿಜವಾದ ಶಿಷ್ಯರಾಗಿದ್ದರು ಮತ್ತು ಅವರು ಮಹಾಜನರೆಂದು ಕರೆಯಲ್ಪಟ್ಟಿದ್ದಾರೆ. ಇವರು ದೇವಾಲಯದ ಮುಖ್ಯ ಅಧಿಕಾರಿಯಾಗಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಅಷ್ಟೇ ಅಲ್ಲದೇ ಮೇಲುಕೋಟೆಯಲ್ಲಿ ವಾಸಿಸುತ್ತಿದ್ದ ಸಮುದಾಯದ ನಾಯಕರಾಗಿದ್ದುದಾಗಿ ಕಂಡುಬರುತ್ತದೆ. ಅವರು ದೇವಾಲಯದ ಆದಾಯದಲ್ಲಿ ಪಾಲುಪಡೆಯುತ್ತಿದ್ದರು ಮತ್ತು ಪ್ರಸಾದದಲ್ಲಿಯೂ ಪಾಲುಪಡೆಯುತ್ತಿದ್ದು ಇಂದಿಗೂ ಜೀವಂತವಾಗಿದೆ. ಐವತ್ತಿಬ್ಬರು ಎಂದರೆ 52 ವ್ಯಕ್ತಿಗಳು ಎಂದರ್ಥ. ಇದು 52 ಜನರ ಒಂದು ಸಮಿತಿಯಾಗಿರಬಹುದು ಅಥವಾ ಅದು ಕೇವಲ ಸಂಖ್ಯೆಯಲ್ಲಿ ಮಾತ್ರ 52 ಎಂದಿದ್ದು ಅಧಿಕಾರ ಕೆಲವೇ ಮಂದಿಯಲ್ಲಿ ವಿಭಾಗೀಕರಣಗೊಂಡಿತ್ತು. ಇದು ಸಂಬಂಧಿಸಿದ ಶಾಸನಗಳ ಆಧಾರದ ಪರೀಕ್ಷೆಗಳಿಂದ ಹೊರಬಂದಿದೆ.

ಮೂರನೇ ಬಲ್ಲಾಳನ ಕಾಲದ ಕೆಲವು ಅಪೂರ್ಣ ಶಾಸನಗಳಲ್ಲಿ ಐವತ್ತಿಬ್ಬರು ಶ್ರೀ ವೈಷ್ಣವರ ಉಲ್ಲೇಖವಿದೆ.[24] ಪೆರುಮಲೆ ಡಣ್ಣಾಯಕ, ತಿರುನಾರಾಯಣ ಮತ್ತು ತಿರುನಾರಾಯಣ ಪೆರುಮಾಳ್‌ರ ಹೆಸರುಗಳಿವೆ. ನಾರಾಯಣಸ್ವಾಮಿ ದೇವಾಲಯದಲ್ಲಿ ನಿರ್ವಾಹಕರಾಗಿ (ಮುಖ್ಯಸ್ಥ) ಗುರುತಿಸಿಕೊಂಡ ಐವತ್ತಿಬ್ಬರು ಶ್ರೀ ವೈಷ್ಣವರ ಕುರಿತು ಬಹುಷಃ

ಮೊದಲಬಾರಿಗೆ ಉಲ್ಲೇಖಿಸಿದ ಈ ಶಾಸನವು ಐತಿಹಾಸಿಕ ದೃಷ್ಟಿಯಿಂದ ಕುತೂಹಲಕಾರಿಯಾಗಿದೆ.

ವಾಸ್ತವವೆಂದರೆ ಮಾದಪ್ಪ ದಣ್ಣಾಯಕನ ಕಾಲದಲ್ಲಿ ಐವತ್ತಿಬ್ಬರು ಮುಖ್ಯವಾದ ಪಾತ್ರ ನಿರ್ವಹಿಸಲು ಆರಂಭಿಸಿದರು. ಮಾದಪ್ಪನು ಹೊಯ್ಸಳರ ದಂಡನಾಯಕನಾಗಿದ್ದಲ್ಲದೆ, ಅಪ್ಪಟ ಶ್ರೀ ವೈಷ್ಣವನಾಗಿದ್ದನು. ಈತನು ಮೇಲುಕೋಟೆಗೆ ಹೆಚ್ಚಿನ ಕೊಡುಗೆಗಳನ್ನು ನೀಡಿದ್ದಾನೆ. ಇದು ಶಾಸನದಿಂದ ದೃಢಪಡುತ್ತಿದೆ.[25] ಇದು ಆರಂಭಿಕ ವಿಜಯನಗರದ ಕಾಲಕ್ಕೆ ಸೇರಿದ್ದಾಗಿದೆ. ಇದರಲ್ಲಿ ನಾರಾಯಣಸ್ವಾಮಿ ದೇವಾಲಯದ ಪರವಾಗಿ ಐವತ್ತಿಬ್ಬರು ಶ್ರೀ ವೈಷ್ಣವರು ಮಾರಾಟ ವ್ಯವಹಾರದಲ್ಲಿ ಒಂದು ಗುಂಪಾಗಿ ಕಾರ್ಯನಿರ್ವಹಿಸಿರುವ ಸಾಧ್ಯತೆಗಳಿವೆ.

ಐವತ್ತಿಬ್ಬರು ಶ್ರೀ ವೈಷ್ಣವರು ಕ್ರಿ.ಶ. 1469ರಲ್ಲಿ ನಾರಾಯಣಸ್ವಾಮಿ ದೇವಾಲಯಕ್ಕೆ ಸಂಬಂಧಿಸಿಂತೆ ಆದ ವ್ಯಾಪಾರದಲ್ಲಿ ಗುರುತಿಸಿಕೊಂಡಿದ್ದಾರೆ.[26] ಇದರಲ್ಲಿ ವಿಜಯನಗರದ ಅರಸು ಮಲ್ಲಿಕಾರ್ಜುನನ ಕೈಕೆಳಗೆ ನಾಗಮಂಗಲದ ಸೀಮೆಯ ಆಡಳಿತ ನಡೆಸುತ್ತಿದ್ದ ಮಹಾಪ್ರಧಾನ ತಿಮ್ಮಣ್ಣದಣ್ಣಾಯಕನು ನಾರಾಯಣಸ್ವಾಮಿಗೆ ಮಾಡಿದ ದಾನದ ಉಲ್ಲೇಖವಿದೆ. ಇದರಂತೆ ತಿಮ್ಮಣ್ಣನು ಐವತ್ತಿಬ್ಬರ ಜೊತೆ ಸಂಬಂಧ ಹೊಂದಿದ್ದನು. ಸ್ಥಳದ ಆಳ್ವಾರರ ಆರಾಧನೆಯ ಉದ್ದೇಶಕ್ಕಾಗಿ ಕುರುಕುಲಪಾಂಡಿ ಶ್ರೀ ವೈಷ್ಣವರಿಗೆ ಒಂದು ಹಳ್ಳಿಯನ್ನು ದಾನ ನೀಡಿದನು. ತಿಮ್ಮಣ್ಣನು ಕಂದಾಯ ವಿಭಾಗದ ಆಡಳಿತಗಾರನಾಗಿ ಇಲ್ಲಿ ಗುರುತಿಸಿಕೊಂಡಿದ್ದಾನೆ. ಐವತ್ತಿಬ್ಬರು ಶ್ರೀ ವೈಷ್ಣವರು ನಾರಾಯಣಸ್ವಾಮಿ ದೇವಾಲಯದ ನಿರ್ವಾಹಕರಾಗಿ ಮತ್ತು ಅದರ ಆಸ್ತಿಪಾಸ್ತಿಯ ನಿರ್ವಾಹಕರಾಗಿ ಕಾಣುತ್ತಾರೆ. ಶಾಸನದ ಕೊನೆಯಲ್ಲಿ ಐವತ್ತಿಬ್ಬರು ಶ್ರೀ ವೈಷ್ಣವರು ಶ್ರೀನಾರಾಯಣ ಎಂದು 4 ಬಾರಿ ಸಹಿ ಮಾಡಿಲಾಗಿದ್ದು ಇದರಲ್ಲಿ 2 ಸಹಿಗಳು ಗ್ರಂಥಲಿಪಿಯಲ್ಲಿದ್ದು, 2 ಸಹಿಗಳು ಕನ್ನಡ ಲಿಪಿಯಲ್ಲಿವೆ. ಸ್ಪಷ್ಟಪಡುವ ಅಂಶವೆಂದರೆ ಐವತ್ತಿಬ್ಬರು ಜನಗಳು ಈ ಕಾಲದಲ್ಲಿ 4 ಜನರ ಗುಂಪಾಗಿ ಉಲ್ಲೇಖವಾಗಿರುತ್ತದೆ.

ಈ ಶಾಸನದಲ್ಲಿ ಐವತ್ತಿಬ್ಬರ ಕುರಿತು ಇನ್ನೂ ಹಲವು ಅಂಶಗಳು ಕಂಡುಬರುತ್ತವೆ. ಇವರು ಶ್ರೀ ನಾರಾಯಣನ ದೈವಿಕ ಪಾದಕಮಲದ ಆರಾಧಕರಂತೆ ವರ್ಣಿಸಲ್ಪಟ್ಟಿದ್ದಾರೆ. ಇವರು ರಾಮಾನುಜರ ಮೊದಲ ಶಿಷ್ಯರಾಗಿ ಮತ್ತು ವೇದಗಳ ಹಾದಿಯನ್ನು ಸ್ಥಾಪಿಸುವವರು ಎಂದು ವರ್ಣಿತವಾಗಿದ್ದಾರೆ.

ಮೇಲೆ ಮಾಡಿರುವ ವಿಶ್ಲೇಷಣೆಯಂತೆ ನಾರಾಯಣಸ್ವಾಮಿ ದೇವಾಲಯದ ನಿರ್ವಹಣೆಯಲ್ಲಿ ಐವತ್ತಿಬ್ಬರು ಪ್ರಮುಖ ಪಾತ್ರವಹಿಸಿದ ಅಂಶವನ್ನು ಮತ್ತೊಂದು ಶಾಸನ

ದೃಢಪಡಿಸುತ್ತದೆ. ವಿಜಯನಗರದ ಕೃಷ್ಣದೇವರಾಯನ ಕಾಲದ ಶಾಸನದಲ್ಲಿ ಐವತ್ತಿಬ್ಬರು ತಮ್ಮ ಎಲ್ಲ ಬಿರುದುಗಳೊಂದಿಗೆ ಗುರುತಿಸಿಕೊಂಡಿದ್ದಾರೆ.[27] (ಕ್ರಿ.ಶ. 1519) ಇಲ್ಲಿ ತಮ್ಮನ್ನು ತಾವೇ ರಾಮಾನುಜರ ಸಿದ್ಧಾಂತಗಳನ್ನು ಸ್ಥಾಪಿಸುವವರೆಂದು ಕರೆದುಕೊಳ್ಳುವರು. ಇಲ್ಲಿ ಇವರೆ ದೇವಾಲಯದ ನಿರ್ವಾಹಕರಾಗಿದ್ದರು. ಇವರು ನಾರಾಯಣಸ್ವಾಮಿ ದೇವರಿಗೆ ಲಕ್ಷ್ಮಿಪತಿಶೆಟ್ಟಿಯು ಮಾಡಿದ ದಾನವಾದ ಹೊಸಹಳ್ಳಿ ಗ್ರಾಮದಿಂದ ಬರುವ 300 ಗದ್ಯಾಣವನ್ನು ಉಪಯೋಗಿಸಲು ವ್ಯವಸ್ಥೆ ಮಾಡುತ್ತಿದ್ದರು. ಮುಂದೆ ಅವರೇ ದೇವಾಲಯದ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ತೆಗೆದುಕೊಂಡರು. ಏಕೆಂದರೆ ದೇವಾಲಯದ ಕೆಲವು ವಿಶೇಷ ಸೇವೆಯನ್ನು ಮಾಡಲು, ಮೇಲಿನ ದಾನದತ್ತಿಗಳಿಂದ ಉತ್ಪತ್ತಿಯಾದ ಅಂಶಗಳ ಮೇಲ್ವಿಚಾರಣೆ ಇವರದೇ ಆಗಿತ್ತು. ಶಾಸನದಲ್ಲಿರುವಂತೆ ತಿಬ್ಬಶೆಟ್ಟಿಯ ಹೆಸರಿನಲ್ಲಿ ಚೆಲ್ವಿಪಿಳ್ಳೆರಾನಿಗೆ ನೈವೇದ್ಯಕ್ಕೆ 4 ಕೊಳಗ ಅಕ್ಕಿಯನ್ನು ಉಗ್ರಾಣದಿಂದ ಕೊಡಬೇಕು. ಈ ವ್ಯಕ್ತಿಯ ತಂದೆಯು ದೇವಾಲಯದ ಕೆರೆಯನ್ನು ದುರಸ್ಥಿತಗೊಳಿಸಿದನು. ಈತನ ಹೆಸರಿನಲ್ಲಿ ದೇವಾಲಯದಲ್ಲಿ ಅನ್ನದಾನ ಮಾಡುವಂತೆ (ಶಾಶ್ವತವಾಗಿ) ಐವತ್ತಿಬ್ಬರು ಭರವಸೆ ನೀಡುವರು. ಕೊನೆಯಲ್ಲಿ ಶ್ರೀ ನಾರಾಯಣ ಎಂದು ನಾಲ್ಕು ಸಹಿಗಳಿವೆ. ಇದು ಸ್ಪಷ್ಟಪಡಿಸುವಂತೆ 4 ವ್ಯಕ್ತಿಗಳು 52 ಜರನ್ನು ಪ್ರತಿನಿಧಿಸುವವರಾಗಿದ್ದರು. ನಾವು ಇಂದಿನ ಆಚರಣೆಯನ್ನು ಪರಿಗಣಿಸಿದರೆ. ಸಾಂಪ್ರದಾಯಿಕವಾಗಿ ಕೆಲಸಗಳನ್ನು ನಾಲ್ಕುಜನ ಸ್ವಾಮ್ಯ ಅಥವಾ ಮೇಲ್ವಿಚಾರಣೆಯ ಹುದ್ದೆಗಳಾಗಿ ವಿಂಗಡಿಸಿರುವುದರಲ್ಲಿ ಅನುಮಾನವಿಲ್ಲ. ಕ್ರಿ.ಶ. 1524ರ ಒಂದು ಶಾಸನವು ಮೇಲಿನ ನಿಲುವಿಗೆ ಪೂರಕ ಮಾಹಿತಿ ನೀಡುತ್ತವೆ.[28]

ಮತ್ತೊಂದು ಶಾಸನದಂತೆ ಐವತ್ತಿಬ್ಬರು ಈ ಪ್ರಾಂತ್ಯದಲ್ಲಿ ತಮ್ಮನ್ನು ರಾಜನ ಪ್ರತಿನಿಧಿಯಾಗಿ ಗುರುತಿಸಿಕೊಂಡಿದ್ದಾರೆ.[29] ಆದರೆ ಈ ವಿವರಗಳ ದಾಖಲೆಯು ಹಾಳಾಗಿರುತ್ತದೆ. (ಕ್ರಿ.ಶ. 1534) ಕ್ರಿ.ಶ. 1544ರ ಒಂದು ಶಾಸನವು ತಿಳಿಸುವಂತೆ. ಕೆಲವು ಕಾರಣಗಳಿಗಾಗಿ ದೇವಾಲಯದ ಆಡಳಿತವು ತಕ್ಷಣ ಬದಲಾಗಿರುವುದು ಕಾಣಿಸಿಕೊಳ್ಳುತ್ತದೆ. ಇದೇ ಕಾಲದ ಮತ್ತೊಂದು ಶಾಸನದಂತೆ. ಬದಲಾದ ಆಡಳಿತದ ವಿವರಣೆಯಲ್ಲಿ ಐವತ್ತಿಬ್ಬರು ಉಲ್ಲೇಖಗೊಂಡಿಲ್ಲ. ಆದರೆ ವೇದಾಂತಿ ರಾಮಾನುಜ ಜೀಯರ್‌ಗೆ ದೇವಾಲಯದ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಮತ್ತು ದೇವಾಲಯದ ಗೌರವವನ್ನು ಹೊಂದುವಂತೆ ಅನುಗ್ರಹಿಸಲಾಗಿದೆ. ಇದು ಹಿಂದಿನಿಂದಲೂ ಐವತ್ತಿಬ್ಬರಿಂದ ಉಪಯೋಗಿಸಲ್ಪಡುತ್ತಿತ್ತು.

ವಿಜಯನಗರದ ಅರಸು ಸದಾಶಿವದೇವರಾಯನ ಕಾಲದಲ್ಲಿ ಈ ಪ್ರಾಂತ್ಯವನ್ನು ಆಳುತ್ತಿದ್ದ ನಂದ್ಯಾಲ ನರಸಿಂಗದೇವ ಮಹಾ ಅರಸನ ಮಗನಾದ ನಾರಾಯಣದೇವ ಮಹಾ ಅರಸು ಮಾಡಿದ ಶಾಸನದಂತೆ,[30] ಇಲ್ಲಿಗೆ ಬರುವ ಆರಾಧಕರ ಅನುಕೂಲಕ್ಕಾಗಿ

ಅಚ್ಯುತರಾಯನು ದೇಶಾಂತ್ರಿಮಠವನ್ನು ಸ್ಥಾಪಿಸಿದನು. ಈ ಮಠವನ್ನು ನಿರ್ವಹಿಸುತ್ತಿದ್ದವರಿಗೆ ದೇಶಾಂತ್ರಿಮುದ್ರೆ ಎಂಬ ಚಿಹ್ನೆಯನ್ನು ಕೊಟ್ಟನು. ಈ ಮುದ್ರೆಯು ಯತಿರಾಜಮಠದಲ್ಲಿತ್ತು. ನಾರಾಯಣದೇವ ಮಹಾಅರಸು ಯತಿರಾಜಮಠ ಮತ್ತು ದೇಶಾಂತ್ರಿಮುದ್ರೆಯನ್ನು ನಾರಾಯಣ ದೇವಾಲಯದ ನಿಯಂತ್ರಣಕ್ಕೆ ಕೊಟ್ಟನು. ನಂತರ ಯತಿರಾಜಮಠದ ಮುಖ್ಯಸ್ಥರಿಂದ ದೇವಾಲಯದ ಆಡಳಿತವು ನಡೆಯುವಂತೆ ವ್ಯವಸ್ಥೆಮಾಡಿದನು. ಇದರ ಮುಖ್ಯಸ್ಥರು 'ವೇದಾಂತಿ ರಾಮಾನುಜ ಜೀಯರ್'. ಇವರು ಶ್ರೀರಂಗದ ಕಂಡಾಡೈ ಅಣ್ಣನ ಶಿಷ್ಯರಾಗಿದ್ದರು. ಶಾಸನ ತಿಳಿಸುವಂತೆ ಹನುಮಂತ ಮುದ್ರೆಯನ್ನು ಉಪಯೋಗಿಸುವ ಅಧಿಕಾರವನ್ನು ಪಡೆದಿದ್ದರು. ಇದು ದೇವಾಲಯದ ಆದಾಯ ಉಗ್ರಾಣದ ಆಭರಣ ಮತ್ತು ವಸ್ತ್ರಗಳ ಉಪಯೋಗವಾಗುವಾಗ ಒಪ್ಪಿಗೆಗಾಗಿ ಬಳಸಲ್ಪಡುತ್ತಿತ್ತು. ಜೊತೆಗೆ ಭೂ ಆಸ್ತಿಗಳ ನಿರ್ವಹಣೆಗೆ ತಮ್ಮದೇ ಉದ್ಯೋಗಿಗಳನ್ನು ನೇಮಿಸಿಕೊಳ್ಳುವಂತೆ ಮತ್ತು ಆದಾಯದ ನಿರ್ವಹಣೆ ಮಾಡುವಂತೆ ಹೇಳಲಾಯಿತು. ಇವರು ರಾಮಾನುಜಮುದ್ರೆಯನ್ನು ಉಪಯೋಗಿಸುವ ಹಕ್ಕನ್ನು ಪಡೆದಿದ್ದರು. ಇದು ನಾರಾಯಣಸ್ವಾಮಿ ದೇವಾಲಯದ ಧಾರ್ಮಿಕ ಆಚರಣೆಗಳ ಅಧಿಕಾರದ ಚಿಹ್ನೆಯಾಗಿತ್ತು. ಇದನ್ನು ರಾಮಾನುಜರ ಗುಡಿಯಲ್ಲಿಡಲಾಗಿತ್ತು. ಬಹುಶಃ ರಾಮಾನುಜಮುದ್ರೆಯು ದೇವಾಲಯಕ್ಕೆ ನೀಡಿದ ಗ್ರಾಮ ಮತ್ತು ಭೂಮಿ ದಾನಗಳ ಆಡಳಿತಕ್ಕೂ ಉಪಯೋಗಿಸಲ್ಪಡುತ್ತಿತ್ತು. ಈ ವ್ಯವಸ್ಥೆಯು ವಂಶಪರಂಪರೆಯಾಗಿ ಮುಂದುವರೆಯುವಂತೆ ಹೇಳಲಾಯಿತು.

ಗಮನಾರ್ಹ ಅಂಶವೆಂದರೆ ನಾರಾಯಣದೇವ ಮಹಾ ಅರಸನು ಉಗ್ರಾಣದ ಹನುಮಂತಮುದ್ರೆಯ ಜೊತೆಗೆ ತನ್ನದೇ ಆದ ವೈಯಕ್ತಿಕ ಭೂಮಿ ಮತ್ತು ಗ್ರಾಮಗಳಿಂದ ಬಾಕಿ ವಸೂಲಿಗೂ ತಮ್ಮ ಜನರನ್ನು ನೇಮಕ ಮಾಡಿಕೊಳ್ಳಲು ಕೇಳಿಕೊಂಡನು. ಈ ಉದ್ದೇಶಕ್ಕಾಗಿ ತನ್ನದೇ ಆದ ಮುದ್ರೆಯನ್ನು ರಾಜಮುದ್ರೆ ಮತ್ತು ರಾಮಾನುಜಮುದ್ರೆಯ ಜೊತೆಗೆ ಇಡಲು ಕೇಳಿದನು. ಅದನ್ನು ರಾಮಾನುಜರ ಸನ್ನಿಧಿಯಲ್ಲಿಡಲಾಯಿತು. ನಾರಾಯಣದೇವ ಮಹಾ ಅರಸನು ದೇವಗಿರಿಯ ಅಚ್ಯುತರಾಯನ ಸಲಹೆಯ ಮೇರೆಗೆ ಈ ನಿರ್ಧಾರಕ್ಕೆ ಬಂದಿದ್ದನು. ಇದು ನಮಗೆ ಆಶ್ಚರ್ಯ ಮೂಡಿಸುತ್ತದೆ. **ಅಚ್ಯುತರಾಯನು ಏನಾದರೂ ಯತಿರಾಜಮಠವನ್ನು ವಶಪಡಿಸಿಕೊಂಡನೆ?** ಏಕೆಂದರೆ ಯತಿರಾಜಮಠವು ಹಲವು ದಿನಗಳ ಕಾಲ ಧಾರ್ಮಿಕ ಪುರೋಹಿತರನ್ನು (ಜೀಯರ್) ಹೊಂದಿರಲಿಲ್ಲ.

ಈ ಶಾಸನದಿಂದ ಸ್ಪಷ್ಟವಾಗುವುದೇನೆಂದರೆ, ದೇವಾಲಯದ ಆಡಳಿತ ಯಂತ್ರದಲ್ಲಿ ಕೆಲವು ಬಿರುಕು ಬಿದ್ದುದು ತಿಳಿದುಬರುತ್ತದೆ. ಇದನ್ನು ಹೋಗಲಾಡಿಸಲು ನಾರಾಯಣದೇವ ಮಹಾ ಅರಸನಿಂದ ಪರಿಹಾರದ ಕ್ರಮ ತೆಗೆದುಕೊಳ್ಳಲಾಯಿತು. ಕುತೂಹಲವೆಂದರೆ

ಐವತ್ತಿಬ್ಬರು ಕೂಡ ಈ ವ್ಯವಸ್ಥೆಯಲ್ಲಿ ಹೊಂದಿಸಲ್ಪಟ್ಟಿದ್ದರು. ವೇದಾಂತಿ ರಾಮಾನುಜ ಜೀಯರ್ ಯತಿರಾಜಮಠದ ಮುಖ್ಯಸ್ಥರಾಗಿ ಮುಂದುವರೆದರು. ಈ ದೇವಾಲಯಕ್ಕೆ ಸಂಬಂಧಿಸಿದಂತೆ ಮೇಲಿನ ಶಾಸನದ ನಂತರ ಕಾಲಾನುಕ್ರಮದಲ್ಲಿ ಲಭ್ಯವಿದ್ದು,[31] ಈ ಶಾಸನಗಳು ಕೆಲವು ದಾನ ಮತ್ತು ನಾರಾಯಣ ದೇವಾಲಯದ ಗೌರವದಲ್ಲಿ ಕೆಲವು ವ್ಯವಸ್ಥೆಯನ್ನು ದಾಖಲೆಮೂಡುತ್ತವೆ. ಅಲ್ಲಿ ಐವತ್ತಿಬ್ಬರ ಅಥವಾ ಯತಿರಾಜಮಠದ ನಾಯಕರ ಕುರಿತು ಯಾವುದೇ ಉಲ್ಲೇಖವಿಲ್ಲ.

ವಿಜಯನಗರದ ಕಾಲದಲ್ಲಿ ಈ ಪ್ರಾಂತ್ಯದ ಪ್ರತಿನಿಧಿಯಾದ ಕೊಂಡಯ್ಯ ದೇವನಮಗನಾದ ರಾಯಪ್ಪನಾಯಕನು ದೇವಾಲಯದ ಆಡಳಿತದಲ್ಲಿ ಕೆಲವು ಬದಲಾವಣೆ ತಂದರು ಕ್ರಿ.ಶ. 1570ರ ಶಾಸನದಿಂದ ತಿಳಿದು ಬರುತ್ತದೆ.[32] ಈ ಶಾಸನದಂತೆ ಐವತ್ತಿಬ್ಬರು ಶ್ರೀ ವೈಷ್ಣವರು ದೇವಾಲಯದಲ್ಲಿ ಮತ್ತೆ ಸ್ಥಾನ ಪಡೆದರು. ರಾಯಪ್ಪ ನಾಯಕನ ನೆರವಿನಿಂದ ದೇವಾಲಯದ ಹಿಂದಿನ ಪದ್ಧತಿಯು ಮತ್ತೆ ಜಾರಿಗೆ ಬಂದಿತು. ಐವತ್ತಿಬ್ಬರು ಕೆಲವು ಸವಲತ್ತುಗಳನ್ನು ದೇವಾಲಯದಿಂದ ಪಡೆದರು. ಇವರು ರಾಯಪ್ಪ ನಾಯಕನ ಪೂರ್ವಜರು ದೇವಾಲಯಕ್ಕೆ ಮಾಡಿದ ಕೆಲವು ದಾನಗಳ ಜವಾಬ್ದಾರಿಯನ್ನು ನೋಡುತ್ತಿದ್ದರು. ಐವತ್ತಿಬ್ಬರು ಶಾಸನದ ಕೊನೆಯಲ್ಲಿ ಒಂದು ವರ ಕೊಡುವಂತೆ, ಈ ವ್ಯವಸ್ಥೆಯನ್ನು ಶಾಶ್ವತವಾಗಿ ಮುಂದುವರೆಸುವಂತೆ ಕೇಳಿದ್ದಾರೆ. ಇದರ ಗುರುತಾಗಿ ಎಂದಿನಂತೆ ತಮ್ಮ ಸಹಿಯನ್ನು 'ಶ್ರೀ ನಾರಾಯಣ' ಎಂದು ನಾಲ್ಕು ಬಾರಿ ಹಾಕಿದ್ದಾರೆ. ಮತ್ತೆ 1582ರಲ್ಲಿ ಐವತ್ತಿಬ್ಬರ ಆಡಳಿತದಲ್ಲಿ ಅದೇ ಸ್ಥಿತಿಯು ಮುಂದುರಿದಿರುವುದನ್ನು ನೋಡಬಹುದು.[33] ಇದು ಐವತ್ತಿಬ್ಬರ ಕುರಿತು ದಾಖಲಾದ ಕೊನೆಯ ಶಾಸನವಾಗಿದ್ದು, ನಂತರದ ಕಾಲದಲ್ಲಿ ಈ ಸಮಿತಿಗೆ ಏನಾಯಿತು ಮತ್ತು ನಂತರದ ದೇವಾಲಯದ ಆಡಳಿತದ ಲಕ್ಷಣಗಳನ್ನು 100 ವರ್ಷಗಳವರೆಗೆ ತಿಳಿಯಲು ಸಾಧ್ಯವಿಲ್ಲ. ಈ ಕುರಿತು ಯಾವ ಶಾಸನಗಳು ಲಭ್ಯವಿಲ್ಲ.

ಶಾಸನದಲ್ಲಿ ಇವರು ಐವತ್ತಿಬ್ಬರು ಶ್ರೀ ವೈಷ್ಣವ ಮಹಾಜನರು ಎಂದು ಗುರುತಿಸಲ್ಪಟ್ಟಿದ್ದಾರೆ.[34] ಈ 52 ಮಹಾಜನರ ಸಮಿತಿಯು ಒಂದು ಸಂಸ್ಥೆಯಾಗಿ ದಕ್ಷಿಣ ಭಾರತದ ಇತಿಹಾಸದಲ್ಲಿ ಹೆಚ್ಚು ಪರಿಚಯವಿತ್ತು. ಈ ಮಹಾಜನರ ಸಮಿತಿಯು ಅಗ್ರಹಾರಗಳ ಗ್ರಾಮದ ಆಡಳಿತ ನೋಡಿಕೊಳ್ಳುತ್ತಿದ್ದರು. ಚುನಾಯಿತ ಪ್ರತಿನಿಧಿಗಳಾಗಿ ಗ್ರಾಮದ ಆಡಳಿತಕ್ಕೆ ಸಂಬಂಧಿಸಿದಂತೆ ವಿವಿಧ ಸಮಿತಿಯ ಮೇಲ್ವಿಚಾರಣೆ ಮಾಡುತ್ತಿದ್ದರು. ಆದ್ದರಿಂದ ಐವತ್ತಿಬ್ಬರು ಮಹಾಜನಗಳಾಗಿರಬಹುದು. ವಾಸ್ತವವೆಂದರೆ ಈ 4 ಜನರು ಮೇಲೆ ಹೇಳಿದ ಐವತ್ತಿಬ್ಬರಿಗೆ ಸಂಬಂಧಿಸಿದ ಎಲ್ಲಾ ವ್ಯವಹಾರಗಳೊಂದಿಗೂ ಸಂಬಂಧ ಹೊಂದಿದ್ದಾರೆ. 15–16ನೇ ಶತಮಾನದ ಶಾಸನಗಳು ಇದನ್ನು ಪುಷ್ಟಿಕರಿಸುತ್ತವೆ. ಈ

ಕಾಲದಲ್ಲಿ ಮಹಾಜನಗಳ ವರ್ಗವು ಕರ್ನಾಟಕದ ಇತಿಹಾಸದಿಂದ ಮರೆಯಾಗುತ್ತಿತ್ತು. ಆದರೆ ಐವತ್ತಿಬ್ಬರು ಒಂದು ಸಮಿತಿಯೋ ಅಥವಾ ಚುನಾಯಿತ ಪ್ರತಿನಿಧಿಗಳ ಸಮಿತಿಯೋ ಎಂಬುದರ ಕುರಿತು ಸ್ಪಷ್ಟ ದಾಖಲೆಗಳು ಲಭ್ಯವಿಲ್ಲ. ಏನೇ ಆದರೂ ದೇವಾಲಯದ ಆಡಳಿತದಲ್ಲಿ ಇವರ ಪಾತ್ರ ಮಹತ್ವದ್ದಾಗಿತ್ತು.

ನಂತರದ ಕಾಲದಲ್ಲಿ ದೇವಾಲಯದ ಆಡಳಿತ

ವಿಜಯನಗರದ ಆಡಳಿತ ನಂತರದ ಕಾಲದಲ್ಲಿ ದೇವಾಲಯದ ಆಡಳಿತಕ್ಕೆ ಸಂಬಂಧಿಸಿದಂತೆ ಕೆಲವು ಗುರುತರ ಬದಲಾವಣೆಗಳಾದವು. ಐವತ್ತಿಬ್ಬರು ಸಮಿತಿಯ ಕಾಲದಲ್ಲಿಯೇ ರಾಜರ ಪ್ರತಿನಿಧಿಗಳು ಈ ಪ್ರಾಂತ್ಯದಲ್ಲಿ ದೇವಾಲಯದ ಆಡಳಿತದಲ್ಲಿ ಮುಖ್ಯಪಾತ್ರ ವಹಿಸಿದ್ದುದು ತಿಳಿದುಬರುತ್ತದೆ. ಹಿಂದೆ ತಿಳಿಸಿರುವಂತೆ ನಾರಾಯಣದೇವ ಕೊಂಡಯ್ಯದೇವ, ಮಹಾ ಅರಸು ಮತ್ತು ರಾಯಪ್ಪನಾಯಕರು ದೇವಾಲಯದ ಆಡಳಿತಕ್ಕೆ ಸಂಬಂಧಿಸಿದಂತೆ ನೇರವಾದ ಸಂಬಂಧ ಹೊಂದಿದ್ದರು. ಗಮನಾರ್ಹ ಅಂಶವೆಂದರೆ, ದೇವಾಲಯದ ಆಂತರಿಕ ಆಡಳಿತ ವ್ಯವಸ್ಥೆಯಲ್ಲಿ ರಾಜ ಪ್ರಭುತ್ವದ ಪ್ರವೇಶಿಸುವಿಕೆಯು ಭವಿಷ್ಯದಲ್ಲಿ ಮುಂದುವರಿಯಿತು. ಪ್ರಸ್ತುತ ದೇವಾಲಯದ ಆಡಳಿತದಲ್ಲಿಯೂ ಕೂಡ ಇದೇ ಪರಿಸ್ಥಿತಿಯನ್ನು ನೋಡಬಹುದು. ದೇವಾಲಯಗಳು ಆರ್ಥಿಕವಾಗಿ ಸಬಲವಾದಂತೆ ರಾಜನ ಮಧ್ಯಪ್ರವೇಶಿಸುವಿಕೆಯೂ ಹೆಚ್ಚಾಯಿತು. 17ನೇ ಶತಮಾನದ ನಂತರದ ಕಾಲದಲ್ಲಿ ರಾಜರು ಕೆಲವು ಅಧಿಕಾರಿಗಳನ್ನು ನೇರವಾಗಿ ದೇವಾಲಯದ ನಿರ್ವಹಣೆಗೆ ನೇಮಿಸಲಾರಂಭಿಸಿದರು. ಆದರೆ ಈ ಮಾಹಿತಿಯು ಮೇಲುಕೋಟೆಯ ಶಾಸನಗಳಲ್ಲಿ ಲಭ್ಯವಿಲ್ಲ. ಮೈಸೂರು ಒಡೆಯರ ಆಡಳಿತದಲ್ಲಿ ಕೆಲವು ಶಾಸನಗಳು ಇದನ್ನು ದೃಢಪಡಿಸುತ್ತವೆ. 19ನೇ ಶತಮಾನದ ದಾಖಲೆಗಳು ಮತ್ತು ಪ್ರಸ್ತುತ ಪದ್ಧತಿಗಳಿಂದಲೂ ತಿಳಿದುಬರುತ್ತದೆ.[35]

ವಿಜಯನಗರದ ಸಾಮ್ರಾಜ್ಯ ಅವನತಿಯ ನಂತರ ದೇವಾಲಯದ ಆಡಳಿತದಲ್ಲಿ ಆಂತರಿಕ ಭಿನ್ನಾಭಿಪ್ರಾಯಗಳು ಬಂದಾಗ ಇದು ಮೈಸೂರು ಅರಸರಾದ ರಾಜಒಡೆಯರಿಗೆ ತಿಳಿದು ಕ್ರಿ.ಶ. 1612ರಲ್ಲಿ ದೇವಾಲಯದ ಸರ್ವಾಧಿಕಾರವು ಅರಮನೆಗೆ ಸೇರಿತು. ದೇವಾಲಯದ ಸಕಲ ಅಧಿಕಾರವು ಅರಮನೆಗೆ ಸೇರಿದ ನಂತರ ಆಭರಣಗಳು ಮತ್ತು ಅಮೂಲ್ಯ ಕಿರೀಟಗಳನ್ನು ಶ್ರೀರಂಗಪಟ್ಟಣದ ಭಂಡಾರಕ್ಕೆ ಕೊಡುವಂತೆ ಏರ್ಪಡಿಸಲಾಯಿತು. ಕ್ರಿ.ಶ. 1792ರವರೆಗೂ ಮೈಸೂರು ರಾಜರು ದೇವಾಲಯದ ಅಧಿಕಾರದಲ್ಲಿ ಮುಖ್ಯಸ್ಥಾನ ಹೊಂದಿದ್ದರು. ಟಿಪ್ಪುಸುಲ್ತಾನನ ಕಾಲದಲ್ಲಿ ದೇವಾಲಯದ ಆಡಳಿತದಲ್ಲಿ ಸ್ವಲ್ಪ ಬಿರುಕು ಮೂಡಿತು. ದೇವಾಲಯದ ನಗನಾಣ್ಯಗಳಿಗೆ ಕುಂದುಂಟಾಗಿರುವ ಸಾಧ್ಯತೆಯಿದೆ. ಟಿಪ್ಪು

1799ರಲ್ಲಿ ಕಾಲವಾದ ನಂತರ ಮೈಸೂರ ಮಹಾರಾಜರು ಪ್ರಾಬಲ್ಯಗೊಂಡಂತೆ ದೇವಾಲಯದ ಆಡಳಿತದಲ್ಲಿ ಹೆಚ್ಚಿನ ಆಸಕ್ತಿ ವಹಿಸಿದರು. ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ದೇವಾಲಯದ ಆಡಳಿತಕ್ಕೆ ಸಂಬಂಧಿಸಿದಂತೆ ತಮ್ಮದೇ ಒಂದು ರಾಜಮುದ್ರೆಯನ್ನು ಹೊಂದಿಸಲಾಯಿತು.[36] ಇದು ಹಲವು ಕಾಲಗಳು ಉಪಯೋಗದಲ್ಲಿತ್ತು. 20ನೇ ಶತಮಾನದ ಮುಜುರಾಯಿ ಕೈಪಿಡಿಯು 2 ಮುದ್ರೆಗಳನ್ನು ಉಲ್ಲೇಖಿಸಿದ್ದು, ಅವನ್ನು ಇಂದಿಗೂ ಉಪಯೋಗಿಸಲಾಗುತ್ತಿದೆ. ಅವೆಂದರೆ ಒಂದು ಸ್ಥಳಮುದ್ರೆ, ಇದು ಸುತ್ತೋಲೆಯ ಮುದ್ರೆಯಾಗಿದ್ದು, ವೇದಾಂತಿ ರಾಮಾನುಜ ಜೀಯರ್ ಮುದ್ರೆಯಾಗಿರಬಹುದೆಂದು ತೋರುತ್ತದೆ. ಎರಡನೆಯದು ಮಠಮುದ್ರೆ, ಇದು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಬಂದಿದ್ದು ಪರಕಾಲಮಠದ ಸ್ವಾಧೀನದಲ್ಲಿತ್ತು. 'ಹಯಗ್ರೀವ' ಎಂಬ ಶಾಸನ ಈ ಮುದ್ರೆಯ ಮೇಲೆ ಕೆತ್ತಲ್ಪಟ್ಟಿದೆ. ನಂತರದ ದಿನಗಳಲ್ಲಿ ದೇವಾಲಯದ ಆಡಳಿತದಲ್ಲಿ ಪರಕಾಲಮಠವು ತನ್ನ ಸ್ಥಾನವನು ಕಳೆದುಕೊಂಡಿತು. ಇದಕ್ಕೆ ಮುಂಚೆ ಹನುಮಂತಮುದ್ರೆ ಮತ್ತು ರಾಜಮುದ್ರೆಗಳು ಬಳಸಲ್ಪಡುತ್ತಿದ್ದವು. ಉಗ್ರಾಣದ ವಸ್ತುಗಳ ರಕ್ಷಣೆಗೆ ಹನುಮಂತಮುದ್ರೆಯು, ಪೇಷ್ಕಾರದಿಂದ ಉಪಯೋಗವಾಗುತ್ತಿತ್ತು. ರಾಜಮುದ್ರೆಯು ಖಜಾನೆ ಮತ್ತು ಆರ್ಥಿಕ ವ್ಯವಹಾರಕ್ಕೆ ಪೇಷ್ಕಾರರಿಂದ ಸರ್ಕಾರದ ಪ್ರತಿನಿಧಿಯಾಗಿ ಉಪಯೋಗವಾಗುತ್ತಿತ್ತು. ಒಟ್ಟಿನಲ್ಲಿ ಮೈಸೂರು ಒಡೆಯರ ಕಾಲದಲ್ಲಿ ದೇವಾಲಯದ ಆಡಳಿತವು ಸಂಪೂರ್ಣವಾಗಿ ರಾಜಪ್ರಭುತ್ವದ ಹಿಡಿತಕ್ಕೆ ಒಳಗಾಯಿತು. ಮಠಗಳು ದೇವಾಲಯ ಮತ್ತು ರಾಜರ ನಡುವೆ ಮದ್ಯವರ್ತಿಯಾಗಿ ಕಾರ್ಯನಿರ್ವಹಿಸಿತು. ರಾಜನನ್ನು ಒಲೈಸುವಲ್ಲಿಯೂ ಮಠಗಳು ಯಶಸ್ವಿಯಾಗಿದ್ದುದು ದಾಖಲೆಗಳಿಂದ ದೃಢಪಡಿಸುತ್ತದೆ.

ಕ್ರಿ.ಶ. 1850ರಲ್ಲಿ ಮೈಸೂರು ಸರ್ಕಾರವು ದೇವಾಲಯದ ಆಡಳಿತ ಮತ್ತು ಆಸ್ತಿಗಳನ್ನು ತನ್ನ ಸುಪರ್ದಿಗೆ ತೆಗೆದುಕೊಂಡಿತು ಹಾಗೂ ವಾರ್ಷಿಕ ಅನುದಾನಗಳನ್ನು ನಿಗಧಿಗೊಳಿಸಿತು. ಆದರೆ ಸಾಂಪ್ರದಾಯಿಕವಾಗಿ ಹುದ್ದೆ ಹೊಂದಿದ ವ್ಯಕ್ತಿಗಳಲ್ಲಿ ಬದಲಾವಣೆಯಾಗಲಿಲ್ಲ. ದೇವಾಲಯವು ಹೊಂದಿದ್ದ ಸ್ವಾಯತ್ತ ಅಧಿಕಾರಗಳು ನಿರ್ಬಂದಕ್ಕೆ ಒಳಗಾದವು. ಆದರೂ ಧಾರ್ಮಿಕ ಪ್ರಭುತ್ವದ ಹಿಡಿತ ಸಡಿಲಗೊಳ್ಳಲಿಲ್ಲ.

ಕರ್ನಾಟಕ ಸರ್ಕಾರವು ಕ್ರಿ.ಶ. 1955ರಲ್ಲಿ ಆಡಳಿತ ಮಂಡಳಿಯೊಂದನ್ನು ರಚಿಸಿದ್ದು, ಮೇಲುಕೋಟೆ ದೇವಾಲಯಗಳ ಆಡಳಿತ ನಿರ್ವಹಣೆಗೆ ನಾಮಮಾತ್ರ ಸದಸ್ಯರನ್ನು ಒಳಗೊಂಡಿರುವ ಮೂರು ವರ್ಷಗಳ ಅವಧಿಯ ಒಂದು ಕಮಿಟಿಯನ್ನು ನೇಮಿಸಲಾಗಿದೆ. ಇದು ಗರಿಷ್ಠ 18 ಸದಸ್ಯರು, ಅಧಿಕಾರಿಗಳು ಮತ್ತು ಇನ್ನಿತರ ವ್ಯಕ್ತಿಗಳನ್ನು ಒಳಗೊಂಡಿದೆ.

1. ಮಂಡ್ಯ ಜಿಲ್ಲಾಧಿಕಾರಿಗಳು – ಅಧ್ಯಕ್ಷರು

2.	ಸಹಾಯಕ ಜಿಲ್ಲಾಧಿಕಾರಿಗಳು ಪಾಂಡವಪುರ	–	ಅಧಿಕಾರಯುತ ಸದಸ್ಯರು
3.	ಸೂಪರಿಟೆಂಡೆಂಟ್ ಪೊಲೀಸ್, ಮಂಡ್ಯ	–	" "
4.	ಪಾಂಡವಪುರದ ವಿಧಾನಸಭೆ ಶಾಕಸರು	–	" "
5.	ಗ್ರಾಮ ಪಂಚಾಯಿತಿ ಅಧ್ಯಕ್ಷರು	–	" "
6.	ಸಂಸ್ಕೃತ ಸಂಶೋಧನಾ ಸಂಸ್ಥೆಯ ಅಧ್ಯಕ್ಷರು	–	" "
7.	ಸಂಸ್ಕೃತ ಕಾಲೇಜು, ಮೇಲುಕೋಟೆ, ಪ್ರಾಂಶುಪಾಲರು	–	" "
8.	ತಿರುನಾರಾಯಣಸ್ವಾಮಿ ನಿತ್ಯ ಕೈಂಕರ್ಯ ಸಭಾದ ಪ್ರತಿನಿಧಿಗಳು	–	ಸದಸ್ಯರು
9.	ಪುದುವಟ್ಟು ದಾನಮಾಡಿರುವ ಇಬ್ಬರು ವ್ಯಕ್ತಿಗಳು (ಒಬ್ಬರು ತೆಂಗಲೈಯಿಂದ, ಮತ್ತೊಬ್ಬರು ವಡಗಲೈಯಿಂದ)	–	" "
10.	ಶ್ರೀ ಪರಕಾಲಮಠ ಮತ್ತು ಯತಿರಾಜ ಮಠದಿಂದ ಒಬ್ಬೊಬ್ಬರು ಪ್ರತಿನಿಧಿಗಳು	–	" "
11.	ಮೇಲುಕೋಟೆ ದೇವಾಲಯದ ಒಬ್ಬ ಅರ್ಚಕರು	–	" "
12.	ಮೇಲುಕೋಟೆಯಲ್ಲಿ ವಾಸಿಸುವ ಸ್ಥಳಾಚಾರ್ಯ ಪುರುಷರಲ್ಲಿ ಒಬ್ಬರು	–	" "
13.	ಮೇಲುಕೋಟೆಯಲ್ಲಿ ವಾಸಿಸುವ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಇಬ್ಬರು ವ್ಯಕ್ತಿಗಳು	–	" "
14.	ಮೇಲುಕೋಟೆ ದೇವಾಲಯದ ಆಡಳಿತ ಅಧಿಕಾರಿ	–	ಸದಸ್ಯರು ಮತ್ತು ಕಾರ್ಯದರ್ಶಿ

ಅಧ್ಯಕ್ಷರಿಗೆ ಎರಡಕ್ಕಿಂತ ಹೆಚ್ಚಿಲ್ಲದಂತೆ ಇಬ್ಬರು ರಜಕೀಯೇತರ ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಳ್ಳುವ ಅಧಿಕಾರವಿದೆ. ಈ ಸಮಿತಿಗೆ ಮೇಲುಕೋಟೆ ದೇವಾಲಯಗಳ ಎಲ್ಲಾ ವಿಧವಾದ ಚಟುವಟಿಕೆಗಳನ್ನು ನೋಡಿಕೊಳ್ಳುವ ಅಧಿಕಾರವಿದೆ. ಧಾರ್ಮಿಕ ವಿಚಾರಗಳಿಗೆ ಸಂಬಂಧಿಸಿದಂತೆ ಸಲಹೆಗಳನ್ನು (ನಿರ್ದೇಶನ) ನಿರ್ವಹಣಾ ಸಮಿತಿಗೆ ನೀಡಲು ಧಾರ್ಮಿಕವಾದ ಉಪಸಮಿತಿಯು ರಚಿತವಾಗಿದೆ. ಈ ಕೆಳಗಿನ ನಾಮಮಾತ್ರ ಸದಸ್ಯರು ಇದರಲ್ಲಿದ್ದಾರೆ.

1. ಸರ್ಕಾರದಿಂದ ಆಡಳಿತ ಮಂಡಳಿಗೆ ನಾಮಾಂಕಿತವಾಗಿರುವ ದೇವಾಲಯದ ಅರ್ಚಕರು.

2. ಸ್ಥಳಾಚಾರ್ಯ ಪುರುಷ.

3. ಪರಕಾಲ ಮಠದ ಪ್ರತಿನಿಧಿ.

4. ಮೇಲುಕೋಟೆ ಯದುಗಿರಿ ಯತಿರಾಜ ಮಠದ ಪ್ರತಿನಿಧಿ

5. ಮೇಲುಕೋಟೆ ಸಂಸ್ಕೃತ ಕಾಲೇಜಿನ ಪ್ರಾಂಶುಪಾಲರು.

ಹೀಗೆ ಮೇಲುಕೋಟೆ ದೇವಾಲಯಗಳ ಆಡಳಿತದಲ್ಲಿ 800 ವರ್ಷಗಳಿಂದಲೂ ನಿರಂತರವಾದ ಬದಲಾವಣೆಗಳನ್ನು ನೋಡಬಹುದು ಆಚಾರ್ಯ ರಾಮಾನುಜರಿಂದ ಶ್ರೀ ವೈಷ್ಣವ ಧರ್ಮದ ಪ್ರತೀಕವಾಗಿ ಆರಂಭವಾದ ದೇವಾಲಯದ ಆಡಳಿತದಲ್ಲಿ, ಆರಂಭದಲ್ಲಿ ಅಧಿಕಾರಶಾಹಿ ರಾಜರ ಹಸ್ತಕ್ಷೇಪ ಕಡಿಮೆಯಿತ್ತು. ಅದು ಒಂದು ಸಾಮಾಜಿಕ ಸಂಸ್ಥೆಯಾಗಿ ಬೆಳೆದು, ಆರ್ಥಿಕವಾಗಿ ಸಬಲವಾದಂತೆ ಅಧಿಕಾರಶಾಹಿಗಳ ಹಿಡಿತ ಬಲವಾಯಿತು. ಧಾರ್ಮಿಕ ಪ್ರಭುತ್ವದ ಪ್ರತಿನಿಧಿಗಳು ಒಂದು ವರ್ಗಕ್ಕೆ ಸೀಮಿತವಾಗಿದ್ದರು. ದೈಹಿಕವಾಗಿ ಶ್ರಮದಾಯಕ ಹುದ್ದೆಗಳು ಮಾತ್ರ ಇತರ ಕೆಳವರ್ಗಗಳಿಗೆ ಕೊಡಲ್ಪಟ್ಟಿದ್ದವು. ರಾಜಪ್ರಭುತ್ವ ಮತ್ತು ಧಾರ್ಮಿಕ ಪ್ರಭುತ್ವಗಳು ಇಲ್ಲಿ ಪರಸ್ಪರ ಪೂರಕ ವಾತಾವರಣವನ್ನು ಸೃಷ್ಟಿಸಿಕೊಂಡಿರುವುದು ಕಂಡುಬರುತ್ತದೆ. ಬ್ರಾಹ್ಮಣಶಾಹಿಯು ನಿರ್ವಹಿಸುತ್ತಿದ್ದ ಎಲ್ಲಾ ಹುದ್ದೆಗಳು ಅನುತ್ಪಾದಕವಾಗಿದ್ದವು. ರಾಜರಿಂದ ಮಾನ್ಯತೆಯನ್ನು ಪಡೆಯುತ್ತಿದ್ದ ಇವರು ರಾಜಪ್ರತಿನಿಧಿಗಳಂತೆ ಕಂಡುಬರುತ್ತಿದ್ದರು. ಅದಕ್ಕೆ ಪೂರಕವಾಗಿ ತೆರಿಗೆ ವಸೂಲು ಮಾಡುವ ಮತ್ತು ಭೂಒಡೆತನಗಳನ್ನು ಹೊಂದಿದ್ದರು. ಮೇಲಿನ ಎಲ್ಲಾ ಮಾಹಿತಿಗಳಿಂದ ತಿಳಿದುಬರುವ ಅಂಶವೆಂದರೆ ರಾಜಪ್ರಭುತ್ವ ಮತ್ತು ಪುರೋಹಿತಶಾಹಿಗಳ ಪ್ರಾಬಲ್ಯ ಸಮಾಜದಲ್ಲಿ ಅತ್ಯುನ್ನತ ಶಕ್ತಿಯಾಗಿದ್ದುದು. ರಾಜಪ್ರಭುತ್ವವೂ ಸಹ ಸಮಾಜದ ಇನ್ನಿತರ ಕೆಳವರ್ಗಗಳನ್ನು ನಿಯಂತ್ರಿಸುತ್ತಿದ್ದದ್ದು ವರ್ಗದ ನಿಲುವಿಗೆ ಪೂರಕವಾಗಿ ವರ್ತಿಸಿರುವ ಅಂಶವು ದೇವಾಲಯದಂತಹಾ ಸಂಸ್ಥೆಗಳ ಆಡಳಿತದಿಂದ ಸ್ಪಷ್ಟವಾಗುತ್ತದೆ.

ಟಿಪ್ಪಣಿಗಳು

1. Rangachary.K., Srivishnava Brahmanas, Madras, 1931, ಪು. 42
2. ಉದಯವಾರ್ ನಿಯಮನಪ್ಪಡಿ, ಯತಿರಾಜಮಠದ ಕಾಫಿ.
3. Paper manuscript in the melkote sanskrit Research academy libruary
4. E.C.VI, ಪಾಂಡವಪುರ. 164
5. ಚಿದಾನಂದಮೂರ್ತಿ.ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು, 2002, ಪು. 140.
6. ಗೋಪಾಲ್.ಬಾ.ರಾ., ಕರ್ನಾಟಕದಲ್ಲಿ ರಾಮಾನುಜಾಚಾರ್ಯರು, ಮೈಸೂರು, 1984, ಪು. 55
7. E.C.VI, ಪಾಂಡವಪುರ. 111, 112, 113
8. ರಾಮಯ್ಯ.ಬಿ., ದೇವಾಲಯದ ಕೈಪಿಡಿ, ಮೈಸೂರು, 1937, ಪು. 47
9. ಅದೇ, ಪು. 56
10. E.C.VI, ಪಾಂಡವಪುರ. 140, 139
11. ಅದೇ, ಪಾಂ. 129
12. ಅದೇ, ಪಾಂ. 125
13. ಅದೇ, ಪಾಂ. 135, 132, 125, 131, 133, 149
14. ಅದೇ, ಪಾಂ. 135, 162, 134, 130, 129, 133, 128
15. ಅದೇ, ಪಾಂ. 163
16. ಅದೇ, ಪಾಂ. 129
17. ಅದೇ, ಪಾಂ. 136
18. E.C.VI, ತೊಣ್ಣೂರು. 193
19. ಅದೇ, ತೊಣ್ಣೂರು. 64
20. E.C.VI, ಶ್ರೀರಂಗಪಟ್ಟಣ. 110
21. ಅದೇ, ಶ್ರೀ. 63

22. ಅದೇ, ಶ್ಲೋ. 93

23. ಅದೇ, ಪಾಂ. 161

24. ಅದೇ, ಪಾಂ. 181

25. ಅದೇ, ಪಾಂ. 212

26. ಅದೇ, ಪಾಂ. 163

27. ಅದೇ, ಪಾಂ. 135

28. ಅದೇ, ಪಾಂ. 138

29. ಅದೇ, ಪಾಂ. 129

30. ಅದೇ, ಪಾಂ. 130

31. ಅದೇ, ಪಾಂ. 128, 131, 133

32. ಅದೇ, ಪಾಂ. 132

33. ಅದೇ, ಪಾಂ. 140

34. ಅದೇ, ಪಾಂ. 129

35. Hayavadana Rao.C., History of Mysore, Bangalore, 1943, ಪು. 108

36. Prabhakar P.Apte, Ravindranath R. Karnik., (Ed), Melkote Through the Ages, Melkote, 1992, P. 342

ಅಧ್ಯಾಯ–7
ಮೇಲುಕೋಟೆ ದೇವಾಲಯಗಳ ಪೂಜಾ ವಿಧಿ–ವಿಧಾನಗಳು ಮತ್ತು ಕಲೆ

ದೇವಾಲಯಗಳು ಸಾಮಾಜಿಕ–ಧಾರ್ಮಿಕ ಚಟುವಟಿಕೆಗಳ ಕೇಂದ್ರಗಳಾಗಿದ್ದವು. ಅಡಕವಾಗಿ ಹೇಳಬೇಕಾದರೆ ದೇವಾಲಯವು ಜನರ ಧಾರ್ಮಿಕ ಜೀವನದ ಸಂಕೇತವಾಗಿತ್ತು. ಧಾರ್ಮಿಕಾಚರಣೆಗಳ ಮೂಲಕ ಸಮುದಾಯದ ಸಾಮಾಜಿಕ–ಧಾರ್ಮಿಕ ಪರಂಪರೆಯನ್ನು ಪುನಶ್ಚೇತಗೊಳಿಸುತ್ತಿತ್ತು. ದೈನಿಕ, ಸಾಪ್ತಾಹಿಕ, ಮಾಸಿಕ, ವಾರ್ಷಿಕ ಹಾಗೂ ವಿಶೇಷ ಸಮಾರಂಭಗಳನ್ನು ಅಲ್ಲಿ ನಡೆಸಲಾಗುತ್ತಿತ್ತು. ಇದರಿಂದ ಜನರು ಒಂದೆಡೆ ಸೇರಲು ಅವಕಾಶವಾಗುತ್ತಿತ್ತು. ಮೇಲುಕೋಟೆಯಲ್ಲಿ ಪ್ರಮುಖವಾಗಿ ಶ್ರೀ ವೈಷ್ಣವ ಮತವು ಜನರ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಆಕಾರ ಕೊಟ್ಟಿತ್ತು. ಸಾಂಸ್ಕೃತಿಕ ಅಂಶಗಳನ್ನು ಒಟ್ಟುಗೂಡಿಸಿ ದೇವಾಲಯವನ್ನು ಒಂದು ಸಂಸ್ಥೆಯನ್ನಾಗಿಸಿತ್ತು. ಈ ಸ್ಥಳದಲ್ಲಿ ದೇವಾಲಯ ಕಟ್ಟುವವರ ಎರಡು ಮುಖ್ಯ ಉದ್ದೇಶಗಳೆಂದರೆ

1) ವಿಷ್ಣು ಪಾರಮ್ಯವನ್ನು ಹೆಚ್ಚಿಸುವುದು,

2) ವಿಷ್ಣುಭಕ್ತಿಯನ್ನು ವೇಗವಾಗಿ ವಿಸ್ತರಿಸುವಂತೆ ಮಾಡುವುದು.

ವಿಷ್ಣುಭಕ್ತಿಯು 2 ಮಾರ್ಗಗಳಲ್ಲಿ ವ್ಯಕ್ತವಾಯಿತು, 1) ಮೂರ್ತಿಗಳ ಪ್ರತಿಷ್ಠಾಪನೆಯಿಂದ, 2) ದೇವಾಲಯ ಸಮುಚ್ಚಯಗಳಲ್ಲಿ ಪೂಜೆ, ಆಚರಣೆಗಳು ಸಮಾರಂಭಗಳು ಉತ್ಸವ ಮತ್ತು ಹಬ್ಬಗಳನ್ನು ಏರ್ಪಡಿಸುವುದು. ಮೂರ್ತಿ ಆರಾಧನೆಯು ಆಗಮಶಾಸ್ತ್ರಗಳಲ್ಲಿನ ನಿಯಮಗಳಂತೆ ನಡೆಯುತ್ತಿತ್ತು. ಕ್ರಿ.ಶ. 12ನೇ ಶತಮಾನದಲ್ಲಿ ರಾಮಾನುಜರು ಕರ್ನಾಟಕ ಮತ್ತು ತಮಿಳುನಾಡುಗಳಲ್ಲಿ ದೇವಾಲಯಗಳಲ್ಲಿ ವಿಷ್ಣು ಆರಾಧನೆಯನ್ನು ಪುನರ್ ಸಂಘಟಿಸಿದರು. ಅದು ಆಗಮಶಾಸ್ತ್ರದಂತೆ ರೂಪಿತವಾಯಿತು. ಇಲ್ಲಿನ ದೇವಾಲಯದ ಉತ್ಸವಗಳು, ಆಚರಣೆಗಳು ಮತ್ತು ಹಬ್ಬಗಳನ್ನು ಕುರಿತು ಚರ್ಚಿಸುವ ಮುನ್ನ, ದೇವಾಲಯ ಆರಾಧನೆಯ ತಳಪಾಯವಾದ ಆಗಮಗಳ ಕುರಿತು ಕೆಲವು ಅಂಶಗಳನ್ನು ತಿಳಿಯುವ ಅಗತ್ಯವಿದೆ.

ಆಗಮಗಳು ಮತ್ತು ದೇವಾಲಯಗಳು

ಯಾವ ಶಾಸ್ತ್ರವು ದೇವಾಲಯಗಳಲ್ಲಿ ಮೂರ್ತಿಯನ್ನು ಸ್ಥಾಪಿಸುವ ಮತ್ತು ಆರಾಧನಾ ಪದ್ಧತಿಯನ್ನು ತಿಳಿಸುತ್ತಿದೆಯೋ ಅದನ್ನು ಆಗಮಶಾಸ್ತ್ರ ಎನ್ನಲಾಗಿದೆ. ಮೂರ್ತಿ ಪೂಜೆಗೆ ಅತ್ಯಂತ ಮುಖ್ಯ ಆಧಾರಗಳೆಂದರೆ ಆಗಮಗಳು. ಮೂರು ವಿಧದ ಆಗಮಗಳಿವೆ– ಶೈವ, ಶಾಕ್ತ, ವೈಷ್ಣವ. ವೈಷ್ಣವ ಆಗಮವು ಮತ್ತೆ ಪಾಂಚರಾತ್ರ ಮತ್ತು ವೈಖಾನಸ ಆಗಮ ಎಂದು 2 ವಿಭಾಗಗಳಿವೆ. ಮೇಲುಕೋಟೆಯಲ್ಲಿ ರಾಮಾನುಜರ ಪ್ರಭಾವದಿಂದ ಪಾಂಚರಾತ್ರ ಆಗಮದ ರೀತಿ ಆರಾಧನೆಗಳು ನಡೆಯುತ್ತವೆ. ಆಗಮಗಳು ಹಿಂದೂ ಸಂಸ್ಕೃತಿಯ ಸಾರವನ್ನು ಒಳಗೊಂಡಿದೆ. ಇವು ದೇವರ ಅಸ್ತಿತ್ವದ ಪರೋಕ್ಷ ಜ್ಞಾನವನ್ನು ಕೊಡುತ್ತವೆ. ಆಗಮಗಳನ್ನು ಅಪೌರುಷೇಯಗಳು ಎಂದು ಕರೆಯಲಾಗಿದೆ. ಪಾಂಚರಾತ್ರದಲ್ಲಿ 108 ಸಂಹಿತೆಗಳಿವೆ. ಅವುಗಳೆಂದರೆ ಸಾತ್ವತಸಂಹಿತೆ, ಪೌಶ್ಕರಸಂಹಿತೆ (ಪೌಸ್ಕರ), ಜಯಾಕ್ಯಸಂಹಿತೆ. ಇವುಗಳನ್ನು 'ರತ್ನತ್ರಯ'ಗಳೆಂದು ಕರೆಯಲಾಗಿದೆ. ನಂಬಿಕೆಯಂತೆ 108 ಅತ್ಯಂತ ಶ್ರೀ ವೈಷ್ಣವ ಪವಿತ್ರ ಕ್ಷೇತ್ರಗಳಲ್ಲಿ ಮೇಲುಕೋಟೆ (ಯಾದವಗಿರಿ) ಅತ್ಯಂತ ಶಕ್ತಿಶಾಲಿಯಾದುದು. 'ರತ್ನತ್ರಯ' ಸಂಹಿತೆಗಳನ್ನು ದೇವರು ನೇರವಾಗಿ ಬೋಧಿಸಿದನೆಂದು ನಂಬಲಾಗಿದೆ. ರಾಮಾನುಜರ ನಿರ್ದೇಶನದಂತೆ ಮತ್ತು ದೇವರಿಂದ ಹೇಳಲ್ಪಟ್ಟ ಸಾತ್ವತ ಸಂಹಿತೆಯ ಪೂಜಾವಿಧಿ–ವಿಧಾನಗಳನ್ನು ಮೇಲುಕೋಟೆಯಲ್ಲಿ ಆಚರಿಸಲಾಗುವುದು. ಈಶ್ವರ ಸಂಹಿತೆಯು ಸಾತ್ವತ ಸಂಹಿತೆಗೆ ಬರೆದ ಭಾಷ್ಯವಾಗಿದೆ. ಇದನ್ನು ಈಶ್ವರತಂತ್ರ ಎಂದೂ ಕರೆಯುವರು. ಇದು ವಿವಿಧ ವಿಭಿನ್ನ ಪೂಜಾ ವಿಧಿಗಳ ವಿವರಣೆಯನ್ನು ಒಳಗೊಂಡಿದೆ. ಕೆಲವು ವಿಶೇಷ ಸಂದರ್ಭಗಳಲ್ಲಿ ವಿಧಿಗಳನ್ನು ಆಚರಿಸಲಾಗುತ್ತದೆ.

ಆಗಮಗಳ ಮಹತ್ವ

ಆಗಮಗಳು ಎಲ್ಲಾ ಶಾಸ್ತ್ರಗಳ ತಳಪಾಯವಾಗಿವೆ. ಜ್ಞಾನ ಮಾರ್ಗದಲ್ಲಿರುವ ಎಲ್ಲರಿಗೂ ಇದು ಮಧುವಿನಂತೆ. ಜ್ಞಾನ ಮತ್ತು ಕ್ರಿಯೆಗಳು ಮೋಕ್ಷಗಳಿಸಲು ಸಮಾನ ಪ್ರಾಧಾನ್ಯತೆಗಳಿಸಿವೆ. ಪಕ್ಷಿಯು ಒಂದು ರೆಕ್ಕೆಯಿಂದ ಹೇಗೆ ಹಾರಲಾಗುವುದಿಲ್ಲವೋ ಹಾಗೆ.[1] ಆಗಮಗಳು ಯೋಗ ಮತ್ತು ಭಕ್ತಿಯ ಆರಾಧನೆಯನ್ನು ಒಟ್ಟುಗೂಡಿಸುತ್ತವೆ. ಆರಾಧನೆಯ ವೇಳೆಯಲ್ಲಿ ಮಂತ್ರಗಳನ್ನು ಉಚ್ಚರಿಸುವ ಮೂಲಕ, ಭಕ್ತರನ್ನು ದೇವಾಲಯಕ್ಕೆ ಆಕರ್ಷಿಸುತ್ತದೆ. ಯಜ್ಞಯಾಗಗಳ ಆರಾಧನೆಗೆ ಬದಲಾಗಿ ಆಗಮಗಳು ಬಳಸಲ್ಪಡುತ್ತವೆ. ಆಗಮಗಳು ತನ್ನನ್ನು ತಾನು ಅರಿಯಲು ಸಹಾಯಕ. ಆರಾಧಕರು ವೇದಗಳಲ್ಲಿರುವ ಅಸಂಖ್ಯ ದೇವರ ಆರಾಧನೆ ಅನಗತ್ಯ ಮತ್ತು ಹೆಚ್ಚು ಹಣ ವೆಚ್ಚ ಮಾಡಿ ಯಜ್ಞಗಳ

ನಡೆಸುವಿಕೆಯ ಅಗತ್ಯವಿಲ್ಲವೆಂದು ಸಾರಿತು. ರಾಮಾನುಜರಿಂದ ಇದು ಹೆಚ್ಚು ಪ್ರಚಲಿತವಾಯಿತು.

ಅರ್ಚಾವತಾರ ಕಲ್ಪನೆಯು ಆಗಮಗಳ ಮುಖ್ಯಭಾಗ. ಇದು ವಿಷ್ಣು ಮತ್ತು ಶ್ರೀ ವೈಷ್ಣವ ಮೂರ್ತಿಗಳ ಆರಾಧನಾ ವಿಧಾನವನ್ನು ಒಳಗೊಂಡಿದೆ. ಈ ಕಲ್ಪನೆಯಲ್ಲಿ ನಿರ್ಮಾಣವಾದ ದೇವಾಲಯಗಳಲ್ಲಿ ಮೇಲುಕೋಟೆಯ ದೇವಾಲಯ ಸೇರುತ್ತದೆ. ಹಲವು ವಿಧದ ವಿಷ್ಣುಮೂರ್ತಿಗಳನ್ನು ಇಲ್ಲಿ ಸ್ಥಾಪಿಸಿ ಆರಾಧಿಸಲಾಗುತ್ತಿದೆ.[2] ಆಗಮದ ಆರಾಧನಾ ಪದ್ಧತಿಯು ಒಮ್ಮತ ಮತ್ತು ಸಹಕಾರಿ ತತ್ವವನ್ನು ಒಳಗೊಂಡಿವೆ. ಜ್ಞಾನ ಮತ್ತು ಕ್ರಿಯೆಗಳ ಸಮಗ್ರತೆಯ ಉದ್ದೇಶವನ್ನು ರೂಪಿಸುತ್ತವೆ. ಆಗಮಗಳು ಧಾರ್ಮಿಕ ಆಚರಣೆಗಳನ್ನು ಸರಳಗೊಳಿಸುತ್ತವೆ (ವೇದಗಳಿಗಿಂತ). ವೈದಿಕ ಆಚರಣೆಗಳು ಆರಾಧನೆಗೆ ಅತ್ಯಂತ ಕಠಿಣವಾಗಿದ್ದವು. ಜನರು ಅನುಭವಿಸುತ್ತಿದ್ದ ವ್ಯಥೆಯನ್ನು ನೋಡಿ, ಅಂತಹಾ ಸಂದಿಗ್ಧ ಕಾಲದಲ್ಲಿ ನಾರಾಯಣನೇ ಆಗಮಗಳನ್ನು ನೀಡಿದನು ಎಂಬ ನಂಬಿಕೆಯಿದೆ.

ಪಾಂಚರಾತ್ರಾಗಮ ಮತ್ತು ಆರಾಧನೆ

ಜನಶೃತಿಯಂತೆ ರಾಮಾನುಜರು ಮೇಲುಕೋಟೆಯಲ್ಲಿ ಭೂಮಿಯಲ್ಲಿ ಹುದುಗಿದ್ದ ನಾರಾಯಣನ ವಿಗ್ರಹವನ್ನು ಹೊರತೆಗೆದು, ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿದರು. ನಂತರ ಇನ್ನಿತರ ದೇವಾಲಯಗಳಂತೆಯೇ ಇವರು ಮೇಲುಕೋಟೆ ದೇವಾಲಯದಲ್ಲಿಯೂ ಪಾಂಚರಾತ್ರ ಆಗಮದಂತೆ ಆರಾಧನಾ ಪದ್ಧತಿಗಳನ್ನು ನಿಯಮಿಸಿದರು. ಪಾಂಚರಾತ್ರ ಆಗಮದ ವಿಧಿಗಳನ್ನು ಅಳವಡಿಸಲು ಕಾರಣಗಳಿವೆ.

1) ಪಾಂಚರಾತ್ರಾಗಮದ ಮಂತ್ರಗಳು ವೇದ ಮಂತ್ರಗಳ ಬದಲಾಗಿ ಉಪಯೋಗಿಸಲ್ಪಡುತ್ತವೆ. ಆದುದರಿಂದ ಇದು ಆರಾಧನಾ ವಿಧಿಯಾಗಿ ಸ್ವೀಕರಿಸಲ್ಪಟ್ಟಿತು.

2) ಈ ವ್ಯವಸ್ಥೆಯಲ್ಲಿ ಮಾತ್ರ ಇರುವಂತೆ, 'ಪಂಚಕಾಲಿಕ ಅನುಷ್ಠಾನ' (ಪರಮ ವೈದಿಕ ಧರ್ಮ) ಎಂದು ಕರೆಯಲ್ಪಡುವ, ಅಭಿಗಾಮನ, ಉಪಾದಾನ, ಇಜ್ಯ, ಸ್ವಾಧ್ಯಾಯ. ಯೋಗಗಳ ವಿವರಣೆಗಳಿವೆ. ಆದುದರಿಂದ ಈ ಶಾಸ್ತ್ರವನ್ನು ಪಾಂಚರಾತ್ರ ಎಂದು ಕರೆಯಲಾಗಿದೆ.

ಪಂಚಕಾಲಿಕ ಅನುಷ್ಠಾನ ಕುರಿತು ಪದ್ಮಸಂಹಿತೆಯು ತಿಳಿಸುವಂತೆ, ದಿನವು 5 ಭಾಗಗಳಾಗಿ ವಿಭಾಗಿಸಲ್ಪಡುತ್ತದೆ. ಅದರಂತೆ

I) **ಅಭಿಗಾಮನ** :– ಸೂರ್ಯೋದಯದೊಂದಿಗೆ ಆರಂಭವಾಗುತ್ತದೆ. ಇಲ್ಲಿ ದೇವರನ್ನು ದೇವಾಲಯದಲ್ಲಿ ಸಾಮಿಪ್ಯಗೊಳ್ಳುತ್ತಾರೆ.

II) **ಉಪಾದಾನ** :– ದಿನದ ಎರಡನೆ ಭಾಗದಲ್ಲಿ ನಿತ್ಯಪೂಜೆಗೆ ಅಗತ್ಯವಾದ ಎಲ್ಲಾ ಪದಾರ್ಥಗಳನ್ನು ಸಂಗ್ರಹಿಸಿ ಇಡುವುದು.

III) **ಇಜ್ಯ** :– ಇಲ್ಲಿ ದೇವರ ಆರಾಧನೆ ಮಾಡಲಾಗುತ್ತದೆ. ಇದು ಮುಖ್ಯವಾದುದು ಹಾಗೂ ದಿನದ ಮಧ್ಯಭಾಗದಲ್ಲಿ ನಡೆಯುತ್ತದೆ.

IV) **ಸ್ವಾಧ್ಯಾಯ** :– ಊಟವಾದ ನಂತರ, ವಿರಾಮದ ವೇಳೆಯಲ್ಲಿ ಪುರಾಣದ ಅಧ್ಯಯನ, ವೇದಾಂತ, ಶೃತಿ, ಸ್ಮೃತಿಗಳ ಅಧ್ಯಯನ ನಡೆಯುತ್ತದೆ. ವೇದಾಂತದಲ್ಲಿ ಆಸಕ್ತಿಯಿರುವವರಿಗೆ ಬೋಧನೆ ನೀಡಲಾಗುತ್ತದೆ ಹಾಗೂ ದೇವರ ನಾಮಸ್ಮರಣೆ ನಡೆಯುತ್ತದೆ.

V) **ಯೋಗ** :– ಊಟದ ನಂತರ ಹಾಗೂ ನಿದ್ರೆಗೂ ಮುನ್ನ ಶಾಂತವಾದ ಕಾಲದಲ್ಲಿ ದೇವರ ಧ್ಯಾನ ಮಾಡುವುದು.

ಹೀಗೆ ದಿನವನ್ನು ಐದು ಭಾಗಗಳಾಗಿ ವಿಂಗಡಿಸಿ ದೇವರ ಧ್ಯಾನ ಮಾಡಲಾಗುತ್ತದೆ.

3) ವೇದಗಳಲ್ಲಿ ಉಲ್ಲೇಖಿತಗೊಂಡಿರುವ ಪಂಚಸಂಸ್ಕಾರಗಳು ಇಲ್ಲಿ ವಿಸ್ತಾರವಾಗಿ ವರ್ಣನೆಗೊಂಡಿವೆ. ವೈದಿಕ ಸಂಸ್ಕಾರವಾದ ಉಪನಯನಗಳಿಂದ ದ್ವಿಜತ್ವ ಸಾಧಿಸಬಹುದಾದರೂ, ಶ್ರೀ ವೈಷ್ಣವ ತತ್ವವನ್ನು ಅರಿಯಲು ಈ ಐದು ಸಂಸ್ಕಾರಗಳು ಅಗತ್ಯವೆನ್ನಲಾಗಿದೆ. ನಂತರ ಏಕಾಂಗಿಯಾಗಿ ದೇವರನ್ನು ಆರಾಧಿಸಬಹುದು. ಇದು ವ್ಯಕ್ತಿಯನ್ನು ನಿಜವಾದ ಶ್ರೀ ವೈಷ್ಣವನನ್ನಾಗಿಸುತ್ತದೆ. ಐದು ಸಂಸ್ಕಾರಗಳೆಂದರೆ

I) ತಪಸಂಸ್ಕಾರ, II) ಪುಂಡ್ರ ಸಂಸ್ಕಾರ, III) ನಾಮಸಂಸ್ಕಾರ, IV) ಮಂತ್ರ ಸಂಸ್ಕಾರ, V) ಯೋಗ ಸಂಸ್ಕಾರ

4) ಶ್ರೀ ವೈಷ್ಣವಧರ್ಮದ ಮುಖ್ಯ ಬುನಾದಿ (ಕೋಟೆ) ಶರಗಾಗತಿ ಸ್ವರೂಪ ಅಥವಾ ಶರಣಾಗತಿಯ ವಿಜ್ಞಾನ ಇಲ್ಲಿ ವರ್ಣಿತವಾಗಿದೆ.

5) ಶುದ್ಧಯಜ್ಞವನ್ನು ಅಳವಡಿಸಿಕೊಳ್ಳಲು ಬೇಕಾದ ವಿಧಾನಗಳನ್ನು ವಿವರವಾಗಿ ವರ್ಣಿಸಲಾಗಿದೆ. ಈ ಶಾಸ್ತ್ರದ ಮುಖ್ಯ ಮಂತ್ರಗಳೆಂದರೆ ಅಷ್ಟಾಕ್ಷರ, ದ್ವಾದಸಾಕ್ಷರ ಮತ್ತು ಷಡಾಕ್ಷರ. ಅವನು (ದೇವರು) ಪೂಜಿಸುವ ಮೂರ್ತಿ, ಉಳಿದ ಇತರ ಮೂರ್ತಿಗಳು ಅವನನ್ನು ಪ್ರೋತ್ಸಾಹಿಸುವ ರೂಪದಲ್ಲಿ ಗೌರವಿಸಲಾಗುತ್ತದೆ.

ಪಾಂಚರಾತ್ರಾಗಮದ ಮಹತ್ವವೆಂದರೆ, ಇದು 2 ಅಂಶಗಳನ್ನು ಒತ್ತಿ ಹೇಳುತ್ತದೆ. 1) ಮೂರ್ತಿ ಪೂಜೆ, 2) ಭಕ್ತಿಮಾರ್ಗ. ಮೂರ್ತಿ ಪೂಜೆಯು ಭಗವದ್ಗೀತೆ ಮತ್ತು ಮಹಾಭಾರತಗಳಿಂದ ಪ್ರೇರಿತವಾಗಿದೆ. ಪಾಂಚರಾತ್ರ ಸಂಪ್ರದಾಯದ ವಿರುದ್ಧವಾದವರು ವಾದಮಾಡುವಂತ, ಭಾಗವತರು ಶೂದ್ರರು ಅವರು ಬ್ರಾಹ್ಮಣರಿಗಿಂತ ಕೆಳಗಿನವರು, ಪಾಂಚರಾತ್ರ ಪೂಜಾವಿಧಿಯು ಅವೈದಿಕ, ಇವರು ವೈದಿಕ ಆಚರಣೆ ಮತ್ತು ನಿಯಮಗಳನ್ನು ತಿರಸ್ಕಾರಿಸಿದ್ದಾರೆ ಹಾಗೂ ಬದಲಾಗಿ ತಮ್ಮದೇ ನಿಯಮಗಳನ್ನು ಸೇರಿಸಿದ್ದಾರೆ. ಆದರೂ ರಾಮಾನುಜರು ಪಾಂಚರಾತ್ರ ವಿಧಾನವನ್ನು ಸ್ವೀಕರಿಸಿದ್ದಾರೆ.[3] ಪಾಂಚರಾತ್ರಗಮವು ನಾರಾಯಣ ಅಥವಾ ವಾಸುದೇವನ ಸಾರ್ವಭೌಮತ್ವವನ್ನು ಎತ್ತಿಹಿಡಿಯುತ್ತದೆ.

ಹೀಗೆ ಈ ರೀತಿಯ ಆರಾಧನೆಯ ವಿಧಿಗಳು ಮೇಲುಕೋಟೆ ದೇವಾಲಯಗಳಲ್ಲಿ ನಿಯೋಜಿತವಾಗಿವೆ. ಇವು ಸರಳವಾಗಿ ಮತ್ತು ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ವಿವರಿಸಲ್ಪಟ್ಟಿವೆ. ಆದುದರಿಂದ ರಾಮಾನುಜರು ಇದರ ಪ್ರಾಮುಖ್ಯತೆಯನ್ನು ದೇವಾಲಯಗಳ ಆರಾಧನೆಯ ಮೂಲಕ ಗುರುತಿಸಿದರು. ಆಚಾರ್ಯರು 900 ವರ್ಷಗಳ ಹಿಂದೆ ಇದನ್ನು ಅಳವಡಿಸಲು ಉದ್ದೇಶಿಸಿದರು. ಅದು ಇಂದಿಗೂ ನಿತ್ಯ, ನೈಮಿತ್ತಿಕ (ವಿಶೇಷ) ಆರಾಧನೆಗಳ ರೂಪದಲ್ಲಿ ಚಾಲನೆಯಲ್ಲಿವೆ.

ದೇವಾಲಯ ಆರಾಧನೆ ಮತ್ತು ವಿಶೇಷ ಉತ್ಸವಗಳು

ಮೇಲುಕೋಟೆ ದೇವಾಲಯಗಳಲ್ಲಿರುವ ಆರಾಧನಾ ಪದ್ಧತಿಯು, ದಕ್ಷಿಣ ಭಾರತದ ಇನ್ನಿತರ ಶ್ರೀವೈಷ್ಣವ ದೇವಾಲಯಗಳಲ್ಲಿರುವಂತೆಯೇ ನಡೆಯುತ್ತಿದ್ದು, ಹೆಚ್ಚಿನ ವ್ಯತ್ಯಾಸಗಳಿಲ್ಲ. ಮೇಲೆ ತಿಳಿಸಿರುವಂತೆ ದೇವಾಲಯದ ಪೂಜಾ ಪದ್ಧತಿಯು ಪಾಂಚರಾತ್ರಾಗಮದ ಪೂಜಾ ಪದ್ಧತಿಯಂತೆ ನಡೆಯುತ್ತದೆ. ಮೇಲುಕೋಟೆಯಲ್ಲಿ ಪಾಂಚರಾತ್ರಾಗಮದ 108 ಸಂಹಿತೆಗಳಲ್ಲಿ ಒಂದಾದ ಈಶ್ವರ ಸಂಹಿತೆಯಂತೆ ಆರಾಧನೆಯನ್ನು ಮಾಡಲಾಗುತ್ತದೆ. ಇದನ್ನು ಸಾತ್ವತ

ಸಂಹಿತೆಗೆ ಬರೆದ ಭಾಷ್ಯವೆಂದು ತೀರ್ಮಾನಿಸಲಾಗಿದೆ. ಕೆಲವು ಸಂದರ್ಭಗಳಲ್ಲಿ ಪದ್ಮ ಸಂಹಿತೆಯ ಪೂಜಾ ನಿಯಮಗಳನ್ನು ಅಳವಡಿಸಲಾಗುತ್ತದೆ. ಏಕೆಂದರೆ ಈಶ್ವರಸಂಹಿತೆಯು ಕೆಲವು ನಿರ್ದಿಷ್ಟ ಅಂಶಗಳನ್ನು ದಾಖಲಿಸದಿದ್ದಾಗ ಮಾತ್ರ ಅಳವಡಿಸಲಾಗುತ್ತದೆ.

ಮೇಲುಕೋಟೆಯ ಆರಾಧನೆ ಮತ್ತು ಉತ್ಸವಗಳ ಕೇಂದ್ರಬಿಂದು, ನಾರಾಯಣಸ್ವಾಮಿ ದೇವಾಲಯ ಸಂಕೀರ್ಣ. ಸ್ಥಳದ ಇನ್ನಿತರ ಎಲ್ಲಾ ದೇವಾಲಯಗಳು ಪದ್ಧತಿಯಂತೆ ಮತ್ತು ನಿಗಧಿತ ಸಂದರ್ಭಗಳಲ್ಲಿ ಮುಖ್ಯ ದೇವಾಲಯದೊಂದಿಗೆ ಧಾರ್ಮಿಕ ಆಚರಣೆಗಳಲ್ಲಿ ಪಾಲ್ಗೊಳ್ಳುತ್ತವೆ. ಇಲ್ಲಿನ ಯೋಗಾನರಸಿಂಹಸ್ವಾಮಿ ದೇವಾಲಯವು ಈ ದೇವಾಲಯದ ಪದ್ಧತಿಗಳನ್ನು ಅಳವಡಿಸಿಕೊಂಡಿದ್ದರೂ, ಪ್ರತ್ಯೇಕತೆಯನ್ನು ಕಾಯ್ದುಕೊಂಡಿದೆ. ಆದುದರಿಂದ ಈ ಎರಡೂ ದೇವಾಲಯಗಳ ಧಾರ್ಮಿಕ ಆಚರಣೆಗಳನ್ನು ಇಲ್ಲಿ ಪ್ರಧಾನವೆಂದು ಪರಿಗಣಿಸಲಾಗಿದೆ.

ದಕ್ಷಿಣ ಭಾರತದ ಇನ್ನಿತರ ಶ್ರೀ ವೈಷ್ಣವ ದೇವಾಲಯದಲ್ಲಿರುವಂತೆ, ಇಲ್ಲಿಯೂ ರಾಮಾನುಜರೇ ದೇವಾಲಯದ ಆರಾಧನಾ ಪದ್ಧತಿಗಳನ್ನು ನಿಯಮಿಸಿದರು ಎಂದು ಸಾಮಾನ್ಯವಾಗಿ ನಂಬಲಾಗಿದೆ. ಆದರೆ ಎಷ್ಟು ಆಚರಣೆಗಳು ಅಂದಿನಿಂದ ಇಂದಿನವರೆಗೂ ಹಾದಿತಪ್ಪದೆ ಮುಂದುವರೆದು ಬಂದಿವೆ ಎಂಬುದನ್ನು ಹೇಳುವುದು ಕಷ್ಟ. ಹಲವು ಶಾಸನಗಳು, ದೇವಾಲಯದಲ್ಲಿದ್ದ ಹಲವು ಆಚರಣೆಗಳು ಮತ್ತು ಉತ್ಸವಗಳ ಕುರಿತು ಮಹತ್ವದ ಬೆಳಕು ಚೆಲ್ಲುತ್ತವೆ. ಹಲವು ದಾನಗಳನ್ನು ನೀಡುವಾಗ ಅದನ್ನು ಬಳಸಬೇಕಾದ ಆಚರಣೆಗಳನ್ನು ಶಾಸನಗಳು ವಿವರಿಸುತ್ತವೆ. ಆದರೆ ಅವುಗಳ ಕಾಲದ ವಿವರ, ವಿಧಾನ ಇತ್ಯಾದಿಗಳನ್ನು ನೋಡಲಾಗುವುದಿಲ್ಲ. ಆಚರಣೆಗಳು ಯಾವಾಗಲೂ ಸಾಂಪ್ರದಾಯಿಕ ಮಿತಿಗಳನ್ನು ಹೊಂದಿರುತ್ತವೆ. ಪ್ರಸ್ತುತ ಇಲ್ಲಿನ ಆಚರಣೆಗಳ ವಿಧಿ ವಿಧಾನಗಳಲ್ಲಿ ಹಿಂದೆ ಇದ್ದ ವಿಧಿ ವಿಧಾನಗಳನ್ನೇ ಮುಂದುವರೆಸುತ್ತಾ ಬಂದಿರುವುದು ಅಸಂಭವನೀಯವಲ್ಲ. ಆದುದರಿಂದ ಪ್ರಸ್ತುತ ಚಾಲ್ತಿಯಲ್ಲಿರುವ ಆಚರಣೆಗಳು ಮತ್ತು ಶಾಸನಗಳು ಒದಗಿಸುವ ಅಂಶಗಳ ಆಧಾರದಿಂದ ದೇವಾಲಯಗಳ ಆರಾಧನಾ ಪದ್ಧತಿಗಳನ್ನು ಅರಿಯಬಹುದಾಗಿದೆ.

ದೇವರಿಗೆ ಪ್ರತಿನಿತ್ಯ ನಡೆಯುವ ಪೂಜೆಗಳು ನಿತ್ಯ ಪೂಜೆಗಳು, ಪಕ್ಷದ ಅಥವಾ ಮಾಸದ ನಿರ್ದಿಷ್ಟ ತಿಥಿಗಳಂದು ನಡೆಯುವ ಪೂಜೆಗಳು ನೈಮಿತ್ತಿಕಗಳು. ಇವುಗಳನ್ನೇ ಪಕ್ಷಪೂಜೆ ಮತ್ತು ಮಾಸ ಪೂಜೆ ಎಂದು ಕರೆಯಲಾಗಿದೆ. ವರ್ಷದ ವಿಶೇಷ ಹಬ್ಬ, ಸಂಕ್ರಮಣ ಇತ್ಯಾದಿ ದಿನಗಳಲ್ಲಿ ನಡೆಯುವ ಪೂಜೆಯನ್ನು ವಿಶೇಷ ಪೂಜೆ ಎನ್ನಲಾಗುತ್ತದೆ.

ನೈಮಿತ್ತಿಕ ಪೂಜೆಗಳು ಸಾಮಾನ್ಯವಾಗಿ ಅಮಾವಸ್ಯೆ, ಪೌರ್ಣಿಮೆ, ಚೌತಿ, ಏಕಾದಶಿ, ದ್ವಾದಶಿ ಮುಂತಾದ ನಿರ್ದಿಷ್ಟ ತಿಥಿಗಳಲ್ಲಿ ನಡೆಯುತ್ತವೆ. ದೇವರನ್ನು ಜೀವಂತ ವ್ಯಕ್ತಿ ಎಂದೇ ಭಾವಿಸಿ ಗೌರವಿಸುವ, ಆಧರಿಸುವ, ಸತ್ಕರಿಸುವ, ಪೂಜಿಸುವ ಕ್ರಿಯೆಯನ್ನು ನಿತ್ಯಪೂಜಾವಿಧಿಯ ಕ್ರಮವನ್ನು ಸ್ಪಷ್ಟಪಡಿಸುತ್ತದೆ.

ನಿತ್ಯ ಕಟ್ಲೆ ಪೂಜೆಗಳು

ಮೇಲುಕೋಟೆಯ ನಾರಾಯಣಸ್ವಾಮಿ ದೇವಾಲಯ ಸಂಕೀರ್ಣದಲ್ಲಿ ಪಾಂಚರಾತ್ರಾಗಮದಂತೆ, ಪ್ರಾತಃಕಾಲಪೂಜೆ, ಮಧ್ಯಾಹ್ನಪೂಜೆ ಹಾಗೂ ಸಾಯಂಕಾಲದ ಪೂಜೆ ಹೀಗೆ ಮೂರು ಅವಧಿಗಳಲ್ಲಿ ಪೂಜೆ ನಡೆಯುತ್ತದೆ. ಪ್ರಸ್ತುತ ನಿತ್ಯಪೂಜೆಗಳು ಇಲ್ಲಿ ಸೂರ್ಯೋದಯದ ಸ್ವಲ್ಪ ಸಮಯದಲ್ಲೇ ಆರಂಭವಾಗುತ್ತದೆ. ನಾರಾಯಣ, ತಯಾರ್ ಮತ್ತು ರಾಮಾನುಜರ ಗುಡಿಗಳ ಪರಿಚಾರಕರು, ಪ್ರಮುಖ ಗುಡಿಗಳ ಮೂರ್ತಿಗಳಿಗೆ ಅಭಿಷೇಕಕ್ಕಾಗಿ, ಕಲ್ಯಾಣಿಯಿಂದ ಪವಿತ್ರ ಜಲವನ್ನು ತರುವರು. ಪವಿತ್ರ ಜಲ ತರುವಾಗ 12 ಜನ ಅಧ್ಯಾಪಕರು ಆಳವಂದಾರ್ ಸ್ತೋತ್ರವನ್ನು ಪಾರಾಯಣ ಮಾಡಿಕೊಂಡು, ಮಂಗಳ ವಾದ್ಯಗಳೊಂದಿಗೆ ಆಗಮಿಸುವರು.[4] ಮೊದಲು ರಾಮಾನುಜರ ಗುಡಿಯಲ್ಲಿ ಪೂಜೆಯನ್ನು ಆರಂಭಿಸುವರು. 12 ಅಧ್ಯಾಪಕರು ನಾರಾಯಣ ಉಪನಿಷತ್ ಮತ್ತು ಪುರುಷಸೂಕ್ತಗಳನ್ನು ಹಾಡುವರು. ತದನಂತರ ಅಷ್ಟೋತ್ತರ ಮತ್ತು ಆರತಿ ಸೇವೆ ಮಾಡಲಾಗುವುದು. ರಾಮಾನುಜರ ಗುಡಿಯಲ್ಲಿ ಪೂಜೆಯಾದ ನಂತರ ನಾರಾಯಣ ದೇವರ ಅರ್ಚಕರು ದೇವಾಲಯದ ಹೊರಭಾಗದಲ್ಲಿ ತಮ್ಮ ಕಾಲುಗಳನ್ನು ತೊಳೆದು ನಾರಾಯಣ ಗುಡಿಯನ್ನು ಪ್ರವೇಶಿಸುವರು. ಅದಕ್ಕೂ ಮುನ್ನ ಗರ್ಭಗೂಡಿಯ ಸುತ್ತಲೂ ಒಂದು ಪ್ರದಕ್ಷಿಣೆ ಬರುವರು. ಮಹಾಮಂಟಪದಲ್ಲಿ ಒಂದು ಬಾರಿ ಘಂಟೆ ಬಾರಿಸಿ ನಂತರ ಪ್ರವೇಶಿಸುವಾಗ, ಪರಿಚಾರಿಕರು ದೀಪಗಳು, ಗುಡಿಯ ಹಿಂದಿನ ದಿನದ ಹೂವುಗಳನ್ನು ತೆಗೆದು ಸ್ವಚ್ಛಗೊಳಿಸುವರು. ಪೂಜಾ ಪಾತ್ರೆಗಳನ್ನೂ ಸ್ವಚ್ಛಗೊಳಿಸುವರು. ನಂತರ ಅರ್ಚಕರು ದೇವರಿಗೆ ಹಾಲನ್ನು ಅರ್ಪಿಸಿ ನಂತರ ಭಕ್ತಾಧಿಗಳಿಗೆ ಹಂಚುವರು. ನಾರಾಯಣ ದೇವರಿಗೆ ಸುಪ್ರಭಾತ ಸೇವೆಯಗಿ, ದೀಪ, ಧೂಪ, ಮಂತ್ರ–ಪುಷ್ಪ ಅಷ್ಟೋತ್ತರಗಳು ನಡೆಯುವುವು. ನಂತರ ಪರದೆಯನ್ನು ಸರಿಸುವರು. ನಂತರ ಕೆಲವು ನಿಮಿಷಗಳು ಭಕ್ತಾಧಿಗಳಿಗೆ ದರ್ಶನಕ್ಕೆ ಅವಕಾಶವಿರುತ್ತದೆ. ಇದನ್ನು ವಿಶ್ವರೂಪದರ್ಶನ ಎಂದು ಕರೆಯುವರು. ಈ ಸಂದರ್ಭದಲ್ಲಿ ಮೂರ್ತಿಯ ಮುಂಭಾಗದಲ್ಲಿ 4 ಜನ ಸ್ಥಾನಿಕರು ದರ್ಪಣವನ್ನು ಹಿಡಿಯುವರು. ಕೆಲವು ಸ್ಥಾನಿಕರು ಚಾಮರ ಬೀಸುವರು. ನಂತರ ಜ್ಯೋತಿಷಿಯು ಪಂಚಾಂಗವನ್ನು ಓದುವನು. ನಂತರ ಆರತಿ ನಡೆದು, ಶ್ರೀ ಯದುಗಿರಿ

ಸುಪ್ರಭಾತವನ್ನು ಆರಂಭಿಸುವರು. ಇದು ಮೂರ್ತಿಯನ್ನು ನಿದ್ರೆಯಿಂದ ಎಬ್ಬಿಸುವ ರೂಪದಲ್ಲಿ ಹಾಡಲ್ಪಡುತ್ತದೆ.

ನಂತರ ತಾಯಾರ್ ಗುಡಿಯಲ್ಲಿ ವಿಶ್ವರೂಪದರ್ಶನವು ನಡೆಯುವುದು, ನಂತರ ಇನ್ನಿತರ ಗುಡಿಗಳಲ್ಲಿ ನಡೆಯುವುದು, ಮೇಲಿನ ಎಲ್ಲಾ ವಿಧಿ ವಿಧಾನಗಳು ಇಲ್ಲಿಯೂ ನಡೆಯುವುವು, ನಿಜವಾಗಿ ಪೂಜೆಯು ಆರಂಭವಾಗುವುದು ನಾರಾಯಣಗುಡಿಯಲ್ಲಿಯೆ. ಆರಾಧನೆಯು 16 ವಿಧದ ವಿಧಿಗಳನ್ನು ಹೊಂದಿವೆ. ಅದನ್ನು ಶೋಡಷ ಉಪಚಾರ ಎನ್ನುವರು. ಮೊದಲು ದೇವರನ್ನು ಆವಾಹನ ಮಾಡುವುದು. ನಂತರ ಆಸನವನ್ನು ನೀಡಲಾಗುವುದು ಮತ್ತು ಪಾದಗಳು ಹಾಗೂ ಕೈಗಳನ್ನು ಸ್ವಚ್ಛಗೊಳಿಸಲು ನೀರನ್ನು (ಜಲ) ಉಪಯೋಗಿಸುವರು. ನಂತರ ಪವಿತ್ರಸ್ನಾನಕ್ಕಾಗಿ ಪವಿತ್ರ ಜಲ ಅರ್ಪಣೆ. ಸ್ನಾನದ ನಂತರ ವಸ್ತ್ರಗಳು, ಜನಿವಾರ, ಗಂಧ, ಪುಷ್ಪಗಳು ಮತ್ತು ಆಭರಣಗಳನ್ನು ಅರ್ಪಿಸುವರು. ನಂತರ ಮೂರ್ತಿಗೆ ಧೂಪ, ದೀಪ, ನೈವೈದ್ಯ ಮತ್ತು ತಾಂಬೂಲಗಳನ್ನು ಅರ್ಪಿಸುವರು. 16ನೇ ಸೇವೆಯು ನಮಸ್ಕಾರದ ಮೂಲಕ ಮುಕ್ತಾಯವಾಗುವುದು.

ನಂತರ ದೇವರ ಮೂರ್ತಿಯ ಎದುರಿನಲ್ಲಿ ಸ್ನಾಪನ–ಬೇರ ಮತ್ತು ಸಾಲಿಗ್ರಾಮಗಳಿಗೆ ಅಭಿಷೇಕ ಮಾಡಲಾಗುತ್ತದೆ. ಅರ್ಚಕರು ಕೂರ್ಮಾಸನದ ಮೇಲೆ ಕೂತು ಮೊದಲು ವಿಶ್ವಕ್ಸೇನರ ಪೂಜೆ ಮಾಡುವರು. ನಂತರ ಎಂಟು ದಿಕ್ಕುಗಳ ಅಧಿಪಾಲಕರಾದ ದಿಕ್ಪಾಲಕರನ್ನು ಆವಾಹನೆ ಮಾಡುವರು. ನಂತರ ಅಧ್ಯಾಪರ ಪುರುಷ ಸೂಕ್ತ, ಶ್ರೀಸೂಕ್ತ ಮತ್ತು ನಾರಾಯಣ ಉಪನಿಷತ್‌ಗಳ ಪಾರಾಯಣದೊಂದಿಗೆ ಅಭಿಷೇಕ ಆರಂಭವಾಗುತ್ತದೆ. ನಂತರ ಮೂರ್ತಿಗೆ ದೀಪ, ನೈವೇದ್ಯ ಮತ್ತು ತಾಂಬೂಲಗಳನ್ನು ಅರ್ಪಿಸುವರು. ಮತ್ತೊಮ್ಮೆ ಶೋಡಷೋಪಚಾರಗಳು ನಡೆಯುತ್ತವೆ. ಈ ಸಂದರ್ಭದಲ್ಲಿ ಈ ಸಂದರ್ಭದಲ್ಲಿ ಅರೆಯರ್‌ರು ದೇವರನ್ನು ಕುರಿತು ತಾಳಹಾಕುತ್ತಾ ದೇವರ ಹಾಡು ಹೇಳುವರು. ನಂತರ ಸಹಸ್ರನಾಮಾರ್ಚನೆ ಮಾಡಲಾಗುತ್ತದೆ. ಅರ್ಚಕರು ಇವುಗಳನ್ನು ಮುಗಿಸುತ್ತಿರುವಾಗ ಪಂಡಿತರು ಆಳವಂದಾರ್ ಸ್ತೋತ್ರ, ಮುಕುಂದಮಾಲಸ್ತೋತ್ರ[5] ಮತ್ತು ಜಿತಾಂತಸ್ತೋತ್ರ[6]ಗಳನ್ನು ಹಾಡುವರು.

ನಂತರ ಮಾತ್ರಾದಾನ ಸೇವೆಯು ನಡೆಯುವುದು ಆಗ ನಾಲ್ಕು ವೇದಗಳು, ಇತಿಹಾಸ, ಭಾಗವತ, ಭಗವದ್ಗೀತೆ. ಯಾದವಗಿರಿ ಮಹಾತ್ಮೆ, ಆಳವಂದಾರ್ ಸ್ತೋತ್ರ, ಶ್ರೀ ಗುಣರತ್ನಕೋಶ,[7] ರಹಸ್ಯತ್ರಯಾಸರ,[8] ಯದುಗಿರಿ ನಾರಾಯಣೋತ್ಸವ[9] ಮತ್ತು ಕನ್ನಡ ರಾಮಾಯಣ[10]ಗಳನ್ನು ಓದಲಾಗುತ್ತದೆ. ನಂತರ ಶೋಡಷೋಪಚಾರಗಳು ಶೆಲ್ವಪಿಳ್ಳೆಯ ಗುಡಿ

ಮತ್ತು ತಾಯಾರ್‌ಗುಡಿಗಳಲ್ಲಿ ನಡೆಯುವವು. ನಂತರ ಶ್ರೀ ತಿರುನಾರಾಯಣ ಸ್ವಾಮಿಯವರ ಆಲಯದಲ್ಲಿ ನಿವೇದನಕ್ಕೆ ಸಿದ್ಧವಾಗಿರುವ ಪೊಂಗಲು, ದಧ್ಯೋದನ, ಮತ್ತು ಶುದ್ಧಾನ್ನವನ್ನು ಎರಡು ಭಾಗ ಮಾಡಿ, ಒಂದು ಭಾಗವನ್ನು ತಿರುನಾರಾಯಣಸ್ವಾಮಿಗೂ, ಯದುಗಿರಿಯಮ್ಮನವರಿಗೂ ನಿವೇದನ ಮಾಡಿ ಮತ್ತೊಂದು ಭಾಗವನ್ನು ಸಂಪತ್ಕುಮಾರನಿಗೆ ನಿವೇದನ ಮಾಡುವರು. ನಿವೇದನ ಕಾಲದಲ್ಲಿ ಗೋಪುರದ ಹೊರಬಾಗಿಲಿನ ಬಳಿ ದೊಡ್ಡ ಘಂಟೆಯನ್ನು ಭಾರಿಸುವರು.

ಕೊನೆಯ ಸೇವೆಯಾಗಿ ಬಲಿಹಾರನ ಸೇವೆಯನ್ನು ನಡೆಸುವರು. ಇದಕ್ಕಾಗಿ ಪ್ರಸಾದವನ್ನು ಯಾಗಶಾಲೆಯಲ್ಲಿಟ್ಟು ಹೋಮ ಮಾಡುವರು. ನಂತರ ಬಲಿ–ಬೇರವನ್ನು ಗರ್ಭಗುಡಿಯ ಸುತ್ತಲೂ ಪಲ್ಲಕ್ಕಿಯಲ್ಲಿಟು ಪ್ರದಕ್ಷಿಣೆ ಮಾಡುವರು. ಬೆಳಿಗ್ಗೆಯ ಪೂಜೆಯು ಮಹಾಮಂಗಳಾರತಿಯೊಂದಿಗೆ ಕೊನೆಯಾಗುತ್ತದೆ. ಅಲಂಕಾರಯುತ ದೀಪದೊಂದಿಗೆ ಇದು ನಡೆಯುತ್ತದೆ. ನಂತರ ಶಾತ್ತುಮೊರೆ ನಡೆಯುತ್ತದೆ. ಇಲ್ಲಿ ಅಧ್ಯಾಪಕರು ಆಳ್ವಾರರಿಂದ ರಚನೆಯಾದ ದಿವ್ಯ ಪ್ರಬಂಧವನ್ನು ಪಠಿಸುವರು. ನಂತರ ಅಲ್ಲಿ ಸೇರಿರುವ ಭಕ್ತಾಧಿಗಳಿಗೆ ತೀರ್ಥವನ್ನು ವಿನಿಯೋಗಿಸುವರು. ಶ್ರೀ ಶಠಾರಿ (ದೇವರ ಪಾದ) ಯನ್ನು ಭಕ್ತರ ತಲೆಯಮೇಲೆ ಇಟ್ಟು ನಂತರ ಪ್ರಸಾದ ವಿನಿಯೋಗಿಸುವರು. ಹೀಗೆ ಬೆಳಗಿನ ಆರಾಧನೆಯು ಕೊನೆಯಾಗುವುದು. ಆ ವೇಳೆಗೆ ಮಧ್ಯಾಹ್ನವಾಗಿರುತ್ತದೆ.

ಸಂಜೆಯ ಪೂಜೆಯು ಸೂರ್ಯಾಸ್ತವಾದ ನಂತರ, ಗೋಪುರದ ಬಾಗಿಲಿನಲ್ಲಿ ಸಂಧ್ಯಾರಾಗದ ಓಲಗವಾಗಿ, ದೀವಟಿಗೆ ಸಲಾಂನೊಂದಿಗೆ ಆರಂಭವಾಗುವುದು. ಇದು ಟಿಪ್ಪುಸುಲ್ತಾನನ ಆಳ್ವಿಕೆಯಲ್ಲಿ ಬಂದಂಥ ಹೆಸರು. ಸಂಜೆಯ ಪೂಜೆಯು ಬೆಳಗಿನ ಪೂಜೆಗಳಂತೆಯೇ ನಡೆಯುತ್ತದೆ. ಬದಲಾಗುವ ಅಂಶಗಳೆಂದರೆ ಸುಪ್ರಭಾತ ಮತ್ತು ಪುರುಷ ಸೂಕ್ತಗಳನ್ನು ಹಾಡುವುದಿಲ್ಲ ಮತ್ತು ಪ್ರಸಾದದಲ್ಲಿ ಬದಲಾವಣೆ. ರಾತ್ರಿ ಪೂಜೆಗೆ ಸಕ್ಕರೆಪೊಂಗಲ್, ವಡೆ ಮತ್ತು ದೋಸೆಗಳನ್ನು ನೈವೇದ್ಯ ಮಾಡುವರು. ನಂತರ ಬೆಳಗಿನಂತೆ ಮಂತ್ರ–ಪುಷ್ಪ, ಗೋಷ್ಠಿಗಳು ನಡೆದು, ತೀರ್ಥ ಪ್ರಸಾದಗಳು ವಿನಿಯೋಗವಾಗುವುವು.

ಎಲ್ಲಾ ವಿಧಿಗಳು ಮುಗಿದ ನಂತರ, ದೇವಾಲಯವನ್ನು ಮುಚ್ಚುವ ಮುನ್ನ ಶುಕ್ರವಾರವನ್ನು ಹೊರತುಪಡಿಸಿ ಒಂದು ಸಣ್ಣ ಸೇವೆ ನಡೆಯುತ್ತದೆ. ಅದೇ ಶಯನೋತ್ಸವ. ಇಲ್ಲಿ ಕ್ಷೀರಾನ್ನವನ್ನು ನಾರಾಯಣಸ್ವಾಮಿಗೂ ಮತ್ತು ಪುರಿಯನ್ನು ಉತ್ಸವಮೂರ್ತಿಯಾದ ಶೆಲ್ವಪಿಳ್ಳೆಮೂರ್ತಿಗೂ ಅರ್ಪಿಸಲಾಗುತ್ತದೆ. ಕ್ಷೀರಾನ್ನವನ್ನು ತಾಯಾರ್ ಗುಡಿಗೂ

ತೆಗೆದುಕೊಂಡು ಹೋಗಲಾಗುವುದು. ನಂತರ ತಾಯಾರ್‌ಗುಡಿಯ ಶಠಗೋಪವನ್ನು ಮೆರವಣಿಗೆಯಲ್ಲಿ ವಾದ್ಯದ ಸಮೇತ ನಾರಾಯಣಸ್ವಾಮಿಗುಡಿಗೆ ತರುವರು.

ಯೋಗಾನರಸಿಂಹಸ್ವಾಮಿ ದೇವಾಲಯದ ನಿತ್ಯಕಟ್ಲೆ ಪೂಜೆಗಳು

ಮುಂಜಾನೆ ದೇವಾಲಯದ ಕಾವಲುಗಾರನು ಬಾಗಿಲನ್ನು ತೆಗೆದ ನಂತರ ಪರಿಚಾರಕರು ಗರ್ಭಗುಡಿಯ ಬಾಗಿಲು ತೆಗೆದು ಅಗ್ರೋದಕ ತಂದು ಪಾತ್ರೆ ಮತ್ತು ಗರ್ಭಗೃಹ ಶುದ್ಧಿಮಾಡಿ ಜಲವನ್ನು ತರಬೇಕು. ಅರ್ಚಕರು ಬಂದು ಘಂಟಾನಾದಮಾಡಿ ವೇದಪಾರಾಯಣ ಭಟ್ಟರಿಗೆ ಉಪನಿಷತ್ ಪಾರಾಯಣ ಮಾಡುವಂತೆ ಹೇಳುವುದು. ಪಾರಾಯಣ ಮಾಡುವಾಗ ತೆರೆಯ ಒಳಗೆ ವಸ್ತ್ರಾಲಂಕಾರ ಮಾಡಿ ದಂತಧಾವನ, ತಾಂಬೂಲ ಮತ್ತು ಶುಂಠಿಬೆಲ್ಲಗಳನ್ನು ನಿವೇದಿಸುವುದು. ನಂತರ ಸಾಲಿಗ್ರಾಮಗಳಿಗೆ ಅಭಿಷೇಕಮಾಡಿ, ಪುಷ್ಪ, ಯಜ್ಞೋಪವೀತ, ಶ್ರೀಗಂಧಧಾರಣೆ ಮಾಡುವುದು. ನಂತರ ತೆರೆಯನ್ನು ತೆಗೆದು ದೂಪಾರತಿ, ಗುಂಬಾರತಿ, ಕರ್ಪೂರದಾರತಿ, ಮಾಡುವರು. ನಂತರ ಮಂತ್ರ ಪುಷ್ಪ, ನರಸಿಂಹಸಹಸ್ರ ನಾಮಾರ್ಚನೆ ಮಾಡಿ ಗುಂಭಾರತಿಯನ್ನು ಗರುಡದೇವರು ಮತ್ತು ಜಯವಿಜಯರಿಗೆ ಅರ್ಪಿಸುವರು. ನಂತರ ಚಿನ್ನದ ತಳಿಗೆಯಲ್ಲಿ ಮೊಸರನ್ನ ನಿವೇದನ ಮಾಡಿದ ನಂತರ ಪರಿಚಾರಕರು ತೀರ್ಥ ತುಳಸಿ ಪ್ರಸಾದವನ್ನು ಆಂಜನೇಯನಿಗೆ ನಿವೇದನವಾದ ನಂತರ, ದೊಡ್ಡ ಮಂಗಳಾರತಿ ಮಾಡುವರು. ನಂತರ ಶಾತ್ತುಮೊರೆ ಮಾಡಿ ಶ್ರೀಮಠ, ಆಚಾರ್ಯಪುರುಷರು ಮತ್ತು ಸರ್ಕಾರಕ್ಕೆ ಮಾಲೆ ಮತ್ತು ನೆರೆದವರಿಗೆ ತೀರ್ಥ ಪ್ರಸಾದ ವಿನಿಯೋಗವಾಗಿ ಬೀಗಮುದ್ರೆ ಮಾಡುವರು.

ಸಾಯಂಕಾಲ ದೀಪಹೊತ್ತಿಸಿದ ನಂತರ ಪರಿಚಾರಕರು ಪಾತ್ರೆಯನ್ನು ಶುದ್ಧಿಮಾಡಿ ದೋಸೆಯನ್ನು ಪ್ರಸಾದವಾಗಿ ನಿವೇದನಕ್ಕೆ ತರುವರು. ಬೆಳಿಗಿನ ಪೂಜೆಯಂತೆಯೇ ಎಲ್ಲಾ ದೇವರಿಗೂ ನಿವೇದನ ಮಾಡುವರು. ದೂಪಾರತಿ, ಗುಂಬಾರತಿ, ಕರ್ಪೂರಾರತಿ, ಮಂತ್ರ ಪುಷ್ಪಗಳಾದ ನಂತರ ಎಂದಿನಂತೆ ಪ್ರಸಾದ ವಿನಿಯೋಗಮಾಡಿ ಬೀಗಮುದ್ರೆ ಮಾಡುವರು.

ಶಾಸನಗಳಲ್ಲಿ ನಿತ್ಯ ಪೂಜೆಗಳು

ಮೇಲುಕೋಟೆಯಲ್ಲಿ ಸಿಗುವ ಶಾಸನಗಳು ತಿಳಿಸುವಂತೆ ದೇವಾಲಯವು ಸ್ಥಾಪನೆಯಾದಂದಿನಿಂದಲೂ ಪ್ರಧಾನ ದೇವರಾದ ನಾರಾಯಣದೇವರ ಮೂರ್ತಿಯು ನಿತ್ಯಪೂಜೆಯನ್ನ ಪಡೆಯುತ್ತಿದೆ. ವಿಜಯನಗರದ ಕಾಲದ ಹೆಚ್ಚಿನ ಶಾಸನಗಳು ದೀಪಾರಾಧನೆ ಮತ್ತು ಪ್ರಸಾದ ನಿವೇದನಗಳಿಗೆ ಕೊಟ್ಟಿರುವ ದಾನಗಳನ್ನು ದಾಖಲೆ

ಮಾಡುತ್ತವೆ. ಕೆಲವು ಶಾಸನಗಳು ಹಲವು, ವಿಧದ ದೀಪಾರಾಧನೆಗಳನ್ನು ದಾಖಲಿಸಿವೆ.[11] ಶಾಶ್ವತವಾದ ದೀಪರಾಧನೆ, ತುಪ್ಪದ ದೀಪಾರಾಧನೆ ಸೇವೆ, ಅಲಂಕಾರಿಕ ದೀಪಾರಾಧನೆಯ ಅಂಶಗಳನ್ನು ಶಾಸನಗಳು ದಾಖಲಿಸಿವೆ. ವಿಜಯನಗರದ ಕಾಲದ ಕಂದಾಯಾಧಿಕಾರಿ ತಿಮ್ಮರಸನು ಕ್ರಿ.ಶ. 1416ರಲ್ಲಿ ದೀಪ ಮತ್ತು ನೈವೇದ್ಯಗಳಿಗಾಗಿ ತನ್ನ ಸೇವೆಯಾಗಿ ಕೆಲವು ಭೂದಾನ ಮಾಡಿದ್ದಾನೆ.[12] ಮತ್ತೊಂದು ಶಾಸನವು ತಿಳಿಸುವಂತೆ. ಕ್ರಿ.ಶ. 1432ರಲ್ಲಿ ವಿಜಯನಗರದ ಅರಸು ದೇವರಾಯನು ನಾರಾಯಣದೇವರಿಗಾಗಿ ದೀಪಗಳನ್ನು ದಾನಮಾಡಿದ್ದಾನೆ. ವಿಜಯನಗರದ ಕಾಲದಲ್ಲಿ, ಭಕ್ತಾಧಿಗಳಿಗಂದ ಹೆಚ್ಚಿನ ಮಟ್ಟದಲ್ಲಿ ಪ್ರಸಾದ ವಿನಿಯೋಗದ ದಾನಗಳು ಕಂಡುಬರುತ್ತವೆ. ಪ್ರಸಾದ ನಿವೇದನವು ಕೇವಲ ವಿಶೇಷ ದಿನಗಳಲ್ಲಿಯೇ ಅಲ್ಲದೆ, ಪ್ರತಿದಿನ ಮತ್ತು ವಿವಿಧ ವಿಭಿನ್ನ ಸೇವೆಗಳ ಕಾಲದಲ್ಲಿಯೂ ವಿನಿಯೋಗವಾಗುತ್ತಿತ್ತು. ವಿಜಯನಗರದ ಮಲ್ಲಿಕಾರ್ಜುನ ರಾಜನ ಕಾಲದ ಒಂದು ಶಾಸನವು ರಾತ್ರಿಯ ಪ್ರಸಾದ ವಿನಿಯೋಗ ಮತ್ತು ದೀಪಾರಾಧನೆಗೆ ಮಂತ್ರಿಯಾಗಿದ್ದ ತಿಮ್ಮಣ್ಣ ದಣ್ಣಾಯಕನು ಮಾಡಿದ ದಾನದ ಕುರಿತು ದಾಖಲಿಸುತ್ತದೆ.[13] ಕ್ರಿ.ಶ. 1524ರ ಒಂದು ಶಾಸನವು, ತಾಯಾರ್ ದೇವಾಲಯಕ್ಕೆ ಪಾಯಸದ ನಿವೇದನೆಗೆ ಅವಕಾಶವಿದ್ದ ಅಂಶವನ್ನು ದಾಖಲಿಸಿದೆ.[14] ಮತ್ತೊಂದು ಅಚ್ಯುತರಾಯನ ಕಾಲಕ್ಕೆ ಸೇರಿದ ಶಾಸನವು ನಿತ್ಯ-ಸಂಧಿ (ದಿನನಿತ್ಯದ ಪ್ರಸಾದ ನಿವೇದನೆ) ಮತ್ತು ಪರಪಾಮುಡ, ಕರಿಯಮುಡು, ನೈಯಮುಡು ಮತ್ತು ಚುರುಲಮುಡು ಎಂಬ ತಿನಿಸುಗಳನ್ನು ದಾಖಲಿಸಿದೆ. ಸದಾಶಿವರಾಯನ ಕಾಲಕ್ಕೆ ಸೇರಿದ ಒಂದು ಶಾಸನವು ದಿನನಿತ್ಯದ ಪ್ರಸಾದ ನಿವೇದನೆಗೆ ಉಪಯೋಗಿಸುವ ಪದಾರ್ಥಗಳ ಪಟ್ಟಿಯನ್ನು ನೀಡಿದೆ. ಅವೆಂದರೆ ಉಪ್ಪು, ಮೆಣಸು, ತುಪ್ಪ ಮತ್ತು ಮೊಸರು ಮತ್ತು ಅಪ್ಪಮ್‌ರ್ ಮತ್ತು ಅತಿರಸ ಎಂಬ ಪ್ರಸಾದಗಳ ಕುರಿತು ದಾಖಲಿಸಿವೆ.[15]

ವಿಶೇಷ ಉತ್ಸವಗಳು

ಪಕ್ಷೋತ್ಸವಗಳು

ಶುಕ್ರವಾರದ ಕಟ್ಟಲೆ : ಪ್ರತಿ ಶುಕ್ರವಾರ ಸಾಯಂಕಾಲ ಚೆಲುವರಾಯಸ್ವಾಮಿ ಉತ್ಸವ ಮೂರ್ತಿಯನ್ನು ತಾಯಾರ್‌ಗುಡಿಗೆ ತಂದು ಅಲ್ಲಿ ತಿರುವಾರಾಧನೆ ಮತ್ತು ಅಷ್ಟೋತ್ತರವು ನಡೆದು ತಳಿಗೆ ನಿವೇದನವಾಗುತ್ತದೆ. ನಂತರ ಕ್ರಮದಂತೆ ತೀರ್ಥ ವಿನಿಯೋಗವಾಗುವುದು. ಈ ದಿವಸ ನಿತ್ಯಪೂಜೆಯಾದ ಶಯನೋತ್ಸವ ಇರುವುದಿಲ್ಲ.

ಏಕಾದಶಿ ಕಟ್ಟಲೆ :- ಈ ದಿವಸ ಸಾಯಂಕಾಲ ನಾರಾಯಣಸ್ವಾಮಿಗೆ ದೀವಟಿಗೆಸಲಾಂ ಆದನಂತರ, ಪುಳಗು-ಕಾಪು (ತಿರುಮಾಲೆ) ಸೇವೆ ಮಾಡಿ ನಂತರ ಪ್ರಸಾದ ನಿವೇದನೆ

ಮಾಡುವರು. ನಂತರ ಆರತಿ ಸಹಸ್ರನಾಮಾರ್ಚನೆ ನಡೆಯುವುದು, ಅಲಂಕಾರ, ನಿವೇದನೆ ಮತ್ತು ಬಲಿಪ್ರಧಾನವಾದ ಕೂಡಲೆ ಗೋಷ್ಠಿಗೆ ಮರ್ಯಾದೆ ನಡೆಯುವುದು.

ದ್ವಾದಶಿ ಕಟ್ಟಲೆ :- ಈ ದಿವಸ ತಿರುನಾರಾಯಣನಿಗೆ ಪಂಚಾಮೃತಸೇವೆ, ತಿರುವಾರಾಧನೆ ಮತ್ತು ಆರತಿಗಳು ನಡೆಯುವುದು. ಉತ್ಸವವನ್ನು ವಸಂತೋದ್ಯಾನ ತೋಟಕ್ಕೆ ತಂದು, ಅಲ್ಲಿ ಅರುಳುಪ್ಪಾಡು ಮರ್ಯಾದೆ ನಡೆದು, ಪ್ರಸಾದ ವಿನಿಯೋಗವಾಗುವುದು.

ಮೇಲಿನವಲ್ಲದೆ ನಾರಾಯಣದೇವರಿಗೆ ಹಸ್ತನಕ್ಷತ್ರದ ಕಟ್ಟಲೆ, ಚಿತ್ತಾನಕ್ಷತ್ರದ ಕಟ್ಟಲೆ, ಆರಿದ್ರಾನಕ್ಷತ್ರದ ಕಟ್ಟಲೆ, ಪುಬ್ಬಾನಿನಕ್ಷತ್ರದ ಕಟ್ಟಳೆ ಎಂಬ ಪ್ರಕ್ಷೋತ್ಸವಗಳು ನಡೆಯುತ್ತವೆ.

ಮಾಸೋತ್ಸವಗಳು

ಮಾಸೋತ್ಸವಗಳು ಅಮಾವಾಸ್ಯೆ ಮತ್ತು ಸಂಕ್ರಮಣದ ದಿನಗಳಲ್ಲಿ ಆಯೋಜಿಸಲಾಗುತ್ತದೆ. ಹಾಗೆಯೇ ನಾರಾಯಣನ ಮೂರ್ತಿಯು ರಾಮಾನುಜರಿಂದ ಪುನರ್ ಪ್ರತಿಷ್ಠಾಪಿತವಾದ ಅಷ್ಪನಕ್ಷತ್ರ, ವೇದಾಂತ ದೇಶಿಕರ ಜನ್ಮನಕ್ಷತ್ರವಾದ ಶ್ರವಣ, ರಾಮಾನುಜರ ಜನ್ಮ ನಕ್ಷತ್ರವಾದ ಆರಿದ್ರಾ, ತಾಯಾರ್ ಜನ್ಮ ನಕ್ಷತ್ರವಾದ ಪುಬ್ಬ ನಕ್ಷತ್ರಗಳಂದು ಆಯೋಜಿಸುವರು. ಅಮಾವಾಸ್ಯೆಯಲ್ಲಿ ಸಂಕ್ರಮಣ ಮತ್ತು ಚೈತ್ರ ನಕ್ಷತ್ರದ ದಿನಗಳಂದು ಚೆಲುವರಾಯಸ್ವಾಮಿಯ ಮೆರವಣಿಗೆ ನಡೆಸುವರು. ಶ್ರವಣ ನಕ್ಷತ್ರದಂದು, ನಗರದ ಸುತ್ತ ದೇವರ ಮೆರವಣಿಗೆ ಮಾಡಿ ಉತ್ಸವವನ್ನು ವೇದಾಂತ ದೇಶಿಕರ ಮತ್ತು ಪಿಳ್ಳೈಲೋಕಾಚಾರ್ಯರ ದೇವಾಲಯಗಳಿಗೆ ತರುವರು. ಅರಿದ್ರಾ ನಕ್ಷತ್ರದಂದು ರಾಮಾನುಜರ ಮೂರ್ತಿಗೆ ಅಭಿಷೇಕ ಮಾಡುವರು ನಂತರ ಅವರ ಮೂರ್ತಿಯನ್ನು ಊರಿನ ಸುತ್ತ ಮೆರವಣಿಗೆ ಮಾಡುವರು. ಸದಾಶಿವರಾಯನ ಕಾಲದ ಎರಡು ಶಾಸನಗಳು ರಾಮಾನುಜರ ಮಾಸ ತಿರುನಕ್ಷತ್ರದ ಕುರಿತು ಉಲ್ಲೇಖಿಸುತ್ತವೆ.[16] ಪುಬ್ಬಾ ನಕ್ಷತ್ರದಂದು ತಾಯರ್ ದೇವಾಲಯದಲ್ಲಿ ವಿಶೇಷವಾದ ಪ್ರಸಾದ ವಿನಿಯೋಗವಾಗುತ್ತದೆ. ಶಾತ್ತುಮೊರೆ ತಿರುಪ್ಪಾವಿಯೊಂದಿಗೆ ತಾಯರ್ ದೇವರನ್ನು ನಗರದ ಸುತ್ತ ಮೆರವಣಿಗೆ ಮಾಡುವರು.

ವಾರ್ಷಿಕ ಉತ್ಸವಗಳು

ಮೇಲುಕೋಟೆ ನಾರಾಯಣಸ್ವಾಮಿ ದೇವಾಲಯ ಸಂಕೀರ್ಣದಲ್ಲಿ ವರ್ಷದಲ್ಲಿ 44 ಮಹತ್ವದ ಉತ್ಸವಗಳು ನಡೆಯುತ್ತವೆ.

1) ಯುಗಾದಿ

2) ಬ್ರಹ್ಮೋತ್ಸವ ಅಥವಾ ವೈರಮುಡಿ ಉತ್ಸವ (ಹನ್ನೊಂದು ದಿನದ ಉತ್ಸವ)

3) ಕೋಡೈ – ತಿರುನಾಳ್

4) ರಾಮಾನುಜರ ತಿರುನಕ್ಷತ್ರ

5) ಮೊದಲಿಯಾಂಡಾನ್ ತಿರುನಕ್ಷತ್ರ

6) ವಸಂತೋತ್ಸವ

7) ಮಧುರಕವಿ ಆಳ್ವಾರ್ ತಿರುನಕ್ಷತ್ರ

8) ನಮ್ಮಾಳ್ವಾರ್ ತಿರುನಕ್ಷತ್ರ (ಹತ್ತು ದಿನಗಳ ಉತ್ಸವ)

9) ಹನುಮಜಯಂತಿ

10) ತಾಯಾರ್ ವಸಂತೋತ್ಸವ

11) ಪಲ್ಲವೋತ್ಸವ (ಮೂರು ದಿನಗಳ ಉತ್ಸವ)

12) ಸರ್ವ–ಏಕಾದಶಿ

13) ಉಯ್ಯಾಲೋತ್ಸವ

14) ದೊಡ್ಡ ಉಯ್ಯಾಲೋತ್ಸವ

15) ಚಕ್ರತ್ತಾಳ್ವಾರ್ ತಿರುನಕ್ಷತ್ರ

16) ಕೃಷ್ಣರಾಜ ತಿರುನಾಳ್ (10 ದಿನಗಳ ಉತ್ಸವ)

17) ತಾಯಾರ್ ಹುಟ್ಟಿದ ದಿನ

18) ಆದಿಶುಕ್ರವಾರ ಉಪಕರ್ಮ

19) ಉಪಕರ್ಮ

20) ಕೃಷ್ಣ ಜಯಂತಿ

21) ಗಣೇಶನ ಹಬ್ಬ

22) ವೇದಾಂತಾಚಾರ್ಯರ ತಿರುನಕ್ಷತ್ರ (10 ದಿನಗಳ ಉತ್ಸವ)

23) ಪವಿತ್ರೋತ್ಸವ (ಐದು ದಿನಗಳ ಉತ್ಸವ)

24) ನವರಾತ್ರಿ ಉತ್ಸವ (ಹತ್ತು ದಿನದ ಉತ್ಸವ)

25) ಜೀಯರ್ ತಿರುನಕ್ಷತ್ರ (ಹತ್ತು ದಿನದ ಉತ್ಸವ)

26) ಪಿಳ್ಳೈ ಲೋಕಾಚಾರ್ಯರ ತಿರುನಕ್ಷತ್ರ (ಹತ್ತು ದಿನಗಳ ಉತ್ಸವ)

27) ನರಕ ಚತುರ್ದಶಿ

28) ದೀಪಾವಳಿ

29) ಅಷ್ಟ ತೀರ್ಥೋತ್ಸವ

30) ತಿರುಮಂಗಿ ಆಳ್ವಾರರ ತಿರುನಕ್ಷತ್ರ

31) ಕೃತ್ತಿಕೋತ್ಸವ

32) ಧನುರ್ಮಾಸೋತ್ಸವ (1 ತಿಂಗಳ ಉತ್ಸವ)

33) ಕೊಠಾರೋತ್ಸವ (10 ದಿನಗಳ ಉತ್ಸವ)

34) ಮಕರ ಸಂಕ್ರಾಂತಿ

35) ಕನು ಉತ್ಸವ

36) ಅಲ್ಲಂ ತಲ್ಲಂ ತೆರಪು

37) ಗರುಡ ಜಯಂತಿ

38) ಮಧ್ವನವಮಿ

39) ರಾಮಾನುಜರು ತೊಂಡನೂರಿನಿಂದ ಮೇಲುಕೋಟೆಗೆ ಬಂದ ದಿವಸ

40) ತೆಪ್ಪೋತ್ಸವ (3 ದಿವಸಗಳ ಉತ್ಸವ)

41) ಡೆಲ್ಲಿ ಉತ್ಸವ

42) ಸುಬ್ರಾಯನ ಷಷ್ಠಿ

43) ಗ್ರಾಮದೇವತೆಯ ಹಬ್ಬ

44) ರಾಮನವಮಿ

ಆಚರಣೆಗಳ ನಿಯಮ ಮತ್ತು ಕಾರ್ಯವಿಧಾನಗಳು ಇತರ ಶ್ರೀವೈಷ್ಣವ ದೇವಾಲಯಗಳಲ್ಲಿರುವಂತೆಯೇ ಇದೆ. ಆದರೆ ಕೆಲವು ಸ್ಥಳೀಯ ಹಬ್ಬಗಳು ಆಗಮಗಳಲ್ಲಿ

ಉಲ್ಲೇಖವಾಗಿಲ್ಲದಿದ್ದರೂ, ಕಾಲಾಂತರದಲ್ಲಿ ಬೆಳವಣಿಗೆಗೊಂಡು ಪ್ರತ್ಯೇಕತೆಯನ್ನು ಕಾಯ್ದುಕೊಂಡಿವೆ.

ಗಮನಾರ್ಹ ಅಂಶವೆಂದರೆ ಮೇಲುಕೋಟೆಯಲ್ಲಿ ವೈಷ್ಣವಮತದ ಉಪಪಂಗಡವಾದ ಮಂಡ್ಯಂ ಪಂಗಡದ ಬ್ರಾಹ್ಮಣರು ನರಕಚತುರ್ದಶಿ (ದೀಪಾವಳಿ) ಹಬ್ಬವನ್ನು ಆಚರಿಸುವುದಿಲ್ಲ. ಅದರಲ್ಲಿಯೂ ಭಾರಧ್ವಾಜ ಮತ್ತು ಶ್ರೀವತ್ಸ ಗೋತ್ರಗಳಿಗೆ ಸೇರಿದ ಬ್ರಾಹ್ಮಣರು ಕಡ್ಡಾಯವಾಗಿ ಹಬ್ಬವನ್ನು ಆಚರಿಸುವುದಿಲ್ಲ. ಕಾರಣವೆಂದರೆ ಈ ದಿವಸದಂದು ಇದೇ ಗೋತ್ರಕ್ಕೆ ಸೇರಿದ ಕೆಲವು ಬ್ರಾಹ್ಮಣರನ್ನು ಟಿಪ್ಪುಸುಲ್ತಾನನು ಶ್ರೀರಂಗಪಟ್ಟಣದ ನರಸಿಂಹಸ್ವಾಮಿ ದೇವಾಲಯದ ಎದುರು ಆನೆಯ ಕಾಲುಗಳಿಗೆ ಕಟ್ಟಿ ಎಳೆಸಿ ಕ್ರೂರವಾಗಿ ಕೊಂದನೆಂದು, ಇವರು ಹಬ್ಬದ ಆಚರಣೆಯನ್ನು ಕೈಬಿಟ್ಟರು. ಈ ಕರಾಳ ಕಹಿ ನೆನಪನ್ನು ಮರೆಯಲು ಈ ತೀರ್ಮಾನಕ್ಕೆ ಬಂದರು ಎಂದು ಈ ವಂಶಸ್ಥರು ಸಂದರ್ಶನದ ಸಂದರ್ಭದಲ್ಲಿ ತಿಳಿಸಿರುತ್ತಾರೆ.

ವಿಶೇಷವೆಂದರೆ ಈ ದುರಂತದ ಹಿಂದೆ ಧಾರ್ಮಿಕ ಕಾರಣವಿದ್ದಂತೆ ಕಂಡಬರುವುದಿಲ್ಲ. ಏಕೆಂದರೆ ಟಿಪ್ಪು ಮೇಲುಕೋಟೆ ದೇವಾಲಯಗಳಿಗೆ ನೀಡಿದ ದಾನ ಮತ್ತು ಮೃಧು ಧೋರಣೆಗಳಿಂದ ಈ ನಿರ್ಧಾರಕ್ಕೆ ಬರಬಹುದು. ಮೈಸೂರು ಸಂಸ್ಥಾನವನ್ನು ಮದ್ರಾಸಿನ ಬ್ರಿಟಿಷರ ಜೊತೆ ಕೈಜೋಡಿಸಿ ಮಾಡುತ್ತಿದ್ದ ರಾಜಕೀಯದಲ್ಲಿ ಮಂಡ್ಯಂ ವೈಷ್ಣವ ಪಂಗಡದ ಬ್ರಾಹ್ಮಣರು ಸ್ವಾಮಿ ನಿಷ್ಠೆಯನ್ನು ಮೈಸೂರು ಒಡೆಯರಿಗೆ ತೋರಿದರು. ಮಾಧವರಾವ್ ಮತ್ತು ತಿರುಮಲರಾವ್ ಸಂಧಾನಕ್ಕೆ ಬ್ರಿಟಿಷರ ಬಳಿಗೆ ಹೋದರು. ಇವರು ಇದೇ ಪಂಗಡದವರು ಎಂದು ನಂಬಲಾಗಿದೆ. ಇದರಿಂದ ಕುಪಿತನಾದ ಟಿಪ್ಪುಸುಲ್ತಾನನು ಈ ವಂಶದ ಕೆಲವು ಅಧಿಕಾರಿಗಳನ್ನು ಕ್ರೂರವಾಗಿ ಶಿಕ್ಷಿಸಿ ಕೊಂದದ್ದು ಹಬ್ಬದ ಆಚರಣೆಯ ವಿರೋಧಕ್ಕೆ ಕಾರಣವಾಯಿತು. ಆದರೆ ಉಳಿದ ಎಲ್ಲಾ ವೈಷ್ಣವ ಬ್ರಾಹ್ಮಣರು ದೀಪಾವಳಿ ಹಬ್ಬವನ್ನು ಸಂಭ್ರಮದಿಂದ ಆಚರಿಸುವರು. ಅಲ್ಲದೆ ದೇವಾಲಯದಲ್ಲಿ ಪಂಚಾಮೃತಾಭಿಷೇಕ, ಮಂಟಪೋತ್ಸವ ಕಟ್ಟೈಲೆ ನಡೆದು ಗ್ರಾಮ ಪ್ರದಕ್ಷಿಣೆ ಮಾಡುವರು ಶೇಷ ವಾಹನೋತ್ಸವವು ಈ ಹಬ್ಬದ ವಿಶೇಷವಾಗಿದೆ.

ಮೇಲುಕೋಟೆಯ ದೇವಾಲಯದ ಸಾಮಿಪ್ಯ ನಡೆಯುವ ಉತ್ಸವಮೂರ್ತಿಯ ಬಹುಪಾಲು ಉತ್ಸವಗಳು, ಸಾರ್ವಜನಿಕ ಉತ್ಸವಗಳಾಗಿವೆ. ಕೆಲವು ಉತ್ಸವಗಳು ಮಾತ್ರ

ದೇವಾಲಯದ ಮುಖ್ಯ ಅರ್ಚಕರ ನೇತೃತ್ವವದಲ್ಲಿ ಪ್ರತ್ಯೇಕವಾಗಿ ಆಚರಿಸಲ್ಪಡುತ್ತವೆ. ಉತ್ಸವಗಳು ನೋಡುವವರ ಮನಸ್ಸಿನಲ್ಲಿ ಕೇವಲ ಆಧ್ಯಾತ್ಮಿಕತೆಯನ್ನು ಪ್ರೇರೇಪಿಸದೆ, ಅದು ಅವರಿಗೆ ಹರ್ಷವನ್ನು (ನಲಿವಿನ) ಉಂಟುಮಾಡುತ್ತದೆ. ದೇವರ ಉತ್ಸವದ ಮುಂದೆ ಮತ್ತು ಹಿಂದೆ ಆಯ್ದ ದಿವ್ಯಪ್ರಬಂದ ಮತ್ತು ವೇದಗಳನ್ನು ಪಠಿಸಲಾಗುತ್ತದೆ. ನಾದಸ್ವರ, ಡೋಲು, ಶೃತಿ, ಕೊಂಬುಗಳನ್ನು ಒಳಗೊಂಡು ವಾದ್ಯಗಾರರು ಸಂಗೀತವನ್ನು ನುಡಿಸುತ್ತಿರುತ್ತಾರೆ.

ಉತ್ಸವಗಳು ಭಕ್ತಾಧಿಗಳ ಕನಸನ್ನು ಪರಿಪೂರ್ಣಗೊಳಿಸುವ ಉದ್ದೇಶ ಮತ್ತು ವೇದಗಳು ನೀಡದ ಹಂಬಲವನ್ನು (ಹೆಬ್ಬಯಕೆ) ಒದಗಿಸುತ್ತವೆ. ಪ್ರತಿಯೊಂದು ಉತ್ಸವಗಳು ಆಧ್ಯಾತ್ಮಿಕ ಮಹತ್ವದೊಂದಿಗೆ ಸಶಕ್ತಗೊಳಿಸುತ್ತವೆ. ಈ ಹಿನ್ನೆಲೆಯಲ್ಲಿ ವಿಶೇಷವಾದ ಮತ್ತು ಮಹತ್ವದ ಕೆಲವು ಉತ್ಸವಗಳ ಚಿತ್ರಣವನ್ನು ಉಲ್ಲೇಖಿಸಬಹುದು.[17]

ವಸಂತೋತ್ಸವ : ಈ ಉತ್ಸವವನ್ನು ವೈಶಾಖಮಾಸದಲ್ಲಿ ಮೂರು ದಿವಸಗಳ ಕಾಲ ನಡೆಸಲಾಗುತ್ತದೆ. ಈ ದಿನದಂದು ಚೆಲುವರಾಯಸ್ವಾಮಿಯನ್ನು ಸಂಗಾತಿಯಿಂದ ಬೇರ್ಪಡಿಸಿ ಪ್ರತಿದಿನ ಮೆರವಣಿಗೆ ಮಾಡುವರು. ಮೊದಲ ಎರಡು ದಿವಸ ಉಬಯ ನಾಚ್ಚಿಮಾರ್‌ಳನ್ನು ಪ್ರತ್ಯೇಕವಾದ ಹಳದಿ ವಸ್ತ್ರದಿಂದ ಮುಚ್ಚಿರುವ ಪಲ್ಲಕ್ಕಿಯಲ್ಲಿ ಚೆಲುವರಾಯನ ಸುತ್ತ ಮೆರವಣಿಗೆ ಮಾಡುವರು. ಕೊನೆಯ ದಿವಸ ಮಕ್ಕಳು ಬಣ್ಣದ ನೀರನ್ನು ಎರಚಿಕೊಳ್ಳುವರು ಮತ್ತು ಹೋಳಿಹಬ್ಬದ ಓಕುಳಿಯಾಟದಂತೆ ಆಡುವರು. ಇದು ವಸಂತಮಂಟಪದಲ್ಲಿ ನಡೆಯುತ್ತದೆ. ಇದು ಬೇಸಿಗೆಯಲ್ಲಿ ದೇವರು ಆಡುತ್ತಿದ್ದ ನೀರಿನ ಆಟವನ್ನು ನೆನಪಿಸುತ್ತದೆ. ಕ್ರಿ.ಶ. 1432ರ ಒಂದು ಶಾಸನವು ವಸಂತೋತ್ಸವದ ಆರಂಭಿಕ ದಾಖಲೆಯನ್ನು ನೀಡಿದೆ.[18]

ಪಲ್ಲವೋತ್ಸವ : ಇದು ಏಳು ದಿವಸಗಳ ಉತ್ಸವ. ಇದು ಸಾಮಾನ್ಯವಾಗಿ ಜೂನ್ ತಿಂಗಳಿನಲ್ಲಿ ಬರುತ್ತದೆ. ಚೆಲುವರಾಯಸ್ವಾಮಿಯು ತನ್ನ ಸಂಗಾತಿಯೊಂದಿಗೆ ರಾಮಾನುಜಗುಡಿಯ ಮುಂಭಾಗಕ್ಕೆ ತೆರಳಲ್ಪಡುವನು ಮತ್ತು ಅಭಿಷೇಕ ಮಾಡಲಾಗುತ್ತದೆ. ಅಲಂಕಾರವಾದ ನಂತರ ದೇವರು ಕುರ್ಕದಲ್ಲಿ ಆವಾಹಿಸಲ್ಪಡುವುದು ಮತ್ತು ಸಣ್ಣ ಮಂಚದ ಮೇಲೆ ಇಡಲಾಗುವುದು. ಇದು ಸುಂದರವಾಗಿ ಅಲಂಕರಿಸಲ್ಪಟ್ಟ ಹಾಸಿಗೆ ಮತ್ತು ದಿಂಬುಗಳ ಜೊತೆಗೆ ತಾಜಾ ಹೂವುಗಳು ಮತ್ತು ಹೂವಿನ ಮೊಗ್ಗನ್ನು ಮಂಚದ ಮೇಲೆ ಇಡಲಾಗುವುದು. ಈ ಸಂದರ್ಭದಲ್ಲಿ ಕೊಳಲು ಮತ್ತು ಇತರ ಸಂಗೀತದ ಉಪಕರಣಗಳೊಂದಿಗೆ ನೃತ್ಯ ಮಾಡಲಾಗುತ್ತದೆ. ಜನಶೃತಿಯಿರುವಂತೆ ವೀಣೆಶೇಷಣ್ಣ ಬಿಡರಂ ಕೃಷ್ಣಪ್ಪ, ವಾಸುದೇವಾಚಾರ್ಯ ಮುಂತಾದ ಮೈಸೂರು ಅರಮನೆಯ ಸಂಗೀತ ದಿಗ್ಗಜರು ಈ

ಉತ್ಸವದ ಏಳು ದಿನಗಳು ಇಲ್ಲಿದ್ದು ಸಂಜೆಯುವೇಳೆ ಸಂಗೀತವನ್ನು ನುಡಿಸುವ ಮೂಲಕ ತಮ್ಮ ಸೇವೆ ಸಲ್ಲಿಸುತ್ತಿದ್ದರು.

ಪವಿತ್ರೋತ್ಸವ

ಈ ಉತ್ಸವವು ಸೆಪ್ಟಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ 7 ದಿವಸಗಳ ಕಾಲ ನಡೆಯುತ್ತದೆ. ಇದನ್ನು ಪ್ರಾಯಶ್ಚಿತ್ತೋತ್ಸವ ಎಂದೂ ಕರೆಯುವರು. ಇದನ್ನು ದೇವರ ಸೇವೆಯಲ್ಲಿ ವರ್ಷವಿಡೀ ಆಗಿರುವ ತಪ್ಪುಗಳು, ದೋಷಗಳು ಮತ್ತು ಲೋಪಗಳನ್ನು ಕ್ಷಮಿಸುವಂತೆ ಕೇಳಲು ಆಯೋಜಿಸಲಾಗುತ್ತದೆ. ಎಲ್ಲಾ ಯಜುರ್ವೇದ ಏಳು ಪರ್ವಗಳನ್ನು (ಖಂಡ) ಪಾರಾಯಣ ಮಾಡುವರು. ಇದಕ್ಕಾಗಿ ಶೆಲ್ವಪಿಳ್ಳೆ ಗುಡಿಯ ಮುಂದಿನ ನವರಂಗಮಂಟಪದಲ್ಲಿ ವೇದಿಕೆಯನ್ನು ಮಾಡುವರು. ಮಂಡಲವನ್ನು ರಚಿಸಲಾಗುತ್ತದೆ. ಕಂಬದ ಹಿಂದೆ ರಾಜಒಡೆಯರ ಚಿತ್ರವಿರುವ 9 ಕಳಸಗಳನ್ನು ಇಡಲಾಗುತ್ತದೆ. ಇವುಗಳನ್ನು ಹೂಮಾಲೆ ರೇಷ್ಮೆ ಜನಿವಾರದಿಂದ ಅಲಂಕರಿಸುವರು. ಇದು ನಿಗಮ ಮತ್ತು ಆಗಮಗಳ ಸಂಯುಕ್ತ ಉತ್ಸವವಾಗಿದೆ. ಅಂತಿಮವಾಗಿ ಉತ್ಸವದಲ್ಲಿ ಉಪಯೋಗಿಸಿದ ವಸ್ತುಗಳನ್ನು ಆಚಾರ್ಯರು ಮತ್ತು ಭಕ್ತರಿಗೆ ಹಂಚುವರು.

ತೆಪ್ಪೋತ್ಸವ :– ಈ ಉತ್ಸವದಲ್ಲಿ ದೇವರನ್ನು ಕುದುರೆಯ ವಾಹನೋತ್ಸವದಲ್ಲಿ ಗ್ರಾಮ ಪ್ರದಕ್ಷಿಗೆ ಮಾಡಿ, ದೇವಾಲಯದ ಕಲ್ಯಾಣಿಗೆ ತರಲಾಗುವುದು. ಅಲ್ಲಿ ತೆಪ್ಪದ ಮೇಲೆ ದೇವರನ್ನು ಅಲಂಕರಿಸಿ ಕಲ್ಯಾಣಿಯನ್ನು ಮೂರು ಪ್ರದಕ್ಷಿಣೆ ಮಾಡುವರು. ಎರಡು ಶಾಸನಗಳು ತೆಪ್ಪೋತ್ಸವವನ್ನು ಉಲ್ಲೇಖಿಸಿವೆ.[19] ಪ್ರಸ್ತುತ ಚಾಲ್ತಿಯಲ್ಲಿರುವಂತೆ ಉತ್ಸವವವು ಕೇವಲ 3 ದಿನಗಳ ಕಾಲ ನಡೆಯುತ್ತದೆ. ಒಂದು ಶಾಸನದಲ್ಲಿ 10 ದಿನಗಳ ಉತ್ಸವವೆಂದು ಉಲ್ಲೇಖಿಸಿದೆ. ಮತ್ತೊಂದು ಶಾಸನದಲ್ಲಿ ಕ್ರಿ.ಶ. 1535ರಲ್ಲಿ ಅಚ್ಯುತರಾಯನು ಉತ್ಸವದ ಏಳನೇ ದಿವಸದದ ಪ್ರಸಾದದ ತಯಾರಿಗೆ ಹಣವನ್ನು ದಾನಮಾಡಿರುವ ಅಂಶ ದಾಖಲಿಸುತ್ತದೆ.[20]

ಕೊಠಾರೋತ್ಸವ :– ಧನುರ್ಮಾಸೋತ್ಸವದ (10 ದಿನಗಳು) ಕೊನೆಯ ದಿವಸದಂದು ಕೊಠಾರೋತ್ಸವ ನಡೆಯುತ್ತದೆ. ಈ ದಿವಸ ಉತ್ಸವಮೂರ್ತಿಯನ್ನು ದೇವಾಲಯದ ಸುತ್ತಲೂ ಮೆರವಣಿಗೆ ಮಾಡುವರು ಮತ್ತು ವಿಶ್ವಕ್ಸೇನರ ಮೂರ್ತಿ ಮತ್ತು ಆಳ್ವಾರರ ಮೂರ್ತಿಗಳನ್ನು ಸಹ ಮೆರೆಸುವರು. ಈ ಉತ್ಸವದಲ್ಲಿ ಹಲವು ಆಳ್ವಾರರು ದೇವಾಲಯದ ಗೌರವಕ್ಕೆ ಪಾತ್ರರಾಗುವರು. ಕ್ರಿ.ಶ. 1544ರ ಸದಾಶಿವರಾಯನ ಕಾಲದ ಶಾಸನವೊಂದು ಕೊಠಾರೋತ್ಸವವನ್ನು ಉಲ್ಲೇಖಿಸಿದೆ.[21]

ತಿರುನಕ್ಷತ್ರಗಳು :- ಆಳ್ವಾರರು ಮತ್ತು ಆಚಾರ್ಯರು ಜನ್ಮಪಡೆದ ಜನ್ಮ ನಕ್ಷತ್ರಗಳಂದು ತಿರುನಕ್ಷತ್ರದ ಉತ್ಸವಗಳನ್ನು ಮಾಡುವರು. ಕೆಲವು ಸಲ ಉತ್ಸವಮೂರ್ತಿಯನ್ನು ಸಂಬಂಧಿಸಿದ ಆಳ್ವಾರರ ಗುಡಿಗಳಿಗೆ ಕೊಂಡೊಯ್ಯುವರು. ಅಲ್ಲಿ ವಿಶೇಷವಾಗಿ ಗೌರವಿಸಲ್ಪಡುವರು. ನಮ್ಮಾಳ್ವಾರ್, ವೇದಾಂತ ದೇಶಿಕರು, ಪಿಳ್ಳೈ ಲೋಕಾಚಾರ್ಯ, ಪೆರಿಯ ಜೀಯರ್ ಮತ್ತು ರಾಮಾನುಜರ ತಿರುನಕ್ಷತ್ರಗಳನ್ನು 10 ದಿನಗಳ ಕಾಳ ಆಯೋಜಿಸುವರು.

ರಾಮಾನುಜರ ತಿರುನಕ್ಷತ್ರದಲ್ಲಿ ಪ್ರತಿದಿನ ಅಭಿಷೇಕ ಮತ್ತು ವಿಶೇಷ ಪೂಜೆ ಮಾಡಲಾಗುವುದು. ಸಂಜೆಯಲ್ಲಿ ರಾಮಾನುಜರ ಮೂರ್ತಿಯನ್ನು ಮೆರವಣಿಗೆ ಮಾಡುವರು. 10 ದಿನಗಳ ಕಾಲ ನಡೆಯುವ ಈ ಉತ್ಸವ ಇವರ ಹುಟ್ಟಿದ್ದ ನಕ್ಷತ್ರದ ಕೊನೆಯ ದಿನ ವಿಶೇಷವಾದ ಪೂಜೆ ಮಾಡುವರು. ಕ್ರಿ.ಶ. 1544ರ ಸದಾಶಿವರಾಯನ ಒಂದು ಶಾಸನವು ಮೊದಲಿಗೆ ರಾಮಾನುಜರ ತಿರುನಕ್ಷತ್ರದ ಕುರಿತು ಉಲ್ಲೇಖಿಸುತ್ತದೆ.[22] ಕ್ರಿ.ಶ. 1564ರ ಮತ್ತೊಂದು ಶಾಸನವು ರಾಮಾನುಜರ ತಿರುನಕ್ಷತ್ರದ ರಥೋತ್ಸವಕ್ಕೆ ನೀಡಿರುವ ದಾನದ ಕುರಿತು ಮಾಹಿತಿ ನೀಡುತ್ತದೆ.[23] ಕ್ರಿ.ಶ. 1564 ಮತ್ತು ಕ್ರಿ.ಶ. 1471ರ ಶಾಸನಗಳಲ್ಲಿಯೂ ಆಳ್ವಾರರ ತಿರುನಕ್ಷತ್ರದ ಕುರಿತು ಉಲ್ಲೇಖಗಳಿವೆ.[24] ಕ್ರಿ.ಶ. 1360ರ ಒಂದು ಶಾಸನವು ನಮ್ಮಾಳ್ವಾರರ ತಿರುನಕ್ಷತ್ರದ ಉತ್ಸವವನ್ನು ಉಲ್ಲೇಖಿಸಿದೆ.[25] ಕ್ರಿ.ಶ. 1564ರ ಶಾಸನವು ಪೆರಿಯ ಜೀಯರ್ ತಿರುನಕ್ಷತ್ರವನ್ನು ಉಲ್ಲೇಖಿಸಿದೆ.[26] ಕ್ರಿ.ಶ. 1564ರ ಶಾಸನವು ಸುಧಿಕೊದತ್ತ ನಾಚ್ಚಿಯಾರ್ ಉತ್ಸವವನ್ನು ಉಲ್ಲೇಖಿಸಿದೆ.[27] ಇವಳು ಪ್ರಸಿದ್ಧ ರಂಗನಾಥನ ಭಕ್ತಳಾದ ಆಂಡಾಳ್. ಆದರೆ ಪ್ರಸ್ತುತ ಅವಳ ಗುಡಿಯು ಇಲಿಲ್ಲ ಹಾಗೂ ಆಂಡಾಳಳ ಉತ್ಸವವು ಮರೆತುಹೋಗಿದೆ.

ರಾಮಾನುಜರು ಮೇಲುಕೋಟೆಗೆ ಬಂದು ದಿವಸದ ಉತ್ಸವ

ಈ ಉತ್ಸವವು ಮಕರ ಶುಕ್ಲ ಪುನರ್ವಸು ದಿನದಂದು ನಡೆಯುತ್ತದೆ. ಈ ದಿವಸವನ್ನು ರಾಮಾನುಜರು ಮೇಲುಕೋಟೆಗೆ ಆಗಮಿಸಿದ ನೆನಪಿಗಾಗಿ ಆಚರಿಸುವರು. ರಾಮಾನುಜರ ಮೂರ್ತಿಯನ್ನು ಶ್ವೇತ ವಸ್ತ್ರದಿಂದ ಅಲಂಕರಿಸುವರು. ನಂತರ ಮೂರ್ತಿಯನ್ನು ನಾರಾಯಣ ಗುಡಿಯ ಸುತ್ತಲೂ ಮೆರವಣಿಗೆ ಮಾಡುವರು. ಇಲ್ಲಿ ಪಾದುಕೆ ಅಭಯಹಸ್ತಗಳನ್ನು ರಾಮಾನುಜರಿಗೆ ಸಾಂಕೇತಿಕವಾಗಿ ಅರ್ಪಿಸುವರು. ಇದು ನಾರಾಯಣ ದೇವಾಲಯ ಸಂಕೀರ್ಣದ ವಿಶೇಷವಾದ ಉತ್ಸವವಾಗಿದೆ.

ಅಷ್ಟ ತೀರ್ಥೋತ್ಸವ : ಈ ಉತ್ಸವವು ಕಾರ್ತಿಕ ಶುದ್ಧ ದಶಮಿಯ ದಿವಸ ಚೆಲುವರಾಯಸ್ವಾಮಿಗೆ ಕಲ್ಯಾಣಿಯಲ್ಲಿ ಸ್ನಾನವಾದ ನಂತರ ಅಷ್ಟತೀರ್ಥಗಳಲ್ಲಿ ಭಕ್ತಾಧಿಗಳು

ಭಕ್ತಿಭಾವದಿಂದ ಸ್ನಾನ ಮಾಡುವರು. ಇಲ್ಲಿಗೆ ಸಂತಾನಾರ್ಥವಾಗಿ ಬರುವ ಭಕ್ತರು ತಮ್ಮ ಮಡಿಲಿಗೆ ಹಣ್ಣು-ಕಾಯಿಯನ್ನು ಕಟ್ಟಿಕೊಂಡು ಗಿರಿಯನ್ನು ಪ್ರದಕ್ಷಿಣೆ ಬರುವರು. ನಂತರ ದೇವಸ್ಥಾನಕ್ಕೆ ಊರಿನ ಹೊರಭಾಗದಲ್ಲಿ ಸಾವಿರಾರು ಜನರು ಸೇರಿ ವನಭೋಜನವನ್ನು ಏರ್ಪಡಿಸುವರು.

ರಥಸಪ್ತಮಿ : ಇದು ಮಾಘಶುದ್ಧ ಸಪ್ತಮಿಯ ದಿವಸ ಜರುಗುವುದು. ಈ ದಿವಸ ನಾರಾಯಣ ದೇವರಿಗೆ ಬೆಳಗಿನ ಜಾವ 5.30 ಗಂಟೆಗೆ ನಿತ್ಯಕಟ್ಟಳೆಯು ನಡೆದು, ಸೂರ್ಯಮಂಡಲ ಬಗೆದು ಉತ್ಸವವನ್ನು ನಡೆಸುವವರು. ನಂತರ ಜಾನಪದ ನೃತ್ಯ ತಂಡ ಮತ್ತು ವಾದ್ಯಗಳೊಂದಿಗೆ ಗ್ರಾಮದ ಸುತ್ತಾ ಮೆರವಣಿಗೆಗೆ ನಡೆಯುವುದು. ನಂತರ ತಿರುವಾರಾಧನೆ, ಅಷ್ಟೋತ್ತರ, ತಳಿಗೆ ನಿವೇದನೆ, ಆರತಿ ಮುಂತಾದವು ನಡೆಯುವವು. ಈ ಕ್ಷೇತ್ರದಲ್ಲಿ ವಾಸವಾಗಿರುವ ಜನರೆಲ್ಲರೂ, ಈ ದಿವಸ ಕಲ್ಯಾಣಿಯಲ್ಲಿ ಮಿಂದು ಶ್ರೀಶನ ಸೇವೆಯನ್ನು ಭಕ್ತಿಯಿಂದ ಮಾಡುವರು.

ನವರಾತ್ರಿ ಮತ್ತು ವಿಜಯದಶಮಿ : ಅಕ್ಟೋಬರ್ ತಿಂಗಳಲ್ಲಿ ನವರಾತ್ರಿ ಉತ್ಸವವು 10 ದಿನಗಳ ಕಾಲ ಜರುಗುವುದು ಮುಂಜಾನೆ ತಾಯಾರ್ ಮೂರ್ತಿಯನ್ನು ಪಲ್ಲಕ್ಕಿ ಮತ್ತು ಶೇಶವಾಹನದ ಮೂಲಕ ದೇವಾಲಯದ ಸುತ್ತ ಮೆರವಣಿಗೆ ಮಾಡುವರು. ರಾತ್ರಿ ಜಾಲಿಜೆಪೂಜೆಯು ನಡೆಯುವುದು. ನವಮಿಯ ದಿನ ಎಲ್ಲಾ ಶಸ್ತ್ರಾಸ್ತ್ರಗಳು, ಆನೆಗಳು ಮತ್ತು ಕುದುರೆಗಳನ್ನು ಪೂಜೆಮಾಡಲಾಗುವುದು. ವಿಜಯದಶಮಿಯ ದಿವಸ ದೇವರು ಕುದುರೆವಾಹನದ ಮೇಲೆ ಪಾರ್ವತಿ ಮಂಟಪಕ್ಕೆ ಬರುವರು. ಅಲ್ಲಿ ಬನ್ನಿಮರಕ್ಕೆ ಪೂಜೆ ಮಾಡಲಾಗುತ್ತದೆ. ಜಟ್ಟಿಗಳು, ಮಲ್ಲಯುದ್ಧದ ಮೂಲಕ ದೇವರನ್ನು ರಂಜಿಸುತ್ತಾರೆ. ಅರ್ಚಕರು ದೇವರ ಮುಂದೆ ನಿಂತು ಎಲ್ಲಾ ದಿಕ್ಕಿಗೂ ಬಾಣಬಿಡುವರು, ಇದು ಶತ್ರುಗಳನ್ನು ಸರ್ವನಾಶಮಾಡುವುದನ್ನು ಸೂಚಿಸುತ್ತದೆ.

ದೇವರು ಯುದ್ಧದಿಂದ ವಾಪಸಾದಾಗ, ಶ್ರೀದೇವಿಯು ಶೇಕವಾಹನದ ಮೇಲೆ ದೇವರನ್ನು ಆಹ್ವಾನಿಸಲು ಬಂದು ಅಲಂಕರಿಸುವಳು. ಇದು ರಾಮಾಯಣದಲ್ಲಿ ರಾಮನು ಏಕಾಂಗಿಯಾಗಿ 14,000 ಸಂಖ್ಯೆಯ ಕರದೂಸನನ ಸೈನ್ಯವನ್ನು ಸೋಲಿಸಿ ಬಂದಾಗಿ ಸೀತೆಯು ತನ್ನ ಪ್ರೀತಿತುಂಬಿದ ಆಲಿಂಗನದಿಂದ ರಾಮನ ದೇಹದ ಗಾಯಗಳನ್ನು ವಾಸಿ ಮಾಡಿದ ಕತೆಯನ್ನು ನೆನಪಿಸುತ್ತದೆ.

ವೈರಮುಡಿ ಬ್ರಹ್ಮೋತ್ಸವ

ಇದು ಮೇಲುಕೋಟೆಯಲ್ಲಿ ಜರುಗುವ ಅತ್ಯಂತ ವೈಭವದ ಉತ್ಸವವಾಗಿದೆ. ಇದು 12 ದಿನಗಳ ಕಾಲ ನಡೆಯುತ್ತದೆ. ಈ ಉತ್ಸವವು ಮಾರ್ಚ್ ಅಥವಾ ಏಪ್ರಿಲ್ ತಿಂಗಳಲ್ಲಿ ನಡೆಯುತ್ತದೆ. ಆಗಮಗಳ ಪ್ರಕಾರ ನಾರಾಯಣ ದೇವಾಲಯದಲ್ಲಿ 7 ಮಹೋತ್ಸವಗಳನ್ನು ನಡೆಸುವರು. ಇದರಲ್ಲಿ 6ನೇ ದಿನ ಅತ್ಯಂತ ಮುಖ್ಯದಿನ. ಆ ದಿನ ವಜ್ರದ ಕಿರೀಟವಾದ ವೈರಮುಡಿಯನ್ನು ಅಲಂಕರಿಸಲ್ಪಡುವ ಉತ್ಸವಮೂರ್ತಿ ಚೆಲುವರಾಯಸ್ವಾಮಿ ದೇವರನ್ನು ವೈಭವದಿಂದ ರಾತ್ರಿಯಿಡಿ ಗ್ರಾಮದ ಮುಖ್ಯ ಬೀದಿಯಲ್ಲಿ ಮೆರೆಸುವರು. ಬ್ರಹ್ಮತ್ಸೊವವು ಅಂಕುರಾರ್ಪಣೆಯ ಮೂಲಕ ಅಥವಾ 9 ವಿಧದ ಧಾನ್ಯವನ್ನು ಪಾತ್ರೆಯಲ್ಲಿ ಇಡುವ ಮೂಲಕ ಆರಂಭವಾಗುತ್ತದೆ. ನಂತರ ಧ್ವಜಾರೋಹಣ ನಡೆಯುವುದು. ಧ್ವಜಸ್ತಂಭದ ತುದಿಯಲ್ಲಿ ಧ್ವಜಪಟವನ್ನು (ಬಾವುಟ) ಹಾರಿಸುವರು. ಇದು ಉತ್ಸವದ ಆರಂಭವನ್ನು ಸೂಚಿಸುತ್ತದೆ. ಇದು ಗರುಡನ ಪೂಜೆಯನ್ನ ಒಳಗೊಂಡಿದೆ. ಬಾವುಟ ಹಾರಿಸುವ ಮುನ್ನ ಗ್ರಾಮದ ಸುತ್ತ ಪ್ರದಕ್ಷಿಣೆ ಮಾಡುವರು.

ನಂತರ ಧಾರಾಮಂಟಪದಲ್ಲಿ ಶೆಲ್ವಪಿಳ್ಳೆ ಮತ್ತು ತಾಯಾರ್ ದೇವಿಯ ಕಲ್ಯಾಣೋತ್ಸವವು ನಡೆಯುತ್ತದೆ. ಇದು ಕಲ್ಯಾಣಿಯ ಬಳಿ ಇದೆ. ಅರ್ಚಕರು ಹೋಮವನ್ನು ಆಯೋಜಿಸಿ, ವಿವಾಹ ಮಹೋತ್ಸವದ ಪ್ರಯುಕ್ತ ಹೊಸ ವಸ್ತ್ರಗಳನ್ನು ಮೂರ್ತಿಗೆ ಅರ್ಪಿಸಲಾಗುತ್ತದೆ. ನಾಲ್ಕನೆಯ ದಿವಸ ವಸಂತೋತ್ಸವ ಮಂಟಪಕ್ಕೆ ಮೂರ್ತಿಯನ್ನು ಕೊಂಡೊಯ್ಯುವರು. ಐದನೆಯ ದಿವಸ ನಾಗವಲ್ಲಿ ಮಹೋತ್ಸವ ನಡೆಯುವುದು. ಆರನೆಯ ದಿವಸ ಮೂರ್ತಿಯನ್ನು ಮೆರವಣಿಗೆಯ ಮೂಲಕ ವಾನಮಾಮಲೈಮಠ, ಕಂಠೀರವನರಸರಾಜ ಒಡೆಯರ ಮಂಟಪ ಹಾಗೂ ಇನ್ನಿತರ ಸಣ್ಣ ಗುಡಿಗಳಿಗೆ ಕೊಂಡೊಯ್ಯಲಾಗುವುದು.

ವೈರಮುಡಿ ಕಿರೀಟವು ಪ್ರಾಚೀನತೆ ತಿಳಿಯದ ಬೆಲೆಬಾಳುವ ವಜ್ರಗಳಿಂದ ಮಾಡಲ್ಪಟ್ಟಿದೆ. ಇದು ವರ್ಷದಲ್ಲಿ ಚೆಲುವರಾಯಸ್ವಾಮಿಗೆ (ಉತ್ಸವಮೂರ್ತಿ) ಕೆಲವೇ ಗಂಟೆಗಳ ಕಾಲ (ವರ್ಷದಲ್ಲಿ) ಧರಿಸಲಾಗುತ್ತದೆ. ರಾತ್ರಿ 10 ಗಂಟೆಗೆ ಅಲಂಕರಿಸಿ ಮೆರವಣಿಗೆಯ ಮೂಲಕ ಬೆಳಿಗ್ಗೆ 4 ರಿಂದ 5 ಗಂಟೆಯ ವೇಳೆಗೆ ದೇವಾಲಯದ ಎದುರಿಗಿರುವ ವಾಹನ ಮಂಟಪಕ್ಕೆ ತಲುಪುವುದು. ನಂತರ ಕಿರೀಟವನ್ನು ತೆಗೆದು ಸೀಲ್ ಮಾಡಲಾಗುವುದು. ತದನಂತರ ರಾಜಮುಡಿಯನ್ನು ಧರಿಸಲಾಗುವುದು. ಇದನ್ನು ಮೈಸೂರು ಅರಸರಾದ ರಾಜ ಒಡೆಯರ್ (1578–1617 ಕ್ರಿ.ಶ) ದಾನವಾಗಿ ಕೊಟ್ಟಿದ್ದರು.[28]

ಬ್ರಹ್ಮೋತ್ಸವದ 9ನೇ ದಿವಸ ರಥೋತ್ಸವವು ಜರುಗುವುದು. ಇದು ದೇವರು ಪ್ರವಾಸ ಮಾಡಲು ಹೋಗುವ ನೆನಪನ್ನು ತರುತ್ತದೆ. ದೇವಾಲಯದ ರಥದಲ್ಲಿ ಮೂರ್ತಿಯನ್ನು ಗ್ರಾಮದ ಮುಖ್ಯ ಬೀದಿಯಲ್ಲಿ ಸುತ್ತಿಸುವರು. ನಂತರ 10ನೇ ದಿವಸ ಮೂರ್ತಿಯನ್ನು ತೆಪ್ಪಕೊಳಕ್ಕೆ ಕೊಂಡೊಯ್ದು ಪವಿತ್ರ ಸ್ನಾನ ಮಾಡಿಸುವರು. ಇದನ್ನು ತೆಪ್ಪೋತ್ಸವ ಎನ್ನುವರು. ರಾತ್ರಿ ತೆಪ್ಪದ ಮೇಲೆ ಮೂರ್ತಿಯನ್ನು ಕೂರಿಸಿ ಮೆರೆಸುವರು. 11ನೇ ದಿವಸ ಪೂರ್ಣಾಹುತಿ ಯಾಗವನ್ನು ಆಚರಿಸುವರು. ಮಹಾಭಿಷೇಕವು ಕೊನೆಯ ದಿನ ನಡೆಯುತ್ತದೆ. ಆ ದಿವಸ ದೇವಾಲಯ ಮತ್ತು ಇಡೀ ಗ್ರಾಮವನ್ನು ಪವಿತ್ರ ಜಲದಿಂದ ಸ್ವಚ್ಚಗೊಳಿಸುವರು. ಮುಖ್ಯ ಮೂರ್ತಿಗೆ ಅಭಿಷೇಕ ಮಾಡುವರು. ಸದಾಶಿವರಾಯನ ಕಾಲದ ಒಂದು ಶಾಸನವು ರಥೋತ್ಸವಕ್ಕೆ (ಬ್ರಹ್ಮೋತ್ಸವದ) ಹಣವನ್ನು ದಾನ ಮಾಡಿರುವ ಅಂಶವನ್ನು ದಾಖಲಿಸಿದೆ.[29]

ಯೋಗಾನರಸಿಂಹಸ್ವಾಮಿ ದೇವಾಲಯದ ಉತ್ಸವಗಳು

ಮೇಲುಕೋಟೆಯ ಗಿರಿಶ್ರೇಣಿಗೆ ಹೊಂದಿಕೊಂಡಂತೆ ಇರುವ ಯೋಗಾನರಸಿಂಹಸ್ವಾಮಿ ದೇವಾಲಯದಲ್ಲಿಯೂ ವಿಶೇಷವಾದ ಆರಾಧನೆಗಳು ನಡೆಯುತ್ತವೆ. ಆದರೆ ಇಲ್ಲಿ ಉತ್ಸವಮೂರ್ತಿಯ ವೈಭವದ ಮೆರವಣಿಗೆ ಇರುವುದಿಲ್ಲ. ಆದರೂ ವಿಶೇಷ ದಿನಗಳಲ್ಲಿ ವಿಶಿಷ್ಟವಾದ ಆಚರಣೆಗಳು ರೂಢಿಯಲ್ಲಿವೆ. ನಾರಾಯಣಸ್ವಾಮಿ ದೇವಾಲಯದಂತೆಯೇ ಭಕ್ತಾದಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸುತ್ತಿದೆ.

ಶನಿವಾರ ರಾತ್ರಿ ಸಹಸ್ರನಾಮವಾದ ಬಳಿಕ ಚಿತ್ರಾನ್ನ ನಿವೇದನವಾಗಿ, ಗುಂಬಾರ್ತಿಯಿಂದ ಆರತಿ ಮಾಡಿ ತೀರ್ಥವಿನಿಯೋಗವಾಗುತ್ತದೆ. ಸ್ವಾತಿನಕ್ಷತ್ರದಂದು ದೇವರ ಆಭರಣಗಳನ್ನು ತೆಗೆದು ವಿಶೇಷ ಅಭಿಷೇಕ ನಡೆಯುವುದು ಜೊತೆಗೆ ಪಂಚಾಮೃತ ನಿವೇದನವಾಗಿ ಅಲಂಕಾರವಾದ ನಂತರ ತೀರ್ಥ ಪ್ರಸಾದ ವಿನಿಯೋಗಿಸುವರು. ಕೃತ್ತಿಕೋತ್ಸವವು ಮೊದಲು ಈ ದೇವಾಲಯದಲ್ಲಿ ನಡೆದು ನಂತರ ನಾರಾಯಣ ದೇವಾಲಯದಲ್ಲಿ ನಡೆಯುವುದು. ವೈರಮುಡಿ ಮಹಾಭಿಷೇಕವು ಇಲ್ಲಿಯೂ ನಡೆಯುವುದು. ದೇವಾಲಯವು ಶುದ್ಧಿಯಾದ ನಂತರ ಹೋಮ ಮತ್ತು ಕುಂಭಹವನಗಳು ನಡೆದು ವೇದಪಾರಾಯಣಗಳು ನಡೆದು ಅಭಿಷೇಕ ಮಾಡುವರು. ಆದರೆ ಈ ಕುರಿತು ಶಾಸನಗಳ ಲಭ್ಯವಿಲ್ಲ.

ಯೋಗಾನರಸಿಂಹಸ್ವಾಮಿ ಜಯಂತಿಯು ವಿಶೇಷವಾಗಿ ವೈಭವದಿಂದ ನಡೆಯುತ್ತದೆ. ದೇವರು ಜನ್ಮಪಡೆದ ನಕ್ಷತ್ರದ ದಿನದಂದು ಈ ಆರಾಧನೆ ನಡೆಯುತ್ತದೆ. ಎಂದಿನಂತೆ ಬೆಳಿಗ್ಗೆ 12 ತಿರುವಾರಾಧನೆಯಿಂದ ಆಚಾರ್ಯ ಪುರುಷರಿಗೆ ಮರ್ಯಾದೆಗಳು ನಡೆದು ಪ್ರಸಾದ

ವಿನಿಯೋಗವಾಗುತ್ತದೆ. ಸಾಯಂಕಾಲವೂ ಸಹ ಚೆಲುವರಾಯಸ್ವಾಮಿ ಉತ್ಸವ ಮೂರ್ತಿಯನ್ನು ಮೆರವಣಿಗೆ ಮೂಲಕ ಕಲ್ಯಾಣಿಯ ಬಳಿಯ ಹೊಸಗುಡಿ ಭಂಡಾರಮಂಟಪದಲ್ಲಿಡುವರು. ಪ್ರಹ್ಲಾದನ ಕುರಿತು ಇಲ್ಲಿ ಆರಾಧನೆ ನಡೆಯುತ್ತದೆ. ನಂತರ ಪುರಾಣ ಪಾರಾಯಣಗಳು ನಡೆದು ತೀರ್ಥ ಪ್ರಸಾದ ವಿನಿಯೋಗವಾಗುತ್ತದೆ.

ಚೆಲುವರಾಯಸ್ವಾಮಿಗೆ ವಸಂತೋತ್ಸವವಾದ ನಂತರ ನರಸಿಂಹಸ್ವಾಮಿಗೆ ನಡೆಯುವುದು. 12 ವಿಧದ ನಾಮ ಹಾಕಿರುವ ವ್ಯಕ್ತಿಗೆ ಕಾವಲುಗಾರನು ಮಾಲೆಹಾಕಿ ಘಂಟೆಕೊಟ್ಟು ದೇವಾಲಯ ಪ್ರದಕ್ಷಿಣೆಯ ನಂತರ ಬಾಗಿಲಿಗೆ ಬಂದಾಗ ಪರಿಚಾರಕರು ಬಣ್ಣದ ನೀರನ್ನು ಅವನ ತಲೆಯ ಮೇಲೆ ಸುರಿಯುವುದು ಇಲ್ಲಿನ ವಿಶೇಷ. ಮತ್ತೊಂದು ವಿಶೇಷ ಆಚರಣೆ ಎಂದರೆ ಕೃಷ್ಣರಾಜಮುಡಿ ಉತ್ಸವ. ಮತ್ತೊಂದು ವಿಶೇಷ ಆಚರಣೆಯೆಂದರೆ ಧನರ್ಮಾಸದ ಕಟ್ಲೆ ನಾರಾಯಣಸ್ವಾಮಿ ದೇವಾಲಯದಂತೆಯೇ ಇಲ್ಲಿಯೂ ಅದೇ ನೀತಿ ನಿಯಮಗಳೊಂದಿಗೆ ನಡೆಯುತ್ತದೆ. ಹೀಗೆ ಯೋಗಾನರಸಿಂಹನ ದೇವಾಲಯದಲ್ಲಿ ನಾರಾಯಣಸ್ವಾಮಿಗೆ ಆಗುವ ವೈಭವದ ಆಚರಣೆಗಳಲ್ಲಿದಿದ್ದರೂ, ವೈದಿಕ ಆಚರಣೆಯ ಎಲ್ಲಾ ವಿಧಿ–ವಿಧಾನಗಳು ಉಪಯೋಗಿಸಲ್ಪಡುತ್ತವೆ.

ಅಂಗಭೋಗ ಮತ್ತು ರಂಗಭೋಗ ಸೇವೆ

ದೇವರನ್ನು ಜೀವಂತ ವ್ಯಕ್ತಿ ಎಂದೇ ಭಾವಿಸಿ ಗೌರವಿಸುವ, ಆಧರಿಸುವ, ಸತ್ಕರಿಸುವ, ಪೂಜಿಸುವ ಕ್ರಿಯೆಯನ್ನು ಪೂಜಾ ವಿಧಿಗಳಿಂದ ತಿಳಿದುಬರುತ್ತದೆ. ಜೀವಂತ ವ್ಯಕ್ತಿಯು ಬದುಕಿನಲ್ಲಿ ಅನುಭವಿಸಲು ಸಾಧ್ಯವಾಗುವ ಎಲ್ಲಾ ಭೋಗಗಳನ್ನು ದೇವರಿಗೆ ಉಪಚಾರದ ಮೂಲಕ ಅರ್ಪಿಸಲಾಗುತ್ತದೆ. ದೇವರಿಗೆ ಸಲ್ಲುವ ಪೂಜೆ ದೇವಭೋಗ, ಅದರಲ್ಲಿ ಎರಡು ವಿಧ.

1) ಅಂಗಭೋಗ

2) ರಂಗಭೋಗ

ಅಂಗಭೋಗವು ದೇವರ ಪ್ರತಿಮಾರೂಪವಾದ ವಿಗ್ರಹಕ್ಕೆ ನೇರವಾಗಿ ಸಲ್ಲುವ ಪೂಜೆ. ಇದರಲ್ಲಿ ಸ್ನಾನ, ವಸ್ತ್ರ, ಯಜ್ಞೋಪವೀತ, ಭೂಷಣ, ಗಂಧ, ಅಕ್ಷತೆ, ಧೂಪ, ನೈವೇದ್ಯ, ಇತ್ಯಾದಿಗಳು ಸೇರಿವೆ.

ಪುರಾಣ ಪಠನ, ಹಾಡುಗಾರಿಕೆ, ವಾದ್ಯ ಸಂಗೀತ, ಮತ್ತು ನೃತ್ಯ ಸೇವೆಗಳು ರಂಗಭೋಗದಲ್ಲಿ ಸೇರುತ್ತವೆ. ದೇವರ ಎದುರಿಗೆ ನವರಂಗದಲ್ಲಿ ಅರ್ಪಿತವಾಗುವುದೇ ರಂಗಭೋಗ.

ಮೇಲುಕೋಟೆಯ ದೇವಾಲಯಗಳಲ್ಲಿ ಈ ಎರಡೂ ರೀತಿಯ ಸೇವೆಗಳನ್ನು ಆಯೋಜಿಸಲಾಗುತ್ತಿತ್ತು. ಇದು ನಿತ್ಯ ನೈಮಿತ್ತಿಕ ಪೂಜಾವಿಧಿ ವಿಧಾನಗಳಿಂದ ಮತ್ತು ಲಭ್ಯ ಶಾಸನಗಳಿಂದು ದೃಢಪಡುತ್ತದೆ. ವಿಷ್ಣುಭಕ್ತಿಯು ತ್ಯಾಗಕ್ಕಿಂತ ಹೆಚ್ಚಾಗಿ ಆನಂದಮಯ (ಭೋಗ) ಜೀವನಕ್ಕೆ ಹೆಚ್ಚು ಒತ್ತು ನೀಡುತ್ತದೆ. ಇದು ದೇವರಿಂದ ಸೃಷ್ಟಿಯಾದ ವಸ್ತುಗಳೊಂದಿಗೆ ಯಾವುದೇ ಮೋಹವಿಲ್ಲದೆ ಅನುಭವಿಸುವ ಮತ್ತು ಉತ್ತಮ ಜೀವನ ನಡೆಸುವ ರೀತಿಗಳಿಗೆ ಹೆಚ್ಚು ಒತ್ತು ನೀಡುತ್ತದೆ. ಈ ರೀತಿಯ ಜೀವನದ ಅಂದುಕೊಂಡಿರುವ ಗುರಿಯನ್ನು ತಲುಪಲು, ವಿಷ್ಣುಪೂಜೆಯನ್ನು ಮಾಡುವುದು ಅಗತ್ಯ ಅಥವಾ ಆಗಮಶಾಸ್ತ್ರದಲ್ಲಿರುವಂತೆ ಆತನ ರೂಪಗಳನ್ನು ಆರಾಧಿಸಬೇಕು. ಅಂಗಭೋಗವು ಒಂದು ವಿಧದ ಪೂಜಾಪದ್ಧತಿ ಮತ್ತು ಇದು ದೇವಾಲಯದ ಗರ್ಭಗುಡಿಯಲ್ಲಿ ಪೂಜಾರಿಗಳಿಂದ ಪ್ರತ್ಯೇಕವಾಗಿ ನಡೆಯುತ್ತದೆ.

ಮಾನವನ ರೂಪದ ದೇವರ ಪ್ರತಿಯೊಂದು ಅಂಗವೂ ಆರಾಧನೆಗೆ ಕೆಲವು ವಿಶೇಷ ಮಹತ್ವವನ್ನು ಹೊಂದಿದೆ. ಭಕ್ತರ ಆಸೆಯಂತೆ ದೇವರ ನಿರ್ದಿಷ್ಟ ಅಂಗವನ್ನು ಆರಾಧಿಸಿದರೆ ಮಾತ್ರ ತಮ್ಮ ಆಸೆಗಳು ನೇರವೇರುತ್ತವೆ ಎಂಬ ನಂಬಿಕೆಯಿದೆ. ಅಂಗಭೋಗ ಸೇವೆ ಮಾಡುವ ಪೂಜಾರಿಗಳು ಕೆಲವು ನಿರ್ದಿಷ್ಟ ಮಂತ್ರಗಳನ್ನು ಹೇಳಿದರೆ ಮಾತ್ರ ಆಸೆಗಳು ನೆರವೇರುತ್ತವೆ.

ಅಂಗಭೋಗಸೇವೆ ನಡೆಸಲಿಚ್ಚಿಸುವ ಭಕ್ತರು ಗರ್ಭಗೃಹದಲ್ಲಿರುವ ಮೂರ್ತಿಯನ್ನು ನೋಡಲು ಸಾಧ್ಯವಿಲ್ಲ. ಕೇವಲ ಪಾಂಚಾರಾತ್ರಾಗಮದಲ್ಲಿ ಪರಿಣತಿ ಪಡೆದಿರುವ ಪೂಜಾರಿಗಳು ಮಾತ್ರ ಭಕ್ತನ ಪರವಾಗಿ ಪೂಜೆಯನ್ನು (ಸೇವೆ) ಮಾಡಬೇಕು.

ಶ್ರೀ ವೈಷ್ಣವ ದೇವಾಲಯಗಳ ಮೂರ್ತಿಪೂಜೆಯಲ್ಲಿ ರಂಗಭೋಗವೂ ಸಹ ಸಾಮಾನ್ಯ ಆರಾಧನೆಯ ಮುಖ್ಯ ಭಾಗವಾಗಿದೆ. ಅಂಗಭೋಗವು ಗರ್ಭಗೃಹ ಮತ್ತು ಪ್ರತ್ಯೇಕವಾಗಿ ಆಯೋಜಿತವಾಗುತ್ತದೆ. ಆದರೆ ರಂಗಭೋಗವು ಸಾರ್ವಜನಿಕ ಆರಾಧನೆಯಾಗಿದೆ. ರಂಗಭೋಗ ಸೇವೆಯನ್ನು ವಿಶೇಷವಾದ ಆವರಣ, ನವರಂಗ ಮತ್ತು ರಂಗಮಂಪಟಗಳಲ್ಲಿ (ದೇವಾಲಯದ) ಆಯೋಜಿಸಲಾಗುತ್ತಿತ್ತು. ಇಲ್ಲಿ ಆಲಯದ ಮುಖ್ಯಮೂರ್ತಿಯು ಪವಿತ್ರತೆಗಾಗಿ ಪ್ರತ್ಯೇಕವಾಗಿರುತ್ತಿತ್ತು. ಆದರೆ ಅದರ ಪ್ರತಿನಿಧಿಯಾಗಿದ್ದ,

ಉತ್ಸವ ಮೂರ್ತಿಯನ್ನು ರಂಗಭೋಗ ಸೇವೆಗೆ ಉಪಯೋಗಿಸಲ್ಪಡುತ್ತಿತ್ತು. ವಿಜಯನಗರದ ಅರಸ ಮಲ್ಲಿಕಾರ್ಜುನ ಕಾಲದಲ್ಲಿ (ಕ್ರಿ.ಶ. 1457) ನಾಗಮಂಗಲದ ಮಹಾಪ್ರಭು ಮತ್ತು ಯಾದವಗಿರಿ ಜೀರ್ಣೋದ್ಧಾರಕನೆನಿಸಿದ್ದ 'ತಿಮ್ಮಣ್ಣ ದಣ್ಣಾಯಕನು' ತನ್ನ ಪತ್ನಿ ರಂಗನಾಯಕಮ್ಮನ ಹೆಸರಿನಲ್ಲಿ ಇಲ್ಲಿನ ನಾರಾಯಣಸ್ವಾಮಿ ದೇವಾಲಯದ ಉತ್ತರ ಭಾಗಕ್ಕೆ ಅಮ್ಮನವರ ಸನ್ನಿಧಿಯ ಮುಂದೆ ಅಲಂಕೃತ ಕಂಬಗಳಿಂದಾವೃತವಾದ ರಂಗಮಂಪಟವನ್ನು ಕಟ್ಟಿಸಿದುದನ್ನು ಶಾಸನವು ಉಲ್ಲೇಖಿಸಿದೆ.[30]

ರಂಗಭೋಗ ಸೇವೆಯು ಹಲವು ರೂಪಗಳಲ್ಲಿ ನಡೆಯುತ್ತದೆ. ಪಾಂಚರಾತ್ರ ಆಗಮದಲ್ಲಿರುವ ಅರ್ಚಾವತಾರದ ಪ್ರಕಾರ, ವಿಷ್ಣುವು ವೈಕುಂಠದಲ್ಲಿ ಜಗತ್ತಿನ ಎಲ್ಲಾ ಚಟುವಟಿಕೆಗಳನ್ನು ನಿಯಂತ್ರಿಸಲು ಒಂದು ವ್ಯವಸ್ಥಿತ ಸಂಘಟಿತ ಸಭೆಯನ್ನು ಹೊಂದಿದ್ದನು. ಈತನು ರಾಜನಂತೆ ಆಸ್ಥಾನವನ್ನು ಹೊಂದಿದ್ದನು. ಹೀಗೆ ವಿಷ್ಣುದೇವಾಲಯದಲ್ಲಿ ಈ ಆಸ್ಥಾನವು ನವಗ್ರಹದಲ್ಲಿ ಆಯೋಜಿತವಾಗುತ್ತಿತ್ತು. ಇಲ್ಲಿಯೇ ಎಲ್ಲಾ ಆಚರಣೆಗಳು ಮತ್ತು ಉತ್ಸವಗಳು ಇಲ್ಲಿಯೇ ಜರುಗುತ್ತಿದ್ದವು. ಸಂಗೀತಗಾರರು ಆಧ್ಯಾತ್ಮಿಕ ವಾದ್ಯಗಳು ಹಾಗೂ ವಾಚನದ ಮೂಲಕ ಆಳ್ವಾರರು ರಚಿಸಿದ ಗೀತೆಗಳನ್ನು ಹಾಡುತ್ತಿದ್ದರು. ಸಂಗೀತದ ಜೊತೆಗೆ ನವರಂಗದಲ್ಲಿ ದೇವದಾಸಿಯರು ಮತ್ತು ಕಲೆಯಲ್ಲಿ ಪರಿಣಿತರಾಗಿರುವ ಮಹಿಳೆಯರು ಪಾಲ್ಗೊಂಡು ನೃತ್ಯ ಮಾಡುತ್ತಿದ್ದರು. ಸ್ಥಳದ ಶಿಲ್ಪಕಲೆ ಮತ್ತು ದೇವಾಲಯದ ಕೈಪಿಡಿಯು ಇದರ ಕುರಿತು ಮಾಹಿತಿ ನೀಡುತ್ತದೆ. ವಾಸ್ತವವಾಗಿ ನವರಂಗದ ಆಚರಣೆಗಳು ಮಧ್ಯಯುಗೀನ ಕಾಲದಲ್ಲಿ ಮೇಲುಕೋಟೆಯು ಸೇರಿದಂತೆ ಪರೋಕ್ಷವಾಗಿ ಕಲೆಯನ್ನು ಅಭಿವ್ಯಕ್ತಿಗೊಳಿಸಲು ಮತ್ತು ಬೆಳೆಸಲು ದೇವಾಲಯಗಳು ಕಾಣಿಗೆ ನೀಡಿವೆ. ಹೀಗೆ ರಂಗಭೋಗಸೇವೆಗಳ ಮೂಲಕ ದೇವರನ್ನು ಭಕ್ತರು ಸಂತೋಷಪಡಿಸುತ್ತಿದ್ದರು. ಪಲ್ಲವೋತ್ಸವ, ಮಂಟಪೋತ್ಸವ, ಪವಿತ್ರೋತ್ಸವ, ತೆಪ್ಪೋತ್ಸವ, ರಥಸಪ್ತಮಿ, ವಸಂತೋತ್ಸವ, ವಾಹನ-ಮಂತ್ರ, ಮೂಲಮಂತ್ರ, ಭೋಗ-ಯೋಗ ಮತ್ತು ನೈವೇದ್ಯಗಳ ಸಮರ್ಪಣೆಗಳು ಇನ್ನಿತರ ಸೇವೆಗಳು ರಂಗಮಂಪಟದಲ್ಲಿ (ನವರಂಗ) ನಡೆಯುತ್ತಿದ್ದವು. ಹೀಗೆ ಇಂದಿಗಿಂತಲೂ ಹಿಂದೆ ದೇವಾಲಯಗಳಲ್ಲಿ ನಡೆಯುತ್ತಿದ್ದ ಪೂಜೆಗಳು ವಿಸ್ತಾರವಾಗಿದ್ದವು. ಅದೇ ಕಾರಣದಿಂದ ಅಂಗಭೋಗದ ಧಾರ್ಮಿಕತೆ ಮತ್ತು ರಂಗಭೋಗದ ಸಾಮಾಜಿಕ ಮತ್ತು ಕಲಾಪೋಷಣೆಗಳು ದೇವಾಲಯಗಳ ಸಾಂಸ್ಕೃತಿಕ ಮಹತ್ವವನ್ನು ಹೆಚ್ಚಿಸಿವೆ.

ಮಾನವ ಮತ್ತು ಕಲೆ

ಮಾನವನ ಬದುಕಿನಲ್ಲಿ ಕಲೆಗೆ ವಿಶೇಷ ಸ್ಥಾನವಿದೆ. ಯಾವುದೇ ಪ್ರಕಾರದ ಕಲೆಯಾದರೂ ನಮ್ಮ ಜೀವನದಲ್ಲಿ ಒಂದಲ್ಲ ಒಂದು ರೀತಿ ತನ್ನ ಪ್ರಭಾವವನ್ನು ಬೀರುತ್ತದೆ. ಒಬ್ಬ ವ್ಯಕ್ತಿ ಅಥವಾ ಒಂದು ತಂಡದ ಮೂಲಕ ಅಭಿವ್ಯಕ್ತವಾಗುವ ಕಲೆಯು ಒಂದು ಸಮುದಾಯದ ಮೇಲೆ ಬೀರುವ ವಿಶೇಷ ಪ್ರಭಾವವು ಕ್ಷಣಿಕವಾದುದಲ್ಲ. ಒಮ್ಮೆ ಕಂಡ ಮಿಂಚಿನ ಅನುಭವ, ಕಂಡ ಪ್ರವಾಹದ ಅನುಭವ ಕೇಳಿದ ಸಿಡಿಲಿನ ಅನುಭವ, ಇತ್ಯಾದಿ ಅನುಭವಗಳ ಪ್ರಭಾವ ಹೇಗೆ ಕೇವಲ ಕ್ಷಣಿಕವಲ್ಲವೋ ಹಾಗೆಯೇ ಸಂಗೀತ, ನೃತ್ಯ, ಶಿಲ್ಪ, ಚಿತ್ರ ಇತ್ಯಾದಿ ಕಲಾಪ್ರಕಾರಗಳಿಂದ ನಾವು ಪಡೆದುಕೊಳ್ಳುವ ಅನುಭವದ ಪ್ರಭಾವವೂ ದೀರ್ಘಕಾಲಿಕವಾದುದು.

ಪ್ರಪಂಚದಲ್ಲಿ ಮಾನವನ ಉಗಮವಾದಂದೇ ಕಲೆಯೂ ಉಗಮವಾಯಿತು ಎಂದು ಭಾವಿಸಿದರೆ ಅತಿಶಯೋಕ್ತಿಯಾಗಲಾರದು. ಬೆಳೆಯುತ್ತಾ ಬೆಳೆಯುತ್ತಾ ಮಾನವ ತನ್ನ ಅನುಭವಗಳನ್ನು ಹೇಳಿ ಹಂಚಿಕೊಳ್ಳಲು, ಅವುಗಳಿಗೆ ರೂಪು ಕೊಡಲು ಪ್ರಯತ್ನಿಸಿದ. ಮಾನವನ ಅಭಿವ್ಯಕ್ತಿಗೆ ತಕ್ಕಂತೆ ಕಲಾಪ್ರಕಾರ ವಿವಿಧ ಹೆಸರುಗಳನ್ನು ಪಡೆದು ವಿಶಿಷ್ಟವಾಗಿ ಬೆಳೆದಿದೆ.

ಪ್ರಾಗೈತಿಹಾಸಿಕ ಕಾಲದ ಮನುಷ್ಯ ತನ್ನ ಭಾವನೆಗಳನ್ನು ಚಿತ್ರಗಳ ಮೂಲಕ ಅಭಿವ್ಯಕ್ತಿ ಮಾಡಿದ್ದಾನೆ. ಸಿಂಧೂನದಿಯ ಬಯಲಿನ ಸಂಸ್ಕೃತಿಯ ಕಾಲಕ್ಕೆ ನೃತ್ಯವೂ ಭಾವನೆಗಳ ಪರಿಭಾಷೆಯಾಗಿತ್ತು ಎಂದು ತಿಳಿಯಬಹುದು. ವೇದಗಳ ಕಾಲದಲ್ಲಿ ಸಂಗೀತವು ಪ್ರಚಲಿತವಿದ್ದುದಂತೂ ಸರಿಯೇ. ಯಜ್ಞಗಖಳ ಆಚರಣೆಯಲ್ಲಿ ಸ್ವರ ರಹಿತ ವೇದಮಂತ್ರ ಪಠನವು ಪ್ರಮುಖ ಭಾಗ. ಸಾಮವೇದದಲ್ಲಂತೂ ಸಂಗೀತವೇ ಪ್ರಧಾನವಾದುದು.

ಸಂಸ್ಕೃತಿಯ ಪ್ರಧಾನಾಂಗಳಲ್ಲಿ, ಸಂಗೀತ, ನೃತ್ಯ, ಚಿತ್ರಕಲೆಗಳೂ ಸೇರಿವೆ. ಸಂಗೀತದ ಜೊತೆಗೆ ಚಿತ್ರಕಲೆಯು ಭಾವಭಿವ್ಯಕ್ತಿಯ ಪ್ರಬಲ ಮಾಧ್ಯಮವಾಗಿವೆ. ಸಂಸ್ಕೃತಿಯಾಧಾರಿತ ಕಲೆಗಳಿಗೆ ದೇವಾಲಯಗಳಿಂದ ಅಪಾರ ಪ್ರೋತ್ಸಾಹ ದೊರೆಯುತ್ತಿತ್ತು. ಸಂಗೀತ ಮತ್ತು ನೃತ್ಯಗಳು ಎಂತಹವರಿಗೂ ಪ್ರಿಯವಾಗುತ್ತವೆ. ಆದ್ದರಿಂದ ಅವು ದೇವತೆಗಳಿಗೂ ಪ್ರಿಯವಾದುದು ಎಂಬ ನಂಬಿಕೆಯು ಇಂದು ನಿನ್ನೆಯದಲ್ಲ. ಒಪ್ಪಿತವಾಗಿರುವ ಅರವತ್ತನಾಲ್ಕು ಕಲೆಗಳಲ್ಲಿ ಗೀತ, ವಾದ್ಯ, ನೃತ್ಯ, ಚಿತ್ರಗಳು ಅಗ್ರಸ್ಥಾನದಲ್ಲಿವೆ. ಇಂತಹಾ ಪ್ರಮುಖ ಕಲೆಗಳಿಗೆ ದೇವಸ್ಥಾನಗಳು ಆಶ್ರಯಸ್ಥಾನಗಳಾದುದು ಔಚಿತ್ಯಪೂರ್ಣವಾಗಿದೆ. ಮಾನವನ ಭಾವನೆಗಳ ಅಭಿವ್ಯಕ್ತಿಗೆ ದೇವಾಲಯಗಳು ರಂಗಮಂದಿರಗಳಾಗಿ ಕಾರ್ಯನಿರ್ವಹಿಸಿವೆ. ಆದ್ದರಿಂದಲೇ

ಕೋಟೆ, ಕೊತ್ತಲುಗಳು ನಾಮಾವಶೇಷವಾದರೂ, ಅರಮನೆಗಳು ಹೇಳಹೆಸರಿಲ್ಲದಂತಾದರೂ ದೇವಾಲಯಗಳು ಉಳಿದು ಬಂದಿವೆ. ಸಾಂಸ್ಕೃತಿಕ ಕೇಂದ್ರಗಳಾಗಿ ಇನ್ನೂ ಮಹತ್ವ ಪಡೆದಿವೆ.

ಶಿಲ್ಪಗಳ ಮೂಲಕವಂತೂ ಸಂಗೀತ ಮತ್ತು ನೃತ್ಯಗಳು ದೇವಸ್ಥಾನಗಳಲ್ಲಿ ಮಹತ್ವದ ಸ್ಥಾನ ಗಳಿಸಿದ್ದುದರ ಬಗೆಗೆ ಈಗಾಗಲೇ ಹಲವಾರು ಗ್ರಂಥಗಳು ಮತ್ತು ಲೇಖನಗಳು ಪ್ರಕಟವಾಗಿವೆ. ಬಾದಾಮಿಯ ಗುಹಾಂತರ್ದೇವಾಲಯಗಳೊಳಗಿನ ಶಿಲ್ಪಗಳು, ಚಿತ್ರಗಳು, ಐಹೊಳೆ, ಪಟ್ಟದಕಲ್ಲು, ಎಲ್ಲೋರಗಳಲ್ಲಿನ ಹಲವಾರು ಶಿಲ್ಪಗಳು ಮತ್ತು ಚಿತ್ರಗಳು ದೇವಾಲಯಗಳಲ್ಲಿ ನೃತ್ಯ ಮತ್ತು ಸಂಗೀತಗಳು ಪಡೆದಿದ್ದ ವಿಶಿಷ್ಟ ಸ್ಥಾನವನ್ನು ಪ್ರತಿನಿಧಿಸುವ ಮಹತ್ವದ ದಾಖಲೆಗಳಾಗಿವೆ.

ಶಿಲ್ಪಕಲೆ

ಮೇಲುಕೋಟೆಯ ನಾರಾಯಣಸ್ವಾಮಿ ದೇವಾಲಯದ ಸಂಕೀರ್ಣವು ತನ್ನ ಹೊರಗೋಡೆ, ಕಂಬಗಳು ಹಾಗೂ ಗಾರೆ ಕಮಾನುಗಳಲ್ಲಿ ವಿಷ್ಣು ಸಂಬಂಧಿ ಹಲವು ದೃಶ್ಯಗಳು ಶಿಲ್ಪಗಳ ರೂಪದಲ್ಲಿ ಅಲಂಕೃತಗೊಂಡಿವೆ. ಅಲ್ಲದೆ ಮೇಲುಕೋಟೆಯಲ್ಲಿರುವ ಹಲವು ಸುಂದರ ಮಂಟಪಗಳು ಮತ್ತು ದೇವಾಲಯಗಳು ಹೊಂದಿರುವ ಶಿಲ್ಪಗಳು ಆಕರ್ಷಣೀಯವಾಗಿವೆ. ಇಲ್ಲಿ ವಿಷ್ಣುವಿನ ಶ್ರೇಷ್ಠತೆ (ಪ್ರಾಬಲ್ಯ)ಯನ್ನು ವಿವಿಧ ಅವತಾರಗಳಲ್ಲಿ ಹಾಗೂ ಅದರ ಪ್ರಾಬಲ್ಯವನ್ನು ಶಿಲ್ಪಗಳ ಹಲವು ಸಂದರ್ಭಗಳ ಮೂಲಕ ಜನತೆಗೆ ತಿಳಿಯಪಡಿಸುವ ಉದ್ದೇಶವಿದೆ.

ಇಲ್ಲಿನ ಶಿಲ್ಪಗಳು ಶ್ರೀ ವೈಷ್ಣವ ಸಂಪ್ರದಾಯದ ನಾಲ್ಕು ಮುಖ್ಯ ಸಾಹಿತ್ಯ ಕೃತಿಗಳಿಂದ ಸ್ಫೂರ್ತಿಪಡೆದಿವೆ. 1. ವಿಷ್ಣುಪುರಾಣ, 2. ಭಾಗವತ ಪುರಾಣ, 3. ರಾಮಾಯಣ, 4. ಮಹಾಭಾರತ, ಇವು ಭಾರತೀಯ ಜನರ ವರ್ತನೆ ಮತ್ತು ಸಂಸ್ಕೃತಿಗೆ ರೂಪಕೊಡುತ್ತವೆ. ಇವು ಹಲವು ಕವಿಗಳು, ಕಲಾವಿದರು, ಚಿಂತಕರು, ತತ್ವಜ್ಞಾನಿಗಳು, ಸಂಗೀತಗಾರರು, ಬಣ್ಣಹಾಕುವವರು, ಹಲವು ಪ್ರತಿಭಾನ್ವಿತ ವ್ಯಕ್ತಿಗಳಿಂದ ಪ್ರೇರಣೆ ಪಡೆದಿದೆ. ತಮ್ಮ ಪ್ರತಿಭೆಯನ್ನು ಹೊರತರಲು ಒಂದು ಮಾರ್ಗವಾಗಿದೆ. ದೇವಾಲಯಗಳು ಸಾಮಾಜಿಕ ವ್ಯವಸ್ಥೆಯನ್ನು ಕಟ್ಟುವ ಕೇಂದ್ರಸ್ಥಾನ ಪಡೆದಂದಿನಿಂದ, ತನ್ನ ಸುತ್ತಲಿನ ಜನರ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಅದು ಪ್ರಮುಖ ಪಾತ್ರ ವಹಿಸಿತು. ಶಿಲ್ಪಗಳ ಮೂಲಕ ಪ್ರತಿಬಿಂಬಿಸುವ ಪೌರಾಣಿಕವಸ್ತು ಒಂದು ದೃಶ್ಯಮಾಧ್ಯಮವಾಗಿತ್ತು. ಬಹುಸಂಖ್ಯಾತ ಸಮಾಜದ ಅನಕ್ಷರಸ್ಥ ಜನರಿಗೆ ಇದು ಆಜ್ಞಾರ್ಥಕ ಹಾಗೂ ಪ್ರಚೋದಕ ಅಂಶವಾಗಿತ್ತು.

ದೇವಾಲಯಗಳ ಮುಖಾಂತರ ಸಾಂಸ್ಕೃತಿಕ ಅಂಶಗಳು ವಿವಿಧ ಮಾರ್ಗಗಳ ಮೂಲಕ ಜನತೆಗೆ ವರ್ಗಾವಣೆಯಾಗುತ್ತಿದ್ದವು. ಇಲ್ಲಿ ಅಂತಹಾ ಸಾಂಸ್ಕೃತಿಕ ಆಲೋಚನೆಯು ಶಿಲ್ಪಗಳ ಮೂಲಕ ವ್ಯಕ್ತವಾದುದರ ನಿರೂಪಣಾ ವಿಧಾನವಾಗಿದೆ. ಈ ಭಾವನೆಯ ಮೂಲಕ ನಾರಾಯಣಸ್ವಾಮಿ ದೇವಾಲಯ ಸಂಕೀರ್ಣದ ಶಿಲ್ಪಗಳ ಅಧ್ಯಯನ ಮಾಡಲಾಗುತ್ತಿದೆ.

ಇಲ್ಲಿ ದೇವಾಲಯದ ಕಂಬಗಳ ಮೇಲೆ ಪ್ರತಿಬಿಂಬಿತವಾಗಿರುವ ಪ್ರಹ್ಲಾದನ ಕಥೆಯನು ವಿಶ್ಲೇಷಿಸಬಹುದು. ಅಲ್ಲದೆ ಐತಿಹ್ಯದಂತೆ ಪ್ರಹ್ಲಾದನು ಮೇಲುಕೋಟೆಯ ನರಸಿಂಹಸ್ವಾಮಿ ದೇವಾಲಯದಲ್ಲಿರುವ ಪ್ರಹ್ಲಾದಗುಹೆಯಲ್ಲಿ ತಪಸ್ಸು ಮಾಡಿದನೆಂದು ನಂಬಲಾಗಿದೆ. ಉಪನಿಷತ್ತು ಮತ್ತು ಭಗವದ್ಗೀತೆಗಳ ನಂತರ ಭಾರತೀಯ ಬರಹಗಾರರಿಂದ ಭಾಗವತ ಪುರಾಣವು ಅಧಿಕೃತಸ್ಥಾನ ಪಡೆಯಿತು.

ಪ್ರಹಲ್ಲಾದನ ಕಥೆಯು ಈ ದೇವಾಲಯ ಸಂಕೀರ್ಣದ ಹಲವು ಕಡೆ ಶಿಲ್ಪಗಳ ರೂಪದಲ್ಲಿ ಕೆತ್ತಲ್ಪಟ್ಟಿದೆ. ಅದರಲ್ಲಿ ಮುಖ್ಯವಾಗಿ ನಾರಾಯಣಸ್ವಾಮಿ ದೇವಾಲಯದ ಕಂಬಗಳ ಮೇಲೆ ಕೆತ್ತಿರುವ ಶಿಲ್ಪಗಳು ಗಮನಾರ್ಹವಾಗಿವೆ.

1. ಪ್ರಹಲ್ಲಾದನನ್ನು ಆನೆಯು ಒದೆಯುತ್ತಿರುವುದು
2. ಪ್ರಹಲ್ಲಾದನು ನಿರ್ಜನವಾದ ಕಾಡಿನಲ್ಲಿರುವ ದೃಶ್ಯ
3. ರಾಕ್ಷಸರು ಪ್ರಹಲ್ಲಾದನಿಗೆ ಥಳಿಸುತ್ತಿರುವುದು
4. ಹಿರಣ್ಯಕಷ್ಯಪನು ತಮ್ಮ ಜನಕ್ಕೆ ಆಜ್ಞೆ ಮಾಡುತ್ತಿರುವ ದೃಶ್ಯ
5. ಪ್ರಹ್ಲಾದನನ್ನು ಬೆಂಕಿಗೆ ಹಾಕುತ್ತಿರುವುದು.
6. ಹಿರಣ್ಯ ಕಷ್ಯಪನು ಸಿಂಹಾಸನದಲ್ಲಿ ಕುಳಿತಿರುವ ದೃಶ್ಯ.
7. ಹಿರಣ್ಯ ಕಷ್ಯಪನು ಕೋಪದಿಂದ ಕಂಬವನ್ನು ಒದೆಯುತ್ತಿರುವುದು.
8. ನರಸಿಂಹನು ಕಂಬದಿಂದ ಹೊರಗೆ ಬರುತ್ತಿರುವುದು.
9. ಹಿರಣ್ಯ ಕಷ್ಯಪನು ನರಸಿಂಹನಿಂದ ಕೊಲ್ಲಲ್ಪಟ್ಟಿರುವುದು.
10. ಪ್ರಹ್ಲಾದನು ಕೈಜೋಡಿಸಿ ನರಸಿಂಹನ ಮುಂದೆ ನಿಂತಿರುವುದು.
11. ಪ್ರಹ್ಲಾದನು ನರಸಿಂಹನಿಂದ ಉಪದೇಶ ಪಡೆಯುತ್ತಿರುವುದು.

ಅಲ್ಲದೆ ಐತಿಹ್ಯದಂತೆ ಪ್ರಹ್ಲಾದನು ತನ್ನ ತಂದೆಯ ಸಾವಿಗೆ ತಾನೇ ಕಾರಣನಾದನೆಂದು ಶಾಂತಿಗಾಗಿ ಮೇಲುಕೋಟೆಗೆ ಬಂದು ಸಾಲಿಗ್ರಾಮದ ಪೂಜೆ ಮಾಡಿ ತಪಸ್ಸು ಮಾಡಿದ್ದಾನೆ ಎಂಬ ನಂಬಿಕೆ ಇದೆ. ಯೋಗಭಂಗಿಯಲ್ಲಿರುವ ನರಸಿಂಹನ ಮೂರ್ತಿಯು ಈ ಕಥೆಯನ್ನು ಈ ಸ್ಥಳದಲ್ಲಿ ಹೆಚ್ಚು ಪ್ರಚಾರದಲ್ಲಿರುವಂತೆ ಮಾಡಿದೆ.

ಗಮನಾರ್ಹ ಅಂಶವೆಂದರೆ ಭಾಗವತದಲ್ಲಿ ಅಥವಾ ವಿಷ್ಣುಪುರಾಣದಲ್ಲಿ ನೂರಾರು ಕಥೆಗಳು ಬರೆದಿದ್ದರೂ, ಬಹುಮುಖ್ಯ ಆಯ್ಕೆಯಾದ ಕಥೆಗಳಲ್ಲಿ ಪ್ರಹಲ್ಲಾದನ ಕಥೆಯೂ ಒಂದು. ಏಕೆಂದರೆ ಈ ಕಥೆಯು ಎಲ್ಲಾ ಕಾಲಗಳಲ್ಲಿಯೂ ಜನಸಾಮಾನ್ಯರಿಂದ ಪ್ರೀತಿಪಾತ್ರವಾಗಿತ್ತು. ಸಾಂಸ್ಕೃತಿಕ ನೇರ ದೃಷ್ಟಿಯಿಂದ ನೋಡಿದರೆ ಶ್ರೀ ವೈಷ್ಣವ ಧರ್ಮವು ಕೆಲವು ಖಚಿತವಾದ ಪ್ರಭಾವಯುತವಾದ ಆಲೋಚನೆಗಳನ್ನು ಒಳಗೊಂಡಿತ್ತು.

ಗಾಂಧೀಜಿಯ ಪ್ರಕಾರ ಪ್ರಹ್ಲಾದನು ಅಹಿಂಸೆ ಮತ್ತು ಶಾಂತಿಗಾಗಿ ನಿಂತಿದ್ದನು. ಹಿರಣ್ಯ ಕಶ್ಯಪನು ಹಿಂಸೆ ಮತ್ತು ಅಶಾಂತಿಗಾಗಿ ನಿಂತಿದ್ದನು. ಹೀಗೆ ದೇವಾಲಯಗಳ ಮೂಲಕ ಸಾಂಸ್ಕೃತಿಕ ಆಲೋಚನೆಗಳು ತಿಳಿಯಪಡುತ್ತಿದ್ದವು. ಶಾಂತಿಯನ್ನು ಪದೇ–ಪದೇ ಹೇಳುತ್ತಿದ್ದವು. ಬೋಧಿಸುತ್ತಿದ್ದವು. ಯಾರು ಅಹಿಂಸೆಯನ್ನು ಆಚರಿಸುವರೋ ಅವರಿಗೆ ದೇವರ ಸಹಾಯ ಖಂಡಿತ ಎಂಬ ಸಂದೇಶವಿತ್ತು.

ಮಹಾಭಾಗವತನಾದ ಪ್ರಹ್ಲಾದನು 12ನೇ ಶತಮಾನದಲ್ಲಿ ರಾಮಾನುಜರು ಬೋಧಿಸಿದಂತೆ ಶ್ರೀ ವೈಷ್ಣವರು ಪ್ರಾಥಮಿಕ ಪರಿಕಲ್ಪನೆಗಳನ್ನು ದಕ್ಷಿಣಭಾರತದಲ್ಲಿ ಪ್ರಹ್ಲಾದನಲ್ಲಿ ಗುರುತಿಸಿದ್ದಾರೆ. ಅದೇ 'ಪ್ರಪತ್ತಿ', ಅಂದರೆ 'ಶರಣಾಗತಭಾವ' ಅಥವಾ ದೇವರಿಗೆ ಸಂಪೂರ್ಣ ಶರಣಾಗುವುದು. ರಾಮಾನುಜರು ತಿಳಿಸುವ ಇಂತಹಾ ಮಾರ್ಗ ಹೀಗೆ ದೇವಾಲಯ ಸಂಕೀರ್ಣದಲ್ಲಿ ಶಿಲ್ಪಗಳ ಮೂಲಕ ಪ್ರಪತ್ತಿಯ ಪರಿಕಲ್ಪನೆಯು ಮಹತ್ವ ಪಡೆದುಕೊಂಡಿದೆ.

ಪ್ರಹ್ಲಾದ ಮತ್ತು ಹಿರಣ್ಯಕಶ್ಯಪನ ಕಥೆಯಲ್ಲಿ ರಾಜನ ದೈವಿಕ ಅಧಿಕಾರ ಮತ್ತು ಜಗತ್ತಿನ ಅತ್ಯುತ್ತಮ ದೈವತ್ವದ ನಡುವೆ ಕಲಹ ಆರಂಭವಾಗುತ್ತದೆ. ಹಿರಣ್ಯಕಶ್ಯಪನು ತಾನೇ ದೈವ, ತನ್ನ ಹೊರತು ಯಾವೊಂದು ದೈವವಿಲ್ಲ ಎಂದು ತಿಳಿದಿದ್ದನು. ಯಾರೂ ಆತನನ್ನು ವಿರೋಧಿಸುವರೋ ಅವರನ್ನು ಹಿಂಸಿಸುತ್ತಿದ್ದನು.

ಭಾರತದ ರಾಜಕೀಯ ಚಿಂತನೆಯಲ್ಲಿ ರಾಜತ್ವದಲ್ಲಿ ದೈವತ್ವದ ಬೆಳವಣಿಗೆ ಮತ್ತು ರಾಜನಲ್ಲಿ ದೈವತ್ವವನ್ನು ಗುರುತಿಸಬಹುದು. ರಾಜನನ್ನು ದೈವತ್ವದೊಂದಿಗೆ ಹೋಲಿಸುವ ಈ

ಪ್ರಯತ್ನದಿಂದ ರಾಜನು ದೈವತ್ವದ ಅಂಶಗಳನ್ನು ತನ್ನದಾಗಿಸಿಕೊಳ್ಳುವನು. ಈ ಕಥೆಯಲ್ಲಿ ಹಿರಣ್ಯ ಕಶ್ಯಪನು ಧರ್ಮದ ಸಿದ್ಧಾಂತಕ್ಕೆ ವಿರುದ್ಧವಾಗಿದ್ದನು. ಆದುದರಿಂದ ನರಸಿಂಹಾವತಾರದಲ್ಲಿ ಅವನನ್ನು ಸಂಹರಿಸಲಾಯಿತು. ಬಹುಶಃ ಇದು ಭೂಮಿಯ ಮೇಲಿನ ರಾಜರಿಗೆ ಎಚ್ಚರಿಕೆಯಾಗಿತ್ತು. ಇದು ದೇವಾಲಯದ ಶಿಲ್ಪಗಳ ಮೂಲಕ ತಿಳಿಯಪಡಿಸುವ ಸಂದೇಶವಾಗಿತ್ತು.

ನಾರಾಯಣಸ್ವಾಮಿ ದೇವಾಲಯ ಸಂಕೀರ್ಣವು ಕೃಷ್ಣಾವತಾರಗಳ ಹಲವು ದೃಶ್ಯಗಳನ್ನು ಶಿಲ್ಪಗಳ ರೂಪದಲ್ಲಿ ಅಲಂಕೃತಗೊಂಡಿದೆ. ದೇವಾಲಯದಲ್ಲಿ ಕೃಷ್ಣನ ಹಲವು ರೀತಿಗಳಷ್ಟೆ ಕೆತ್ತಲ್ಪಟ್ಟಿರದೆ, ವಿಷ್ಣುವಿನ ಹತ್ತು ಅವತಾರಗಳು ಸಹ ಹಲವು ವಿವಿಧ ಶಿಲ್ಪಗಳ ಮೂಲಕ ತೋರಿಸಲ್ಪಟ್ಟಿವೆ. ಭಾಗವತವು ಅವತಾರ ಪದವನ್ನು ವ್ಯಾಪಕ ದೃಷ್ಟಿಯಲ್ಲಿ ಉಪಯೋಗಿಸುತ್ತದೆ. ಶಿಲ್ಪಗಳ ಮೂಲಕ ದೇವಾಲಯದಲ್ಲಿ ವಿಷ್ಣು, ಕೃಷ್ಣವತಾರದ ಸಾಧನೆಗಳನ್ನು ಎತ್ತಿಹಿಡಿಯಲಾಗಿದೆ.

ವಿಷ್ಣುವಿನ ಅವತಾರಗಳನ್ನು ಹೊರತುಪಡಿಸಿ ಇತರ ಶಿಲ್ಪಾಕೃತಿಗಳು ಕಡಿಮೆ ದರ್ಜೆಯ ಶಿಲ್ಪಾಕೃತಿ ಹೊಂದಿವೆ. ಇವು ಸಾಂಸ್ಕೃತಿಕ ದೃಷ್ಟಿಯನ್ನು ಮಾತ್ರ ಪ್ರತಿನಿಧಿಸದೆ, ಭಾರತೀಯ ಸಂಸ್ಕೃತಿಯ ಅಗತ್ಯತೆಯನ್ನು ತಿಳಿಸುತ್ತವೆ.

ಕೃಷ್ಣ ಮತ್ತು ವಿಷ್ಣುವಿನ ವಿವಿಧ ಅವತಾರಗಳ ದೃಶ್ಯಗಳು

ಎ. ಕೃಷ್ಣ ಲೀಲೆಗಳು

1) ಕೃಷ್ಣನು ಮಗುವಾಗಿದ್ದಾಗ ಅಳುತ್ತಿರುವ ದೃಶ್ಯ.

2) ಕೃಷ್ಣನು ತುಂಟಾಟ ಮಾಡುತ್ತಿರುವುದು.

3) ಕೃಷ್ಣನು ತುಸು ದೊಡ್ಡವನಾಗಿರುವುದು.

4) ಕೃಷ್ಣನು ಯಶೋಧೆಯಿಂದ ಕಂಬಕ್ಕೆ ಕಟ್ಟಲ್ಪಟ್ಟಿರುವ ದೃಶ್ಯ.

5) ಕೃಷ್ಣನನ್ನು ಮರಕ್ಕೆ ಕಟ್ಟಿರುವ ದೃಶ್ಯ.

6) ಯಶೋಧೆಯು ಬೆಣ್ಣೆಯನ್ನು ಕೊಂಡೊಯ್ಯುತ್ತಿರುವುದನ್ನ ನೋಡುತ್ತಿರುವ ಕೃಷ್ಣ.

7) ಕೃಷ್ಣನು ಹಾವಿನ ಮೇಲೆ ನಾಟ್ಯ ಮಾಡುತ್ತಿರುವ ದೃಶ್ಯ

8) ಯಮುನಾ ನದಿಯಲ್ಲಿ ಸ್ನಾನಮಾಡುತ್ತಿರುವ ಗೋಪಿಕೆಯರ ಸೀರೆಗಳನ್ನು ಕದಿಯುತ್ತಿರುವ ಕೃಷ್ಣ.

9) ಕೃಷ್ಣನು ಬಕಾಸುರನನ್ನು ವಧಿಸುತ್ತಿರುವುದು.

10) ಕೃಷ್ಣನು ಅಂದಕಾಸುರನನ್ನು ವಧಿಸುತ್ತಿರುವುದು.

11) ಕೃಷ್ಣನು ಅಘಸಾರನನ್ನು ವಧಿಸುತ್ತಿರುವುದು.

12) ವಾತಾಸುರನನ್ನು ವಧಿಸುತ್ತಿರುವುದು.

13) ಕೃಷ್ಣನ ಕಾಳಿಂಗಮರ್ಧನ

14) ಕೃಷ್ಣನು ಕೊಳಲನ್ನು ನುಡಿಸುತ್ತಿರುವ ದೃಶ್ಯ.

15) ಕೃಷ್ಣನು ಹಸುಗಳ ಮಧ್ಯೆ ಮರದ ಕೆಳಗೆ ನಿಂತಿರುವ ದೃಶ್ಯ

16) ಕೃಷ್ಣನು ರುಕ್ಮಿಣಿ ಮತ್ತು ಸತ್ಯಭಾಮೆಯರ ಜೊತೆ ನಿಂತಿರುವ ದೃಶ್ಯ

17) ಕೃಷ್ಣನು ಕಂಸನನ್ನು ಕೊಲ್ಲುತ್ತಿರುವ ದೃಶ್ಯ.

18) ಕೃಷ್ಣನು ಗೋಪಿಕೆಯರೊಂದಿಗೆ ಜಲಕ್ರೀಡೆಯಾಡುತ್ತಿರುವ ದೃಶ್ಯ.

19) ಗೋವರ್ಧನಗಿರಿಯನ್ನು ಎತ್ತಿರುವ ಕೃಷ್ಣ

ಬ) ವಿಷ್ಣುವಿನ ವಾಮನ ಅವತಾರದ ದೃಶ್ಯಗಳು

1) ಬ್ರಹ್ಮಚಾರಿ ವಾಮನನು ತನ್ನ ಕೈಯಲ್ಲಿ ಛತ್ರಿಹಿಡಿದು ನಿಂತಿರುವ ದೃಶ್ಯ.

2) ಬಲಿಯು ವಾಮನನಿಗೆ ಪ್ರಣಾಮ ಮಾಡುತ್ತಿರುವ ದೃಶ್ಯ.

3) ಬಲಿಯು ತನ್ನ ಹೆಂಡತಿಯೊಂದಿಗೆ ವಾಮನನಿಗೆ ಏನನ್ನೋ ಕೊಡುತ್ತಿರುವ ದೃಶ್ಯ

4) ವಾಮನನು ತ್ರಿವಿಕ್ರಮನಾಗಿ

ಸಿ) **ವಿಷ್ಣುವಿನ ವಿವಿಧ ರೂಪಗಳು**

1) ಯಜ್ಞ ವರಹ ರೂಪ

2) ಲಕ್ಷ್ಮಿವರಹ ರೂಪ

3) ಗಿರಿಜಾ ನರಸಿಂಹ

4) ಯೋಗಾನರಸಿಂಹ

5) ಸ್ಥಾನ ನರಸಿಂಹ

6) ಲಕ್ಷ್ಮೀನರಸಿಂಹ

7) ಕೇಶವನಾಗಿ ವಿಷ್ಣು

8) ಮಾಧವನಾಗಿ ವಿಷ್ಣು

9) ನಾರಾಯಣನ ರೂಪ

10) ಜನಾರ್ದನ ರೂಪ

11) ಶ್ರೀನಿವಾಸನಾಗಿ ವಿಷ್ಣು

12) ಪಾಂಡುರಂಗನ ರೂಪ

13) ರಂಗನಾಥನ ರೂಪ

14) ಲಕ್ಷ್ಮಿ ಹಯಗ್ರೀವನ ರೂಪ

15) ಆದಿಮೂರ್ತಿಯ ರೂಪ

ಡಿ) **ವಿಷ್ಣುವಿನ ವಿವಿಧ ಅವತಾರಗಳ ದೃಶ್ಯ**

1) ಮತ್ಸ್ಯಾವತಾರ

2) ಕೂರ್ಮಾವತಾರ

3) ವರಹಾವತಾರ

4) ನರಸಿಂಹಾವತಾರ

5) ವಾಮನಾವತಾರ

6) ಪರಶುರಾಮಾವತಾರ

7) ರಾಮಾವತಾರ

8) ಕೃಷ್ಣಾವತಾರ

9) ಬುದ್ಧಾವತಾರ

10) ಕಲ್ಕಿಯವತಾರ

ಈ ಮೇಲಿನ ಹಲವು ಕೃಷ್ಣನ ಲೀಲೆಗಳು ಹಾಗೂ ಕಂಸನನ್ನು ಕೊಲ್ಲುತ್ತಿರುವ ಹಲವು ದೃಶ್ಯಗಳಿಂದ ಕೆಲವು ತೀರ್ಮಾನಗಳನ್ನು ಮಾಡಬಹುದು. ಈ ದೃಶ್ಯಗಳನ್ನು ಕೆತ್ತಿರುವುದರ ಉದ್ದೇಶವು ಗ್ರಾಮೀಣ ಮತ್ತು ಕೃಷಿಕ ಜೀವನವನ್ನು ಒತ್ತಿಹೇಳುತ್ತವೆ. ಮಧ್ಯಯುಗದಲ್ಲಿ ಕೃಷಿಕ ಮತ್ತು ಗ್ರಾಮೀಣ ಜೀವನವು ವ್ಯಾಪಕವಾಗಿ ಪ್ರಚಲಿತದಲ್ಲಿತ್ತು. ಕೃಷ್ಣಾವತಾರದಲ್ಲಿ ಕೃಷ್ಣನು ತನ್ನ ಬಾಲ್ಯದ ದಿನಗಳನ್ನು ನಗರದಲ್ಲಿ ಕಳೆಯದೆ, ಗ್ರಾಮೀಣ ಭಾಗದ ಗೋವುಗಳೊಂದಿಗೆ ಇರುತ್ತಿದ್ದನು ಹಾಗೂ ಕೃಷ್ಣನ ಅತಿಮಾನುಷ (ದಿವ್ಯ) ಶಕ್ತಿಯನ್ನು ಇಲ್ಲಿ ಒತ್ತಿ ಹೇಳಲಾಗುತ್ತಿದೆ. ಇದು ಕೃಷ್ಣನು ಒಳ್ಳೆಯದನ್ನು ರಕ್ಷಿಸುವ ಹಾಗೂ ದುಷ್ಟರನ್ನು ಶಿಕ್ಷಿಸುವುದನ್ನು ತೋರಿಸುತ್ತದೆ. ಅಸೂಯೆಯ ಮಾವನಾದ ದುಷ್ಟ ಕಂಸನನ್ನು ಕೊಲ್ಲುತ್ತಿರುವುದು ಸಮಾಜದ ದುರುಳರನ್ನು ನಾಶಮಾಡುತ್ತಿರುವುದನ್ನು ಬಹಿರಂಗಡಿಸುತ್ತದೆ. ಕೆಟ್ಟತನಗಳ ಸಂಗಮವಾಗಿದ್ದ ಕಂಸನ ವಧೆಯು ಕೃಷ್ಣನನ್ನು ಒಬ್ಬ ಮಿಮೋಚಕನನ್ನಾಗಿ ಗುರುತಿಸಿದೆ.

ರಾಸಕ್ರೀಡೆ ಮತ್ತು ಜಲಕ್ರೀಡೆಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ ಗೋಪಿ ಕೃಷ್ಣರ ಸಂಬಂಧಗಳು ದೈಹಿಕ ಸಂಬಂಧಗಳಾಗಿರದೆ, ಆತ್ಮ ಮತ್ತು ಪರಮಾತ್ಮನ ನಡುವೆ ದೈವಿಕ ಪ್ರೀತಿಯನ್ನು ತೋರಿಸುವುದಾಗಿದೆ. ಇಲ್ಲಿ ಯಾವುದೇ ಭಯವಿಲ್ಲದೆ ಜೀವನವನ್ನು ಅನುಭವಿಸಬೇಕೆಂಬ ಸಂದೇಶ ಕೃಷ್ಣನದಾಗಿದೆ. ಯಾವುದೇ ವೈರಾಗ್ಯವಿಲ್ಲದೆ ಹಾಗೂ ಬಂಧನವಿಲ್ಲದೆ ಆನಂದಮಯ ಜೀವನ ನಡೆಸುವ ಸಂದೇಶವೂ ಇದೆ.

ಮಹಾಭಾರತದ ಹಲವು ಸಂದರ್ಭಗಳು ಶಿಲ್ಪಗಳ ಮೂಲಕ ಚಿತ್ರಿಸಲ್ಪಟ್ಟಿವೆ. ಅವುಗಳ ವಿವರಣೆಗೆ ಮುನ್ನ ಮಹಾಭಾರತದ ಮಹತ್ವವನ್ನು ಭಾರತದ ಸಂಸ್ಕೃತಿಯ ಹಿನ್ನೆಲೆಯಲ್ಲಿ ಮತ್ತು ಕನ್ನಡ ಸಂಸ್ಕೃತಿಯ ರೂಪಿಸುವಿಕೆಯಲ್ಲಿ ಅದರ ಪ್ರಭಾವನವನ್ನು ಗುರುತಿಸುವ ಅಗತ್ಯವಿದೆ.

ಕೆ.ಎಂ. ಮುನ್ಶಿಯವರು ಹೇಳುವಂತೆ ಮಹಾಭಾರತವು ಕೇವಲ ಒಂದು ಮಹಾಕಾವ್ಯವಲ್ಲ. ಅದು ಕಲ್ಪಿತ ಕಥೆ, ಗಂಡು ಹೆಣ್ಣುಗಳ ನಾಯಕತ್ವದ ಕಥೆ. ಇಲ್ಲಿರುವ ದೈವಿಕತೆ, ಸಾಹಿತ್ಯ ರಚನೆ, ಜೀವನದ ನಿಯಮಗಳು, ಸಾಮಾಜಿಕ ಹಾಗೂ ನೈತಿಕ ಸಂಬಂಧಗಳ ತತ್ವಶಾಸ್ತ್ರ ಹಾಗೂ ಭಗವದ್ಗೀತೆಯ ವಿಶ್ಲೇಷಣೆ ಇದು ಸನಾತನ ಧರ್ಮಗ್ರಂಥದ ವಿಶೇಷವಾಗಿದೆ.[31] ಸಿ. ರಾಜಗೋಪಾಲಾಚಾರಿಯವರ ಪ್ರಕಾರ. ಇಲ್ಲಿ ಮಾನವ ಮತ್ತು ಘಟನೆಗಳನ್ನು ಸಾಹಿತ್ಯದಲ್ಲಿ ಕಣ್ಣಿಗೆ ಕಟ್ಟುವಂತಗೆ ಚಿತ್ರಿಸಲಾಗಿದೆ ಎಂಬುದು ಅತಿಶಯೋಕ್ತಿಯಲ್ಲ. ರೈತರು ಇಲ್ಲಿನ ಪಾತ್ರಗಳ ಸೃಷ್ಟಿಯಲ್ಲಿ ಪ್ರಮುಖ ಪಾತ್ರವಹಿಸುವರು.

ಇದು ಪಾತ್ರಗಳಿಗೆ ಹೊಸ ಹುರುಪನ್ನು ನೀಡುತ್ತದೆ. ಇದು ನಾಡಿನಲ್ಲಿ ನಡೆಯುತ್ತಿರುವ ಇತಿಹಾಸವಾಗಿದ್ದು, ಇದು ನೆನಪಿಲ್ಲದ ಯುಗದಿಂದಲೂ ಬರುತ್ತಿದೆ. ಉನ್ನತ ಬುದ್ಧಿವಂತರಿಂದ ಈ ಕಥೆಯು ಕಟ್ಟಲಾಗಿದ್ದು ಮತ್ತು ಪುಷ್ಟೀಕರಿಸಲ್ಪಟ್ಟಿದ್ದು, ನಾಯಕರ ನಡೆಯ ಘಟನೆಗಳನ್ನು ರಾಮಾಯಣ ಮತ್ತು ಮಹಾಭಾರತಗಳ ಮೂಲಕ ತೋರಿಸಲಾಗಿದೆ.[32]

ಮದ್ಯಯುಗ ಮತ್ತು ನಂತರದ ಕರ್ನಾಟಕದ ದೇವಾಲಯ ನಿರ್ಮಾಣಕಾರರು, ಬುದ್ಧಿವಂತರು ಮತ್ತು ಧಾರ್ಮಿಕ ನಾಯಕರು ಈ ಶಿಲ್ಪಗಳ ಮೂಲಕ ಜೀವನದ ಹಲವು ಅಂಶಗಳನ್ನು ಗುರುತಿಸುವ ಕೆಲಸವನ್ನು ಮಾಡಿರುವ ಅಂಶ ತಿಳಿದು ಬರುತ್ತದೆ. ಸಾವಿರಾರು ವಿದ್ಯಾರ್ಥಿಗಳಿಗೆ ಸಾಮೂಹಿಕ ಶಿಕ್ಷಣ ಕೊಡುವ ಯಾವುದೇ ಶೈಕ್ಷಣಿಕ ಅವಕಾಶಗಳು ಅಂದು ಇರಲಿಲ್ಲವಾದುದರಿಂದ, ಮೇಲುಕೋಟೆಯ ದೇವಾಲಯಗಳಂತಹಾ ದೇವಾಲಯಗಳು ಒಂದು ಶೈಕ್ಷಣಿಕ ಕೇಂದ್ರಗಳಂತೆ ಕಾರ್ಯನಿರ್ವಹಿಸುತ್ತಿದ್ದವು. ದೇವಾಲಯದ ಶಿಲ್ಪಗಳು ಮಹಾಕಾವ್ಯಗಳ ಆಂತರಿಕ ಸಂದೇಶವನ್ನು ನೀಡುತ್ತಿದ್ದವು. ಸೀತೆ ಮತ್ತು ದ್ರೌಪದಿ, ರಾಮ ಮತ್ತು ಅರ್ಜುನ, ಲಕ್ಷ್ಮಣ ಮತ್ತು ಹನುಮಂತ ಜನತೆಯ ಜೀವನದ ತತ್ವಗಳ ತಿರುಳಾಗಿದ್ದರು. ಸೀತೆ ಮತ್ತು ದ್ರೌಪದಿ ಜೀವನದ ಸುಖ ಮತ್ತು ದುಃಖಗಳನ್ನು ಪ್ರತಿಬಿಂಬಿಸಲು ನಿಂತಿದ್ದರು. ರಾಮ ಮತ್ತು ಅರ್ಜುನರ ಮನಸ್ಥೈರ್ಯ, ಲಕ್ಷ್ಮಣ ಮತ್ತು ಹನುಮಂತರ ಸ್ವಾಮಿಭಕ್ತಿಯನ್ನು ತೋರಿಸಲು ನಿಂತಿದ್ದಾರೆ. ಈ ಹಿನ್ನೆಲೆಯಲ್ಲಿ ದೇವಾಲಯದ

ಶಿಲ್ಪಗಳು ಮಹಾಕಾವ್ಯಗಳಿಗೆ ಸಂಬಂಧಿಸಿದಂತೆ ಸಂಸ್ಕೃತಿಯ ದೀವಟಿಗೆಯನ್ನು ಹಿಡಿದಿರುವಂತೆ ಕಂಡುಬರುತ್ತವೆ. ಮಹಾಭಾರತದ ಕೆಲವು ದೃಶ್ಯಗಳು ಮುಂದಿನಂತಿವೆ.

ಕಿರಾತಾರ್ಜುನೀಯ ಕಥೆ

1) ಅರ್ಜುನನು ತಪಸ್ಸು ಮಾಡುತ್ತಿರುವ ದೃಶ್ಯ

2) ಅರ್ಜುನನು ಇಂದ್ರನ ಮುಂದೆ ನಿಂತಿರುವುದು.

3) ಕಿರಾತ (ಶಿವ) ಕಾಡು ಹಂದಿ ಮುಖದನ್ವಕ್ಕೆ ಬಾಣ ಬಿಡುತ್ತಿರುವುದು.

4) ಅರ್ಜುನನು ಅದೇ ಹಂದಿಗೆ ಬಾಣ ಬಿಡುತ್ತಿರುವುದು

5) ಅರ್ಜುನನ ತಪಸ್ಸು ಭಂಗ ಮಾಡುತ್ತಿರುವ ಸ್ತ್ರೀಯರು

6) ಅರ್ಜುನನು ಶಿವನಿಗೆ ನಮಸ್ಕರಿಸುವಾಗ ನೋಡುತ್ತಿರುವ ಪಾರ್ವತಿ ಮತ್ತು ನಂದಿ.

7) ಶಿವನು ಅರ್ಜುನನಿಗೆ ಪಾಶುಪತಾಸ್ತ್ರ ಕೊಡುತ್ತಿರುವುದು.

8) ದ್ರೌಪದಿಯ ಸ್ವಯಂವರ

9) ಅರ್ಜುನನು ಪಾತ್ರೆಯ ನೀರನ್ನು ನೋಡಿ ಮೇಲಿರುವ ಮೀನಿಗೆ ಬಾಣಬಿಡುತ್ತಿರುವ ದೃಶ್ಯ.

10) ದ್ರೌಪದಿಯು ಪಾಂಡವರಿಗೆ ಹಾರಹಾಕುತ್ತಿರುವ ದೃಶ್ಯ

11) ಕೃಷ್ಣನು ಸೂರ್ಯನನ್ನು ಮರೆಮಾಡುತ್ತಿರುವ ದೃಶ್ಯ.

12) ಸೈಂಧವನ ತಪಸ್ಸು

ನಾರಾಯಣಸ್ವಾಮಿ ದೇವಾಲಯ ಸಂಕೀರ್ಣವು ರಾಮಾಯಣದ ಕೆಲವು ಮುಖ್ಯ ಕಥೆಯ ದೃಶ್ಯಗಳನ್ನು ಶಿಲ್ಪದ ರೂಪದಲ್ಲಿ ಹೊಂದಿದೆ. ವಾಲ್ಮೀಕಿಯಿಂದ ರಚಿಸಲ್ಪಟ್ಟ ರಾಮಾಯಣವು ದೇಶದ ಜನರ ನಡವಳಿಕೆಯನ್ನು ರೂಪಿಸುವಲ್ಲಿ ಹಲವು ಕಾಲಗಳಿಂದ ಗುರುತರವಾದ ಪಾತ್ರವಹಿಸಿದೆ ಹಾಗೂ ಕನ್ನಡದ ಹಲವು ಕವಿಗಳಿಗೆ ಸ್ಫೂರ್ತಿಯ ಮೂಲವಾಗಿ ಪಾತ್ರವಹಿಸಿದೆ. ನಿಸ್ಸಂದೇಹವಾಗಿ ರಾಮಾಯಣವು ಸಾಹಿತ್ಯದ ಅಪೂರ್ವ ರಚನೆಯಾಗಿದೆ. ರಾಮಾಯಣದ ಮುಖ್ಯ ಉದ್ದೇಶವು ದೇವರು ಮತ್ತು ದುಷ್ಟರ ನಡುವಿನ ನಿರಂತರ ಸಂಘರ್ಷ ಮತ್ತು ದುಷ್ಟರ ವಿರುದ್ದ ದೇವರ ವಿಜಯವನ್ನು ತಿಳಿಸುವುದಾಗಿದೆ. ರಾಮನು ದೇವರ ಪ್ರತಿರೂಪವಾಗಿ ಕಾಣಿಸಿಕೊಂಡು ಸ್ಫೂರ್ತಿ ಸಮಾನತೆ ಮತ್ತು ನ್ಯಾಯವನ್ನು ಪ್ರತಿಪಾದಿಸುವನು. ಮತ್ತೊಂದು ಕಡೆ ರಾವಣನ ಈ ಗುಣಗಳಿಗೆ

ವಿರುದ್ಧವಾಗಿದ್ದನು. ಲಕ್ಷ್ಮಣನು ರಾಮನ ಉದಾತ್ತ ಸಹೋದರನಾಗಿದ್ದನು. ಕಾಡಿಗೆ ಹೊರಟ ರಾಮನನ್ನು ಹಿಂಬಾಲಿಸುವ ಮೂಲಕ ತನ್ನ ಆಡಂಬರದ ರಾಜ್ಯಾಡಳಿತವನ್ನು ತ್ಯಾಗ ಮಾಡಿದನು. ಸಂತೋಷದಿಂದ ಹಲವು ಕಷ್ಟಗಳಿದ್ದರೂ ಸಾಮಾನ್ಯ ಮನುಷ್ಯನಂತೆ ಅಣ್ಣ ರಾಮ ಮತ್ತು ಅತ್ತಿಗೆ ಸೀತೆಯನ್ನು ನೋಡಿಕೊಳ್ಳಲು ತೆರಳುವನು. ಹನುಮಂತನು ಇಲ್ಲಿ ರಾಮನ ನಿಕಟ ಭಕ್ತನಾಗಿ ಹಾಗೂ ಪ್ರಾಮಾಣಿಕ ಸೇವಕನಾಗಿ ಗುರುತಿಸಲ್ಪಟ್ಟಿದ್ದಾನೆ. ಸೀತೆಯು ಅತ್ಯಂತ ಪವಿತ್ರ ಹಾಗೂ ತ್ಯಾಗಮಯಿಯಾಗಿ ಗುರುತಿಸಲ್ಪಟ್ಟಿದ್ದಾಳೆ.

ಹಿಂದುಗಳ ಮೇಲೆ ರಾಮಾಯಣದ ಪ್ರಭಾವದ ಪ್ರಯೋಗವು ಸಮಾಜದ ಕೆಳಸ್ತರದ ಮೇಲೂ ಅಕ್ಷರಶಃ ಮಹತ್ತರವಾಗಿ ಆಗಿತ್ತು. ಇದು ಭಾರತದ ರಾಜ್ಯ ವ್ಯವಸ್ಥೆಯ ಸಂಪೂರ್ಣ ತಿರುಳನ್ನು ಒಳಗೊಂಡಿತ್ತು. ಇದು ಚಿಂತನೆಗಳ ಪರಿಪೂರ್ಣತೆಗೆ ಶಕ್ತಿಯನ್ನು ಎರವಲುಕೊಡುವ ಮೂಲಕ ಕೊಡುಗೆ ನೀಡಿದೆ.[33]

ರಾಮಾಯಣದ ಕಥೆಯ ದೃಶ್ಯಗಳು

1) ರಾಮ, ಸೀತೆ ಮತ್ತು ಲಕ್ಷ್ಮಣರು ಜೊತೆಯಾಗಿ ನಿಂತಿರುವುದು.
2) ಸೀತೆಯು ಜಿಂಕೆಯ ಮುಂದೆ ನಿಂತಿರುವುದು.
3) ರಾಮ ಮತ್ತು ಲಕ್ಷ್ಮಣರು ದುಃಖದಿಂದ ಸೀತೆಯ ಬಗ್ಗೆ ಯೋಚಿಸುತ್ತಿರುವುದು.
4) ವಾಲಿಯು ಸುಗ್ರೀವನ ತಲೆಯನ್ನು ಹಿಡಿದು ಹೋರಾಡುತ್ತಿರುವುದು.
5) ಸುಗ್ರಿವನು ನೋವಿನಿಂದ ನರಳುತ್ತಿರುವುದು.
6) ರಾಮ, ಲಕ್ಷ್ಮಣರು ಮರದ ಹಿಂದೆ ನಿಂತು ಹೋರಾಟವನ್ನು ನೋಡುತ್ತಿರುವುದು.
7) ರಾಮನು ಮರೆಯಲ್ಲಿ ನಿಂತು ವಾಲಿಗೆ ಬಾಣ ಬಿಡುತ್ತಿರುವುದು.
8) ರಾವಣನಿಂದ ಜಟಾಯು ಸಂಹಾರ
9) ಸೀತೆಯು ರಾಮನಿಗಾಗಿ ಕಾಯುತ್ತಿರುವ ದೃಶ್ಯ
10) ಆಂಜನೇಯನ ಹೆಗಲ ಮೇಲೆ ಕುಳಿತ ಲಕ್ಷ್ಮಣನಿಂದ ಇಂದ್ರಜಿತುವಿನ ಸಂಹಾರ.
11) ಹನುಮಂತನು ಸಂಜೀವಿನಿ ಪರ್ವತವನ್ನು ಎತ್ತಿರುವುದು.
12) ಹನುಮಂತನು ಮರದ ಮೇಲೆ ಕುಳಿತು ಸೀತೆಯನ್ನು ಹುಡುಕುತ್ತಿರುವುದು.

13) ಹನುಮಂತನು ಭಯಂಕರ ವ್ಯಕ್ತಿಯೊಂದಿಗೆ ಹೋರಾಡುತ್ತಿರುವುದು.

14) ಹನುಮಂತನು ರಾಮನಿಗೆ ಬಾಗಿ ನಮಸ್ಕರಿಸುತ್ತಿರುವುದು.

15) ರಾವಣನ 20 ಕೈಗಳು ಹಾಗೂ 20 ಬಗೆಯ ಆಯುಧಗಳನು ಹಿಡಿದಿರುವುದು.

16) ರಾಮನಿಂದ ರಾವಣ ಸಂಹಾರ.

ನಾರಾಯಣಸ್ವಾಮಿ ದೇವಾಲಯ ಸಂಕೀರ್ಣದಲ್ಲಿನ ಮತ್ತೊಂದು ಆಕರ್ಷಣೆಯೆಂದರೆ ಗಾರೆ ಶಿಲ್ಪಗಳು. ದೇವಾಲಯದ ಮುಖ್ಯ ಘಟಕದ ಸುತ್ತಲೂ ನಿರ್ಮಿಸಿರುವ ಗೋಡೆಗಳ ಮೇಲ್ಭಾಗದ ಕೈಪಿಡಿಗಳಲ್ಲಿ ಹಾಗು ಹೋರಗೋಡೆಯ ಸುತ್ತಲಿನ ಕೈಸಾಲೆಯ ಮೇಲಿರುವ ಕೈಪಿಡಿಗಳನ್ನು ಹಾಗೂ ಸ್ಥಳದ ಸುತ್ತಲಿನ ದೇವಾಲಯಗಳಲ್ಲಿ ಇವು ಸ್ಥಳದ ಸೌಂದರ್ಯವನ್ನು ಹೆಚ್ಚಿಸಿವೆ. ಧಾರ್ಮಿಕ ಮಹತ್ವ ಪಡೆದಿರುವ ಈ ಶಿಲ್ಪಗಳು ಸಾಂಸ್ಕೃತಿಕ ಮೆರುಗನ್ನು ಸಹ ಹೆಚ್ಚಿಸಿವೆ. ವಿಷ್ಣುವಿನ ದಶಾವತಾರದ ಶಿಲ್ಪಗಳು, ಪುರಾಣದ ಹಲವು ಘಟನೆಗಳು, ಹಲವು ಪ್ರಾಣಿಗಳ ಶಿಲ್ಪಗಳು. ಸರಳವಾದ ಗಂಡಸರ ಮತ್ತು ಹೆಂಗಸರ ಶಿಲ್ಪಗಳು ಇಲ್ಲಿ ಸ್ಥಾನಪಡೆದಿವೆ. ಈ ಶಿಲ್ಪಳು ಸಮಕಾಲೀನ ಸಮಾಜದ ಜೀವನವನ್ನು ತಿಳಿಯಲು ಮಹತ್ವದ ದಾಖಲೆಯನ್ನು ಒದಗಿಸುತ್ತವೆ. ಗಮನಾರ್ಹ ಅಂಶವೆಂದರೆ ಇಲ್ಲಿ ಕಂಡುಬರುವ ಶಿಲ್ಪಗಳು ದಂಪತಿಗಳ ಪ್ರೀತಿಸೂಚ್ಯವಾದ ಜೋಡಿಗಳ ವರ್ಣನೆ, ಮಿಥುನ ಶಿಲ್ಪಗಳ ವರ್ಣನೆಯೇ ಹೆಚ್ಚಾಗಿ ಕಂಡು ಬರುವಿಕೆ. ಪ್ರಶ್ನೆಯೆಂದರೆ ಇವು ದೇವಾಲಯದ ಹೊರಭಾಗದಲ್ಲಿ ಮಾತ್ರ ಕಂಡುಬರುತ್ತವೆ. ದೇವಾಲಯದ ಒಳಭಾಗದಲ್ಲಿ ಅಂದರೆ ಪೂಜಾಸ್ಥಳದಲ್ಲಿ ಈ ಶಿಲ್ಪಗಳು ಕಂಡುಬರುವುದಿಲ್ಲ. ಸಾಮಾಜಿಕ ದೃಷ್ಟಿಕೋನದಲ್ಲಿ ಮನುಷ್ಯನ ಸಾಮಾನ್ಯ ನೀತಿಯುಕ್ತ ವರ್ತನೆಯ ಉಲ್ಲಂಘನೆಯು ಇದಾಗಿರುವುದಿಲ್ಲ. ಹಿಂದೂ ಸಂಪ್ರದಾಯದಂತೆ ಕಾಮ ಮಾನವನ ಸಹಜ ನಾಲ್ಕು ಅಗತ್ಯತೆಗಳಲ್ಲಿ ಒಂದು. (ಇತರ ಮೂರೊಂದರೆ ಧರ್ಮ, ಅರ್ಥ, ಮೋಕ್ಷ) ಈ ಅಂಶದ ಆಧಾರದ ಮೇಲೆ ವಿಶ್ಲೇಷಣೆ ಮಾಡಬಹುದಾಗಿದೆ. ಭಕ್ತರು ತಮ್ಮ ಉದ್ವೇಗವನ್ನು ದೇವಾಲಯದ ಹೊರಗೆ ಬಿಡಲು ಬಯಸುವರು ಹಾಗೂ ದೇವಾಲಯವನ್ನು ಉನ್ನತ ಸ್ಫೂರ್ತಿಯಿಂದ ಪ್ರವೇಶಿಸುವರು. ನಂತರ ಮಾನವ ದೇವಾಲಯದ ಒಳಗೆ ತೊಂದರೆಗೊಳಗಾಗುವುದಿಲ್ಲ. ಆಂತರಿಕ ಶಾಂತಿಗೆ ಧಕ್ಕೆಯಾಗುವುದಿಲ್ಲ. ದೇವಾಲಯವನ್ನು ಮಾನವನ ದೇಹಕ್ಕೆ ಹೋಲಿಸಲಾಗಿದ್ದು, ಆತ್ಮವು ದೇಹದಲ್ಲಿರುತ್ತದೆ. ದೇವಾಲಯದಲ್ಲಿ ಗರ್ಭಗುಡಿಯಿರುವಂತೆ. ಇದು ದೇವಾಲಯ ನಿರ್ಮಾಣಕಾರನ ಸಾಮಾಜಿಕ ಸುಸಂಬದ್ಧತೆಯನ್ನು ತಿಳಿಸುವ ಉದ್ದೇಶವಾಗಿದೆ.

ದಿವ್ಯ ಪ್ರಬಂಧ ಸಂಗೀತ

ದೇವರಿಗೆ ನಡೆಯುವ ರಂಗಭೋಗ ಸೇವೆಯಲ್ಲಿ ಸಂಗೀತದ ಪಾತ್ರ ಪ್ರಮುಖವಾದುದು. ಇದು ಗೀತೆ, ವಾದ್ಯ ಮತ್ತು ನೃತ್ಯಗಳ ಮೂಲಕ ಸಲ್ಲಿಸುವ ಸೇವೆಯಾದ್ದರಿಂದ, ಅಂತಹಾ ಸೇವೆಗೆ ವಿಶೇಷವಾದ ವೇದಿಕೆ. ರಂಗಮಂಪಟದ ಅವಶ್ಯಕತೆ ಇತ್ತು. ದೇವರ ಎದುರಿಗೆ ಬಹಿರಂಗವಾಗಿ ನಡೆಯುತ್ತಿದ್ದ ಈ ಸೇವೆಯನ್ನು ಅಲ್ಲಿ ಸೇರುವ ಎಲ್ಲರೂ ನೋಡಬಹುದಿತ್ತು. ನೋಡಿ ಸಂತೋಷ ಪಡಬಹುದಾದ ವ್ಯವಸ್ಥೆಯನ್ನು ಮಾಡಲಾಗುತ್ತಿತ್ತು. ಇಲ್ಲಿನ ಶಾಸನಗಳು ಮತ್ತು ಶಿಲ್ಪಕಲಾಕೃತಿಗಳು ವಿವಿಧ ರಂಗಭೋಗ ಸೇವೆಯನ್ನು ತಿಳಿಯಲು ಸಹಕಾರಿಯಾಗಿವೆ. ಕರ್ನಾಟಕದ ಬಹುತೇಕ ದೇವಾಲಯಗಳಲ್ಲಿ ಈ ಸಂಪ್ರದಾಯವು ಅಳವಡಿಕೆಯಾಗಿತ್ತು.

ಇಲ್ಲಿ ಗಮನಾರ್ಹ ಅಂಶವೆಂದರೆ ಮೇಲುಕೋಟೆ ನಾರಾಯಣಸ್ವಾಮಿ ದೇವಾಲಯ ಸಂಕೀರ್ಣದಲ್ಲಿ ಆಚರಣೆಯಲ್ಲಿರುವ 'ದಿವ್ಯ ಪ್ರಬಂಧದ ಸಂಗೀತ' ಕರ್ನಾಟಕದ ಒಂದು ವಿಶಿಷ್ಟವಾದ ರಂಗಭೋಗ ಸೇವೆಯಾಗಿದೆ. ಶ್ರೀ ವೈಷ್ಣವ ಸಂಪ್ರದಾಯದ ಒಂದು ವಿಭಿನ್ನ ಸೇವೆಯಾಗಿದೆ. ದಿವ್ಯ ಪ್ರಬಂಧವು ತಮಿಳುನಾಡಿನಲ್ಲಿ ಮರೆಯಾಗುತ್ತಿರುವ ಕಾಲದಲ್ಲಿ, ಆಗಾಗ ಆ ಸಂಪ್ರದಾಯವನ್ನು ರಕ್ಷಿಸುವ ಕಾರ್ಯವನ್ನು ಮೇಲುಕೋಟೆ ದೇವಾಲಯಗಳು ಮಾಡುತ್ತಿವೆ. ತಮಿಳುನಾಡಿನಿಂದ ಹೊರಗಿರುವ ಮೇಲುಕೋಟೆ ನಾರಾಯಣಸ್ವಾಮಿ ದೇವಾಲಯವು ದಿವ್ಯ ಪ್ರಬಂಧವನ್ನು ಆಚರಣೆಯಲ್ಲಿಡುವ ಮೂಲಕ ಹೆಚ್ಚಿನ ಗೌರವಕ್ಕೆ ಪಾತ್ರವಾಗಿದೆ. ಇಲ್ಲಿ ನಾವು ದಿವ್ಯ ಪ್ರಬಂಧದ ಇತಿಹಾಸ ಮತ್ತು ಸಂಗೀತಕ್ಕೆ ಸಂಬಂಧಿಸಿದಂತೆ ಮೇಲುಕೋಟೆಯಲ್ಲಿ ಯಾವ ರೀತಿಯಲ್ಲಿ ಈ ಸಂಸ್ಕೃತಿಯನ್ನು ಜೀವಂತವಾಗಿಟ್ಟಿದೆ ಎಂಬ ಅಂಶವನ್ನು ತಿಳಿಯಬಹುದಾಗಿದೆ.

ದಿವ್ಯ ಪ್ರಬಂಧದ ಇತಿಹಾಸವನ್ನು ಕ್ರಿ.ಶ.ದ. ಆರಂಭದ ಶತಕಗಳಲ್ಲಿದ್ದ ಭಕ್ತಿ ಚಳುವಳಿಯ ಕಾಲದಲ್ಲಿ ಇದನ್ನು ಗುರುತಿಸಬಹುದು. ಮೊದಲ ಮೂರು ಆಳ್ವಾರರು ಸಮಕಾಲೀನರಾಗಿದ್ದು ಇವರು ಆರಂಭದ ಆಳ್ವಾರರೆನಿಸಿದ್ದಾರೆ. ಇವರು 2 ರಿಂದ 4ನೇ ಶತಮಾನಗಳ ಅವಧಿಗೆ ಸೇರುವರು. ಎರಡನೇ ಅವಧಿಗೆ ಸೇರಿದ ಆಳ್ವಾರರು 6 ರಿಂದ 7ನೇ ಶತಮಾನದ ಅವಧಿಗೆ ಸೇರುವರು. ಕೊನೆಯ ಮೂರು ಆಳ್ವಾರರು ಸಮಕಾಲೀನರಾಗಿದ್ದು, ಇವರು 8ನೇ ಶತಮಾನಕ್ಕೆ ಸೇರಿದ್ದವರಾಗಿದ್ದರು.

ಆರಂಭದಲ್ಲಿ ರಚಿಸಲ್ಪಟ್ಟ ದಿವ್ಯ ಪ್ರಬಂಧದ ಪದ್ಯಗಳು ಅತ್ಯಂತ ಸರಳವಾಗಿದ್ದವು. ಎರಡು ಸಾಲುಗಳಿಂದಾದ 'ಕುರಲ್' ಮತ್ತು 4 ಸಾಲುಗಳ 'ಅಸಿರಿಯಪ್ಪ' ಮುಖ್ಯವಾದವು.

ಆರಂಭದ ನಾಲ್ಕು ಆಳ್ವಾರರ ಪದ್ಯಗಳ ಯೋಗಸಿದ್ಧಿಯಲ್ಲಿ ಸೇರಿಸಲಾಗಿತ್ತು. ಆತ್ಮಪರೀಕ್ಷೆಗಳು ಮತ್ತು ಧ್ಯಾನಗಳ ಮೂಲಕ ಉನ್ನತ ಶಕ್ತಿಯನ್ನು ಅರ್ಥಮಾಡಿಕೊಳ್ಳುವ ಅಂಶಗಳು ಸೇರಿದ್ದವು. ಅತ್ಯಂತ ಗಹನ ಆಂತರಿಕ ಅನುಭವದ ಹೊಸದಾದ ನೆಲೆಗಳ ಆರಂಭದ ಗೌರವವು ನಮ್ಮಾಳ್ವಾರರಿಗೆ ಸೇರಬೇಕು ತಮಿಳು ಪದ್ಯವಾದ ಆಂಡಾಡಿಯ ವ್ಯಾಪ್ತಿಯನ್ನು ಮೊದಲಬಾರಿಗೆ ಒಳಹೊಕ್ಕಿ ಪರೀಕ್ಷಿಸಿದರು. ಇವರು ಸಾಹಿತಿಕವಾಗಿ ತಮಿಳು ಕವಿತಾಪದ್ಧತಿಯನ್ನು ಮತ್ತು ಹೊಸ ಪದಗಳನ್ನು ಪರಿಚಯಿಸಿದರು. ತಮ್ಮ ಅಭಿಪ್ರಾಯವನ್ನು ತಿಳಿಸಲು ಮತ್ತು ದೇವರೊಂದಿಗೆ ಪ್ರೀತಿಯ ಸಂಪರ್ಕವಿರಿಸಿಕೊಳ್ಳಲು ಸಾಹಿತ್ಯದ ಪದ್ಯಲಕ್ಷಣಗಳನ್ನು ತೆಗೆದುಕೊಂಡು, ಅದನ್ನು ರೂಪಕಗಳಾಗಿ ಬದಲಾಯಿಸಿದರು. ಇಲ್ಲಿ ನಾವು ಭಕ್ತಿಯು ಶೃಂಗಾರವಾಗಿರುವ ಬೆಳವಣಿಗೆಯನ್ನು ನೋಡಬಹುದು. ಇದೇ ಶೃಂಗಾರದ ಪದ್ಯಗಳನ್ನು ಹಾಡುವ ಮೂಲಕ ಪೆರಿಯಾಳ್ವಾರರು ಕೂಡ ಎರಡು ದಶಕಗಳನ್ನು ಕಳೆದರು. ಆಂಡಾಳ್ ಸಹ ನಾಚ್ಚಿಯಾರ್ ತಿರುಮೊಳಿ ಕುರಿತು ಶೃಂಗಾರ ಪದ್ಯಗಳನ್ನು ರಚಿಸಿದಳು.

ಮೂರನೇ ಅವಧಿಯ ಆಳ್ವಾರರು ಪೂಜ್ಯಭಾವನೆ ಹೊಂದಿದ ದಾಸ್ಯಭಕ್ತಿಯನ್ನು ಪ್ರತಿನಿಧಿಸುತ್ತಿದ್ದರು. ಅದೇ ಕಾಲದಲ್ಲಿ ದೇವಾಲಯಗಳು ಸಾಮಾಜಿಕ ಸಂಸ್ಥೆಯಾಗಿ ವೇಗವಾಗಿ ಬೆಳೆಯುತ್ತಿದ್ದವು. ತಿರುಪ್ಪಾಣಾಳ್ವಾರರು ಅತ್ಯಂತ ಸರಳವಾದ ಕವಿಯಾಗಿ ದೇವಾಲಯದ ಹೊರಗೆ ನಿಂತು ಹಾಡುತ್ತಿದ್ದರು. ತಿರುಮಂಗಿ ಆಳ್ವಾರರು ಸಹ ಈ ಸಾಲಿಗೆ ಸೇರುತ್ತಾರೆ. ನಾಥಮುನಿಗಳ ಕಾಲದಲ್ಲಿ ದಿವ್ಯಪ್ರಬಂಧದ ಸಂಗೀತದ ಮಾದರಿಯಲ್ಲಿ ಹಲವು ಗುರುತರ ಬದಲಾವಣೆಗಳಾದವು ಇದೇ ಸಂಪ್ರದಾಯವು ಮೇಲುಕೋಟೆಯಲ್ಲಿ ಮುಂದುವರೆಯಿತು.

ಅರೆಯರ್ : ಅರೆಯರ್ ಎಂಬ ಹೆಸರಿನ ವೈಷ್ಣವರು ದಿವ್ಯಪ್ರಬಂಧದ ಹಾಡುಗಳನ್ನು ಉತ್ಸವದ ಸಂದರ್ಭದಲ್ಲಿ ದೇವಾಲಯದಲ್ಲಿ ರಾಗವಾಗಿ ಹಾಡುತ್ತಾರೆ. ಇವರು ವಂಶಪಾರಂಪರ್ಯವಾಗಿ ಹಾಡುವ ಅವಕಾಶ ಪಡೆದಿದ್ದಾರೆ. ಹಾಗೂ ಇತರ ಶ್ರೀ ವೈಷ್ಣವರೂ ಸಹ ಅವರೊಂದಿಗೆ ಹಾಡುತ್ತಾರೆ. ಈ ಹಾಡನ್ನು ಹಾಡುವಾಗ 'ಅರೆಯರ್' ಎಂಬ ಹಾಡುಗಾರರು ಕಸೂತಿ ಮಾಡಿದ ರೇಷ್ಮೆ ಟೋಪಿಯನ್ನು ಧರಿಸುವರು. ಇದು ಆಭರಣವನ್ನು ಧರಿಸುವ ಉದ್ದೇಶ ಮತ್ತು ಮಾದರಿಯಾಗಿದೆ. ಈ ಮೂಲಕ ಇವರು ಕೆಲವು ರಹಸ್ಯಾರ್ಥವುಳ್ಳ ಕಥೆಗಳನ್ನು ಸಹ ಹೇಳುವರು. ಈತನು ಪೂರ್ಣವಾಗಿ ಉತ್ಸುಕವಾಗಿರಬೇಕು ಮತ್ತು ತಾನು ಹೇಳುವ ಗೀತೆಯ ಪದ್ಯದ ಭಾಗಗಳನ್ನು ತಿಳಿದಿರಬೇಕು. ಕೆಲವು ವಿಶೇಷ ಸಂದರ್ಭಗಳಲ್ಲಿ ಸಹಾಯಕರನ್ನು (ಮಾತು ನೆನಪಿಸುವ) ಬಳಸುವರು. ಇವರು ಹಾಡುವಾಗ ತಾಳವನ್ನು ಬಳಸುವರು. ಸಾಮೂಹಿಕವಾಗಿಯೂ ದಿವ್ಯ ಪ್ರಬಂಧವು ಶ್ರೀ ವೈಷ್ಣವರಿಂದ ಹಾಡಲ್ಪಡುತ್ತದೆ. ಪ್ರತಿ ದಿನ ನಾರಾಯಣಸ್ವಾಮಿ ದೇವಾಲಯ ಸಂಕೀರ್ಣದಲ್ಲಿ ಮೂರು ಬಾರಿ

ಹಾಡಲ್ಪಡುತ್ತದೆ. ಈ ಮೂಲಕ ಭಕ್ತಿಸಂಪ್ರದಾಯದ ಆಳ್ವಾರರ ಸಂದೇಶವನ್ನು ಸಾರ್ವಜನಿಕವಾಗಿ ತಿಳಿಸುವ ಸಂಪ್ರದಾಯ ಇದಾಗಿದೆ. ಆದರೆ ಸ್ಥಳದ ಭಾಷೆ ಕನ್ನಡವಾಗಿದ್ದು, ಪದ್ಯಗಳನ್ನು ತಮಿಳಿನಲ್ಲಿ ಹಾಡುವುದರಿಂದ ಅದರ ಅರ್ಥವು ಸ್ಥಳೀಯರಿಗೆ ತಿಳಿಯುತ್ತಿದ್ದುದು ಕಷ್ಟ. ಈ ವಿಶಿಷ್ಟ ಸಂಗೀತ ಸಂಪ್ರದಾಯವು ಇಂದಿಗೂ ಅನುಚಾನವಾಗಿ ಮುಂದುವರೆದಿದೆ.

ಇತಿಹಾಸದಿಂದ ತಿಳಿದು ಬರುವಂತೆ 9ನೇ ಶತಮಾನದಲ್ಲಾದ ದಿವ್ಯ ಪ್ರಬಂಧದ ಪುನರ್ ಪರಿಷ್ಕರಣೆಯು ಮೇಲುಕೋಟೆಯ ದೇವಾಲಯಕ್ಕೆ ಉಪಕಾರಬದ್ಧವಾಗಿರಬೇಕು. ಇದಾದ 300 ವರ್ಷಗಳ ನಂತರ ರಾಮಾನುಜರು ಈ ಸ್ಥಳದಲ್ಲಿ ದಿವ್ಯ ಪ್ರಬಂಧದ ಪ್ರಾಮುಖ್ಯತೆಯನ್ನು ಹೆಚ್ಚಿಸಿದರು. ಈ ಸ್ಥಳದ ಮಹಿಳೆಯರು ಸಹ ಈ ಸಂಗೀತದ ಸಂಸ್ಕೃತಿಯನ್ನು ಮುಂದುವರೆಸುತ್ತಿದ್ದಾರೆ.

ಚಿತ್ರಕಲೆ

ಮೇಲುಕೋಟೆಯು ಸ್ವಾಭಾವಿಕವಾಗಿ ತನ್ನ ಸೌಂದರ್ಯದ ನೋಟದಿಂದ ಮರಳುಗೊಳಿಸುವ ಕಲಾ ಚಿತ್ರಶಾಲೆಯನ್ನೇ ಹೊಂದಿದೆ. ಕಾಳಿದಾಸ ಹೇಳುವಂತೆ "ಪಾಸ್ಯ ದೇವಸ್ಯ ಕಾವ್ಯಂ" (ದೇವರ ಕಾವ್ಯವನ್ನು ನೋಡು) ಎಂಬ ಹೇಳಿಕೆಯು ಮೇಲುಕೋಟೆಗೆ ಸಂಬಂಧಿಸಿದಂತೆ ಅಕ್ಷರಶಃ ಸತ್ಯ. ಇದು ದೇವಾಲಯಗಳು, ಮಂಟಪಗಳು, ಕೊಳಗಳು, ಕಣಿವೆಗಳು ಮತ್ತು ಸಣ್ಣಗುಡ್ಡಗಳಿಂದ ತುಂಬಿದೆ. ಭರವಸೆಗಳನ್ನು ಮತ್ತು ವಿಪುಲ ಅವಕಾಶಗಳನ್ನು ನೀಡುವ ಮೂಲಕ ಈ ಸ್ಥಳವು ಕಲಾವಿದರನ್ನು ಕ್ರಿಯಾಶೀಲವಾಗಿ ಜೀವಂತವಾಗಿ ಇರಿಸಿದೆ.

ಆಧ್ಯಾತ್ಮಿಕ ಚಿತ್ರಕಲೆಯ ನಿಧಿಯಾಗಿ, ಕಲಾಪ್ರಪಂಚದಲ್ಲಿ ಒಂದು ಉತ್ತಮ ಸಂಗ್ರಹಾಲಯವಾಗುವ ಎಲ್ಲಾ ಅರ್ಹತೆಗಳನ್ನು ಹೊಂದಿದೆ. ಹತ್ತಿರತ್ತಿರ 50 ಅತ್ಯುತ್ತಮ ಚಿತ್ರಕಲೆಯ ಕುರುಹುಗಳು ಇಲ್ಲಿ ದೊರೆತಿದ್ದು ಇವುಗಳ ಪ್ರಾಚೀನತೆ ಇಲ್ಲಿನ ಸಾಂಸ್ಕೃತಿಕ ಮೆರುಗನ್ನು ವೃದ್ಧಿಸಿದೆ. ಈ ಕಲೆಯು ತನ್ನ ಆಧ್ಯಾತ್ಮಿಕ ಮುಖಗಳ ಮೂಲಕ ವಿಶಿಷ್ಟತೆ ಪಡೆದಿದೆ. ಇಲ್ಲಿ ಲಭ್ಯವಿರುವ ಕಲಾಕೃತಿಗಳಲ್ಲಿ ಕಲಾತ್ಮಕವಾಗಿ ಎದ್ದುಕಾಣುವ ಅಂಶವೆಂದರೆ ರೇಷ್ಮೆಯಿಂದ ಮಾಡಿದ ಗಟ್ಟಿಯಾದ ಹಾಳೆಯ ಮೇಲೆ ಬರೆದ ಜಟಿಲವಾದ ಕೆಲಸ. ಈ ಕಲೆಯನ್ನು ರಚಿಸುವ ರೇಷ್ಮೆ ಹಾಳೆಯ ಪಟ್ಟಿಯನ್ನು ಒಣಗಿದ ಸೀಸದಪುಡಿ ಮತ್ತು ಅಂಟುರಾಳಗಳನ್ನು ಮಿಶ್ರಣಮಾಡಿ ತಯಾರಿಸುವರು. ಈ ಮಾದರಿಯ ಮೇಲೆ ಚಿನ್ನದ ಎಲೆಗಳನ್ನು ಅಂಟಿಸಲಾಗುತ್ತದೆ. ಇವು ಪುರಾಣಗಳಿಂದ ಪ್ರಭಾವಿತವಾದ ವಿಷಯವಸ್ತುವನ್ನು

ಬಳಸಿ ಮರೆಯಲಾಗದ ದೈವಿಕ ಮುಖಗಳನ್ನು ಹೊಂದಿವೆ. ಹೀಗೆ ಚಿತ್ರಕಲೆಯು ಈ ಸ್ಥಳದ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುತ್ತಿದೆ.

ಮೇಲುಕೋಟೆಯಲ್ಲಿ ಲಭ್ಯವಾಗಿರುವ ಕೆಲವು ಚಿತ್ರಕಲೆಯ ಪಟ್ಟಿ ಮತ್ತು ಅದರ ಕಲಾಶ್ರೇಷ್ಠತೆ ಹಾಗೂ ಅದರ ವಸ್ತುವಿನ ವಿವರಣೆಯನ್ನು ತಿಳಿಯಲಾಗಿದೆ.

ಸ್ಥಳದ ಕಲ್ಯಾಣಿ ಬೀದಿಯ ಮನೆಯಲ್ಲಿ 3 ಪ್ರಾಚಿನ ಕಲಾಚಿತ್ರಗಳಿವೆ. ಕಂಬನ್ ಲಕ್ಷ್ಮಣ ಅಯ್ಯಂಗಾರ್‌ರ ಮನೆಯಲ್ಲಿ 16' x 18'' ಉದ್ದಗಲದ ಒಂದು ಕಲಾಕೃತಿಯಿದೆ. ಇಲ್ಲಿ ಶ್ರೀ ಕೃಷ್ಣನು ರುಕ್ಮಿಣಿ ಸತ್ಯಭಾಮೆಯೊಂದಿಗೆ ಸಿಂಹಾಸನದಲ್ಲಿ ಕುಳಿತಿದ್ದಾನೆ. ಅವನ ಮುಂದೆ ಗೋಪಿಕೆಯರು ಸುತ್ತುವರೆದು ಸಂಗೀತ ವಾದ್ಯಗಳನ್ನು ನುಡಿಸುತ್ತಿದ್ದಾರೆ. ಇಲ್ಲಿ ಚಿನ್ನದ ಹಾಳೆಯನ್ನು ಬಳಸಿಲ್ಲ ಆದರೆ ಇದರ ಗೆರೆಗಳು ಸೂಕ್ಷ್ಮವಾದ ಹಾಗೂ ಶ್ಲಾಘನಾರ್ಹವಾದವು. ವಿವಿಧ ಬಣ್ಣಗಳನ್ನು ಬಳಸಿರುವ ಇದು ಉತ್ತಮ ಚಿತ್ರಕಲೆಯಾಗಿದೆ. ಇದು ಸುಮಾರು 150 ವರ್ಷಗಳ ಪ್ರಾಚೀನತೆಯನ್ನು ಹೊಂದಿದೆ. ಮತ್ತೆರಡು ಚಿತ್ರಕಲೆಗಳು ಈ ಬೀದಿಯ ಸುರೇಂದ್ರ ಕೌಲಗಿಯವರ ಮನೆಯಲ್ಲಿವೆ. ಸುಮಾರು 200 ವರ್ಷಗಳಷ್ಟು ಹಳೆಯದಾದ ಬಾಲಕೃಷ್ಣನ ಆಕೃತಿಯು ಗಮನಾರ್ಹವಾಗಿದೆ. ಕಾಗದದ ಆಯಸ್ಸು ಮತ್ತು ಬಣ್ಣದ ಮಾಸಿರುವುಕೆಯು ಇದರ ಕಾಲವನ್ನು ತಿಳಿಯಲು ಸಹಕಾರಿ. ಸೀತಾಕಲ್ಯಾಣದ ಮತ್ತೊಂದು ಚಿತ್ರವು ಸೀತಾಕಲ್ಯಾಣವಾಗಿದ್ದು, ಇದು 100 ವರ್ಷಗಳಷ್ಟು ಹಳೆಯದು.

ಸ್ಥಳದ ಕುಣಿಗಲ್ ಬೀದಿಯಲ್ಲಿರುವ ರಾಮಾನುಜಂ ಕೃಷ್ಣ ಅಯ್ಯಂಗಾರ್ ಮನೆಯ ಗೋಡೆಯ ಮೇಲೆ 2 ಚಿತ್ರಗಳನ್ನು ಬಿಡಿಸಲಾಗಿದೆ. ಇಲ್ಲಿ ಗೋಪಿಯು ಬಾಲಕೃಷ್ಣನಿಗೆ ಸಿಹಿಯನ್ನು ಕೊಡುತ್ತಿರುವ ದೃಶ್ಯ ಆಕರ್ಷಕವಾಗಿದೆ. ಇದೇ ಬೀದಿಯ ಶೆಲ್ವಪಿಳ್ಳೆ ಅಯ್ಯಂಗಾರ್ ಮನೆಯಲ್ಲಿ 200 ವರ್ಷಗಳಷ್ಟು ಹಳೆಯದಾದ ಶ್ರೀ ರಾಮನ ಅವತಾರದ ಕಲಾಕೃತಿಯು ಮನೋಹರವಾಗಿದೆ. ಇಲ್ಲಿ ಕೋದಂಡರಾಮನ ಚಿತ್ರ ಲಭ್ಯವಾಗಿದ್ದು ಇದರ ಕಾಲವನ್ನು ಗುರಿತಿಸುವುದು ಕಷ್ಟವಾಗಿದೆ. ಇದೇ ಬೀದಿಯ ವೆಂಕಟಾದ್ರಿಯವರ ಮನೆಯಲ್ಲಿ ತಂಜಾವೂರು ಶೈಲಿಯಲ್ಲಿರುವ ಹಾಗೂ ಗಾಜಿನಿಂದ ಅಲಂಕರಿಸಿರುವ ಆದಿಶೇಷನ ಮೇಲಿನ ಕೃಷ್ಣನ ಚಿತ್ರವು ಆಕರ್ಷಕವಾಗಿದೆ.

ಇದೇ ಬೀದಿಯಲ್ಲಿರುವ ಅರೆಯರ್ ರಾಮಶರ್ಮರ ಮನೆಯಲ್ಲಿ 3 ಚಿತ್ರಗಳು ಲಭ್ಯವಾಗಿವೆ. ಇದು ಸಾಂಪ್ರದಾಯಿಕವಾದ ಮತ್ತು ಪ್ರಾಚೀನವಾದ ಕಲಾಕೃತಿಯಾಗಿದೆ. ಕೋದಂಡರಾಮ ಮತ್ತು ಯತಿರಾಜರು ಶೆಲ್ವಪಿಳ್ಳೆಯನ್ನು ತೊಡೆಯ ಮೇಲಿಟ್ಟುಕೊಂಡಿರುವ ದೃಶ್ಯವು ಆಕರ್ಷಕವಾಗಿದ್ದು ಅಪೂರ್ವವಾದ ಕಲಾಕೃತಿಗಳಾಗಿವೆ. ಕರಡಿ

ರಂಗಸ್ವಾಮಿಶೆಟ್ಟಿಯವರ ಮನೆಯಲ್ಲಿರುವ ಅತ್ಯಂತ ಸರಳ ಶ್ರೇಷ್ಟ ಹಾಗೂ ಕಲಾನೈಪುಣ್ಯತೆಯಿರುವ ಲಕ್ಷ್ಮೀ ಹಾಗೂ ಶ್ರೀರಾಮನ ಕಲಾಕೃತಿಗಳು ವಿಶೇಷವಾಗಿವೆ.

ಮೇಲುಕೋಟೆಯ ಯತಿರಾಜಮಠವು ಒಂದು ಸಣ್ಣ ಸಣ್ಣ ಸಾಂಪ್ರದಾಯಿಕ ಚಿತ್ರಕಲೆಯ ಸಂಗ್ರಹಾಲಯದಂತಿದೆ. ಸುಬ್ರಮಣ್ಯರಾಜುರವರು ಮೈಸೂರು ಒಡೆಯರ ಆಶ್ರಯವನ್ನು ಪಡೆದಿದ್ದು, ಇಲ್ಲಿನ ಚಿತ್ರಕಲೆಗಳನ್ನು ಪುನರ್ ನವೀಕರಿಸಿದ್ದಾರೆ. ಅದರಲ್ಲಿ ಶ್ರೀ ರಾಮನ ಅವತಾರದ ದೃಶ್ಯ ಮುಖ್ಯವಾದುದು. ಯತಿರಾಜ ಮಠದ ಗೋಡೆಯ ಮೇಲಿರುವ ಮತ್ತೊಂದು ಆಳ್ವಾರರ ಚಿತ್ರವು ಮೈಸೂರಿನ ಚಂದ್ರಶೇಖರ್‌ರಿಂದ ಇತ್ತೀಚೆಗೆ ಪುನರ್ ರಚಿತವಾಗಿದೆ. ಈ ಮಠದ ಗೋಡೆಗಳ ಮೇಲೆ ಚಿತ್ರಿತವಾಗಿರುವ ಕಲೆಗೆ ಸ್ಥಳೀಯ ಮೂರ್ತಿಗಳು ವಸ್ತುವಾಗಿವೆ. ಉದಾ: ವರಹ, ಹಯಗ್ರೀವ, ಬಾಲಕೃಷ್ಣ, ಆಂಡಾಳ್, ತಿರುನಾರಾಯಣ, ಗೋಡೆಗಳಲ್ಲಿ ರಚಿತವಾಗಿರುವ ಈ ಚಿತ್ರಕಲೆಯು ಸ್ಥಳದ ಸಂಸ್ಕೃತಿಯ ಗುರುತರ ಅಂಶಗಳಾಗಿವೆ.

ಈ ಸ್ಥಳದಲ್ಲಿ ಲಭ್ಯವಾಗಿರುವ ಇನ್ನಿತರ ಚಿತ್ರಕಲಾಕೃತಿಗಳು ಈ ಕೆಳಗಿನಂತಿವೆ.

1) ಸಮುದ್ರ ಮಂಥನದ ಸಂದರ್ಭದಲ್ಲಿ ಧನ್ವಂತರಿಯ ಅವತಾರ
2) ಚಕ್ರತ್ತಾಳ್ವಾರರ ಚಿತ್ರ
3) ಕೊಳಲನ್ನು ಹಿಡಿದಿರುವ ಗೋಪಾಲನ ಎರಡೂ ಕಡೆ ಗೋಪಿಕೆಯರು ನೃತ್ಯ ಮಾಡುತ್ತಿರುವ ದೃಶ್ಯ
4) ವಿಷ್ಣುವಿನ ಸುತ್ತಲೂ ದಶಾವತಾರಗಳಿರುವ ಕಲಾಕೃತಿ.
5) ಶ್ರೀ ರಾಮನ ಅವತಾರ
6) ಶಿವ ಮತ್ತು ಪಾರ್ವತಿಯರ ಕಲಾಕೃತಿ
7) ಚಿನ್ನದ ಎಲೆಯ ಮೇಲೆ ರಚಿತವಾಗಿರುವ ಲಕ್ಷ್ಮೀನರಸಿಂಹನ ಚಿತ್ರ (ಲಕ್ಷ್ಮೀನರಸಿಂಹಾಚಾರರ ಮನೆಯಲ್ಲಿ)
8) ಸರಸ್ವತಿಯು ವೀಣೆಯನ್ನು ನುಡಿಸುತ್ತಿರುವ ಚಿತ್ರ
9) ರಾಮಾಯಣದ ವಿವಿಧ ಘಟನೆಗಳ ದೃಶ್ಯಗಳು
10) ಶ್ರೀರಾಮನ ಪಟ್ಟಾಭಿಷೇಕದ ದೃಶ್ಯ
11) ಶ್ರೀ ಲಕ್ಷ್ಮೀಹಯಗ್ರೀವನ ಚಿತ್ರ
12) ಕೊಳಲನ್ನು ಹಿಡಿದಿರುವ ಕೃಷ್ಣನನ್ನು ಗೋಪಿಕೆಯರು ಸುತ್ತುವರೆದಿರುವ ದೃಶ್ಯ.

13) ವಿಷ್ಣುವಿನ ದಶಾವತಾರಗಳು

14) ಶ್ರೀನಿವಾಸನ ಚಿತ್ರ

15) ಮುಮ್ಮಡಿ ಕೃಷ್ಣರಾಜ ಒಡೆಯರ ಚಿತ್ರ (1930)

ಮೇಲುಕೋಟೆಯ ಜನಪದ ಕಲೆಗಳು

ಹುಟ್ಟು-ಸಾವುಗಳ ಮಧ್ಯದಲ್ಲಿ ಮನುಷ್ಯನ ಬದುಕು ಅರಳುತ್ತದೆ. ಸಾಧ್ಯವಾದಷ್ಟು ಬದುಕನ್ನು ಆನಂದೋತ್ಸಾಹಗಳಿಗೆ ಬಗ್ಗಿಸಿಕೊಂಡು ಹಗುರು ಮಾಡಿಕೊಳ್ಳಲು ಪ್ರಯತ್ನಿಸುತ್ತಾನೆ. ಇದಕ್ಕೆ ಅನೇಕ ಮಾಧ್ಯಮಗಳನ್ನು ಹುಡುಕಿಕೊಳ್ಳುತ್ತಾನೆ. ಇವುಗಳಲ್ಲಿ ಕಲೆಯೂ ಒಂದು.

ಪ್ರದರ್ಶನಾತ್ಮಕ ಕಲೆಗಳು

ಪ್ರದರ್ಶನಾತ್ಮಕ ಕಲೆಗಳಿಗೆ ಕುಣಿತಗಳೇ ಮೂಲಗಳು. ಮೊದ ಮೊದಲು ಸಂತೋಷದಾದಗಲೆಲ್ಲಾ ಮಕ್ಕಳಂತೆ ಕುಣಿಯುತ್ತಿದ್ದ ಮನುಷ್ಯ ಕ್ರಮೇಣ ಈ ಕುಣಿತವನ್ನೇ ತಾಳ-ಲಯಗಳಿಗೆ ಹೊಂದಿಸಿಕೊಂಡು ಕಲೆಯನ್ನಾಗಿಸಿದ. ಕುಣಿತ ಒಮ್ಮೆ ಕಲೆಯಾದ ಮೇಲೆ ಇದರ ಅಭಿವ್ಯಕ್ತಿಗೆ ನಿಶ್ಚಿತ ಕಾಲ-ಸ್ಥಳಗಳು ಗೊತ್ತಾದವು. ಮುಂದೆ ಪರಂಪರೆಯಿಂದ ಬಂದ ಇವುಗಳನ್ನು ಪರಿಶ್ರಮದಿಂದ, ಅಭ್ಯಾಸದಿಂದ ರೂಢಿಸಿಕೊಂಡು ಉಳಿಸಿಕೊಂಡು ಕಲೆಯಾಗಿ ಬೆಳೆಸಿಕೊಂಡು ಹೋದ. ಇಂತಹ ಕಲೆಗಳಲ್ಲಿ ಯಕ್ಷಗಾನ, ಗಾರುಡಿಗೊಂಬೆ, ದೊಣ್ಣೆ ವರಸೆ, ಕತ್ತಿವರಸೆ, ಪಟಾವರಸೆ, ಕಂಸಾಳೆ, ಮಾರಿಕುಣಿತ, ಕೋಲಾಟ, ಸೂತ್ರದ ಗೊಂಬೆ ಆಟ, ಗೊರವರ ಕುಣಿತ, ತೊಗಲುಗೊಂಬೆ ಆಟ, ನಾಟಕ, ಪೂಜಾ ಕುಣಿತ, ಪಟಾ ಕುಣಿತ, ಸೋಮನಕುಣಿತ,... ಇನ್ನೂ ಮುಂತಾದವುಗಳು ಮುಖ್ಯವಾಗಿವೆ.

ಮೇಲುಕೋಟೆಗೆ ಸಂಬಂಧಿಸಿದ ಈ ಕಲೆಗಳನ್ನು ಅಧ್ಯಯನದ ಅನುಕೂಲತೆಗೆ.

ಅ) ಊರಿನವರು ಪ್ರದರ್ಶಿಸುವ ಕಲೆಗಳು, ಮತ್ತು

ಆ) ಬೇರೆ ಊರಿನವರು ಇಲ್ಲಿಗೆ ಬರುವ ಪ್ರದರ್ಶಿಸುವ ಕಲೆಗಳು-ಎಂದು ಎರಡು ಭಾಗಗಳಾಗಿ ವಿಂಗಡಿಸಿಕೊಳ್ಳಬಹುದು.

ಊರಿನವರು ಪ್ರದರ್ಶಿಸುವ ಕಲೆಗಳು : ಮೇಲುಕೋಟೆಯವರು ಪ್ರಮುಖವಾಗಿ ಪ್ರದರ್ಶಿಸುತ್ತಿದ್ದ ಕಲೆಗಳೆಂದರೆ, ಯಕ್ಷಗಾನ, ತೊಗಲುಗೊಂಬೆಯಾಟ, ಪೌರಾಣಿಕ ನಾಟಕ,

ಗಾರುಡಿಗೊಂಬೆ, ಕೋಲಾಟ,... ಇನ್ನೂ ಮುಂತಾದವು. ಆದರೆ ಇವು ಇಂದು ನಶಿಸುವ ಹಾದಿಯಲ್ಲಿವೆ. ಏಕೆಂದರೆ ಇವುಗಳನ್ನೇ ಪೂರ್ಣವಾಗಿ ನಂಬಿ ಜೀವನೋಪಾಯ ನಡೆಸುವುದು ಸಾಧ್ಯವಿಲ್ಲದಿರುವುದರಿಂದ, ಈ ಕಲೆಗಳಿಗೆ ಸಾಕಷ್ಟು ಪ್ರೋತ್ಸಾಹ ಸಿಗದಿರುವುದರಿಂದ, ಕಲೆಗಾರರು ಈ ವೃತ್ತಿಯನ್ನು ಬಿಟ್ಟು ಅನ್ಯವೃತ್ತಿಗಳನ್ನು ಅವಲಂಬಿಸುತ್ತಿದ್ದಾರೆ. ಇದು ವಿಷಾದನೀಯ ಸಂಗತಿಯಾಗಿದೆ.

ಯಕ್ಷಗಾನ : ಇತ್ತೀಚೆಗೆ ಯಕ್ಷಗಾನ ಪ್ರಸಂಗಗಳು ಮೇಲುಕೋಟೆಯಲ್ಲಿ ನಡೆದಿಲ್ಲ. ಶ್ರೀ ವರದಾಚಾರ್, ಶ್ರೀ ನಂಜಪ್ಪ ಇನ್ನೂ ಮುಂತಾದವರು ಯಕ್ಷಗಾನ ಮಂಡಲಿಗಳನ್ನು ನಡೆಸುತ್ತಿದ್ದು, ಊರಿನ ವಿಶೇಷ ಹಬ್ಬ–ಹರಿದಿನಗಳಲ್ಲಿ ರಾಮಾಯಣ, ಮಹಾಭಾರತ ಮತ್ತು ಭಾಗವತದ ಪ್ರಸಂಗಗಳನ್ನು ಕಲಿಸಿ ಆಡಿಸುತ್ತಿದ್ದರು. ಯಾವುದೇ ಮನರಂಜನಾ ಮಾಧ್ಯಮಗಳು ಇಲ್ಲದಿದ್ದ 30–40 ವರ್ಷಗಳ ಹಿಂದೆ ಇವುಗಳಿಗೆ ಹೆಚ್ಚಿನ ಪ್ರೋತ್ಸಾಹ ಬೇಡಿಕೆ ಇತ್ತು. ಆದರೆ ಇಂದು ಇವುಗಳನ್ನು ಕೇಳುವವರೂ ಇಲ್ಲದಿರುವುದರಿಂದ ಇವುಗಳು ಪೂರ್ಣವಾಗಿ ನಶಿಸಿಹೋಗಿವೆ.

ಪೌರಾಣಿಕ ನಾಟಕಗಳು : ವರ್ಷದಲ್ಲಿ ಎರಡು ಮೂರು ಬಾರಿ ಪೌರಾಣಿಕ ನಾಟಕಗಳ ಪ್ರದರ್ಶನ ಇಂದಿನವರೆಗೂ ನಡೆದುಕೊಂಡು ಬಂದಿದೆ. ಮೊದಲು ಶ್ರೀ ವರದಾಚಾರ್‌ರವರ ಹವ್ಯಾಸಿ ನಾಟಕದ ಕಂಪನಿಯೇ ಇದ್ದು, ವರ್ಷದಲ್ಲಿ 4–5 ಬಾರಿ ಪೌರಾಣಿಕ ನಾಟಕಗಳನ್ನು ಅಭಿನಯಿಸುತ್ತಿದ್ದರು. ವ್ಯವಸ್ಥಿತವಾದ ರಂಗಸಜ್ಜಿಕೆ, ವೇಷಭೂಷಣ, ಬೆಳಕು, ಸಂಗೀತ, ನಟನೆಗಳನ್ನು ಒಳಗೊಂಡಿದ್ದ ಈ ನಾಟಕಗಳು ಜನಾಕರ್ಷಕವಾಗಿದ್ದವು. ಹಾಗೆಯೇ ಶ್ರೀ ಬೆಟ್ಟೇಗೌಡ ಎಂಬುವರಿದ್ದು, ಅವರು ವ್ಯವಸ್ಥಾಪಕರಾಗಿ ಹಲವು ನಾಟಕಗಳನ್ನಾಡಿಸಿದ್ದರು. ಇವುಗಳೆಲ್ಲವೂ ಬಹುತೇಕ ರಾಮಾಯಣ, ಮಹಾಭಾರತ, ಭಾಗವತ, ರಾಜಾವಿಕ್ರಮ, ಸುಭದ್ರಾಪರಿಣಯ, ಕೃಷ್ಣಾರ್ಜುನ ಕಾಳಗ, ಕೀಚಕ ಸಂಹಾರ, ಮೂರುವರೆ ವಜ್ರ,... ಇನ್ನೂ ಮುಂತಾದವುಗಳಾಗಿದ್ದವು. ಈಗ ಯಾವುದೇ ಹವ್ಯಾಸಿ ನಾಟಕ ತಂಡಗಳು ಇಲ್ಲ. ಆಸಕ್ತರು ನಾಟಕದ ಮೇಷ್ಟ್ರು ಕರೆದುಕೊಂಡು ನಾಟಕ ಕಲಿತು ಆಡುತ್ತಾರೆ. ಈ ಪೌರಾಣಿಕ ನಾಟಕಗಳಲ್ಲಿ ಶ್ರೀ ಮರಿಯಪ್ಪ ಮತ್ತು ಶ್ರೀ ಮರೀಗೌಡರ ಪಾತ್ರವನ್ನಂತೂ ಮರೆಯಲಾಗುವುದಿಲ್ಲ.

ಗಾರುಡಿಗೊಂಬೆ : ಸುಮಾರು ಆಳೆತ್ತರದ, ಎರಡಾಳೆತ್ತರದ ವಿವಿಧ ರೀತಿಯ ಮಾನವಾಕೃತಿಯ ಗೊಂಬೆಗಳನ್ನು ಬಿದಿರು ಮತ್ತು ರಟ್ಟಿನಲ್ಲಿ ಮಾಡಿ, ಅವುಗಳಿಗೆ ಸಿದ್ಧಪಡಿಸಿದ ಮನುಷ್ಯ ಮುಖವಾಡಗಳನ್ನು ಇಟ್ಟು, ಮನುಷ್ಯರಂತೆ ಕಾಣುವ ಗೊಂಬೆಗಳನ್ನು ಮಾಡುತ್ತಾರೆ. ಈ ರೀತಿ ಸಿದ್ಧವಾದ ಗೊಂಬೆಗಳ ಒಳಗೆ ನೃತ್ಯ ಮಾಡುವವರು ಸೇರಿ, ವಾದ್ಯಗಳ

ತಾಳಕ್ಕೆ ತಕ್ಕಂತೆ ಕುಣಿಯುತ್ತಾರೆ. ಬಹಳ ಎತ್ತರದ, ರಂಗು-ರಂಗಿನ ಆಕರ್ಷಕ ಗೊಂಬೆಗಳ ಈ ನೃತ್ಯ ನೋಡುಗರ ಮನಮೋಯಿಸುತ್ತದೆ. ಮೊದ-ಮೊದಲು ಮೇಲುಕೋಟೆಯವರೇ ಇವುಗಳನ್ನು ಸಿದ್ಧಪಡಿಸಿ ನರ್ತಿಸುತ್ತಿದ್ದರು. ಆದರೆ ಈಗ ಇವುಗಳ ಸಿದ್ಧತೆ ಮತ್ತು ನೃತ್ಯ ಮಾಡುವವರು ಯಾರೂ ಇಲ್ಲ. ಹಾಗಾಗಿ ಹಬ್ಬ-ಹರಿದಿನ, ಉತ್ಸವ ಇತ್ಯಾದಿ ಸಂದರ್ಭಗಳಲ್ಲಿ ಬೇರೆ ಊರುಗಳಿಂದ ಇವುಗಳನ್ನು ಕರೆಸುತ್ತಾರೆ.

ತೊಗಲು ಗೊಂಬೆಯಾಟ : ಪ್ರಾಣಿಗಳ ಚರ್ಮವನ್ನು ಬಳಸಿ, ಮಾನವಾಕೃತಿಗಳನ್ನು ರಚಿಸಿ ಅವುಗಳಿಗೆ ಸೂತ್ರಗಳನ್ನು ಹಾಕಿ ಒಂದು ಪರದೆಯನ್ನು ಕಟ್ಟಿ ಅದರ ಹಿಂದಿನಿಂದ ಮಾತು, ಸಂಗೀತಕ್ಕೆ ಅನುಗುಣವಾಗಿ ನಟನೆ ಮಾಡಿಸಿ, ಕಥೆ ಹೇಳಿಸಿ ನೆರೆದಿದ್ದ ಪ್ರೇಕ್ಷಕರಿಗೆ ಮನರಂಜನೆಯನ್ನು ನೀಡುತ್ತಿದ್ದ ಆಟ ಈ ಸೂತ್ರದ ಗೊಂಬೆಯಾಟ ಅಥವಾ ತೊಗಲು ಗೊಂಬೆಯಾಟ. ಮೊದಲು ಮೇಲುಕೋಟೆಯವರೇ ಇವುಗಳನ್ನು ಪ್ರದರ್ಶಿಸುತ್ತಿದ್ದರು. ಆದರೆ ಕಾಲಕ್ರಮೇಣ ಜನರ ಆಸಕ್ತಿ ಕುಗ್ಗುತ್ತಾ ಹೋದ ಹಾಗೆ ಪ್ರೋತ್ಸಾಹ ಮತ್ತು ಆರ್ಥಿಕ ಲಾಭವಿಲ್ಲದ ಕಾರಣ ಈ ಕಲೆಗಳನ್ನು ಕೈ ಬಿಟ್ಟರು. ಇಂದು ವಿಶೇಷ ಸಂದರ್ಭಗಳಲ್ಲಿ ಪರ ಊರಿನಿಂದ ಈ ಮೇಳಗಳನ್ನು ಕರೆಯಿಸಿ ಆಡಿಸುತ್ತಾರೆ.

ಬೇರೆ ಊರಿನವರು ಬಂದು ಪ್ರದರ್ಶಿಸುವ ಕಲೆಗಳು : ಮೇಲುಕೋಟೆ ಪ್ರಸಿದ್ಧ ಧಾರ್ಮಿಕ ಕೇಂದ್ರವಾಗಿರುವುದರಿಂದ, ವರ್ಷಪೂರ್ಣ ಹಲವಾರು ಹಬ್ಬ-ಹರಿದಿನ, ಉತ್ಸವ, ಜಾತ್ರೆಗಳು ನಡೆಯುತ್ತವೆ. ಇವುಗಳಿಗೆ ಸುತ್ತ-ಮುತ್ತಲಿನ ಊರು-ಪಟ್ಟಣಗಳಿಂದ ಸಾವಿರಾರು ಜನ ಭಕ್ತರು ಬರುತ್ತಾರೆ. ಈ ರೀತಿ ಹೆಚ್ಚಿನ ಜನರನ್ನಾಕರ್ಷಿಸುವ ಹಬ್ಬ-ಹರಿದಿನಗಳೆಂದರೆ ವೈರಮುಡಿ ಬ್ರಹ್ಮೋತ್ಸವ ; ಕೃಷ್ಣರಾಜಮುಡಿ ಉತ್ಸವ, ತೊಟ್ಟಿಲಮಡು ಜಾತ್ರೆ, ಶ್ರೀ ರಾಮಾನುಜ ತಿರುನಾಳ್, ಪಲ್ಲವೋತ್ಸವ, ರಥಸಪ್ತಮಿ,... ಇತ್ಯಾದಿಗಳು. ಈ ಸಂದರ್ಭದಲ್ಲಿ ಊರಿನವರೇ ಬೇರೆ ಬೇರೆ ಊರುಗಳಲ್ಲಿರುವ ಕಲಾತಂಡಗಳನ್ನು ಕರೆಯಿಸಿ ಕಾರ್ಯಕ್ರಮವೇರ್ಪಡಿಸುತ್ತಾರೆ. ಮತ್ತೆ ಕೆಲವು ಸಂದರ್ಭಗಳಲ್ಲಿ ಪರವೂರುಗಳ ಭಕ್ತರೇ ಆಗಮಿಸಿ ತಮ್ಮ ಕಲೆಗಳನ್ನು ಪ್ರದರ್ಶಿಸಿ ಧನ್ಯತಾಭಾವದಿಂದ ಹಿಂದಿರುಗುತ್ತಾರೆ. ಈ ರೀತಿ ಬೇರೆ ಊರಿನವರು ಬಂದು ಪ್ರದರ್ಶಿಸುವ ಮುಖ್ಯ ಕಲೆಗಳೆಂದರೆ, ಯಕ್ಷಗಾನ, ಗಾರುಡಿಗೊಂಬೆ ಕುಣಿತ, ಸೂತ್ರದಗೊಂಬೆ ಆಟ, ಮಾರಿಕುಣಿತ, ಕೋಲಾಟ, ದೊಣ್ಣೆ ವರಸೆ, ಪೂಜಾಕುಣಿತ, ಪಟಾಕುಣಿತ,... ಇನ್ನು ಮುಂತಾದವುಗಳು.

ಜನಪದ ಸಾಹಿತ್ಯ

ಒಂದು ದೇಶದ ಸಮಗ್ರ ಸಾಹಿತ್ಯವನ್ನು ಬರವಣಿಗೆಯೊಳಗೆ ಬದುಕಿಬಂದ 'ಲಿಖಿತ ರೂಪ', ಬಾಯೊಳಗೆ ಬದುಕಿಬಂದ 'ಅಲಿಖಿತ ರೂಪ' ಎಂದು ವರ್ಗೀಕರಿಸಬಹುದು. ಇವುಗಳಲ್ಲಿ ಒಂದು ಪಂಡಿತವರ್ಗ ನಿರ್ಮಿತ ಶಿಷ್ಟಪದ ಸಾಹಿತ್ಯ, ಇನ್ನೊಂದು ಪಾಮರವರ್ಗ ನಿರ್ಮಿತ ಜನಪದ ಸಾಹಿತ್ಯ.[34]

ತಲೆಮಾರಿನಿಂದ – ತಲೆಮಾರಿಗೆ, ಬಾಯಿಮಾತಿನ ಮೂಲಕ ಸಾಗಿಬಂದ ಈ ಸಾಹಿತ್ಯ ಸಮೂಹದ ಸ್ವತ್ತಾಗಿ ಸೃಷ್ಟಿ, ಮರುಸೃಷ್ಟಿ, ಬದಲಾವಣೆಗೆ ಪಕ್ಕಾಗುತ್ತಾ ಇಂದಿನವರೆಗೂ ತನ್ನ ಅಸ್ತಿತ್ವ ಉಳಿಸಿಕೊಂಡು ಬಂದಿದೆ. ಬಹುಪಾಲು ದುಡಿಮೆಯ ಶ್ರಮವನ್ನು ಹಗುರ ಮಾಡಿಕೊಳ್ಳುವ ಸಂಬಂಧ ಮೂಡಿಬಂದ ಈ ಸಾಹಿತ್ಯ ಹಬ್ಬ–ಹರಿದಿನ, ಆಚರಣೆಗಳು, ಉತ್ಸವ–ಇತ್ಯಾದಿ ದೈವ ಸಂಬಂಧಿ ಕ್ರಿಯೆಗಳ ಸಂಬಂಧದಲ್ಲೂ ಬೆಳೆದು ನಿಂತಿದೆ. ಆದರೆ ಇಂದು ನಾಗರೀಕತೆಯ ಪ್ರಭಾವಕ್ಕೆ ಸಿಕ್ಕೂ ತನ್ನ ಅಸ್ತಿತ್ವ ಕಾಪಾಡಿಕೊಳ್ಳುವುದು ಇದಕ್ಕೆ ಸವಾಲಿನ ವಿಷಯವಾಗಿದೆ. ಸಮೂಹ ಮಾಧ್ಯಮಗಳು, ಇದರಲ್ಲೂ ವಿಶೇಷವಾಗಿ ದೃಶ್ಯ ಮಾಧ್ಯಮಗಳ ಆಕ್ರಮಣ ಹೆಚ್ಚಿದ್ದು, ದುಡಿಮೆಯ ಹಾಡುಗಳು, ಸೋಬಾನೆಯ ಹಾಡುಗಳು, ಬೀಸುವ–ಕಟ್ಟುವ ಪದಗಳು, ಆಚರಣೆಯ ಹಾಡುಗಳು, ಕಥೆ, ಒಗಟು, ಲಾವಣಿ,... ಇತ್ಯಾದಿಗಳೆಲ್ಲವೂ ಮೂಲೆಗೂಂಪಾಗುತ್ತಿವೆ. ಮೇಲುಕೋಟೆಯ ಸಂದರ್ಭಕ್ಕೂ ಈ ಮಾತುಗಳು ಅನ್ವಯಿಸುತ್ತವೆ.

ಮೇಲುಕೋಟೆ ಇತ್ತ ಹಳ್ಳಿಯೂ ಅಲ್ಲದ–ಅತ್ತ ಪಟ್ಟಣವೂ ಅಲ್ಲದ ಮಧ್ಯಂತರ ಸ್ಥಿತಿಯಲ್ಲಿ ಇಂದು ನಿಂತಿದೆ. ನೆಲದೈವ ಶ್ರೀ ಚೆಲುವನಾರಾಯಣ ಮೇಲೆ ಪೂರ್ಣವಾಗಿ ಅವಲಂಬಿತವಾಗಿತ್ತು. ಶ್ರೀ ಚೆಲುವನಾರಾಯಣ, ಶ್ರೀ ಯೋಗಾನರಸಿಂಹ, ಬೀಬಿ ನಾಚ್ಚಿಯಾರ್, ವರನಂದಿ,... ಇತ್ಯಾದಿ ದೈವಗಳ ವಿವಿಧ ಆಚರಣೆಗಳಲ್ಲಿ ಸಾಕಷ್ಟು ಜನಪದಗೀತೆ – ಕಥನ ಗೀತೆಗಳು ಹಾಡಲ್ಪಡುತ್ತಿದ್ದವು. ಜನಪದ ಕಲೆ, ಆಟಗಳು ಅಭಿವ್ಯಕ್ತಗೊಳ್ಳುತ್ತಿದ್ದವು. ಇವುಗಳಲ್ಲದೆ ಹೊಲ–ಗದ್ದೆಗಳ ವ್ಯವಸಾಯದ ಕೆಲಸದ ಸಂದರ್ಭದಲ್ಲೂ ಸಾಕಷ್ಟು ಹಾಡು, ಕಥೆ, ಒಗಟುಗಳು ಬಳಕೆಯಾಗುತ್ತಿದ್ದವು. ಆದರೆ, ಇಂದಿನ ನಾಗರೀಕತೆಯ ಯಂತ್ರ ಮತ್ತು ಯಾಂತ್ರಿಕ ಸಂಸ್ಕೃತಿಯಲ್ಲಿ ಇವುಗಳಿಗೆ ಹೆಚ್ಚು ಮಾನ್ಯತೆಯಿಲ್ಲದೆ ಮೂಲೆಗುಂಪಾಗುತ್ತಿವೆ. ಇದು ವಿಷಾದನೀಯವಾದ ಅನಿವಾರ್ಯ ಸ್ಥಿತಿಯಾಗಿಬಿಟ್ಟಿದೆ!

ಮೇಲುಕೋಟೆ ಮಾತ್ರವಲ್ಲದೆ, ಮೇಲುಕೋಟೆಯ ದೈವ ಚೆಲುವನಾರಾಯಣ ಬಗಗೆ ಸಾಕಷ್ಟು ಸಾಹಿತ್ಯ ಅದರ ಸುತ್ತ-ಮುತ್ತಲಿನ ಹದಿನೆಂಟು ಹಳ್ಳಿಗಳಲ್ಲಿ ದೊರೆಯುತ್ತದೆ. ಹಾಗೆಯೇ ಬೇರೆ ಬೇರೆ ಸಂದರ್ಭಗಳಲ್ಲಿ ಹಾಡುವ, ಹೇಳುವ ಸಾಕಷ್ಟು ಸಾಹಿತ್ಯವೂ ಇದೆ. ಜಾನಪದಾಸಕ್ತರಿಗೆ ಇದು ಇನ್ನೂ ಕನ್ನೆ ನೆಲವಾಗಿದೆ. ಕೇವಲ ಬೆರಳೆಣಿಕೆಯ ಒಂದೆರಡು ಪ್ರಯತ್ನಗಳನ್ನು ಬಿಟ್ಟರೆ 'ಮೇಲುಕೋಟೆಯ ಸುತ್ತಮತ್ತಲಿನ ಜನಪದ ಸಾಹಿತ್ಯದ ಸಂಗ್ರಹ, ವಿಶ್ಲೇಷಣೆ, ಪ್ರಕಟಣೆ ನಡೆದೇ ಇಲ್ಲ ಎಂದು ಹೇಳಬಹುದು. ಈ ಸಮೃದ್ಧ ಸಾಹಿತ್ಯವು ಕಾಲನ ತೆಕ್ಕೆಗೆ ಬಿದ್ದು ನಶಿಸಿಹೋಗುವ ಮುನ್ನ ಅದನ್ನು ಸಂಗ್ರಹಿಸುವುದು ನೆಮ್ಮೆಲ್ಲರ ಆದ್ಯ ಕರ್ತವ್ಯ ಮತ್ತು ಜವಾಬ್ದಾರಿಯಾಗಿದೆ.

ಮೇಲುಕೋಟೆ ಮತ್ತು ಸುತ್ತಲಿನ ಜನಪದ ಸಾಹಿತ್ಯಕ್ಕೆ ಸಂಬಂಧಿಸಿದಂತೆ, ಕ.ರಾ.ಕೃಷ್ಣಸ್ವಾಮಿಗಳು ಸಂಗ್ರಹ, ಪ್ರಕಟಣೆಯ ಕಾರ್ಯ ಮಾಡಿದ್ದಾರೆ. ಇವರನ್ನುಳಿದು ನಾರಾಯಣಪುರದ ನರಸಿಂಹೇಗೌಡರು 'ಮೇಲುಕೋಟೆ ಸುತ್ತಿನ ಜನಪದ ಕಥೆಗಳು' ಕೃತಿಯನ್ನು ಮತ್ತು ಮೇಲುಕೋಟೆಯವರೇ ಆದ ಶ್ರೀಮತಿಯವರು 'ಮೇಲುಕೋಟೆ ಸುತ್ತಮುತ್ತಲಿನ ಒಗಟುಗಳು' ಕೃತಿಯನ್ನು ಹೊರತಂದಿದ್ದಾರೆ. ಇವುಗಳನ್ನು ಬಿಟ್ಟರೆ ಇನ್ನೂ ಅಗಾಧವಾದ ಜನಪದ ಸಾಹಿತ್ಯ ಅಲ್ಲಿದೆ. ನನ್ನ ಕ್ಷೇತ್ರಕಾರ್ಯದ ಅವಧಿಯಲ್ಲಿ ಈ ಅಂಶ ನನ್ನ ಗಮನಕ್ಕೆ ಬಂದಿದ್ದು, ನನ್ನ ಅವಶ್ಯಕತೆಗನುಗುಣವಾಗಿ ನನ್ನ ಮಿತಿಯೊಳಗೆ ಕೆಲವನ್ನು ಸಂಗ್ರಹಿಸಿದದೇನೆ.

ಮೇಲುಕೋಟೆಯ ಜನಪದ ಸಾಹಿತ್ಯವನ್ನು ಅಭ್ಯಾಸದ ಅನುಕೂಲಕ್ಕೆ ಈ ರೀತಿಯಾಗಿ ವಿಭಾಗ ಮಾಡಿಕೊಳ್ಳಬಹುದು.

1) ಮೇಲುಕೋಟೆ, ಚೆಲುವನಾರಾಯಣನನ್ನು ಕುರಿತ ಸಾಹಿತ್ಯ

ಅ) ಬಿಡಿಗೀತೆಗಳು – ಮೇಲುಕೋಟೆ ಕುರಿತು, ರಥೋತ್ಸವ ಕುರಿತು, ಚೆಲುವನಾರಾಯಣನನ್ನು ಕುರಿತು, ನಾಮ ಕುರಿತು... ಇತ್ಯಾದಿ.

ಆ) ಕಥನ ಕಾವ್ಯ – ಚೆಲುವಯ್ಯ, ವರನಂದಿ ವಿವಾಹ ಪ್ರಸಂಗ,...

ಮೇಲುಕೋಟೆ, ಚೆಲುವನಾರಾಯಣನನ್ನು ಕುರಿತ ಸಾಹಿತ್ಯ

ಮೇಲುಕೋಟೆ ಮಾತ್ರವಲ್ಲದೆ ಸುತ್ತ-ಮುತ್ತಲಿನ ನೂರಾರು ಹಳ್ಳಿಗಳಿಗೆ ಮನೆದೈವ ಚೆಲುವನಾರಾಯಣ, ತಮ್ಮ ಮನೆದೈವವನ್ನು ಕುರಿತು ಅಪಾರ ಭಕ್ತಿ, ಪ್ರೀತಿ, ಆತನ ಬಗೆಗೆ

ಹಾಡಿದಷ್ಟು ಇಮ್ಮಡಿಗೊಳ್ಳುವ ಉತ್ಸಾಹ ಅವರದು. ಮೇಲುಕೋಟೆ ಪಟ್ಟಣ, ಅದರ ರಚನೆ, ಶ್ರೀ ರಾಮಾನುಜಾಚಾರ್ಯರ ಆಗಮನ, ನಾಮದ ಚೆಲುವು, ಡೆಲ್ಲಿ ಭಾದಷಹನ ಪುತ್ರಿ ವರನಂದಿಯನ್ನು ಚೆಲುವಯ್ಯ ಕರೆತಂದಿದ್ದು, ಮದುವೆಯ ಸಡಗರ, ತನ್ನ ಸಂಬಂಧಿಗಳ ಕಿರುಕುಳ,... ಇತ್ಯಾದಿಗಳೆಲ್ಲವನ್ನು ಹೃದಯಂಗಮವಾಗಿ ಹಾಡುಗಳಲ್ಲಿ ಚಿತ್ರಿಸಿದ್ದಾರೆ.

ಅ) **ಬಿಡಿಗೀತೆಗಳು – ಮೇಲುಕೋಟೆಯನ್ನು ಕುರಿತಂತೆ ಮತ್ತು ಚೆಲುವನಾರಾಯಣನನ್ನು ಕುರಿತಂತೆ :**

'ಮೇಲುಕೋಟೆ ಚೆಂದ, ಉತ್ತಮರ ಮನೆಚೆಂದ
ಮೇಲೆ ಲಕ್ಷಣದ ಮಠ ಚೆಂದ । ಗಿರಿ ಮೇಲೆ
ಸೀಳಿ ಮಾರೋದು ಸಿರಿಗಂಧ

ಬೆಟ್ಟದ ಮೇಲೆ ನಿರ್ಮಾಣಗೊಂಡಿರುವ ಮೇಲುಕೋಟೆ ತುಂಬ ಚೆಂದದ ಊರು. ಅಲ್ಲಿ ಉತ್ತಮರ ಮನೆಗಳಿಗೆ, ಲಕ್ಷಣವಾದ ಮಠವಿದೆ, ಸಿರಿಗಂಧ ಮಾರಾಟವಿದೆ – ಪರಿಮಳವಿದೆ. ಇಂಥಹ ಊರಿಗೆ ಚೆಲುವಯ್ಯ ನೆಲೆಸಲು ಬರುತ್ತಾನೆ.

'ಯಾದಾವಗಿರಿಯಲ್ಲಿ ಬೆಟ್ಟದ ಗಿರಿಸಾಲು
ಬೆಟ್ಟಗುಡ್ಡದಸಾಲು ಕೊಳಸಾಲು । ಕಲ್ಯಾಣಿ
ಒಳ್ಳೇದಂದು ಅಪ್ಪ ಚೆಲುವಯ್ಯ ನೆಲೆಗೊಂಡ'

'ಚೆಲುವಯ್ಯ ಬರುವಾಗ ಮನೆಯೆಲ್ಲಾ ಘಮ್ಮೆಂದೊ
ಮುಡಿದು ಬಂದವರೆ ಮರುಗವ । ಚೆಲುವಯ್ಯ
ಅವರ್ದ್ಹಿಡಿದು ಬಂದವರೆ ಜವನವ ।'

ಅವನ ಆಗಮನದಿಂದ ಮನೆ–ಮನೆಗಳೆಲ್ಲವೂ ಘಮ್ಮೆಂದೋ, ಇಂಥ ಸುವಾಸನೆ ಸೂಸುವ ಮರುಗ, ಜವನವನ್ನು ಅವರು ಮುಡಿದು ಬಂದಿದ್ದಾರೆ, ಅಷ್ಟೇ ಅಲ್ಲ.

'ವೈರಮುಡಿ ಹೊದೆಗೊಂಡು, ರಾಜಮುಡಿ ಹಾಸಿಕೊಂಡು
ರಾಜ ಬೀದಿಲೀ ಬರುವೋನೆ । ಚೆಲುವಯ್ಯ
ನಾರಿ ಒಪ್ಯಾಳೆ ವರನಂದಿ ।

ಚೆಲುವನಾರಾಯಣ ಪ್ರಖ್ಯಾತ ಕಿರೀಟಗಳು ವೈರಮುಡಿ, ರಾಜಮುಡಿ ಮತ್ತು ಕೃಷ್ಣರಾಜಮುಡಿಗಳು. ವೈರಮುಡಿಯನ್ನು ಹೊದ್ದುಕೊಂಡು, ರಾಜಮುಡಿಯನ್ನು

ಹಾಸಿಕೊಂಡು ರಾಜಬೀದಿಯಲ್ಲಿ ಬರುವ ಚೆಲುವಯ್ಯನ ರೂಪು, ಅದ್ಭುತವಾದುದು. ಅಂಥ ರೂಪುಳ್ಳ ಚೆಲುವನಿಗೆ ವರನಂದಿ ಸೋತಿದ್ದಾಳೆ. ಅವನು ಧರಿಸಿರುವ ನಾಮವಾದರೂ ಎಂತಹದು. ಅದರ ಮೋಹಕತೆ ಎಂತಹದು, ಎಂದರೆ,

'ಚೆಲುವಯ್ಯನಿಗೆ ಮೂರು ನಾಮ
ದಪ್ಪ-ದಪ್ಪ ಬಿಳಿನಾಮ
ಮಧ್ಯದ್ದೇ ಕೆಂಪು ಕಾಣಣ್ಣೋ
ಚೆಲುವಯ್ಯ-ಚೆಲುವೋ ತಾನಿತಂದಾನ'

ಚೆಲುವಯ್ಯ-ವರನಂದಿ-ಕಥನಕಾವ್ಯ :- ಚೆಲುವಯ್ಯ-ವರನಂದಿಯ ಬಗೆಗೆ ಸಿಗುವ ಜನಪದ ಕಥನಕಾವ್ಯ ಅದ್ಭುತವಾಗಿದ್ದು, ಮನಸೂರೆಗೊಳ್ಳುತ್ತದೆ. ದೂರದ ಡೆಲ್ಲಿ ಭಾಷದಹನ ಮಗಳಾದ 'ಬೇಬಿ ನಾಚ್ಚಿಯಾರ್' ಜನಪದರ ಬಾಯಲ್ಲಿ 'ವರನಂದಿ'ಯಾಗಿದ್ದಾಳೆ. ದಾಸಯ್ಯನ ವೇಷ ಧರಿಸಿ ದೆಹಲಿಗೆ ಹೋಗುವ ಚೆಲುವಯ್ಯ ವರನಂದಿಯ ಮನೆಯಲ್ಲಿ ಭಿಕ್ಷೆ ಕೇಳುವುದು, ವರನಂದಿ ಚೆಲುವಯ್ಯನಿಂದ ಆಕರ್ಷಿತಳಾಗುವುದು, ಪರಸ್ಪರ ಮದುವೆಗೆ ಒಪ್ಪಿ ಯದುಗಿರಿಗೆ ಹಿಂತಿರುಗುವುದು, ಮದುವೆಗೆ ಬರುವಂತೆ ತಿರುಪತಿ ತಿಮ್ಮಪ್ಪ, ನಂಜನಗೂಡ್ನ ನಂಜುಂಡ, ಚುಂಚನಗಿರಿ ಭೈರವರನ್ನು ಆಹ್ವಾನಿಸುವುದು, ಅವರ ತಿರಸ್ಕಾರ, ಚೆಲುವಯ್ಯ ತಾನೇ ಸಿದ್ಧನಾಗಿ ಮದುವೆಯಾಗುವುದು, ಭಕ್ತರ ಪ್ರೋತ್ಸಾಹ,... ಇತ್ಯಾದಿ ಸಂಗತಿಗಳು ಈ ಕಥನಕಾವ್ಯದಲ್ಲಿ ಮನೋಜ್ಞವಾಗಿ ಮೂಡಿಬಂದಿವೆ.

ಅನುಪಮ ಸುಂದರಿಯಾದಿ 'ವರನಂದಿ'ಯ ಬಗೆಗೆ ಆಕರ್ಷಿತವಾದ ಚೆಲುವಯ್ಯ ಅವಳನ್ನು ಪಡೆಯಲು ದಿಲ್ಲಿಗೆ ಹೋಗುತ್ತಾನೆ. ಅವನು ಹೋಗುವಾಗ ತನ್ನ ನಿಜಸ್ವರೂಪವನ್ನು ಬದಲಿಸಿ,

'ಚೆಂದಕೆ ಚೆಲುವಯ್ಯ ತುಂಡಂಗಿನಿಕ್ಕೊಂಡು
ಮುಂಗೈಯ ಮೇಲೆ ಗಿಡುಗನ ಆಡಿಸೂತ
ಹೋದಾನೆ ವರನಂದಿ ಅರಮನೆಗೆ ॥'

ಈ ರೀತಿ ದಾಸಯ್ಯನ ವೇಷ ಧರಿಸುತ್ತಾನೆ. ವರನಂದಿಯ ಅರಮನೆಯ ಮುಂದೆ ನಿಂತು ಭಿಕ್ಷೆ ಕೇಳುತ್ತಾನೆ. ಮೊದಲು ವರನಂದಿ ಹೊರಬಂದು ಇವನಿಗೆ ಭಿಕ್ಷೆ ನೀಡಲು ನಿರಾಕರಿಸುತ್ತಾಳೆ. ಕೊನೆಗೆ ಯಾವುದೋ ನಿರ್ಧಾರಕ್ಕೆ ಬಂದ ಆಕೆ ಹೊರಬಂದು ಭಿಕ್ಷೆ ನೀಡುತ್ತಾಳೆ. ಆಗ ಚೆಲುವಯ್ಯನ ರೂಪ ನೋಡಿ, ಅವನ ಸೌಂದರ್ಯಕ್ಕೆ ಮಾರು ಹೋಗುತ್ತಾಳೆ. ಇಬ್ಬರಲ್ಲೂ ಪ್ರೀತಿ ಬೆಳೆಯುತ್ತದೆ. ದಾಸಯ್ಯನ ರೂಪದಲ್ಲಿದ್ದ ಚೆಲುವಯ್ಯ

ಮುದ್ದಾದ ಗೊಂಬೆಯ ರೂಪ ಧರಿಸಿ ವರನಂದಿಯ ಅಂತಃಪುರ ಸೇರುತ್ತಾನೆ. ಹಗಲೆಲ್ಲಾ ಗೊಂಬೆಯ ರೂಪದಲ್ಲಿರುವ ಚೆಲುವಯ್ಯಾ, ರಾತ್ರಿಯಾಗುತ್ತಿದ್ದಂತೆ ಮಾನವ ವೇಷಧಾರಿಯಾಗಿ ಅವಳೊಡನೆ ಕೂಡಿ ವಿಹರಿಸುತ್ತಾನೆ. ಹೀಗೆ ಇದು ಮುಂದುವರಿದು ಮದುವೆಯ ಹಂತಕ್ಕೆ ಬರುತ್ತದೆ. ದೂರದ ತನ್ನ ನಾಡು ಯದುಗಿರಿಯಲ್ಲಿ ವಿವಾಹವಾಗೋಣ ಎಂದು ಚೆಲುವಯ್ಯ ಹೇಳಿ ಅವಳನ್ನು ಕರೆದುಕೊಂಡು ಹೊರಡಲು ನಿರ್ಧರಿಸುತ್ತಾನೆ. ಈ ವಿಷಯ ರಾಜ-ರಾಣಿಯರಿಗೂ ತಿಳಿಯುತ್ತದೆ. ಅನ್ಯ ಧರ್ಮೀಯನೊಂದಿಗೆ ತಮ್ಮ ಮಗಳ ವಿವಾಹ ನಡೆಯುವುದನ್ನು ಅವರು ವಿರೋಧಿಸುತ್ತಾರೆ. ಅವರ ಪ್ರತಿರೋಧವನ್ನು ಲೆಕ್ಕಿಸದೆ ಚೆಲುವಯ್ಯ-ವರನಂದಿಯನ್ನು ಕರೆದುಕೊಂಡು ತನ್ನ ನಾಡಿಗೆ ಹೊರಡುತ್ತಾನೆ. ಅನೇಕ ಸೈನಿಕರು, ಕಾವಲುಗಾರರು ಬಿಲ್ಲು-ಬಾಣಗಳಿಂದ ಅವರನ್ನು ಮುತ್ತಿಕೊಳ್ಳುತ್ತಾರೆ. ಅವರನ್ನೆಲ್ಲಾ ನಿವಾರಿಸಿ ಹೊರಡುತ್ತಾನೆ. ಆಗ ವರನಂದಿ ಪ್ರೀತಿಯಿಂದ ಸಾಕಿದ್ದ ಗಿಳಿಗಳು ಅವಳನನ್ನು ಅಡ್ಡಗಟ್ಟಿ, ಅತ್ತುಕರೆದು, ತಾವು ಅವಳೊಂದಿಗೆ ಬರುತ್ತೇವೆ ಎಂದು ಗೋಳಾಡುತ್ತವೆ.

'ತಾಯಿ ವರನಂದಿ ಅವರಪ್ಪನ ಮನೆ ಬಿಟ್ಹೋಗುವಾಗ
ಗೂಡಲ್ಲಿ ಎರಡು ಗಿಣಿಗಳು । ಕೂತುಕೊಂಡು
ನೆರಿಗೆ ಮೇಲೆ ಬಿದ್ದು ಹೊರಾಳ್ಯಾವೊ । ವರನಂದಿ
ನಿನಕುಟ್ಟೆ ನಾವು ಬರುತ್ತಿವಿ[35] ।

– ಈ ರೀತಿ ದುಃಖಿಸುವ ಗಿಣಿಗಳನ್ನು ಪರಿಪರಿಯಾಗಿ ಸಮಾಧಾನ ಮಾಡಿದ ವರನಂದಿ.

'ನನಕುಟ್ಟೆ ನೀವು ಬರಬೇಡಿ ಗಿಳಿಗಳಿರಾ
ಆಳುಬಿಟ್ಟು ಹಣ್ಣಿನ ವನಕೆ ಕಳಿಸೇನು । ಗಿಣಿಗಳಿರಾ
ನಾನು ಹಣ್ಣು ತರುವೇನು ನಿಮಗಾಗಿ ।'

– ಹಣ್ಣು ತರುವ ನೆಪ ಹೇಳಿ ಅವುಗಳನ್ನು ಬಿಟ್ಟು, ಚೆಲುವಯ್ಯನ ಕೂಡ ಕುದುರೆಯೇರಿ ಕಾಡು-ನಾಡುಗಳನ್ನೆಲ್ಲಾ ಹಾದು ದೂರದ ಮೇಲುಕೋಟೆಗೆ ಬರುತ್ತಾಳೆ.

ಹೀಗೆ ಬಂದ ಚೆಲುವಯ್ಯ-ವರನಂದಿ ಈಗ ವಿವಾಹವಾಗಬೇಕಿದೆ. ತಾನೇ ಸಾಮಾನು ಹೊಂದಿಸುವ ಕಾರ್ಯದಲ್ಲಿ ತೊಡಗಿ ಹೊಂಬಾಳೆ ಬೇಕೆಂದು ಸೂಗೂರಿಗೆ ಓಲೆ ಬರೆದನು. ಎಲೆ ಬೇಕೆಂದು ಎಲೆಯೂರಿಗೆ ಓಲೆ ಬರೆದನು. ಅಡಕೆ ಬೇಕೆಂದು ಅಡಕೆಯೂರಿಗೆ ಓಲೆ ಬರೆದನು. ಅಕ್ಕಿ ಬೇಕೆಂದು ಅಕ್ಕಿಯೂರಿಗೆ ಓಲೆ ಬರೆದನು. ಹಣ್ಣು

ಬೇಕೆಂದು ಹಣ್ಣೂರಿಗೆ ಓಲೆ ಬರೆದನು. ಹೂವು ಬೇಕೆಂದು ಹೂವಿನೂರಿಗೆ ಓಲೆ ಬರೆದನು. ತಾಲಿ ಬೇಕೆಂದು ತಾಲಿಯೂರಿಗೆ ಓಲೆ ಬರೆದನು. ಕುಂಟಸಿಂಗ್ರಿಯ ಬೆಟ್ಟಕ್ಕೆ ಹೋಗಿ ಚಪ್ಪರಕ್ಕೆ ಏಳು ಕವೆಗಳನ್ನು ತಾನೇ ಕಡಿದುತಂದನು.

ವರನಂದಿ ನೋಡಿದಳು, ತಾನೊಬ್ಬಳೇ ಈ ಚೆಲುವಯ್ಯನಿಗೆ ಹೆಂಡತಿ ಅಲ್ಲ. ನಾಚೇರಿ, ತೊಳಚಿ, ಯದುಗಿರಿ, ಗಜಲಕ್ಷ್ಮಿಯರು ಈಗಾಗಲೇ ಇದ್ದಾರೆ. ಇವರ ಮಧ್ಯೆ ನನ್ನನ್ನು ಆದರಿಸುತ್ತಾನೆಯೇ ಎಂದು ಅವಳು ಕಡೆಗಣ್ಣಿನಲ್ಲಿ ನೀರು ಕೆಡವಿದಳು. ಅದನ್ನು ಕಂಡು ಚೆಲುವಯ್ಯನು 'ಅವರನ್ನು ಕಂಡರೆ ನನಗೆ ಅರೆಗಣ್ಣು, ನಿನ್ನನ್ನು ಕಂಡರೆ ಮಾತ್ರ ನಿಜಗಣ್ಣು' ಎಂದು ಹೇಳಿ ಅವಳ ಕಣ್ಣೀರು ತೊಡೆದನು. ಲೋಕದ ಜನರು ಪರಿಪರಿಯಾಗಿ ಚೆಲುವಯ್ಯ-ವರನಂದಿಯನ್ನು ಆಡಿಕೊಂಡರು. 'ಅಚ್ಚ ತುರುಕರ ಹೆಣ್ಣಿಗೆ ತುದಿಗಾಲಿನಲ್ಲೇ ಪಾಪಾಸು, ತುರುಬಿಲ್ಲ, ನೆರಿಯಿಲ್ಲ ಏನೆಂದು ಅವಳನ್ನು ಸೆರೆಹಿಡಿದು ತಂದಾನೊ' ಎಂದು ಕೆಲವರೆಂದರೆ, ಮತ್ತೆ ಕೆಲವರು 'ಎತ್ತು ಎಮ್ಮೆಗಳನ್ನು ಕಾಯುವ ಆ ವೈಷ್ಣವರ ಹುಡುಗನನ್ನು ಏನೆಂದು ಮೆಚ್ಚಿಕೊಂಡು ಓಡಿಬಂದಳು' ಎಂದು ವರನಂದಿಯನ್ನು ಅಂದರು. ಅದಕ್ಕೆ ಉತ್ತರವೆಂಬಂತೆ ಚೆಲುವಯ್ಯನು, 'ನಾನು ವರನಂದಿಯನ್ನು ಸೆರೆಹಿಡಿದು ತರಲಿಲ್ಲ. ಸೆರಗೊಡ್ಡಿ ಬೇಡಲೂ ಇಲ್ಲ, ಕೋರಣ್ಯಕ್ಕೆ ಹೋಗಿದ್ದಾಗ ಅವಳ ತಂದೆ ತಾಯಿಗಳೇ ಕರೆದು ನನಗೆ ಕೈಧಾರೆ ಎರೆದರು' ಎಂದನು. ವರನಂದಿಯಾದರೋ 'ನನ್ನ ಹಣೆಯಲ್ಲಿ ಹಾಗೆ ಬರೆದಿತ್ತು ಮೇಲುಕುಲದವರನ್ನು ಕೂಡಿಕೊಂಡೆ' ಎಂದಳು.

ಮದುವೆಗೆ ತನ್ನ ಬಂಧು-ಬಳಗವನ್ನು ಕರೆಯಲು ಚೆಲುವಯ್ಯಾ ಗರುಡವನ್ನೇರಿ ಹೊರುಡುತ್ತಾನೆ.

'ಎದ್ದಾನು ಚೆಲುವಯ್ಯಾ । ಏರ‍್ಯಾನು ಗರುಡಾನ
ಹೋದಾನು ತಿಮ್ಮಯ್ನ ಗಿರಿಗಾಗ । ಚೆಲುವಯ್ಯ
ಮದುವೆಗೆ ಬರಬೇಕು । ನಾದಿನಿರಿಬ್ಬರ ಕರಕೊಂಡು ।

– ಎಂದು ತಿರುಪತಿ ತಿಮ್ಮಪ್ಪನನ್ನು ಅವರ ಮಡದಿಯರ ಸಮೇತ ತನ್ನ ಮದುವೆಗೆ ಬರುವಂತೆ ಆಹ್ವಾನಿಸುತ್ತಾನೆ. ಅದಕ್ಕೆ ಉತ್ತರವಾಗಿ ತಿಮ್ಮಪ್ಪ.

'ಮಡದೀಯಾರಿಬ್ಬಾರ । ಕರಕೊಂಡು ಬರುವೋಕೆ
ಕುಲಕೆ ತಂದ್ಯಲ್ಲೋ ಅಪಮಾನ । ಚೆಲುವಯ್ಯ
ತುರುಕಾರ ಮಗಳಾ ತರಬಹುದೇ?
ನಾನು ಮದುವೆಗೆ ಬರುವೂದು ತರವಲ್ಲ'

– ಎಂದು ಹೇಳಿ ಮ್ಲೇಚ್ಛ ಹುಡಿಯೊಂದಿಗೆ ವಿವಾಹವಾಗುತ್ತಿರುವುದು ಅಪಮಾನಕರ – ಆ ಕಾರಣ ತಾನು ಮದುವೆಗೆ ಬರುವುದಿಲ್ಲ ಎಂದು ಹೇಳುತ್ತಾನೆ. ಈ ಮಾತನ್ನು ಕೇಳಿ ಕೋಪಗೊಂಡ ಚೆಲುವಯ್ಯ ಅವನ ಕೃತ್ಯದ ಉದಹಾರಣೆಯನ್ನೇ ನೀಡಿ ಅವನನ್ನು ಹಂಗಿಸುತ್ತಾನೆ.

'ಕುಲಕೇ ತಂದೋನು । ನಾನೊಬ್ಬನಲ್ಲಾ ।
ನೀನಲ್ಲವೇ ನಿನ್ನ ಗಿರಿಯಲ್ಲಿ । ತಿಮ್ಮಯ್ಯ ।
ನೀನೇಕೆ ತಂದಿರುವೆ ತೆಗಳ್ತೀಯಾ?।

– ಎಂದು ಪ್ರಶ್ನಿಸಿ ಅಲ್ಲಿಂದ ಹೊರಟು ನಂಜನಗೂಡಿಗೆ ಬರುತ್ತಾನೆ.

'ಹತ್ಯಾನು ಕುದುರಿಯ ಏರ್‍ಯಾನು ಚೋಜಿಯ
ಹೋದನು ನಂಜಯ್ನ ಗುಡಿಗ್ಹಾಗಿ'

– ಎಂದೂ ಬರದ ಚೆಲುವಯ್ಯ ಇಂದು ಬಂದಿರುವುದನ್ನು ಕಂಡು ಆಶ್ಚರ್ಯಗೊಂಡ ನಂಜಯ್ಯ

'ಎಂದೂ ಬಾರದ ಚಲುವಯ್ಯಾ ಇಂದೇಕೆ ಬಂದಯ್ಯ
ಕೂರಯ್ಯಾ ಚಿನ್ನದ ಮಣೆ ಮೇಲೆ'

– ಎಂದು ಹೇಳುತ್ತಾನೆ. ಈ ಮಾತಿಗೆ ಚೆಲುವಯ್ಯ

'ಮಣೆ ಮೇಲೆ ಕುಂಡಿರುವಾಕೆ ಮನೆ ಕಡೆ ಜಂಬಾರ
ನಾಳೆ ನಮ್ಮಾನೆ ಮದುವೆಯು'

– ಆದ್ದರಿಂದ 'ನೀನೂ ಬಾ, ನಿನ್ನ ನಾರಿಯರಿಬ್ಬರ ಕಳಿಸು' ಎಂದು ಕೇಳುತ್ತಾಣೆ. ಇದಕ್ಕುತ್ತರವಾಗಿ ನಂಜಪ್ಪ

'ಮದುವೇಗೆ ಬರುವುದಕೆ । ಮಡದೀರ ಕಳುವೋಕೆ
ಕುಲಗೆಟ್ಟೆ ಬಂದಲ್ಲೋ ಚೆಲುವಯ್ಯಾ ।
ಹೀನ ತಂದಲ್ಲೋ ನಮ ಕುಲಕೆಲ್ಲ ।

– ಎಂದು ಸಾಬರ ಹುಡಿಗಿಯನ್ನು ಮದುವೆಯಾಗಲು ಕರೆದುಕೊಂಡು ಬರುವುದರ ಮೂಲಕ ಅಪಮಾನ ತಂದಿರುವೆ ಎಂದು ಹೀಯಾಳಿಸುತ್ತಾನೆ. ಇದಕ್ಕುತ್ತರವಾಗಿ ಚೆಲುವಯ್ಯಾ,

'ಹೀನ ತಂದೋನು ನಾನೊಬ್ಬನೆ ಸಹಿವೊನೊ
ನೀನಿಲ್ಲವೆ ನಿನ್ನ ಗುಡಿಯಲ್ಲಿ । ನಂಜಯ್ಯ
ನೀನೇಕೆ ಮಡ್ಗಿದ್ದೀ ಚಾಮುಂಡಿಯ । ನಂಜಯ್ಯ
ನನ್ಯಾಕೆ ಜರಿದೀಯ ಚೆಲುವನ'

– ಎಂದು ಅವನ ಕೃತ್ಯಗಳನ್ನೇ ಅವನಿಗೆ ನೆನಪಿಸಿ, ಹಂಗಿಸಿ ಅಲ್ಲಿಂದ ಚುಂಚನಗಿರಿಗೆ ಬರುತ್ತಾನೆ.

'ಕುದುರೇಯ ಕುಣಿಸುತ್ತಾ । ಸಿರಿಗಂಧಾ ಚೆಲ್ಲುತ್ತಾ
ಬಂದಾನು ಭೈರುವನ ಗಿರಿಗಾಗಿ । ಚೆಲುವಯ್ಯಾ
ಬರಬೇಕು ಮದುವೆಗೆ ಮಡದೀಯರ ಕೂಡಿ ।

– ಎಂದು ಆಹ್ವಾನಿಸುತ್ತಾನೆ. ಮದುವೆ ಸಂಗತಿ ಕೇಳಿದ ಭೈರವ,

'ನಾನೆಂಗೇ ಬರಲಿ । ಮಡದೀರ ಕಳುಹಲಿ
ಕುಲಕೆ ತಂದ್ಯಲ್ಲೋ, ಕೊಡಲೀಯಾ । ಭಾವ
ಹಚ್ಚ ತುರುಕನ ಮಗಳ ತರಬಹುದೇ?'

– ಎಂದು ಪ್ರಶ್ನಿಸಿ, 'ನಾವು ಮದುವೆಗೆ ಬರುವುದು ತರವಲ್ಲಾ' ಎಂದು ತನ್ನ ನಿರ್ಧಾರವನ್ನು ತಿಳಿಸುತ್ತಾನೆ. ಇದರಿಂದ ಕಿಡಿಕಿಡಿಯಾದ ಚೆಲುವಯ್ಯಾ,

'ಕುಲಕೇ ಅಪಮಾನ ತಂದವನು ನಾನಲ್ಲ ।
ನೀನಲ್ಲವೇ ನಿನ್ನ ಗಿರಿಯಲ್ಲಿ ।
ಕುರುಬಾತಿ ಮಾಳಮ್ಮನ ತಂದಿರುವೆ ।'

– ಎಂದು ಜರಿದು, ನೀನು ನನ್ನನ್ನು ಆಡಿಕೊಳ್ಳುವುದು ಸರಿಯಲ್ಲ ಎಂದು ತಿಳಿಸಿ ಮೇಲುಕೋಟೆಗೆ ವಾಪಸ್ಸು ಬರುತ್ತಾನೆ.

ಹೀಗೆ ಚೆಲುವಯ್ಯನ ಬಂಧು-ಬಳಗದವರು ಯಾರೂ ಬರದಿರಲು, ಎದೆಗುಂದದೇ ತಾವಿಬ್ಬರೇ ಮದುವೆಯಾಗಲು ಸಿದ್ಧರಾಗುತ್ತಾರೆ. ಚಪ್ಪರ ಹಾಕಬೇಕಾಗಿದೆ, ಅರಿಶಿಣ ಅರೆಯಬೇಕಾಗಿದೆ. ಇದಕ್ಕೆ ಮೊದಲು ಅಡುಗೆಯ ಮಾಡಿ ವರನಂದಿ ಊಟಕ್ಕೆ ಚೆಲುವಯ್ಯನ ಕರೆಯುತ್ತಾಳೆ.

'ತಿಂಗಾಳ ಮಾವ್ನಂಗೆ । ತಣಿಗೇಯ ಬೆಳಗೀವ್ನಿ ।
ತುಂಬೆ ಹೂವ್ನಂಗೆ ಅನ್ನಾವ ಮಾಡೀವ್ನಿ
ಕೆನೆ ಮೊಸರು, ಹಾಲ್ತುಪ್ಪ ತಂದಿರುವೆ
ಉಣಬಾರೋ ನನ್ನ ದೊರೆ ಚೆಲುವ[36]।

– ಹೀಗೆ ಹೊಳೆಯುವ ಚಂದ್ರನಂತೆ ತಟ್ಟೆ ಬೆಳಗಿ, ತುಂಬೆ ಹೂವ್ನಂಗೆ ಅನ್ನ ಮಾಡಿ, ಕೆನೆಮೊಸರು, ಹಾಲುತುಪ್ಪ ತಂದು ಊಟಕ್ಕೆ ಕರೆಯುತ್ತಾಳೆ. ಅದಕ್ಕೆ ಚೆಲುವಯ್ಯಾ,

'ಬಂದಾನು ಚಲುವಯ್ಯಾ । ಉಂಡಾನು ಉಟ್ಟಾನು ।
ಚಿನ್ನದ ಕೊಡಲಿಯೊಂದು ಹೆಗಲೇರಿ । ಹೊತ್ತುಕೊಂಡು
ಕುಣ್‌ಸಿಂಗ್ರೀ ಬೆಟ್ಟಾಕೆ ಹೊರಟಾನು ।
ಕಡಿದಾನು ಏಳು ಕವೆಗಳಾ ಮದುವೆಯಾ ಚಪ್ಪರಕೆ ।

– ಮದುವೆ ಚಪ್ಪರ ಹಾಕುವ ಯೋಗಾನರಸಿಂಹಸ್ವಾಮಿ ಬೆಟ್ಟದಲ್ಲಿ ಕವೆಗಳನ್ನು ಕಡಿದು ತರುತ್ತಾನೆ. ಕೇವಲ ಚಪ್ಪರ ಮಾತ್ರದಿಂದಲೇ ಮದುವೆಯಾಗುವುದಿಲ್ಲವಲ್ಲ ! ಅದಕ್ಕೆ ವರನಂದಿಯು,

ಶಿಸ್ತುಗಾರ ಚೆಲುವಯ್ಯಾ । ಮದುವೆಯನಾಗಲೂ
ದವಸ ಧಾನ್ಯ ಹೂ ಹಣ್‌ಕಾಯಿ । ಮೊದಲಿಲ್ಲಾ
ನಿನಗೆ ಧಾರೆಯ ನೆರೆಯಲು ಯಾರಿಲ್ಲಾ
ನಾವೆಂಗೆ ಮದುವೆಯನಾಗೋದು' – ಎಂದು ಪ್ರಶ್ನಿಸುತ್ತಾಳೆ. ಅವಳ ಪ್ರಶ್ನೆಗೆ ಚೆಲುವಯ್ಯಾ,

'ಧವಸಾವು ಗಿರೀಲಿದೆ । ಧಾನ್ಯವು ಗುಡಿಲಿದೆ ।
ಹೂವು ಹೊಂಬಾಳೆ ಹಣ್ಣು ಕಾಯಿ । ತತ್ತಾರೆ
ನನ್ನ ಭಕ್ತ ಜನ ।

ನನ್ನ ಅಚ್ಚುಮೆಚ್ಚಿನ ರಾಣಿಯೇ ಹಸೆಬರೆಯೆ ।' –ಎಂದು ಹೇಳುತ್ತಾನೆ. ಈ ಮಾತಿಗೆ ವರನಂದಿಯು,

'ಅರಿಶಿನ ಕುಟ್ನಿಲ್ಲಾ । ಅಕ್ಷತೆಯ ಕಲೆಸ್ಲಿಲ್ಲಾ
ಹಾಲು ಸುಗಂಧದ ಪನ್ನೀರು ಇಲ್ವಲ್ಲಾ
ಹಸೆ ಎಂಗೆ ಬರೆಯಾಲಿ?'

– ಎಂದು ಕೇಳುತ್ತಾಳೆ. ಅವಳ ಪ್ರಶ್ನೆಗಳಿಗೆಲ್ಲಾ ಉತ್ತರ ಹೇಳುತ್ತಾ, ಕೆಲಸ ಮಾಡಿಸುವುದು ಸರಿಯಲ್ಲ – ಎಂದು ತಿಳಿದ ಚೆಲುವಯ್ಯಾ ಉತ್ತರ ಕೊಡುವ ಗೋಜಿಗೆ ಹೋಗದೆ, ತಾನೇ ಸ್ವತಃ,

'ಅರೆದಾನು ಅರಿಶಿನವ । ಕುಟ್ಟಾನು ಭತ್ತವ ।
ಕಲೆಸ್ಯಾನು ಅಕ್ಷತಿಯಾ । ಚೆಲುವಯ್ಯಾ
ಬಳಿದಾನು ವರನಂದಿಯ ಮೈಗೆಲ್ಲಾ ।'

– ಅರೆದು, ಕುಟ್ಟಿ, ವರನಂದಿಯ ಮೈಗೆ ಲೇಪಿಸುತ್ತಾನೆ.

ತಮ್ಮ ಮದುವೆಗೆ ಸಂಬಂಧಿಗಳು ಯಾರೂ ಬರದಿದ್ದರೂ ಎದೆಗೆಡೆದೆ, ತನ್ನ ಭಕ್ತ ಜನರ ಸಹಕಾರದಿಂದ ವಿವಾಹವಾಗುತ್ತಾನೆ. ಭಕ್ತರಾದರೋ ತಮ್ಮ ಸ್ವಾಮಿಯ ಈ ಪ್ರೇಮ ವಿವಾಹಕ್ಕೆ ಅಡ್ಡಿ ಬರಲಿಲ್ಲ. ವರನಂದಿ ಅನ್ಯಮತೀಯ ಹೆಣ್ಣಾದರೇನಂತೆ, ಅವಳು ತಮ್ಮ ಕುಲದೈವದ ಮನಸ್ಸು ಗೆದ್ದಿದ್ದಾಳೆ. ಮಹಿಮಾವಂತಳೇ ಇರಬೇಕೆಂದು ನಿರ್ಧರಿಸಿ, ಅವರಿಬ್ಬರ ಮದುವೆಯನ್ನು ಎಲ್ಲರೂ ಕೂಡಿಕೊಂಡು ಸಂಭ್ರಮದಿಂದ ನೆರವೇರಿಸುತ್ತಾರೆ. ಅವರ ಕಲ್ಯಾಣಕ್ಕೆ ಈ ರೀತಿ ಶುಭ ಕೋರುತ್ತಾರೆ.

'ಕಲ್ಯಾಣವೋ । ಚೆಲುವ–ವರನಂದಿಗೆ
ಕಲ್ಯಾಣವೆನ್ನಿರಿ । ಸೊಬಗಿನ ಸುಗುಣೀರೆ
ಚೆಲುವ ವರನಂದಿ ಮದುವೇಗೆ
ಅರಿಶಿನವ ಹಚ್ಚೀರೆ । ಕುಶಲಾದ ಮುತ್ತೈದೆಯರೇ
ಹೊಸಮುತ್ತಿನ ತೆರೆಯಿಡಿರಮ್ಮಾ । ಚೆಲುವೇಗೆ
ನಮ್ಮ ಚೆಲುವ–ವರನಂದಿ ದೊರೆಗಳೀಗೇ । ॥ ಕಲ್ಯಾಣವೇ ॥

ಹಾಲಿನ ಗಿರಿಯಿಂದಾ । ನೀಲಿ ಬೆಟ್ಟದಿಂದಾ
ಹಾಲಂತ ಶಿವನ ಗಿರಿಯಿಂದಾ ।

ನಿಲು ಮೇಲಾದ ಚೆಲುವ ಬಂದೋ ॥ ಕಲ್ಯಾಣವೇ ॥
ಕಲ್ಯಾಣಿ ಕೊಳದ ತೆಪ್ಪ-ಪಲ್ಲಕೀಮ್ಯಾಲೆ
ಚೆಲುವ ವರನಂದೀ ಶಿವಪೂಜೆ । ಮಾಡುವಾಗ
ಅಂಬರದ ಗಂಟೆ ಢಣಿರೆಂದೋ ।॥ ಕಲ್ಯಾಣವೇ ॥
ನಕ್ಕನು ಚೆಲುವಯ್ಯಾ । ನಕ್ಕಿತು ಜಗವೆಲ್ಲಾ ।
ಹಚ್ಚನೆ ಹಾಲಂತೆ ನಗೆಚೆಲ್ಲಿ । ವರನಂದೀ
ಚೆನ್ನೀಗ ಚೆಲುವಯ್ನ ಜೊತೆಗೂಡಿ ।॥ ಕಲ್ಯಾಣವೇ ॥

ಹೀಗೆ, ಜಾನಪದೀಯ ಕಥನ ಕಾವ್ಯದಲ್ಲಿ ಸಾಗುವ ಈ ಕಥೆ ಐತಿಹಾಸಿಕ ಕಥೆಗಿಂತ ಭಿನ್ನವಾಗಿದೆ, ಕಾವ್ಯಮಯವಾಗಿದೆ.

ಸಂಪ್ರದಾಯಸ್ತ ಸಮಾಜ ಅನ್ಯಧರ್ಮೀಯರೊಂದಿಗಿನ ವಿವಾಹವನ್ನು ತಿರಸ್ಕರಿಸುವುದು. ಅದಕ್ಕೆ ಪ್ರೀತಿಯ ಮುಂದೆ ಯಾವ ಜಾತಿಯೂ ಇಲ್ಲ ಎಂದು ಚೆಲುವಯ್ಯಾ ನಿರೂಪಿಸುವುದು – ಇದರ ತತ್ವ. ಈ ಕಥನ ಕಟ್ಟಿದ ಜನಪದ ಕವಿಗಳ ಆರೋಗ್ಯಕರ ಮನಸ್ಸಿಗೊಂದು ಉದಾಹರಣೆಯಾಗಿದೆ. ಕಥೆಯಲ್ಲಿನ ಯಾವ ಪಾತ್ರಗಳೂ ದೈವದ ನೆಲೆಯಲ್ಲಿ ನಿಂತು ಮಾತನಾಡದೆ, ವರ್ತಿಸದೆ ಮನುಷ್ಯನ ನೆಲೆಯಲ್ಲಿ ನಿಂತು, ವರ್ತಿಸುವುದು ಸಮಂಜಸವಾಗಿದೆ. ವಿವಾಹಕ್ಕೆ ಸಂಬಂಧಿಕರನ್ನು ಆಹ್ವಾನಿಸುವುದು, ಸಂಬಂಧಿಕರು ತುರುಕರ ಹೆಣ್ಣನ್ನು ತಂದ ಚೆಲುವಯ್ಯನನ್ನು ನಿಂದಿಸುವುದು, ಮದುವೆಗೆ ಬರದಿರುವುದು, ಚಪ್ಪರದಿಂದ ಹಿಡಿದು ಎಲ್ಲಾ ಸಿದ್ದತೆಯನ್ನು ಚೆಲುವಯ್ಯನೊಬ್ಬನೇ ಏಕಾಂಗಿಯಾಗಿ ಮಾಡುವುದು, ಜನಪದ ಭಕ್ತರ ಸಹಕಾರ – ಇವುಗಳೆಲ್ಲವೂ ಅಂತರ್ಜಾತಿ ವಿವಾಹಕ್ಕೆ ಹೋಗುವ ವಧು-ವರರು ಸಹಜವಾಗಿ ಎದುರಿಸುವ ಸಮಸ್ಯೆಗಳೇ ಆಗಿವೆ. ಈ ಸಮಸ್ಯೆಗಳಿಗೆಲ್ಲಾ ಚೆಲುವಯ್ಯನ ಮುಖಾಂತರ ಸರಿಯಾದ ಉತ್ತರವನ್ನೇ ಜನಪದರು ನೀಡಿದ್ದಾರೆ. ಇದು ಶ್ಲಾಘನೀಯವಾದ ವಿಚಾರವಾಗಿದೆ.

ಮುಂದೆ, ಕಥೆ ಕೆಲವು ತಿರುವುಗಳನ್ನು ತೆಗೆದುಕೊಳ್ಳುತ್ತದೆ. ಚೆಲುವನಾರಾಯಣನ ಕೂಡಿ ಬಂದ ಮ್ಲೇಚ್ಛ ಕನ್ಯೆಯನ್ನು ಗುಡಿಯೊಳಗೆ ಸೇರಿಸಿಕೊಳ್ಳುವ ವಿಚಾರದಲ್ಲಿ ಚರ್ಚೆಗಳು ಏಳುತ್ತವೆ. ಸಂಪ್ರದಾಯಸ್ಥ ಬ್ರಾಹ್ಮಣರು ಅವಳನ್ನು ಗುಡಿಯಿಂದ ಹೊರಗಿರಿಸುವ ಕುಟಿಲೋಪಾಯದಲ್ಲಿ ತೊಡಗುತ್ತಾರೆ. 'ನೀನು ಹೊರಗಿರಮ್ಮ-ಹೊರಗಿರಮ್ಮ' ಎಂದು ವರನಂದಿಗೆ ಹೇಳುತ್ತಾ ಹೋಗುತ್ತಾರೆ. ಮುಂದೆ ಜನಪದರ ಬಾಯಲ್ಲಿ ಇದು ಹೊಗರಮ್ಮ' ಆಗಿ ವರನಂದಿ-ಹೊಗರಕಲ್ಲಮ್ಮನಾಗುತ್ತಾಳೆ. ಇವಳಿಗೆ ಮೇಲುಕೋಟೆಯ ಚೆಲುವನಾರಾಯಣನ ದೇವಾಲಯದ ಪೂರ್ವದಿಕ್ಕಿಗೆ ಬೆಟ್ಟದ ಇಳಿಜಾರಲ್ಲೊಂದು

ಚಿಕ್ಕಗುಡಿಯನ್ನು ಕಟ್ಟಿ ಅಲ್ಲಿ ಆಕೆಯನ್ನು ಪ್ರತಿಷ್ಠಾಪಿಸುತ್ತಾರೆ. ಮುಂದೆ ಆ ದೇವಾಲಯ 'ವರನಂದಮ್ಮ' ದೇವಾಲಯವಾಗುತ್ತದೆ. ಮೂಲ ದೇವಾಲಯದಲ್ಲಿ ಚೆಲುವನಾರಾಯಣನ ಪಾದದೆಡೆಯೊಂದನ್ನು ಬಿಟ್ಟರೆ ಬೇರೆಲ್ಲೂ ಅವಳ ವಾಸ್ತವ್ಯ, ಪ್ರಸ್ತಾವವಿರದಂತೆ ಮಾಡಿದ್ದಾರೆ. ಸಾಂಪ್ರದಾಯಿಕ ಪತ್ನಿಯರಾದ ಯದುಗಿರಿ ನಾಯಕಿ, ಶ್ರೀದೇವಿ-ಭೂದೇವಿಯರನ್ನು ಚೆಲುವನಾರಾಯಣನ ಪಕ್ಕಕ್ಕಿರಿಸಿ, ಪೂಜೆ-ಉತ್ಸವಗಳನ್ನು ನಡೆಸುತ್ತಾರೆ. ಇದು ಸಾಂಪ್ರದಾಯಿಕ ಮತ್ತು ಶಿಷ್ಟ ಸಂಸ್ಕೃತಿಯೊಂದು ಹೇಗೆ ಜನಪದ ಸಂಸ್ಕೃತಿಯನ್ನು ತುಳಿದುಹಾಕಿತು ಎಂಬುದಕ್ಕೆ ನಿದರ್ಶನವಾಗುತ್ತದೆ.

ಮುಂದೆ ಕದಲಗೆರೆ, ಕಾಡೇನಹಳ್ಳಿಯ ಜನಪದರು ಈಕೆಯನ್ನು ಮನೆದೇವರನ್ನಾಗಿ ಸ್ವೀಕರಿಸಿರುತ್ತಾರೆ. ಈ ಎರಡೂ ಊರುಗಳು ಈಕೆಗೆ ತವರು ಮನೆಯಾಗುತ್ತವೆ. ಪ್ರತಿವರ್ಷ ಸೆಪ್ಟೆಂಬರ್ ಮಾಸದಲ್ಲಿ ಸುಮಾರು 12 ದಿನಗಳ ಕಾಲ ಈ ವರನಂದ್ಯಮ್ಮನ ಜಾತ್ರೆ-ಉತ್ಸವ ನಡೆಸುತ್ತಾರೆ. ಬಹಳ ಭಯ-ಭಕ್ತಿಯಿಂದ, ಮುಟ್ಟು-ಮೈಲಿಗೆ ಇಲ್ಲದೆ, ಮಾಂಸ-ಮಡ್ಡಿ ಈ ಅವಧಿಯಲ್ಲಿ ಬಳಸದೆ ಈ ಹಬ್ಬವನ್ನು ಆಚರಿಸುತ್ತಾರೆ. ಈ ಸಂದರ್ಭದಲ್ಲಿ ಜಾತ್ರೆ, ಬಂಡಿ, ರಂಗದಕುಣಿತ ಇತ್ಯಾದಿಗಳೆಲ್ಲವೂ ಇಲ್ಲಿ ನಡೆಯುತ್ತವೆ. 'ಮೂಗಿಳ್ಳು' ಎಂದು ಕರೆಯುವ ಈ ರಾತ್ರಿಯಲ್ಲಿ ಭಕ್ತರು ಆನಂದವಾಗಿ ಕುಣಿಯುತ್ತಾರೆ.

ಹೀಗೆ, ಮುಸ್ಲಿಂ ಹೆಣ್ಣು ಮಗಳೊಬ್ಬಳು 'ವರನಂದಮ್ಮ' ಎಂಬ ಅಭಿದಾನದೊಂದಿಗೆ ಜನಪದರ ಆರಾಧ್ಯ ದೈವವಾಗುತ್ತಾಳೆ. ಲೌಕಿಕ ಪ್ರಯೋಜನದ ದೃಷ್ಟಿಯಿಂದ ಬ್ರಾಹ್ಮಣ ವರ್ಗದವರು ಚೆಲುವರಾಯನನ್ನು ಹಿಡಿದುಕೊಂಡರೆ, ಯಾವ ಪ್ರಯೋಜನಾಪೇಕ್ಷೆಗಳು ಇಲ್ಲದ ಜನಪದರು, 'ಬೇಬಿ ನಾಚ್ಚಿಯಾರ್'ಳನ್ನು ತಮ್ಮ ಮನೆದೈವವಾಗಿ ಸ್ವೀಕರಿಸಿ ಆರಾಧಿಸುತ್ತಿದ್ದಾರೆ.

ಈ ಚೆಲುವಯ್ಯ-ವರನಂದಿಯರ ಬಗೆಗೆ ಪ್ರಕಟಗೊಂಡಿರುವ ಜನಪದ ಸಾಹಿತ್ಯ ಬಹಳ ಕಡಿಮೆಯೆಂದೇ ಹೇಳಬೇಕು. ಕ.ರಾ.ಕೃಷ್ಣಸ್ವಾಮಿಯವರ 'ಚೆಲುವಯ್ಯ-ವರನಂದಿ' ಪ್ರಧಾನಕೃತಿ. ಅದನ್ನು ಹೊರತುಪಡಿಸಿದರೆ ಎಲ್ಲೋ ನಾಲ್ಕಾರು ಬಿಡಿ-ಬಿಡಿ ಗೀತೆಗಳು ಬೆಳಕು ಕಂಡಿವೆ. ನನ್ನ ಕ್ಷೇತ್ರ ಕಾರ್ಯದಲ್ಲಿ ಸಾಕಷ್ಟು ಸಾಹಿತ್ಯ ಸಂಗ್ರಹಿಸಿದ್ದು, ಬೇರೆ ಕೃತಿಯ ರೂಪದಲ್ಲಿ ಪ್ರಕಟಿಸಬೇಕಾಗಿದೆ. ಕೆಲವು ಆಯ್ದ ಗೀತೆಗಳನ್ನು ಅನುಬಂಧದಲ್ಲಿ ನೀಡಿದ್ದೇನೆ. ಇಂತವುಗಳ ಸಂಗ್ರಹ ಕಾರ್ಯದಲ್ಲಿ ಶ್ರೀ ಸುದರ್ಶನಗೌಡರು ಶಿಕ್ಷಕರು, ಕದಲಗೆರೆ ಸಾಕಷ್ಟು ಕೆಲಸ ಮಾಡಿದ್ದಾರೆ.

ಜನಪದ ಧರ್ಮ

ಶಿಷ್ಟತೆಯ ಸೋಂಕು, ನಾಗರೀಕತೆಯ ಲೇಪವಿಲ್ಲದ ಜನಪದರು ಅನುಸರಿಸಿಕೊಂಡು ಬರುತ್ತಿರುವ ಧರ್ಮವನ್ನು 'ಜನಪದ ಧರ್ಮ' ಎಂದು ಕರೆಯಬಹುದು. ಒಕ್ಕಲಿಗ, ಕುರುಬ, ಬೆಸ್ತ, ಮಾದಿಗ, ನಯನಕ್ಷತ್ರಿಯ, ಹೊಲೆಯ, ಮೇದ, ಝೂಡಮಾಲಿ,... ಇತ್ಯಾದಿ ಜಾತಿಗಳಿಗೆ ಸೇರಿದ ಜನಾಂಗದವರನ್ನು ಸ್ಥೂಲವಾಗಿ 'ಜನಪದ'ರೆಂದು ಗುರಿತಿಸಬಹುದಾಗಿದೆ.

ಇವರೆಲ್ಲರೂ ಮೇಲುಕೋಟೆಯ ಪ್ರಧಾನ ದೈವಕ್ಕೆ ತಮ್ಮ ಅಚಲವಾದ ಭಕ್ತಿ, ನಿಷ್ಠೆ ತೋರಿಸುತ್ತಾರೆ. ಜೊತೆಯಲ್ಲಿಯೇ ಪರಂಪರಾಗತವಾಗಿ ಬಂದಿರುವ ಮನೆ ದೇವರು, ಕುಲದೇವರು, ಒಕ್ಕಲುದೇವರು,... ಇತ್ಯಾದಿ ದೈವಗಳ ಬಗೆಗೆ ಆತ್ಮೀಯತೆಯನ್ನು ಬೆಳೆಸಿಕೊಂಡಿದ್ದಾರೆ. ಈ ಸಂಬಂಧ ಹಲವಾರು ಹಬ್ಬ ಹರಿದಿನ ಆಚರಣೆಗಳನ್ನು ಮಾಡುತ್ತಾರೆ. ಶಿಷ್ಟ ಧರ್ಮೀಯರಂತೆ ಒಂದೇ ಧರ್ಮಕ್ಕೆ, ದೈವಕ್ಕೆ ನಿಷ್ಠರಾಗಿರಬೇಕೆಂಬ ಪ್ರಬಲ ನಿರ್ಧಾರವೇನೂ ಇವರಲ್ಲಿಲ್ಲ. ಎಲ್ಲಾ ದೈವಗಳೂ ಪೂಜ್ಯನೀಯವೇ ಇವರಿಗೆ. ಒಟ್ಟು ಜನಸಂಖ್ಯೆ ಪ್ರತಿಶತ ಮುಕ್ಕಾಲು ಭಾಗದಷ್ಟಿರುವ ಇವರು ಸಂಖ್ಯೆಯಲ್ಲಿ ಸಮಾಜದ ಪ್ರಮುಖ ಭಾಗವಾಗುತ್ತಾರೆ.

ಕಷ್ಟ-ದುಃಖ, ಒಳ್ಳೆಯದು-ಕೆಟ್ಟದ್ದು ಇವಕ್ಕೆಲ್ಲಕ್ಕೂ ತಮ್ಮ ನಂಬಿಕೆಯ ದೈವವನ್ನೇ ಗುರಿ ಮಾಡುವ ಇವರು ಕಷ್ಟ ಬಂದಾಗ ಹರಕೆ, ಮುಡಿಪು ಕಟ್ಟುತ್ತಾರೆ. ಕಾಣಿಕೆ ಸಲ್ಲಿಸುತ್ತಾರೆ. ಆ ಹೊರೆಯನ್ನೆಲ್ಲವನ್ನು ತಮ್ಮ ನಂಬಿಕೆಯ ದೈವದ ಮೇಲಕ್ಕೆ ವರ್ಗಾಯಿಸುತ್ತಾರೆ. ಬೇರೆ ಧರ್ಮೀಯರ ದೈವಗಳಿಂದ ಒಳ್ಳೆಯದಾಗುತ್ತದೆಂದು ಭಾವಿಸಿದರೆ ಅದಕ್ಕೂ ನಿಷ್ಠರಾಗುತ್ತಾರೆ, ಭಕ್ತರಾಗುತ್ತಾರೆ, ಕಳ್ಳೊಕ್ಕಲುಗಳಾಗಿ ಸೇರಿಕೊಳ್ಳುತ್ತಾರೆ. ಈ ತರಹದ ಬದಲಾವಣೆ ಈ ಧರ್ಮೀಯರಲ್ಲಿ ಸಹಜವಾಗಿದೆ.

ವಾರದ ಏಳು ದಿನಗಳಲ್ಲಿ ಒಂದೊಂದು ದೈವಕ್ಕೆ ಮೀಸಲಾಗಿ, ಅಂದು ಆ ದೈವವನ್ನು ಪೂಜಿಸುವ, ಸ್ಮರಿಸುವ ಕಾರ್ಯ ನಡೆಸುತ್ತಾರೆ. ಸೋಮವಾರ-ನಂಜುಂಡೇಶ್ವರ, ಮಲೆಮಹದೇಶ್ವರ, ಮಂಗಳವಾರ-ಮಾರಮ್ಮ, ಊರದೇವತೆಗಳು, ಗುರುವಾರ-ರಾಘವೇಂದ್ರ, ಶುಕ್ರವಾರ-ಲಕ್ಷ್ಮೀದೇವಿ, ಇನ್ನಿತರ ಸ್ತ್ರೀ ದೇವತೆಗಳು, ಶನಿವಾರ-ವೆಂಕಟರಮಣ, ಭಾನುವಾರ-ಭೈರವ,... ಹಾಗೆ, ತಮಗೆ ಒಳ್ಳೆಯದಾಗುತ್ತದೆ ಎಂದಾದರೆ ಎಲ್ಲಾ ದೇವತೆಗಳು ಇರಲಿ ಎನ್ನುವ ವಿಶಾಲ ಮನೋಭಾವನೆ ಇವರದು. ಹಾಗಾಗಿ ಇವರ ದೈವಗಳ ಸಂಖ್ಯೆಯೂ ಬಹುದೊಡ್ಡದಾಗಿದೆ.

ಟಿಪ್ಪಣಿಗಳು

1. Devaraj.D.V., Somanathapura Temple - Complex, Mysore, 1994, p. 118
2. Rangaehar.S., The philosophy of pancharatras. (Unpublished Ph.D. thesis, University of Mysore. 1967) P. 209-61
3. ಅದೇ
4. ರಾಮಾನುಜರ ಗುರುಗಳಾಗಿದ್ದ ಯಾಮಾನಾಚಾರ್ಯ (ಆಳವಂದಾರ್) ರಿಂದ ರಚಿತವಾದ 65 ಪದ್ಯಗಳಿರುವ ಸಂಸ್ಕೃತದಲ್ಲಿ ರಚನೆಯಾದ ಸ್ತೋತ್ರರತ್ನ ಅಥವಾ ಆಳವಂದಾರ್ ಸ್ತೋತ್ರ (ದೇವಾಲಯದ ಅರ್ಚಕರ ಮಾಹಿತಿ)
5. ಇದು ಕುಲಶೇಖರ ಆಳ್ವಾರ್‌ರಿಂದ ರಚಿತವಾದುದು.
6. ಇದು ರಾಮಾನುಜರಿಗಿಂತ ಪೂರ್ವದಲ್ಲಿ ರಚಿತವಾದುದು.
7. ಇದು ರಾಮಾನುಜರ ಉತ್ತರಾಧಿಕಾರಿಯಾದ ಪರಾಶರ ಭಟ್ಟರ್‌ರಿಂದ ರಚಿತವಾದುದು. ಶ್ರೀರಂಗಂನ ದೇವರ ಕುರಿತಾದ ಪದ್ಯವಾಗಿದೆ.
8. ಇದು ವೇದಾಂತದೇಶಿಕರಿಂದ ರಚಿತವಾದುದು.
9. ಇದು ಚಿಕ್ಕದೇವರಾಜ ಒಡೆಯರ್‌ರಿಂದ ರಚಿತವಾದುದು.
10. ಇದು ಮೂರನೇ ಕೃಷ್ಣರಾಜ ಒಡೆಯರ್ ರಚಿಸಿದ ವಾಣಿವಿಲಾಸ ರಾಮಾಯಣ (1799–1868)
11. E.C.VI, ಪಾಂಡವಪುರ. 152, 164, 208
12. ಅದೇ, ಶ್ರೀರಂಗಪಟ್ಟಣ. 105
13. ಅದೇ, ಪಾಂ. 208
14. ಅದೇ, ಪಾಂ. 134
15. ಅದೇ, ಪಾಂ. 129
16. ಅದೇ, ಪಾಂ. 128, 129
17. ಈ ಉತ್ಸವಗಳ ಕುರಿತ ಸಂಪೂರ್ಣ ವಿವರವು ಮೇಲುಕೋಟೆ ದೇವಾಲಯ ಕೈಪಿಡಿಯಲ್ಲಿ ಸಿಗುತ್ತದೆ. (ಮೈಸೂರು, 1937)
18. E.C.VI, ಪಾಂಡವಪುರ. 152
19. ಅದೇ, ಪಾಂ. 125, 134

20. ಅದೇ, ಪಾಂ. 125

21. ಅದೇ, ಪಾಂ. 129

22. ಅದೇ, ಪಾಂ. 129

23. ಅದೇ, ಪಾಂ. 128

24. ಅದೇ, ಪಾಂ. 128, 163

25. ಅದೇ, ಪಾಂ. 164

26. ಅದೇ, ಪಾಂ. 128

27. ಅದೇ, ಪಾಂ. 126

28. M.A.R., 1940, No-38, P.167

29. E.C.VI, ಪಾಂಡವಪುರ. 129

30. ಅದೇ, ಪಾಂ. 144

31. Rajapalachari.C., Mahabharata, Bharathiya Vidya Bhavan, Bomby, 1951, P.VI (6).

32. ಅದೇ, ಪು. 8–10

33. Manmathanatha Dutt, The Ramayana-Balakandam, Calcutta, 1831, P. 1-VI (1-6)

34. ಕಲಬುರ್ಗಿ.ಎಂ.ಎಂ., ಉತ್ತರ ಕರ್ನಾಟಕದ ಜನಪದ ಪದ್ಯ ಸಾಹಿತ್ಯ, ಸಮಾಜ ಪುಸ್ತಕಾಲಯ, ಧಾರವಾಡ, 1978, ಪು. 14

35. ಕೃಷ್ಣಸ್ವಾಮಿ.ಕ.ರಾ., ಚೆನ್ನಿಗ ಚೆಲುವಯ್ಯ, ಚೇತನ ಮುದ್ರಣಾಲಯ, ಮೈಸೂರು, 1962

36. ಅದೇ

ಅಧ್ಯಾಯ–8
ಉಪಸಂಹಾರ

ಪ್ರಸ್ತುತ ಮೇಲುಕೋಟೆ ದೇವಾಲಯಗಳ ಅಧ್ಯಯನವು ಹಲವು ವಿಶಿಷ್ಟ ಚಾರಿತ್ರಿಕ ಮತ್ತು ಸಾಂಸ್ಕೃತಿಕ ನೆಲೆಗಳನ್ನು ವೈಚಾರಿಕತೆ ಮತ್ತು ವಿಮರ್ಶಾತ್ಮಕ ವಿಧಾನಗಳ ವಿಶ್ಲೇಷಣೆಯನ್ನು ಒಳಗೊಂಡಿದೆ. ಧಾರ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಮಹತ್ವ ಪಡೆದ ದೇವಾಲಯಗಳ ಸರಣಿಯಲ್ಲಿ ಮೇಲುಕೋಟೆ ದೇವಾಲಯ ಸಂಕೀರ್ಣವು ಒಂದು. ದೇವಾಲಯಗಳು ಹುಟ್ಟು ಜನತೆಯ ಆರ್ಥಿಕ ಮತ್ತು ಸಾಮಾಜಿಕ ಜೀವನದ ಮೇಲೆ ಬೀರಿದ ಪರಿಣಾಮಗಳ ಅಧ್ಯಯನದಿಂದ ಕೆಲವು ಕುತೂಹಲಕಾರಿ ಸಂಗತಿಗಳು ಹೊರಬರುತ್ತವೆ. ಆಗ ಮಾತ್ರ ದೇವಾಲಯಗಳು ಕೇವಲ ಪೂಜಾಸ್ಥಾನಗಳು ಮಾತ್ರವಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಧಾರ್ಮಿಕ ಪರಂಪರೆಯನ್ನು ಪುನಶ್ಚೇತಗೊಳಿಸುವ ಜೊತೆಗೆ ದೇವಾಲಯಗಳು ರಾಜತ್ವವನ್ನು ಮತ್ತು ಪುರೋಹಿತಶಾಹಿಯನ್ನು ಬಲಪಡಿಸಿ ಧಾರ್ಮಿಕ ಪ್ರಭುತ್ವದ ಪ್ರತಿನಿಧಿಯಾಗಿ ಶ್ರೇಣೀಕೃತ ಸಮಾಜದ ರಕ್ಷಣೆ ಮೂಲಕ ಸಮಾಜದ ಅಸಮಾನತೆಗೆ ಕಾರಣವಾದವು. ಸ್ಥಳದ ಆರ್ಥಿಕ ಆಧಾರವಾಗಿದ್ದ ದೇವಾಲಯಗಳು ಸಾಂಪ್ರದಾಯಿಕತೆ ಮತ್ತು ಮಡಿವಂತಿಕೆಗಳ ಕೇಂದ್ರಗಳೂ ಆದವು. ಹೀಗೆ ದೇವಾಲಯಗಳು ಬದುಕಿನ ಹತ್ತು ಹಲವು ಮುಖಗಳನ್ನು ಸಾಮುದಾಯಿಕವಾಗಿ ನಿಯಂತ್ರಿಸುತ್ತಿದ್ದುದನ್ನು ನೋಡಬಹುದು. ಸಂಶೋಧನೆಯು ಸಮಾಜಮುಖಿ ಸಫಲತೆಯನ್ನು ಹೊಂದಿರಬೇಕು. ಅಂತಹ ಸಂದರ್ಭದಲ್ಲಿ ಸಂಶೋಧಕನ ಪರಿಶ್ರಮ ಸಫಲತೆಯನ್ನು ಹೊಂದಲು ಸಾಧ್ಯ. ಹೀಗೆ ದೇವಾಲಯಗಳ ವಿಭಿನ್ನ ನೆಲೆಗಳಲ್ಲಿ ಉಂಟಾದ ವೈಚಾರಿಕ ಹಾಗೂ ಕ್ರಿಯಾತ್ಮಕ ಪರಂಪರೆಯಿಂದ ಎಷ್ಟರ ಮಟ್ಟಿಗೆ ಮಾರ್ಗದರ್ಶನವನ್ನು ಪಡೆಯಬಹುದೆಂಬುದನ್ನು ಈ ಅಧ್ಯಯನದ ಮೂಲಕ ಯತ್ನಿಸಲಾಗಿದೆ.

ಮುಖ್ಯವಾಗಿ ಒಂದು ಜನಸಮುದಾಯದ ಜೀವನ ವಿಧಾನ ರೂಪುಗೊಳ್ಳುವುದು ಅಲ್ಲಿಯ ಆರ್ಥಿಕ–ಸಾಮಾಜಿಕ ಸ್ಥಿತಿಯನ್ನವಲಂಬಿಸಿರುತ್ತದೆ. ಆರ್ಥಿಕ–ಸಾಮಾಜಿಕ ಅಸಮಾನತೆ ಇರುವ ವ್ಯವಸ್ಥೆಯಲ್ಲಿ ಸಾಂಸ್ಕೃತಿಕ ವೈರುಧ್ಯತೆ ಇದ್ದೇ ಇರುತ್ತದೆ. ಸಮಾಜವ್ಯವಸ್ಥೆಯಲ್ಲಿಯೇ ಅಸಮಾನತೆ ಇದ್ದಾಗ ಜನತೆಯ ಜೀವನ ವಿಧಾನದಲ್ಲಿಯೂ ಅಸಮಾನತೆ ಎದ್ದು ಕಾಣುತ್ತದೆ. ಆಗ ಅನೇಕ ಗೋಡೆಗಳು ಅಲ್ಲಿ ಕಟ್ಟಲ್ಪಡುತ್ತದೆ. ಈ ಗೋಡೆಗಳನ್ನು ವ್ಯವಸ್ಥಿತವಾಗಿ ಉಳಿಸಿಕೊಳ್ಳುವ ಪದ್ಧತಿಗಳು ಪ್ರಾರಂಭವಾಗುತ್ತವೆ. ಇಂತಹ ಸಾಂಪ್ರದಾಯಿಕ ಗೋಡೆಗಳ ಸಾಲಿಗೆ ದೇವಾಲಯಗಳು ಸೇರುತ್ತವೆ. ಬಹುಸಂಖ್ಯಾತ ಜನರ ಚರಿತ್ರೆಯು ಯಜಮಾನಿಕೆ ಸಂಸ್ಕೃತಿಯಿಂದ ಶೋಷಣೆಗೊಳಗಾಯಿತು. ಚರಿತ್ರೆಯನ್ನು

ಸಾಮಾಜಿಕ ಮತ್ತು ಆರ್ಥಿಕ ನೆಲೆಗಟ್ಟಿನಿಂದ ನಿರ್ಮಿಸುವ ಪ್ರಯತ್ನವು ಅಲಕ್ಷಿತ ವರ್ಗದ ಜನರಿಗೆ ನ್ಯಾಯ ಒದಗಿಸುತ್ತದೆ. ಒಂದು ದೇಶದ ನಿಜವಾದ ಚರಿತೆಯೆಂದರೆ ಜನರ ಚರಿತ್ರೆ, ಆ ಚರಿತ್ರೆಯಲ್ಲಿ ಜನತೆ ಬದುಕಿದ ರೀತಿ, ಅನುಸರಿಸಿದ ಧರ್ಮ, ಕಟ್ಟಿದ ಕಲೆ, ಜೀವನ ಮೌಲ್ಯಗಳು ಮುಂತಾದ ವಿವರಗಳಿರುತ್ತವೆ. ಈ ಮೇಲಿನ ವಿಭಿನ್ನ ಆಲೋಚನಾ ನೆಲೆಗಳ ಮೂಲಕ **'ಮೇಲುಕೋಟೆ ದೇವಾಲಯಗಳು-ಚಾರಿತ್ರಿಕ ಮತ್ತು ಸಾಂಸ್ಕೃತಿಕ ನೆಲೆಗಳು'** ಶೀರ್ಷಿಕೆಯಡಿಯಲ್ಲಿ ಈ ಮಹಾಪ್ರಬಂಧವನ್ನು ರಚಿಸಲಾಗಿದೆ.

ಪ್ರಸ್ತುತ ಸಂಶೋಧನೆಯಲ್ಲಿ ಅಳವಡಿಸಿಕೊಂಡಿರುವ ವಿಧಾನ ಹಾಗೂ ಆರಿಸಿಕೊಂಡಿರುವ ಮಾರ್ಗವು ಪರಿಮಾಣಾತ್ಮಕತೆಗಿಂತ ಹೆಚ್ಚು ಗುಣಾತ್ಮಕವಾಗಿದೆ. ಏಕೆಂದರೆ ಪರಿಮಾಣಾತ್ಮಕತೆಯು ವಸ್ತು ವಿಷಯ ಹಾಗೂ ಅಧ್ಯಯನದ ಕಾಲಕ್ಕೆ ಅಷ್ಟಾಗಿ ಸರಿ ಬರುವುದಿಲ್ಲ. ಆದರೆ ಗುಣಾತ್ಮಕ ಅಧ್ಯಯನವು ಹೆಚ್ಚು ಸೂಕ್ತವಾಗಿದೆ. ಇಲ್ಲಿ ಕೇವಲ ಚಾರಿತ್ರಿಕ ಮತ್ತು ಸಾಂಸ್ಕೃತಿಕ ವೈರುಧ್ಯಗಳನ್ನಷ್ಟೇ ವಿವರಿಸದೆ, ದೇವಾಲಯಗಳು ಸಮಾಜಕ್ಕೆ ನೀಡಿದ ಪ್ರಶಂಸಾರ್ಹ ಕಾಣಿಕೆಗಳನ್ನು ಅಧ್ಯಯನದಲ್ಲಿ ವಿವರಿಸಲಾಗಿದೆ. ಪ್ರಬಂಧದ ಮೊದಲ ಅಧ್ಯಾಯದಲ್ಲಿ ತಿಳಿಸಿರುವಂತೆ, ಅಧ್ಯಯನದ ಕೆಲವು ಮಹತ್ವದ ಉದ್ದೇಶಗಳನ್ನು ಕೇಂದ್ರೀಕರಿಸಿ ನಡೆಸಿರುವ ಈ ಸಂಶೋಧನೆಯಿಂದ ಮೇಲುಕೋಟೆ ದೇವಾಲಯಗಳಿಗೆ ಸಂಬಂಧಿಸಿದಂತೆ ಕೆಲವು ತೀರ್ಮಾನಗಳಿಗೆ ಬರಲಾಗಿದೆ.

ಮೊದಲಿಗೆ ಮೇಲುಕೋಟೆಯು ಸುತ್ತಲಿನ ಪ್ರಾಗೈತಿಹಾಸಿಕ ನೆಲೆಯ ಲಭ್ಯ ಪುರಾವೆಗಳಿಂದ ಬೃಹತ್ ಶಿಲಾಯುಗದ ನೆಲೆಯೆಂದು ಗುರುತಿಸಲ್ಪಟ್ಟಿದೆ. ಈ ಪರಿಸರವು ಬೃಹತ್ ಶಿಲಾಯುಗಕ್ಕೆ ಸೇರಿದ ಜನವಸತಿಯ ಕೇಂದ್ರವಾಗಿದ್ದು, ಪ್ರಾಗೈತಿಹಾಸಿಕ ಕಾಲದಿಂದಲೂ ತನ್ನ ಪ್ರಾಚೀನತೆಯನ್ನು ಗುರುತಿಸಿಕೊಂಡಿದೆ. ಪ್ರಾರಂಭದಿಂದಲೂ ಇತಿಹಾಸ ಘಟನೆಗಳಿಗೆ ಪ್ರೇರಕ ಅಂಶಗಳನ್ನು ಹೊಂದಿದ್ದು, ಮೌರ್ಯರ ಕಾಲದಿಂದಲೇ ಇತಿಹಾಸವನ್ನು ಗುರುತಿಸಬಹುದು. ನಂತರ ಗಂಗರ ಕಾಲದಲ್ಲಿ ಸಾಂಸ್ಕೃತಿಕ ಬೆಳವಣಿಗೆಗೆ ಕಾರಣವಾಯಿತು. ನಂತರ ಚೋಳರ ಪ್ರಭಾವಕ್ಕೆ ಒಳಗಾಗಿ, ತಮಿಳು ಸಂಸ್ಕೃತಿಯು ಪರಿಚಯಿಸಲ್ಪಟ್ಟಿತ್ತು. ಶ್ರೀ ವೈಷ್ಣವ ಮತದ ಬೆಳವಣಿಗೆಯಲ್ಲಿ ಈ ಅವಧಿಯು ಹೆಚ್ಚಿನ ಪ್ರಾಮುಖ್ಯತೆ ಹೊಂದಿದೆ. ನಂತರ ಹೊಯ್ಸಳರು ವೈಭವಪೂರ್ಣ ದೇವಾಲಯ ನಿರ್ಮಾಣದ ಮೂಲಕ ತಮಿಳು ಸಂಸ್ಕೃತಿಯಿಂದ ಪ್ರಭಾವಿತವಾಗಿದ್ದ ಈ ಸ್ಥಳದಲ್ಲಿ ಮತ್ತೊಮ್ಮೆ ಕನ್ನಡ ಸಂಸ್ಕೃತಿಯ ಪುನರುಜ್ಜೀವನಕ್ಕೆ ಕಾರಣರಾದರು. ರಾಮಾನುಜರ ಪ್ರಭಾವಕ್ಕೊಳಗಾದ ವಿಷ್ಣುವರ್ಧನನು ಶ್ರೀ ವೈಷ್ಣವ ಮತವನ್ನು ಪ್ರೋತ್ಸಾಹಿಸಿದನು. ದೇವಾಲಯ ಪೂಜೆ ಮತ್ತು ಆಚರಣೆಗಳನ್ನು ಪ್ರತಿಪಾದಿಸಿದ ರಾಮಾನುಜರ ನಿಲುವಿಗೆ ದೇವಾಲಯ ನಿರ್ಮಾಣದ ಮೂಲಕ ಹೊಯ್ಸಳರು

ಆಧಾರವಾಗಿ ನಿಂತರು. ನಂತರ ತಲೆಯೆತ್ತಿದ ವಿಜಯನಗರ ಸಾಮ್ರಾಜ್ಯವು ಈ ಪ್ರಾಂತ್ಯದ ಇತಿಹಾಸದಲ್ಲಿ ಗುರುತರ ಪಾತ್ರವಹಿಸಿ, ಮೇಲುಕೋಟೆ ಮುಖ್ಯ ಶ್ರೀ ವೈಷ್ಣವ ಕೇಂದ್ರವಾಗುವಂತೆ ಮಾಡಿದರು. ಇದು ಮೇಲುಕೋಟೆ ದೇವಾಲಯ ಸಂಕೀರ್ಣದ ಮೂಲಕ ವ್ಯಕ್ತವಾಯಿತು. ಮೇಲುಕೋಟೆ ದೇವಾಲಯಗಳು ಉನ್ನತ ಆಶ್ರಯವನ್ನು ಪಡೆದು ಪ್ರಬಲ ಧಾರ್ಮಿಕ ಕೇಂದ್ರವಾಯಿತು.

ನಂತರ ಬೆಳಿಕಿಗೆ ಬಂದ ಮೈಸೂರಿನ ಒಡೆಯರು ಮೇಲುಕೋಟೆ ನಾರಾಯಣಸ್ವಾಮಿಯ ಭಕ್ತರಾಗಿದ್ದು, ದೇವಾಲಯಕ್ಕೆ ಉದಾರ, ದಾನ-ದತ್ತಿಗಳನ್ನು ನೀಡಿದರು. ಒಡೆಯರ ಔದಾರ್ಯದಿಂದ ಮೇಲುಕೋಟೆ ದೇವಾಲಯ ಸಂಕೀರ್ಣವು ವೈಭವಪೂರ್ಣವಾಯಿತು. ಹೀಗೆ ರಾಮಾನುಜರ ಪ್ರಭಾವ ಹಾಗೂ ನಿರಂತರವಾಗಿ ಹಲವು ಶತಮಾನಗಳ ಕಾಲ ಪಡೆದ ನಿರಂತರ ರಾಜಾಶ್ರಯದಿಂದ ಹಾಗೂ ಪಡೆದ ಉದಾರ ದಾನ-ದತ್ತಿಗಳಿಂದ ಈ ಸ್ಥಳವು ದಕ್ಷಿಣ ಭಾರತದ ಶ್ರೀಮಂತ ಸಂಸ್ಥೆಯಾಯಿತು. ಧರ್ಮವು ದೇವಾಲಯಗಳು ಪ್ರಾಮುಖ್ಯತೆ ಗಳಿಸಲು ಕಾರಣವಾಯಿತು. ಮಾನವನಾ ಕಲ್ಪನಾ ನೆಲೆಯ ಪುರಾಣಗಳಿಂದ ಜನತೆಯು ದೇವಾಲಯದಿಂದ ಆಕರ್ಷಿಸಲ್ಪಟ್ಟರು. ಧರ್ಮದ ಕೇಂದ್ರಗಳಾದ ಇವು ಸಂಪತ್ತಿನ ಕೇಂದ್ರಗಳೂ ಆದವು. ದೇವಾಲಯ ಅವಲಂಬಿ ವರ್ಗವೊಂದು ಉಗಮವಾಗಿ ದೇವಾಲಯದ ಅಗತ್ಯತೆಯನ್ನು ವೈಭವೀಕರಿಸಿತು. ದೇವಾಲಯಗಳು ರಾಜಪ್ರಭುತ್ವವನ್ನು ನಿಯಂತ್ರಿಸುವ ಮಟ್ಟಿಗೆ ತಮ್ಮ ಪ್ರಾಮುಖ್ಯತೆಯನ್ನು ಬಲಪಡಿಸಿದವು. ಸಮಾಜವನ್ನು ರೂಪಿಸುವ ಕಾರ್ಯದಲ್ಲಿ ತೊಡಗಿದವು. ದೇವಾಲಯಗಳು ಇನ್ನಿತರ ಕಲಾ ಪ್ರಕಾರಗಳಿಗೂ ಆದ್ಯತೆ ನೀಡಿ ಪ್ರೋತ್ಸಾಹಿಸುವಿಕೆಯು ಸಾಂಸ್ಕೃತಿಕ ಪ್ರಾಮುಖ್ಯತೆಗೆ ಕಾರಣವಾಯಿತು. ಮಠಗಳ ಸಂಪರ್ಕದಿಂದ ವಿಸ್ತಾರಗೊಂಡು ವಿದ್ಯಾಕೇಂದ್ರಗಳಾಗಿ, ಅನ್ನಸತ್ರಗಳಾಗಿ, ದೃಶ್ಯ ಮತ್ತು ಶ್ರವ್ಯಕಲೆಗೆ ಪ್ರೋತ್ಸಾಹ ನೀಡುವ ಮೂಲಕ ಜನಸಂಪರ್ಕ ಕೇಂದ್ರವಾದವು. ಹೀಗೆ ನಿರಂತರ ರಾಜಾಶ್ರಯದೊಂದಿಗೆ ಮೇಲುಕೋಟೆ ದೇವಾಲಯ ಸಂಕೀರ್ಣವು ಒಂದು ಸಾಮಾಜಿಕ ಮತ್ತು ಆರ್ಥಿಕ ಕೇಂದ್ರವಾಗಿ ಗುರುತಿಸಲ್ಪಟ್ಟಿತು.

ಎರಡನೆಯದಾಗಿ ಧರ್ಮವನ್ನು ಸಾಧನವನ್ನಾಗಿ ಇಟ್ಟುಕೊಂಡು ಸಮಾಜದಲ್ಲಿ ಯಜಮಾನಿಕೆಯನ್ನು ಸ್ಥಾಪಿಸುವುದು ಧಾರ್ಮಿಕ ಪ್ರಭುತ್ವ. ಧಾರ್ಮಿಕ ಪ್ರಭುತ್ವವನ್ನು ನಿರಂತರವಾಗಿ ಮುಂದುವರೆಸುವಲ್ಲಿ ದೇವಾಲಯಗಳು ಮಹತ್ವದ ಪಾತ್ರವಹಿಸಿದವು. ರಾಜಾಶ್ರಯದ ಪಡಿನೆರಳಿನಲ್ಲಿ ದೇವಾಲಯಗಳು ಬಲಗೊಂಡವು. ಜನರ ಬದುಕಿನಲ್ಲಿ ಕೇಂದ್ರಸ್ಥಾನ ಪಡೆದವು. ಧರ್ಮದ ಮುಖಗಳಾದ ದಾನ, ದತ್ತಿಗಳಿಂದ ದೇವಾಲಯಗಳು ಪ್ರಬಲಗೊಂಡವು. ವೈದಿಕ ಆದರ್ಶಗಳನ್ನು ಪ್ರತಿನಿಧಿಸಿದವು. ಮತಧರ್ಮಗಳ ಪ್ರತೀಕಗಳಾದ

ದೇವಾಲಯಗಳು ಸಾಮಾಜಿಕ ಮತ್ತು ರಾಜಕೀಯ ಅಗತ್ಯತೆಗಳನ್ನು, ಅನಿವಾರ್ಯತೆಗಳನ್ನು ಈಡೇರಿಸಿಕೊಳ್ಳುವ ಪ್ರಬಲ ಮಾಧ್ಯಮಗಳಾದವು. 12ನೇ ಶತಮಾನದಲ್ಲಿ ದೇವಾಲಯಗಳ ಮೂಲಕ ಪ್ರಚುರ ಪಡಿಸಿದ ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತವು ಬ್ರಾಹ್ಮಣಶಾಹಿಯ ಧಾರ್ಮಿಕ ಕಟ್ಟುಪಾಡುಗಳನ್ನು ತಿರಸ್ಕರಿಸಿ ಉಂಟುಮಾಡಿದ ಧಾರ್ಮಿಕ ಆಂದೋಲನದಂತೆ ಇದು ಯಾವ ಪರಿಣಾಮವನ್ನು ಬೀರಲಿಲ್ಲ. ಇದರಿಂದ ಸಾಂಪ್ರದಾಯಿಕತೆಯೇ ಮೊದಲಸ್ಥಾನವನ್ನು ಪಡೆದುಕೊಳ್ಳುವಂತಾಯಿತು. ದೇವಾಲಯಗಳು ಶ್ರೀ ವೈಷ್ಣವ ಮತ ಪ್ರಚಾರದ ಚಟುವಟಿಕೆಯ ಕೇಂದ್ರ ಸ್ಥಾನವನ್ನು ಪಡೆದವು. ಈ ಸಿದ್ಧಾಂತವು ಭಗವಂತ ಮತ್ತು ಭಕ್ತನ ಕುರಿತು ತನ್ನ ತತ್ವವನ್ನು ಸೀಮಿತಗೊಳಿಸಿದ್ದು, ಧಾರ್ಮಿಕ ಚೌಕಟ್ಟಿನೊಳಗೆ ಜನಸಾಮಾನ್ಯರ ಅರಿವಿಗೆ ನಿಲುಕದ ರೀತಿಯಲ್ಲಿ ಈ ಸಿದ್ದಾಂತವು ರೂಪುಗೊಂಡಿದ್ದು, ಮಾನವನ ಬದುಕು ಅಧೀನದಲ್ಲಿದೆ ಎಂಬ ಉಪದೇಶ ನೀಡಲಾಯಿತು. ಈ ಚಿಂತನೆಗಳು ಜನಸಾಮಾನ್ಯರನ್ನು ಗೊಂದಲದಲ್ಲಿ ಸಿಲುಕಿಸಿದ್ದೇ ಅಲ್ಲದೆ ಸಿದ್ದಾಂತದ ವಿಭಜನೆಗೆ ಕಾರಣವಾಯಿತು. ಇಲ್ಲಿ ರಾಮಾನುಜರು ಅಸಮಾನ ಸಾಮಾಜಿಕ ವ್ಯವಸ್ಥೆಯನ್ನು ಪ್ರಶ್ನಿಸಿದಂತೆ ಕಂಡುಬರುವುದಿಲ್ಲ. ಸಾಂಪ್ರದಾಯಿಕತೆಯು ವಿಚಲಿತಗೊಳ್ಳಲಿಲ್ಲ. ದೇವಾಲಯಗಳ ಮೂಲಕ ಆಚಾರ್ಯರು ಜಾತಿವ್ಯವಸ್ಥೆಯನ್ನು ಪ್ರಶ್ನಿಸಿದರಾದರೂ ಅದು ಧಾರ್ಮಿಕ ಚೌಕಟ್ಟಿನಲ್ಲಿತ್ತೇ ವಿನಃ ಶ್ರೇಣೀಕೃತ ಸಮಾಜ ವ್ಯವಸ್ಥೆಯ ಹಿನ್ನೆಲೆಯಲ್ಲಲ್ಲ.

ದೇವಾಲಯಗಳು ಧಾರ್ಮಿಕ ಸಾಮರಸ್ಯದ ಪ್ರತೀಕವಾಗಿ ಮೇಲ್ನೋಟಕ್ಕೆ ಕಂಡರು ಚಾರಿತ್ರಿಕ ನೆಲೆಯಲ್ಲಿ ಹಲವು ಮತೀಯ ವಿಭಿನ್ನ ಆಲೋಚನೆಗಳು ಹೊರಬರುತ್ತವೆ. ಆರಂಭದಲ್ಲಿ ಶ್ರೀವೈಷ್ಣವ ಮತ ಇಲ್ಲಿ ಜೈನ ಮತ್ತು ಶೈವಮತದಿಂದ ಪ್ರತಿರೋಧ ಹೆದರಿಸಬೇಕಾಯಿತು. ಈ ಮೂರು ಮತಗಳ ನಡುವೆ ಮತೀಯ ವಿರಸಗಳು ವ್ಯಕ್ತವಾದವು. ಭಾರತದ ಧಾರ್ಮಿಕ ಪರಿಧಿಗಳ ನಡುವಿನ ವಾಗ್ವಾದಗಳು ಮತ್ತು ತತ್ವ ಜಿಜ್ಞಾಸೆಗಳು, ಸಮಾಜದಲ್ಲಿ ಧರ್ಮವು ವಹಿಸುತ್ತಿದ್ದ ಪಾತ್ರದ ಹೆಚ್ಚು ವಾಸ್ತವಿಕವಾದ ಚಿತ್ರವನ್ನು ನೀಡುತ್ತವೆ. ಧರ್ಮದ ಸಾಮಾಜಿಕ ಮತ್ತು ಆರ್ಥಿಕ ಅಗತ್ಯತೆಗಳು ಹಾಗೂ ರಾಜರ ಧಾರ್ಮಿಕ ಸಾಮರಸ್ಯದ ಅನಿವಾರ್ಯತೆಗಳ ನಡುವೆ, ಸಾಮರಸ್ಯದ ಬದಲು ಧಾರ್ಮಿಕ ಬಿಕ್ಕಟ್ಟು ಮತ್ತು ಗೊಂದಲಗಳು ಸೃಷ್ಟಿಯಾದುದಕ್ಕೆ ಇದು ಸ್ಪಷ್ಟ ಉದಾಹರಣೆ.

ಮೂರನೆಯದಾಗಿ ರಾಜ–ಮಹಾರಾಜರ ವೈಭವದ ಘಟನೆಗಳಿಂದ ತುಂಬಿರುವ ದೇಶದ ಇತಿಹಾಸ, ಚರಿತ್ರೆ ಜನಸಾಮಾನ್ಯರ ಬದುಕಿನ ಬಗೆಗೆ ಮೌನತಾಳಿವೆ. ಈ ಗಾಢ ಮೌನವನ್ನು ಮುರಿಯಲು ಜನಸಾಮಾನ್ಯರ ನಂಬಿಕೆ, ಆಚಾರ–ವಿಚಾರಗಳನ್ನು ಅರಿಯಲು ಗ್ರಾಮ ದೇವತೆಗಳ ಅಧ್ಯಯನ ಅಗತ್ಯ. ಮಾನವ ನಿರ್ಮಿತ ಶ್ರೇಣೀಕೃತ ಸಮಾಜ

ವ್ಯವಸ್ಥೆಯಂತೆಯೇ, ದೇವತೆಗಳ ಸ್ಥಾನಮಾನ ಇರುತ್ತವೆ. ಬ್ರಾಹ್ಮಣ ಸಂಸ್ಕೃತಿ ರಾಜಾಶ್ರಯಕ್ಕೆ ಸಿಕ್ಕಿ ವಿಸ್ತಾರವಾಗಿ ಬೆಳೆದು ಪ್ರಬಲವಾದಂತೆ, ಬ್ರಾಹ್ಮಣೇತರ ಸಂಪ್ರದಾಯಗಳು ಪ್ರಬಲತೆ ಹೊಂದಲಿಲ್ಲ. ಇಲ್ಲಿ ಬ್ರಾಹ್ಮಣೇತರರು ಬ್ರಾಹ್ಮಣ ಸಂಸ್ಕೃತಿಯನ್ನು ಅಳವಡಿಸಿಕೊಳ್ಳುವ ಒತ್ತಾಯಕ್ಕೊಳಗಾದವು. ಇದು ಜಾತಿ ಆಧಾರಿತ ಸಮಾಜವನ್ನು ಇನ್ನಷ್ಟು ಗಟ್ಟಿಗೊಳಿಸಿತು. ವ್ಯವಸ್ಥಿತವಾಗಿ ಜಾನಪದರನ್ನು ವೈದಿಕ ಸಂಪ್ರದಾಯದೊಳಗೆ ಸೇರಿಸಿಕೊಳ್ಳುವ ಪ್ರಯತ್ನಗಳು ನಡೆದವು. ಕ್ರಮೇಣ ಪ್ರತಿಯೊಂದು ಗ್ರಾಮದೇವತೆಯ ಸ್ಥಾನವನ್ನು ಶಿಷ್ಟದೇವತೆಗಳು ಆಕ್ರಮಿಸಿಕೊಂಡು ತಮ್ಮ ಪ್ರಭುತ್ವ ಸ್ಥಾಪಿಸಿಕೊಂಡವು. ಪುರಾಣಗಳ ಕಥೆಯಲ್ಲಿ ವೈದಿಕ ಮುದ್ರೆ ಸ್ಪಷ್ಟವಾಗಿ ಕಂಡುಬರುತ್ತದೆ. ಮೇಲ್ನೋಟಕ್ಕೆ ಈ ಬೆಳವಣಿಗೆಗಳು ಧಾರ್ಮಿಕ ವಿಸ್ತರಣೆಯಾಗಿ ಕಂಡುಬಂದರೂ ಅಧಿಕಾರದ ವಿಸ್ತರಣೆಯೇ ಇದರ ಮೂಲ ಉದ್ದೇಶ. ಇಂತಹ ಅನ್ಯ ಸಂಸ್ಕೃತಿಗಳ ಪ್ರವೇಶವಾದರೂ ಗ್ರಾಮದೇವತೆಗಳು ಸಂಪೂಣವಾಗಿ ತಮ್ಮ ಅಸ್ತಿತ್ವವನ್ನು ಕಳೆದುಕೊಂಡಿಲ್ಲ. ಗ್ರಾಮೀಣ ಜನರ ದೃಷ್ಟಿಯಲ್ಲಿ ಗ್ರಾಮದೇವತೆಗಳು ಗ್ರಾಮಗಳ ರಕ್ಷಕರೇ ಆಗಿದ್ದವು. ಇದರಿಂದಾಗಿ ಅವರು ವೈದಿಕ ದೇವತೆಗಳ ಮೇಲೆ ಅತಿಯಾದ ಭರವಸೆ ಹೊಂದಿದಂತೆ ಕಂಡುಬರುವುದಿಲ್ಲ. ಸಾಮಾಜಿಕ ರಚನೆಯ ಸಂದರ್ಭದಲ್ಲಿ ದ್ವಂದ್ವ, ವಿರೋಧಗಳು ಹಾಗೂ ಹೊಂದಾಣಿಕೆಗಳು ಕಾಣಸಿಗುವುದು ಸಹಜ. ಮೇಲಿನ ಅಂಶಗಳು ಗ್ರಾಮದೇವತೆಗಳು ಶ್ರೇಣೀಕೃತ ಸಮಾಜದಲ್ಲಿ ಹೊಂದಿದ್ದ ಅಧೀನ ಸ್ಥಾನ, ಗ್ರಾಮೀಣ ಜನರ ಬದುಕಿನಲ್ಲಿ ಹೊಂದಿದ ಕೇಂದ್ರಸ್ಥಾನವನ್ನು ಹೇಳುತ್ತದೆ. ಧಾರ್ಮಿಕ ಪ್ರಭುತ್ವದಿಂದ ಗ್ರಾಮದೇವತೆಗಳು ನಿರಾಕರಿಸಲ್ಪಟ್ಟಂತೆ ಕಂಡರು ತಮ್ಮ ಅಧಿಕಾರವನ್ನು ಸ್ಥಿರಗೊಳಿಸುವ ಪ್ರಯತ್ನಕ್ಕೆ ಅವುಗಳನ್ನೇ ಸಾಧನವನ್ನಾಗಿ ಬಳಸಿಕೊಂಡವು. ಇವು ಬಹುಸಂಖ್ಯಾತ ಪ್ರಜೆಗಳ ಹಿತವನ್ನು ನಿರ್ಲಕ್ಷಿಸಿ, ಸೀಮಿತ ವರ್ಗವು ಅಧಿಕಾರವನ್ನು ಸ್ಥಾಪಿಸುವಂತೆ ಹಾಗೂ ಸವಲತ್ತುಗಳನ್ನು ಹೊಂದುವಂತೆ ಮಾಡಿದವು.

ನಾಲ್ಕನೆಯದಾಗಿ ಸಮುದಾಯಕೇಂದ್ರಗಳಾಗಿ ದೇವಾಲಯದ ಪಾತ್ರ ಗಮನಾರ್ಹವಾದುದು. ರಾಮಾನುಜರು ದಕ್ಷಿಣ ಭಾರತದಲ್ಲಿ ಬಲಗೊಳಿಸಿದ ದೇವಾಲಯಗಳ ಮೂಲಕ ಪವಿತ್ರ ವಿಗ್ರಹಗಳ ಆಧಾರಿತ ಆರಾಧನೆಯು ಸಾಮಾಜಿಕ ನಡವಳಿಕೆಯನ್ನು ನಿಯಂತ್ರಿಸುವ ಶಕ್ತಿಯನ್ನು ಮತ್ತಷ್ಟು ಗಟ್ಟಿಗೊಳಿಸಿತು. ದೇವಾಲಯಗಳು ಪುರೋಹಿತಶಾಹಿಯನ್ನು ಬಲಪಡಿಸಿ ಸಾಂಪ್ರದಾಯಿಕತೆ ಮತ್ತು ಮಡಿವಂತಿಕೆಗಳ ಕೇಂದ್ರಗಳಾಗಿ, ಶ್ರೇಣೀಕೃತ ಜಾತಿವ್ಯವಸ್ಥೆಯನ್ನು ರಕ್ಷಿಸಿದವು. ಇಂತಹ ಹಲವು ವೈರುಧ್ಯಗಳ ನಡುವೆಯೂ ಸಾಮಾಜಿಕ ಸ್ವರೂಪದ ಜನಜೀವನದ ಖಚಿತ ಅಭಿವ್ಯಕ್ತಿಗಳಾಗಿದ್ದವು. ಸಂಕೀರ್ಣವಾದ ಸಾಮಾಜಿಕ ಮತ್ತು ಆರ್ಥಿಕ ಸಂಸ್ಥೆಯಾಗಿತ್ತು. ಸಾಮಾಜಿಕ ಉತ್ಸವಗಳು ಜನರು ಒಂದೆಡೆ ಸೇರಲು ಅವಕಾಶವಾಗುತ್ತಿತ್ತು. ವ್ಯಾಪಾರ-ಉದ್ದಿಮೆಗಳ ಬೆಳವಣಿಗೆ,

ಉದ್ಯೋಗ ಸೃಷ್ಟಿ, ಕೃಷಿಯ ನಿಯಂತ್ರಣ, ಹೀಗೆ ಪ್ರಾದೇಶಿಕವಾಗಿ ಆರ್ಥಿಕ ಆಧಾರವಾಗಿ ಪರಿಣಮಿಸಿತ್ತು. ಪರಂಪರೆಯ ಪುನಶ್ಚೇತನ ಹಾಗೂ ಲೌಕಿಕ ಮನರಂಜನೆಯ ಕೇಂದ್ರವಾಗಿ ದೇವಾಲಯಗಳ ಪಾತ್ರ ಮಹತ್ವದ್ದು. ಹೀಗೆ ಜನಜೀವನದ ಪ್ರತಿಯೊಂದು ಮುಖದೊಂದಿಗೆ ದೇವಾಲಯ ನಿಕಟ ಸಂಬಂಧವಿತ್ತು. ಸಮಾಜದ ಜನತೆಯನ್ನು ನಿಯಂತ್ರಿಸುವ ಕೇಂದ್ರವಾಗಿ ಮತ್ತು ಧರ್ಮದ ಸಾಧನದಿಂದ ಸಮಾಜದಲ್ಲಿ ಯಜಮಾನಿಕೆಯನ್ನು ಸ್ಥಾಪಿಸುವ ವೇದಿಕೆಯಾಗಿಯೂ ಕೆಲಸ ಮಾಡಿತು. ಧಾರ್ಮಿಕ ಪ್ರಭುತ್ವದ ಪ್ರತಿನಿಧಿಗಳಾಗಿ ರಾಜಪ್ರಭುತ್ವವನ್ನು ಬೆಂಬಲಿಸುತ್ತಾ ಆರ್ಥಿಕವಾಗಿ ಪ್ರಬಲವಾದಂತೆ ಸಮಾಜದಲ್ಲಿ ಕೇಂದ್ರ ಸ್ಥಾನ ಪಡೆದವು. ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳ ಮೂಲಕ ಜನತೆಯನ್ನು ಅಧೀನದಲ್ಲಿಟ್ಟುಕೊಂಡಿತು.

ಐದನೆಯದಾಗಿ ರಾಮಾನುಜರು ತಮ್ಮ ತಾತ್ವಿಕ ಚಿಂತನೆಗಳ ಸಾಮಾಜಿಕ ಪ್ರಯೋಗಗಳಿಗೆ ದೇವಾಲಯ ನಿರ್ಮಾಣದೊಂದಿಗೆ ಚಾಲನೆ ನೀಡಿದರು. ಶ್ರೇಣೀಕೃತ ಸಮಾಜವನ್ನು ಕುರಿತು ಹಾಗೂ ಅಸ್ಪೃಶ್ಯರ ಬಗೆಗಿನ ಅವರ 'ತಿರುಕ್ಕುಲತ್ತಾರ್' ಕಲ್ಪನೆಗಳು 12ನೇ ಶತಮಾನದಲ್ಲಿ ಗಮನಾರ್ಹವಾದ ಹೆಜ್ಜೆಗಳಾಗಿದ್ದವು. ಪಂಚಮರಿಗೆ ದೇವಾಲಯ ಪ್ರವೇಶಾವಕಾಶ ಹಾಗೂ ದೇವಾಲಯ ನಿರ್ಮಾಣದಲ್ಲಿ ಅವರ ಸಹಾಯ ಪಡೆದಿದ್ದು ಆಚಾರ್ಯರ ದಿಟ್ಟ ನಿಲುವುಗಳೆ. ತಿರುಕ್ಕುಲತ್ತಾರ್ ವರ್ಗವು ಜಾತಿಯಿಂದ ಬಹಿಷ್ಕರಿಸಲ್ಪಟ್ಟ ವರ್ಗಕ್ಕೆ ಸೇರಿದವರಾಗಿದ್ದು ಅವರ ಅಸಹಾಯಕತೆ ಮತ್ತು ಅಸಫಲತೆಗಳನ್ನು ಆಚಾರ್ಯರು ಗುರುತಿಸಿದ್ದರು. ಇಂತಹ ಆಲೋಚನೆಗಳು ಮಾನವನ ಪರಿಶುದ್ಧತೆಗಾಗಿ ಅಗತ್ಯವಾದುವು. ಸಮಾಜ ವಿಮರ್ಶೆ ಮತ್ತು ಸುಧಾರಣೆಗಳ ಕೆಲವು ಒಳ್ಳೆಯ ಅಂಶಗಳು ಅದರಲ್ಲಿ ಅಂತರ್ಗತವಾಗಿದ್ದವು. ಎಲ್ಲಾ ಜಾತಿಯ ಜನರಿಗೂ ದೇವಾಲಯದಲ್ಲಿ ಉದ್ಯೋಗವಕಾಶ ನೀಡುವ ಮೂಲಕ ಪೂರ್ಣ ಸಮುದಾಯವು ದೇವಾಲಯದ ಆಚರಣೆಗಳಲ್ಲಿ ಪಾಲ್ಗೊಳ್ಳುವಂತಾಯಿತು. ಪಂಚಸಂಸ್ಕಾರದ ಮೂಲಕ ನಿರ್ಲಕ್ಷಿತ ವರ್ಗಕ್ಕೆ ದೀಕ್ಷೆ ನೀಡಿದ್ದು, ಶ್ರೀ ವೈಷ್ಣದ ಇತಿಹಾಸದಲ್ಲಿ ಒಂದು ಪ್ರಗತಿಪರ ಬೆಳವಣಿಗೆಯಾಗಿತ್ತು. ಆರ್ಥಿಕ ವಿಷಯದಲ್ಲಿ ರಾಮಾನುಜರ ನಿಲುವು ಸಮಾಜದ ಕ್ರಿಯಾತ್ಮಕ ವ್ಯಕ್ತಿಯ ಅಪಾರವಾದ ಕಾಳಜಿಯಾಗಿದೆ.

ಆಚಾರ್ಯರ ಈ ನಿಲುವುಗಳ ಹಿಂದಿದ್ದ ಧರ್ಮ ಪ್ರಚಾರದ ಉದ್ದೇಶವನ್ನು ಮರೆಯುವಂತಿಲ್ಲ. ಜಾತಿವ್ಯವಸ್ಥೆಯನ್ನು ಪ್ರಶ್ನಿಸಿದರು ಅದು ಧರ್ಮದ ಹಿನ್ನೆಲೆಯಿಂದ ಕೂಡಿತ್ತೇ ವಿನಃ ಶ್ರೇಣೀಕೃತ ಸಮಾಜ ವ್ಯವಸ್ಥೆಯ ಹಿನ್ನೆಲೆಯಿಂದಲ್ಲ. ವೈದಿಕ ಆಚರಣೆಗಳ ವ್ಯಾಪ್ತಿಗೆ ಇತರ ವರ್ಗಗಳನ್ನು ಸೇರಿಸುವ ಪ್ರಯತ್ನವಾಯಿತೇ ವಿನಃ ಮಾನವನನ್ನು ದಾಸ್ಯದಿಂದ ಬಿಡುಗಡೆಗೊಳಿಸಲಿಲ್ಲ. ಇವರ ಧಾರ್ಮಿಕ ಚಿಂತನೆಗಳು ಬ್ರಾಹ್ಮಣ ಅಥವಾ

ಪುರೋಹಿತಶಾಹಿ ವರ್ಗದ ನೆಲೆಯಲ್ಲಿಯೇ ರೂಪುಗೊಂಡವು. ಎಲ್ಲಾ ಜಾತಿಗಳನ್ನು ದೇವಾಲಯದ ಆರಾಧನೆಗೆ ಒಳಪಡಿಸುವ ಚಿಂತನೆಯು ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯಲ್ಲಿ ಬದಲಾವಣೆ ತರಲಿಲ್ಲ. ಆಚಾರ್ಯರ ಈ ಕಲ್ಪನೆಯು ಮಾನವನ ಬದುಕನ್ನು ಮತ್ತಷ್ಟು ಸಂಕೀರ್ಣಗೊಳಿಸಿತು. ಗಮನಾರ್ಹ ಅಂಶವೆಂದರೆ ರಾಮಾನುಜರು ತಮ್ಮ ಚಿಂತನೆಗಳಲ್ಲಿ ಅಂದಿನ ಜಾತಿ ಆಧಾರಿತ ಸಮಾಜವನ್ನು ಪ್ರಶ್ನಿಸುವ ಬದಲು ಧರ್ಮದ ಮೂಲಕ ಸಮಾಜವನ್ನು ನೋಡುವ ಮತ್ತು ಅಲೌಕಿಕ ಪ್ರಪಂಚವೊಂದನ್ನು ನಿರ್ಮಿಸುವ ಕೆಲಸ ಮಾಡಿದರು. ರಾಮಾನುಜರ ಚಿಂತನೆಗಳಿಂದ ಬ್ರಾಹ್ಮಣ ಸಾಂಪ್ರದಾಯಿಕತೆಯು ವಿಚಲಿತಗೊಳ್ಳಲಿಲ್ಲ. ಒಟ್ಟಾರೆಯಾಗಿ ಶ್ರೀ ವೈಷ್ಣವ ಧರ್ಮವು ವಿಷ್ಣುವಿನ ಆರಾಧನೆಯನ್ನು ಪ್ರಚಾರಗೊಳಿಸಿತೇ ವಿನಃ ಧಾರ್ಮಿಕ ಸಾಂಪ್ರದಾಯಿಕತೆಯನ್ನು ಪ್ರಶ್ನಿಸುವ ಇಲ್ಲವೇ ವಿರೋಧಿಸುವ ಕೆಲಸ ಮಾಡಲಿಲ್ಲ.

ಆರನೆಯದಾಗಿ ದೇವಾಲಯಗಳು ಜಾತಿ ಕಟ್ಟಲೆಯ ಉನ್ನತ ನ್ಯಾಯಾಲಯಗಳಾಗಿದ್ದು, ಜಾತಿಯ ಆಧಾರದ ಮೇಲೆ ವಿವಿಧ ಜನವರ್ಗದವರು ಹಕ್ಕನ್ನು ಅನುಭವಿಸಬೇಕಾಗಿತ್ತು. ಸಾಮಾಜಿಕ ಸ್ತರೀಕರಣವನ್ನು ಮತ್ತು ವರ್ಣಧರ್ಮವನ್ನು ರಕ್ಷಿಸಲು ದೇವಾಲಯಗಳು ಕೇಂದ್ರವಾದವು. ಮೇಲುಕೋಟೆ ದೇವಾಲಯ ಸಂಕೀರ್ಣದ ಉಗಮಗೊಂದಿಗೆ ಅಸ್ಥಿತ್ವಕ್ಕೆ ಬಂದ ಅನುತ್ಪಾದಕ ಉದ್ಯೋಗ ವರ್ಗವಾದ ಬ್ರಾಹ್ಮಣರು ಲಭ್ಯ ಸಂಪತ್ತಿನ ಬಹುದೊಡ್ಡ ಪಾಲನ್ನು ಪಡೆಯುತ್ತಿದ್ದರು. ಶ್ರಮರಹಿತ ಅನುಭೋಗದಲ್ಲಿ ತೊಡಗಿ ಸಾಮಾಜಿಕವಾಗಿ ಹೆಚ್ಚಿನ ಸ್ಥಾನಮಾನ ಪಡೆದರು. ಈ ವರ್ಗದ ಸಾಮಾಜಿಕ ಅಸಮಾನತೆಗೆ ಕಾರಣವಾಯಿತು. ಅಧಿಕಾರದ ಮೂಲಗಳನ್ನು ನಿಯಂತ್ರಿಸುತ್ತಾ ಸಮಾಜದಲ್ಲಿ ಪ್ರಬಲವಾಯಿತು. ಸ್ಥಾನಮಾನಗಳಲ್ಲಿ ಹಾಗೂ ವಿವಿಧ ವಸ್ತು, ಸೇವೆಗಳ ವ್ಯತ್ಯಸ್ಥ ಹಂಚಿಕೆಗಳಿಂದ ಅಸಮಾನತೆ ದೇವಾಲಯದಲ್ಲಿ ವ್ಯಕ್ತವಾಗುತ್ತಿತ್ತು. ಇದನ್ನು ಜನರು ಶಾಸನಬದ್ಧವಾದವು ಎಂದು ಒಪ್ಪಿಕೊಂಡಿದ್ದರು. ತಮ್ಮ ದೈವದ ಮಾನವ ಅವತಾರಗಳ ಐತಿಹಾಸಿಕತೆಯನ್ನು ಸಿದ್ಧಪಡಿಸಿ ತೋರಿಸುವ ಈ ವರ್ಗದ ಅಭಿಲಾಷೆ, ಅವರ ಪ್ರಾಬಲ್ಯವನ್ನು ಮತ್ತಷ್ಟು ಬಲಪಡಿಸುವುದಾಗಿತ್ತು. ಆಂತರಿಕವಾಗಿ ವೈವಾಹಿಕಸಂಬಂಧದ ಹಾಗೂ ಸಹಪಂಕ್ತಿಭೋಜನದಂತಹ ನಿರ್ಬಂಧಗಳು ಸಾಮಾಜಿಕ ಸಂಪರ್ಕಕ್ಕೆ ತಡೆಯಾಗಿದ್ದವು.

ಮೇಲುಕೋಟೆ ದೇವಾಲಯಗಳಲ್ಲಿ ಹಲವು ಶೂದ್ರ ಜಾತಿಗಳು ಉದ್ಯೋಗಪಡೆದು ಜೀವನೋಪಾಯ ಕಂಡುಕೊಂಡರು. ಇದು ಮೇಲ್ವರ್ಗವು ಸ್ಥಳೀಯ ಪಂಗಡಗಳೊಂದಿಗೆ ಮಾಡಿಕೊಂಡ ರಾಜಿಯಾಗಿತ್ತು. ಇದು ದೇವಾಲಯಗಳಲ್ಲಿ ವ್ಯಕ್ತವಾಗುತ್ತಿತ್ತು. ದೇವಾಲಯದಲ್ಲಿ ದೈಹಿಕವಾಗಿ ಶ್ರಮದಾಯಕವಾದ ಕೆಲಸಗಳಿಗೆ ಮಾತ್ರ ಕೆಳವರ್ಗಗಳು ನೇಮಕವಾಗಿದ್ದವು.

ಧಾರ್ಮಿಕ ನೆಲೆಯಲ್ಲಿ ಸೇವೆಯ ಮಹತ್ವವನ್ನು ಬಲವಾಗಿ ಪ್ರತಿಪಾದಿಸಲಾಯಿತು. ಆರ್ಥಿಕ ಲಾಭದ ತಾರತಮ್ಯ, ಮಡಿವಂತಿಕೆಗಳ ಆಚರಣೆಗಳು ಒಪ್ಪಿತವಾದ ಮೌಲ್ಯಗಳಾಗಿದ್ದವು. ಪಂಚಮವರ್ಗ ದೇವಾಲಯಗಳ ಉತ್ಸವಗಳಿಂದ ನಿರ್ಲಕ್ಷಿಸಲ್ಪಟ್ಟಿತ್ತು. ಅಸ್ಪೃಶ್ಯರ ಬಗ್ಗೆ ಬ್ರಾಹ್ಮಣೀಯ ನಿಲುವುಗಳು ಸಡಿಲಗೊಳ್ಳಲಿಲ್ಲ. ಈ ಸಮುದಾಯಗಳ ಮೇಲಿನ ಧಾರ್ಮಿಕ ಮತ್ತು ರಾಜಕೀಯ ನಿಯಂತ್ರಣಗಳು ಬಲವಾದವು. ಜಾತಿಗಳು ದೈವದ ಮೇಲಿನ ಸಂಪೂರ್ಣ ಅವಲಂಬನೆಗೆ ಹಾಗೂ ಅದರ ಮೂಲಕವೇ ಬಿಡುಗಡೆ ಪಡೆಯುವ ಪ್ರಕ್ರಿಯೆಗೆ ದೇವಾಲಯಗಳು ಹೆಚ್ಚು ಒತ್ತು ನೀಡಿದವು. ದೇವಾಲಯಗಳು ದೈವಕೇಂದ್ರಿತವಾಗಿದ್ದವೇ ವಿನಃ ಮನುಷ್ಯಕೇಂದ್ರಿತವಾಗಿರಲಿಲ್ಲ. ಈ ಕಾರಣಕ್ಕಾಗಿ 12ನೇ ಶತಮಾನದಲ್ಲಿ ಅಸಮಾನತೆ ಸಾರುವ, ಧಾರ್ಮಿಕ ಪ್ರಭುತ್ವ ಪಡೆದಿದ್ದ ದೇವಾಲಯಗಳನ್ನು ಬಸವಣ್ಣನವರು ತಿರಸ್ಕರಿಸಿದ್ದರು. ಸಿದ್ಧಾಂತಗಳು ಧರ್ಮಗಳಾಗಿ ರೂಪುಗೊಂಡ ಬಳಿಕ ಅವುಗಳ ಆರಂಭಿಕ ಆಶಯಗಳು, ಬೋಧನೆಗಳು ಮೂಲೆಗುಂಪಾಗಿ ಸಾಂಪ್ರದಾಯಿಕತೆಯೇ ಮೊದಲ ಸ್ಥಾನವನ್ನು ಪಡೆಯುವಂತಾಯಿತು.

ಏಳನೇಯದಾಗಿ ಸಾಮಾಜಿಕ ಮತ್ತು ಧಾರ್ಮಿಕ ಜೀವನದ ಹಾದಿಯಲ್ಲಿ ಸ್ತ್ರೀಯರ ಸ್ಥಾನವು ಬೆಳವಣಿಗೆಯಾದುದು, ಮತ್ತೊಂದು ಗುರುತರವಾದ ಶ್ರೀ ವೈಷ್ಣವ ಧರ್ಮದ ಕೊಡುಗೆಯಾಗಿದೆ. ಸ್ತ್ರೀಯರಿಗೆ ದೇವಾಲಯಗಳಲ್ಲಿ ದೊರೆತ ಕೆಲವು ಅವಕಾಶಗಳು ಅಲ್ಪಮಟ್ಟಿಗೆ ಸ್ತ್ರೀಯರ ಸ್ಥಾನವನ್ನು ಸುಧಾರಿಸಿದಂತೆ ಕಂಡರೂ ಬಹುಸಂಖ್ಯಾತ ಸ್ತ್ರೀಯರ ಪಾಲಿಗೆ ದೇವಾಲಯವು ಅವರ ಪಾತ್ರವನ್ನು ನಿರ್ದೇಶಿಸುವಂತಹ ಒಂದು ಸಾಮಾಜಿಕ ನಿಯಂತ್ರಣಾ ಸಂಸ್ಥೆಯಾಗಿ ಕಾರ್ಯನಿರ್ವಹಿಸಿತೇ ಹೊರತು ಮತ್ತಾವ ರೀತಿಯಲ್ಲಿಯೂ ಅವರ ಬದುಕಿನ ಮೇಲೆ ಪರಿಣಾಮ ಬೀರಲಿಲ್ಲ. ಹಾಸು ಹೊಕ್ಕಾಗಿರುವ ಲಿಂಗಪೂರ್ವಾಗ್ರಹಗಳು ಮರೆಯಾಗಲಿಲ್ಲ. ಸ್ತ್ರೀಗೆ ನೀಡಿರುವ ಹಕ್ಕುಗಳು ಕೆಲವು, ಹೇರಿರುವ ನಿರ್ಬಂಧಗಳು ನೂರಾರು. ಗಮನಾರ್ಹ ಅಂಶವೆಂದರೆ ರಾಜ್ಯದ ರಾಜರ ಮತ್ತು ಅಧಿಕಾರಿಗಳು ಮಡದಿಯರನ್ನು ಮಾತ್ರ ಶಾಸನಗಳು ವೈಭವೀಕರಿಸಿವೆ. ಆದರೆ ಕೆಳವರ್ಗಗಳ ಸ್ತ್ರೀಯರ ಕುರಿತು ಶಾಸನಗಳು ಎಲ್ಲಿಯೂ ಮಾಹಿತಿ ನೀಡುವುದಿಲ್ಲ. ಅಂಗಭೋಗ ಮತ್ತು ರಂಗಭೋಗದ ಹೆಸರಿನಲ್ಲಿ ಸ್ತ್ರೀಯರು ಮನರಂಜನೆಯ ಮಾಧ್ಯಮವಾಗಿ ಮತ್ತು ದೈಹಿಕ ಕೆಲಸಗಳಿಗೆ ಮಾತ್ರ ದೇವಾಲಯದಲ್ಲಿ ಸೀಮಿತವಾಗಿದ್ದರು.

ಗಮನಾರ್ಹ ಅಂಶವೆಂದರೆ ಭಕ್ತಿಪಂಥದ ಪ್ರಭಾವದಿಂದ ದೇವದಾಸಿ ಎಂಬ ಅನಿಷ್ಟ ಪದ್ಧತಿಯು ಅಲುಗಾಡಲೇ ಇಲ್ಲ. ಧಾರ್ಮಿಕ ಪ್ರಭುತ್ವವು ಇವರನ್ನು ತಮ್ಮ ಲಾಸ್ಯ ಜೀವನಕ್ಕೆ ಬಳಸಿಕೊಂಡರು. ಲೈಂಗಿಕ ಶೋಷಣೆಯೂ ಸೇರಿದಂತೆ ಪ್ರಭುತ್ವದ ಬಯಕೆಗಳನ್ನು ಇವರು

ಪೂರೈಸುವುದು ಅಪರಾಧವಲ್ಲ, ಅದನ್ನು ಮುಂದುವರೆಸಿಕೊಂಡು ಹೋಗಬೇಕೆಂಬ ಧೋರಣೆ ಇಲ್ಲಿ ಮನೆಮಾಡಿತ್ತು. ದೇವದಾಸಿಯರ ಸಂಗೀತ, ನೃತ್ಯಗಳು ದೇವರ ಪ್ರೀತ್ಯರ್ಥವಾಗಿ ಎಂಬ ವಿವರಣೆಯನ್ನು ಪುರಾಣಗಳು ನೀಡಿವೆ. ಆದರೆ ನಿಜಾರ್ಥದಲ್ಲಿ ಸಂಗೀತ ಮತ್ತು ನೃತ್ಯ ದೇವಾಲಯಗಳಲ್ಲಿ ಮಹಿಳೆಯರ ಶೋಷಣೆಯ ಸಾಧನಗಳಾಗಿದ್ದವು. ದೇವಾಲಯಗಳು ಧರ್ಮದ ಹೆಸರಿನಲ್ಲಿ ಸ್ತ್ರೀಯರನ್ನು ಶೋಷಣೆಗೊಳಪಡಿಸಿದ್ದೇ ಅಲ್ಲದೆ, ಅದನ್ನು ಶಾಸನಬದ್ಧಗೊಳಿಸಿದವು. ಇದು ಸ್ತ್ರೀಯರನ್ನು ಸಮಾಜ ಕಂಡ ಕರಾಳ ಮುಖವಾಗಿದೆ. ದೇವಾಲಯಗಳು ಇವುಗಳ ಕೇಂದ್ರವಾಗಿ, ವಾತಾವರಣವನ್ನು ಕಲುಷಿತಗೊಳಿಸಿದ್ದವು. ಆದರೆ ಮೇಲುಕೋಟೆಯಲ್ಲಿ ಲಕ್ಷ್ಮೀದೇವಿಯನ್ನು ಪ್ರಧಾನವಾಗಿಸುವ, ಶ್ರೀ ಸಂಪ್ರದಾಯವು ಸ್ತ್ರೀಯರಿಗೆ ಕೆಲವು ಧಾರ್ಮಿಕ ಅವಕಾಶಗಳನ್ನು ನೀಡಿ ಅಲ್ಪಮಟ್ಟಿಗೆ ಮನ್ನಣೆಗಳನ್ನು ನೀಡಿತು.

ಎಂಟನೆಯದಾಗಿ ರಾಮಾನುಜರ ವೈಷ್ಣವೀಯ ಒಲವುಗಳ ಪ್ರಭಾವದಿಂದ ದಲಿತರ ಬಗೆಗಿದ್ದ ಬ್ರಾಹ್ಮಣವಾದಿ ಮನೋಭಾವವು ಸಡಿಲಗೊಂಡಿತು ಎಂದು ಹೇಳಲಾಗುತ್ತದೆ. ಆದರೆ ಇಲ್ಲಿ ಹಲವು ಪಂಥಗಳು, ದೇವತೆಗಳು ಮತ್ತು ವಿಚಾರಗಳನ್ನು ಅಳವಡಿಸಿಕೊಂಡಿರುವ ಬಣ್ಣದ ಹಾಸು ಎಂಬುದು ತಿಳಿದು ಬರುತ್ತದೆ. ಸಾಮಾಜಿಕ-ಆರ್ಥಿಕ ವಾಸ್ತವಗಳ ನೆಲೆಯಲ್ಲಿ ಹೊಂದಾಣಿಕೆ, ಸಹಯೋಗ ಮತ್ತು ದೂರೀಕರಣಗಳು ಅನಿವಾರ್ಯವಾಗುತ್ತವೆ. ಈ ರೀತಿಯ ಧಾರ್ಮಿಕ ಒಪ್ಪಂದಗಳ ಹಿಂದೆ ತಮಗಿರುವ ಸಾಮಾಜಿಕ ಮೇಲುಗೈಯನ್ನು ಉಳಿಸಿಕೊಳ್ಳಬೇಕೆನ್ನುವ ಹಂಬಲವು ಕೆಲಸ ಮಾಡಿತ್ತು. ಇದು ದೇವಾಲಯಗಳಲ್ಲಿ ವ್ಯಕ್ತವಾಗುತ್ತಿತ್ತು. ಮೇಲುಕೋಟೆ ನಾರಾಯಣಸ್ವಾಮಿ ದೇವಾಲಯದ ಬಲಿಪೀಠದವರೆಗೆ ದಲಿತರು ಬಂದು ಆರಾಧಿಸಲು ಆಚಾರ್ಯರು ಅನುಮತಿ ನೀಡಿದರು. ಅದು ವರ್ಷದಲ್ಲಿ ಒಂದು ದಿನ ಮಾತ್ರ. ಜೊತೆಗೆ ಕಲ್ಯಾಣಿಯಲ್ಲಿ ಒಂದು ದಿನ ಸ್ನಾನ ಮಾಡುವ ಅವಕಾಶವನ್ನು ನೀಡಿದರು. ದೇವಾಲಯದಲ್ಲಿ ಹಲವು ವಿಶೇಷ ಉತ್ಸವಗಳಲ್ಲಿ ಪಾಲ್ಗೊಳ್ಳುವ ಅವಕಾಶಗಳಿದ್ದವು. ಆಚಾರ್ಯ ರಾಮಾನುಜರು ನೀಡಿದ ಒಂದು ದಿನದ ದೇವಾಲಯ ಪ್ರವೇಶ ಹಾಗೂ ದೇವಾಲಯದಿಂದ ಸಿಕ್ಕ ಅಲ್ಪ ಮನ್ನಣೆಗಳು, ಬ್ರಾಹ್ಮಣೀಯ ಸಾಮಾಜಿಕ ಶ್ರೇಣಿಗೆ ಸೈದ್ಧಾಂತಿಕ ಸಮರ್ಥನೆಗಳಂತಿದ್ದವು. ಇನ್ನಿತರ ಕ್ಷೇತ್ರಗಳಲ್ಲಿ ಸಮಾನತೆಯನ್ನು ನಿರಾಕರಿಸಲ್ಪಟ್ಟಿದ್ದ ದಲಿತರಿಗೆ ಧಾರ್ಮಿಕ ಸಮಾನತೆಯನ್ನು ದೊರಕಿಸಿಕೊಡುವ ಆಶ್ವಾಸನೆ ನೀಡುತ್ತಾ, ಅಸ್ತಿತ್ವದಲ್ಲಿದ್ದ ಸಾಮಾಜಿಕ ವ್ಯವಸ್ಥೆಯೊಡನೆ ಸಂಧಾನ ಮಾಡಿಕೊಳ್ಳಲು ಕೆಳಸ್ತರದವರನ್ನು ದೇವಾಲಯದ ಮೂಲಕ ಪ್ರೇರೇಪಿಸಿತು. ಧಾರ್ಮಿಕ ಅವಕಾಶಗಳು ದಲಿತರ ಸಾಮಾಜಿಕ ಸ್ಥಿತಿಯನ್ನು ಸುಧಾರಿಸಲಿಲ್ಲ. ವರ್ಣವ್ಯವಸ್ಥೆಯ ಮೂಲಭೂತ ಆಶಯಗಳನ್ನು ಸುಭದ್ರಗೊಳಿಸಲು ದೇವಾಲಯಗಳು ಪಾತ್ರವಹಿಸಿದವು.

ಭಾವುಕತೆಗೆ ಒಳಗಾಗದೆ ಮನುಷ್ಯನ ಸ್ವಭಾವವನ್ನು ಅರಿತು ಊಹಿಸುವುದಾದರೆ ದಲಿತರ ಸ್ಥಿತಿಯಲ್ಲಿ ಅಲ್ಪ ಬದಲಾವಣೆಗಳೂ ಆಗಲಿಲ್ಲ. ಆದರೆ ರಾಮಾನುಜರ ಆಲೋಚನೆಯಲ್ಲಿ ಆಧ್ಯಾತ್ಮಿಕವಾಗಿ ಎಲ್ಲರನ್ನು ಸಂಘಟಿಸುವ ಮನೋಪ್ರೌವೃತ್ತಿ ಶ್ಲಾಘನಾರ್ಹ. ಆಚಾರ್ಯರು ದಲಿತರನ್ನು 'ತಿರುಕ್ಕುಲತ್ತಾರ್' ಎಂದು ಸಂಬೋಧಿಸಿ ಅವರ ಘನತೆಯನ್ನು ಸಮಾಜದಲ್ಲಿ ದೇವಾಲಯದ ಮೂಲಕ ಮೇಲೆತ್ತಲು ಶ್ರಮಿಸಿದರು. ಅಸ್ಪೃಶ್ಯರಿಗೆ ಸಮಾನತೆ ತರಲು ವೈಷ್ಣವ ಪಂಥವು ಆರಂಭದಲ್ಲಿ ಮೈಗೂಡಿಸಿಕೊಂಡಿದ್ದರೂ, ಕಾಲಕ್ರಮೇಣ ಆ ಮನೋಭಾವವು ಕಮರಿಹೋಯಿತು. ದಲಿತರಿಗೆ ಸವರ್ಣೀಯರ ಮಧ್ಯೆ ಬದುಕಲು ಅವಕಾಶವನ್ನು ರಾಮಾನುಜರಾಗಲೀ ಇತರ ಭಕ್ತರಾಗಲಿ ಕೊಡುವ ಸ್ಥಿತಿಯಲ್ಲಿರಲಿಲ್ಲ. ಈ ಎಲ್ಲಾ ಮಿತಿಗಳ ಹಿನ್ನೆಲೆಯಲ್ಲಿ ನೋಡಿದಾಗ ದಲಿತರ ವಿಚಾರದಲ್ಲಿ ಹನ್ನೆರಡನೇ ಶತಮಾನದಲ್ಲಿ ದೇವಾಲಯ ಪ್ರವೇಶದ ಅವಕಾಶವೊಂದೇ (ಒಂದು ದಿನ ಮಾತ್ರ) ದಲಿತರ ಸ್ಥಾನಮಾನಗಳಲ್ಲಿ ಬದಲಾವಣೆ ತರಲು ಸಾಧ್ಯವಾಗಲಿಲ್ಲ. ಅಸ್ಪೃಶ್ಯತೆಯ ನಿವಾರಣೆ ಆಧುನಿಕಯುಗದಲ್ಲಿಯೂ ಅಸಾಧ್ಯವಾಗಿರುವಾಗ, ಎಂಟುನೂರು ವರ್ಷಗಳ ಹಿಂದೆ ಕೆಲವು ವ್ಯಕ್ತಿಗಳ ಸ್ವಲ್ಪ ಕಾಲದ ಒಂದು ಸೀಮಿತ ಪ್ರದೇಶದ ಪ್ರಯತ್ನಗಳಿಂದ ಅದು ಸಾದ್ಯವಾಯಿತೆಂಬುದನ್ನು ಊಹಿಸಲೂ ಸಾಧ್ಯವಿಲ್ಲ.

ಒಂಭತ್ತನೆಯದಾಗಿ ಮೇಲುಕೋಟೆ ದೇವಾಲಯ ಸಂಕೀರ್ಣವು ಆರ್ಥಿಕ ಜೀವನದ ರಚನೆಯಲ್ಲಿ ತೀವ್ರ ಬದಲಾವಣೆಯನ್ನುಂಟು ಮಾಡಿತು. ಹೆಚ್ಚಿನ ಸಂಖ್ಯೆಯ ಜನಕ್ಕೆ ಉದ್ಯೋಗ ಒದಗಿಸಿ, ಹತ್ತಿರ ಮತ್ತು ದೂರದಿಂದ ಬಂದ ಭಕ್ತಾಧಿಗಳಿಗೆ ಸೌಲಭ್ಯಗಳನ್ನು ಒದಗಿಸುತ್ತಿತ್ತು. ವಾಣಿಜ್ಯ ಮತ್ತು ಕೈಗಾರಿಕೆಗಳ ಬೆಳವಣಿಗೆಗೆ ಪುಷ್ಟಿ ನೀಡಿತ್ತು. ಹಬ್ಬ ಮತ್ತು ಉತ್ಸವಗಳ ನಡೆಸುವಿಕೆಯಿಂದ ವಾಣಿಜ್ಯ ಮತ್ತು ವ್ಯಾಪಾರಗಳಿಗೆ ದೇವಾಲಯದ ಸುತ್ತ ಅವಕಾಶ ಕಲ್ಪಿಸಿತ್ತು. ಇದರಿಂದಾಗಿ ಮೇಲುಕೋಟೆಯು "ದೇವಾಲಯ ನಗರೀಕರಣದ" ಅಂಶಗಳನ್ನು ಹೊಂದಲಾರಂಭಿಸಿತ್ತು. ಆರ್ಥಿಕ ಸಂಪನ್ಮೂಲಗಳನ್ನು ಸಂಗ್ರಹಿಸುವಲ್ಲಿ ಮತ್ತು ವಿತರಿಸುವಲ್ಲಿ ಧಾರ್ಮಿಕ ಸಿದ್ಧಾಂತಗಳು ಅತ್ಯಂತ ಪ್ರಮುಖಪಾತ್ರ ವಹಿಸಿದ್ದವು. ಅತಿಸೂಕ್ಷ್ಮ ವಿಷ್ಣುವಿನ ಪೂಜಾ ವಿಧಿ-ವಿಧಾನಗಳು, ಭೂದಾನಗಳು ದೇವಾಲಯಗಳನ್ನು ಆದಾಯ ಆಧಾರಿತ ಸಂಸ್ಥೆಯಾಗುವಂತೆ ಮಾಡಿದವು.

ಸ್ಥಳದ ಸುತ್ತಲಿನ ಕೃಷಿವ್ಯವಸ್ಥೆಯು ಬಹಳ ಪ್ರಾಮುಖ್ಯತೆಯನ್ನು ಹೊಂದಿತು. ಇದು ಎರಡು ರೀತಿಯ ಆರ್ಥಿಕ ವರ್ಗಗಳನ್ನು ಹೊಂದಿತ್ತು.

1. ಭೂ ಸ್ವಾಧೀನತೆಯನ್ನು ಹೊಂದಿದ್ದ ಬ್ರಾಹ್ಮಣ ಮಹಾಜನ ಭೂ ಮಾಲೀಕರು.

2. ದೇವಾಲಯದ ಭೂಮಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಗೇಣಿದಾರ ವರ್ಗ.

ಆದ್ದರಿಂದ ಕೃಷಿ ವ್ಯವಸ್ಥೆಯಲ್ಲೇ ಒಂದು ಏಣಿ ಶ್ರೇಣಿಯು ಅಸ್ತಿತ್ವದಲ್ಲಿತ್ತು. ಕೃಷಿ ವಿಸ್ತರಣೆ ಮತ್ತು ಸಂಪನ್ಮೂಲಗಳ ಚಲನಾತ್ಮಕತೆ ಹಾಗೂ ಹಂಚಿಕೆಗೆ ಹೆಚ್ಚಿನ ಪ್ರೋತ್ಸಾಹವು ದೊರೆಯಿತು. ಈ ಪ್ರದೇಶದ ಬಹುಪಾಲು ಭೂಮಿಯು ಸಾಗುವಳಿಗೆ ಮಳೆಯನ್ನು ಆಶ್ರಯಿಸಿತ್ತು. ಜಮೀನನ್ನು ನೀರಾವರಿಗೆ ಒಳಪಡಿಸಲು ಕೆರೆಗಳನ್ನು ಆಶ್ರಯಿಸಲಾಯಿತು. ಕೆರೆಗಳನ್ನು ದುರಸ್ತಿಗೊಳಿಸುವ ಮೂಲಕ ನೀರಾವರಿ ಜಮೀನನ್ನು ವಿಸ್ತರಿಸಲಾಯಿತು. ದೇವಾಲಯ ಸಮುಚ್ಛಯವು ಅನೇಕ ಕೃಷಿಯೇತರ ಉತ್ಪನ್ನಗಳನ್ನು ಹಾಗೂ ಸಾಂಬಾರ ಪದಾರ್ಥಗಳನ್ನು ಉಪಯೋಗಿಸುತ್ತಿದ್ದರಿಂದ ಅದು ತನ್ನ ವಾಸನೆಲೆಯ ಸುತ್ತಲಿನ ಮಾರುಕಟ್ಟೆಗಳೊಂದಿಗೆ ಸಂಪರ್ಕ ಹೊಂದಿತ್ತು. ಈ ಅಂಶವು ಮೇಲುಕೋಟೆಗೆ ಒಂದು ಪಟ್ಟಣದ ವೈಶಿಷ್ಟತೆಯನ್ನು ನೀಡಿತು. ದೇವಾಲಯಗಳು ಸೃಷ್ಟಿಸಿದ ಕೃಷಿಯೇತರ ಉತ್ಪನ್ನಗಳ ಬೇಡಿಕೆಯಿಂದ ಕೃಷಿಯಂತೆಯೇ ಸಣ್ಣ ಕೈಗಾರಿಕೆಗಳು ಪ್ರಾಮುಖ್ಯತೆ ಪಡೆಯುವಂತಾಯಿತು. ಮೇಲುಕೋಟೆಯಲ್ಲಿ ಹಣದ ಆರ್ಥಿಕತೆಯು ಗಣನೀಯ ಪ್ರಭಾವವನ್ನು ಹೊಂದಿತ್ತು. ಏಕೆಂದರೆ ದೇವಾಲಯಗಳು ಹಾಗೂ ಬ್ರಾಹ್ಮಣ ಭೂ ಮಾಲೀಕರ ಎಲ್ಲಾ ಬಗೆಯಾದ ವ್ಯವಹಾರಗಳ ವೆಚ್ಚಗಳೆಲ್ಲವನ್ನು ಗದ್ಯಾಣ, ವರಹವೆಂಬ ನಾಣ್ಯಗಳ ಮೂಲಕ ಎಣಿಸಲಾಗುತ್ತಿತ್ತು. ಹಣದ ಚಲಾವಣೆಯು ಬಹುಶಃ ಆರ್ಥಿಕ ಜೀವನದ ಊಳಿಗಮಾನ್ಯ ರಚನೆಯ ಕಠಿಣತೆಯನ್ನು ದೂರಮಾಡಿತು. ಹೀಗೆ ಮೇಲುಕೋಟೆ ದೇವಾಲಯಗಳು ಆರ್ಥಿಕ ಜೀವನದ ಕೇಂದ್ರಗಳಾಗಿ ಕಾರ್ಯನಿರ್ವಹಿಸುವ ಮೂಲಕ ಕೃಷಿ ಹಾಗೂ ಕೃಷಿಯೇತರ ವೈಶಿಷ್ಟ್ಯತೆಗಳನ್ನು ಸಂಯೋಜಿಸಿತ್ತು.

ಅಂತಿಮವಾಗಿ ಮೇಲುಕೋಟೆ ದೇವಾಲಯ ಸಂಕೀರ್ಣಕ್ಕೆ ಸಂಬಂಧಿಸಿದಂತೆ, ಲಿಖಿತ ಆಕರಗಳು, ಶಾಸನಗಳು ಮತ್ತು ಸ್ಮಾರಕಗಳಲ್ಲಿ ಕಂಡುಬರುವ ರಾಜಕೀಯೇತರ ವಿವರಗಳನ್ನು ಪ್ರಮುಖವಾಗಿ ಆಧಾರವನ್ನಾಗಿಟ್ಟುಕೊಂಡು ಈ ಅಧ್ಯಯನ ನಡೆಸಲಾಗಿದೆ. ಚರಿತ್ರೆಯನ್ನು ಜನರ ಚರಿತ್ರೆಯನ್ನಾಗಿ ನೋಡುವ ವಿಧಾನವನ್ನು ಈ ಅಧ್ಯಯನದಲ್ಲಿ ಅಳವಡಿಸಿಕೊಳ್ಳಲಾಗಿದೆ. ಚರಿತ್ರೆ ಅಧ್ಯಯನವನ್ನು ಎಂದಿಗೂ ಸಂಪೂರ್ಣವಾಯಿತು ಎಂದು ಹೇಳಲು ಸಾಧ್ಯವಿಲ್ಲ. ಪ್ರಸ್ತುತ ಅಧ್ಯಯವನ್ನು ಸ್ವಲ್ಪಮಟ್ಟಿಗೆ ಭಿನ್ನವಾದ ಅಧ್ಯಯನ ಎಂದಷ್ಟೇ ಹೇಳಬಹುದು. ಈ ಪ್ರಬಂಧದ ಪ್ರತಿಯೊಂದು ಅಧ್ಯಾಯನದಲ್ಲಿ ಚರಿತ್ರೆಯ ಸೂಕ್ಷ್ಮಗಳನ್ನು ಅರ್ಥೈಸಿಕೊಳ್ಳುವ ಮೂಲಕ ಚರಿತ್ರೆಯನ್ನು ವಿಭಿನ್ನ ದೃಷ್ಟಿಕೋನದಿಂದ ನೋಡಲು ಪ್ರಯತ್ನಿಸಲಾಗಿದೆ. ರಾಜಪ್ರಭುತ್ವ ಮತ್ತು ಧಾರ್ಮಿಕ ಪ್ರಭುತ್ವಗಳು ಸಮಾಜವನ್ನು ಅಧೀನದಲ್ಲಿಟ್ಟುಕೊಳ್ಳಲು ಹೇಗೆ ದೇವಾಲಯಗಳನ್ನು ಬಳಸಿಕೊಂಡರು ಹಾಗೂ ಅಂಥ

ಸಂದರ್ಭದಲ್ಲಿಯೂ ಆದ ಕೆಲವು ಸಾಮಾಜಿಕ ಬದಲಾವಣೆಗಳು ಹಾಗೂ ಬದಲಾಗದೇ ಉಳಿದ ಅಂಶಗಳು ಹೇಗೆ ಸಂಕೀರ್ಣತೆಯ ಮುಂದುವರಿಕೆಗೆ ಕಾರಣವಾಯಿತು ಎನ್ನುವ ವಿಚಾರಗಳಿಗೆ ಈ ಅಧ್ಯಯನದಲ್ಲಿ ಹೆಚ್ಚಿನ ಒತ್ತು ನೀಡಲಾಗಿದೆ. ಚರಿತ್ರೆಯನ್ನು ಜನರ ಚರಿತ್ರೆಯಾಗಿ ವಿಶ್ಲೇಷಿಸುವ ಮೂಲಕ ಚರಿತ್ರೆಯ ಏಕಪಕ್ಷೀಯ ಧೋರಣೆ ಹಾಗೂ ಅವುಗಳ ಹಿಂದಿರುವ ಚಾರಿತ್ರಿಕ ಮತ್ತು ಸಾಂಸ್ಕೃತಿಕ ರಾಜಕೀಯವನ್ನು ಹಲವು ನೆಲೆಗಳಲ್ಲಿ ವಿಶ್ಲೇಷಿಸಿ ಅರ್ಥೈಸಿಕೊಳ್ಳಲು ಈ ಅಧ್ಯಯನ ಸಹಕಾರಿಯಾಗಿದೆ.

ಗ್ರಂಥಸೂಚಿ

ಎ. ಪ್ರಾಥಮಿಕ ಆಕರಗಳು

1. ಎಪಿಗ್ರಾಫಿಯ ಕರ್ನಾಟಕ, ಸಂಪುಟ, 5–1976; ಸಂಪುಟ. 6–1977; ಸಂಪುಟ, 7–1979, (ಪರಿಷ್ಕೃತ ಆವೃತ್ತಿಗಳು)
2. ಎಪಿಗ್ರಾಫಿಯ ಇಂಡಿಕಾ, ಸಂಪುಟ–VIII
3. ಮೈಸೂರು ಆರ್ಕಿಯಾಲಜಿಕಲ್ ರಿಪೋರ್ಟ್ಸ್ (1908–1945)
4. ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್
5. ಕನ್ನಡ ಶಾಸನ ಸಂಗ್ರಹ., ಅಣ್ಣಿಗೇರಿ, ಎಂ.ಎಂ., ಶೇಷಶಾಸ್ತ್ರಿ.ಆರ್, ಬೆಂಗಳೂರು, 1975
6. ಭಾರತೀಯ ಇತಿಹಾಸದ ಶಾಸನ ಆಕರಗಳು, ಶ್ರೀನಿವಾಸ ಪಾಡಿಗಾರ, ಧಾರವಾಡ, 2007.
7. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–3
8. ಶಾಸನ ಸಾಹಿತ್ಯ ಸಂಚಯ., ಅಣ್ಣಿಗೇರಿ.ಎ.ಎಂ., ಧಾರವಾಡ, 1961
9. ಆನ್ಯುಯಲ್ ರಿಪೋರ್ಟ್ಸ್ ಆಫ್ ದಿ ಸೌತ್ ಇಂಡಿಯನ್ ಎಪಿಗ್ರಾಫಿ (1887–1945)
10. ಶಾಸನಶಾಸ್ತ್ರ, ವಸಂತಶೆಟ್ಟಿ, ಬ್ರಹ್ಮಾವರ.
1 ಗುರುಪರಂಪರ ಪ್ರಭಾವಂ, ಕೃಷ್ಣಮಾಚಾರಿ.ಎಸ್. 1927
2. ಚಿಕ್ಕದೇವರಾಯ ವಂಶಾವಳಿ, ತಿರುಮಲಾರ್ಯ, ಕ.ಸಾ.ಪ, ಬೆಂಗಳೂರು, 1999
3. ಚಿಕ್ಕದೇವರಾಜ ಭಿನ್ನಪಂ, ತಿರುನಾರಾಯಣ ಅಯ್ಯಂಗಾರ್.ಆರ್.ಮೈಸೂರು, 1949
4. ಪ್ರಪನ್ನಾಮೃತಂ, ಕಾಮರಾಜ ಕೃಷ್ಣದಾಸ, ಬಾಂಬೆ, 1934
5. ಪದ್ಮಸಂಹಿತ, ಯತಿರಾಜಮಠ, ಮೇಲುಕೋಟೆ, 1927
6. ಯಾದವಗಿರಿ ಮಹಾತ್ಮೆ, ತಿಮ್ಮಕವಿ
7. ಯದುಗಿರಿ ಮತ್ತು ಯಾದವಗಿರಿ ಮಹಾತ್ಮ್ಯ, ಅಪ್ರಕಟಿತ ಓಲೆಗರಿ, ಕ.ಅ.ಸಂ, ಮೈಸೂರು.
8. ವರನಂದಿ ಕಲ್ಯಾಣ, ಅಪ್ರಕಟಿತ ಓಲೆಗರಿ, ಕ.ಅ.ಸಂ, ಮೈಸೂರು.
9. ಎಂಬೆರುಮಾನರ್ ನಿಯಮನಪ್ಪಡಿ, (ತಮಿಳುಭಾಷೆ–ತೆಲಗುಲಿಪಿ), ಮದ್ರಾಸ್, 1895
12. ಉದಯವಾರ್ ನಿಯಮನಪ್ಪಡಿ, ಯತಿರಾಜಮಠದ ಕಾಪಿ
13. Koil-olugu, published by V.N. Hari Rao, 1961
14. ಯಾದವಗಿರಿ ಮಹಾತ್ಮ್ಯೆ, ಶ್ರೀನಿವಾಸಯ್ಯಂಗಾರ್ಯ
15. ಜೀರ್ಣೋದ್ಧಾರಾದಿ, ಯತಿರಾಜಮಠದಲ್ಲಿರುವ ಪುರಾತನ ಓಲೆ ಪುಸ್ತಕದ ಕಾಪಿ.

17. ನಾರದೀಯ ಪುರಾಣಾಂತರ್ಗತ ಯಾದವಗಿರಿ ಮಹತ್ಮ್ಯ, ಸಂಸ್ಕೃತ ಸಂಶೋಧನಾ ಸಂಸ್ಥೆ, ಮೇಲುಕೋಟೆ, 1936

ಬಿ. ಕನ್ನಡ ಆಧಾರ ಗ್ರಂಥಗಳು

1. ಅನಂತರಾಮು.ಕೆ., ಸಕ್ಕರೆ ಸೀಮೆ, ಅನಂತ ಪ್ರಕಾಶನ, ಮೈಸೂರು, 1972
2. ಅಸೂರಿ ಸಂಪತ್ಕುಮಾರಾಚಾರ್ಯರು ಮತ್ತು ಅಸೂರಿ ಶ್ರೀನಿವಾಸಯ್ಯಂಗಾರ್ಯರು., ಯಾದವಗಿರಿ ಜೀರ್ಣೋದ್ಧಾರ, ಮೇಲುಕೋಟೆ, 1956
3. ಅರೆಯರ್., ಮಧುರ ಕವಿ ಮಾರ್ಧುರ್ಯ, ಮೇಲುಕೋಟೆ, 2005
4. ಕಪಟರಾಳ ಕೃಷ್ಣರಾಯ., ಕರ್ನಾಟಕ ಲಾಕುಳ ಶೈವರ ಇತಿಹಾಸ, ಧಾರವಾಡ 1955
5. ಕಲಬುರ್ಗಿ.ಎಂ.ಎಂ., ಉತ್ತರ ಕರ್ನಾಟಕದ ಜನಪದ ಪದ್ಯ ಸಾಹಿತ್ಯ, ಸಮಾಜ ಪುಸ್ತಕಾಲಯ, ಧಾರವಾಡ, 1978
6. ಕೃಷ್ಣಮಾಚಾರಿ.ಎಸ್., ಗುರುಪರಂಪರ ಪ್ರಭಾವಂ, 1927
7. ಗುಂಡಪ್ಪ.ಡಿ.ವಿ., ಸಂಸ್ಕೃತಿ, ಮೈಸೂರು, 1956
8. ಗೋಪಾಲ್.ಬಾ.ರಾ., ಕರ್ನಾಟಕದಲ್ಲಿ ಶ್ರೀ ರಾಮಾನುಜಾಚಾರ್ಯರು, ಪ್ರಸಾರಾಂಗ ಮೈಸೂರು, 1984
9. ಗೋಪಾಲ್.ಬಾ.ರಾ., ಕರ್ನಾಟಕದಲ್ಲಿ ನವ ಶಿಲಾಯುಗ, ಧಾರವಾಡ, 1971
10. ಗೋಪಾಲ್.ಬಾ.ರಾ., ಪ್ರಬುದ್ಧ ಕರ್ನಾಟಕ, ಅನಂತಶಾಯಿ ಪ್ರತಿಮೆ, ಸಂಪುಟ–38
11. ಗೋಪಾಲ್.ಆರ್., ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 2008
12. ಗೋಪಾಲ್.ಎಚ್.ಎಸ್., ಕಲ್ಯಾಣಿ ಚಾಲುಕ್ಯ ದೇವಾಲಯಗಳು–ಒಂದು ಸಾಂಸ್ಕೃತಿಕ ಅಧ್ಯಯನ, ಪ್ರಾಚ್ಯವಸ್ತು ಸಂಗ್ರಹಾಲಯ, ಮೈಸೂರು, 1993
13. ಗುರುಪ್ರಸಾದ್.ಸಿ.ಟಿ., ಏಳು ಊರಿನ ದೇವತೆಗಳು–ಒಂದು ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2005
14. ಗೋವಿಂದರಾಜಯ್ಯಂಗಾರ್ಯರು ಎಸ್.ಜಿ., ಜೀರ್ಣೋದ್ಧಾರಾದಿ, ಮೇಲುಕೋಟೆ, 1909
15. ಗರುಡಾಚಾರ್.ಸಿ.ವಿ.,, ತಿರುನಾರಾಯಣಪುರ ಮತ್ತು ವೈರಮುಡಿಯ ಮಹತ್ವ, ಬೆಂಗಳೂರು. 1999
16. ಚಿದಾನಂದಮೂರ್ತಿ.ಎಂ., ಮದ್ಯಕಾಲೀನ ಕರ್ನಾಟಕ ಮತ್ತು ಅಸ್ಪೃಶ್ಯತೆ, ಬೆಂಗಳೂರು, 2011
17. ಚಿದಾನಂದಮೂರ್ತಿ.ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಬೆಂಗಳೂರು, 2002
18. ಚಂದ್ರಶೇಖರ್.ಟಿ.ಆರ್., ದಲಿತ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2005

19. ಚನ್ನಬಸಪ್ಪ.ಕೋ., ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ ಮತ್ತು ಸಾಮಾಜಿಕ ನಿಷ್ಠೆ, ಬೆಂಗಳೂರು, 2004

20. ಚಿನ್ನಸ್ವಾಮಿ ಸೋಸಲೆ.ಎನ್., ಸಾಮ್ರಾಜ್ಯ ಮತ್ತು ಸಂಸ್ಥಾನ. ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004

21. ಚಿನ್ನಸ್ವಾಮಿ ಸೋಸಲೆ.ಎನ್., ಭಾರತೀಯ ಸಮಾಜ ಮತ್ತು ದಲಿತರು, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2008

22. ಚಿನ್ನಸ್ವಾಮಿ ಸೋಸಲೆ.ಎನ್., ದಲಿತರು ಮತ್ತು ಮತಾಂತರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2009

23. ಜಯರಾಮು ವೆಂಕಟಾಚಾರ್ಯ, ವಿಶಿಷ್ಟಾದ್ವೈತ ದೀಪಿಕ, 1933

24. ಜವರೇಗೌಡ, ದೇ. (ಸಂ.), ಸುವರ್ಣ ಮಂಡ್ಯ, ಮೈಸೂರು, 2006

25. ಜವರೇಗೌಡ. ದೇ. (ಸಂ.), ಯದುಗಿರಿ, ಪು.ತಿ.ನ ಅಭಿನಂದನಾ ಗ್ರಂಥ, 1918

26. ಜವರೇಗೌಡ. ದೇ. (ಸಂ.), ಸಿರಿಯೊಡಲು, 63ನೇ ಕನ್ನಡ ಸಾಹಿತ್ಯ ಸಮ್ಮೇಳನ, ಮಂಡ್ಯ.

27. ಜೋಷಿ.ಶಂ.ಭಾ., ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ, ಧಾರವಾಡ, 1966

28. ತಿಪ್ಪೇರುದ್ರಸ್ವಾಮಿ.ಹೆಚ್., ಕರ್ನಾಟಕ ಸಂಸ್ಕೃತಿಯ ಸಮೀಕ್ಷೆ, ಮೈಸೂರು, 1968

29. ತಿಪ್ಪೇರುದ್ರಸ್ವಾಮಿ.ಹೆಚ್., ವಚನ ಸಾಹಿತ್ಯ: ವೈಚಾರಿಕ ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 2004

30. ತೈಲೂರು ವೆಂಕಟಕೃಷ್ಣ., ಮಂಡ್ಯ ಜಿಲ್ಲೆಯ ಸಾಂಸ್ಕೃತಿಕ ಪರಂಪರೆ, ಮಂಡ್ಯ, 2005

31. ತೈಲೂರು ವೆಂಕಟಕೃಷ್ಣ, ಮಂಡ್ಯ ಜಿಲ್ಲೆಯ ದೇವಾಲಯಗಳು–ಒಂದು ಸಮೀಕ್ಷೆ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 2010

32. ತೈಲೂರು ವೆಂಕಟಕೃಷ್ಣ., ಮಂಡ್ಯ ಜಿಲ್ಲೆಯ ಸ್ಥಳನಾಮಗಳ ಅವಲೋಕನ, ಮಂಡ್ಯ, 2008

33. ನಾಗರಾಜು.ಹೆಚ್.ಎಂ., ಯದುಗಿರಿಯ ನಾಡು, ಮೈಸೂರು, 2006

34. ನಾಗರಾಜ ಅಯ್ಯಂಗಾರ್, ಮೇಲುಕೋಟೆ ಪರಿಚಯ, ಸ್ಥಾನಿಕಂ ಪ್ರಕಾಶನ, 1975

35. ನಾಗರಾಜು.ಎಸ್., ಕರ್ನಾಟಕದ ಧಾರ್ಮಿಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಜನಜೀವನ, ಕನ್ನಡ ಸಾಹಿತ್ಯ ಚರಿತ್ರೆ, ಮೈಸೂರು.

36. ನಾಗರಾಜ್.ಎಮ್.ಜಿ. ಮತ್ತು ಕೃಷ್ಣಮೂರ್ತಿ., ಹೊಯ್ಸಳರ ಕಾಲದಲ್ಲಿ ನಗರೀಕರಣ ಪ್ರಕ್ರಿಯೆ:ಕಳಿಕಟ್ಟೆ ಒಂದು ವಿಶ್ಲೇಷಣೆ, ಇತಿಹಾಸದರ್ಶನ, ಸಂಪುಟ–1998

37. ನಾಗಲೋಟಿಮಠ, ಎಸ್.ಜೆ., ಉತ್ತರ ಕರ್ನಾಟಕದಲ್ಲಿ ಪ್ರಾಣಿಬಲಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2001

38. ನಾಗೇಗೌಡ.ಹೆಚ್.ಎಲ್., ಪ್ರವಾಸಿ ಕಂಡ ಇಂಡಿಯಾ (ಸಂಪುಟ–8), ಮೈಸೂರು, 1998

39. ನಂಜುಂಡಪ್ಪ.ವೈ.ಡಿ., ಪುರಾಣ ದೇವತೆಗಳ ಪರಾಮರ್ಶೆ ಮತ್ತು ದೇವರು, ಅರಸೀಕೆರೆ, 2005
40. ನರಸಿಂಹಮೂರ್ತಿ.ಹೆಚ್.ವಿ., ನಮ್ಮ ದೇವಾಲಯಗಳು, ವಿಕಾಸ ಪ್ರಕಾಶನ, 2009
41. ನಾವಡ.ಎ.ವಿ., ಜಾನಪದ ಸಂಪ್ರದಾಯ, ಬೆಂಗಳೂರು, 1997
42. ಪಂಚಮುಖಿ.ಆರ್.ಆರ್., ಕರ್ನಾಟಕದ ಶಿಲಾ ಶಾಸನಗಳು, ಧಾರವಾಡ, 1953
43. ಪುಟ್ಟಸ್ವಾಮಿ.ಎಚ್., ವೈಷ್ಣವ ಧರ್ಮ ಸಂಗ್ರಹ, 1986
44. ಪುಟ್ಟಪ್ಪ.ಕೆ.ವಿ. (ಸಂ.), ಯುಗಯಾತ್ರೀ ಭಾರತೀಯ ಸಂಸ್ಕೃತಿ, ಪ್ರಸಾರಾಂಗ, ಮೈಸೂರು, 1971
45. ಪ್ರಭಾಕರ್.ಎಮ್.ಎನ್., ದೇವಾಲಯ ವಾಸ್ತು ಚಂದ್ರಿಕೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000
46. ಪುರಾಣ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. 1990
47. ಭಗವತ್ ಶರಣ ಉಪಾಧ್ಯಾಯ., ಭಾರತೀಯ ಬಹುಮುಖೀ ಸಂಸ್ಕೃತಿ, ಬೆಂಗಳೂರು, 2005
48. ಭಗವತ್ ಶರಣ ಉಪಾಧ್ಯಾಯ., ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ, ಮೈಸೂರು, 1986
49. ಭಟ್.ಜಿ.ಎನ್., ದೇವಾಲಯ ಮತ್ತು ಅದರ ಸಂಸ್ಕೃತಿ, ಮಂಗಳೂರು, 2003
50. ಬ್ರಹ್ಮಪ್ಪ.ಜಿ., ಜೈನ ಮಹಾಪುರಾಣ ಮತ್ತು ವೈದಿಕ ಪುರಾಣಗಳ ತೌಲನಿಕ ಅಧ್ಯಯನ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 2004
51. ಭಾಷ್ಯಂಸ್ವಾಮಿ. (ಸಂ.), ಪ್ರಪನ್ನಾಮೃತ, ಸಂಸ್ಕೃತ ಸಂಶೋಧನಾ ಸಂಸತ್, ಮೇಲುಕೋಟೆ, 2008
52. ಬಸವರಾಜ ಸಬರದ., ಸಮುದಾಯ ಮತ್ತು ಸಂಸ್ಕೃತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2002
53. ಬಸವರಾಜ ಸಬರದ, ಜನಪದ ದೈವಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2009
54. ಮಿರ್ಜಿ ಅಣ್ಣಾರಾಯ, ಜೈನಧರ್ಮ, ಬೆಳಗಾಂ, 1997
55. ಮೂರ್ತಿರಾವ್.ಎ.ಎನ್., ದೇವರು, ಮೈಸೂರು, 1991
56. ಮಾಯಿಗೌಡ.ಕೆ., ಅಂಬೇಡ್ಕರ್ ದೃಷ್ಟಿಯಲ್ಲಿ ಮನು, ಮಂಡ್ಯ, 2006
57. ಮಹದೇವ.ಸಿ. (ಸಂ.), ತೊಣ್ಣೂರು, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2009
58. ಮಹದೇವಸ್ವಾಮಿ.ಕೆ.ಎಂ., ಹೊಯ್ಸಳ ಕಾಲದ ಮುಖ್ಯನಗರ ಕೇಂದ್ರಗಳು ಮತ್ತು ನಗರೀಕರಣ, ಮೈಸೂರು, 2008
59. ಮೋಹನಕೃಷ್ಣ.ರೈ.ಕೆ., ಪ್ರಭುತ್ವ ಮತ್ತು ಜನತೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004

60. ಮೊಗಳ್ಳಿಗಣೇಶ್., ಅವ್ಯಕ್ತ ಚರಿತ್ರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2009
61. ಮೋಹನಕೃಷ್ಣ.ರೈ.ಕೆ., ದಕ್ಷಿಣ ಭಾರತದ ಚರಿತ್ರೆ–ಆಯ್ದ ವಿಷಯಗಳು (ಮಾರ್ಗದರ್ಶಿ ಅಭ್ಯಾಸ ಪಾಠಗಳು), ಕನ್ನಡ ವಿಶ್ವವಿದ್ಯಾಲಯ, ಹಂಪಿ
62. ಮಳಲಿ ವಸಂತಕುಮಾರ್, (ಸಂ.), ಅಖಿಲ ಭಾರತ 65ನೇ ಕನ್ನಡ ಸಾಹಿತ್ಯ ಸಮ್ಮೇಳನ, ಸ್ಮರಣ ಸಂಚಿಕೆ, 1996
63. ಯಳನಾಡು ಅಂಜನಪ್ಪ., ಧರ್ಮ ಮತ್ತು ಮುಕ್ತ ವಿಚಾರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2008
64. ರಾಜಾರಾಮಹೆಗಡೆ (ಸಂ.), ಭಾರತೀಯ ಇತಿಹಾಸ, ಸಮಾಜ ಮತ್ತು ಸಂಸ್ಕೃತಿ, (ಕಲ್ಪಿತ ಧಾರ್ಮಿಕ ಸಮುದಾಯಗಳು–ರೋಮಿಲಾ ಥಾಪರ್) ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, 2004
65. ರಾಮಚಂದ್ರರಾವ್.ಎಸ್., ಕನ್ನಡ ನಾಡಿನ ಧಾರ್ಮಿಕ ಪರಂಪರೆ, ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
66. ರಾಮಚಂದ್ರರಾವ್.ಎಸ್.ಕೆ., ಭಾರತದ ದೇವಾಲಯ ನೆಲೆ–ಹಿನ್ನೆಲೆ, ಬೆಂಗಳೂರು, 1980
67. ರಾಮಯ್ಯ.ಬಿ., ಮೇಲುಕೋಟೆ ನಾರಾಯಣಸ್ವಾಮಿ ದೇವಸ್ಥಾನದ ಕೈಪಿಡಿ, ಮೈಸೂರು, 1937
68. ರಾಮಕೃಷ್ಣ.ಜಿ., ವೈಜ್ಞಾನಿಕ ಮನೋಧರ್ಮ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2005
69. ರಾಮಾನುಜಯ್ಯಂಗಾರ್ಯ., ಶ್ರೀ ಯಾದವಗಿರಿ ತಿರುನಾರಾಯಣಪುರದ ಯಾತ್ರೆಯು, ಅರಸೀಕೆರೆ, 1934
70. ರಹಮತ್ ತರೀಕೆರೆ., ಕನ್ನಡ ಸಂಶೋಧನೆ ತಾತ್ವಿಕ ವಿಚಾರ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2009
71. ರಹಮತ್ ತರೀಕೆರೆ (ಸಂ.), ಧರ್ಮ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2000
72. ಲಕ್ಷ್ಮಣ ತೆಲಗಾವಿ., ವಿಜಯನಗರ ಕಾಲದ ರಾಮಾನುಜಕೂಟಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2009
73. ಲಕ್ಷ್ಮಣ ತೆಲಗಾವಿ (ಸಂ.), ಚರಿತ್ರೆ ಅಧ್ಯಯನ (ಸಂಪುಟ–1), ಕನ್ನಡ ವಿಶ್ವವಿದ್ಯಾಲಯ ಹಂಪಿ, 2005
74. ವಿಜಯ್ ಪೂಣಚ್ಚ ತಂಬಂಡ., ಕೆಳವರ್ಗದ ಪ್ರತಿಭಟನೆ ಸಬಾಲ್ಟ್ರನ್–ಚರಿತ್ರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2009
75. ವೇದವ್ರತ ವೈಶಂಪಾಯನ., ಋಗ್ವೇದ, ಧಾರವಾಡ, 1984
76. ವೀರಭದ್ರಪ್ಪ.ಬಿ.ವಿ. ಧರ್ಮ ಮತ್ತು ವೈಚಾರಿಕತೆ, ನವಕರ್ನಾಟಕ ಪಬ್ಲಿಕೇಷನ್ಸ್, ಮೈಸೂರು, 1999
77. ವೀರಭದ್ರಪ್ಪ.ಬಿ.ಎ., (ಸಂ.), ದೇವರನ್ನು ಕುರಿತು ಒಂದು ಬಹುಮುಖಿನೋಟ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2005

78. ವಿರೂಪಾಕ್ಷ ಪೂಜಾರಹಳ್ಳಿ, ದಲಿತರು ಮತ್ತು ಚರಿತ್ರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2005

79. ವಿರೂಪಾಕ್ಷ ಪೂಜಾರಹಳ್ಳಿ (ಸಂ.), ಪೆರಿಯಾರ್ ವಿಚಾರಧಾರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2007

80. ವಸಂತಶೆಟ್ಟಿ ಬಿ., ಶಾಸನಶಾಸ್ತ್ರ, ಬ್ರಹ್ಮಾವರ, 1986

81. ಶಂಕರನಾರಾಯಣ ತೀ.ನಂ., ಜನಪದ ನಡೆ–ನುಡಿ, ಕುವೆಂಪು ವಿಶ್ವವಿದ್ಯಾಲಯ, ಶಿವಮೊಗ್ಗ, 2004

82. ಶ್ರೀಕಂಠಶಾಸ್ತ್ರಿ.ಎಸ್., ಭಾರತೀಯ ಸಂಸ್ಕೃತಿ, ಬೆಂಗಳೂರು, 2006

83. ಶ್ರೀಕಂಠಶಾಸ್ತ್ರಿ.ಎಸ್., ಹೊಯ್ಸಳ ವಾಸ್ತುಶಿಲ್ಪ, ಮೈಸೂರು, 1965

84. ಶಂಕರ್‌ರಾವ್.ಸಿ.ಎಸ್., ಸಾಮಾಜಿಕ ಸಂಶೋಧನೆಯ ಕೈಪಿಡಿ, ಮಂಗಳೂರು, 1997

85. ಶಂಕರನಾರಾಯಣರಾವ್.ಎಚ್.ಎಂ., ಹರಿಹರ ದೇವಾಲಯ, 1982

86. ಶೆಟ್ಟಲೂರು ಶ್ರೀನಿವಾಸ ರಂಗಾಚಾರ್ಯ., ವಿಶಿಷ್ಟಾದ್ವೈತ ದರ್ಪಣ (ಭಾಗ–1), 1986

87. ಶೆಟ್ಟರ್.ಎಸ್., ಸೋಮನಾಥಪುರ, ಅಭಿವನ ಪ್ರಕಾಶನ, 2008

88. ಶ್ರೀದೇವಿ., ರಾಮಾನುಜರು, ಮಂಡ್ಯ, 1982

89. ಶ್ರೀನಿವಾಸ್.ಎಂ., ದೇವರು ಹಾಗೆಂದರೇನು?, ಬೆಂಗಳೂರು, 2008

90. ಶೆಲ್ವನಾರಾಯಣ.ಎಸ್.ಎನ್. (ಸಂ.), ತಾಳಪತ್ರ ಗ್ರಂಥಗಳ ಕೈಪಿಡಿ ಹಾಗೂ ದಾಖಲೆಗಳ ಮಾಹಿತಿ, ಬೆಂಗಳೂರು, 2002

91. ಶರ್ಮ ಆರ್.ಎಸ್., ಪ್ರಾಚೀನ ಭಾರತದಲ್ಲಿ ಶೂದ್ರರು, ಬೆಂಗಳೂರು, 2006

92. ಶರ್ಮ ಆರ್.ಎಸ್., ಭಾರತೀಯ ಊಳಿಗಮಾನ್ಯ (ಸರಂಜಾಮಿ) ಪದ್ಧತಿ (ಕ್ರಿ.ಶ. 300–1200), ಬೆಂಗಳೂರು, 2004

93. ಶಿವರಾಮ ಕಾರಂತ.ಕ್ಕೆ., ಚಿತ್ರ ಶಿಲ್ಪ ವಾಸ್ತು ಕಲೆಗಳು, ಧಾರವಾಡ, 1975

94. ಶಿವಾರೆಡ್ಡಿ.ಕೆ.ಸಿ. ಮತ್ತು ಸೋಮಶೇಖರ್ ಎಸ್.ವೈ., ಕುವೆಂಪು ವಿಚಾರಧಾರೆಯ ಪ್ರಸ್ತುತತೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004

95. ಶಿವರಾಮಕಾರಂತ.ಕೆ., ಭಾರತೀಯ ಶಿಲ್ಪ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, 1984

96. ಸದಾಶಿವಯೋಗಿ., ಭಾರತೀಯರಿಗೆ ಭಗವಂತರೆಷ್ಟು, ನವಕರ್ನಾಟಕ ಪ್ರಕಾಶನ, ಮೈಸೂರು, 1970

97. ಸಿದ್ಧಲಿಂಗಯ್ಯ., ಗ್ರಾಮದೇವತೆಗಳು, ಬೆಂಗಳೂರು, 1997

98. ಸಿದ್ಧಲಿಂಗಯ್ಯ., ಜನಸಂಸ್ಕೃತಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2007

99. ಸಂಧ್ಯಾರೆಡ್ಡಿ.ಕೆ.ಆರ್. ಮತ್ತು ಗೀತಾಶೆಣೈ (ಸಂ.), ದೇವರು ಧರ್ಮದ ಚಿಂತೆ, ಬೆಂಗಳೂರು, 2008

100. ಸ್ವಾಮಿ ರಾಮಕೃಷ್ಣಾನಂದ., ಶ್ರೀ ರಾಮಾನುಜಾಚಾರ್ಯ, ಮೈಸೂರು, 2006

101. ಸ್ವಾಮಿ ಧರ್ಮತೀರ್ಥ., ಹಿಂದೂ ಸಾಮ್ರಾಜ್ಯಶಾಹಿಯ ಇತಿಹಾಸ, ಮೈಸೂರು, 1990

102. ಸ್ವಾಮಿ ವಿವೇಕಾನಂದ., ಕೊಲಂಬೊ ಇಂದ ಆಲ್ಮೋರಕೆ, ಮೈಸೂರು, 1955

103. ಹರಿಪ್ರಿಯ., ಮೇಲುಕೋಟೆ ಪರಿಚಯ, ಮೈಸೂರು, 2004

104. ಹರಿದಾಸ ಭಟ್ಟಾಚಾರ್ಯ (ಸಂ.), ಯುಗಯಾತ್ರಿ ಭಾರತೀಯ ಸಂಸ್ಕೃತಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, 1975

105. ಹಿರೇಒಡೆಯರ್ ಎ.ಸಿ., ಮನು ಮತ್ತು ಭೈರಪ್ಪ, ಅಭಿರುಚಿ ಗಣೇಶ್, 2007

C. English Sources

1. Altekar A.S., Rastrakutas and their times, poona, 1934

2. Altekar A.S., Education in Ancient India, Varanasi, 1957

3. Appadorai A.S., Ecomnomic Conditions in southern India 1000-1500 A.D., Madras, 1936 (Vol. 1-2)

5. Bhandarkar.R.G., Vishavism saivism and minor religious system, varanasi, 1965

6. Buchanan, Francis., A Journy from madras through the countries of mysore, canara and malbar. (Vol-3), Madras, 1988

7. Bharadwaj.K.D., Philosophy of Ramanuja, New Delhi, 1958

8. Devaraj.D.V., Somanathapura Temple - Complex, Mysore, 1994

9. Devaraj.D.V., History of somanathapura Temple, Mysore, 1994

10. Derrett J.D.M., The Hoysalas, oxford university press, oxford, 1951

11. Desai P.B., Ritti S.H. and Gopal B.R., A History of Karnataka, Dharwar, 1970

12. Diwakar.R.R., Karnataka through the Ages (Ed.), Mysore, 1968

13. Dubois A., Hindu Manners, customs and cermonies, oxford university press, Delhi, 1983

14. Gopal R., Cultural study of Hoysala Inscription, Mysore, 2000

15. Gopal.R., The chalukyas of Kalyana and Kalachuries, Dharwad, 1981

16. Hari Rao.V.N., Koil-olugu, 1961

17. Hayavadana Rao C., History of Mysore, Bangalore, 1943

18. Herskovits, Melville F., Cultural Anthropology, Newyark, 1960

19. Henry whitehead, The village Gods of South India, Delhi, 1921

20. Kapila vatsyaya., Dancing in Indian painting, Delhi, 1982

21. Krishaswami Iyengar.S., Early History of Vaishnavism in south India. Madras, 1920

22. Krishnaswami A (Garudaswamy)., Ramanuja A Reality Not A myth, Srirangam, 2009

23. Kosambi D.D., Myth and Reality, Bombay, 1962

24. Lakshamma G., The Impact of Ramanuja's Teaching on life and condition in society. Delhi, 1990

25. Manmathanatha Dutt., The Ramayana - Balakandam, Culcutta, 1831

26. Mahalingam T.V., Administration and social life under vijayanagara, Madras, 1940

27. Maranda, pierric (Ed.), Mythology, England (Penguin Books), 1972

28. Majumdar R.C., Ancient India, Delhi, 2003

29. Mahalingam T.V., South Indian polity, madras, 1967

30. Narasimhachar.P.T., Melkote. Bangalore, 1971

31. Nilakanta shastry K.A., Development of Religion in south India, Madras, 1963

32. Nilakanta shastry K.A., A History of south India, Madras, 1955

33. Parthasarathi.R., Ramanujacharya, National Book trust, India, 1969

34. Panchajanyam (Ed.), Koil ozhugu is a historical document-Administrative Reforms as brought out by sri Ramanuja at the srirangam temple, National seminor, Academy of sanskrit reasearch, Melkote.

35. Prabhakar P. Apte, Ravindranatha R. Karnik (Ed.), Melkote Through The ages, melkote, 1992

36. Pandy B.K., Temple Economics under the cholas, Delhi, 1984

37. Rangachar.S., The philosophy of pancharatras, (unpublished Ph.D. thesis, university of Mysore, 1967)

38. Rajagopalachari., Mahabharata, Bharatiya Vidya Bhavan, Bombay, 1951

39. Rangachary., Srivishnava brahmanas, madras, 1931

40. Raman.K.V., Sri varadarajaswami Temple Kanchi, New Delhi, 1975

41. Ramachandra., Satvata Vaishnavism. Bangalore, 1980

42. Saraswathi N., The Position of women during vijayanagara period (1336-1646), Mysore, 1992

43. Sathish chandra., Historiography, Religion and State In Medieval India, Har Anand publication, 1996

44. Sannaraje Gowda., Impact of Bhakti Movement on life and conditions of south India, Mysore, (Unpublished Ph.D theses)

45. Saletore B.A., Ancient Indian History and culture, Dharwad, 1957

46. Shivanna.K.S., A Critique of Hoysala Polity, Mysore, 1988

47. Sheik Ali B. (Ed.), The Hoysala Dynsty, Prasaranga, University of Mysore, Mysore, 1972

48. Shrinivas.V. Padigar., Vishnu Cult in Karnataka, Directorate of Archcology and Museums, mysore, 1993

49. Swami Ramakrishnananda, Life of Sri Ramanuja, Madras, 1959

50. Swami Tapasyananda., Sri Ramanujua, His life, Religion and philosophy, Sri Ramakrishna matt, madras, 1996

51. Thurshton E., Caste and Tribes of southern India, Madras, 1909

52. Vasantha R., Tonnur-its Importance in the history of Karnataka, Ramesh K.V. (Ed.), Srikanthika, Mysore, 1973

53. Vasantha R., The Narayanasvami Temple At melkote, Mysore, 1991

ಡಿ. ವಿಶ್ವಕೋಶ ಮತ್ತು ಗೆಜೆಟಿಯರುಗಳು

1. ಕರ್ನಾಟಕ ವಿಷಯ ವಿಶ್ವಕೋಶ, ಕ.ಅ.ಸಂ., ಮೈಸೂರು ವಿಶ್ವವಿದ್ಯಾಲಯ, ಮೈಸೂರು, 1979

2. ಕರ್ನಾಟಕ ಚರಿತ್ರೆ ಸಂಪುಟಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ

3. ಚರಿತ್ರೆ ವಿಶ್ವಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

4. ಕನ್ನಡ ಜಾನಪದ ವಿಶ್ವಕೋಶ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಸಂಪುಟ, 1, 2 – 1985

5. ಮಂಡ್ಯ ಜಿಲ್ಲಾ ಗ್ಯಾಜೆಟಿಯರ್, ಮಂಡ್ಯ ಜಿಲ್ಲೆ, ಬೆಂಗಳೂರು, 1967
6. ಮೈಸೂರು ಗ್ಯಾಜೆಟಿಯರ್, ಸಿ.ಹಯವದನರಾವ್ (5 ಸಂಪುಟಗಳು)
7. ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ ನಿಘಂಟು'
8. ಜಾನಪದ ಕೈಪಿಡಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, 1997
9. ಮೈಸೂರು ಗ್ಯಾಜೆಟಿಯರ್, ರೈಸ್, ಬಿ.ಎಲ್., 1897
10. ಕರ್ನಾಟಕ ಪರಂಪರೆ (ಸಂಪುಟ–1), ಮೈಸೂರು ರಾಜ್ಯ ಸರ್ಕಾರ, ಬೆಂಗಳೂರು, 1970

ಇ. ನಿಯತಕಾಲಿಕೆಗಳು


1. ಯದುಗಿರಿ – ಧಾರ್ಮಿಕ ಮಾಸಪತ್ರಿಕೆ, ಸ್ಥಾನಿಕಂ ಪ್ರಕಾಶನ, ಮೇಲುಕೋಟೆ
2. ಜನಪದ ವಿಚಾರ – ತಿಂಗಳ ವೈಚಾರಿಕ ಡೈಜೆಸ್ಟ್, ಜನಪದ ಸೇವಾ ಟ್ರಸ್ಟ್ ಪ್ರಕಟಣೆ, ಮೇಲುಕೋಟೆ.
3. Tattvadipah - Journal of Academy of Sanskit Research, Melkote.

ನಕ್ಷೆಗಳು


1. ಪಂಚ ಕಲ್ಯಾಣಿ
2. ಪಾಂಡವರ ಗುಹೆ
3. ಮೈತ್ರೇಯ ತೀರ್ಥ
4. ಗಜೇಂದ್ರ ಮಂಟಪ
5. ಕಲ್ಯಾಣ ಮಂಟಪ
6. ಭುವನೇಶ್ವರಿ ಮಂಟಪ
7. ಅಹೋಬಲ ಮಂಟಪ
8. ಮಂಟಪ
9. ಜ್ಞಾನಾಶ್ವತ್ಥ ವೃಕ್ಷ
10. ಪೂರ್ಣಯ್ಯನ ಕೊಳ
11. ಗಂಗ ಕಂಬಗಳು
12. ಅಲಗಿಯಮನ್ನಾಳ ಮಠ
13. ರಾಮನ ಗುಡಿ
14. ಪರಕಾಲ ಮಠ
15. ವೆಂಕಟರಮಣನ ಗುಡಿ
16. ವರಾಹಸ್ವಾಮಿ ಗುಡಿ
17. ಭೈರಾಗಿ ಮಠ
18. ಬಿಂಧುಮಾಧವನ ಗುಡಿ
19. ಯೋಗಾನರಸಿಂಹ ಬೆಟ್ಟ
20. ಏಕಶಿಲಾ ಗಣಪತಿ
21. ಕಾಳಮ್ಮನ ದೇವಾಲಯ
22. ತೆಪ್ಪದ ಕೊಳ
23. ಕೇಶವ ದೇವಾಲಯ
24. ತಿರುಮಂಗಿ ಆಳ್ವಾರ್ ಗುಡಿ
25. ಜೀಯರ್ ಸನ್ನಿಧಿ
26. ಅರಮನೆ ತೋಟ
27. ನಮ್ಮಾಳ್ವಾರ್ ಗುಡಿ
28. ವೇದಾಂತ ದೇಶಿಕರ ಗುಡಿ
29. ಗರುಡಗಂಭ
30. ಬದರಿನಾರಾಯಣ ಗುಡಿ
31. ಯತಿರಾಜ ಮಠ
32. ಚೆಲುವನಾರಾಯಣಸ್ವಾಮಿ ದೇವಾಲಯ
33. ಶಾಂಡಿಲ್ಯ ಗುಡಿ
34. ನಿಂಗಮ್ಮನ ಗುಡಿ
35. ಪಟ್ಟಾಭಿರಾಮನ ಗುಡಿ

36. 37. ಅಕ್ಕ ತಂಗಿಯರ ಕೊಳ

38. ಚೆಲುವರಾಜನ ಕೊಳ
39. ರಾಯಗೋಪುರ
40. ಕುಲಶೇಖರ ಆಳ್ವಾರ್ ಗುಡಿ
41. ಚಿಕ್ಕಯ್ಯನ ಕೊಳ
42. ವೇದ ಪುಷ್ಕರಿಣಿ
43. ನಂಜೆಯಾರ್ ಸನ್ನಿಧಿ
44. ವಾನಮಾಮಲೈ ಮಠ



ಮೇಲುಕೋಟೆಯ ಗ್ರಾಮ ನಕ್ಷೆ



ನಾರಾಯಣಸ್ವಾಮಿ ದೇವಾಲಯ ಸಂಕೀರ್ಣದ ತಳವಿನ್ಯಾಸ

1) ಗರ್ಭಗೃಹ
2) ಅರ್ಧಮಂಟಪ
3) ಮಹಾಮಂಟಪ
4) ಮುಖ ಮಂಟಪ
5) ಕತ್ತಲೆ ಪ್ರದಕ್ಷಿಣೆ
6) ವಿಶ್ವಕ್ ಸೇನಾ ದೇವಾಲಯ
7) ಶ್ರೀ ಭಂಡಾರ
8) ಶೆಲ್ವಪಿಳ್ಳೆ ದೇವಾಲಯ
9) ಪಾತಾಳಾಂಕಣ
10) ವಾಹನ ಮಂಟಪ
11) ತಿರುಕ್ಕಚ್ಚಿನಂಬಿ ಮಂಟಪ
12) ರಂಗ ಮಂಟಪ
13) ಕೃಷ್ಣರಾಜ ಒಡೆಯರ್ ದೇವಾಲಯ
14) ಅಡಿಗೆ ಮನೆ
15) ಶೇಖರಣಾ ಗೃಹ
16) ಪರಮಪದನಾಥ ದೇವಾಲಯ
17) ಚಕ್ರತ್ತಾಳ್ವಾರ್ ದೇವಾಲಯ
18) ತಿರುಕ್ಕಚ್ಚಿನಂಬಿ ದೇವಾಲಯ
19) ತಾಯಾರ್ ಗರ್ಭಗುಡಿ
20) ಮುಖ ಮಂಟಪ
21) ಮಹಾ ಮಂಟಪ
22) ಕೂರತ್ತಾಳ್ವಾರ್ ಗುಡಿ
23) ರಾಮಾನುಜ ಗುಡಿ
24) ಯಾಗಶಾಲೆ
25) ಪಿಳ್ಳೈ ಲೋಕಾಚಾರ್ಯಗುಡಿ
26) ಮಹಾದ್ವಾರ
27) ದೇವಾಲಯದ ಕಛೇರಿ=
28) ಸಂಸ್ಕೃತ ಪಾಠಶಾಲೆ
29) ಹೊರಗಿನ ಕೈಸಾಲೆ

ಛಾಯಾ ಚಿತ್ರಗಳು



ಮೇಲುಕೋಟೆ ಪರಿಸರದ ಒಂದು ಪಕ್ಷಿ ನೋಟ



ನಾರಾಯಣಸ್ವಾಮಿ ದೇವಾಲಯ ಸಂಕೀರ್ಣ







ಮೇಲುಕೋಟೆ ಕಲ್ಯಾಣಿ ಹಾಗೂ ಯೋಗಾನರಸಿಂಹಸ್ವಾಮಿ ದೇವಾಲಯ



ಶ್ರೀ ರಾಮಾನುಜಚಾರ್ಯ







ಕುಲಶೇಖರಾಳ್ವಾರ್ ಗುಡಿ



ತಿರುಮಂಗಿ ಅಳ್ವಾರ್ ಗುಡಿ



ನಾರಾಯಣಸ್ವಾಮಿ



ಯೋಗಾನರಸಿಂಹಸ್ವಾಮಿ



ಬೃಹತ್ ಏಕಶಿಲ ಗಣಪತಿ









ಗುಹಾಂತರ ದೇವಾಲಯ



ಭುವನೇಶ್ವರಿ ಮಂಟಪ







ಯತಿರಾಜ ಮಠ



ಟಿಪ್ಪು ದಾನವಾಗಿ ನೀಡಿದ ಬೃಹತ್ ನಗಾರಿ



ನಾರಾಯಣಸ್ವಾಮಿ ದೇವಾಲಯದ ಗಾರೆ ಶಿಲ್ಪಗಳು



ನಾರಾಯಣಸ್ವಾಮಿ ದೇವಾಲಯದ ಗಾರೆ ಶಿಲ್ಪಗಳು



ಯೋಗಾನರಸಿಂಹಸ್ವಾಮಿ ದೇವಾಲಯದ
ದ್ವಾರ ಗೋಪುರ



ನಾರಾಯಣಸ್ವಾಮಿ ದೇವಾಲಯ ಸಂಕೀರ್ಣದಲ್ಲಿರುವ ರಂಗ ಮಂಟಪದ
ಅಲಂಕೃತ ಕಂಬಗಳ ಸಾಲು







ಮೇಲುಕೋಟೆಯ ಮೊದಲಿನ ಪ್ರವೇಶದ್ವಾರವಾಗಿದ್ದ ರಾಯಗೋಪುರ



ನಾರಾಯಣಸ್ವಾಮಿ ದೇವಾಲಯದ ದ್ವಾರ ಗೋಪುರ







ಉತ್ಸವದಲ್ಲಿ ಬಳಸಲ್ಪಡುವ ರಥ



ಮೇಲುಕೋಟೆ ಗ್ರಾಮದೇವತೆಯಾದ ಬಿಸಿಲು ಮಾರಮ್ಮನ ಗುಡಿ







ಗ್ರಾಮ ದೇವತೆ ಹೊರಗಮ್ಮನ ಗುಡಿ




ಹೊರಗಮ್ಮನ ಗುಡಿಯ ಸಪ್ತಮಾತೃಕೆಯರು







ವೈರಮುಡಿ ಬ್ರಹ್ಮೋತ್ಸವ



ವರ್ಣ ಚಿತ್ರ – ವರನಂದಮ್ಮ
(ಬೀಬಿ ನಾಚ್ಚಿಯಾರ್)



ಮೇಲುಕೋಟೆಯ ಕೈಮಗ್ಗ





